ಪದ್ಮಾಲಯ

ಮಲ್ಲಿಕಾ

ಪದ್ಮಾಲಯ

ಮಲ್ಲಿಕಾ

ಬೋದ್ಧಾರೋ ಮತ್ಸರಗ್ರಸ್ತಾಃ
ಪ್ರಭವಸ್ಮಯ ದೂಷಿತಾಃ ।
ಅಬೋಧೋಪಹಾಶ್ಚಾನ್ಯೇ
ಜೀರ್ಣಮಂಗೇ ಸುಭಾಷಿತಂ ॥

Padmalaya in Kannada by 'Mallika'
Published by Lakshmi Prakashana,
No. 359, 14th Cross, Sadhashivanagara
Bangalore-560 080

ಶ್ರದ್ಧಾಲಯ (ಕಾದಂಬರಿ) ಅಚ್ಚಿನಲ್ಲಿ

ಪ್ರಥಮ ಮುದ್ರಣ : ೧೯೯೨

ಬೆಲೆ : ತೊಂಬತ್ತು ರೂಪಾಯಿ

ಮುದ್ರಕರು :
ನ್ಯೂ ಐಡಿಯಾಸ್
ನಂ. 30, 15ನೇ ಮುಖ್ಯ ರಸ್ತೆ
ಮೂರನೆಯ ವಿಭಾಗ, ಜಯನಗರ
ಬೆಂಗಳೂರು–560 011

|| ರಾಧಾರಮಣಪಾದಾರ್ಪಣಮಸ್ತು ||

ಪದ್ಮಾಲಯ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
ನಂ. 359, 14ನೇ ಅಡ್ಡ ರಸ್ತೆ, ಸದಾಶಿವನಗರ
ಬೆಂಗಳೂರು–560 080

ನಿವೇದನೆ

"ಪದ್ಮಾಲಯ" ಕಾದಂಬರಿಯು ರಾಷ್ಟ್ರೀಯ ಸ್ತ್ರೀಯರ ಭಂಗ ಬನ್ನಗಳನ್ನು ಎತ್ತಿತೋರಿಸುವ ಕಾದಂಬರಿ. ಇಂಥ ಕಾದಂಬರಿಗಳು ಈಗಾಗಲೇ ಸಹಸ್ರಾರು ಸಂಖ್ಯೆಯಲ್ಲಿ ಹೊರಬಿದ್ದಿವೆ. ಮಹಿಳೆಯರೂ ತಮ್ಮ ತಮ್ಮ ಅಳಲನ್ನು ನಾನಾರೀತಿಯಲ್ಲಿ ತೋಡಿಕೊಂಡಿದ್ದಾರೆ. ಆದರೂ, ಕುರುಡು ಸಂಪ್ರದಾಯಗಳನ್ನು ಹುಟ್ಟಳಿಸುವ ವಿಧಾನಕ್ಕೆ ಈವರೆವಿಗೆ ಅಡಿಗಲ್ಲು ಬಿದ್ದಿಲ್ಲ. ಭಾರತ ಮತ್ತು ಭಾರತದ ಸಂಸ್ಕೃತಿ ವಿಶಾಲ ಜಗತ್ತಿಗೆ ಅತ್ಯಂತ ಹಿರಿದು. ಹೊರಗಿನವರು ಅಃ ಎಂತಹ ಸುಸಂಸ್ಕಾರ ! ಎಂದು ಮೂಗಿನ ಮೇಲೆ ಬೆರಳಿಡುತ್ತಾರೆ. ನಮ್ಮನ್ನು ನೋಡಿ. ಆದರೆ...ಒಳಗಣ ಕ್ರೂರಾತಿಕ್ರೂರ ದುರ್ವ್ಯವಹಾರ ದೇವರಿಗೇ ಗೊತ್ತು. ನೂರಕ್ಕೊಃ ಸಾವಿರಕ್ಕೊಃ ಒಬ್ಬಿಬ್ಬರು ಸ್ವಾತಂತ್ರ್ಯದ ಸುಖೀ ಜೀವನ ನಡೆಸಿದರೆ ಸಾಕೇ, ಈ ಕೋಟಿ–ಕೋಟಿ–ಕೋಟ್ಯಾಂತರ ಸ್ತ್ರೀಕೋಟಿಯಲ್ಲಿ ? ಅವಳ ಗೃಹೀ ಜೀವನ ಸೊತ್ತಾಗಿ ತೊತ್ತಾಗಿ ಮಾತ್ರ ನಡೆಯುವುದು ಅನುದಿನದ ಸತ್ಯ. ಅವಳಿಗೆ ಆರ್ಥಿಕಸ್ವಾತಂತ್ರ್ಯ ವೈಯಕ್ತಿಕ ಸ್ವಾತಂತ್ರ್ಯ ಇಲ್ಲ ಬಿಡಿ. ಅಷ್ಟೇ ಅಲ್ಲ; ಭವರೋಗದೊಂದಿಗೆ ದಯಾ ದಾರಿದ್ರ್ಯದಿಂದಲೂ ನರಳುತ್ತಾಳೆ. ಜೀವನಾಂತ್ಯದವರೆಗೂ ಕಣ್ಣೀರಿನ ಉಂಬಳಿಯೇ ಉಂಬಳಿ. ಇಂದೂ, ಈಗಲೂ ಮಹಿಳೆಯರಿಗೆ ಶೃಂಖಲಾ ಬದ್ಧ ಜೀವನವೇ. ಮುಖ್ಯವಾಗಿ ನಮ್ಮಲ್ಲೂ ಒಂದು ಅಗಾಧವಾದ ತಪ್ಪು ಇದ್ದೇ ಇದೆ. ಅದನ್ನು ನಾವು ಇನ್ನೂ ಕಂಡುಕೊಂಡಿಲ್ಲ. ನಾವಿನ್ನೂ ಕಾಮ ಕಾಮನೆಯ ಮೊಟ್ಟೆ ಓಡನ್ನು ಕುಕ್ಕಿ ಹೊರಬಂದಿಲ್ಲ. "ನಮ್ಮ ತನ" ವನ್ನು

ಕಂಡುಕೊಂಡಿದ್ದಿದ್ದರೆ ನಾವು ಎಂದೋ ಸರ್ವ ಸಮಾನತೆಯನ್ನು ಕಂಡುಕೊಂಡಿರಬಹುದಾಗಿತ್ತು. ನಾವಿರುವುದು ಇನ್ನೂ ಕೆಳಮಟ್ಟದಲ್ಲೇ. ಅದರಲ್ಲಿ ಅನುಮಾನವಿಲ್ಲ. ಮೊದಲು ನಮ್ಮ ಶಕ್ತಿಯನ್ನು ವೃದ್ಧಿಸಿಕೊಂಡು ಆದಿಶಕ್ತಿಯರಾಗಬೇಕು. ಅನಂತರ ಸ್ವಾತಂತ್ರ್ಯ, ಸಂವಿಧಾನ ಎಲ್ಲಾ. ಬರೀ ವಿದ್ಯೆಯಿದ್ದರೆ ಸಾಲದು. ವಿಚಾರ ಶಕ್ತಿಯೂ ಇರಬೇಕು. ಇದನ್ನು ಎಲ್ಲರೂ ಒಂದಲ್ಲ ಹತ್ತು ಬಾರಿ ಯೋಚಿಸಬೇಕು. ಆ ಶಕ್ತಿ ಸಂಚಯನಕ್ಕಾಗಿ ದೇವಿ ದುರ್ಗಿಯನ್ನು ಪ್ರಾರ್ಥಿಸೋಣ.

ಆಂಗೀರಸ ಸಂವತ್ಸರ ಮಾರ್ಗಶಿರ ಬಹುಳ ಬಿದಿಗೆ ಗುರುವಾರ

ಮಲ್ಲಿಕಾ
೨೬–೧೧–೧೯೭೨

ಪದ್ಮಾಲಯ

೧

ಬಲವಾನಪಿ ಕೋಪ ಜನ್ಮನಃ
 ತಮಸೋ ನಾಭಿಭವಂ ರುಣದ್ಧಿ ಯಃ ।
ಕ್ಷಯಪಕ್ಷ ಇವೈಂದವೀಃ ಕಲಾಃ
 ಸಕಲಾ ಹಂತಿ ಸ ಶಕ್ತಿ ಸಂಪದಃ ॥

"ಕುಮೂ...ಕುಮೂ !"

ಗದ್ದೆಯಂಚಿನಲ್ಲಿ ಮೊಳಗಿದ ಚಿರಸ್ನೇಹಪೂರ್ಣ ಧ್ವನಿ ಕರ್ಣಪಟಲಗಳನ್ನು ಅಪ್ಪಳಿಸಿದರೂ ತೀರಾ ಅನ್ಯಮನಸ್ಕಳಾಗಿದ್ದ ಕುಮುದ್ವತಿಗೆ ಅತ್ತ ಗಮನ ಕೊಡುವಷ್ಟು ಸಮಯ–ಸಹನೆ ಎರಡೂ ಇರಲಿಲ್ಲವೇನೋ. ಅವಳು ಕಿಂಚಿತ್ ವಿಚಲಿತಳಾಗಲಿಲ್ಲ ಕೂಡ. ಆಶ್ಚರ್ಯವಿಸ್ತೃತ ದೃಷ್ಟಿ ಹರಿದಿದ್ದುದು ಬೇಲಿ ಸಾಲಿನ ಮರದ ಮೇಲೆ. ಹಸುರು ಎಲೆ ಹೊದರಿನಲ್ಲಿ ಕಲೆತು ಆನಂದವೋದದಿಂದ ಉದಯರಾಗವನ್ನು ಹಾಡುತ್ತಿವೆ ಪಕ್ಷಿ ಸಮೂಹ. ಅವುಗಳ ಮಧ್ಯೆ ಒಂದು ಅತ್ಯಂತ ಅಪೂರ್ವವಾದ ಪಕ್ಷಿಯು ಸೇರ್ಪಡೆಯಾಗಿದೆ. ಅದು ಈ ದೇಶದ ಪಕ್ಷಿ ಅಲ್ಲವೇ ಅಲ್ಲ. ಒಂದು ಮಾತ್ರ ಕಾಣಿಸುತ್ತಿದೆಯಲ್ಲಾ, ಜೊತೆಗೆ ಇನ್ನೊಂದಾದರೂ ಇದ್ದೇ ತೀರಬೇಕು ಎಂಬ ಕುತೂಹಲ ಮನದಲ್ಲಿ. ಅದರ ಕತ್ತು–ರೆಕ್ಕೆಗಳಲ್ಲಿ ಹರಿದ್ವರ್ಣದ ಗೆರೆಗಳಿವೆ ಮೈ ನೀಲ ವರ್ಣ. ತುಂಬಾ ಸುಂದರವಾದ ಪಕ್ಷಿ.

ಗದ್ದೆಯಂಚಿನಿಂದ ನೇರವಾಗಿ ಮೆಟ್ಟಿಲು ಹತ್ತಿಬಂದ ಸರಸಿ ಭುಜದ ಮೇಲೆ ಕೈಯಿಟ್ಟು

"ಕುಮೂ, ಇದೇನಮ್ಮಾ ಇಷ್ಟೊಂದು ಗಂಭೀರ !" ಎಂದಳು ಸ್ನೇಹ–ಸಲಿಗೆಗಳಿಂದ.

"ಹುಷ್ ! ಸದ್ದು ಮಾಡಬೇಡ !" ತುಟಿಯಮೇಲೆ ಬೆರಳಿಟ್ಟು ಪಿಸುದನಿಯಲ್ಲಿ ನುಡಿದು ಆ ಪಕ್ಷಿಯ ಕಡೆಗೆ ಬೆರಳು ತೋರಿದಳು ಹುಡುಗಿ.

ಬೆರಳು ತೋರಿದತ್ತ ಸರಸಿಯ ನೋಟ ಹರಿಯಿತು. ನೋಡಿದರೆ ಆಶ್ಚರ್ಯವೇ. ಅದು ನಿಜವಾಗಿಯೂ ವಿಶೇಷತರದ ಪಕ್ಷಿ. ಹಿಂದೆಂದೂ ನೋಡಿದಂತಿಲ್ಲ. ಇಬ್ಬರೂ ನೋಡಿಯೇ ನೋಡಿದರು.

"ಇದು ಈ ಪ್ರಾಂತ್ಯದ್ದಲ್ಲ ಎಲ್ಲಿಂದಲೋ ಬಂದಿದೆ. ಇಲ್ಲೇ ಎಲ್ಲೋ ಅದರ ಜೋಡಿಯೂ ಇರಬೇಕು. ಎಲ್ಲಿಯೂ ಕಾಣಿಸುತ್ತಿಲ್ಲ. ಅಃ! ಎಂತಹ ಸುಂದರವಾದ ಪಕ್ಷಿ!" ಎಂದಳು ಕುಮುದ್ವತಿ. ಕಣ್ಣು ಮುಖಗಳಲ್ಲಿ ಆಶ್ಚರ್ಯಾನಂದಗಳ ಕಳೆ ಬೆಳಗುತ್ತಿದೆ ವ್ಯಾಪಕವಾಗಿ. ಸರಸಿಯೂ ಅಷ್ಟೇ ಆಸಕ್ತಿಯಿಂದ ನೋಡಿದಳು.

"ಗಾತ್ರದಲ್ಲಿಯೂ ಹಿರಿದು ತಲೆಯಮೇಲೆ ಜುಟ್ಟು. ಆದರೆ ! ಒಂದೇ ಇದೆಯಲ್ಲಾ ಅದೇ ಆಶ್ಚರ್ಯ."

"ಒಂದೇ ಇರಲಾರದು. ಇನ್ನೊಂದು ಇಲ್ಲಿಯೇ ಎಲ್ಲೋ ಇರಬೇಕು; ನೋಡೋಣ, ಎಲ್ಲಾದರೂ ಇದ್ದೀತು, ಅಲ್ಲವೇ ?"

"ನಿಜ......." ಇಬ್ಬರೂ ಸದ್ದಾಗದಂತೆ ಮೆಲುನಗೆ ಬೀರಿದರು.

"ಬಲು ಸುಂದರವಾದ ಪಕ್ಷಿ. ಕೆಂದು ಕಣ್ಣು, ನೀಲವರ್ಣ, ಹಳದಿ ರೇಕೆ, ದೃಷ್ಟಿಗೆ ಎಂತಹ ಅಪ್ಯಾಯಮಾನ !"

"ನೀನು ಕವಿವರ್ಣನೆ ಮಾಡುತ್ತಿರುವೆ...ಸರಸೀ !"

ಆ ಹಕ್ಕಿ ಅಲ್ಲಿಂದ ಹಾರಿ ಮರದ ಬಲಭಾಗದ ಕೊಂಬೆಯಲ್ಲಿ ಕುಳಿತು ಕೊಂಡಿತು. ವಿಶಾಲವಾಗಿ ಹರಡಿದ ಹೆಮ್ಮರ. ಎತ್ತರಕ್ಕೂ ಕಡಿಮೆಯಿಲ್ಲ. ತೀರಾ ಕತ್ತೆತ್ತಿಯೇ ನೋಡಬೇಕು. ಅರರೆ! ಕೆಲವು ಕ್ಷಣಗಳೊಳಗಾಗಿ ಇನ್ನೊಂದು ಕೊಂಬೆಯಿಂದ ಹಾರಿ ಅದೇ ಕೊಂಬೆಗೆ ಬಂದು ಕುಳಿತು ಕೊಂಡಿತು ಅದರ ಜೋಡಿ ಹಕ್ಕಿ ! ಇದುವರೆಗೂ ಕಾಣಲಿಲ್ಲ. ಹಾ, ಜೋಡಿ ಎಂದರೆ

ಜೋಡಿ! ಕಣ್ಮನಗಳಿಗೆ ಹಬ್ಬದ ರಸದೂಟ! ಇಬ್ಬರೂ ಎವೆಯಿಕ್ಕದೆ ಮಂತ್ರ ಮುಗ್ಧಭಾವದಿಂದ ನೋಡುತ್ತಲೇ ಇದ್ದಾರೆ. ಅವು ಅಕ್ಕಪಕ್ಕದಲ್ಲಿ ಕುಳಿತು ಸಣ್ಣ ದನಿಯಲ್ಲಿ ಕಿಚುಗುಟ್ಟಿದುವು. ಸ್ವಲ್ಪಹೊತ್ತು ಕಳೆಯಿತು. ಮತ್ತೆ ಬಾಯ್ಬಿಟ್ಟು ಕ್ರೇಂಕರಿಸುತ್ತ ಅಲ್ಲಿಂದ ಪುರ್ರನೆ ಹಾರಿಹೋದುವು. ಗಗನ ನೀಲಿಯ ಹಿನ್ನೆಲೆಯಲ್ಲಿ ಅವು ಹಾರಿದ ಚಿತ್ರ ಬಲೂ ಸೊಗಸು. ಅವು ಹಾರಿಹೋದ ಮೇಲೆ ಹಿಡಿದ ಉಸಿರು ಬಿಟ್ಟಂತಾಯಿತು ಹುಡುಗಿಯರಿಗೆ.

"ಶ್ರೀಹರೀ, ಎಂತಹ ಅಮೋಘವಾದ ಚಿತ್ರ! ದೈವ ಸೃಷ್ಟಿಯ ಮುಂದೆ ಮನುಕುಲವೆತ್ತ? ಯಾಂತ್ರಿಕವಾಗಿ ಅದೂ–ಇದೂ ಸೃಷ್ಟಿಸಬಹುದಾದರೂ ಜೀವಬ್ರಹ್ಮವೇ ಬ್ರಹ್ಮ!"

"ಕುಮೂ, ನೀನೆಂದುದು ಅಕ್ಷರಶಃ ಸತ್ಯ."

"ಸರಸೀ.......ಆಗಿನಿಂದ ಅದರ ಜೋಡಿ ಹಕ್ಕಿಗಾಗಿ ನೋಡುತ್ತಲೇ ಇದ್ದೆ. ಇದೇ ಮರದಲ್ಲಿ ಕುಳಿತ ಅದು ದೃಷ್ಟಿಗೆ ಬೀಳಲಿಲ್ಲ. ಕುಳಿತೆಡೆ ಎಲೆಗಳೂ ಅಲುಗಲಿಲ್ಲ, ನೋಡು ಎಂತಹ ಸೂಕ್ಷ್ಮ ಅವು."

"ಖಂಡಿತ........ಕುಮೂ."

ಅವು ಹಾರಿದತ್ತ ಇಬ್ಬರೂ ದೃಷ್ಟಿ ಹೊರಳಿಸಿದರು.

ಏನಿದೆ ಅಲ್ಲಿ? ಗಗನ ನೀಲಿಮ ತುಂಬಾ ತೇಲುವ ಬೆಳ್ಮೋಡಗಳ ಭವ್ಯ ಸಾಲು. ಹಕ್ಕಿಗಳು ಯಾವ ಲೋಕದಲ್ಲೋ......ಮಂದಹಾಸ ತುಂಬಿದ ಮುಖಬಿಂಬಗಳು ಪರಸ್ಪರ ನೋಡಿದುವು ಭಾವಸಾತ್ಮಕ ಶೈಲಿಯಲ್ಲಿ.

ಸರಸು ಹೆಜ್ಜೆ ತೆಗೆಯದೆ ಮತ್ತೆ ಅತ್ತಲೇ ನೋಡಿದಳು.

ಕುಮುದ್ವತಿಯು ಹಾಸ್ಯ ಪ್ರಧಾನವಾಗಿ ಕಿಲಕಿಲ ನಗುತ್ತ ಅವಳ ಭುಜ ವನ್ನು ಅದುಮಿಹಿಡಿದು ನುಡಿದಳು "ನೀನು ಆಗಲೇ ಬಂದಿದ್ದರೆ ನನ್ನಂತೆ ಇಷ್ಟು ಹೊತ್ತೂ ನೋಡಬಹುದಿತ್ತು. ಈಗ ಇನ್ನೆಲ್ಲಿ ಕಂಡಾವು ಅವು? ಒಂದೇ ಕ್ಷಣದಲ್ಲಿ ಮಂಗಳವಾಯ?"

"ಅಹಹ......! ಯಾವ ಪ್ರಾಂತ್ಯದಿಂದ ಬಂದಿದ್ದುವೋ ತುಂಬಾ ಸೊಗಸಾದ ಜೋಡಿ"

"ಸರಸೀ, ನೀನು ಇಲ್ಲಿಗೆ ಬಂದೆ ಎಷ್ಟು ದಿನಗಳಾಗಿದ್ದುವು, ಹೇಳು ?"

"ರಾಣಿ!, ನೀನು ಯಾವಾಗ ಬಂದಿದ್ದೆ, ಮೊದಲು ಹೇಳು ?"

"ಶ್ರೀಹರಿ, ನನ್ನ ಕಷ್ಟ ನಿನಗೆ ತಿಳಿದಿದ್ದರೆ ನೀನು ಈ ಮಾತು ಕೇಳು ತ್ತಿರಲಿಲ್ಲ."

ಇಬ್ಬರೂ ಒಳ ಬಂದರು. ತಾಯಿ-ಸೀತಮ್ಮ ಅಡಿಗೆ ಮನೆಯಿಂದ ಹಣಿಕಿ ನೋಡಿ ಅಲ್ಲಿಂದಲೇ ನುಡಿದಳು "ಏನಮ್ಮಾ ಸರಸು ?"

"ಹೇಗಿದ್ದೀರಿ ಆ್ಯಂಟಿ? ನಿಮ್ಮನ್ನು ನೋಡೋಣಾಂತ ಬಂದೆ".

"ಆ್ಯಂಟಿಯನ್ನೋ, ಗೆಳತಿಯನ್ನೋ ?"

"ಇಬ್ಬರನ್ನೂ......"

ಅವಳು ಒಳಗೆಲ್ಲಾ ಕಣ್ಣಾಡಿಸಿ "ಏನು ಮನೆಯೆಲ್ಲಾ ಬಣಬಣ ಎನ್ನುತ್ತಿದೆ."

"ಈಗ ಕೃಷ್ಣ ಸೋಮು ಇಬ್ಬರೂ ಇಲ್ಲಿಲ್ಲ. ಅವರು ಜಮೀನು ಉತ್ತಿ ಬಿತ್ತಿ ಗೇಣಿಕೊಡುವ ಭಂಗ ಬೇಡನೆಂದು ಹಠ ಹಿಡಿದು ಮನೆ ಬಿಟ್ಟು ಹೋದರು!"

"ಅಂದರೆ, ಎಲ್ಲಿಗೆ ಹೋದರು ? ಏನು ಮಾಡುತ್ತಾರೆ ಬದುಕಿಗೆ?"

"ಸುಂಕದ ಕಟ್ಟೆಯ ಹತ್ತಿರ ಇಬ್ಬರೂ ಬೇರೆ ಬೇರೆ ಅಂಗಡಿ ಹಾಕಿ ಕೊಂಡಿದ್ದಾರೆ. ಒಳ ಕೋಣೆಯಲ್ಲಿ ವಾಸ. ಸುಖಜೀವನ. ಈಗ ಉತ್ತಿಬಿತ್ತುವ ಭಂಗ ಅಪ್ಪಾಜಿಗೆ. ಇಳಿವಯಸ್ಸು, ಕೈಲಿ ಕೆಲಸ ಆಗೋಲ್ಲ, ಗೇಣಿ ಕೊಡಬೇಕು. ಈ ಕಷ್ಟ ಒದಗಿ ಬಂದಿದೆ. ಈಗ ಹೆಚ್ಚು ಕಡಿಮೆ ನನ್ನ ಟೈಲರಿಂಗ್‌ನಲ್ಲೇ ಜೀವನ. ನಮಗೊಂದು ಮನೆಯಿದ್ದಿದ್ದರೆ ಈ ಜಮೀನು ಬಿಟ್ಟು ಬಿಡಬಹು ದಾಗಿತ್ತು. ಜಮೀನು ಬಿಟ್ಟೊಡನೆ ಮನೆಯೂ ಹೋಗುತ್ತೆ. ಜಮೀನ್ದಾರರು ಬೇರೆ ಒಕ್ಕಲು ಕೂರಿಸಬೇಕಲ್ಲ ? ಅಂತೂ ಕಷ್ಟದಿಂದ ನಡೆಯುತ್ತಿದೆ ವ್ಯವಸಾಯ."

"ಹಾಗೇನು ?" ಎಂದ ಅವಳು ತಾನು ಬಂದ ಉದ್ದೇಶವನ್ನು ನೆನಪಿಸಿ ಕೊಂಡು ಕೇಳಿದಳು "ನಿಮಗೆ ರಾಂದಾದನ ಮನೆಯಿಂದ ಗೃಹ ಪ್ರವೇಶಕ್ಕೆ ಆಮಂತ್ರಣವಿದೆಯೇ ?"

"ಓಹೋ! ಇಲ್ಲವಲ್ಲಾ, ಯಾವತ್ತು ಅದು?"

"ಈವೊತ್ತೇ!"

"ಪರವಾಯಿಲ್ಲ, ನೆರೆಯುವರು ಎಂದು ತಾತ್ಸಾರವೋ ಏನೋ.......!"

"ಹಾಗಿರಲಾರದು ಕರೆಯು ಬಂದವರು ಮರೆತಿರಬಹುದು, ಎನಿಸುತ್ತೆ ನನಗೆ."

"ಸರಿಬಿಡು, ನನಗೆ ಆ ಮನೆ ನೋಡಬೇಕೆಂದು ಆಸೆಯಿತ್ತು. ಬಹಳ ಚೆನ್ನಾಗಿ ಕಟ್ಟಿಸಿದ್ದಾರೆ ಎಂದು ಎಲ್ಲರೂ ಹೇಳುತ್ತಾರೆ. ಹೋಗಿ ನೋಡೋಣ ಎಂದರೆ ಕರೆಯಲೇ ಇಲ್ಲವಲ್ಲ. ಏಕೆ ಹೀಗೆ ಮಾಡಿದರೋ ತಿಳಿಯಲಿಲ್ಲ." ನಿರಾಸೆಯ ದನಿ ಹರಿಯಿತು, ಮನದಾಳದಿಂದ.

"ನಾನು ಬಂದದ್ದು ನಿನ್ನೊಡನೆ ಹೋಗೋಣ ಎಂದು. ಆದರೆ, ಹೀಗಾಯಿತಲ್ಲ ಈಗ?"

"ಬಿಡು, ನೀನು ಹೋಗಿ ಬಾ. ಬಂದಮೇಲೆ ಹೇಳು ಹೇಗಿದೆ ಅಂತ."

"ಅವರು ಮನೆ ಕಟ್ಟುತ್ತಿರುವಾಗಲೇ ಪದ್ಮತ್ತೆಗೆ ಹುಷಾರಿಲ್ಲವೆಂದು ಅಮ್ಮ ಎರಡು ಬಾರಿ ಹೋಗಿಬಂದರು ಅಲ್ಲಿಗೆ. ಆಗಲೇ ಹೇಳುತಿದ್ದರು ಮನೆ ಬಹಳ ಚೆನ್ನಾಗಿದೆ ಅಂತ. ಈಗ ಪೂರ್ತಿ ಮುಗಿದ ಮೇಲೆ ಇನ್ನೂ ಭವ್ಯವಾಗಿರಲೇ ಬೇಕು.......ಚಿಕ್ಕವರನ್ನು ನನಗೆ ವಹಿಸಿದ್ದರಿಂದ ನನಗೆ ಆಗ ಹೋಗಲಾಗಲಿಲ್ಲ. ಇಂದು ಎಲ್ಲರೂ ಹೋಗುತಿದ್ದೇವೆ. ಪದ್ಮತ್ತೆಯ ಹೆಸರೇ ಇಟ್ಟಿದ್ದಾರಂತೆ ಮನೆಗೆ 'ಪದ್ಮಾಲಯ' ಎಂದು. ರಾಂದಾದ ಮನೆಗೆ ಬಹಳ ಹಣ ಖರ್ಚು ಮಾಡಿದ್ದಾರಂತೆ. ನೀನು ಬರುವುದಿಲ್ಲ ಎಂದ ಮೇಲೆ ನಾವೇ ಹೋಗಬೇಕು. ಬೇರೆ ಗತಿಯಿಲ್ಲ. ಹಾಗಾದರೆ, ನಾನು ಹೋಗಲೇ? ನನಗೆ ನೀನಿಲ್ಲದೆ ಹೋಗುವುದು ಸಂತೋಷವೇ ಇಲ್ಲ. ಏನು ಮಾಡಲಿ?"

"ಮಾಡುವುದೇನು? ಕರೆ ಇಲ್ಲದ ಮೇಲೆ ನಾನು ಹೋಗುವುದು ಹೇಗೆ? ನೀನು ಹೋಗಿ ಬಾ."

ಅವಳು ಅವಸರದಿಂದ ಹೊರಟಳು. ಅವಳನ್ನು ಬೇಲಿಯಂಚಿನವರೆವಿಗೂ ಹೋಗಿ ನಲ್ಮೆಯಿಂದ ಬೀಳ್ಕೊಟ್ಟಳು ಕುಮುದ್ವತಿ. ಸರಸಿ ಹಿಂದಿರುಗಿ ನೋಡಿ

ಕೈಯಾಡಿಸುತ್ತ ಟಾಟಾ ಹೇಳಿ ಸರಸರನೆ ನಡೆದಳು. ಇವಳು ಇಲ್ಲಿಂದಲೇ ಟಾಟಾ ಹೇಳಿದಳು, ಸಂತಸದ ಮುಖವಾಡ ತೊಟ್ಟು. ಆದರೂ, ಅದನ್ನು ಅಷ್ಟಾಗಿ ಮನಕ್ಕೆ ತೆಗೆದುಕೊಳ್ಳದ ಕುಮುದ್ವತಿ ಒಳ ಬಂದಳು.

ಗದ್ದೆಯ ನೀರು ಕಟ್ಟಲು ಹೋಗಿದ್ದ ತಂದೆ–ದೇವಯ್ಯ ಒಳ ಬಂದು ಕೈಕಾಲು ತೊಳೆದು ಮುಖ ಮಜ್ಜನ ಮಾಡಿ ಟವಲ್ಲಿನಿಂದ ಒರಸಿದನಂತರ ನಡುಮನೆಯಲ್ಲಿ ಕುರ್ಚಿಯ ಮೇಲೆ ಕುಳಿತ. ಮುಖದಲ್ಲಿ ಆಯಾಸದ ಮುದ್ರೆ ಯೊತ್ತಿದ್ದರೂ ಕಣ್ಣುಗಳಲ್ಲಿ ಭಾವನಾ ಸ್ಫೂರ್ತಿಯ ಕಳೆ. ಗಾಳಿಯಾಟದಿಂದ ಚದುರಿದ ಕೂದಲು, ನೇರ ಮೂಗಿನ ಮೇಲೆ ಕನ್ನಡಕ, ಅರೆಮಾಸಿದ ಉಡುಪು ಎಲ್ಲವೂ ವೃದ್ಧಾಪ್ಯವನ್ನು ಸಾರಿ ಹೇಳುತ್ತವೆ. ಸ್ವಲ್ಪಹೊತ್ತಿನೊಳಗಾಗಿ ಚಹ ತಯಾರಿಸಿದ ಸೀತಮ್ಮ ಮೂರು ಬಸಿಗಳೊಡನೆ ಬಂದು ಅಲ್ಲಿಯೇ ಕುಳಿತು ಕೊಂಡಳು. ಚಹಪಾನದಲ್ಲಿ ಹೊತ್ತು ಆತ್ಮೀಯತೆಯಿಂದ ಉರುಳಿತು. ಕುಮು ದ್ವತಿ ಖಾಲಿ ಬಸಿಗಳನ್ನು ಒಳಗೊಯ್ದು ಇಟ್ಟು ಬಂದಳು. ಮೇಜಿನ ಮೇಲೆ ಕತ್ತರಿಸಲು ಹರವಿದ ಬಟ್ಟೆ, ಇನ್ನೊಂದು ಚಿಕ್ಕಮೇಜಿನ ಮೇಲೆ ಹೊಲಿದು ಜೋಡಿಸಿದ ಬಟ್ಟೆಗಳು, ಬದಿಯಲ್ಲಿ ಹೊಲಿಯುವ ಮಿಷಣ, ಕತ್ತರಿ ದಾರಗಳ ಡಬ್ಬಿ ಇತ್ಯಾದಿ.

ಕುಮುದ್ವತಿ ಎತ್ತರವಾದ ನಿಲುವಿನ ದುಂಬಿ ಕಣ್ಣುಗಳ ಹುಡುಗಿ. ಮುದ್ದುಮುಖದ ಸೌಂದರ್ಯವತಿ. ಬೆಳೆದ ಮಗಳಿಗೊಂದು ಸರಿಯಾದ ನೆಲೆಯನ್ನು ಹೊಂದಿಸಲು ಹೆಣಗುತ್ತದೆ ತಂದೆಯ ಜೀವ. ಎಲ್ಲಿ ಯಾವ ಹುಡುಗರನ್ನು ನೆನೆದರೂ ಒಪ್ಪುವುದಿಲ್ಲ ಮನಸ್ಸು. ಮುಂದೇನು ? ಎಂಬ ಪ್ರಶ್ನೆ ಸದಾ ಕಾಡುತ್ತದೆ. ಪೌರುಷೇಯ ಪ್ರಕೃತಿಯ ಮಗಳು ಮಗನಿಗಿಂತಲೂ ಹೆಚ್ಚು...

○ ○ ○ ○

ಸೋಮಲಾಪುರ ವಿಸ್ತಾರದಲ್ಲಿ ಆಸ್ತಿಪಾಸ್ತಿಯ ಸಂವೃದ್ಧಿಯಲ್ಲಿ, ಜನ ಜೀವನದಲ್ಲಿ ದಿನದಿನಕ್ಕೂ ಪ್ರಗತಿಶೀಲ ಪಥ ಹಿಡಿಸಿದ ಊರು. ಗ್ರಾಮ್ಯ

ಜೀವನದಲ್ಲಿ ಜನವಸತಿ ವಿರಳ. ಅವರವರ ಗದ್ದೆಯಂಚಿನಲ್ಲಿ ಸಣ್ಣ ಪುಟ್ಟ ದೊಡ್ಡ ಚಿಕ್ಕ ಮನೆಗಳ ಹುಟ್ಟು. ಈಚೆಗೆ ರಾಂದಾದ ಕಟ್ಟಿದ್ದೊಂದೇ ದೊಡ್ಡ ಭವನ ಆ ಊರಿಗೆ. ಆದ್ದರಿಂದಲೇ ಎಲ್ಲರಿಗೂ ಅದರಲ್ಲಿ ಕುತೂಹಲ. ಅದ್ಧೂರಿಯ ಜೀವನಕ್ಕೆ ತಳಹದಿ ಗದ್ದೆ ತೆಂಗು ಕಂಗುಗಳ ತೋಟದ ವಿಸ್ತಾರ. ಊರಿನಲ್ಲಿ ಹೆಸರಾಂತ ಗಣ್ಯವ್ಯಕ್ತಿ ರಾಮನಾಥ. ಹಿರಿಯ ಗೃಹಿಣಿ ಲಕ್ಷ್ಮಿ ಬಾಣಂತನದಲ್ಲಿ ಕಳೆದುಕೊಂಡ ಆರೋಗ್ಯವನ್ನು ಮರಳಿ ಪಡೆಯದಿದ್ದರೂ ಗೃಹಕೃತ್ಯವನ್ನು ಚಾಚು ತಪ್ಪದಂತೆ ನಡೆಸಿಕೊಂಡ ನಿಷ್ಣಾತೆ. ಹೆಚ್ಚಿನ ಸುಖಸಂಪತ್ತನ್ನು ಬಯಸದೆ ಇದ್ದುದರಲ್ಲೇ ಸಂತೃಪ್ತಿಪಡೆದು ಕಾಲೋಚಿತವಾಗಿ ವರ್ತಿಸಿದ ಗೃಹಿಣಿ. ಊರಿನಲ್ಲಿ ಡಿಂಗೂ ಜ್ವರ ವ್ಯಾಪಕವಾಗಿ ಹರಡಿದಾಗ ದುರದೃಷ್ಟವಶದಿಂದ ಲಕ್ಷ್ಮಿಯ ಅಶಕ್ತ ಶರೀರವೇ ಮೊದಲ ಬಲಿಯಾಯಿತು. ಇಬ್ಬರು ಸಣ್ಣಸಣ್ಣ ಹುಡುಗರನ್ನೂ ಪತಿಯನ್ನೂ ಕಾಲದೇಶಿಗೊತ್ತಿ ಪಯಣ ಹೂಡಿದಳು ನೇಪಥ್ಯಕ್ಕೆ. ರಾಮನಾಥ ಬಹಳವಾಗಿ ಮರುಗಿ ಗೋಳಾಡಿದ. ತಂಗಿಯರಾದ ನಾಗು–ಸಾವಿತ್ರಿಯರು ಬಂದು ಬಂದು ಹೋಗುತಿದ್ದರು ಯಾರಿದ್ದರೂ ಗೃಹಿಣಿ ಇದ್ದಂತೆ ಆಗಲಿಲ್ಲ. ರಾಮನಾಥ ಸೋತು ಹೋದ. ಹೃನ್ಮನಗಳು ರಣಗೋಳಿನ ಆಗರವಾದುವು.

ಹುಡುಗರು ದಿನೇ ದಿನೇ ಬೆಳೆಯುತಿದ್ದಾರೆ. ಚಿಕ್ಕಂದಿನಿಂದ ಮುದ್ದು ಮಾಡಿದ ಪರಿಣಾಮವೋ ಏನೋ ಹೈಸ್ಕೂಲ್ ಹಂತವನ್ನು ದಾಟಲಿಲ್ಲ. ಸಂಸಾರದ ಒಳ–ಹೊರಗಿನ ವ್ಯವಹಾರದಲ್ಲೂ ಉದಾಸೀನ. ಅಪ್ಪನ ಕೆಲಸ ಅಪ್ಪನಿಗೆ. ಮಕ್ಕಳ ಅಸಡ್ಡಾಳತನ ಮಕ್ಕಳಿಗೆ. ಅವರನ್ನು ಸರಿದಾರಿಗೆ ತರಲು ಎಷ್ಟೆಷ್ಟೋ ಪ್ರಯತ್ನಪಟ್ಟ ರಾಮನಾಥ. ಆದರೂ, ಮಕ್ಕಳಿಗೆ ಲಕ್ಷ್ಯವೇ ಇಲ್ಲ. ಎಲ್ಲೆಲ್ಲೋ ತಿರುಗಾಡಿ ಊಟದ ಸಮಯಕ್ಕೆ ಸರಿಯಾಗಿ ಮನೆಗೆ ಬಂದರಾಯ್ತು.

ರಾಮನಾಥ ಬೇಸತ್ತು ಹೋದ. ಸಾಕಷ್ಟು ಆಳು ಕಾಳುಗಳಿದ್ದರೂ ಮನಶಾಂತಿ ಮಾತ್ರ ಇಲ್ಲ. ಕೊನೆಗೊಮ್ಮೆ ತನ್ನ ಸಮೀಪ ಸಂಬಂಧಿಯಾದ ಪದ್ಮಳನ್ನು ಲಗ್ನವಾಗಲು ಸಂಬಂಧ ಬೆಳೆಸಿ ಕೊಂಡನಂತರ ಮಕ್ಕಳಿಗೆ ವಿಷಯ ತಿಳಿಸಿದ.

ವಸಂತ–ವಾಸುರವರು ಒಮ್ಮೆಲೇ ಹೌಹಾರಿದರು.

ಮಲತಾಯಿಯನ್ನು ತರುವುದಕ್ಕಿಂತ ತಮಗೇ ಲಗ್ನ ಮಾಡಬಹುದಿತ್ತು ಎಂಬ ಧೋರಣೆ. ಮನದಲ್ಲಿ ಸಿಟ್ಟು ರೋಷಗಳು ಬೆಳೆದುವು. ಒಡಲ್ಕಿಚ್ಚು ಧಗಧಗಿಸಿತು. ಅಂತರಂಗ ಹಳಹಳಿಸಿ ಭುಗಿಲೆದ್ದಿತು. ಏನಾದರೇನು ? ರಾಮನಾಥ ತಲೆ ಕೆಡಿಸಿಕೊಳ್ಳದೆ ಶಾಂತಿಯಿಂದ ವಿವಾಹವಾಗಿ ಗೃಹಿಣಿಯನ್ನು ಕರೆತಂದ. ಪದ್ಮಾ ಗೃಹದ್ದೇಶಕ್ಕೆ ಯಜಮಾನಿಯಾದಳು. ಗೃಹ ಸಮುಚ್ಚಯ ಹಿರಿಯದಾದರೂ ಅಲ್ಲಲ್ಲಿ ಸೋರುತಿತ್ತು. ಶೀರಾ ಹಳೆಯ ಮನೆ. ಅದನ್ನು ದುರಸ್ತಿಮಾಡುವುದಕ್ಕಿಂತ ಕಿತ್ತು ಕಟ್ಟುವುದೇ ಲೇಸೆನಿಸಿತು ದಂಪತಿಗಳಿಗೆ. ಅದಕ್ಕಾಗಿ ಹೊಸ ಕಟ್ಟಡದ ವಿನ್ಯಾಸ ರೂಪಿತಗೊಂಡಿತು. ತಮ್ಮ ವಾಸ್ತವ್ಯವನ್ನು ಪಕ್ಕದ ಸಣ್ಣ ಮನೆಗೆ ಸ್ಥಳಾಂತರಗೊಳಿಸಿ ಮನೆಯನ್ನು ಕೀಳಿಸಿ ಹೊಸದಾಗಿ ಕಟ್ಟಲು ಕಂಟ್ರಾಕ್ಟದಾರರನ್ನು ಕರೆದು ಅಪ್ಪಣೆಕೊಟ್ಟ, ರಾಮನಾಥ.

ಹಳೆಮನೆ ನೆಲಸಮವಾಯಿತು. ಇಟ್ಟಿಗೆ ಮಣ್ಣುಗಳ ರಾಶಿಯನ್ನು ತೆಗೆದು ಶುದ್ಧಗೊಳಿಸಿ ಹೊಸ ಮನೆಯನ್ನು ಅದೇ ಸ್ಥಳದಲ್ಲಿ ಕಟ್ಟಿಸಿದ. ಕಟ್ಟಡ ಏಳಲು ವರ್ಷಕಾಲವೇ ಹಿಡಿಯಿತೇನೋ.......ಶ್ರಮ–ಶ್ರದ್ಧೆಗಳು ಪೈಪೋಟಿಗಿಳಿದುವು. ಹಣದ ಥೈಲಿ ಕರಗಿತು. ಗೃಹ ಸಮುಚ್ಚಯ ಅತ್ಯಂತ ಸುಂದರವಾಗಿ–ನಾಗರಿಕ ಶೈಲಿಯಲ್ಲಿ ತಲೆಯೆತ್ತಿ ನಿಂತಿತು.

ಆದರೆ........!

ಈ ಜೀವನವೇ 'ಆದರೆ' ಮಯ. ಗುಲಾಬಿ ಅರಳುವುದೇ ಮುಳ್ಳುಗಳ ಬೀಡಿನಲ್ಲಿ. ಬಾಳು–ಬದುಕು ಕೊನೆಯವರೆವಿಗೂ ಮುಳ್ಳುಗಳ ಸಹವಾಸದಲ್ಲಿಯೇ ಇದ್ದು ಬದುಕಿ ಅಂತ್ಯಗೊಳ್ಳದೆ ವಿಧಿಯಿಲ್ಲ. ತಾನೊಂದು ಬಯಸಿದರೆ ವಿಧಿ ಬಯಸುವುದು ಇನ್ನೊಂದು.

ತಂದೆಯ ಹೊಸ ಜೀವನದಲ್ಲಿ ತೋರುವ ಉತ್ಸಾಹ ಹುಡುಗರ ಒಡಲ್ಕಿಚ್ಚಿಗೆ ತುಪ್ಪ ಸುರಿಯುವುದರಲ್ಲಿ ಮುಂದೆ. ವಸಂತ ಸಿಡಿದೆದ್ದರೆ ವಾಸು ಡೋಲು ಬಾರಿಸುತಿದ್ದ. ದಿನವೂ ಒಂದಲ್ಲ ಒಂದು ಹಗರಣ. ಜಗಳ–ಗಲಾಟೆ–ಗದ್ದಲ ಮನೆಯಲ್ಲಿ.

ಹೊಸ ಹೆಂಡತಿಗಾಗಿ ಹೊಸ ಅರಮನೆ ಎಂಬ ಧೋರಣೆ. ಅಪ್ಪನ ಮಜವೇ ಮಜ, ಎಂಬ ತಿರಸ್ಕಾರ–ಒಡಲ್ಕಿಚ್ಚು, ಒಡಲಲ್ಲಿ.

ರಾಮನಾಥ ಮಕ್ಕಳಿಗೆ ಸಮಾಧಾನ ಹೇಳಿ ಹೇಳಿ ಸೋತು ಹೋದ.

ಪದ್ಮ ದೂರದವಳೇನೂ ಅಲ್ಲ. ಹುಡುಗರಿಗೆ ಚೆನ್ನಾಗಿ ಪರಿಚಿತಳೇ. ಲಕ್ಷ್ಮಿಯಿದ್ದಾಗ ಬಂದು ಹೋಗುತಿದ್ದ ಹೆಣ್ಣೇ. ಅವಳಿಗೆ ಹುಡುಗರಲ್ಲಿ ಅಂತಹ ದ್ವೇಷವಿಲ್ಲದಿದ್ದರೂ ಹುಡುಗರು ಹೊಂದುವವರಲ್ಲ. ಮನೆಯಲ್ಲಿ ನಿತ್ಯ–ಅಶಾಂತಿ-ಅಸಮಾಧಾನ.

ರಾಮನಾಥ ಮಕ್ಕಳ ಧೋರಣೆಯನ್ನು ನಿರ್ಲಕ್ಷಿಸಿ ಮನೆಗೆ ಹೊಸ ಪರಿಕರಣಗಳನ್ನು ತಂದು ನಾಗರಿಕ ಶೈಲಿಯಲ್ಲಿ ಅಳವಡಿಸಿದ. ಹಳೆಯ ಕುರ್ಚಿಗಳಿಗೆ ಬದಲಾಗಿ ಹೊಸ ಬಗೆಯ ಸೋಫಾ ಸೆಟ್ಟುಗಳು, ಹೊಸ ಹಾಸಿಗೆ ಮಂಚಗಳು, ಆಲಂಕಾರಿಕ ವಸ್ತುಗಳು ಮುಂತಾಗಿ ಸಕಲ ವಸ್ತುಗಳು ಆಗಮಿಸಿದುವು. ತರತರದ ಪರದೆಗಳು ವಿಜೃಂಭಿಸಿದುವು.

ದುರ್ಭಾವನೆಯ ಹುಡುಗರು ದುಷ್ಟ–ದುರಾಚಾರಗಳ ವಾಮಪಥ ಹಿಡಿದರು.

ರಾಮನಾಥ ಕರಿಕಲ್ಲಿನಲ್ಲಿ 'ಪದ್ಮಾಲಯ' ಎಂದು ಹೆಸರು ಕೆತ್ತಿಸಿ ಮಿರ ಮಿರನೆ ಹೊಳೆಯುವಂತೆ ಮಾಲೀಸು ಮಾಡಿಸಿ ಮನೆಗೆ ಹಚ್ಚಿಸಿದ. ಅಳಿದ ಅಮ್ಮನ ಹೆಸರಿನಲ್ಲಿ 'ಲಕ್ಷ್ಮೀನಿಲಯ' ಎಂದು ಹೆಸರಿಸಬಹುದಾಗಿತ್ತಲ್ಲ, ಅಪ್ಪಾಜಿ ಏಕೆ ಇಷ್ಟು ನಿಷ್ಠುರನಾದ ಎಂಬುದು ನುಂಗಲಾರದ ತುತ್ತು ವಸಂತ–ವಾಸುರವರಿಗೆ. ರಾಮನಾಥ ಎಲ್ಲಕ್ಕೂ ಕುರುಡು–ಕಿವುಡು ಮತ್ತು ಮೂಕ ಮೌನಿ.

ಆದರೇನು ?

ಶಾಂತಿ–ಸಮಾಧಾನಗಳು ಕೂಡಿ ಬರಲಿಲ್ಲ. ತಂಟೆ–ತಕರಾರುಗಳೂ ತಪ್ಪಲಿಲ್ಲ. ದಿನವೂ ಹೊಗೆಯಾಡುತ್ತದೆ ಒಡಲ್ಗಿಚ್ಚು. ನಾಗರಿಕ ಸಂಸ್ಕೃತಿಗೆ ಅನಾಗರಿಕ ಶೈಲಿಯ ಮುಳ್ಳೊತ್ತುಗಳು......ಊರ ಮಂದಿಗೆ ಬೆರಳು ತೋರಿ ನಗುವುದಕ್ಕೊಂದು ದಾರಿ.

o o o o

ಹುಡುಗರ ಆರ್ಭಟ–ಆಕ್ರೋಶಗಳನ್ನು ತುಟಿ ಪಿಟಿಕ್ಕೆನ್ನದೆ ನಿಟ್ಟಿಸುವಳು ಪದ್ಮ. ತನಗೆ ಸಿಟ್ಟು ಬಂದಿದ್ದರೂ ತೋರಿಕೊಳ್ಳಲಿಲ್ಲ ಅವಳು. ಅವರ ಆಕ್ರೋಶವನ್ನೆಲ್ಲಾ ಒಡಲಿಗೆ ತುಂಬಿಕೊಂಡು ಸುಮ್ಮನಿದ್ದು ಬಿಡುವುದೇ ದಿನಚರಿ. ಈ ಗಲಾಟೆ–ಕಿರಿಕಿರಿ ತಪ್ಪಿದರೆ ಸಾಕು ಇಬ್ಬರೂ ಹೊರಹೋದಾಗ ಮನೆ ತಣ್ಣಗಿರುತ್ತೆ ಎಂದು ತನ್ನಲ್ಲೇ ಪರಿಭಾವಿಸುವಳು ಅವಳು.

ರಾಮನಾಥ ಒಮ್ಮೆ ಇಬ್ಬರಿಗೂ ಅಂದ,

ಈ ಆಸ್ತಿಯನ್ನು ಸಮನಾಗಿ ಮೂರು ವಿಭಾಗ ಮಾಡಿ ನಿಮಗಿಬ್ಬರಿಗೂ ಒಂದೊಂದು ಪಾಲು ಕೊಡುವೆ. ಮನೆ ಕಟ್ಟಲಿಕ್ಕೂ ಹಣಕೊಡುವೆ. ಅದಕ್ಕೂ ಮುನ್ನ ನಿಮಗೆ ಮದುವೆ ಮಾಡುವೆ. ನೀವು ಒಪ್ಪಿದ ಹೆಣ್ಣನ್ನೇ ತರೋಣ. ಸುಮ್ಮನೇ ಇಲ್ಲಿದ್ದುಕೊಂಡು ಎಲ್ಲಕ್ಕೂ ವಿರುದ್ಧವಾಗಿ ಗಲಾಟೆ ಎಬ್ಬಿಸುವುದು ಬೇಡ. ಅದರಿಂದ ನಿಮಗೂ ಹಿತವಿಲ್ಲ. ನಮಗೂ ಹಿತ ಇಲ್ಲ. ಇದೆಲ್ಲಾ ಏಕೆ? ನೀವೂ ಚೆನ್ನಾಗಿರಬೇಕು. ನಾವೂ ಚೆನ್ನಾಗಿರಬೇಕು. ಆದ್ದರಿಂದ ನೀವೂ ನಾವೂ ಬೇರೆಯೇ ಇದ್ದು ಬಿಡುವುದು ಲೇಸು. ನೀವೇನೂ ಚಿಕ್ಕವರಲ್ಲ. ನಿಮ್ಮ ಕಾಲ ಮೇಲೆ ನೀವು ನಿಲ್ಲುವಷ್ಟು ದೃಢವಾಗಿರಬೇಕು......ಆಯಿತೇ?"

.......ಆಯಿತೇ?

ಆ ಕೊನೆಯ ವಾಕ್ಯ ಕಿವಿಯನ್ನು ಕೊರೆಯುವಂತೆ ಹೊಕ್ಕಿತು ಹುಡುಗರಿಗೆ. ಇಬ್ಬರೂ ಬೇಕಾಗಿಯೋ ಬೇಡವಾಗಿಯೋ ಒಪ್ಪಿಕೊಂಡರು. ಆ ಪ್ರಕಾರವಾಗಿ ಆಸ್ತಿ ಮೂರು ಪಾಲಾಯಿತು. ಮಕ್ಕಳಿಗೆ ಮನೆ ಕಟ್ಟಿಸುವ ಖರ್ಚು, ಮೊದಲನೆಯ ವರ್ಷದ ಆಸ್ತಿ ನಿರ್ವಹಣೆಯ ಖರ್ಚು ಇವುಗಳನ್ನು ರಾಮನಾಥನೆ ನಿರ್ವಹಿಸಿದ.

ಆದರೆ, ಆಧುನಿಕ ಜೀವನದಲ್ಲಿ ಶ್ರದ್ಧೆಯಿಲ್ಲದ ಮಕ್ಕಳಿಗೆ ದೊಡ್ಡಮನೆ ಅಥವಾ ನಾಗರಿಕತೆ ಅಥವಾ ಶ್ರಮಿಕ ಪ್ರವೃತ್ತಿ ಇವುಗಳಲ್ಲಿ ಆಸಕ್ತಿ ಇರಲಿಲ್ಲವಾದ್ದರಿಂದ ಬದುಕು ಅಡ್ಡಾದಿಡ್ಡಿ. ಹೊಸದಾಗಿ ಕಟ್ಟಿದ ಮನೆಗಳಿಗೂ ನಾಗರಿಕ ರೂಪುರೇಷೆ ಬರಲಿಲ್ಲ. ಅಪ್ಪಕೊಟ್ಟ ಹಣವನ್ನು ಕಿಸೆಗಿಳಿಸಿ ಮಜ ಮಾಡಿ ತಿಂದು ದಿವಾಳಿಯೆಬ್ಬಿಸಿದರು ಹುಡುಗರು. ತೋಟ ಹಾಳು ಬಿತ್ತು.

ದುರ್ದೈವ ಎಲ್ಲಿದ್ದರೆ ತಾನೆ ಬಿಟ್ಟೀತು ?

ಮೋಹಿನಿ ಹಿರಿಯ ಸೊಸೆಯಾಗಿ ವಸಂತನ ಪಾಣಿಗ್ರಹಣ ಮಾಡಿದಳು. ಎರಡನೆಯ ಸೊಸೆಯಾಗಿ ಬಂದ ಸುಮಿ ವಾಸುವಿನ ಗೃಹಿಣಿಯಾದಳು. ಇಬ್ಬರಿಗೂ ಅವರವರ ತೋಟಗಳ ಅಂಚಿನಲ್ಲಿ ಮನೆ. ಪದ್ಮಾಲಯಕ್ಕೆ ಅರ್ಧ ಮೈಲಿಯಷ್ಟು ದೂರ.

ಪದ್ಮ ಹಾಯಾಗಿ ಉಸಿರಾಡಿದಳು. ರಾಮನಾಥನಿಗೆ ಇನ್ನಾದರೂ ಶಾಂತಿ ಸಮಾಧಾನಗಳು ಬಂದಾವು ಎಂಬ ನಂಬುಗೆ. ಪದ್ಮ ಹೆಚ್ಚು ಮಾತಿನ ವಳಲ್ಲ. ಕೆಲಸ ಕಾರ್ಯಗಳಲ್ಲೂ ಹೆಚ್ಚು ನುರಿತವಳಲ್ಲ. ಸಾಮಾನ್ಯ ಬುದ್ಧಿಯ ಸಾಮಾನ್ಯ ಹೆಣ್ಣಾದರೂ ಲಕ್ಷಣವಂತೆ. ರಾಮನಾಥ ಅವಳಲ್ಲಿ ಅಪಾರವಾದ ಪ್ರೇಮವನ್ನಿಟ್ಟಿದ್ದ. ಅವಳಿಗಾಗಿ ಏನು ಮಾಡಲೂ ಸಿದ್ಧ. ಆದರೂ, ಈಚೀಚೆ ಗೆ ಅವಳ ದೇಹಸ್ಥಿತಿ ಯಾಕೋ ಕ್ಷೀಣಿಸಹತ್ತಿತು. ಅವಳನ್ನು ನಗರದ ವೈದ್ಯರಲ್ಲಿಗೆ ಕರೆದೊಯ್ಯಲೆಂದು ಕಾರು ಕೊಂಡುಕೊಂಡ ರಾಮನಾಥ.

ಆಧುನಿಕ ವ್ಯವಸಾಯಕ್ಕೆ ಶ್ರಮ–ಶ್ರದ್ಧೆಗಳು ಪೂರಕ. ಆಸ್ತಿ ಪಾಲು ಮಾಡಿದರೂ ಉತ್ಪತ್ತಿಗೆ ದಕ್ಕೆಯಿರಲಿಲ್ಲ. ರಾಮನಾಥ ಯಾವತ್ತೂ ಹುರುಪ ನ್ನೂ ಹುರುಪುಗೊಳಿಸುವ ಅಪೂರ್ವ ಶ್ರದ್ಧಾಳು. ಸದಾ ಯುವ ಶಕ್ತಿಯನ್ನು ನಿರೂಪಿಸುವ ಶರೀರ. ಇಪ್ಪತ್ತರ ಹರೆಯದವರನ್ನೂ ಬದಿಗೊತ್ತುವ ಮೈಕಟ್ಟು.

ಆದೇ ಮಕ್ಕಳು ಅವನಂತಿರಲಿಲ್ಲ. ವಸಂತ ಎತ್ತರವಾಗಿದ್ದರೂ ದೃಢ ಕಾಯನಲ್ಲ. ವಾಸುವಿನದು ಗಿಡ್ಡ ಶರೀರ. ಮುಖದಲ್ಲಿ ಕಳೆ ಮತ್ತೊಂದು ಮಗದೊಂದು ಇರಲೇ ಇಲ್ಲ. ಎಲ್ಲೋ ತಪ್ಪಿ ಹುಟ್ಟಿದರು ಎನಿಸುವಷ್ಟು ಸಾಮಾನ್ಯ ರೂಪುರೇಶೆ. ಇಬ್ಬರೂ ದೂರವಿದ್ದರೂ ಸ್ನೇಹ ಪ್ರವೃತ್ತಿ ಬೆಳೆಸ ಲಿಲ್ಲ. ತಾವು ಮತ್ತು ತಮ್ಮ ದುಷ್ಟಕೂಟವೇ ಕೂಟ.

ರಾಮನಾಥ ವಿಹಾರಾರ್ಥವಾಗಿ ಮತ್ತು ಮಡದಿಯ ಆರೋಗ್ಯ ವೃದ್ಧಿ ಗಾಗಿ ತೀರ್ಥ ಯಾತ್ರೆಗೆ ಹೊರಟ. ಅದರಿಂದ ಭಕ್ತಿಭರಿತ ಅಪಾರವಾದ ಶಾಂತಿ ಮನಸ್ಸಿಗೆ. ನಾಲ್ಕೈದು ತಿಂಗಳ ತೀರ್ಥಯಾತ್ರೆ ಅಂತ್ಯಗೊಂಡಾಗ ಅವಳ

ದೇಹಸ್ಥಿತಿ ಇದ್ದಂತೆಯೇ ಇತ್ತು. ರಾಮನಾಥನ ಆರೋಗ್ಯ ಸುಧಾರಿಸಿ ದೃಢಕಾಯನಾದ. ನಲವತ್ತೈದರ ಹರೆಯ ಯುವಾವಸ್ಥೆಗಿಳಿಯಿತು. ಆದರೇನು ? ಮಡದಿಯ ಶರೀರ ಸ್ಥಿತಿಗತಿ ಮನಕ್ಕೊಂದು ಮುಳ್ಳು.

ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡಲಿಲ್ಲ.

ರಾಮನಾಥ ತೀವ್ರ ಚಿಂತಿತನಾದ. ಊರಿನ ಶಿವಾಲಯದಲ್ಲಿ ನಂದಾದೀಪ ಕುಡಿಕಟ್ಟದಂತೆ ಉರಿಸಲು ಏರ್ಪಾಡು ಮಾಡಿದ. ಮೃತ್ಯುಂಜಯ ಜಪ ಲಲಿತಾ ಸಹಸ್ರ ನಾಮಗಳ ಪಠಣ ಎಡೆಯಿಲ್ಲದಂತೆ ನಡೆಯಿತು, ಪದ್ಮಳ ಹೆಸರಿನಲ್ಲಿ.

ಅಂದು ಪದ್ಮಳ ಶಯ್ಯಾ ಪ್ರಾಂತದಲ್ಲಿ ಕುಳಿತು ಅವಳ ಕೈಹಸ್ತವನ್ನು ಮೃದುವಾಗಿ ಹಿಡಿದುಕೊಂಡು ನುಡಿದ ರಾಮನಾಥ "ಇಂದು ದೇವಾಲಯದಿಂದ ವಿಶ್ವೇಶ್ವರ ಭಟ್ಟರು ಬರುತ್ತಾರೆ. ಅವರಿಗೆ ನಂದಾದೀಪಕ್ಕಾಗಿ ಪಂಚೇರು ತುಪ್ಪ ಕೊಟ್ಟುಬಿಡು. ನಾನು ನಗರಕ್ಕೆ ಹೋಗಿ ಡಾಕ್ಟರನ್ನು ಕರೆತರುವೆ. ನೀನೇನೂ ಚಿಂತಿಸಬೇಡ. ಇನ್ನು ನಿನ್ನ ಆರೋಗ್ಯ ಸುಧಾರಿಸಬಹುದು, ದೇವರಿದ್ದಾನೆ. ನೀನು ಔಷಧೋಪಚಾರವನ್ನು ನಿರ್ಲಕ್ಷಿಸಬಾರದು. ನಾನು ಮನೆಯಲ್ಲಿಲ್ಲದಾಗ ನೀನು ಉದಾಸೀನ ಮಾಡುತ್ತಿ ಅದು ಸರಿಯಲ್ಲ."

ಅವನ ದನಿ ಕಳಕಳಿಯಿಂದ ಕೂಡಿದ್ದುದನ್ನು ಕಂಡು ಅವಳೆಂದಳು.

"ಹಾಗೇನಿಲ್ಲ, ಒಮ್ಮೊಮ್ಮೆ ಮರೆತುಬಿಡುವೆ ಅಷ್ಟೆ. ಯಾಕೋ ಔಷಧಿಯು ಮೈಗೆ ಹಿಡಿಯುತ್ತಿಲ್ಲ. ಅದೇ ಬೇಸರ."

"ಹಾ, ಅದು ಕೂಡದು. ದೇವರು ದೊಡ್ಡವನು. ಅವನೇ ಕಾಪಾಡ್ತಾನೆ."

ನೀಳವಾದ ನಿಟ್ಟುಸಿರು ಬಿಟ್ಟಳು ಪದ್ಮ.

ರೇಡಿಯೋ ಹಾಡಿತು "ಬೆಟ್ಟ ಕರ್ಪುರವುರಿದು ಬೊಟ್ಟಿಡಲು ಬೂದಿಲ್ಲ!

— ೦ —

೨

ಚೈತ್ರ ಪ್ರಭಾತದ ಸುಂದರ ಸಮಯ...

ಬಾಲಾರುಣಾರುಣ ಬೆಣ್ಣೆ ಮುಗಿಲ ದಿಣ್ಣೆಯನ್ನೇರಿದ್ದಾನೆ...

ಪ್ರಕೃತಿಯು ಚೆಂಬಿಸಿಲ ಚುಂಬನದಿಂದ ಶೋಭಾಯಮಾನವಾಗಿದೆ. ಪಚ್ಚ ಕಡಲಿನ ಪೆಂಪಿಗೆ ಮಿಸುನಿಯ ಲೇಪವೂರೆದಂತೆ. ಪಕ್ಷಿಲೋಕದ ಉದಯ ಗಾನ ಕಿವಿಗಳಿಂಪಾದರೆ, ವನಸುಮಗಳ ಸೌರಭ ಹೃನ್ಮನಗಳಿಗೆ ತಂಪಿನ ಪೆಂಪು.

ಕುಮುದ್ವತಿಯು ಪ್ರಕೃತಿಯ ವೈಭವೋಪೇತವಾದ ಸೌಂದರ್ಯರಾಶಿ ಯಲ್ಲಿ ಒಮ್ಮೆ ಮುಳುಗೆದ್ದು ಕೈಗೊಂದು ಪುಸ್ತಿಕೆಯನ್ನು ತೆಗೆದುಕೊಂಡು ಹಿತ್ತಿಲಿನ ಮೆಟ್ಟಲಿನ ಮೇಲೆ ಕುಳಿತುಕೊಂಡಳು ಸುಂದರ ವಾತಾವರಣಕ್ಕೆ ಮೈಗೊಟ್ಟು. ಸ್ವಲ್ಪಹೊತ್ತು ಉರುಳಿರಲಿಕಿಲ್ಲ. ಹಿಂದಿಲಿಂದ ಯಾರೋ ಎರಡೂ ಕೈಗಳಿಂದ ಕಣ್ಣುಗಳನ್ನು ಬಿಗಿಯಾಗಿ ಮುಚ್ಚಿಹಿಡಿದರು. ಕುಮು ದ್ವತಿ ಬಿಡಿಸಿಕೊಳ್ಳಲು ಪ್ರಯತ್ನಿಸಿದಳು. ಎಷ್ಟು ಪ್ರಯತ್ನಿಸಿದರೂ ಬಿಡಿಸಿ ಕೊಳ್ಳಲಾಗಲಿಲ್ಲ.

"ಶ್ರೀಹರೀ! ಯಾರಪ್ಪಾ ಇದು...?"

"......"

"ಯಾರೂ....ಯಾರೂ ?"

ಬಿಡಿಸಿಕೊಳ್ಳಲು ಎಷ್ಟು ಕೊಸರಾಡಿದರೂ ಬಿಡಲೊಲ್ಲವು ಕೈ. ಬಾಯಿ ಬಿಟ್ಟರೆ ಧ್ವನಿಯಿಂದ ಪತ್ತೆ ಹಚ್ಚುವಳೆಂದು ಬಾಯನ್ನು ಬಿಡದೆ ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸಿದಳು ಸರಸು. ಆಗ ಬಿರುಸಾಗಿ ಕೈಕಿತ್ತು ನೋಡಿದ ಕುಮುದ್ವತಿ,

"ಶ್ರೀಹರೀ, ಎಂಥ ದುಷ್ಟೆ ನೀನು? ನನಗೆ ಎಷ್ಟು ಭಯವಾಯ್ತು ಗೊತ್ತೇ? ನೀನೊಂದು ಮಾತಾಡದಿದ್ದರೆ ಅಳೀದುಕೊಳ್ಳುತಿದ್ದೆ. ಎಷ್ಟು ಕೂಗಾಡಿದರೂ ಬಿಡಲಿಲ್ಲವಲ್ಲಾ? ಹೀಗಾ ಹೆದರಿಸುವುದು?"

ಸರಸಿಗೆ ಅತ್ತಗಮನವಿದ್ದರೆ ತಾನೇ? ನಗುವೇ ನಗು...ನಗು...ನಗು ಬಿದ್ದೂ ಬಿದ್ದೂ ನಗುತಿದ್ದಾಳೆ.

"ನಿನಗೆ ನಗು...ನನಗೆಷ್ಟು ಭಯ?"

"ಭಯ ಎರಡು ಕ್ಷಣ ಮಾತ್ರ ತಾನೇ? ಯಾರೋ ಕಳ್ಳ ಎಂದು ತಿಳಿದು ಕೊಂಡೆಯಾ?"

"ಅಲ್ಲದೆ ಏನು?"

ಕುಮುದ್ವತಿ ಗೆಳತಿಗೆ ಅತಿಥಿ ಸತ್ಕಾರ ಮಾಡುತ್ತ ಹೇಳಿದಳು,

"ನೀನಿಂದು ಸಂಜೆಯವರೆವಿಗೆ ಇದ್ದು ಹೋಗಬೇಕು, ತಿಳಿಯಿತೇ?"

"ನಾನು ಪದ್ಮತ್ತೆ ಮನೆಗೆ ಹೊರಟಿದೇನೆ. ಅವರು ಕಳೆದವಾರ ನಮ್ಮಲ್ಲಿಗೆ ಬಂದಾಗ ಬಹಳ ಕರೆದು ಹೋಗಿದ್ದಾರೆ. ಜೊತೆಗೆ ನಿನ್ನನ್ನೂ ಕರೆದೊಯ್ಯೋಣವೆಂತಲೇ ಬಂದೆ. ಒಬ್ಬಳೇ ಹೋಗುವುದು ಬೇಸರ ಅದಕ್ಕೇ......."

"ಶ್ರೀಹರೀ, ನಾನೇಕೆ ಬರಲಿ?"

"ಅಯ್ಯೊ, ನಿನಗೊತ್ತಿಲ್ಲ, ಅವರು ನಿನ್ನನ್ನು ಕರೆತರಲು ತುಂಬಾ ಹೇಳಿದ್ದಾರೆ, ಕೇಳು."

"ಯಾಕೆ?"

"ನೀನವರಿಗೆ ಗೌರು ಮದುವೆಯಲ್ಲಿ ಸಿಕ್ಕಿದ್ದೆಯಂತೆ. ಆಗ ಕರೆಯಲು ಮರೆತು ಬಿಟ್ಟರಂತೆ. ಅದಕ್ಕೇ ಹೇಳಿ ಕರೆದುಕೊಂಡು ಬಾ ಎಂದಿದ್ದಾರೆ."

ಆ ಮಾತಿಗೆ ಯೋಚಿಸಿದಳು ಕುಮುದ್ವತಿ, ಹೋಗಲೋ ಬೇಡವೋ ಎಂಬ ಪ್ರಶ್ನೆ ಎದ್ದಿತು ಮನದಲ್ಲಿ.

"ಬಾರಮ್ಮಾ ಅದಕ್ಕೇಕೆ ಯೋಚನೆ ಮಾಡುತ್ತಿ?"

"ನೀನಲ್ಲಿ ಎಷ್ಟು ಹೊತ್ತು ಇರುತ್ತಿ?" ಕುತೂಹಲದಿಂದ ಕೇಳಿದಳು ಕುಮುದ್ವತಿ.

"ಒಂದು ಗಂಟೆ ಇದ್ದರೆ ಸಾಕು. ಊಟದ ಹೊತ್ತಿಗೆ ಹಿಂತಿರುಗಬೇಕು."

ಕುಮುದ್ವತಿಗೆ ಹೋಗಲು ಆಸೆಯಿದ್ದರೂ ದೃಢ ಮನಸ್ಸು ಮೂಡಲಿಲ್ಲ. ಒಂದು ಗಳಿಗೆ ತನ್ನಲ್ಲೇ ಯೋಚಿಸಿದಳು.

"ಅದ್ಯಾಕೆ ಅಷ್ಟು ಯೋಚನೆ? ಒಳ್ಳೆ ಯುದ್ಧಕ್ಕೆ ಹೋಗುವವರು ಯೋಚಿಸುವಂತೆ ಯೋಚಿಸುತಿದ್ದೀ?"

ಇಬ್ಬರೂ ಘೊಳ್ಳನೆ ನಕ್ಕು ಬಿಟ್ಟರು.

ಹಟ್ಟಿಯಿಂದ ಒಳಬಂದ ಸೀತಮ್ಮ ಕೈಕಾಲು ತೊಳೆದುಕೊಂಡು ಸರಸಿಯಿಂದ ವಿಷಯವನ್ನು ತಿಳಿದ ನಂತರ "ಹೋಗಿ ಬಾ ಮಗಳೇ, ಅದಕ್ಕೇಕೆ ಯೋಚನೆ? ಹೇಗೂ ನೀನು ಹೊಸಮನೆ ನೋಡಲಿಲ್ಲ" ಎಂದಳು ನಿಶ್ಚಿಂತೆಯಿಂದ.

ಕುಮುದ ಬಟ್ಟೆ ಬದಲಿಸಿ ತಲೆಬಾಚಿಕೊಂಡು ಗೆಳತಿಯೊಂದಿಗೆ ಹೊರಟಳು. ಇಬ್ಬರ ಕೈಗಳೂ ತೆಕ್ಕೆಯಾದುವು. ಗ್ರಾಮೀಣ ಜನಪದ ತುಳಿದ ಅಂಕುಡೊಂಕಿನ ಹಾದಿಯಲ್ಲಿ ನಡೆದರೆ ಬಹಳ ದೂರವೇನಿಲ್ಲ. ಹತ್ತು ಹದಿನೈದು ನಿಮಿಷಗಳ ನಡಿಗೆ. ಮಾತುಕತೆಯ ಮೋಡಿಯಲ್ಲಿ ಹಾದಿ ಕಳೆದುದೇ ತಿಳಿಯುಲಿಲ್ಲ. ದೂರದಿಂದ ನೋಡಿದರೆ ಮರಗಳ ಗುಂಪಿನಲ್ಲಿರುವ ಮನೆ ಅಂತಹ ದೊಡ್ಡದಾಗಿ ತೋರುವುದಿಲ್ಲ. ಅಂಗಳವೂ ಕಿರಿದು ಎನಿಸುತ್ತೆ. ಇಷ್ಟೇನಾ ಎಂದು ಕೊಂಡಳು ಕುಮುದ್ವತಿ ಮನದಲ್ಲಿ. ಹತ್ತಿರ ಹೋದರೆ ಗೊತ್ತು ಅದರ ವಿಸ್ತೀರ್ಣ. ಹೆಮ್ಮರಗಳೆಲ್ಲ ಹಿಂದಿನವೇ. ಹಚ್ಚ ಹಸುರಿನ ಮಧ್ಯೆ ಕಣ್ಸೆಳೆಯುವ ಮನೆಯ ದೃಶ್ಯ ದೂರದಿಂದಲೇ ಕಣ್ಣಿಗೆ ಹಬ್ಬ. ಸುತ್ತ ಮುತ್ತಲೂ ವಿಶಾಲವಾದ ಅಂಗಣ. ಅದರಾಚೆ ಹಟ್ಟಿ ಕೊಟ್ಟಿಗೆ ಮತ್ತು ಒಂದೆರಡು ಸಣ್ಣ ಮನೆಗಳ ಹರವು.

ಇಬ್ಬರೂ ಮನೆ ಮುಟ್ಟಿದಾಗ ಸದ್ದು ಗದ್ದಲಗಳ ಸೊಲ್ಲಿರಲಿಲ್ಲ. ಅಂಗಳದಲ್ಲಿ ಮಲಗಿದ್ದ ಜೂಲು ನಾಯಿಗಳು ತಲೆಯೆತ್ತಿ ನೋಡಿ ಬಾಲ ಆಡಿಸಿದುವು ಸರಸಿಯನ್ನು ನೋಡಿ. ಒಂದು ಕೆಂದು, ಇನ್ನೊಂದು ಕಪ್ಪು. ಹೊಸದಾಗಿ ಕೊಂಡುಕೊಂಡ ಕಾರು ಬಾಗಿಲಲ್ಲಿ ನಿಂತಿತ್ತು.

ಸರಸು ಮೆಟ್ಟಿಲು ಹತ್ತುತ್ತ ನುಡಿದಳು "ನಾಯಿಗಳಿಗೆ ನನ್ನ ಪರಿಚಯ ಚೆನ್ನಾಗಿದೆ. ನಿನ್ನನ್ನು ನೋಡಿಯೂ ಬೊಗಳಲಿಲ್ಲ, ಅದೇ ವಿಶೇಷ! ನೀನು ಇದೇ ಮೊದಲು ಬಂದಿದ್ದಿ. ಆದರೂ, ಸುಮ್ಮನೇ ಇವೆ" ಎಂದ ಅವಳು ಪುನಃ ನಗು ಮುಖದಿಂದ "ನೀನು ಒಳ ಹೋದರೆ ಡಂಗಾಗಿ ಬಿಡುತ್ತಿ! ಹೊಸಮನೆ, ನೋಡುವುದೆಲ್ಲ ನೋಡಿಬಿಡು !"

"ಶ್ರೀಹರೀ, ಇನ್ನೊಬ್ಬರ ವೈಭವ ಕಟ್ಟಿಕೊಂಡು ನನಗೇನಾಗಬೇಕು ಹೇಳು ?"

"ಕಣ್ಣಿಂದ ನೋಡುವುದಷ್ಟೆ. ಮ್ಯೂಜಿಯಂ ನೋಡುವುದಿಲ್ಲವೇ ಹಾಗೆ. ನಮ್ಮ ಗ್ರಾಮಕ್ಕೆ ಇದೇ ದೊಡ್ಡದು."

ಇಬ್ಬರ ತುಟಿಗಳಲ್ಲೂ ಮಂದಹಾಸ ಬೆಳಗಿತು. ಮರುಗಳಿಗೆಯಲ್ಲೇ ಇಬ್ಬರೂ ಒಳ ಹೊಕ್ಕರು. ಹಜಾರದಲ್ಲಿ ಕುಳಿತಿದ್ದ ಪದ್ಮ ಹುಡುಗಿಯರನ್ನು ಕಂಡು ಎದ್ದು ಬಂದು ಪ್ರಸನ್ನ ಮುಖದಿಂದ ಸುಸ್ವಾಗತ ನೀಡಿದಳು. ಪ್ರೈಯೆಲ್ಲಾ ಮನಸ್ಸಾದಂತೆ ಆನಂದದ ಕಳೆ ಬೆಳಗಿತು ಮುಖಬಿಂಬದಲ್ಲಿ.

"ಎಷ್ಟು ದಿನಗಳ ಮೇಲೆ ಬಂದೆ ಸರಸಿ? ನಾನು ಎಷ್ಟೋದಿನಗಳಿಂದ ನಿನಗಾಗಿ ಕಾಯುತಿದ್ದೆ ಅಂತೂ, ಕುಮುದಳನ್ನೂ ಕರೆತಂದೆಯಲ್ಲಾ ಅದೇ ಸಂತೋಷ," ಎಂದ ಅವಳು ಕುಮುದ್ವತಿಯನ್ನು ಕುರಿತು ನುಡಿದಳು "ಅಂದು ಗೌರು ಮದುವೆಯಲ್ಲಿ ನಿನ್ನೊಂದಿಗೆ ಮಾತಾಡಿದರೂ ಮನೆಗೆ ಕರೆಯಲು ಮರೆತು ಬಿಟ್ಟೆ, ಅನಂತರ ಪೇಚಾಡುವಂತಾಯಿತು ನನಗೆ. ಹೀಗೆಯೇ ಯಾವಾಗಲಾದರೂ ಬಂದು ಹೋಗುತ್ತಿರಿ. ನನಗೆ ಒಬ್ಬಳೇ ಇರುವುದು ಬೇಸರ ಇಲ್ಲಿ. ಸಾಲದುದಕ್ಕೆ ಆರೋಗ್ಯವೂ ಅಷ್ಟು ಚೆನ್ನಾಗಿಲ್ಲ. ಆಗಾಗ ಸಣ್ಣ ಪುಟ್ಟ ನೋವು ಇದ್ದೇ ಇರುತ್ತೆ. ಯಾರಾದರೂ ಹೀಗೆ ಬರುತಿದ್ದರೆ ಹೊತ್ತು ಸರಾಗವಾಗಿ ಕಳೆಯುತ್ತೆ ನನಗೆ."

ಅದೇ ವೇಳೆಗೆ ರಾಮನಾಥ ಆಗಮಿಸಿದ.

"ಓಹೋ! ಇಬ್ಬರೂ ಬಂದಿದ್ದೀರಿ. ಸರಸಿ ಬರುವುದು ವಿಶೇಷವಲ್ಲ. ಕುಮು ಬಂದುಬಿಟ್ಟಿದ್ದಾಳೆ!"

ಆಗ ಪದ್ಮ ದನಿಗೂಡಿಸಿದಳು "ಅವಳು ಬರಲಿಲ್ಲ. ಸರಸಿ ಎಳೆತಂದಿದ್ದಾಳೆ ಅಷ್ಟೆ."

"ಒಮ್ಮೆ ಬರಬೇಕು ಎಂದು ಕೊಂಡಿದ್ದೆ. ಅದಕ್ಕೆ ಸಮಯ ಕೂಡಿ ಬಂದುದು ಇಂದು."

"ಅಂತೂ, ಬಂದೆಯಲ್ಲಾ ಸಂತೋಷ. ಪದ್ಮ ಯಾವಾಗಲೂ ಒಂಟಿ. ನಿಮ್ಮಂತಹವರು ಬಂದರೆ ಅವಳಿಗೆ ಸಂತೋಷವಾಗುತ್ತೆ."

ಪದ್ಮಳ ಆತ್ಮೀಯ ಆತಿಥ್ಯವನ್ನು ಸ್ವೀಕರಿಸಿ ಅವರು ಅಲ್ಲಿಂದ ಹೊರಟಾಗ ಗಂಟೆ ಹನ್ನೊಂದರ ಮೇಲಾಗಿತ್ತು. ಸೂರ್ಯ ನಡುನೆತ್ತಿಗೇರುತಿದ್ದ.

ಯಾವುದೋ ಹೆಮ್ಮರದ ನೆತ್ತಿಯ ಎಲೆಗಳ ಹೊದರಿನಲ್ಲಿ ಕೋಗಿಲೆ ಯೊಂದು ಸುಸ್ವರದಲ್ಲಿ ಹಾಡಿತು ಕುಹು ಕುಹು ಕುಹು ಕುಹೂಊಊಊ...! ಕುಹು ಕುಹೂಊಊಊಊ....!

೦ ೦ ೦ ೦

ಪದ್ಮಳಿಗೆ ಈಚೀಚೆಗೆ ಹೊಟ್ಟೆಯಲ್ಲಿ ಏನೋ ಒಂದು ಬಗೆಯ ಕಸಿವಿಸಿ, ಉರಿ, ನೋವು, ಪರಿತಾಪ. ದೇಹ ಕ್ಷೀಣಿಸತೊಡಗಿತು. ರಾಮನಾಥ ಮತ್ತೆ ಆಸ್ಪತ್ರೆಯ ಹಾದಿ ತುಳಿದ. ವೈದ್ಯರಿಂದ ವೈದ್ಯರಿಗೆ ಅಲೆದಾಟದಿಂದ ಚಿಕಿತ್ಸೆಯ ಸ್ವರೂಪ ಹಿಗ್ಗಿತು. ಆದರೂ ರೋಗ ಹಿಂಜರಿಯಲಿಲ್ಲ. ಅವಳು ನರಳುತ್ತಾಲೇ ಇದ್ದಾಳೆ. ಕಟ್ಟಕಡೆಯಲ್ಲಿ ಅದು ಅರ್ಬುದ ರೋಗವೆಂದು ತಿಳಿದು ಬಂದಾಗ ಹತೋಟಿಗೆ ಮೀರಿ ಬೆಳೆದಿತ್ತು. ಅನಂತರ ಅವಳು ಬಹಳ ದಿನ ಬದುಕಲಿಲ್ಲ. ಕೇವಲ ಎರಡು–ಮೂರು ವರ್ಷಗಳ ಅವಧಿಯಲ್ಲೇ ಸಂಸಾರ ಬಂಧ ಕಡಿದು ಹೋಯಿತು. ರಾಮನಾಥ ಕಂಗಾಲಾದ. ಕಂಬನಿಯ ಕೋಡಿ ಹರಿಸಿದರೂ ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳಲು ಸರ್ವಸಾಹಸಾ ಹೆಣಗಿದ. ಪದ್ಮಾಲಯ ಮತ್ತೊಮ್ಮೆ ಬಣಬಣ ಎನ್ನ ಹತ್ತಿತು.

ಮಗ ಸೊಸೆಯರನ್ನು ಕರೆಸಿಕೊಳ್ಳುವ ಮನಸ್ಸಾಗಲಿಲ್ಲ ರಾಮನಾಥನಿಗೆ. ತಾನೇ ಕೆಲವು ದಿನ ಒಳಹೊರಗೆ ಹೆಣಗಿದ. ಅಗಾಧವಾದ ಮಾನಸಿಕ ದುಃಖ

ಬೇರೆ. ಮಕ್ಕಳು ತಂದೆಯ ಸ್ಥಿತಿಗೆ ಸಂತೋಷಿಸಿದರೇ ಹೊರತು ಸಹಾಯಕ ರಾಗಲು ಮುಂದಾಗಲಿಲ್ಲ.

ದೇವಯ್ಯ ಮಡದಿಯೊಡನೆ ಆಗಾಗ ಬಂದು ಹೋಗುತಿದ್ದ. ನೆರೆಯುವ ನಾದ ಅವನ ಸಹಾಯವನ್ನು ರಾಮನಾಥ ಮನವೊಪ್ಪಿ ಸ್ವೀಕರಿಸಿದ. ಹಾಗೆ ಬಂದಾಗಲೆಲ್ಲಾ ಸೀತಮ್ಮ ಒಳಗಡೆ ಸೇರಿಕೊಂಡು ಸಾರು ಪಳಿವ್ಯಗಳನ್ನು ಮಾಡಿಟ್ಟು ಹೋಗುತಿದ್ದಳು. ಪದ್ಮ ಕಾಹಿಲೆಯಿದ್ದಾಗಲೂ ಅನೇಕ ಸಲ ಬಂದು ಅಗತ್ಯವಾದ ಸಹಾಯವನ್ನು ಮಾಡುತಿದ್ದ ದಂಪತಿಗಳನ್ನು ನೋಡಿದರೆ ರಾಮನಾಥನಿಗೆ ತಂದೆ ತಾಯಿಗಳನ್ನು ನೋಡಿದಷ್ಟು ಹಿತ.

"ಹೀಗೆಯೇ ಆಗಾಗ ಬರುತ್ತಿರಿ ದೇವಯ್ಯ. ನೀವು ಬಂದಾಗ ಮನೆ ಜೀವಕಳೆಯಿಂದ ತುಂಬುತ್ತದೆ. ನಿಮ್ಮಿಂದಲೇ ಈ ಮನೆಗೆ ಈಗ ಜೀವಾಳ." ಎಂದ ರಾಮನಾಥ ದುಃಖಗದ್ಗಿತದನಿಯಲ್ಲಿ.

ದೇವಯ್ಯನ ಮನಸ್ಸು ಬಿಸಿಲಟ್ಟಿದ ಮಂಜಿನಂತೆ ದ್ರವಿಸಿತು. ಏನೋ ಹೇಳಲು ಪ್ರಯತ್ನಿಸಿದರೂ ತುಟಿಗಳು ಬಿರಿಯಲಿಲ್ಲ. ಸುಮ್ಮನೆ ಅತ್ಯಂತ ಕರುಣಾ ದೃಷ್ಟಿಯಿಂದ ನೋಡಿ ಸುಮ್ಮನಾದ. ಒಡಲಲ್ಲಿ ಕಸಿವಿಸಿಯುಂಟಾ ಯಿತು. ಸೀತಮ್ಮ ಸದ್ದಿಲ್ಲದೆ ಒಳಗಡೆ ಸೇರಿಕೊಂಡು ಖಾದ್ಯ ತಯಾರಿಸುವುದ ರಲ್ಲಿ ನಿರತಳಾಗಿದ್ದಾಳೆ. ರಾಮನಾಥನ ಪರಿಸ್ಥಿತಿಯನ್ನು ನೋಡಿದರೆ ಏನು ಮಾಡಿದರೆ ಸರಿಹೋಗುತ್ತದೆ? ಎಂಬ ಪ್ರಶ್ನೆ ತಾನೇ ತಾನಾಗಿ ಏಳುತ್ತದೆ ಮನದಲ್ಲಿ. ರಾಮನಾಥ ಚಿನ್ನದಂತಹ ವ್ಯಕ್ತಿ. ದೈವ ಅವನಿಗೆ ಇಷ್ಟು ಕ್ರೂರ ವಾಗಬಾರದಿತ್ತು ಎಂಬ ಕಾರುಣ್ಯ ಪೂರ್ಣ ಸಹನೆಯ ಕಟ್ಟೆ ಬಿರಿದು ಕಣ್ಣು ಗಳು ತೊಯ್ಯುತ್ತವೆ.

ದಿನಗಳ ಗಾಲಿ ಯಥಾಪ್ರಕಾರವಾಗಿ ಉರುಳುತ್ತಲೇ ಇವೆ ಯಾರ ನೋವು ನಿಡಿಗಳನ್ನೂ ಲೆಕ್ಕಿಸದೆ. ಪ್ರಕೃತಿಯ ವ್ಯಾಪಾರವೂ ಯಥೋಚಿತ. ತನ್ನ ಬದುಕು ಮಾತ್ರ ಅಂದಿನಂತೆ ಇಂದಿಲ್ಲ. ಮಕ್ಕಳು ಪಡುತಿದ್ದ ಅಸೂಯೆಗೆ ಅನುಗುಣವಾಗಿ ವಿಧಿಯೂ ಉತ್ತಾಲ ನರ್ತನಗೈಯ್ಯುತ್ತಿದೆ. ಸವಾಲಿಗೆ ಸವಾಲಾಗಿ ಬದುಕಲೇ? ಅಥವಾ ಎಲ್ಲವನ್ನೂ ಕಾಲಡೆಶೆಗೆ ತಳ್ಳಿ ಶೀರ

ಮುಳುಗಲೇ? ಎಂಬ ಪ್ರಶ್ನೆಗಳೂ ಕಾಡುತ್ತವೆ. ರಾಮನಾಥ ಚಿಂತಾಕ್ರಾಂತನಾಗುತ್ತಾನೆ. ಮಕ್ಕಳ ಕಣ್ಣು ಆಸ್ತಿಯ ಮೇಲೆ ಹೊರತು ಅಪ್ಪನ ಮೇಲಿಲ್ಲ.

ಇದು ಪ್ರಪಂಚ......!

ದೇವಯ್ಯ ದಂಪತಿಗಳು ಆಗಾಗ ಬಂದು ಹೋಗುತ್ತಲೇ ಇರುತ್ತಾರೆ ಪದ್ಮಾಲಯಕ್ಕೆ. ಅವರು ಯಾವಾಗಲೂ ಹಾಗೆಯೇ. ಎಲ್ಲಿ ಯಾವೆಡೆ ನೋವು ನಿಡಿಗಳಿವೆಯೋ ಅಲ್ಲಿಗೆ ಹೋಗಿ ತಮ್ಮ ಕೈಲಾದ ಸಹಾಯ ಮಾಡುವುದು ವಾಡಿಕೆ. ಅವರು ಬಂದರೆಂದರೆ ರಾಮನಾಥನ ಜೀವ ಸುಸಂತಸದಿಂದ ಮಿಡಿಯುತ್ತದೆ. ಅವರು ಹೊರಟರೆಂದರೆ ಅದೂ ಅವರ ಹಿಂದೆಯೇ ಮರೆಯಾಗುವುದು ಸತ್ಯ. ರಾಮನಾಥ ಮನಶಾಂತಿಯನ್ನು ಪಡೆದುಕೊಳ್ಳುವ ಸಲುವಾಗಿ ಕೈತುಂಬ ಕೆಲಸ ಹಚ್ಚಿಕೊಳ್ಳುವ. ಒಳ ಹೊರಗೆ ಅವನದೇ ಕಾರುಬಾರು. ಹಾಗೆ ಕೈತುಂಬ ಕೆಲಸ ಹಚ್ಚಿಕೊಳ್ಳುತಿದ್ದುದರಿಂದ ಕಾಲಹರಣ ಸರಾಗ. ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳಲೂ ಸಹಾಯಕ.

ಒಮ್ಮೆ ದೇವಯ್ಯ ತನ್ನ ಸಲಹೆಯನ್ನು ಮುಂದಿಟ್ಟ,

"ಎಷ್ಟು ದಿನಾ ಅಂತ ಹೀಗಿರುತ್ತಿ? ಹೆಣ್ಣಿಲ್ಲದೆ ಮನೆ ನಡೆಯುವುದು ಕಷ್ಟವೇ. ನಿನಗೆ ಎಲ್ಲಾದರೂ ಹೆಣ್ಣು ಸಿಗುವಂತಿದ್ದರೆ ಮದುವೆಯಾಗು. ನಿನ್ನ ಶರೀರ ಸದೃಢವಾಗಿದೆ. ನೀನು ಮದುವೆಯಾಗುವುದರಿಂದ ಏನೇನೂ ಬಾಧಕವಿಲ್ಲ."

"ನೀವೇ ಎಲ್ಲಾದರೂ ನೋಡಿ ಮಾಡಿಸಿ ಬಿಡಿ." ಎರಡೂ ಕೈಗಳನ್ನು ಜೋಡಿಸಿದ ರಾಮನಾಥ.

ಹೆಣ್ಣಿಲ್ಲದೆ ಮನೆ ನಡೆಯುವುದು ಕಷ್ಟ ಎಂಬುದು ಮನದಟ್ಟಾಗಿತ್ತು. ತಾನೊಬ್ಬನೇ ಒಳಹೊರಗೆ ಗೆಯ್ಯಲಾರೆ ಎಂದು ನರನರಗಳೂ ಹುಯ್ಯಲಿಡುತ್ತಿವೆ. ಆದರೂ, ಹೀಗೇಕೆ ಒಮ್ಮೆಗೇ ಮದುವೆಗೆ ಒಪ್ಪಿಗೆ ಕೊಟ್ಟೆ? ಅದರ ಸಾಧ್ಯಾಸಾಧ್ಯತೆಗಳೇನು ? ಎಂಬುದನ್ನು ತನ್ನಲ್ಲೇ ತರ್ಕಿಸಿದ. ಕೊನೆಗೆ ತನ್ನೊಳಗೇ ಅಂದುಕೊಂಡ...ಹೇಗೋ ಒಪ್ಪಿಗೆ ಕೊಟ್ಟಿರುವೆ...ಇನ್ನು ಭಗವಂತ ಮಾಡಿಸಿದಂತಾಗಲಿ...ಎಂದುಕೊಂಡು ಸುಮ್ಮನಾದ.

೦ ೦ ೦ ೦

ಅಪ್ಪ ಅಮ್ಮ ಹಿಂದಿರುಗುವ ತನಕ ಗೆಳತಿ ಶಾರದೆಯೊಂದಿಗೆ ಕೂಡಿ ಟೈಲರಿಂಗ್ ನಡೆಸುತಿದ್ದಳು ಕುಮುದ್ವತಿ. ಅವಳು ನೆರೆಮನೆಯವಳಾದ್ದರಿಂದ ಅಗತ್ಯವಿದ್ದಾಗಲೆಲ್ಲಾ ಬಂದು ಕೂಡುತ್ತಾಳೆ ಕುಮುದಳೊಂದಿಗೆ. ಊರಿನ ಹಳೆಹಳೆಯ ಕಂದಾಚಾರಗಳ ಬಗ್ಗೆ ಮತ್ತು ಇಂದಿನ ನವನಾಗರಿಕತೆಯ ಬಗ್ಗೆ ಸಂಭಾಷಣೆಗಳು ನಡೆಯುತ್ತಿದ್ದುವು. ತಮ್ಮ ತಮ್ಮ ಭವಿಷ್ಯವನ್ನು ಕುರಿತು ಭಾವೋದ್ವೇಗದಿಂದ ಮಾತಾಡಿ ಮೆಲುಕು ಹಾಕುತಿದ್ದುದೂ ಉಂಟು.ಅಂತೂ ಅವರಿಬ್ಬರಿಗೆ ಸ್ನೇಹ ಸಲಿಗೆ ಬಲಿತಿದ್ದುದರಿಂದ ಕಾಲಹರಣ ಸುಲಭ–ಸರಾಗ.

ದೇವಯ್ಯ ಪದ್ಮಾಲಯದಿಂದ ಹಿಂದಿರುಗತ್ತ ದಾರಿಯಲ್ಲಿ ಮಡದಿಗೆಂದ.

"ನಾವೇಕೆ ಕುಮೂವನ್ನು ಕೊಡಬಾರದು ರಾಮನಾಥನಿಗೆ? ಮನೆಯೂ ಹತ್ತಿರ. ನಮ್ಮ ಕಷ್ಟ ಸುಖಗಳಿಗೆ ಒದಗುವಂತಹ ವ್ಯಕ್ತಿ. ಅಲ್ಲದೆ ನಾವು ಈ ವಯಸ್ಸಿನಲ್ಲಿ ಮಗಳನ್ನು ದೂರ ಕೊಟ್ಟು ಎಲ್ಲಿಗೆ ಹೋಗೋಣ? ಒಂದು ವೇಳೆ ನಾವು ವೃದ್ಧಾಪ್ಯದಲ್ಲಿ ಅವನೊಂದಿಗೆ ಉಳಿಯಲು ಇಷ್ಟಪಟ್ಟರೆ ಸಂತೋಷ ದಿಂದ ಒಪ್ಪುವವನೇ. ಅಂದಮೇಲೆ, ಯೋಚಿಸಿನೋಡು. ನಮಗೆ ಎಲ್ಲಿ ಹುಡುಕಿದರೂ ಇದಕ್ಕಿಂತ ಉತ್ತಮ ಸಂಬಂಧ ಖಂಡಿತ ದೊರೆಯಲಾರದು ಎನಿಸುತ್ತೆ ನನಗೆ."

ಆ ಮಾತಿಗೆ ಉತ್ತರಿಸದೆ ತನ್ನೊಳಗೇ ಯೋಚಿಸಿದಳು ಸೀತಮ್ಮ....... ಆತ ಸುಂದರ ಪುರುಷ ಮಾತ್ರವಲ್ಲ, ಸದೃಢಕಾಯನಾದ ವ್ಯಕ್ತಿ. ಗುಣಾಢ್ಯ ಇಂತಿಂತಹ ಗುಣಗಳ ಗಣಿಯಾಗಿದಾನೆ. ಕುಮು ಒಪ್ಪುತ್ತಾಳೋ ಇಲ್ಲವೋ ಅದೇ ಅನುಮಾನ. ಅವಳೊಪ್ಪಿದರೆ ಆಗಬಹುದು. ಆದರೆ........ಅವಳಿಗಿನ್ನೂ ಇಪ್ಪತ್ತಾರೋ ಇಪ್ಪತ್ತೇಳೋ ಇರಬೇಕು.......ಆತನಿಗಾದರೊ ಹತ್ತಿರ ಹತ್ತಿರ ನಲವತ್ತೆಂಟರ ಪ್ರಾಯ. ಏನು ಗತಿ? ಅಂದಿಂದಿಗೂ ಅವಳಿಗೆ ಎಷ್ಟೆಷ್ಟು ಮಂದಿ ವರಗಳನ್ನು ನೋಡಲಿಲ್ಲ? ಒಂದಾದರೂ ಕೈಗೂಡಿ ಬಂತೆ? ದೇವರು ಎಲ್ಲಿ ಮಾಲೆ ಹಾಕಿದ್ದಾನೋ! ಅವನೇ ಸರಿದಾರಿಯಲ್ಲಿ ನಡೆಸಬೇಕು...

"ನೀನು ಅಷ್ಟು ಯೋಚಿಸಬೇಕಾಗಿಲ್ಲ. ರಾಮನಾಥನದು ತುಂಬಾ ದೃಢವಾದ ಆರೋಗ್ಯ. ನೋಡು ಎಷ್ಟು ಕಷ್ಟಸುಖಗಳನ್ನುಂಡಿದ್ದಾನೆ ಜೀವನ

ದಲ್ಲಿ? ಸ್ವಲ್ಪವಾದರೂ ಕುಗ್ಗಿದ್ದಾನೆಯೇ? ಎಂತಹ ರೂಪವಂತ? ಎಂತಹ ಗುಣವಂತ? ಎಂತಹ ಘನವಂತ? ಇದನ್ನೆಲ್ಲಾ ಯೋಚಿಸಬೇಕಷ್ಟೆ? ಇಂಥ ಗಂಡು ಸಿಗಬೇಕಾದರೂ ಎಲ್ಲಿ?"

ಸೀತಮ್ಮನಿಗೆ ಉಸಿರು ಕಟ್ಟಿತು. ಬೇಕು–ಬೇಡ ಎನ್ನುವುದೂ ಸಹ ಸಾಧ್ಯವಾಗಲಿಲ್ಲ.......ಆಲೋಚನೆಯ ಸುಳಿಯಲ್ಲಿ ಸಿಕ್ಕಿಕೊಂಡಿತು ಮನಸ್ಸು.

ದೇವಯ್ಯ ಮುಂದುವರಿದ "ಇಂತಹ ಒಳ್ಳೆಯ ಅವಕಾಶ ಮತ್ತೆಲ್ಲಿಯೂ ಲಭಿಸುವುದಿಲ್ಲ. ಈ ಪರಿಸರದ ಗಂಡುಗಳನ್ನೆಲ್ಲಾ ನಾನು ಬಲ್ಲೆ. ಯಾರೂ ಸರಿಯಾದವರಿಲ್ಲ."

"ನಾನೇನೂ ಹೇಳಲಾರೆ. ನಿಮ್ಮ ಮಗಳನ್ನೇ ಕೇಳಿಕೊಳ್ಳಿ."

ಹೇಳಲಾರದೆ ಹೇಳಿದಳು ಅವಳು........ಆದರೂ ತನ್ನ ಮಗಳು ಆ ಮನೆಯ ಯಜಮಾನಿಯಾಗುದನ್ನು ನೆನಸಿಕೊಂಡರೆ ಪುಳಕಿತವಾಗುತ್ತದೆ ಮೈ. ಗಂಡಿನ ವಯಸ್ಸೊಂದನ್ನು ಬಿಟ್ಟರೆ ಮತ್ತಾವುದನ್ನೂ ಯೋಚಿಸಬೇಕಾಗಿಲ್ಲ, ಎಂದು ಒಪ್ಪಿಕೊಳ್ಳುತ್ತವೆ ಹೃನ್ಮನಗಳು.

ಇಬ್ಬರೂ ಮನೆ ಮುಟ್ಟಿದಾಗ ಶಾರದೆಯು ತನ್ನ ತಾಯಿ ನೀಲಮ್ಮನೊಂದಿಗೆ ಕುಳಿತುಕೊಂಡಿದ್ದಳು. ಕುಮುದ್ವತಿಗೆ ಬಟ್ಟೆ ಹೊಲಿಯುವುದೇ ಕೆಲಸ. ಅವಳ ಕೈ ಸುಮ್ಮನಿರುವುದೇ ಇಲ್ಲ. ಒಂದಾದಮೇಲೊಂದನ್ನು ಮಾಡುತ್ತಿರಲೇಬೇಕು. ಸದಾ ಚಟುವಟಿಕೆಯ ಬೀಡು ಹೃನ್ಮನಗಳು.

ನೀಲಮ್ಮ ನುಡಿದಳು "ನಿನ್ನ ಮಗಳ ಕೈಯ್ಯನ್ನೆ ನೋಡುತ್ತಿದ್ದನೆ ನಾನು. ಇದುವರೆಗೆ ಕರುವಿಗೆ ಹುಲ್ಲೂಡಿಸಿದ್ದಾಳೆ. ಆ ಕೂಡಲೇ ಮಿಷನ್ನಿಗೆ ಕೈ ಹಚ್ಚಿದ್ದಾಯ್ತು. ಅವಳನ್ನು ಕೈಹಿಡಿಯುವವ ಬಹಳ ಪುಣ್ಯವಂತ!"

ತಕ್ಷಣವೇ ದಂಪತಿಗಳಿಗೆ ಆ ಮನೆಯ ಸಿರಿವಂತಿಕೆ ಸ್ಮೃತಿಪಥದಲ್ಲಿ ಸುಳಿಸುಳಿದಳಿಯಿತು.

ಹಿರಿಯ ಮಗ ಕೃಷ್ಣ ಅದೇ ವೇಳೆಗೆ ಆಗಮಿಸಿದ. ಅವನು ಬರುವುದು ಅಪರೂಪ. ಬಂದರೂ ಯಾವ ಬಗೆಯ ಸಹಾಯವೂ ಇಲ್ಲ. ನೆಂಟ ಬಂದು ಹೋದಂತೆಯೇ. ಊಟದ ಹೊತ್ತಿಗೆ ಊಟ. ತಿಂಡಿಯ ಹೊತ್ತಿಗೆ ತಿಂಡಿ. ಅಲ್ಲಿಗೆ ಮುಗಿಯಿತು ಸ್ನೇಹ ಸಂಬಂಧ.

ನೀಲಮ್ಮ ಅವನಿಗೆಂದಳು "ನಿಮ್ಮ ಅಂಗಡಿಯ ಸಾಮಾನು 'ತುಟ್ಟಿ' ಎಂದು ಎಲ್ಲರ ದೂರು. ಬಹುತೇಕ ಮುಂದಿ ಪೀರ್‌ಸಾಬಿ ಅಂಗಡಿಗೇ ಹೋಗುತ್ತಾರಂತೆ."

ಕುಮುದ್ವತಿ ತನ್ನ ಅಭಿಪ್ರಾಯ ಮುಂದಿಟ್ಟಳು,

"ನಾನೂ ಅದನ್ನು ಕೇಳುತ್ತಿರುವೆ. ನಿಮ್ಮ ಅಂಗಡಿಗೆ ಹೋದವರೆಲ್ಲಾ ಹೇಳುವುದು ಅದೇ. ಈ ಪ್ರಾಂತ್ಯದಲ್ಲಿ ಆಳುಗಳಿಗೆ ಏಕರೀತಿಯ ಕಡಿಮೆ ಸಂಬಳ. ಅವರು ಹೆಚ್ಚು ಹಣಕೊಟ್ಟು ಸಾಮಗ್ರಿ ಕೊಳ್ಳುವುದಾದರೂ ಹೇಗೆ? ಬೇರೆ ಕಡೆಗೆ ಹೋಗುತ್ತಾರೆ ಅಷ್ಟೆ. ನಿಮಗೆ ಗಿರಾಕಿಗಳು ಕಡಿಮೆಯಾಗುವುದು ಸಹಜ. ಇರಲಿ, ಬಡವರ ಶೋಷಣೆ ಸಲ್ಲದು ನೋಡು. ಅನೇಕ ನಿಟ್ಟಿನಲ್ಲಿ ಅವರ ಶೋಷಣೆ ನಡೆಯುತ್ತದೆ. ಅದನ್ನು ನೆನಪಿಸಿಕೊಂಡರೆ ವ್ಯಸನವಾಗುತ್ತೆ. ಇಲ್ಲಿ ಹೇಮಾವತಿ ನದಿಗೆ ಅಣೆಕಟ್ಟೆ ಕಟ್ಟುತಿದ್ದಾರಷ್ಟೆ? ಅಲ್ಲಿಗೆ ದಿನವೂ ಸಾಯಂಕಾಲ ಹೆಂಡದ ಲಾರಿ ಬರುತ್ತದೆ. ಕಂಟ್ರಾಕ್ಟುದಾರ ಬಲಗೈಲಿ ಸಂಬಳ ಕೊಡುತ್ತಾನೆ. ಹೆಂಡಮಾರಿ ಎಡಗೈಲಿ ಕಾಸು ಕಸಿಯುತ್ತಾನೆ. ಇದೊಂದು ಬಗೆಯ ಶೋಷಣೆ, ಬುದ್ಧಿಹೀನ ಜನರಿಗೆ ಇದೆಲ್ಲಾ ಅರ್ಥವಾಗುವುದಿಲ್ಲ. ಹೆಂಡ ಕುಡಿದು ಹೆಂಡತಿ ಮಕ್ಕಳಿಗೆ ಬಡಿದು ಹಿಂಸಿಸಿ ತಾವು ಸಾಯುತ್ತಾರೆ. ಇದೀಗ ಲೋಕರೂಢಿ. ಆಳವಾಗಿ ಯೋಚಿಸಬಲ್ಲವರು ಮಾತ್ರ ಮರುಗುತ್ತಾರೆ. ಮಹಾತ್ಮಾಗಾಂಧೀಜಿಯವರು ಪಾನ ನಿರೋಧವನ್ನು ಒತ್ತಿ ಹೇಳಿದ್ದರು, ಅವರ ಆದರ್ಶ ಸೂತ್ರಗಳಲ್ಲಿ ಪಾನ ನಿರೋಧವೂ ಒಂದು. ಈಗ ಹೇಳುವವರಿಲ್ಲ. ಕೇಳುವವರಿಲ್ಲ. ಆಡಳಿತ ತಂತ್ರದಲ್ಲಿ ಬಿಗಿಯಿಲ್ಲ. ಬೆಲೆ ನೋಡಿದರೆ ಗಗನದಲ್ಲಿ. ಬಡವರು ಇಂದೂ, ಈಗಲೂ ಬಡವರಾಗಿಯೇ ಉಳಿದಿದ್ದಾರೆ. ಇದು ತೀರಾ ವ್ಯಸನಕರ."

ಕೃಷ್ಣ ನಕ್ಕು ನುಡಿದ "ಒಳ್ಳೆ ಭಾಷಣವನ್ನೇ ಮಾಡಿ ಬಿಟ್ಟೆ?"

"ಹೌದಪ್ಪಾ, ಇಂದಿನ ಪರಿಸ್ಥಿತಿ ಹಾಗಿದೆ."

"ಏನು ಮಾಡೋಣ? ಎಲ್ಲಾ ಅವರವರ ಕರ್ಮ..."

ದೇವಮ್ಮ ನಡುವೆ ಬಾಯಿ ಹಾಕಿದ "ಆಲೋಚನಾ ರಹಿತರಾದ ದೀನ ದರಿದ್ರರು ತಮ್ಮತಮ್ಮ ಬಾಳನ್ನು ಸರಿಯಾದ ರೀತಿಯಲ್ಲಿ ರೂಪಿಸಿ ಕೊಳ್ಳಲಾರ

ರು ಕೂಡ. ಕುಮೂ ಹೇಳಿದಂತೆ ಎಲ್ಲಾ ರೀತಿಯಲ್ಲೂ ಅವರ ಶೋಷಣೆ ನಡೆಯುತ್ತದೆ. ಬೆಲೆಯೇರಿಕೆ ದೆಶೆಯಿಂದಂತೂ ಬಾಳು ಬದುಕು ನರಕ ಕುಂಡವೇ ಆಗಿದೆ. ಪಗಾರ ಏನೇನೂ ಸಾಲದು ಖರ್ಚುವೆಚ್ಚ ವಿಪರೀತ. ಇದು ವಸ್ತುಸ್ಥಿತಿ.

"ಈ ಪರಿಸ್ಥಿತಿಯಲ್ಲಿ ಭಾರತ ದೇಶ ಸತ ಸಂವೃದ್ಧಿ ಹೊಂದಬೇಕಾದರೆ ಎಷ್ಟು ಶತಮಾನಗಳು ಉರುಳಬೇಕೋ ದೇವರಿಗೇ ಗೊತ್ತು.

"ಗಾಂಧಿ–ನೆಹರು–ಪಟೇಲರಂಥ ನಾಯಕರಿದ್ದಿದ್ದರೆ ಎಷ್ಟೋ ಸುಧಾರಿಸುತಿತ್ತು ದೇಶ. ಮುಖ್ಯವಾಗಿ ಧೀಮಂತನಾಯಕರ ಅಭಾವದಿಂದ ನರಳುತ್ತಿದೆ. ರಾಷ್ಟ್ರ. ಈಗಣ ಪರಿಸ್ಥಿತಿಯಂತೂ ಯಥಾರಾಜ ತಥಾ ಪ್ರಜಾ ಆಗಿ ಹೋಗಿದೆ! ಹೀಗೆಯೇ ಆದರೆ, ಕಾಲಾನುಕಾಲಕ್ಕೂ ಪ್ರಗತಿಯ ಯೋಚನೆಯನ್ನು ಮರೆತು ಬಿಡಬೇಕು!" ಎಂದಳು ಕುಮುಸ್ವತಿ. ಒಂದೆರಡು ಗಳಿಗೆ ಯೋಚಿಸಿ ಪುನಃ ಛೀಃ! ಛೀಃ! ಎಂತಹ ಪರಿಸ್ಥಿತಿ ಬಂತು ನಮ್ಮ ರಾಷ್ಟ್ರಕ್ಕೆ? ಸ್ವರಾಜ್ಯ ಸಂಪಾದನೆಗಾಗಿ ಪ್ರಾಣ ತೆತ್ತವರು, ಜೀವನ ತೆತ್ತವರು, ಜೇಲು ಕಂಡವರು ಯಾವ ಯಾವ ಕನಸು ಕಂಡಿದ್ದರೋ ಅದು ನನಸಾಗಲೇ ಇಲ್ಲ. ಇದು ಬಹಳ ದುರದೃಷ್ಟಕರ! ಇನ್ನೊಂದು ಮಾತು. ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿ ಸುಟ್ಟು ಕಟ್ಟುರಿಯಾದ ಸ್ತ್ರೀ ಜನರೇನು ಕಡಿಮೆಯೇ? ಆ ಸ್ವಾತಂತ್ರ್ಯದಲ್ಲಿ ಕಿಂಚಿತ್ ಸ್ತ್ರೀಯರ ಬಳಿಯಲ್ಲಿ ಸುಳಿಯಿತೇ? ಇಂದೂ, ಈಗಲೂ ನಾವು–ಸ್ತ್ರೀಯರು ದೀನ ದಲಿತರೇ! ನಮಗೆ ಸ್ವಾತಂತ್ರ್ಯ ಇಲ್ಲವೇ ಇಲ್ಲ. ನಾವೇನಾದರೂ ಸಾಧನಾ ಕ್ಷೇತ್ರಕ್ಕೆ ಇಳಿವುದೆಂದರೆ ಪುರುಷರ ಆಣತಿಯಿಲ್ಲದೆ ಸಾಧನೆ ಸಾಧ್ಯವೇ? ಇಂದೂ ನಾವು ಪುರುಷರ ಕೈಗೊಂಬೆಗಳಾಗಿಯೇ ಬದುಕುತಿದ್ದೇವಲ್ಲ, ಎಂತಹ ನಾಚಿಕೆಗೇಡು!" ದೃಢವಾದ ಧ್ವನಿ ಕಾರಣ ಬದ್ಧವಾಗಿ ಭಾವ ಗಾಂಭೀರ್ಯದಿಂದ ಹೊರಬಿದ್ದರೆ, ಎಲ್ಲರೂ ಅವಳನ್ನೇ ನೋಡುತ್ತ ಕಿಲಕಿಲ ನಕ್ಕು ಬಿಟ್ಟರು. ಇವಳೊಂದು ವಿಚಿತ್ರ ವ್ಯಕ್ತಿ ಎಂಬ ಲಘು ಭಾವನೆಯಲ್ಲಿ.

— ೦ —

೩

The love of justice in most
women is only the fear of
suffering injustice

ನೆರೆಮನೆಯ ಶಾರದಾ ಬರು ಬರುತ್ತಲೇ ಅಂದಳು,

"ಸೀತಮ್ಮಾ, ಸರಸಿಗೆ ಲಗ್ನ ಒಪ್ಪಂದವಾಯಿತು."

"ವರ ಯಾರು ?"

"ಕೆಳಮನೆ ಪುಟ್ಟಯ್ಯನವರ ಮಗ ನಂದೀಶ."

"ಓ....ಹಾಗೋ...?"

ಆಗ ಅಲ್ಲಿಗೆ ಬಂದ ಕುಮುದ್ವತಿಯು ಗೆಳತಿಯ ಮದುವೆ ನಿಶ್ಚಯವಾದುದನ್ನು ಕೇಳಿ ಮಂದಹಾಸ ಬೀರಿದಳು. ಇದುವರೆವಿಗೂ ಸುದ್ದಿ ಇರಲಿಲ್ಲ. ಈಗ ಇದ್ದಕ್ಕಿದ್ದಂತೆಯೇ ಸುದ್ದಿ ಬಂದಿದೆ ಎಂದುಕೊಂಡಳು ತನ್ನಲ್ಲಿ. ಬಳಿಕ,

"ಇಲ್ಲಿಗೆ ಆಗಾಗ ಬರುತಿದ್ದಳು. ಇನ್ನು ಅದಕ್ಕೂ ಕಲ್ಲುಬಿತ್ತು. ಕೆಳಮನೆ ಅಂದರೆ ತುಂಬಾ ದೂರ. ಇಲ್ಲಿಗೆ ಇನ್ನು ಬರುವುದೆಂದರೆ ತಾಯಿ ಮನೆಗೆ ಬಂದಾಗಲೇ."

"ಹೌದು ಮತ್ತೆ ಮಕ್ಕಳೆಂದರೆ ಹಾಗೆಯೇ. ಹೊರಗೆ ಕೊಟ್ಟಮೇಲೆ ಮುಗಿಯಿತು, ಇನ್ನು ಸಂಸಾರ ಮಕ್ಕಳು ಮರಿ ಇಷ್ಟೇ...."

"ಒಳಗೆ ಬಾ ಎಲ್ಲಾ ಅಲ್ಲೇ ಪೂರೈಸುತಿದ್ದೀ..."ಎಂದಳು ಸೀತಮ್ಮ

ಅವಳು ಮುಗುಳು ನಗೆಯೊಡನೆ ಒಳಬಂದು ಬೆಂಚಿನ ಮೇಲೆ ಮಂಡಿಸಿದಳು. ಬಳಿಯಲ್ಲಿ ಕುಳಿತ ಸೀತಮ್ಮ "ಕಳೆದ ವರ್ಷ ನಾರಾಯಣನ ಮಡದಿ ಗತಿಸಿರಾಗ ಅವನ ಮನೆಗೆ ಆಗಾಗ ಹೋಗಿ ಅವನಿಗೆ, ಮಕ್ಕಳಿಗೆ ಅಡಿಗೆ ಮಾಡಿಟ್ಟು ಬರುತಿದ್ದೆ. ಈ ಸಲಿ ರಾಮನಾಥನದು ಅಂಟಿದೆ. ಇನ್ನೆಷ್ಟು ದಿನವೋ."

"ಅವರು ತಿರುಗಿ ಮದುವೆಯಾಗುವತನಕ." ಎಂದ ಶಾರದಾ ಕುಮುದ್ವತಿಯ ಕಡೆಗೆ ತಿರುಗಿ "ಕುಮೂ ಇನ್ನು ನಿನ್ನದೂ ಮದುವೆಯಾಯಿತೆಂದರೆ ಸರಸಿ ಒಂದು ಕಡೆ. ನೀನೊಂದು ಕಡೆ. ನಾನೊಂದು ಕಡೆ."

"ನಾವೆಲ್ಲರೂ ಒಟ್ಟಿಗೇ ಬೆಳೆದವರು. ಗಾಢವಾದ ಸ್ನೇಹ ಬೇರೆ. ಅವಳು ದೂರ ಹೋದರೆ ನನಗೆ ಬೇಸರವೇ."

"ನೀನು ತಾನೇ ಇಲ್ಲೇ ಇರುತ್ತೀಯೇನು ? ಹೆಣ್ಣಾದವಳು ಹೋಗಲೇಬೇಕಲ್ಲ ?"

"ನನಗೀಗಲೇ ಬೇಡ ಬಿಡಿ."

"ಹಾಗೆಂದರೆ ಹೇಗೆ ? ಅಪ್ಪ–ಅಮ್ಮ ಇಲ್ಲಿ ಶಾಶ್ವತವೇ ? ಅವರು ಸುಖವಾಗಿದ್ದಾಗ ಆಗುವ ಕೆಲಸ ಆಗಲೇಬೇಕು."

"ನಾನು ಅಪ್ಪ–ಅಮ್ಮನ ಕಾಟವೇ ಹೆಚ್ಚು ಎಂದುಕೊಂಡಿದ್ದರೆ ನಿಮ್ಮದು ಅದಕ್ಕಿಂತಲೂ ಹೆಚ್ಚು."

"ಹೌದಮ್ಮಾ, ಎಲ್ಲಾ ಕೆಲಸ ಕಾರ್ಯಗಳೂ ಕ್ಲುಪ್ತ ಕಾಲದಲ್ಲಿ ನಡೆದರೇನೇ ಚೆನ್ನು."

"ಹಾಗೆಂದು ಹೆಣ್ಣುಗಳನ್ನು ದಾಟಿಸುವುದಲ್ಲಿಯೇ ನಿಮ್ಮ ಸಾಹಸ ಪ್ರವೃತ್ತಿ."

"ಹೇಗಾದರೂ ತಿಳಿದುಕೊ. ಆಗಲೇ ಹೇಳಿದೆನಲ್ಲಾ, ಪ್ರತಿಯೊಂದು ಕೆಲಸವೂ ಕ್ಲುಪ್ತಕಾಲದಲ್ಲಿ ಆದರೆ ಒಳ್ಳೆತು. ಸುಮ್ಮಸುಮ್ಮನೆ ಮುಂದೂಡುವುದರಲ್ಲಿ ಅರ್ಥವಿಲ್ಲ."

"ನೋಡಿ, ಹೆಣ್ಣಿಗೆ ಮದುವೆಯಿಲ್ಲದೆಯೇ ಬದುಕು ಸಾಧ್ಯವಾಗದೇ ಎಂಬುದೊಂದು. ಎರಡನೆಯದು, ಸೂಕ್ತ ವರ ಲಭಿಸುವವರೆಗೆ ನಿಧಾನಿಸುವುದು ಒಳ್ಳೆತಲ್ಲವೇ ಎಂಬುದು ಇನ್ನೊಂದು. ಇವೆರಡನ್ನೂ ಕುರಿತು ಯೋಚಿಸ ಬೇಕಾದುದು ಬಹಳವುಂಟು." ದೃಢವಾದ ದನಿಯಲ್ಲಿ ನುಡಿದಳು ಕುಮುದ.

"ಸೂಕ್ತವರ ಎಂದರೆ ಕೈಯಿಂದ ಬೇಕು ಬೇಕಾದ ರೀತಿಯಲ್ಲಿ ಬೊಂಬೆ ಮಾಡಿಕೊಳ್ಳಲಾಗುತ್ತದೆಯೇ ? ನಮ್ಮ ಪರಿಸರದಲ್ಲಿದ್ದವರಲ್ಲಿ ಒಬ್ಬರನ್ನು ಆರಿಸಿಕೊಳ್ಳಬೇಕಷ್ಟೆ. ಇರಲಿ, ಹೆಣ್ಣಿಗೆ ಆಯ್ದುಕೊಳ್ಳುವ ಸ್ವಾತಂತ್ರ್ಯ ವಾದರೂ ಎಲ್ಲಿದೆ ? ನಮ್ಮಲ್ಲಿ ಆಯ್ದುಕೊಳ್ಳುವ ಸ್ವಾತಂತ್ರ್ಯ ಇರುವುದು ಗಂಡಿಗೆ ಮಾತ್ರವಷ್ಟೆ ?" ಶಾರದೆಯ ಪ್ರಶ್ನೆ.

"ಶ್ರೀಹರೀ, ನೀವೂ ಸರಿ ಬಿಡಿ. ಹಾಗೆಂದು ಕಣ್ಣುಮುಚ್ಚಿ ಕುಳಿತರೆ ಆಯಿತೇ ? ಎಷ್ಟೋ ಮಂದಿ ಹೆತ್ತವರು ಯಾರು ಯಾರಿಗೋ ಮೂರ್ಖರಿಗೆ ಕಟ್ಟಿ ಕಳುಹಿಸಿರುವುದನ್ನು ನೀವು ಕಾಣಿರಾ ?"

"ಕುಮೂ, ಹತ್ತರಲ್ಲಿ ಒಂದೊಂದು ಕೆಡುವುದುಂಟು. ವಿಧಿ ಬರೆಹ ವನ್ನು ಯಾರು ತಪ್ಪಿಸುತ್ತಾರೆ ಹೇಳು ? ಎಷ್ಟೋ ವೇಳೆ ನಮ್ಮ ಆಯ್ಕೆಯೂ ತಪ್ಪಾಗಬಹುದು."

ಅದುವರೆಗೆ ಸುಮ್ಮನೆ ಆಲೈಸುತಿದ್ದ ಸೀತಮ್ಮ ನಡುವೆ ಬಾಯಿ ಹಾಕಿ ದಳು,

"ಮಗಳೇ ! ಶಾರದಾ ಹೇಳುವುದರಲ್ಲಿ ಎಷ್ಟೊಂದು ಸತ್ಯಾಂಶವಿದೆ ? ಯೋಚಿಸಿ ನೋಡು, ನಿನ್ನ ಅಕ್ಕಂದಿರಿಗೆ ನಾವು ಸೂಕ್ತ ವರಗಳನ್ನು ಆರಿಸಿ ಕೊಳ್ಳಲಿಲ್ಲವೇ ?"

"ಹೌದಮ್ಮಾ ನಿನ್ನ ಭಾವಂದಿರು ಏನಾಗಿದ್ದಾರೆ ? ಅಕ್ಕಂದಿರು ಸುಖ ವಾಗಿದ್ದಾರೆ ತಾನೇ ? ಜೀವನದಲ್ಲಿ ಸುಖ–ಶಾಂತಿ ಇದ್ದರೆ ಸಾಕಲ್ಲ ಇನ್ನೇನು ಬೇಕು ಹೆಣ್ಣಿಗೆ ?" ದನಿಗೂಡಿಸಿದಳು ಶಾರದಾ."

"ಹಾಗೆಂದರೆ ಸರಿಹೋಗಲಿಲ್ಲ ನೋಡಿ ; ಬಹುತೇಕ ಹೆಂಗಳೆಯರಿಗೆ ಸಂತೋಷದ ಮುಖವಾಡ ತೊಡುವುದು ಅಭ್ಯಾಸವಾಗಿದೆ. ನೀವು ಬರೀ ಶ್ರೀಮಂತ ಸಮಾಜವನ್ನೇ ದೃಷ್ಟಿಯಲ್ಲಿಟ್ಟುಕೊಂಡರೆ ತಪ್ಪಾಗುತ್ತದೆ. ನಮ್ಮವರಲ್ಲಿ ಜ್ಞಾನದೃಷ್ಟಿ, ಧರ್ಮಬುದ್ಧಿ ಬಹುತೇಕ ಮಂದಿಗಿರುವುದಿಲ್ಲ. ಕಲಿತವರೆಲ್ಲರೂ ಬೃಹಸ್ಪತಿಗಳೇ ಎಂದೂ ಹೇಳುವಂತಿಲ್ಲ. ಹಾಗೂ ಇದ್ದಾರೆ, ಹೀಗೂ ಇದ್ದಾರೆ. ಮುಖ್ಯವಾಗಿ ಹೆಣ್ಣಿಗೆ ಆರ್ಥಿಕ-ವೈಯಕ್ತಿಕ ಸ್ವಾತಂತ್ರ್ಯ ಇರಲೇಬೇಕು."

ಕುಮುದ್ವತಿ ಬಟ್ಟೆ ಹೊಲಿಯಲು ಮಿಷಿನ್ನಿಗೆ ಕುಳಿತಳು. ಪಕ್ಕದ ಸ್ಟೂಲಿನ ಮೇಲೆ ಸಿದ್ಧ ಉಡುಪುಗಳನ್ನು ಜೋಡಿಸಿಟ್ಟಿದ್ದಾಳೆ. ಕತ್ತರಿಸಿಟ್ಟ ಉಡುಪುಗಳೂ ಇವೆ. ಅವಳ ಕೈಗೆ ಬಿಡುವು ಇಲ್ಲವೇ ಇಲ್ಲ. ಶಾರದಾ ಅವಳಿಗೆ ಸಹಾಯಕಳಾಗಿ ಹೊಲಿದ ಬಟ್ಟೆಗಳಿಗೆ ಗುಂಡಿ ಹಾಕಲು ತೆಗೆದುಕೊಂಡಳು.

"ನಿಮಗೇಕೆ ಶ್ರಮ ಶಾರದಮ್ಮಾ ?"

"ಬಾಯಿ ಮಾತಾಡಿದರೆ ಕೈಗೇನು ಕೆಲಸ ?"

"ಅವಳು ಯಾವಾಗಲೂ ಹಾಗೆಯೇ. ಕೈಗೆಟುಕಿದ ಕೆಲಸಕ್ಕೆ ಕೈಹಚ್ಚುವವಳೇ. ಮನಸ್ಸೂ ನಿರ್ಮಲ. ಕೆಲಸವೂ ನಿರ್ಮಲ."

ದೇವಯ್ಯ ಗದ್ದೆಯ ಕೆಲಸದಿಂದ ಹಿಂದಿರುಗಿ ಬಂದ. ಸುಡು ಬಿಸಿಲಲ್ಲಿ ಕೆಲಸ ಮಾಡಿದ ಶರೀರ ಬಳಲಿತ್ತು. ಆಯಾಸದ ಮುದ್ದೆಯಾಗಿ ಮುಖಮಜ್ಜನ ಮಾಡಲು ಬಚ್ಚಲಿಗೆ ಹೋದ. ತಣ್ಣೀರು ಸುರಿದು ಕೈಕಾಲು ಮುಖಮಜ್ಜನ ಮಾಡಿದ ಮೇಲೆ ಎಷ್ಟೋ ತಣ್ಣಗಾಯ್ತು ಜೀವಕ್ಕೆ. ಒಳ ಬಂದು ಬೆಂಚಿನ ಮೇಲೆ ಕುಳಿತು ಶಾರದೆಗೆಂದ,

"ಕೆಲವರು ಬಂದರೆ ಮನೆಯಲ್ಲಿ ಜೀವ ಕಳೆ ತುಂಬುತ್ತೆ ಅಥವಾ ವೃದ್ಧಿಸುತ್ತೆ. ನೀನು ಬಂದರೆ ಹಾಗೆಯೇ ಅಮ್ಮಣ್ಣಿ !"

"ಅಯ್ಯೋ, ಅಂತಹ ವಿಶೇಷವೇನಿಲ್ಲ ನನ್ನಲ್ಲಿ....ನಾನು ತೀರಾ ಸಾಮಾನ್ಯ ಬಿಡಿ."

"ಇನ್ನು ಕೆಲವರು ಬಂದರೆ ಜುಗುಪ್ಸೆ ಮೂಡುತ್ತೆ ಅಲ್ಲವೇ ?" ಮುಗುಳು ನಕ್ಕ ದೇವಯ್ಯ.

"ಅದೂ ನಿಜವೇ..."

"ಈಗ ರಾಮನಾಥ ಅತಂತ್ರ ಆಗಿದಾನೆ. ಮಕ್ಕಳಿಗೆ ಅಪ್ಪನ ಆಸ್ತಿಯ ಮೇಲೆ ವಕ್ರದೃಷ್ಟಿ. ಅಪ್ಪನಿಂದ ಸಮಪಾಲು ತೆಗೆದುಕೊಂಡು ಹೊರ ಹೋದ ಮೇಲೆ ಅಪ್ಪನ ಕ್ಷೇಮದ ಬಗ್ಗೆ ವ್ಯಥೆ–ಕಾಳಜಿ–ಸಂಕಟ ಯಾವುದೂ ಇಲ್ಲ. ದುಷ್ಟ ಪ್ರವೃತ್ತಿಯವರಿಗೆ ಹೇಗಾದರೂ ಅಪ್ಪನನ್ನು ಹೊರಹಾಕಿದರೆ ಮನೆ–ಆಸ್ತಿ ಎರಡೂ ದಕ್ಕುತ್ತೆ ಎಂಬ ಯೋಚನೆ. ಅಬ್ಬಾ ! ಎಂತಹ ಧೂರ್ತತನ? ಪರಿಸ್ಥಿತಿ ಹದಗೆಡುವ ಮುನ್ನ ನೀನು ಮದುವೆಯಾಗು ಎನ್ನುತಿದ್ದೇನೆ ನಾನು. ಇಬ್ಬರು ಮಡದಿಯರನ್ನು ಕಳೆದುಕೊಂಡ ನತದೃಷ್ಟ ವ್ಯಕ್ತಿ. ಅವನಿಗೆ ಇನ್ನಾದರೂ ದೇವರು ಕರುಣೆದೋರಲಿ ಎನಿಸುತ್ತೆ ನನಗೆ."

"ನೀವು ಹಾಗೆನ್ನಬಹುದು...ಹೆಣ್ಣೆಲ್ಲಿಂದ ತರುತ್ತೀರಿ ಅಪ್ಪಾಜೀ ?"

ಶಾರದಾ ನಡುವೆ ಬಾಯಿ ಹಾಕಿದಳು,

"ನಿನ್ನನ್ನೇ ಕೊಟ್ಟರಾಯ್ತು !" ಹಾಸ್ಯ ಪ್ರಧಾನವಾಗಿ ನುಡಿ ಹೊರ ಬಿತ್ತು.

"ಶ್ರೀಹರಿ ! ಸುಲಭ ಸಾಧನೆ ಅಲ್ಲವೆ ನಿಮಗೆ ?"

ತನ್ನ ಕಾರ್ಯ ಸಾಧನೆಗೆ ಇದೊಂದು ಸೂಕ್ತ ಸಮಯ ಎನಿಸಿತು ದೇವಯ್ಯನಿಗೆ.

"ಹೌದಮ್ಮಾ, ಇದು ಯೋಚಿಸುವಂತಹ ವಿಷಯವೇ. ನಮಗೂ ಹತ್ತಿರ. ರಾಮನಾಥ ಸಕಲ ಪ್ರಕಾರಗಳಲ್ಲೂ ಮೆಚ್ಚಬಹುದಾದ ವ್ಯಕ್ತಿ. ಮೂವತ್ತರ ತರುಣನಷ್ಟು ದೃಢಕಾಯ. ಸರಿಯಾಗಿ ನಡೆಸಿಕೊಳ್ಳುವ ಮಡದಿಯಿದ್ದರೆ ಆಸ್ತಿ ಮನೆ ಸಂವೃದ್ಧಿಯಾಗಿದೆ. ಯಾಕಾಗಬಾರದು ? ಅದಕ್ಕಿಂತ ಉತ್ತಮ ಸಂಬಂಧ ಹುಡುಕಿದರೂ ಸಿಗದು ಬಿಡು." ಆ ಮಾತು

ಹೊರಬಿದ್ದಾಗ ಬಾಯಿಯಲ್ಲಿ ನೀರೂರಿತು. ಕಣ್ಣುಗಳಲ್ಲಿ ಆಸೆಯ ಬೆಳಕು ಫಳಕ್ಕನೆ ಮಿಂಚಿತು ದೇವಯ್ಯನಿಗೆ.

ಆ ಮುಹೂರ್ತದಲ್ಲಿ ತಂದೆಯ ಮುಖದ ಮೇಲಿನ ಹಾವ ಭಾವಗಳನ್ನು ಪರಿವೀಕ್ಷಿಸಿದಳು ಕುಮುದ್ವತಿ. ಮನಸ್ಸು ಒಳಗೊಳಗೇ ಕುದಿಯಿತು. ತನ್ನನ್ನು ತಾನು ನಿಗ್ರಹಿಸಿಕೊಳ್ಳುತ್ತ ನುಡಿದಳು,

"ಎಲ್ಲಿ ಸುಖವಿದೆಯೋ ಅಲ್ಲಿ ಕಷ್ಟವಿದ್ದೇ ತೀರುತ್ತೆ. ಒಂದನ್ನು ಬಿಟ್ಟು ಒಂದಿಲ್ಲ, ಎಂಬುದನ್ನು ನೀವು ಬಲ್ಲಿರಿ."

"ಅದು ಎಲ್ಲ ಕ್ಷೇತ್ರದಲ್ಲೂ ಇದೆಯಷ್ಟೆ ?"

"ಖಂಡಿತ..."

o o o o

ಅಂದು, ಹೊತ್ತಿಗೆ ಮುಂಚೆಯೇ ಮನೆಗೆ ಬಂದ ಸೋಮು.

ಮೆಟ್ಟಿಲಿನ ಕಲ್ಲಿನ ಮೇಲೆ ಚೂಪಗೆ ಕುಳಿತಿದ್ದ ದೇವಯ್ಯ ದೂರದಲ್ಲಿ ನೋಡಿದಾಗ ಕೃಷ್ಣ ಬರುತಿದ್ದಾನೆ ಎಂದು ಕೊಂಡ. ಸ್ವಲ್ಪ ಸ್ವಲ್ಪ ಹತ್ತಿರವಾದಂತೆ ತಿಳಿಯಿತು, ಅವನು ಸೋಮು ಎಂದು. ದೇವಯ್ಯ ಮಗನ ಸಲುವಾಗಿ ಒಳ ಬಂದ. ಹಿಂದೆಯೇ ಸೋಮು ಹಿಂಬಾಲಿಸಿ ಬಂದ. ಅವನ ಮುಖದಲ್ಲಿ ಗೆಲುವು-ಉತ್ಸಾಗಳ ಹೆಸರಿಲ್ಲ, ಜಡಕ್ಕಿಂತ ಜಡವಾಗಿತ್ತು ಅವನ ಶರೀರ ಸಂಪತ್ತು.

ಒಳಗೆ ಬೆಂಚಿನ ಮೇಲೆ ಕುಳಿತು ತಂದೆಯನ್ನು ಕುರಿತು ಅಂದ.

"ನನಗೆ ಐದು ಸಾವಿರ ರೂಪಾಯಿ ಅಗತ್ಯ ಬೇಕಾಗಿದೆ. ಈ ಸಲ ಅಂಗಡಿಯ ವ್ಯಾಪಾರದಲ್ಲಿ ಉತ್ಪತ್ತಿ ಇಲ್ಲದೆ ಕೈಸುಟ್ಟುಕೊಂಡಿರುವೆ. ನೀವೀಗ ಹಣಕೊಟ್ಟರೆ ಮೂರು ನಾಲ್ಕು ತಿಂಗಳಿನಲ್ಲಿ ತೀರಿಸುವೆ."

"ಅಯ್ಯೋ, ಮಹರಾಯ ! ಅಷ್ಟು ಹಣ ನಾನೆಲ್ಲಿಂದ ತರಲಿ ? ನಾನು ಹಣವಂತನೇ ನಿನಗೆ ಸಾಲ ಕೊಡಲು ? ನಮ್ಮದು ಅರೆಹೊಟ್ಟೆಯ

ಬದುಕು. ಗೇಣಿ ಕೊಟ್ಟ ಮೇಲೆ ಏನುಳಿಯುತ್ತೆ ನಮಗೆ? ಮಗಳ ಟೈಲರಿಂಗ್ ನಮಗೆ ಅಷ್ಟಿಷ್ಟು ಸಹಾಯ ಮಾಡುತ್ತೆ. ನಮ್ಮ ಜೀವನ ಮಗಳ ಮೇಲೆ ಅವಲಂಬಿಸಿದೆ. ಹೀಗಿರುವಲ್ಲಿ ನೀನು ನನ್ನ ಹಣ ಕೇಳು ವುದೇ ? ಇದೇನು ಹುಡುಗಾಟವೇ ?"

ಶೀವ್ರ ಅಸಮಾಧಾನವನ್ನು ಹೊರ ಹಾಕಿದ ದೇವಯ್ಯ.

"ಏನಾದರೂ ಮಾಡಿ ಅಪ್ಪಾಜೀ."

"ಸಾಧ್ಯವೇ ಇಲ್ಲ...!"

"ಹಾಗೆಂದರೆ ಹೇಗೆ ? ನಾನೇನು ಮಾಡಲಿ ಈಗ?"

"ನನ್ನನ್ನು ಕೇಳಲು ಮನಸ್ಸಾದರೂ ಹೇಗೆ ಬಂತು ಹೇಳು ? ನ್ಯಾಯ ವಾಗಿ ನೀವು ಮಕ್ಕಳು ನಮಗೆ ಹಣ ಕೊಡಬೇಕು. ಅದು ಬಿಟ್ಟು ನನ್ನನ್ನು ಕೇಳುವುದೆಂದರೆ ? ಮೈಮುರಿದು ದುಡಿಯಲಾರದೇ ಹೋದವನು ನೀನು. ಛಿಃ ! ನಾಚಿಗೆ ಗೇಡು !"

ಅವನು ಮಾತಾಡಲಿಲ್ಲ ; ಮೂಕ ಮೌನ ರಾಜ್ಯವಾಳಿತು.

ಸೀತಮ್ಮ ಕಲ್ಲಿಗಿಂತ ಕಲ್ಲಾಗಿ ಸಂಭಾಷಣೆಯನ್ನು ಕೇಳಿದಳು. ಕುಮುದ್ವತಿ ಹೊಲಿಯುವುದನ್ನು ನಿಲ್ಲಿಸಿ ಮಿಷನ್ನಿನ ಮೇಲೆ ಮೊಣಕೈಯೂರಿ ದ್ದಾಳೆ. ಗಲ್ಲಕ್ಕೆ ಕೈಕೊಟ್ಟು ಶಿರೋಭಾರವನ್ನು ಇಳುಹಿದ್ದು ಮಾತು ಕತೆಯನ್ನು ಗಮನಿಸುತಿದ್ದಳು. ಮಾತಾಡಲು ಪ್ರಯತ್ನಿಸಿದರೂ ತುಟಿಗಳು ಬಿರಿಯಲಿಲ್ಲ. ಹೊತ್ತು ಗಂಭೀರವಾಯಿತು.

ಸೋಮು ಪ್ರಕ್ಷುಬ್ಧ ಮನದಿಂದ ನಸು ತಲೆ ಬಾಗಿದ. ಮುಖದ ಮೇಲೆ ಸ್ವೇದ ಬಿಂದುಗಳು ತುಂತುರು ತುಂತುರಾಗಿ ಮೂಡಿದುವು. ಮುಖ ಬಿಂಬ ವಿವರ್ಣವಾಯಿತು. ಸ್ವಲ್ಪಹೊತ್ತು ಸುಮ್ಮನಿದ್ದು ಅನಂತರ ನುಡಿದ "ಕುಮೂ ಒಡವೆಯನ್ನಾದರೂ ಕೊಟ್ಟಿದ್ದರೆ ಮುಂದೆ ಮಾಡಿಸಿ ಕೊಡುತಿದ್ದೆ."

ಆ ಮಾತಿಗೆ ದೇವಯ್ಯ ಹೌಹಾರಿದ.

ಸೀತಮ್ಮ ದಂಗಾದಳು. ಆಶ್ಚರ್ಯ ವಿಸ್ತೃತ ದೃಷ್ಟಿಗೆ ಅವನು ತುಂಬ ಅಸಹ್ಯವಾಗಿ ತೋರಿದ.

ಕುಮುದ್ವತಿ ನಸುನಗೆ ಬೀರಿ ಅವನನ್ನೇ ನೇರ ದೃಷ್ಟಿಯಿಂದ ನೋಡಿದಳು. ಅವಳಿಗೆ ಅವನ ಕೇಳಿಕೆ ವಿಶೇಷವೆನಿಸಲಿಲ್ಲ.

ದೇವಯ್ಯ ಒದರಿದ "ಎಲ್ಲಿಯಾದರುಂಟೇ? ಎಂತಹ ಮಾತಾಡುತ್ತಿದ್ದೀ?" ಉಚ್ಚಧ್ವನಿ ಮಾಡು ಮುಟ್ಟುವಂತೆ ಮೊಳಗಿತು. ಸಿಟ್ಟು ನೆತ್ತಿಗೇರಿ ಕಣ್ಣುಗಳು ಕೆಂಪು ತಳೆದುವು.

ಸೋಮು ಅಲ್ಲಿಗೆ ಸುಮ್ಮನಾಗಲಿಲ್ಲ. ಅವನು ದುಃಖ-ದುಗುಡ-ಅಸಮಾಧಾನಗಳ ಗಣಿಯಾಗಿ ನುಡಿದ "ನಾನೂ ಈ ಮನೆಯ ಮಗನೇ! ನಿಮ್ಮ ಕುಮು ಮಾತ್ರ ಮಗಳಲ್ಲ. ನೀವಂದು ಕೊಟ್ಟ ಐದು ಸಾವಿರ ರೂಪಾಯಿ ಯಾವ ಮೂಲೆಗೆ? ಹೆಣ್ಣು ಮಕ್ಕಳಿಗೇಕೆ ಒಡವೆ ಕೊಡಬೇಕು? ಗಂಡ ಒಡವೆ ಕೊಡುವುದಿಲ್ಲವೇ? ಈಗ ನನ್ನಲ್ಲಿ ಹಣವಿಲ್ಲ. ಹೇಗೆ ಜೀವನ ಮಾಡಲಿ? ನಾನು ಎಲ್ಲಾದರೂ ಕದಿಯಲಿಕ್ಕೆ ಹೋಗಲೇನು? ನನಗೆಲ್ಲಿ ಸಿಕ್ಕುತ್ತೆ ಹಣ?"

"ಏನಾದರೂ ಮಾಡಿಕೊ. ಮೈಮುರಿದು ಕೆಲಸ ಮಾಡಲಾಗದೇ ಹೊರ ಹೋದವ ನೀನು! ಎಂದೂ ಕಷ್ಟಕ್ಕೆ ಭುಜ ಕೊಟ್ಟವನಲ್ಲ. ಹೆತ್ತವರ ಮೇಲೆ ಸ್ವಲ್ಪವೂ ಕರುಣೆಯಿಲ್ಲ. ಇಷ್ಟರ ಮೇಲೆ ಹಣ ಕೇಳುವುದು? ಇದೇನು ಸಾಮಾನ್ಯವೇ? ನಿನಗೇಕೆ ನಾಚಿಕೆಯಿಲ್ಲ?"

ಸೋಮು ತಂದೆಯ ಭರ್ತ್ಸನೆಯಿಂದ ಹತಾಶನೇನೂ ಆಗಲಿಲ್ಲ. ಸ್ವಲ್ಪ ಕಟುವಾಗಿಯೇ ಕೇಳಿದ "ನಿಮ್ಮ ಬುದ್ಧಿವಾದ ಸಾಕು. ಈಗ ಏನಾದರೂ ಮಾಡಲು ಸಾಧ್ಯವೇ ಹೇಳಿ?"

"ಇಲ್ಲ.... ಇಲ್ಲ! ಒಂದೇ ಒಂದು ಪೈಸ ಸಹ ನಾನು ಕೊಡಲಾರೆ! ಮುಖ್ಯವಾಗಿ ನನ್ನಲ್ಲಿ ಹಣ ಇಲ್ಲವೇ ಇಲ್ಲ. ಸುಮ್ಮನೆ ಹೊರಟು ಹೋಗು!

ಈ ವಯಸ್ಸಿನಲ್ಲಿ ನಾನು ಏನು ಮಾಡಬಲ್ಲೆ ನೀನೇ ಯೋಚಿಸಿ ನೋಡು. ಮುಖ್ಯವಾಗಿ ನಾನೇ ಸಾಲ ಹೊತ್ತಿರುವೆ."

ಸೋಮು ಆ ಕೂಡಲೇ ತಂಗಿಯ ಕಡೆ ತಿರುಗಿ ಜೋರಿನಿಂದ ಅಂದ,

"ನಾನು ಕಾಸಿಲ್ಲದೆ ಕಷ್ಟದಲ್ಲಿರುವಾಗ ನೀನು ಮೂರೆಳೆ ಚೈನು ಹಾಕಿ ಕೊಂಡಿರುವೆಯಲ್ಲಾ ನಿನಗೆ ನಾಚಿಕೆಯಾಗದೇ ?"

ಅವಳು ಆ ಕ್ಷಣವೇ ಕತ್ತಿನಿಂದ ಸರ ತೆಗೆದು ಅವನ ಕೈಗೆ ಹಾಕಿ "ತಗೋ...! ಇನ್ನು ಇಲ್ಲಿ ತಗಾದೆ ಮಾಡಬೇಡ !" ಎಂದಳು ಭಾವೋ ತ್ಕಂಠೆಯಾಗಿ.

"ಹಾಹಾ !" ಎನ್ನುವುದರೊಳಗಾಗಿ ಚೈನನ್ನು ಕಿಸೆಗೆ ಹಾಕಿಕೊಂಡು ಹೊರಟೇ ಬಿಟ್ಟ ಸೋಮು !

"ಎಂಥ ಕೆಲಸ ಮಾಡಿದೆ ಮಗಳೇ ?"

ತಂದೆಯ ಮಾತಿಗೆ ಸಮಾಧಾನದಿಂದಲೇ ಉತ್ತರಿಸಿದಳು ಅವಳು,

"ಹೋಗಲಿ ಬಿಡಿ ಅಪ್ಪಾ ! ನನಗೆ ಒಡವೆ ಬೇಡವೇ ಬೇಡ. ಅವನು ಮಾರಿಕೊಂಡು ಉದ್ಯಮ ನಡೆಸಿಕೊಳ್ಳಲಿ. ಅವನು ಬಾಯಿ ಬಿಟ್ಟು ನನ್ನ ಕೇಳಿದ್ದಾನೆ. ಕೊಡದೆ ಇನ್ನೇನು ಮಾಡಲಿ ?"

"ನಿನ್ನ ಕೊರಳಿಗೆ ?"

"ಅಮ್ಮಾ ! ನಾನಿಂದೇ ಪ್ರತಿಜ್ಞೆ ಮಾಡುವೆ. ಇನ್ನೆಂದೂ ನಾನು ಒಡವೆಗಳನ್ನು ಕೊಡುವುದೇ ಇಲ್ಲ. ನೀವೇನೂ ನನ್ನ ಒಡವೆಗಳಿಗೆ ತೊಂದರೆ ತೆಗೆದುಕೊಳ್ಳುವುದು ಬೇಡ."

ಆ ಕ್ಷಣವೇ ಕಿವಿಯ ಓಲೆಗಳನ್ನೂ ಕಳಚಿದಳು ಕುಮುದ್ವತಿ ನಿರಾಭರಣೆಯಾಗಿರಲು ಒಪ್ಪಿ.

"ಹಾಗೆಂದರೆ ಹೇಗೆ ಮಗಳೇ ! ಸೋಮು ಒಡವೆ ಸಿಕ್ಕಿದೊಡನೆ ಹೇಗೆ ಮರು ಮಾತಿಲ್ಲದೆ ಬೆನ್ನು ತಿರುವಿದ ? ಅವನಿಗೆ ಕಿಂಚಿತ್ ಮನುಷ್ಯತ್ವ ಇದೆಯೆ ? ನಿನಗೊಂದು ಒಳ್ಳೆಯ ಮಾತೂ ಹೇಳಲಿಲ್ಲ. ನೀನು ಎಷ್ಟು

ಥಾರಾಳವಾಗಿ ಕೊಟ್ಟೆಯೋ ಅವನು ಅಷ್ಟೇ ನಿರ್ಲಜ್ಜ-ನಿರ್ದಾಕ್ಷಿಣ್ಯ-ಬಿಗುಮಾನಗಳಿಂದ ಮೆಟ್ಟಿಲಳಿದ. ಅಂತಹ ಮೂರ್ಖನಿಗೆ ನೀನು ಒಡವೆ ಕೊಟ್ಟೆಯಲ್ಲ, ಅವನ ಮೂರ್ಖತನಕ್ಕೆ ಸರಿಯಾಗಿ ತಾಳ ಹಾಕಿದ್ದಾಯ್ತು!"

"ಛಿಃ ! ಹೋಗಲಿ ಬಿಡಿ. ಒಡವೆಯಿಂದ ಏನಾಗಬೇಕು ? ಒಡವೆ ಇಲ್ಲದಿದ್ದರೆ ಬದುಕಲಾರವೇನು ? ಚಿನ್ನದ ಮೇಲಿನ ವ್ಯಾಮೋಹ ಹೋಗಲೇಬೇಕು ನಮಗೆ. ಶ್ರೀಹರೀ ! ನಮಗೆ ಜ್ಞಾನ-ಬುದ್ಧಿ ಏನೇನೂ ಇಲ್ಲ. ನಾವು ನಡೆಸುತ್ತಿರುವುದು ಪಶು-ಜೀವನ ! ಈ ಜಡ ದೇಹಕೆ ಒಡವೆಗಳ ಶೃಂಗಾರ ಮಾಡಿಕೊಳ್ಳದಿದ್ದರೆ ಹುಳುಕು ಮುಚ್ಚುವುದು ಹೇಗೆ ? ಎಂಥ ಅಸಹ್ಯಕರ ಬದುಕು ನಮ್ಮದು ? ಅಂದಮೇಲೆ, ಒಡವೆ ಹೋಗಿದ್ದು ಒಳ್ಳೆಯದಕ್ಕೆ ಎನ್ನೋಣ ! ಅದಕ್ಕಾಗಿ ಚಿಂತಿಸುವುದು ಬೇಡವೇ ಬೇಡ. ನಾನಿನ್ನು ಒಡವೆ ತೊಡುವುದೇ ಇಲ್ಲ ! ಹೆಣ್ಣನ್ನು ಅಜ್ಞಾನದ ಕೂಪಕ್ಕೆ ತಳ್ಳುವುದಕ್ಕಾಗಿಯೇ ಒಡವೆಗಳ ಶೃಂಗಾರ-ಶಾಸ್ತ್ರಗಳ ಸಂಕೋಲೆ ಎಲ್ಲಾ. ಅಷ್ಟೂ ಯೋಚಿಸಕೂಡದೇ ನಾವು ?"

ಆದರೆ, ದೇವಯ್ಯನ ರೀತಿಯೇ ಬೇರೆ. ತನ್ನೆದುರಿಗೆ, ಇಂತಹ ದುಷ್ಟನಾಟಕ ನಡೆದು ಹೋಯಿತಲ್ಲ; ಕೈಯಲ್ಲಿ ಕಾಸಿಲ್ಲದ ಕಾಲ್ಲದಲ್ಲಿ ಹೆಣ್ಣು ಮಗಳ ಸರ ಕಸಿಯುವುದುಂಟೇ ? ಎಂಬ ಸಂಕಟ. ಮಗಳಿಂದಲೇ ಜೀವನ ನಡೆಸುತ್ತಿರುವಾಗ ಇವನು ಕೊರಳಿಗೆ ಉರುಳಾದನೇ ? ಮುಂದೆ ಅವಳ ಮದುವೆಯ ಕಾಲದಲ್ಲಿ ನಾನು ಚಿನ್ನ ಕೊಳ್ಳಬಲ್ಲೆನೇ ? ಎಂಬ ಚಿಂತೆಯೇ ಚಿಂತೆ. ವೃದ್ಧ ಜೀವ ತತ್ತರಿಸಿತು. ತಂದೆಯು ಸ್ಥಾನದಲ್ಲಿದ್ದುಕೊಂಡು ಮುಂದೆ ನಿರ್ವಹಿಸಬೇಕಾದ ಜವಾಬ್ದಾರಿ ಧುತ್ತೆಂದುಎ ದುರು ನಿಂತಿದೆ. ಒಡಲೂ ಸಿಟ್ಟು-ರೋಷಗಳ ಗಣಿಯಾಗಿ ಕುದಿಯ ಹತ್ತಿತು ಕೊತಕೊತ. ತೀವ್ರ ಅಸಮಾಧಾನದಿಂದ ಮಗಳಿಗೆಂದ.

"ನೀನು ಮಾಡಿದ್ದು ಶುದ್ಧ ತಪ್ಪು ಕುಮೂ. ನಿನ್ನ ಅಣ್ಣಂದಿರಿಂದ ನಮಗೇನಾದರೂ ಕಿಂಚಿತ್ ಸಹಾಯವಾಗಿದೆಯೇ? ಒಂದಿನ ನಮ್ಮನ್ನು ಕರೆದು ಊಟವಿಟ್ಟಿದ್ದಾರೆಯೇ ? ಹೆಣ್ಣು ಮಗಳು ನಮ್ಮನ್ನು ಸಾಕುವುದನ್ನು

ನೋಡಿಯೂ ಇಂತಹ ಧೂರ್ತತನ ! ಮಕ್ಕಳಿಗೆ ದಯೆ–ಕರುಣೆ, ಧರ್ಮ–ಕರ್ಮ ಏನೇನೂ ಇರಬೇಡವೇ ? ಇಂಥ ಕಟುಕರಿಗೆ ದಾನ ಕೊಟ್ಟೆಯಲ್ಲ ಮಗಳೇ ? ನಿನಗೂ ಬುದ್ಧಿಯಿಲ್ಲ ಬಿಡು."

"ಹೋಗಲಿ ಬಿಡಿ. ನಾನು ಬೇಕಾಗಿಯೇ ಕೊಟ್ಟೆ. ಮತ್ತೇಕೆ ಆ ಪ್ರಸ್ತಾಪ ? ಅಧ್ಯಾಯ ತಿರಿವಿದ್ದಾಯಿತು. ಬೇರೆ ಮಾತಾಡಿ."

ಆಕ್ರೋಶದಿಂದ ಒಡಲ ಸಂಕಟವನ್ನು ತೋಡಿಕೊಂಡಳು ತಾಯಿ,

"ಮೊದಲಿಂದಲೂ ಹೀಗೆಯೇ. ಯಾವತ್ತೂ ಸ್ವಾರ್ಥ ಮೂಲವಾದ ಬುದ್ಧಿಯೇ ಹೊರತು ಸಹಕಾರ–ಸಜ್ಜನಿಕೆ ಇರಲೇ ಇಲ್ಲ. ಅಂದಿಂದಿಗೂ ಒಂದೇ ರೀತಿಯಲ್ಲಿ ಬದುಕಿ ಬಾಳಿದ ಅವರನ್ನು ಕಣ್ತುಂಬ ಕಂಡಿದ್ದೀಯೆ. ಆದರೂ, ಕೊಟ್ಟು ಬಿಟ್ಟೆಯಲ್ಲಾ ? ನ್ಯಾಯವಾಗಿ ನೋಡಿದರೆ ಅವರೇ ಒಡವೆ ವಸ್ತ್ರ ಕೊಟ್ಟು ಲಗ್ನ ಮಾಡಬೇಕಿತ್ತು. ಸರಿಯಾದ ಗಂಡು ಹುಡುಕಿ. ಅದು ಬಿಟ್ಟು ನಿನ್ನಿಂದಲೇ ಕಿತ್ತೊಯ್ಯುವುದೆಂದರೆ ಹೇಗೆ ಮನಸ್ಸು ಬಂತು ಹೇಳು ? ಛೀ! ಛೀ! ಇದಂತೂ ಬಹಳ ಅನ್ಯಾಯ. ನನ್ನ ಒಡಲೆಲ್ಲಾ ಸಂಕಟ. ಸಹಿಸಿಕೊಳ್ಳುವುದೇ ಕಷ್ಟವಾಗಿದೆ...."

ಎರಡೂ ಕಣ್ಣುಗಳಲ್ಲಿ ಕಂಬನಿಯ ಧಾರೆ ಇಳಿದು ಹೋಯಿತು.

"ಅಯ್ಯೋ, ಅಮ್ಮಾ ! ನಿಮಗೇಕೆ ದುಃಖ ? ನೀವು ಹೀಗೆ ದುಃಖಿಸುವುದಾದರೆ ಅಪ್ಪಾಜಿಯ ಗತಿಯೇನು ? ಇಂಥ ವಿಚಾರಗಳನ್ನೆಲ್ಲಾ ತೀರಾ ಲಘುವಾಗಿ ತೆಗೆದುಕೊಳ್ಳಬೇಕು. ಅದರಿಂದ ನಿಮ್ಮಿಬ್ಬರಿಗೂ ದುಃಖ-ಸಂಕಟ ಬೇಡವೇ ಬೇಡ. ನನ್ನ ಒಡವೆ ನಾನೇ ಸಂತೋಷದಿಂದ ಕೊಟ್ಟಿರುವಾಗ ನಿಮಗೇಕೆ ದುಃಖ ? ಹೀಗೆ ದುಃಖ ಹಚ್ಚಿಕೊಂಡರೆ ದೇಹಾರೋಗ್ಯ, ಮಾನಸಿಕಾರೋಗ್ಯ ಎರಡೂ ಹಾಳು. ಸಧ್ಯ ಸುಮ್ಮನಿದ್ದು ಬಿಡಿ. ನನಗೆ ಒಡವೆ ಬೇಕಾಗಿಲ್ಲ. ನಾನಿನ್ನು ತೊಡುವುದೂ ಇಲ್ಲ ಎನ್ನುವೆ."

ಅದೇ ವೇಳೆಗೆ ಶಾರದಮ್ಮ ಒಳ ಬಂದಳು. ವಿಷಯ ಅವಳಿಗೂ ತಿಳಿದು ಹೌಹಾರಿತು ಜೀವ.

"ಅಯ್ಯೋ. ಕೊಟ್ಟು ಬಿಟ್ಟೆಯಾ ಕುಮೂ, ಇನ್ನು ಬರಿ ಕೊರಳು !" ಎಂದಳು ಅವಳು.

"ಶ್ರೀ ಹರೀ ! ಒಂದು ಸರಕ್ಕಾಗಿ ನಿಮಗೆಲ್ಲಾ ಏಕಷ್ಟು ಚಿಂತೆ ? ಅವನು ಅದರಿಂದ ಉದ್ಯಮವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದಾದರೆ ಒಳ್ಳೆತೇ. ಇಷ್ಟಕ್ಕೂ ನನಗೆ ಒಡವೆ ಇಷ್ಟವೇ ಇಲ್ಲ. ನೋಡಿ ! ಇಂದೇ ಪಣ ತೊಡುವೆ. ನನಗೆ ಚಿನ್ನದೊಡವೆ ಬೇಡವೇ ಬೇಡ. ಒಡವೆ ಇಟ್ಟು ಕೊಳ್ಳದಿದ್ದರೆ ಆಗುವುದೇನು ? ಮಾನ ಹೋಗುತ್ತದೆಯೇ ? ನಮ್ಮ ಸಮಾಜಕ್ಕೆ ಒಡವೆ ತೊಟ್ಟು ಅಭ್ಯಾಸವಾಗಿ ಹೋಗಿದೆ, ಅದೇ ತಪ್ಪು ! ಒಡವೆ ಗೀಳು ಹೋಗಲೇಬೇಕು ಬಿಡಿ. ಚಿನ್ನ ಇಲ್ಲದವರು ನಕಲಿ ಒಡವೆ ಯನ್ನಾದರೂ ಹಾಕಿಕೊಳ್ಳಬೇಕು ! ಇಂಥ ಹುಚ್ಚು ಹುಟ್ಟಳಿಯಬೇಕು ! ಒಬ್ಬಿಬ್ಬರು ಒಡವೆ ಬಿಟ್ಟರೆ ಉಳಿದವರು ಅನುಸರಿಸಿಯಾರು. ಯಾರೊಬ್ಬರೂ ಬಿಡದಿರುವುದರಿಂದ ಈ ಗೋಳು ! ನೀವು ಇದಿಷ್ಟನ್ನು ಅರ್ಥ ಮಾಡಿ ಕೊಳ್ಳಲಾರಿರಾ ?"

"ನಿಜ ಕುಮೂ, ನೀನು ಹೇಳುವುದರಲ್ಲಿ ಅರ್ಥವಿದೆ. ಸತ್ಯವಿದೆ. ಆದರೆ ಮದುವೆಯಲ್ಲಿ ನಾಲ್ಕು ಜನ ಕೂಡಿದಾಗ ಕೊರಳಿಗೊಂದು ಸರ ಬೇಡವೇ ? ಎಂಬ ಪ್ರಶ್ನೆಯೆದ್ದೇ ಏಳುತ್ತೆ. ದಿನ ನಿತ್ಯ ಬೇಡವೆಂದರೂ ಮದುವೆ ದಿನ ವಾದರೂ ಸ್ವಲ್ಪ ಒಡವೆ ಬೇಕೆ ಬೇಕು ! ಅಲಂಕಾರವಿಲ್ಲದೆ ಹೆಣ್ಣಾಗುವುದು ಹೇಗೆ ?"

ಕುಮುದ್ವತಿ ಘಕಘಕನೆ ನಕ್ಕು ಬಿಟ್ಟಳು. ನಗು. ನಗು. ಆ ನಗುವಿಗೆ ಕೊನೆಯೇ ಇಲ್ಲ.

"ನೋಡಿ ಶಾರದಮ್ಮಾ ! ನಾನು ಹೇಳುವುದಾದರೆ ಇದೊಂದು ಮೂಢ ನಂಬಿಕೆ. ಒಡವೆ ನಮ್ಮನ್ನೇನು ಸಿಂಗರಿಸಿಯಾವು ಹೇಳಿ ? ನಮ್ಮ ಮೈ ಮೇಲಿದ್ದರೆ ಅವಕ್ಕೆ ಬೆಲೆ ಅಷ್ಟೆ; ನೀವು ಅಷ್ಟೂ ಭಾವಿಸಲಾರಿರಾ ?"

"ಇರಲಿ, ಹಾಗೇ ಅನ್ನೋಣ. ಆದರೆ...."

ಅವಳ ಮಾತು ಮುಂದುವರಿಸಗೊಡದೆ ನುಡಿದಳು ಕುಮುದ್ವತಿ "ನನಗೆ ಒಡವೆ ಬೇಡವೇ ಬೇಡ ಎನ್ನುತಿದ್ದೇನಲ್ಲ, ಮತ್ತೇಕೆ ಚಿಂತೆ ?"

ಬೇಲಿ ಸಾಲಿನಲ್ಲಿ ಕಾಗೆಯೊಂದು ಕುಳಿತು ಬಾಯಿಕಿಸಿದು ಅರಚುತಿತ್ತು ಕರ್ಕಶ ದನಿಯಲ್ಲಿ. ಸೀತಮ್ಮ ಅದರ ಕಡೆಗೆ ಕೈಬೀಸಿ ಓಡಿಸಿದಳು. ಅದು ಒಮ್ಮೆ ಹಾರಿ ಹೋದರೂ ಮತ್ತೊಮ್ಮೆ ಬಂದು ಅಲ್ಲಿಯೇ ಕುಳಿತು ಕೂಗ ತೊಡಗಿತು. ಕಿವಿ ಕಿಡಿಸುವಂತಹ ಕರ್ಕಶ ಧ್ವನಿ.

ಗದ್ದೆಯಂಚಿನಲ್ಲಿ ಸರಸು ತಂಗಿಯೊಡನೆ ಇತ್ತಲೇ ಲಗುಬಗನೆ ಹೆಜ್ಜೆ ಯಿಡುತಿದ್ದುದು ಕಂಡು ಬಂತು. ಅವಳನ್ನು ನೋಡುತ್ತಲೂ ನೆನಪಿನಲ್ಲಿ ಸುಳಿದಿದ್ದ ಒಡವೆಯ ಘಟನೆ ಸಂಪೂರ್ಣ ಅಳಿಸಿಯೇ ಹೋಯಿತು. ಆನಂದ ರಸಾಯನವನ್ನು ಮನಕ್ಕೆ ತುಂಬಿಕೊಳ್ಳುತ್ತ ಅಲ್ಲೇ ಕಾದು ನಿಂತಳು ಗೆಳತಿ ಗಾಗಿ. ಹೆಜ್ಜೆ ಹೆಜ್ಜೆಗೂ ಸಮೀಪಗತಳಾಗುತಿದ್ದ ಸರಸಿಯ ಕೈಯಲ್ಲಿ ಲಗ್ನ ಪತ್ರಿಕೆಯಿದ್ದುದು ಕಂಡುಬಂತು. ತನ್ನ ಆತ್ಮೀಯ ಗೆಳತಿಯನ್ನು ತಾನೇ ಪ್ರೇಮ ಪೂರ್ವಕವಾಗಿ ಆಹ್ವಾನಿಸುವ ಇಚ್ಛೆ ಇಲ್ಲಿಯವರೆಗೆ ಬರ ಮಾಡಿತ್ತು ಅವಳನ್ನು.

ಮೆಟ್ಟಿಲಿನ ತುದಿಯಲ್ಲಿ ನಿಂತು ಗೆಳತಿಯನ್ನು ಸ್ವಾಗತಿಸಿದಳು ಕುಮುದ್ವತಿ.

ಆನಂದ ಸಾಗರದಲ್ಲಿ ಮುಳುಗಿದ ಅವಳು ಹಿರಿಹಿರಿ ಹಿಗ್ಗಿದ್ದಾಳೆ. ಹೃದಯ ಮಂದಿರದಲ್ಲಿ ಪ್ರತಿಷ್ಠಿತ ಪತಿಯ ನೆನಪಿನ ಆನಂದ ಮುದ್ರೆ. ಮುಖಬಿಂಬ ದಲ್ಲಿ ಪ್ರಸನ್ನ ಭಾವ.

"ಏನಮ್ಮಾ ತುದಿಗಾಲಲ್ಲಿ ನಿಂತಿದ್ದೀ ?" ಅವಳೇ ಕೇಳಿದಳು.

"ಈಗಷ್ಟೇ ಸೋಮು ಬಂದು ಹೋದ. ಹಾಗೇ ನೋಡುತ್ತ ನಿಂತಿದ್ದೆ. ನಿನ್ನ ನೋಡಿ ನಿನಗಾಗಿ ಕಾದೆ."

"ಹಾಗೇನು ? ದಾರಿಯಲ್ಲಿ ನಮಗೆ ಸಿಕ್ಕಿದರು."

"ಬಾ, ಒಳಗೆ."

ಒಳ ಬಂದ ಅವಳಿಗೆ ದೇವಯ್ಯ ದಂಪತಿಗಳ ಗಂಭೀರ ಮುಖಭಾವ ಅರ್ಥವೇ ಆಗಲಿಲ್ಲ. ಲಗ್ನ ಪತ್ರಿಕೆಯನ್ನು ದೇವಯ್ಯನ ಕೈಗಿಟ್ಟು ವಿನಮ್ರತೆಯಿಂದ ಕಾಲಿಗೆ ನಮಸ್ಕರಿಸಿದ ಬಳಿಕ ತಾಯಿಗೂ ಮತ್ತು ಶಾರದೆಗೂ ನಮಸ್ಕರಿಸಿ ಶುಭಾಶಯಗಳನ್ನು ಪಡೆದಳು.

ಗೆಳತಿಗೆ ಆತ್ಮೀಯ ಆಲಿಂಗನ ನೀಡಲು ಹೋದಾಗ "ನನಗೂ ನಮಸ್ಕಾರ ಮಾಡೇ" ಎಂದಳು ಕುಮುದ್ವತಿ, ಹಾಸ್ಯ ಪ್ರಧಾನವಾಗಿ.

ಎಲ್ಲರ ಮುಖದಲ್ಲೂ ನಗುವಿನ ಲಹರಿ ಉಕ್ಕಿ ಹರಿಯಿತು.

ಅವಳ ತಂಗಿ-ಧಾರಿಣಿಯು ಕಿಲಕಿಲ ನಗುತ್ತಾ ನುಡಿದಳು,

"ಸರಸಿಗೆ ಎಷ್ಟು ಸಂತೋಷವಾಗಿದೆ ಅಂದರೆ ನಿಮಗೆ ಮಾತ್ರವಲ್ಲ, ಯಾವ ಪ್ರಾಣಿಗಾದರೂ ಅಡ್ಡ ಬಿದ್ದಾಳು !"

"ಹಾಗೇನೂ...?"

"ಮನೆಗೆ ಬಂದವರಿಗೆಲ್ಲಾ ಅಡ್ಡ ಬೀಳುವುದೇ ಕೆಲಸ ! ಹಗಲು ಇದಾದರೆ ರಾತ್ರಿ ಗಂಡನ ಕನಸೇ ಕನಸು ! ಏನೇನೋ ಮಾತಾಡುತ್ತಿರುತ್ತಾಳೆ !"

ಆ ಕೂಡಲೇ ಸರಸಿ ಅವಳ ಕಡೆ ಕೈಯೆತ್ತಿ ಹೊಡೆಯುವಂತೆ ನುಗ್ಗುತ್ತಲೂ ಧಾರಿಣಿ ಓಡಿ ಹೋದಳು ಅಲ್ಲಿಂದ.

ಮತ್ತೊಮ್ಮೆ ನಗುವಿನ ಲಹರಿ ಉಕ್ಕಿ ಹರಿಯಿತು ಎಲ್ಲರ ಮುಖದಲ್ಲಿ.

— ೦ —

೪

....ಇನ್ನೂ ಬೆಳಗಿನ ಒಂಭತ್ತರ ಸಮಯ.

....ಬಾಲರವಿ ಬೆಣ್ಣೆ ಮುಗಿಲ ದಿಣ್ಣೆಯನ್ನೇರಿದ್ದಾನೆ.

ಬೆಳಗಿನ ಸೊಂಪಾದ ಚೆಂಬಿಸಿಲಿಗೆ ಮೈಗೊಟ್ಟು ಒಳದಾರಿಯಿಂದ ನಡೆದು ಬಂದಿದ್ದಾಳೆ ಶಿವಾನಿ. ಅವಳು ದೇವಯ್ಯನ ಸೋದರ ಸೊಸೆ. ಮೂರು ನಾಲ್ಕು ಮೈಲಿಗಳ ಅಂತರದಲ್ಲಿ ವಾಸಿಸುವ ಅವಳು ಆಗೊಮ್ಮೆ ಈಗೊಮ್ಮೆ ಬಂದು ಹೋಗುವುದುಂಟು. ಅವಳು ಒಣದರಗು ಎಲೆ ಕಡ್ಡಿಗಳ ಮೇಲೆ ನಡೆದು ಬಂದಾಗ ಲರಲರ ಸದ್ದು ಮೂಡಿತು. ತೆಪ್ಪಗೆ ಕುಳಿತಿದ್ದ ನಾಯಿಗಳು ಎದ್ದು ಅತ್ತ ಓಡಿದುವು. ಅವಳ ಪರಿಚಿತ ಮುಖವನ್ನು ನೋಡಿ, ಕುಂಯಿ ಕುಂಯಿ ಎಂಬ ಸಂತಸದ ರಾಗವನ್ನು ಕೂಗುತ್ತ ಅವಳೊಂದಿಗೇ ಹಿಂದಿರುಗಿದುವು ಮನೆಗೆ.

ಸೀತಮ್ಮ ಬಂದವರಾರೆಂದು ಹೊರ ತಲೆಹಾಕಿ ಕತ್ತು ಆನಿಸಿ ನೋಡಿದರೆ ಎದುರು ಬಿಸಿಲು ಕಣ್ಣಿಗೆ ಬೀಳುತಿದ್ದುದರಿಂದ ಬಂದವರಾರೆಂಬುದು ತಿಳಿಯಲಿಲ್ಲ. ನೋಡಿದರೂ ಕಣ್ಣುಗಳು ಮಂಜು ಮಂಜು. ಅವಳು ಅಲ್ಲಿಂದಲೇ "ಹೇಗಿದ್ದೀರಿ ಅತ್ತೇ ?" ಎಂದಾಗ ದನಿಯು ಗುರುತು ಹತ್ತಿ,

"ನೀನೇನೂ ? ಎದುರು ಬಿಸಿಲಿನಿಂದ ಕಣ್ಣೇ ಕಾಣಿಸಲಿಲ್ಲ. ಬಾ ತಾಯಿ, ಬಾ."

ಅಂಗಳವನ್ನು ದಾಟಿ ಬಂದು ಜಗಲಿ ಹತ್ತಿದಳು ಶಿವಾನಿ. ಮುಖದ ತುಂಬೆಲ್ಲಾ ಅಸಹಜ ಪ್ರಸನ್ನತೆಯ ಹರವು.

"ಏನಮ್ಮಾ, ಈ ಕಡೆ ಬರದೆ ಬಹಳ ದಿನಗಳಾಗಿದ್ದುವು ?"

"ಅದಕ್ಕೆಂದೇ ಇಂದು ಬಂದುದು." ಮುಗುಳು ನಕ್ಕಳು ಅವಳು.

"ಒಳಗೆ ಬಾ ಶಿವಾನಿ." ಸೀತಮ್ಮನ ಮಮತೆಯ ಕರೆ.

ಹೊಲಿದ ಬಟ್ಟೆಗಳನ್ನು ಇಸ್ತ್ರಿ ಮಾಡುತಿದ್ದ ಕುಮುದ್ವತಿ ಹಣಿಕಿ ನೋಡಿ "ಇಲ್ಲೇ ಬಂದು ಬಿಡಿ ಅಕ್ಕ. ಬೆಂಚಿನ ಮೇಲೆ ಕುಳಿತರೆ ನಮಗೂ ಒಳ್ಳೆಯ ಕಂಪನಿ."

ಅವಳು ಒಳ ಬಂದು ಬೆಂಚಿನ ಮೇಲೆ ಕುಳಿತುಕೊಂಡಳು. ಅವಳ ಪತಿ ಉಮೇಶ ಯಾವಾಗಲೂ ತಿರುಗುತ್ತಿರುವವನೇ. ಅವನ ಚಲನವಲನ ಅವನಿಗೇ ಗೊತ್ತು. ಆಗೊಮ್ಮೆ ಈಗೊಮ್ಮೆ ಮನೆಗೆ ಬಂದು ಹೋಗು ವುದುಂಟು. ಗದ್ದೆ–ತೋಟಗಳ ನಿರ್ವಹಣೆ ಮಡದಿಯದೇ. ನಾಲ್ಕು ಮಕ್ಕಳ ತಾಯಿ. ಐದನೆಯ ಗರ್ಭಿಣಿ. ವಿನಾಕಾರಣ ಸುತ್ತುವ ಅವನ ಮೇಲೆ ಎಲ್ಲರಿಗೂ ಸಿಟ್ಟು. ಮಡದಿ ಮಕ್ಕಳ ಮೇಲಾಗಲೀ, ಆಸ್ತಿಯ ಮೇಲಾಗಲೀ ಗಮನವಿಲ್ಲ. ಅವಳು ದುಡಿದು ಸಂಪಾದಿಸಿದ ಹಣಕ್ಕೆ ಅವನು ಪಾಲುದಾರ. ಈ ಎಲ್ಲಾ ಕಾರಣಗಳಿಂದ ಎಲ್ಲರ ದೂಷಣೆ–ತಿರಸ್ಕಾರಗಳಿಗೆ ಪಕ್ಕಾದವ. ಅವನಿಗೆ ಬುದ್ಧಿಯೂ ಇಲ್ಲ. ಲಜ್ಜೆಯೂ ಇಲ್ಲ.

"ಈ ಸಲಿ ಮಾವ ಬಂದಿದ್ದಾರೇನು ?"

"ಹೌದು. ಅಮ್ಮಣ್ಣೀ. ನಾಲ್ಕೈದು ದಿನಗಳಿಂದ ಮನೆ ಯಲ್ಲಿದ್ದಾರೆ."

"ಮಾವ ಮನೆಗೆ ಬಂದಾಗ ಮಾತಾಡಿಸಬೇಡಿ. ನೀವು ಎಲ್ಲಕ್ಕೂ ತಲೆ ಬಾಗುವುದೇ ಅವರಿಗೆ ಸರಾಗ. ನೀವು ಸ್ವಲ್ಪ ಜೋರಾಗಿದ್ದರೆ ಇಂಥ ಆಟಗಳು ನಡೆಯುತ್ತಿರಲಿಲ್ಲ. ದುಡ್ಡು ಕಾಸಿನಲ್ಲೂ ಪಾಲು. ಊಟೋಪಚಾರದಲ್ಲೂ ಪಾಲು. ಹಾಸಿಗೆಯ ಲ್ಲೂ ಪಾಲು. ಅದಕ್ಕೇ ಹೀಗಿರೋದು ಮಾವ. ನೀವು ನೋಡಿದರೆ ಹೆರುವ ಯಂತ್ರ. ಸರಿಹೋಯಿತಲ್ಲ; ನೀವು ಇದನ್ನೆಲ್ಲಾ ಯೋಚಿಸಬಾರದೇ ?"

“ಯೋಚಿಸಿ ಏನು ಮಾಡಲಿ ಹೇಳು ? ನನ್ನ ಮಾತಿಗೆ ಬೆಲೆ ಕೊಡುತ್ತಾರೆಯೇ ? ನಮ್ಮಾಟ ಏನು ನಡೆದೀತು ? ಆಸ್ತಿ ಅವರದು. ನಾನು ಹೇಗೆ ಎದುರು ನಿಲ್ಲುವುದು ?”

ಆ ಮಾತಿಗೆ ಕಿಲಕಿಲ ನಕ್ಕು ನುಡಿದಳು ಕುಮುದ್ವತಿ “ಶ್ರೀಹರೀ ನೀವು ಧೈರ್ಯ ಮಾಡದಿದ್ದರೆ ಕಾಲಾನುಕಾಲಕ್ಕೂ ಹೀಗೆಯೇ. ಇನ್ನೂ ನಾಲ್ಕು ಮಕ್ಕಳನ್ನು ಹೆರುತ್ತೀರಿ ಅಷ್ಟೆ.... ಈ ಸಲಿ ಮನೆಗೆ ಸೇರಿಸದೆ ಓಡಿಸಿಬಿಡಿ !”

ಅವಳು ಗಟ್ಟಿಯಾಗಿ ನಕ್ಕು ನುಡಿದಳು “ಗಂಡಸನ್ನು ಓಡಿಸಲಾಗುತ್ತದೆಯೇ ? ಅದೇನು ಕುರಿಯೆ ಓಡಿಸುವುದಕ್ಕೆ ?”

“ಕೇಳಿ, ನೀವು ಹುಲಿಯಾದರೆ ಅವರು ಕುರಿಯಾಗುತ್ತಾರೆ.”

ಮಗಳ ಮಾತಿಗೆ ಮಂದಹಾಸ ಬೀರಿ ನುಡಿದಳು ಸೀತಮ್ಮ “ಬಿಡು, ಬಿಡು. ಅಷ್ಟು ಸುಲಭವಲ್ಲ ಯಾರಿಗೂ. ಏನೋ ಒಂದು ರೀತಿಯಲ್ಲಿ ನಾಲ್ಕು ಜನ ಕುಳಿತು ಬುದ್ಧಿ ಹೇಳಿದರೆ ಆದೀತು. ಅದು ಬಿಟ್ಟು ಓಡಿಸುವುದಾದೀತೇ ?”

“ಸ್ವಂತ ಬುದ್ಧಿಯಿಲ್ಲದವರು ಬೇರೆಯವರ ಮಾತು ಕೇಳುವುದುಂಟೇ ? ಚೆನ್ನಾಗಿ ಪಾಠ ಕಲಿಯುವಂತೆ ಮಾಡದಿದ್ದರೆ ಆಗುವುದೇ ಇಲ್ಲ. ಯಾರಿಗೂ ಇಷ್ಟೊಂದು ಹೇಡಿತನವಿರಬಾರದು.”

“ನೀನೊಮ್ಮೆ ಸಂಸಾರ ಹೊಕ್ಕಿ ನೋಡು !”

ಆ ಕೂಡಲೇ ದೊಡ್ಡ ದನಿಯಲ್ಲಿ ನಕ್ಕು ನುಡಿದಳು ಕುಮುದ್ವತಿ,

“ನಾನಾದರೆ ಸೋಡಚೀಟಿ ಕೊಟ್ಟು ಬಂದು ಬಿಡುತಿದ್ದೆ !”

“ಅನಂತರ ಜೀವನ ?”

“ಟೈಲರಿಂಗ್ ಇದೆಯಲ್ಲ ?” ಅಷ್ಟೇ ಅಲ್ಲ, ಇನ್ನೂ ಏನು ಬೇಕೆಂದರೂ ಮಾಡಿಕೊಳ್ಳಬಲ್ಲೆ !”

“ನಿನಗೆ ಹಾಗೊಂದು ದಾರಿ ಇದೆ. ನನಗೇನಿಲ್ಲವಲ್ಲಾ ?”

"ಏನಾದರೊಂದು ಹುಡುಕಿಕೊಂಡರಾಯ್ತು !"

ಸೀತಮ್ಮ ಚಹದ ಬಸಿಗಳನ್ನು ತಂದಳು. ಎಲ್ಲರೂ ಒಂದೊಂದು ಬಸಿಯನ್ನು ತೆಗೆದುಕೊಂಡರು. ಕುಮುದ್ವತಿ ಚಹ ಹೀರುತ್ತ ನುಡಿದಳು "ನೀವು ಹಾಸಿಗೆ ಹಿಡಿದರೆ ಯಾರಿದ್ದಾರೆ ನೋಡಿಕೊಳ್ಳಲು. ಮಕ್ಕಳ ಗತಿಯೇನು ? ತೋಟಗಾರಿಕೆಯ ಗತಿಯೇನು ? ಈ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ನಿಮ್ಮ ದೇಹಸ್ಥಿತಿಯ ಕಡೆ ಮೊದಲು ಗಮನ ಕೊಡಿ."

"ವಿಧಿ ನಮ್ಮ ಹಣೆಯಲ್ಲಿ ಏನು ಬರೆದಿದ್ದಾನೋ...." ಹನಿಗಣ್ಣಾಗಿ ನುಡಿದ ಶಿವಾನಿ, ಒಂದು ಗಳಿಗೆ ತಡೆದು ಪುನಃ ಮುಂದುವರಿದಳು "ಹೇಳುವುದು ಸುಲಭ. ಅದರಂತೆ ನಡೆಯುವುದು ಕಷ್ಟ. ಭುಜಬಲವಿಲ್ಲದೆ ಬಾಯಿಬಿಟ್ಟೆ ಎಂದರೆ ಸೊಂಟ ಮುರಿದು ಕೂರಿಸುತ್ತಾರೆ. ನಮ್ಮಲ್ಲಿ ಸಾಮೂಹಿಕವಾದ ಜಾಗೃತ ಪ್ರಜ್ಞೆ ಅರಳಿದರೆ ಲೋಕಜ್ಞಾನ ಮತ್ತು ಸಾಮಾಜಿಕ ನ್ಯಾಯ ಲಭಿಸುವುದು ಸತ್ಯ. ಇದು ಏನೇನೂ ಇಲ್ಲದೆ ಅಲ್ಲೊಬ್ಬರು ಇಲ್ಲೊಬ್ಬರು ಪುಟಿದೆದ್ದರೆ ಹೊಡೆತ–ಬಡಿತ, ಕೋರ್ಟು–ಕಛೇರಿಗಳ ರಾಣಾರಂಪ. ಇದೆಲ್ಲಾ ಏಕೆ ಬೇಕು ಹೇಳು ?"

"ನೀವೆನ್ನುವುದರಲ್ಲಿ ಅರ್ಥವಿದೆ, ಆದರೆ, ಒಬ್ಬಿಬ್ಬರಾದರೂ ಏಳದಿದ್ದರೆ ಉಳಿದವರು ಏಳುವುದು ಹೇಗೆ ? ಸಾಮಾಜಿಕ ಅನ್ಯಾಯ ತೊಲಗಿಸುವ ಕ್ರಮ ಯೋಚಿಸಿ ನೋಡಿ."

ಶಿವಾನಿ ಸ್ವಲ್ಪ ಹೊತ್ತು ಮಾತಾಡಲಿಲ್ಲ. ಆಂತರಿಕ ದೃಷ್ಟಿ ಮನೆ ಮನೆಯನ್ನೂ ಹೊಕ್ಕಿ ನೋಡಿತು. ಎಲ್ಲಾ ಸಂಸಾರಗಳಲ್ಲೂ ಹೆಂಗಳೆಯರಿಗೆ ಸ್ವಾತಂತ್ರ್ಯ ಸೊನ್ನೆ. ಪುರುಷ ಪ್ರಧಾನವಾದ ರಾಷ್ಟ್ರದಲ್ಲಿ ಸರಿಸಮಾನತೆ ಸಾಧ್ಯವೇ ಇಲ್ಲ. ಎಂಬುದು ಕರತಲಾಮಲಕ.

ಸೀತಮ್ಮ ಎಲ್ಲವನ್ನೂ ಕೇಳಿಸಿಕೊಂಡು ತನ್ನ ಅಭಿಪ್ರಾಯವನ್ನು ಹೊರಹಾಕಿದಳು,

"ಇಷ್ಟೆಲ್ಲಾ ಮಾತಾಡುವ ನೀನು ಎಷ್ಟೆಷ್ಟು ರೀತಿಯಲ್ಲಿ ಸುಧಾರಿಸುತ್ತಿ ನೋಡೋಣ. ಇವೆಲ್ಲಾ ಸ್ವತಃ ಆಚರಣೆಯಲ್ಲಿ ತಂದಾಗ 'ಭೇಷ್' ಎನ್ನಬಹುದು."

ಮೂವರೂ ನಕ್ಕು ಬಿಟ್ಟರು.

"ಒಂದೇ ಸಲಿ ಪೂರ್ತಿ ಅಲ್ಲದಿದ್ದರೂ ಹಂತ ಹಂತವಾಗಿಯಾದರೂ ಸುಧಾರಣೆಯಾಗಬೇಕಲ್ಲ, ಕಾಲೋಚಿತವಾಗಿ ನಡೆಯದಿದ್ದರೆ ಹೇಡಿತನ ವಾದೀತು."

"ಆಗಲಿ, ಆಗಲಿ. ಮಾಡು, ನೀನೇನು ಮಾಡುತ್ತೀಯೋ ಅದನ್ನು ನಾವೂ ಕಲಿಯೋಣ."

ಶಿವಾನಿ ಈ ಮಾತನ್ನು ಎದೆಯಾಳದಿಂದಲೇ ಹೊರಹಾಕಿದಳು ಪರಿಸ್ಥಿತಿಯ ಕೂಸಾಗಿ.

ದೇವಯ್ಯ ತೋಟದಿಂದ ಬಂದು ಕೈಕಾಲು ತೊಳೆದುಕೊಂಡು ಶಿವಾನಿಯನ್ನು ಕಂಡು ಅಂದ,

"ಉಮೇಶ ನಿನ್ನೆ ಪೇಟೆಯಲ್ಲಿ ಸಿಕ್ಕಿದ್ದ. ಈಗ ಕೆಲಸ ಕಾರ್ಯ ನೋಡಿಕೊಳ್ಳುತ್ತಾನೆಯೇ ?"

"ಹೇಗಿದ್ದರೋ ಹಾಗೆಯೇ. ಹಳತು ಹೋಗಿ ಈಗ ಹೊಸತು ಬರುವುದು ಹೇಗೆ ?"

"ನಾನವನಿಗೆ ಎಷ್ಟು ಬಾರಿ ಹಿತವಾದ ಹೇಳಲಿಲ್ಲ. ಮನೆ ತುಂಬ ಮಕ್ಕಳಿಟ್ಟುಕೊಂಡು ಉಂಡಾಡಿಯಾದರೆ ಹೇಗೆ ? ವ್ಯರ್ಥ ಕಾಲಹರಣ... ವ್ಯರ್ಥ ಜೀವನ.

"ಅಪ್ಪಾಜೀ, ನಿಮ್ಮ ಮಾತೇ ಕೇಳಲಿಲ್ಲನೆಂದರೆ ಇನ್ನಾರ ಮಾತು ಕೇಳಬೇಕು ? ನಾನು ಅಕ್ಕನಿಗೆ ಅವರನ್ನು ಮನೆಗೆ ಸೇರಿಸಬೇಡ ಎನ್ನುತ್ತಿರುವೆ. ಮಡದಿಯ ಸಹಕಾರದಿಂದಲೇ ಅವರು ಹೆಚ್ಚಿಕೊಂಡಿದ್ದಾರೆ."

"ಅದಾಗದ ಮಾತು..." ಅಷ್ಟೆಂದು ಯೋಚನಾ ಪರವಶನಾದ, ದೇವಯ್ಯ.

"ಒಳ–ಹೊರಗೆ ಗೆಯ್ಯಬೇಕು. ಮಕ್ಕಳು ಚಿಕ್ಕವರು. ಅವರನ್ನು ನೋಡಿಕೊಂಡು ಎಲ್ಲಾ ವ್ಯವಹಾರಕ್ಕೂ ನಗರಕ್ಕೆ ಓಡಾಡಬೇಕು. ಇಷ್ಟರ ಮೇಲೆ ನಾನು ಬೆಳೆದ ಬೆಳೆಯಲ್ಲಿ ಸಮಪಾಲು ತೆಗೆದುಕೊಳ್ಳದೆ ಬಿಡುವುದಿಲ್ಲ. ಹಣ ಕೂಡಿಡುವುದಕ್ಕೂ ಆಗುವುದಿಲ್ಲ. ಈ ಭಂಗ ಯಾರಿಗೆ ಬೇಕು ಮಾವಾ?"

ಒಡಲ ಗೋಳನ್ನು ತೋಡಿಕೊಂಡಳು ಶಿವಾನಿ. ಮಾತು ಮುಗಿಯು ವುದರೊಳಗಾಗಿ ಕಣ್ಣುಗಳಲ್ಲಿ ಭಾಗೀರಥಿ ಕೃಷ್ಣೆಯರು ಉಕ್ಕಿ ಹರಿದರು. ಒಡಲಾಳದ ದುಃಖ ದುಗುಡವೆಲ್ಲಾ ಮುಖಕ್ಕೆ ನುಗ್ಗಿ ಬಂತು. ಎಷ್ಟೆಷ್ಟು ಪ್ರಯತ್ನಿಸಿದರೂ ತನ್ನನ್ನು ಹತೋಟಿಯಲ್ಲಿಟ್ಟುಕೊಳ್ಳಲಾಗಲಿಲ್ಲ. ಸುಮ್ಮನೆ ಗಂಭೀರ ಭಾವದಿಂದ ಬಿಗಿದು ಕುಳಿತುಕೊಂಡಳು.

"ಅವರನ್ನೊಮ್ಮೆ ಇಲ್ಲಿಗೆ ಕಳುಹಿಸಿ ಅಕ್ಕಾ. ನಾವೆಲ್ಲರೂ ಕೂಡಿ ಮನಸ್ಸಿಗೆ ನಾಟುವಂತೆ ಕಿವಿಗೆ ಚುಚ್ಚೋಣ. ಅದರಿಂದ ಏನಾದರೂ ಪ್ರಯೋಜನವಾಗಬಹುದೋ ನೋಡಬಹುದು."

"ಆಗಲಮ್ಮಾ, ಕಳುಹಿಸಲು ಪ್ರಯತ್ನಿಸುವೆ." ಎಂದ ಅವಳು ಸ್ವಲ್ಪ ಹೊತ್ತು ಸುಮ್ಮನಿದ್ದು ಪುನಃ "ಮಕ್ಕಳನ್ನಾದರೂ ವಿಚಾರಿಸಿಕೊಂಡಿದ್ದರೆ ನನಗೆ ಎಷ್ಟೋ ಸಮಾಧಾನವಿರುತಿತ್ತು. ಮಕ್ಕಳ ಮೇಲೂ ಪ್ರೀತಿಯಿಲ್ಲ. ಸಂಸಾರದ ಮೇಲೂ ಆಸ್ಥೆಯಿಲ್ಲ. ಅದೇ ವ್ಯಸನ."

"ಎಷ್ಟೋ ಮಂದಿ ಯಾವುದಾದರೊಂದು ವಿಶಿಷ್ಟ ಸಂದರ್ಭದಲ್ಲಿ ಸರಿ ಹೋಗಬಹುದಾದ ಪ್ರಸಂಗ ಬರುತ್ತದೆ. ನಿನ್ನ ಅದೃಷ್ಟ ಚೆನ್ನಾಗಿದ್ದರೆ ಹಾಗೇಕಾಗಬಾರದು? ದೇವರಿಗೆ ಪ್ರಾರ್ಥಿಸು. ಅವನು ಎಂದಾದರೂ ಕರುಣೆ ತೋರಬಹುದು." ತನ್ನ ಅಭಿಪ್ರಾಯ ಹೊರಹಾಕಿದಳು ಸೀತಮ್ಮ.

ಶಿವಾನಿ ಮಾತಾಡದೆ ನೀಳವಾದ ನಿಟ್ಟುಸಿರು ಬಿಟ್ಟಳು.

ಸೀತಮ್ಮ ಅವಳ ಬೆನ್ನು ತಟ್ಟಿ ಸ್ವಾಂತನ ಗೈಯ್ಯುವ ದನಿಯಲ್ಲಿ ಶುಭ ಹಾರೈಸಿದಳು,

"ಚಿಂತಿಸಬೇಡ ದೇವರಿದ್ದಾನೆ."

"ಸದಾ ಅವರ ಹೆಸರಿನಲ್ಲಿ ನಂದಾದೀಪ ಉರಿಯುತ್ತಲೇ ಇರುತ್ತೆ, ಪ್ರಾರ್ಥನೆ ತಪ್ಪುವುದಿಲ್ಲ. ಇಷ್ಟರಮೇಲೆ ದೈವೇಚ್ಛೆ !"

"ಹಟ್ಟಿಯಲ್ಲಿ ಕರು ಅರಚಿಕೊಂಡಿತು. ಏನೆಂದು ಹೋಗಿ ನೋಡಿದರೆ ಕರು ಹುಲ್ಲಿನ ಬಾನಿನ ಬದಿಯ ಸಂದಿಯಲ್ಲಿ ಬಿದ್ದು ಕತ್ತು ಅಡಿಯಾಗಿ ಅರಚ ಲಾರದೆ ಅರಚಿಕೊಂಡಿತ್ತು.

ಕುಮುದ್ವತಿ ಅಲ್ಲಿಂದಲೇ ಕೂಗಿದಳು ಜೋರಾಗಿ "ಅಪ್ಪಾಜಿ !"

ಒಡನೆ ಎಲ್ಲರೂ ಹಟ್ಟಿಯ ಕಡೆಗೆ ಧಾವಿಸಿದರು. ಅದು ಹೇಗೆ ಬಿತ್ತೋ...ತಕ್ಷಣವೇ ಎತ್ತಿದುದರಿಂದ ಕರುವಿಗೆ ಅಪಾಯವಾಗಲಿಲ್ಲ. ಸ್ವಲ್ಪ ಹೊತ್ತು ಮೀರಿದ್ದಿದ್ದರೆ ಅದು ಅಲ್ಲಿಯೇ ಸಾಯುವಂತಹ ಪ್ರಸಂಗ.

ಕುಮುದ್ವತಿ ಕರುವನ್ನು ಈಚೆಗೆ ತಂದು ಕತ್ತನ್ನು ಉಜ್ಜಿ–ನೀವಿ ಮುದ್ದಿಸಿ ಹುಲ್ಲೂಡಿಸಿದಳು. ತಿಂಗಳ ಪ್ರಾಯದ ಅದು ಬಣ್ಣ ಬಣ್ಣದ ಹೆಣ್ಣು ಕರು. ಅಲ್ಲಿಂದಿಲ್ಲಿಗೆ ಜಿಗಿದಾಡುತ್ತ ಎಲ್ಲರ ಮನಸ್ಸಿಗೂ ಆನಂದ ಮೂಡಿಸಿದ ಕರು. ಎಲ್ಲರ ಪ್ರೀತಿಗೂ ಪಾತ್ರವಾದ ಮುದ್ದಿನ ಕರು.

ಅದಕ್ಕೊದವಿದ ಗಂಡಾಂತರದಿಂದ ಎಲ್ಲರ ಮನಸ್ಸೂ ಮಿಡುಕಿ ಮರ್ಮರ ಮರುಗಿತು. ಗರಿಕೆಯೆಸಳನ್ನು ಬಾಯಿಗಿಟ್ಟರೂ ಬಾಯಾಡದೆ ಉಗಿದು ಸುಮ್ಮನೆ ನಿಂತಿತು ಕರು.

"ಪಾಪ, ಬಹಳ ಪೆಟ್ಟಾಗಿರಬೇಕು" ಎಂದಳು ಕುಮುದ್ವತಿ.

"ನಮ್ಮ ಮನೆಯಲ್ಲಿ ಕರುವೊಂದು ಕೆರೆಗೆ ಬಿದ್ದು ಸತ್ತು ಹೋಯಿತು. ನಮಗದು ತಿಳಿಯದೆ ಎಲ್ಲೆಲ್ಲೊ ಹುಡುಕಿದೆವು. ಮರುದಿನ ನಮಗೆ ತಿಳಿಯಿತು, ಅದು ಕೆರೆಗೆ ಬಿದ್ದ ವಿಷಯ."

ವಿಷಾದವಾಣಿ ಒಡಲಾಳದಿಂದ ಹರಿದು ಬಂತು. ಖಿನ್ನ ಮುಖಿಯೊದಳು ಶಿವಾನಿ.

○ ○ ○ ○

ರಾಮಶ್ರೇಷ್ಠಿ ಕಲ್ಯಾಣ ಮಂಟಪದಲ್ಲಿ ಸರಸುವಿನ ಸಂಲಗ್ನ.

ಸಾವಿರಾರು ಮಂದಿಯು ಆನಂದ–ಉತ್ಸಾಹಗಳ ಸಮಾವೇಶ.

ಹೆಣ್ಣಿಗೆ ತಕ್ಕನಾದ–ಸೂಕ್ತವರ ಲಭಿಸಿದನೆಂದು ಹೆತ್ತವರಿಗೆ–ನಿಕಟ ಸಂಬಂಧಿಗಳಿಗೆ ಅತೀವ ಆನಂದ. ಸಡಗರ-ಸಂಭ್ರಮಗಳು ಉಕ್ಕುತ್ತಿವೆ. ಗೆಳತಿಯ ವಿವಾಹ ಮಹೋತ್ಸವದಲ್ಲಿ ಭಾಗವಹಿಸಿದ್ದ ಕುಮುದ್ವತಿಗೆ ಮೈಯೆಲ್ಲಾ ಹುರುಪು.

ಮುಂಬಾಗಿಲಿನಲ್ಲಿ ಸ್ವಾಗತಕಾರಿಣಿಯಾಗಿ ನಿಂತ ಅವಳೊಂದು ಅತ್ಯಾಕರ್ಷಕ ಮೂರ್ತಿ ಎಲ್ಲರ ಕಂಗಳಿಗೆ. ರಾಮನಾಥ ಅವಳನ್ನು ಕಂಡು ಸಂತುಷ್ಟನಾಗಿ ಹಾಸ್ಯರಸ ಹರಿಸಿದ,

"ಏನಮ್ಮಾ ಕುಮುದ್ವತಿ, ನಿನ್ನ ಮದುವೆ ಯಾವಾಗ ?"

"ಲಗ್ನ ಫಲ ಕೂಡಿ ಬಂದಾಗ..."

ಹುಡುಗಿಯ ದಿಟ್ಟತನದಿಂದ ಬೆಚ್ಚಿದರೂ ಹರ್ಷಿತನಾದ ರಾಮನಾಥ. ಅವಳ ಧೀರ ಸುಂದರ ವ್ಯಕ್ತಿತ್ವ ಮನವನ್ನು ಸೂರೆಗೊಂಡಿತು. ಇದ್ದರೆ ಹುಡುಗಿಯರು ಹೀಗಿರಬೇಕು ಎಂದುಕೊಂಡ ತನ್ನಲ್ಲಿ. ದೇವಯ್ಯ ದಂಪತಿಗಳು ಮನೋಭಿತ್ತಿಯಲ್ಲಿ ಸುಳಿಸುಳಿದರು. ಇಬ್ಬರೂ ಎಷ್ಟೊಂದು ಸಹಾಯ ಹಸ್ತ ನೀಡುತಿದ್ದಾರೆ. ನನ್ನ ಬಗ್ಗೆ ಅವರಿಗೆ ತುಂಬಾ ಮರುಕ-ಸ್ನೇಹ-ಗೌರವ–ಪ್ರೇಮ ಇತ್ಯಾದಿಗಳ ಭಂಡಾರವೇ ಇದೆ. ಅವರು ಮನಸ್ಸು ಮಾಡಿದರೆ ನನ್ನ ಮನೆಯ ದೀಪ ಬೆಳಗುತ್ತದೆ. ನನ್ನ ಸಂಕಷ್ಟ ಹರಿದು ಸುಖಕರವಾಗುತ್ತದೆ ಎಂಬ ಯೋಚನೆ ತಲೆಯಲ್ಲಿ ಹುಚ್ಚೆದ್ದು ನರ್ತಿಸಿತು. ವೃದ್ಧಾಪ್ಯ ಯುವಾವಸ್ಥೆಗಿಳಿಯಿತು ನೇರವಾಗಿ ಮನೆಗೆ ಬಂದ.

ಎಲ್ಲಿ, ಯಾವ ಕಡೆ ನೋಡಿದರೂ ಅಳಿದ ಮಡದಿಯುರ ಸ್ಮಾರಕವೇ. ಸೀರೆ-ಬಟ್ಟೆಗಳು, ಒಡವೆ-ವಸ್ತುಗಳು, ಸಂಸಾರದ ಸಕಲ ವಸ್ತು ವಸ್ತುಗಳು ಬದುಕಿನ ಸುಂದರ ಸಂಪುಟವನ್ನು ಸಾರಿ ಹೇಳುತ್ತವೆ. ಭಗವಂತ ನಿಷ್ಕರುಣಿ. ಇಬ್ಬರೊಳಗೆ ಯಾರಿದ್ದಿದ್ದರೂ ನನಗೇನೂ ಕೊರತೆಯಾಗುತ್ತಿರಲಿಲ್ಲ. ಚಿನ್ನದಂತಹ ಮಡದಿಯರನ್ನು ಕೊಟ್ಟು ಕೊರಳು ಹಿಸುಕಿದ.

ಎರಡೂ ಕಣ್ಣುಗಳಲ್ಲಿ ಕಂಬನಿಯ ಕೋಡಿ ಹರಿದು ಹೋಯಿತು. ಮುಖ ಮಡಿಯಾಗಿ ಹಾಸಿಗೆಯ ಮೇಲೆ ಮಲಗಿದ. ಮಡದಿಯ ಸ್ಥಾನ ತೆರವಾದ ಬರೀ ಮಂಚ. ಗೃಹಿಣಿ ಇಲ್ಲದ ಗೃಹ ಜೀವಾಳವಿಲ್ಲದ ಬರೀ ಬದುಕು.

ಯೋಚನೆಯ ತೇಜಿ ಅಲ್ಲಿಗೆ ಗಕ್ಕನೆ ನಿಂತು ಹೋಯಿತು.

ದೇವಯ್ಯ ಒಮ್ಮೆ ಹೇಳಿದ್ದ—"ನನ್ನ ಮಗಳು ಯಾವ ವರವನ್ನೂ ಒಪ್ಪಿಕೊಳ್ಳುತಿಲ್ಲ. ಅವಳ ಮದುವೆಯಾಗಿದ್ದರೆ ನನಗೆ ನಿಶ್ಚಿಂತೆಯಾಗುತಿತ್ತು. ಗಂಡು ಮಕ್ಕಳು ನಮ್ಮನ್ನು ನೋಡುವವರಲ್ಲ. ಅವಳು ಹತ್ತಿರವಿರಲಿ ಎಂಬ ಆಸೆ ನಮಗೆ. ಆದರೆ, ಅವಳು ಯಾರನ್ನೂ ಒಪ್ಪಿಕೊಳ್ಳದೆ ಇರುವುದು ನನಗೆ ಸಮಸ್ಯೆಯಾಗಿದೆ. ಕೇಳುವವರಿಗೆ ಲೆಕ್ಕವೇ ಇಲ್ಲ. ಇವಳು ಮಾತ್ರ ಸುತರಾಂ ಒಪ್ಪಿಕೊಳ್ಳುತ್ತಿಲ್ಲ. ಮಗಳು ಸರಿಯಾದ ಮನೆ ಸೇರಿದರೆ ಸಾಕಾಗಿದೆ."

ದೇವಯ್ಯ ಗೇಣಿ ವಕ್ಕಲುದಾರ. ಈ ಇಳಿ ವಯುಸ್ಸಿನಲ್ಲಿ ಉತ್ತಿ ಬಿತ್ತಿ ಗೇಣಿ ಕೊಟ್ಟು ಪೂರೈಸಲಾರ. ಕುಮುದ ನನ್ನನ್ನು ಒಪ್ಪಿಕೊಳ್ಳುವುದಾದರೆ ದೇವಯ್ಯ ದಂಪತಿಗಳನ್ನು ನಾನೇ ಚಿನ್ನದಂತೆ ನೋಡಿಕೊಳ್ಳುತಿದ್ದೆ. ದೇವರು ಕೃಪೆದೋರಬೇಕು....

ಅದೇ ಯೋಚನೆಯಲ್ಲಿ ಮೈಮೇಲೆ ಹೊದ್ದಿಕೆಯನ್ನೆಳೆದುಕೊಂಡ.

...ನಲ್ಮೆಯ ಮಡದಿ ಪದ್ಮ ಶಯ್ಯಾ ಪ್ರಾಂತ್ಯದಲ್ಲಿ ಕುಳಿತಿದ್ದಾಳೆ. ಮುಖಭಾವದಲ್ಲಿ ಜೇನಿನ ಸಿಹಿ ಮುದ್ರೆ. ಕಣ್ಣುಗಳಲ್ಲಿ ಎಲ್ಲೋ ಅಲಕ್ಷಿತ

ಜೀವಕಳೆ ಬಂದು ನೆಲಸಿ ಬೆಳಗುತ್ತಿದೆ. ಗೃಹಿಣೀ ಧರ್ಮದ ಬೊಂಬೆಯೇ ಆದ ಅವಳ ಸಾಮೀಪ್ಯ ಜೀವವನ್ನು ಪುಳಕಿಸಿತು. ರಾಮನಾಥ ಕೈಯನ್ನು ಅದುಮಿ ಹಿಡಿದುಕೊಂಡು ರಮಿಸುವ ಧ್ವನಿಯಲ್ಲಿ ಕೇಳಿದ,

"ನನ್ನನ್ನು ಬಿಟ್ಟು ಹೋದೆಯೇಕೆ ? ನನ್ನಿಂದ ಏನು ತಪ್ಪಾಗಿತ್ತು ?"

"ನಿಮ್ಮಿಂದ ಯಾವ ತಪ್ಪೂ ಆಗಲಿಲ್ಲ. ಭಗವಂತನ ಕರೆಗೆ ಓಗೊಟ್ಟೆ. ಇನ್ನು ಮುಂದೆ ನೀವು ದುಃಖಿಯಾಗಿಯೇ ಉಳಿಯಬಾರದು. ಕುಮುದ್ವತಿ ನನ್ನ ನೆಚ್ಚಿನ ಗೆಳತಿ. ಅವಳನ್ನು ಕೈಹಿಡಿದು ಸುಖವಾಗಿರುವುದು ಲೇಸು."

"ನಿಜವಾಗಿಯೂ ಇದು ನಿನ್ನಿಚ್ಛೆಯೇ ಪದ್ಮಾ ?"

"ಹೌದು...."

ಕನಸಿನಲೋಕ ಅಳಿಯಿತು...ಕಣ್ಣುಜ್ಜಿಕೊಂಡು ಬಿರುಬಿರನೆ ನೋಡಿದ. ಎಲ್ಲಿಯೂ ಪದ್ಮಳ ಸುಳಿವಿಲ್ಲ. ಎದ್ದು ಕುಳಿತ. ಕನಸಿನ ಚಿತ್ರ ಮನಃಪಟಲದ ಮೇಲೆ ನಲಿಯಿತು. ರಾಮನಾಥ ಎದ್ದು ಹೊರಬಂದ. ಮನೆಯ ತುಂಬಾ ಪದ್ಮಳ ಚಿತ್ರ ಮೂಡಿ ಮೂಡಿ ಮಾಯವಾಯಿತು.

ಜಗುಲಿಯ ಮೇಲಿದ್ದ ಜೂಲಿ ನಾಯಿ ಬೊಗಳುತ್ತ ಅಂಗಳಕ್ಕೋಡಿತು.

ನೋಡಿದರೆ ವಸಂತ ಮಡದಿಯೊಡನೆ ಜಗಲಿ ಹತ್ತಿ ಒಳ ಬರುತಿದ್ದ.

"ಏನಪ್ಪಾ....? ಮಕ್ಕಳು ಚೆನ್ನಾಗಿದ್ದಾರೆಯೇ ?"

ಅಂದು ಪದ್ಮಳ ಮಸಣಯಾತ್ರೆ ಮುಗಿಸಿ ಹೋದವನು ಇದುವರೆವಿಗೂ ಇತ್ತ ಮುಖ ಹಾಕಿರಲಿಲ್ಲ. ಅಲ್ಲದೆ ಸಹಾಯ ಮಾಡುವ ಗೋಜೂ ಇಲ್ಲ. ಅಂತಹವನ ಮುಖ ನೋಡುವುದೂ ಬೇಡ ಎನಿಸುವಷ್ಟು ಜಿಗುಪ್ಸೆ ಮನಸ್ಸಿಗೆ. ಬಂದುದಕ್ಕೆ ಮಾತಾಡಿಸುವ ಶಾಸ್ತ್ರ ಮಾಡಿದ ರಾಮನಾಥ.

"ಸುಮ್ಮನೆ ಬಂದೆ."

ತೀರ ಅಸಡ್ಡೆಯಿಂದ ತನ್ನ ಕೆಲಸಕ್ಕೆ ಗಮನಕೊಟ್ಟ ರಾಮನಾಥ. ಎಡ ಪಕ್ಕದ ಅಂಗಳದಲ್ಲಿ ತೆಂಗಿನಕಾಯಿಗಳನ್ನು ಸುಲಿಯುತಿದ್ದರು ಇಬ್ಬರು

ಆಳುಗಳು. ಅವುಗಳಲ್ಲಿ ಚಿಕ್ಕದು–ದೊಡ್ಡದುಗಳನ್ನು ಬೇರ್ಪಡಿಸುವುದು ಮತ್ತು ಕೊಠಡಿಯಲ್ಲಿ ಜೋಡಿಸುವುದು ಹೀಗೆ ನಡೆಯುತಿತ್ತು ಕೆಲಸ.

ಆ ಕಡೆ ಹೋದ ರಾಮನಾಥ. ವಸಂತ ಮಡದಿಯೊಡನೆ ಒಳ ಹೊರಗೆ ಓಡಾಡಿ ತಂದೆಯಿದ್ದಲ್ಲಿಗೆ ಹೋಗಿ "ಅಪ್ಪಾಜೀ ನಾನು ಇನ್ನು ಮುಂದೆ ಇಲ್ಲಿಯೇ ಇರುವುದೆಂದು ತೀರ್ಮಾನಿಸಿರುವೆ" ಎಂದ.

"ಬೇಡಪ್ಪಾ, ಬೇಡ. ನನ್ನ ಕಾಲ ಹೇಗಾದರೂ ಕಳೆಯುತ್ತೆ. ಆಳುಗಳಿದ್ದಾರೆ, ಚಿಂತೆಯಿಲ್ಲ."

ಆ ಮಾತಿನಿಂದ ಮುಖಭಂಗವಾಯಿತು ವಸಂತನಿಗೆ. ಸೆಟೆದುಕೊಂಡಂತೆ ಗಂಭೀರಭಾವದಿಂದ ನಿಂತ. ಬುಸುಗುಟ್ಟಿತು ಜೀವ. ಸಿಟ್ಟಿನ ಜರಿ ನೈಯ್ಯಲ್ಲಿ ಜರ್ರನೆ ಹರಿದಾಡಿತು.

ಅದೇ ವೇಳೆಗೆ ದೇವಯ್ಯ ದಂಪತಿಗಳು ಆಗಮಿಸಿದರು.

ವಸಂತ ಅವರನ್ನು ದುರುಗುಟ್ಟಿ ತಿರಸ್ಕಾರದಿಂದ ನೋಡಿ ಮಡದಿಯೊಡನೆ ಹೊರಟುಬಿಟ್ಟ. ಉರಿಬತ್ತಿಗಳು ನಡೆದಂತೆ ತೋರಿತು ಅಪರದ್ವೇಶದಿಂದ ನೋಡಿದರೆ ಪಂಪತಿಗಳ ಚಿತ್ರ.

ರಾಮನಾಥ ದೇವಯ್ಯ ದಂಪತಿಗಳನ್ನು ಸಂತುಷ್ಟನಾಗಿ ಸ್ವಾಗತಿಸಿ "ಬನ್ನಿ, ಬನ್ನಿ ನೀವು ಬಂದರೆ ನನ್ನ ಭಾಗದ ದೇವತೆಗಳೇ ಬಂದಂತಾಗುತ್ತೆ."

"ಅಯ್ಯೋ ಅಷ್ಟೊಂದು ಹೆಚ್ಚಾಗಿ ಭಾವಿಸಬೇಡ. ಕಳೆದ ವರ್ಷ ಕೆಳಮನೆ ನಾರಾಯಣನ ಹೆಂಡತಿ ತೀರಿಕೊಂಡಾಗ ಸೋಮಣ್ಣನ ಹೆಂಡತಿ ಹಾಸಿಗೆ ಹಿಡಿದಾಗ ಹೀಗೆಯೇ ಹೋಗಿ ಅಲ್ಪಸ್ವಲ್ಪ ಸಹಾಯ ಮಾಡುತಿದ್ದೆ. ಕಷ್ಟ ಅಂದ ಮೇಲೆ ಅಷ್ಟೂ ಮಾಡದಿದ್ದರೆ ಮನುಷ್ಯತ್ವ ಏನುಳಿಯಿತು?"

"ಇಷ್ಟು ತಿಳಿದುಕೊಂಡವರು ನಮ್ಮಲ್ಲಿ ವಿರಳ–ತುಂಬಾ ವಿರಳ. ದೇವರು ನಿಮ್ಮನ್ನು ನೂರ್ಕಾಲ ಇಟ್ಟಿರಬೇಕು."

ದೇವಯ್ಯ ನಕ್ಕುಬಿಟ್ಟ "ಮುದಿತನದಲ್ಲಿ ನೋಡುವವರಾರು?"

"ಭಗವಂತ ಮತ್ತು ನಾನು. ಇಲ್ಲಿ ಕೇಳಿ, ನಿಮ್ಮನ್ನು ನನ್ನ ಕೈಲಾದಷ್ಟು ಮುತುವರ್ಜಿಯಿಂದ ನೋಡಿಕೊಳ್ಳುವೆ. ಇಲ್ಲಿಯೇ ಇದ್ದುಬಿಡಿ. ನಿಮ್ಮಂತಹ ಸಭ್ಯ ಗೃಹಸ್ಥರು ನನಗೆ ಬೇಕು. ನೀವೇನೂ ಕೆಲಸ ಮಾಡದೆ ಸುಮ್ಮನಿದ್ದರೂ ಸಾಕು. ನಿಮ್ಮ ಆಶೀರ್ವಾದ ಬೇಕು ಅಷ್ಟೇ."

"ಅಯ್ಯೋ, ನಮ್ಮದೇನು ಆಶೀರ್ವಾದ ಹೇಳು? ಭಗವಂತನ ಆಶೀರ್ವಾದವಿರಬೇಕು."

ಬಂದಾಗಲೇ ಒಳಹೊಕ್ಕಿದ್ದ ಸೀತಮ್ಮ ಸಾರು ಪಲ್ಯ ಮಾಡಿಟ್ಟು ಎರಡು ಬಸಿ ಕಾಫಿಯೊಡನೆ ಹೊರಬಂದಳು.

ರಾಮನಾಥ ಕಾಫಿಯನ್ನು ವಿನಯಪೂರ್ವಕವಾಗಿ ತೆಗೆದುಕೊಳ್ಳುತ್ತ ನುಡಿದ,

"ನೀವಂತೂ ಬಹಳ ಶ್ರಮ ವಹಿಸುತ್ತೀರಿ."

"ನಿತ್ಯ ಮನೆಯಲ್ಲಿ ಮಾಡುವ ಕೆಲಸವಲ್ಲವೆ ಇದು ?"

"ಆಗಲಿ, ಎಷ್ಟು ಮಂದಿ ಹೀಗೆ ಬಂದಾರು? ನೀವು ಮನಸ್ಸು ಮಾಡಿದರೆ..."

ಅಷ್ಟಕ್ಕೆ ಮಾತು ಮುಗಿಸಿ ಉಗುಳು ನುಂಗಿದ ರಾಮನಾಥ.

"ಅದೇಕೆ ಅಷ್ಟಕ್ಕೇ ಸುಮ್ಮನಾದಿರಿ ?"

"ನೋಡಿ ಅಮ್ಮಾ, ನನ್ನ ಶರೀರ ದೃಢವಾಗಿದೆ. ಆಸ್ತಿ ಮನೆ ದೃಢವಾಗಿದೆ. ಮಕ್ಕಳಿಗೆ ಪಾಲು ಕೊಟ್ಟಾಗಿದೆ. ಇಲ್ಲಿ ತಲೆನೋವು ಅಶಾಂತಿಗಳಿಲ್ಲ. ನೀವು ಹತ್ತಿರದಲ್ಲಿದ್ದೀರಿ. ನಿಮಗೆ ನನ್ನನ್ನು ಸಂಪೂರ್ಣ ಒಪ್ಪಿಸಿಕೊಂಡು ಬಿಡುವೆ. ನೀವು ಮನಸ್ಸು ಮಾಡಿದರೆ ಮುಂದೆ ಸುಖವಾಗಿ ನಡೆಸಿಕೊಂಡು ಹೋಗಬಹುದು."

ದಂಪತಿಗಳು ಮರು ನುಡಿಯದೆ ಅವನನ್ನೇ ಮಿಕಿಮಿಕಿ ನೋಡಿದರು.

ಅವನು ಮುಂದುವರಿದ "ನಿಮಗೆ ಕೈಮುಗಿದು ಕೇಳಿಕೊಳ್ಳುವೆ. ಈ ವಯಸ್ಸಿನಲ್ಲಿ ಗೇಣಿಗೆ ಜಮೀನು ಉತ್ತು ಬಿತ್ತುವುದು ಎಷ್ಟು ಕಷ್ಟ? ನೀವು

ಕುಮುದನನ್ನು ನನಗೆ ಕೊಟ್ಟು ನೀವೂ ಇಲ್ಲೇ ಇದ್ದುಬಿಡಿ. ಮುಂದೆ ನಮ್ಮ ಗಳ ಜೀವನವೂ ಸುಗಮವಾಗುತ್ತೆ. ದಯವಿಟ್ಟು ಮನಸ್ಸು ಮಾಡಿ."

ಅವನ ತಾಯಿ ತಂದೆಯರು ಮರಣಿಸಿ ಹತ್ತಿರ ಹತ್ತಿರ ಹತ್ತು ವರ್ಷ ಗಳೇ ಸಂದುವು. ಜೊತೆಯಲ್ಲಿ ಹುಟ್ಟಿದ ತಂಗಿ ತಮ್ಮಂದಿರಲ್ಲಿ ಮೂವರು ಗತಿಸಿ ಇಬ್ಬರು ತಂಗಿಯರು ಮಾತ್ರ ಉಳಿದಿದ್ದಾರೆ. ಹಿರಿಯ ತಂಗಿ ನಾಗು ಆಗಾಗ ಬಂದು ಹೋಗುತ್ತಾಳೆ. ಕಿರಿಯ ತಂಗಿ ಸಾವಿತ್ರಿಗೆ ಸಂಸಾರ ದೊಡ್ಡದು. ಅವಳು ಬಂದು ಹೋಗುವುದು ಕಡಿಮೆ. ಆದ್ದರಿಂದ ದೇವಯ್ಯ ದಂಪತಿಗಳ ಮೇಲೆಯೇ ನೆಚ್ಚು ರಾಮನಾಥನಿಗೆ.

ಅವನ ದೈನ್ಯಯುತ ಕೇಳಿಕೆಗೆ ಏನು ಹೇಳಬೇಕೋ ತಿಳಿಯಲಿಲ್ಲ ದಂಪತಿ ಗಳಿಗೆ. ಸ್ವಲ್ಪ ಹೊತ್ತು ಸುಮ್ಮನಿದ್ದು ದೇವಯ್ಯ ಅಂದ "ನೋಡೋಣ, ಮಗಳು ಒಪ್ಪಬೇಕಲ್ಲ."

"ಆ ಮಗಳು ಒಪ್ಪಿದರೆ ಸಾಕು" ಎಂದು ಹಾರೈಸಿತು ರಾಮನಾಥನ ಚಿತ್ತ.

ದಿನಗಳ ಗಾಲಿ ಉರುಳಿದುವು. ತಿಂಗಳ ಮಾನ ಕಳೆದುವು.

ಗದ್ದೆ ಗಣ್ಣಗಳ ಕೊಯ್ಲು, ಅಡಕೆ ಕಬ್ಬುಗಳ ಕೊಯ್ಲು ಒಂದೊಂದಾಗಿ ಒದಗಿದುವು. ಕೆಲಸದ ಗಡಿಬಿಡಿಯಲ್ಲಿ ನಿಮಿಷವೂ ಬಿಡುವು ದೊರೆಯುತ್ತಿಲ್ಲ. ಅಂಗಳದ ತುಂಬೆಲ್ಲಾ ಕಾರ್ಮಿಕರು. ಅಂಗಳದಾಚೆ ನಸು ತಗ್ಗಿನ ಕಣದಲ್ಲಿ ಕಬ್ಬಿನ ಆಲೆಮನೆ ನಡೆಯುತಿತ್ತು. ಇಪ್ಪತ್ತು ಮೂವತ್ತು ಮಂದಿಗೆ ಚಪ್ಪರ ದಲ್ಲಿ ಊಟ. ಮೂರು ಮಂದಿ ಅಡಿಗೆಯ ಹೊಣೆಯನ್ನು ಹೊತ್ತಿದ್ದಾರೆ. ಕೆಲಸ ಅಂದರೆ, ಎಷ್ಟು ಮಾಡಿದರೂ ಮುಗಿಯದ ಕೆಲಸವೇ.

ರಾಮನಾಥ ದೇವಯ್ಯನ ಗದ್ದೆ ಕಾಮಗಾರಿಗೆ ಆಳುಗಳನ್ನು ಕಳುಹಿಸಿ ಕೊಡುತ್ತಿದ್ದುದರಿಂದ ದೇವಯ್ಯ ದಂಪತಿಗಳಿಗೆ ಎಷ್ಟೋ ಉಪಕಾರ.

"ಈ ಸಲಿ ಗೇಣಿ ಕೊಟ್ಟ ಮೇಲೆ ಜಮೀನು ಬಿಟ್ಟುಬಿಡಿ. ಇನ್ನು ಮುಂದೆ ನೀವು ವ್ಯವಸಾಯ ಮಾಡಲಾರಿರಿ."

ರಾಮನಾಥ ಹೇಳಿದ ದೇವಯ್ಯನನ್ನು ಕುರಿತು.

"ಜಮೀನು ಬಿಟ್ಟ ದಿನವೇ ಮನೆ ಬಿಡಬೇಕಲ್ಲ, ಅದೇ ನಮಗೆ ಬಂದಿರುವ ಕಷ್ಟ."

"ಖಂಡಿತಾ ನಾನು ಹೇಳಿದ ಸೂತ್ರಕ್ಕೆ ಒಪ್ಪಿಕೊಳ್ಳಿ. ಇಲ್ಲಿ ಕೊಠಡಿಗಳಿಗೇನು ಕೊರತೆ? ಮನೆಗೇನು ಕೊರತೆ? ಸುಮ್ಮನೆ ಬಿಟ್ಟುಕೊಟ್ಟು ಬಂದು ಬಿಡಿ. ನನಗೂ ತಾಯಿ ತಂದೆಗಳಿಲ್ಲ. ಇನ್ನು ಮೇಲೆ ನೀವೇ ತಾಯಿ ತಂದೆ ನನಗೆ. ನಿಶ್ಚಿಂತೆಯಿಂದ ಮನಸ್ಸು ಮಾಡಿ."

ದೇವಯ್ಯ ತನ್ನಲ್ಲೇ ಗಂಭೀರವಾಗಿ ಯೋಚಿಸಿದ. ಎದೆಯಲ್ಲಿ ಆಶಾಂಕುರವಾಯಿತು. ಆ ವೈಭವೋಪೇತ ಜೀವನ ಕೈಬೀಸಿ ಕರೆಯುತ್ತದೆ.

ಆದರೆ,

ಕಾದು ಕಂಡಂತೆ ಸಣ್ಣದೊಂದು ತೊಡಕು. ಸಂತಸದೆಡೆಯಲ್ಲಿ ಮುಳ್ಳಿನ ಚುಂಬಕ. ಇದನ್ನು ಮಗಳ ಮುಂದೆ–ಪೌರುಷೇಯ ಭಾವದ ಮಗಳ ಮುಂದೆ ಇಡುವುದೆಂತು? ಅವಳು ಒಪ್ಪಿಯಾಳೇ? ಅದೇ ಸಂಶಯ. ಅದೇ ಅಪೂರ್ಣ ಆಶಾಬಿಂದು. ಹೇಗೆ ಇದರ ಪರಿಹಾರ? ಅದೇ ಅರ್ಥವಾಗುತ್ತಿಲ್ಲ...

ಎದೆಯ ಹಕ್ಕಿ ಚೀರಿತು. ಮನಸ್ಸು ತೂಗುಯ್ಯಾಲೆಯೇರಿತು.

ಆದರೇನು?

ಹರಿಣಾಪಿ ಹರೇಣಾಪಿ ಬ್ರಹ್ಮಣಾಪಿ ಸುರೈರಪಿ ।
ಲಲಾಟ ಲಿಖಿತಾ ರೇಖಾ ಪರಿಮಾರ್ಷ್ಟುಂ ನ ಶಕ್ಯತೆ ॥

— ೦ —

ಬೆಳಗಿನ ಹತ್ತರ ಸಮಯ.

ಗದ್ದೆ ತೋಟದ ಕಡೆ ಒಂದು ಸುತ್ತು ಹಾಕಿ ಬಂದಿದ್ದ ವಸಂತ.

ಅವನಿಗೆ ದಿನದಿನವೂ ಕುಡಿತದ ಗೀಳು ಅಂಟೆ ವೃದ್ಧಿಸುತಿತ್ತು. ಜೊತೆಗೆ ಅನಾರೋಗ್ಯದ ನಂಟು. ಯಾವು ಯಾವುದೋ ಸಣ್ಣ ಪುಟ್ಟ ರೋಗಗಳ ಗಂಟು.

ಉಸ್ಸೆನ್ನುತ್ತ ಕುರ್ಚಿಯ ಮೇಲೆ ಕುಳಿತ. ಮಡದಿ–ಮೋಹಿನಿ ಚಹದ ಬಸಿಯನ್ನು ತಂದು ಕೊಟ್ಟು ತಾನೂ ಕುಳಿತಳು ಅಲ್ಲಿಯೆ.

"ಚಿಕ್ಕಮ್ಮ ತೀರಿಕೊಂಡಾಯ್ತು. ಇನ್ನು ಅಪ್ಪಾಜಿ ಆಸ್ತಿಯನ್ನೆಲ್ಲಾ ಯಾರು ಯಾರಿಗೋ ಬರೆಯಲೂ ಹೇಸುವುದಿಲ್ಲ. ನಮ್ಮನ್ನು ದೂರ ಮಾಡಿಕೊಂಡಿರುವುದೇ ಅದಕ್ಕೆ. ನಾವು ಪಾಲು ಪಡೆದುಕೊಂಡರೇನಂತೆ ? ಉಳಿದ ಆಸ್ತಿಯೂ ನಮ್ಮ ಭಾಗಕ್ಕೆ ಸಲ್ಲಬೇಕು. ಆಸ್ತಿಯನ್ನು ಹೇಗಾದರೂ ನಾವು ಬರೆಸಿಕೊಳ್ಳುವುದುತ್ತಮ. ಹೇಗೆ ಮಾಡಿದರೆ ಆದೀತೋ ತಿಳಿಯುವುದಿಲ್ಲ. ಇಷ್ಟಕ್ಕೂ ಬರೆದುಕೊಡಬೇಕಲ್ಲ ? ಅದೇ ಚಿಂತೆಯಾಗಿದೆ. ಆ ದೇವಯ್ಯ ಹೆಂಡತಿ ಕರೆದುಕೊಂಡು ಪದೇ ಪದೇ ಬರುತ್ತಿರುವುದು ನೋಡಿದರೆ, ಅವನು ಮಗಳನ್ನು ಕೊಡಲು ಗಿಲೀಟು ಮಾಡುತಿದ್ದಾನೆ ಎನಿಸುತ್ತೆ !"

"ಹೌದು, ಅವಳಿಗೆ ವಯಸ್ಸೂ ಆಗಿದೆ. ಯಾರೂ ಮದುವೆಯಾಗಿಲ್ಲ. ಅದೇ ಆಟ ಹೂಡಿರಬಹುದು. ಅದಾದರೆ ನಮಗೆ ಚಿಕ್ಕಾಸೂ ಲಭಿಸುವುದಿಲ್ಲ."

"ಖಂಡಿತಾ...ಇನ್ನು ಮದುವೆಯಾಗದಂತೆ ತಡೆಯಬೇಕು."

"ದೇವಯ್ಯನನ್ನು ಮನೆ ಹತ್ತಿರ ಸುಳಿಸುದಂತೆ ದೂರಮಾಡಿ."

ಅದನ್ನೇ ಕುರಿತು ಯೋಚಿಸಿದ ವಸಂತ.

ಸ್ವಲ್ಪ ಹೊತ್ತು ಉರುಳುವುದರೊಳಗಾಗಿ ವಾಸು ಆಗಮಿಸಿದ.

"ನಿಮಗೊತ್ತೇ? ದೇವಯ್ಯ ಹೆಂಡತಿಯೊಡನೆ ಸದಾ ಈಗ ನಮ್ಮ ಮನೆಯಲ್ಲೇ. ಅಪ್ಪಾಜಿಯ ಸಖ್ಯ ಚೆನ್ನಾಗಿ ಬೆಳೆಸಿಕೊಂಡಿದ್ದಾನೆ. ಅವರವರ ಸ್ನೇಹ ಆಸ್ತಿ ಹೊಡೆದುಕೊಳ್ಳುವುದಕ್ಕೆ ದಾರಿ."

"ಇದಕ್ಕೇನು ಪರಿಹಾರ?"

"ಆ ದೇವಯ್ಯನನ್ನು ಮನೆ ಹತ್ತಿರ ಸುಳಿಯಗೊಡದಂತೆ ಓಡಿಸುವುದು ಸರಿಯಾದ ಕ್ರಮ."

"ಅಪ್ಪಾಜಿಯೇ ಸಖ್ಯ ಬೆಳೆಸಿಕೊಂಡ ಮೇಲೆ ನಾವು ಮಾಡುವುದೇನು ? ಹೊಟ್ಟೆಯ ಮಕ್ಕಳು ಬೇಕಿಲ್ಲ ಅಪ್ಪಾಜಿಗೆ. ಇಂಥ ಕೀಳು ಜನ ಬೇಕು!" ತುಟಿ ಕಚ್ಚಿದ ವಾಸು.

"ನಾವು ಬಂಡೇಳದಿದ್ದರೆ ಆಗುವುದಿಲ್ಲ."

"ಆಸ್ತಿಯನ್ನು ಈಗಲೇ ನಮ್ಮ ಹೆಸರಿಗೆ ಬರೆದು ರಿಜಿಸ್ಟರ್ ಮಾಡಿಸಿ ಕೊಡಿ ಎಂದು ಒತ್ತಾಯಿಸುವುದು ಒಳ್ಳೆಯದು. ಅವರಿರುವತನಕ ಅವರಿಗಿರಲಿ. ಅನಂತರ ಆಸ್ತಿ ನಮಗೆ ಸಲ್ಲಬೇಕು. ನಾವು ಇಬ್ಬರೂ ಹೋಗಿ ಕೇಳೋಣವೇ ? ಅಥವಾ ಇನ್ನೇನಾದರೂ ಬೇರೆ ಮಾರ್ಗ ಇದೇಯೇ ?"

"ಬೇರೆ ಮಾರ್ಗ ಏನೂ ತೋಚುತ್ತಿಲ್ಲ. ಒಮ್ಮೆ ಹೋಗಿ ಕೇಳೇ ಬಿಡೋಣ."

ಪೂರ್ವೀ ದಿಗ್ದೇಶದಲ್ಲಿ ಕಾರ್ಮೋಡಗಳು ಮೇಳೈಸಿ ಸೂರ್ಯನಿಗೆ ತೆರೆ ಹಿಡಿದಿದ್ದುವು. ಎರಡು ಮೂರು ದಿನಗಳಿಂದಲೂ ನಭೋಮಂಡಲ ಕಾರ್ಮೋಡಗಳಿಂದ ತುಂಬಿಹೋಗಿದೆ. ಆಗಾಗ ಗುಡುಗು ಮಿಂಚುಗಳೂ ಕಂಡು ಬರುತ್ತವೆ. ಈದಿನ ಮಳೆ ಬಂದೇ ಬರುತ್ತೆ ಎಂಬ ದೃಢವಾದ

ನಂಬುಗೆ ಜನರಿಗೆ. ನಾಡಿಗೆ ಮಳೆ ಬೇಕಾಗಿತ್ತು ಕೂಡ. ಸ್ವಲ್ಪ ಹೊತ್ತಿನೊಳಗಾಗಿ ಎದ್ದ ಪ್ರಚಂಡ ಬಿರುಗಾಳಿ ಮಳೆ ಮೋಡಗಳನ್ನೆಲ್ಲಾ ಹೊಡೆದೋಡಿಸಿ ದಿಕ್ಕಾಪಾಲಾಗಿಸಿತು.

ಬರಬೇಕಾಗಿದ್ದ ಮಳೆ ಬರಲೇ ಇಲ್ಲ. ಜನ ನಿರಾಶೆಗೊಂಡರು.

೦ ೦ ೦ ೦

ವಾಸು ದೇವಯ್ಯನ ಮನೆಯ ಕಡೆ ಹೊರಟ, ತರಾತುರಿಯಿಂದ.

ದೇವಯ್ಯ ಗದ್ದೆಯ ಕೆಲಸ ಮುಗಿಸಿ ಜಗಲಿಯಲ್ಲಿ ಬೆಂಚಿನ ಮೇಲೆ ಕುಳಿತಿದ್ದ. ದೂರದಲ್ಲಿ ಯಾರೋ ಬರುತ್ತಿರುವುದನ್ನು ಕಾಣುತ್ತಲೂ ಕೃಷ್ಣ ಬರುತ್ತಿರಬಹುದು ಎಂದೆನಿಸಿತು. ಹಾಗೆ ನೋಡುತಿದ್ದರೆ ವ್ಯಕ್ತಿ ಸಮೀಪಗತನಾದ. ಎಂತಹ ಆಶ್ಚರ್ಯ! ಎಂದೂ ಇತ್ತ ಬರದಿದ್ದ ವಾಸುವನ್ನು ಕಂಡು ಮನಸ್ಸಿಗೆ ಸಂತಸವೇ ಮೂಡಿತು. ಎದ್ದು ಬಂದು ಅಂಗಳದಂಚಿನಲ್ಲಿ ನಿಂತು ಸ್ವಾಗತಿಸಿದ.

"ಬಾಪ್ಪಾ, ಬಾ. ನೀನು ಬಂದುದು ತುಂಬಾ ಸಂತೋಷವೇ ಆಯಿತು."

ಆದರೆ, ಅವನ ಪ್ರತಿಕ್ರಿಯೆಯೇ ಬೇರೆ. ರೋಷದಿಂದ ಸಿಡಿದೆದ್ದು ಒದರಿದ,

"ಬಾಪ್ಪಾ, ಬಾ. ಅಂತೆ! ನಿನ್ನ ಮನೆ ನೆಂಟಸ್ತಿಕೆಗೆ ಬಂದೆ ಅಂತ ತಿಳಿದೆಯೇನು ?"

"ಅಂದರೆ....? " ಅವನ ಧೋರಣೆ ಕಿಂಚಿತ್ ಅರ್ಥವಾಗದೆ ಮಿಡುಕಿ ಬಿದ್ದು ಕೇಳಿದ ದೇವಯ್ಯ.

"ನನ್ನ ಮನೆ ಹಾಳು ಮಾಡುವ ಉದ್ದಿಶ್ಯದಿಂದ ಹೋಗಿ ಅಪ್ಪಾಜಿ ಉಪಚಾರ ಮಾಡುತಿದ್ದೀ! ನಾವು ಸತ್ತು ಹೋಗಿಲ್ಲ ತಾನೇ ? ನಮ್ಮ ಮನೆ ಉಂಟು ; ನಾವುಂಟು. ನಿನ್ನದೇನಲ್ಲಿ ಪಾರುಪತ್ಯ ?"

"ಅಯ್ಯೋ, ಮಹರಾಯ ! ನಾವು ಏಕೆ ನಿಮ್ಮ ಮನೆ ಹಾಳು ಮಾಡೋಣ? ಅಲ್ಲಿ ಯಾರೂ ಇಲ್ಲವೆಂದು ಸ್ವಲ್ಪ ಕೆಲಸ ಮಾಡಿಕೊಟ್ಟು ಬರುತ್ತೇವೆ ಅಷ್ಟೆ. ಇನ್ನೇನಿಲ್ಲಪ್ಪಾ !"

"ಕೆಲಸಕ್ಕೆ ಬೇಕಾದರೆ ಆಳುಗಳಿದ್ದಾರೆ. ನೀನು ಹೋಗಬೇಕಾದ ಅಗತ್ಯವಿಲ್ಲ. ನಿನಗೂ ಅವರಿಗೂ ಏನು ಸಂಬಂಧ ? ನೆಂಟರಿಗಿಂತ ಹೆಚ್ಚಿನ ನೆಂಟನಾಗಿದ್ದಿ ಅಲ್ಲಿ !"

"ನೀನು ಸಿಟ್ಟಾಗಬೇಡ. ಅವರು ಬರುತ್ತಿರು ಎನ್ನುವುದರಿಂದ ಹೋಗಿ ಬರುತ್ತೇವೆ."

"ನೀನೇನಾದರೂ ನಿನ್ನ ಮಗಳನ್ನು ಅಲ್ಲಿಗೆ ತೂರಿಸಲು ಪ್ರಯತ್ನಿಸಿದರೆ ನಿನ್ನ ಮಗ್ಗುಲು ಮುರಿದು ಬಿಟ್ಟೇನು ಹುಷಾರ್ ! ನೀನಲ್ಲಿಗೆ ಹೋಗ ಕೂಡದು ಇನ್ನು !!"

"ನಿನಗೇಕೆ ಇಷ್ಟು ಕೋಪ ? ದೇವರು ಮಾಡಿಸಿದಂತಾಗುತ್ತೆ. ನಮ್ಮ ಪ್ರಯತ್ನ ಏನು ನಡೆದೀತು ?"

"ಅವರ ಆಸ್ತಿ ಮನೆ ಏನಿದ್ದರೂ ನಮ್ಮದೇ. ಅಲ್ಲಿಗೆ ಇನ್ಯಾರ ಪ್ರವೇಶವೂ ಕೂಡದು. ನೀನು ಕೈ ಹಾಕಿದರೆ ನಿನ್ನ ಗ್ರಹಚಾರ ಬಿಡಿಸಿ ಬಿಡುವೆ !"

ಒಳಗಿದ್ದ ತಾಯಿ ಮಗಳು ಹೊರಬಂದು ಅವನ ಉಗ್ರರೂಪವನ್ನು ನೋಡಿದರು.

ಅಬ್ಬಾ ! ಭಯಾನಕ !

ಅವನು ಆ ಕ್ಷಣವೇ ಕುಮುದ್ವತಿಯ ಕಡೆಗೆ ತೋರು ಬೆರಳು ತೋರಿ ಹಲ್ಲು ಕಚ್ಚಿ ಉಚ್ಚಧ್ವನಿಯಲ್ಲಿ ಬಿತ್ತರಿಸಿದ–"ನೀನೇನಾದರೂ ನಮ್ಮ ಮನೆಗೆ ಕಾಲಿಟ್ಟರೆ ಕಾಲು ಮುರಿದು ಕೂರಿಸಿ ಬಿಡುವೆ !"

ಆ ಮುಹೂರ್ತದಲ್ಲಿ ಏನು ಹೇಳಬೇಕೋ ತಿಳಿಯಲಿಲ್ಲ ಅವಳಿಗೆ. ಸುಮ್ಮನೆ ಮೇಣದ ಬೊಂಬೆಯಂತೆ ನಿಂತು ಬಿಟ್ಟಳು. ಆಶ್ಚರ್ಯವಿಸ್ತೃತ

ನಯನಗಳು ಅವನನ್ನು ನಿಶ್ಚಲಭಂಗಿಯಲ್ಲಿ ನೋಡಲಾರವೇ ನೋಡಿದುವು. ಅವನು ಮತ್ತೆ ಉಚ್ಚಧ್ವನಿಯಲ್ಲಿ ಒದರಿದ,

"ನಮ್ಮ ಆಸ್ತಿ ಮನೆ ದೋಚುವ ನೀಚ ಬುದ್ಧಿಗೆ ಸರಿಯಾದ ಶಾಸ್ತಿ ಮಾಡದಿದ್ದರೆ ಕೇಳು !"

ಆ ಕ್ಷಣವೇ ದಡದಡನೆ ಹೊರಟ ವಾಸು. ಅವನು ಬಿರುಗಾಳಿಯಂತೆ ಬಂದು ಹೋದುದು ಎದೆ ನಡುಗಿಸಿತು. ಮೂವರೂ ದಂಗಾಗಿ ಪರಸ್ಪರ ಮುಖವನ್ನು ನೋಡಿಕೊಂಡರು.

"ಈಗೇನು ಮಾಡುವುದು ?" ಒಂದೇ ಉಸಿರಿಗೆ ಕೇಳಿದ ದೇವಯ್ಯ.

"ನೀವು ಹೀಗಾಯ್ತು ಎಂಬುದನ್ನು ರಾಂದಾದನಿಗೆ ತಿಳಿಸಿ ಬಿಡಿ. ಕೊನೆಗೆ ಈ ದುಷ್ಟ ಏನಾದರೂ ಮಾಡಿಯಾನು ಅಪ್ಪಾಜಿ. ಸ್ವಲ್ಪ ಎಚ್ಚರಿಕೆಯಿಂದಿರುವುದು ಒಳ್ಳೆಯದು."

"ಅದೇ ಸರಿ." ಎಂದಳು ಸೀತಮ್ಮ.

ದೇವಯ್ಯ ಸ್ವಲ್ಪ ಹೊತ್ತು ಅವಾಕ್ಕಾದ. ಚಿಂತೆಯ ಕೀಟ ಮನವನ್ನು ಗುಂಗೀ ಹುಳದಂತೆ ಕೊರೆಯ ತೊಡಗಿತು. ಕುಮುದ್ವತಿ ಸಿಟ್ಟಿನಿಂದ ಹೇಳಿದಳು "ಇವನ ರೋಷ ನೋಡಿದರೆ ನನಗೂ ಹಠ ಬರುತ್ತೆ ! ಹಠಕ್ಕಾಗಿ ಮದುವೆಯಾಗಬೇಕು ಎನಿಸುತ್ತೆ ನನಗೆ ! ಇವನಿಗ್ಯಾಕೆ ಹೆದರಬೇಕು ? ಮಕ್ಕಳಿಗೆ ಪಾಲುಕೊಟ್ಟು ಹೊರ ಕಳುಹಿಸಿದ ಮೇಲೆ ಹೀಗಾಡುವುದೆಂದರೇನು? ಮದುವೆಯಾಗುವುದು ಬಿಡುವುದು ನಮ್ಮ ಇಷ್ಟ. ನೀವು ಏನಂತೀರಿ ಅಪ್ಪಾಜೀ ?"

"ನೀನೆನ್ನುವುದರಲ್ಲಿ ಅರ್ಥವಿದೆ."

"ಅಮ್ಮಾ, ನೀವೆನ್ನುವಿರಿ ?"

"ಹೌದು ಮಗಳೇ ! ಆದರೆ, ಈ ಧೂರ್ತತನಕ್ಕೇನು ಮಾಡೋಣ ? ಹೊಡೆದು ಬಡಿದು ಕೈಕಾಲು ಮುರಿದರೇನು ಗತಿ ?"

ಹುಡುಗಿ ತೀವ್ರ ಹಠ–ಸಿಟ್ಟು-ರೋಷಗಳ ಗಣಿಯಾಗಿ ನುಡಿದಳು "ಇದಕ್ಕೋಸ್ಕರವೇ ನಾವು ಬಲು ಬೇಗನೆ ಮದುವೆಯಾಗಬೇಕು. ಇಷ್ಟುದಿನ ನೀವು ಹೇಳಿದಕ್ಕೆಲ್ಲಾ ನಾನು ಕಿವಿ ಕೊಡುತ್ತಿರಲಿಲ್ಲ. ಈಗ ನೋಡಿದರೆ ಇವನಿಗೆ ಪಾಠ ಕಲಿಸಬೇಕು ಎನಿಸುತ್ತೆ !"

ಮೂವರಿಗೂ ಆ ದಿನವೆಲ್ಲಾ ಅದೇ ಯೋಚನೆ. ಯೋಚಿಸಿ ಯೋಚಿಸಿ ಆದ ಅಂತ್ಯ ತೀರ್ಮಾನವೆಂದರೆ ತಕ್ಷಣವೇ ಮದುವೆಯಾಗಿ ಸಂಸಾರ ಹೂಡುವುದು ಎಂದು. ಆದರಿಂದ ತಂದೆ–ತಾಯಿಗಳಿಗೆ ಸಂತಸವಾದರೂ ಮುಂದೇನು ಗಂಡಾಂತರವೊ ಎಂಬ ಭಯ–ಅಳುಕು ಮನದಾಳದಲ್ಲಿ.

ಎಂದಿನಂತೆ ತಂದೆ ತಾಯಿಯರಿಬ್ಬರೂ ಹೊರಟರು ಪದ್ಮಾಲಯಕ್ಕೆ. ಅರ್ಧ ಹಾದಿ ಕಳೆದಿತ್ತೇನೋ ಆಗಲೇ ಎದುರಾದ ಧೂರ್ತ ವಾಸು. ಕಣ್ಣು ಗಳಲ್ಲಿ ಕೋಪದ ಕಿಡಿಗಳನ್ನು ಕಾರುತ್ತ ಅಡ್ಡಗಟ್ಟಿದ.

"ಆಗಲೇ ಮರೆತು ಹೋಯ್ತೇ ನನ್ನ ಆದೇಶ ?"

ತಕ್ಷಣವೇ ಮೈಮೇಲೇರಿ ಬಂದು ಹಿಗ್ಗಾಮುಗ್ಗಾ ಎಳೆದಾಡಿ ಹೊಡೆದ ದೇವಯ್ಯನಿಗೆ. ಇಬ್ಬರಿಗೂ ಕೈ ಕೈ ಮಿಲಾಯಿಸಿತು. ಏಟುಗಳು ಜೋರಾಗಿ ಬೀಳ ತೊಡಗಿದುವು. ಸೀತಮ್ಮ ಒಂದೇ ಉಸಿರಿಗೆ ಕೂಗಿ ಹುಯಿಲೆಬ್ಬಿಸಿದಳು "ಯಾರಾದರೂ ಕಾಪಾಡಿ ! ಕಾಪಾಡಿ !"

ಆ ಕೂಗು ಎಲ್ಲಿ, ಯಾರಿಗೆ ಕೇಳಿಸಿತೊ ಕೂಡಲೇ ಇಬ್ಬರು ಆಪದ್ಬಾಂಧವ ರಂತೆ ಓಡೋಡಿ ಬಂದರು. ವಾಸುವನ್ನು ಎಳೆದು ಹಾಕಿ ನಾಲ್ಕಾರು ಏಟು ಚೆನ್ನಾಗಿ ಬಿಟ್ಟು ಗದರಿದರು,

"ಮರ್ಯಾದೆಯಿಂದ ಹೋಗು ! ಇಲ್ಲದಿದ್ದರೆ ನಿನ್ನ ಹೊಡೆದು ಇಲ್ಲೇ ಹೂತು ಸಮಾಧಿ ಮಾಡುತ್ತೇನೆ ಜೋಕೆ ! ಇನ್ನು ಇಂಥ ಧೂರ್ತತನ ಕ್ಕಿಳಿಯಬೇಡ !"

ಆಗ ವಾಸು ಸೋಲೊಪ್ಪಿಕೊಳ್ಳಲೇ ಬೇಕಾಯಿತು. ತಲೆ ಬಾಗಿ ಹಿಂದಿರುಗಿ ನೋಡದೆ ತನ್ನ ಹಾದಿ ಹಿಡಿದ. ಅನಂತರ ಅವರಿಬ್ಬರೂ ಬೆಂಗಾವಲಾಗಿ ಪದ್ಮಾಲಯಕ್ಕೆ ಮುಟ್ಟಿಸಿದರು ದಂಪತಿಗಳನ್ನು.

ರಾಮನಾಥ ವಿಷಯವನ್ನು ತಿಳಿದು ಬೆಕ್ಕಸ ಬೆರಗಾಗಿ ಹೌಹಾರಿದ. ದೇವಯ್ಯನಿಗೆ ಆದ ನೋವಿಗೆ ಮರ್ಮರ ಮರುಗಿದುವು ಹೃನ್ಮನಗಳು.

"ನೋಡಪ್ಪಾ ! ಈಗ ನಮಗೂ ಹಠ ಬಂದಿದೆ. ಧೂರ್ತತನಕ್ಕೆ ನಾವೇಕೆ ಹೆದರಬೇಕು ?"

"ಇದಕ್ಕೇನಾದರೂ ತಕ್ಕ ಕ್ರಮ ಕೈಗೊಳ್ಳಲೇಬೇಕು. ರಾತ್ರಿ ಹೊತ್ತು ಮನೆಗೆ ನುಗ್ಗಿ ಗೂಂಡಾಗಿರಿ ಮಾಡಲಿಕ್ಕೂ ಹೇಸುವುದಿಲ್ಲ. ಆದ್ದರಿಂದ..."

ಅಷ್ಟೆಂದು ಯೋಚಿಸತೊಡಗಿದ ರಾಮನಾಥ. ಅನಂತರ ತೀವ್ರಾಸಕ್ತಿಯಿಂದ ನುಡಿದ,

"ನಾನೊಂದು ಹೊಸ ಕಾರು ಕೊಂಡುಕೊಂಡೆ. ಅದು ಇಷ್ಟರೊಳಗೆ ಬರಬೇಕಾಗಿತ್ತು. ಇನ್ನೂ ಬರಲಿಲ್ಲ. ಅದನ್ನೇ ಕಾಯುತಿದ್ದೆ. ಇನ್ನೊಂದು ಗಂಟೆಯೊಳಗಾಗಿ ಬಂದೀತು. ಕಂಪನಿಯವರೇ ತಂದು ಬಿಟ್ಟು ಹೋಗುತ್ತಾರೆ. ಮೊದಲಿನ ಕಾರು ತುಂಬಾ ದುರಸ್ತಿಗೆ ಬರುತಿತ್ತೆಂದು ಕೊಟ್ಟಾಗಿನಿಂದ ಕೈಕಾಲಿಗೆ ಸಂಕೋಲೆ ಬಿದ್ದಂತಾಗಿತ್ತು. ಇನ್ನು ಪರವಾಯಿಲ್ಲ. ನಾನೇ ನಿಮ್ಮನ್ನು ಮನೆತನಕ ಬಿಟ್ಟು ಬರುವೆ. ಕುಮುದ್ವತಿ ಒಪ್ಪಿದ್ದಾಳೆಂದರೆ ಮುಗಿಯಿತಲ್ಲ. ತುಂಬ ಸಂತೋಷ. ಮೂವರೂ ಇಲ್ಲೆ ಬಂದು ಬಿಡಿ. ಒಂದು ವಾರದೊಳಗೇ ಮದುವೆಗೆ ಏರ್ಪಾಡು ಮಾಡೋಣ. ಇನ್ನು ಅಲ್ಲಿರುವುದು ಅಪಾಯ."

ದೇವಯ್ಯ ದಂಪತಿಗಳು ಅವನೊಡನೆ ಚರ್ಚಿಸಿ ಮನೆಯ ಮಗ್ಗುಲಿನ ಸಣ್ಣ ಬಿಡದಿಯಲ್ಲಿ ಇರುವುದೆಂದು ನಿಶ್ಚಯಿಸಿದರು.

"ಮದುವೆಯಾಗುವವರೆಗೆ ಮಾತ್ರ. ಅನಂತರ ನಾವೆಲ್ಲಾ ಒಂದೇ ಕುಟುಂಬದವರಂತೆ ಇರಬೇಕು" ಎಂದ ರಾಮನಾಥ, ಹೃದಯದಾಳದ ಸಂತಸ

ವನ್ನು ಹೊರಹಾಕಿ. ಒಂದು ಗಳಿಗೆ ತಡೆದು ಉತ್ಸಾಹದಿಂದ ಮತ್ತೊಂದ "ದೇವರು ದೊಡ್ಡವನು. ಅವನೇ ನಡೆಸಿಕೊಡಬೇಕು."

ದೇವಯ್ಯ 'ಹೌದು' ಎಂಬತೆ ತಲೆಯಿಾಡಿಸಿದ. ಪ್ರಯತ್ನಿಸಿದರೂ ಮಾತುಗಳು ಹೊರಡಲಿಲ್ಲ. ಸಂತಸದ ಅಮೃತಧಾರೆ ಕೊರಳೊತ್ತುತ್ತಿದೆ. ಸುಮ್ಮನೆ ಮೂಕ ಮೌನಿಯಾದ. ಎಲ್ಲೋ ಅಲಕ್ಷಿತ ಸ್ಫೂರ್ತಿಯ ಬೆಳಕು ಕಣ್ಣಾಲಿಗಳಲ್ಲಿ ಮಿಂಚಿತು. ಆನಂದರಸ ದೇಹದ್ಯಾಂತ ಜಳಜಳನೆ ಹರಿದಾಡಿತು.

○ ○ ○ ○

ಬೆಳಗಿನ ಪ್ರಶಾಂತ ವಾತಾವರಣದಲ್ಲಿ ಹೊಂಬಿಸಿಲಿನ ಹರವು.

ಹೂಮಳೆಯ ಹೂ ಹನಿಗಳು ವ್ಯಾಪಕವಾಗಿ ಉದುರುತಿದ್ದುವು ತುಂತುರು ತುಂತುರಾಗಿ.

ಹೂ ಮೋಡಗಳಿಗೂ ಹುರುಪು—ಉತ್ಸಾಹ. ಹೂ ಬಿಸಿಲಿಗೂ ಸುಂದರ ಸೊಬಗು ಹರಡುವ ಸಡಗರ.

ಸ್ವರ್ಗೀಯ ವಾತಾವರಣದಲ್ಲಿ ಹಳ್ಳಿಯ ಪರಿಸರವೆಲ್ಲಾ ಸ್ವರ್ಗಸದೃಶವಾದ ಮನಮೋಹನೀಯ ದೃಶ್ಯ.

ಕುಮುದ್ವತಿ ಹಿಂದಿನ ಬಾಗಿಲಿನ ಮೆಟ್ಟಿಲಿನ ಮೇಲೆ ನಿಂತು ವಾತಾವರಣದಿಂದ ಆನಂದ ರಸಾನ್ನವನ್ನು ಸವಿದು ಬಡಲು ತುಂಬತ್ತಿರುವಾಗಲೇ ಹಟ್ಟಿಯಿಂದ ಹೊರಬಿದ್ದ ತಾಯಿ ಹಾಲಿನ ಬಿಂದಿಗೆಯೊಡನೆ ಎದುರಾದಳು.

ಇನ್ನು ಸ್ವಲ್ಪೇ ಹೊತ್ತಿನೊಳಗಾಗಿ ಡೈರಿಗೆ ಹಾಲು ಒಯ್ಯುವ ವ್ಯಾನ್ ಬರುತ್ತದೆ. ಅದಕ್ಕೆ ಹಾಲು ಪೂರೈಸಬೇಕು. ಹಾಲಿನ ಬಿಂದಿಗೆಯನ್ನು ಮಗಳ ಕೈಗಿತ್ತು ಕೈಕಾಲು ತೊಳೆದುಕೊಂಡು ಬರಲು ನೀರು ಮನೆಗೆ ಹೋದಳು ತಾಯಿ.

ಹೃದಯ ರಂಗದಲ್ಲಿ ಪ್ರೇಮತರಂಗಿಣಿಯು ನಾಟ್ಯವಾಡುವ ಹೆಜ್ಜೆಗಳ ದೃತಗತಿಯ ಟಂಟಣಿನಾದ ಕೇಳಿಸುತ್ತಿದೆ ಮೃದುರಮಧುವಾಗಿ. ತಿಳಿದೂ

ತಿಳಿದೂ ಲಗ್ನಕ್ಕೆ ಒಪ್ಪಿಗೆ ಕೊಟ್ಟಾಗಿದೆ. ಮುಂದೆ ಹೇಗೋ ಅದೇ ಅನಿರ್ಣೀತ. ಅದುವರೆಗೆ ಯಾರನ್ನೂ ಒಪ್ಪದೆ ಇದ್ದವಳು ಮೂರನೆಯ ಮದುವೆಯ ವರನನ್ನು ಒಪ್ಪಿ ಮೆಚ್ಚಿಕೊಂಡಿರುವುದು ಸೌಭಾಗ್ಯವೋ ದೌರ್ಭಾಗ್ಯವೋ ದೇವರೇ ಬಲ್ಲ. ಪರಿಸ್ಥಿತಿಯ ಒತ್ತಡ ಬಹಳ ಮಟ್ಟಿಗೆ ಕಾರಣ. ತಂದೆಯ ಅಸಹಾಯಕ ಸ್ಥಿತಿ ಮನಃಚಿತ್ತಗಳನ್ನು ಹೆಡೆ ಮುರಿಗಟ್ಟಿತು. ಈಗೇನು ಮಾಡಲಿ ? ಹೆಜ್ಜೆ ಮುಂದಿಡುವುದೇ ? ಹಿಂದಿಡುವುದೇ ? ಎಂಬ ಪ್ರಶ್ನೆಯೂ ಆಗಾಗ ಏಳುತ್ತದೆ; ತನ್ನ ಆದರ್ಶ ಜೀವನಕ್ಕೆ ರಾಂದಾದ ಅವಕಾಶ ಕೊಡದೇ ಹೋದರೆ...?

ಯೋಚನೆಯ ಆಳದಲ್ಲಿ ಮುಳುಗಿ ಹೋದಳು ಕುಮುದ್ವತಿ.

ತಟ್ಟನೆ ಭುಜದ ಮೇಲೆ ಭಾರವಾಗಲು ತಕ್ಷಣ ಹಿಂದಿರುಗಿ ನೋಡಿದರೆ ಮುಖದಲ್ಲಿ ತುಂಟ ನಗೆ ಅರಳಿಸಿ ನಿಂತಿದ್ದಾಳೆ ಶಾರದಾ.

"ಏನಮ್ಮಾ, ಬಹಳ ಯೋಚನೆಯಲ್ಲಿ ಮುಳುಗಿ ಹೋಗಿದ್ದಿ ?"

"ಚಿಂತೆಗೆ ನಾನೇ ದಾರಿ ಮಾಡಿಕೊಂಡಿರುವೆ. ಜೀವನದ ಹೆಬ್ಬಾಗಿಲು ತೆರೆದಿದೆ: ಒಳ ಹೋಗಲು ಮೈ ನಡುಕ...ಏನು ಮಾಡಲಿ ಹೇಳಿ ?"

"ಯಾಕೆ ಮೈ ನಡುಕ ? ಸಂತೋಷದಿಂದ ಹೋಗಬೇಕು."

"ವೈಯಕ್ತಿಕ ಸ್ವಾತಂತ್ರ್ಯ ಕಳೆದುಕೊಳ್ಳುವುದು ಅಷ್ಟು ಸುಲಭವೇ ?"

"ನೀನು ಸ್ವಾತಂತ್ರ್ಯ ಕಳೆದುಕೊಳ್ಳುವುದಿಲ್ಲ. ಪಡೆದುಕೊಳ್ಳುತ್ತಿ ಎಂದರೆ ಏನೇನೂ ತಪ್ಪಲ್ಲ. ನೀನದನ್ನು ಅರಿತುಕೊಳ್ಳಲಿಲ್ಲ ಅಷ್ಟೆ."

ಇಬ್ಬರೂ ಒಳ ಬಂದು ಬೆಂಚಿನ ಮೇಲೆ ಕುಳಿತುಕೊಂಡರು. ಒಳಗಡೆ ಇದ್ದ ಸೀತಮ್ಮನೂ ಬಂದು ಕುಳಿತುಕೊಳ್ಳುತ್ತ "ಶಾರದಾ, ನಾವೇನೋ ರಾಂದಾದನ ಸಂಬಂಧಕ್ಕೆ ಒಪ್ಪಿಕೊಂಡಾಯಿತು. ಯಾವ ದೈವದ ಅಪೇಕ್ಷೆಯೋ ಇದು. ನಾವು ಕೇವಲ ಬಡವರು, ಅವನು ಅನುಕೂಲಸ್ಥ. ಮುಂದೆ ಸಂಬಂಧ ಹೇಗಿರುತ್ತೋ ಎಂಬ ಯೋಚನೆಯಾಗಿದೆ. ದೇವರ

ಆಶೀರ್ವಾದ ಒದಗಿದರೆ ಸಾಕು." ಎಂಬಳು ದನಿಯಲ್ಲಿ ಸುಖ ದುಃಖ ಗಳೆರಡೂ ಸಂಮಿಳಿತವಾಗಿದ್ದುವು.

"ಒಡವೆ ಹಾಕುವುದಿಲ್ಲವೆಂದು ಪಣ ತೊಟ್ಟಿದ್ದಿ. ರಾಂದಾದನಲ್ಲಿ ಪದ್ಮಳಿಗಾಗಿ ತೆಗೆದಿದ್ದ ಒಡವೆ ಹೇರಳವಾಗಿದೆ. ಏನು ಮಾಡುತ್ತಿ ಅವನ್ನೆಲ್ಲ ?"

"ನಾನಂತೂ ತೊಡುವುದಿಲ್ಲ. ಆ ಕಾಲ ಬಂದಾಗ ನೋಡೋಣ...?"

"ತಾಳಿಯಾದರೂ ಹಾಕಬೇಕಲ್ಲ ?"

ಕುಮುದ್ವತಿ ಅತ್ಯಂತ ಸಾವಧಾನದಿಂದ ಹೇಳ ತೊಡಗಿದಳು,

"ಅದೂ ಕೂಡ ಇಲ್ಲ. ಗಂಡಸು ಮದುವೆಯ ಸಂಕೇತವಾಗಿ ತಾಳಿ ಧರಿಸುತ್ತಾನೆಯೇ, ಹೇಳಿ ? ಗಂಡಸು ತಾಳಿ ಧರಿಸುವುದಿಲ್ಲ ಅಂದಮೇಲೆ ಹೆಣ್ಣಿಗೇಕೆ ಸಾಂಕೇತಿಕವಾದ ತಾಳಿ ? ಅಲ್ಲದೆ ಹೆಣ್ಣು ವಿಧವೆಯಾದಳೆಂದರೆ ಅವಳಿಗೆ ವಿಧವಾವೇಶ ! ಗಂಡು ವಿಧುರನಾದರೆ ಅವನಿಗಿದೆಯೇ ವಿಧುರ ವೇಶ ? ಹೆಣ್ಣಿಗೆ ದಾಸ್ಯ ಜೀವನದ ಸಂಕೇತಗಳೆಂದರೆ ಒಡವೆ ವಸ್ತುಗಳು, ತಾಳಿ ಮುಂತಾದ ಮಂಗಳ ದ್ರವ್ಯಗಳು, ಶಾಸ್ತ್ರಗಳ ಸಂಕೋಲೆಗಳು ಎಂದರೆ ತಪ್ಪಲ್ಲ. ಅದನ್ನಷ್ಟು ತಿಳಿದುಕೊಳ್ಳಲಾರದ ಮುಗ್ಧ ಮಾನಿನಿಯರು ಎಲ್ಲವನ್ನೂ ದೈವದತ್ತವಾಗಿ, ಸಮಾಜದ ಶುಭಾಶೀರ್ವಾದವಾಗಿ ಒಪ್ಪಿ ತಲೆ ಬಾಗುತ್ತಾರೆ. ಹೆಣ್ಣೇ ಒಂದು ಒಡವೆ ಇರುವಾಗ ಒಡವೇಯೇಕೆ ಧರಿಸ ಬೇಕು ? ನಿರಾಭರಣ ಸೌಂದರ್ಯವೇ ಸೌಂದರ್ಯ ಎಂಬುದನ್ನು ಹೆಣ್ಣು ಅರ್ಥ ಮಾಡಿಕೊಳ್ಳುವುದು ಯಾವ ಕಾಲಕ್ಕೋ...! ಅಂತಹ ಮುಗ್ಧದುಗ್ಧ ಪರಿಸ್ಥಿತಿಯಲ್ಲಿದ್ದಾರೆ ನಮ್ಮವರು. ಪರಂಪರಾನುಗತಿಯಲ್ಲಿ ನಡೆದು ಬಂದ ಶಾಸ್ತ್ರ ಸೂತ್ರಗಳ ಜಾಲ ಸ್ತ್ರೀ ಸಮಾಜವನ್ನೇ ಹೆಡೆ ಮುರಿಗಟ್ಟಿದೆ. ಇದರ ಬಿಡುಗಡೆ ಅಷ್ಟು ಸುಲಭವಲ್ಲ. ಕಿವಿ ಮೂಗನ್ನು ಚುಚ್ಚಿ ವಿರೂಪಗೊಳಿಸಿ ದರೂ ಆತ್ಮ ಸಂತೋಷದಿಂದ ಒಪ್ಪಿಕೊಳ್ಳುತ್ತಾರೆ ಸ್ತ್ರೀ ಜನಕೋಟಿ." ಅತ್ಯಂತ ವಿಷಾದವಾಣಿಯಲ್ಲಿ ಹರಿದು ಬಂತು ಕುಮುದಳ ವಾಕ್ಯಸರಣಿ.

"ನಾಳೆ ರಾಂದಾದ ನಿನ್ನ ವಾದವನ್ನು ಇಷ್ಟಪಡದೆ ಹೋದರೆ....?"

"ಈ ಸಂಜೆ ಇಲ್ಲಿಗೆ ಬರುತ್ತಾರಂತೆ. ಅವರೊಂದಿಗೆ ಮಾತಾಡಿಯೇ ನಿರ್ಧರಿಸುವೆ."

"ನೀನೇ ಮಾತಾಡುವೆಯಾ ? ಪರವಾಯಿಲ್ಲ...ಜಾಣೆ ಎನ್ನಬಹುದು!"

ಸೀತಮ್ಮ ಕಳಕಳಿಯ ದನಿಯಲ್ಲಿ ನುಡಿದಳು "ಹೀಗೆ ಹಠ ತೊಡುವುದರಿಂದ ಮುಂದೇನು ಗತಿಯೋ....ಎಂಬ ಭಯ ನನಗೆ. ಭಿನ್ನಾಭಿಪ್ರಾಯ ಬಂದು ಮನಸ್ಸು ಕೆಟ್ಟರೇನು ಗತಿ ?"

"ಏನೂ ಆಗುವುದಿಲ್ಲ ಸುಮ್ಮನಿರಿ ಅಮ್ಮಾ."

o o o o

ಸಾಯಂಕಾಲ ನಾಲ್ಕರ ಸಮಯದಲ್ಲಿ ರಾಮನಾಥನ ಕಾರು ಆಗಮಿಸಿತು.

ಅಂಗಳದಂಚಿನಲ್ಲಿ ಕಾರನ್ನು ನಿಲ್ಲಿಸಿದ ರಾಮನಾಥ ಸ್ವಿಚ್ ತೆಗೆದು ಕಾರಿನಿಂದಿಳಿದ.

ಮೆಟ್ಟಲಿನ ಮೇಲೆ ನಿಂತು ನೋಡುತಿದ್ದ ದೇವಯ್ಯ ದಂಪತಿಗಳು ಕಾರಿನ ಬುಡಕ್ಕೆ ಹೋದರು. ಪರಸ್ಪರ ಸಂದರ್ಶನದ ಕುರುಹಾಗಿ ಮುಖ ಬಿಂಬಗಳು ಅರಳಿ ಮಂದಾರವಾದುವು. ಉಲ್ಲಾಸದಿಂದ ಸವಿನಗೆಯ ಸ್ವಾಗತ ನೀಡಿದರು ದಂಪತಿಗಳು. ಭಾವೀ ಅಳಿಯನ ಪ್ರಥಮಾಗಮನ ಎಲ್ಲಿಲ್ಲದ ಸಂತಸದಾಗರ ಹೃನ್ಮನಗಳಿಗೆ. ಆದರೂ, ಬಡಗೃಹಕ್ಕೆ ಸ್ವಾಗತಿಸಲು ಸಣ್ಣ ಅಳುಕು ಎದೆಯಲ್ಲಿ. ಗೇಣಿದಾರನ ಸಾಮಾನ್ಯ ಸಣ್ಣಗೃಹ. ಹಳೆ ಹಳೆಯ ಒಂದೆರಡು ಕುರ್ಚಿ. ಒಂದು ಉದ್ದನೆಯ ಬೆಂಚು ಇವಿಷ್ಟೇ ನಡು ಮನೆಯಲ್ಲಿ.

ರಾಮನಾಥ ಒಳ ಬಂದು ಕುರ್ಚಿಯ ಮೇಲೆ ಮಂಡಿಸಿದ. ಸೀತಮ್ಮ ಭಾವೀ ಅಳಿಯನಿಗಾಗಿ ಸಿಹಿ ಕಾರ ತಿಂಡಿಗಳನ್ನು ತಯಾರಿಸಿಟ್ಟಿದ್ದಳು.

ಕುಮುದ್ವತಿ ಕಾಫಿಗೆ ಹಾಲು ಬೆರೆಸುವುದೋ ಅಥವಾ ಬರೀ ಹಾಲು ಕೊಡುವುದೋ ಎಂಬ ಯೋಚನೆಯಲ್ಲಿರುವಾಗಲೇ ತಾಯಿ ಒಳ ಬಂದಳು.

"ಕಾಫಿಯೇ ಇರಲಿ. ಅವರು ಕುಡಿಯುವುದು ಕಾಫಿ." ಎಂದ ಅವಳು ಪುನಃ ಪಿಸು ದನಿಯಲ್ಲಿ "ಅವರೊಂದಿಗೆ ಏನಾದರೂ ಮಾತಾಡಿಬಿಡಬೇಡ ಮಗಳೇ ! ಮನಸ್ಸಿಗೆ ಬೇಸರ ಮಾಡಿಕೊಂಡಾರು."

ತಾಯಿಯ ಬೇಡಿಕೆ ಮನದಾಳಕ್ಕೆ ಇಳಿಯಿತು. ದೇಹದಾದ್ಯಂತ ಪುಳಕಿತಳಾದಳು ಕುಮುದ. ಅವನನ್ನು ಆಗಾಗ ನೋಡಿ ಒಂದೆರಡು ಮಾತಾಡಿದ್ದುಂಟು. ಆದರೆ, ಇಂದಿನ ರೀತಿಯೇ ಬೇರೆ. ಹೇಗೆ ಮಾತಾಡಿಸಲಿ ? ಹೇಗೆ ಪ್ರಾರಂಭಿಸಲಿ ? ಎಂಬುದು ತನ್ನ ಮುಂದಿರುವ ಪ್ರಶ್ನೆ.

ತಿಳುನೀಲಿ ಬಣ್ಣದ ಸೀರೆಯುಟ್ಟ ಅವಳು ರಂಭೆಯಂತೆ ಕಣ್ಗೆಸೆಯುತಿದ್ದಾಳೆ. ತಾಯಿ ಜೋಡಿಸಿಟ್ಟ ಸಹಿಕಾರಗಳ ಜೊತೆಗೆ ಕಾಫಿಯ ಬಸಿಗಳನ್ನೂ ಇಟ್ಟುಕೊಂಡು ಹೊರಬಂದಳು ಅವಳು. ಪ್ರಸನ್ನ ಮುಖಬಿಂಬದಲ್ಲಿ ಎಳೆ ನಗುವಿನ ಬೆಳದಿಂಗಳು. ದುಂಬಿ ಕಣ್ಣುಗಳಲ್ಲಿ ಆತ್ಮ ಸ್ಫೂರ್ತಿಯ ಕಳೆ. ಬೊಂತೆ ಕೂದಲು ರಾಶಿ ಬೆನ್ನ ಮೇಲೆ. ಒಟ್ಟಿನಲ್ಲಿ ಸೌಂದರ್ಯದ ಪ್ರತಿ ಮೂರ್ತಿಯೇ ನಡೆದು ಬಂದಂತೆ ಎದುರಾದ ಅವಳನ್ನೊಮ್ಮೆ ನಿಟ್ಟಿಸಿ ನೋಡಿದ ರಾಮನಾಥ. ಹೃದ್ಗಡಲು ಉಕ್ಕೇರಿ ಬಂತು. ಆನಂದ ರಸಾನ್ನವನುಂಡು "ನೀನೂ ಕುಳಿತುಕೊಳ್ಳಮ್ಮಾ" ಎಂದ ಪ್ರಸನ್ನ ಮುಖದಿಂದ ಹೃದಯದ ಪ್ರೇಮಾಮೃತ ಮುಖಕ್ಕೆ ನುಗ್ಗಿ ಬಂತು.

ಚಿಕ್ಕ ಮೇಜಿನ ಮೇಲೆ ತಿಂಡಿಯ ಟ್ರೇಯನ್ನಿಟ್ಟು ಅಪ್ಪ ಅಮ್ಮನೊಂದಿಗೆ ಬೆಂಚಿನ ಮೇಲೆ ಕುಳಿತು ಕೊಂಡಳು ಹುಡುಗಿ. ಅವನೊಂದಿಗೆ ಎಲ್ಲರೂ ಸಿಹಿ ಕಾರಗಳನ್ನೂ ಮೆದ್ದು ಕಾಫಿ ಬಸಿಗಳಿಗೆ ಕೈ ಹಾಕಿದರು. ಒಂದೊಂದು ಹನಿ ಕಾಫಿಯನ್ನೂ ಅಮೃತೋಪಮವಾಗಿ, ಪ್ರಾಣ ಸಂಜೀವಿನಿಯಾಗಿ ಹೀರತೊಡಗಿದ ರಾಮನಾಥ; ಸ್ವಲ್ಪ ಹೊತ್ತು ಭಾವ ಗಾಂಭೀರ್ಯದಿಂದ ಉರುಳಿಹೋಯಿತು. ಅನಂತರ ಸಂತಸವುಕ್ಕುವ ದನಿಯಲ್ಲಿ ಅಂದ,

"ನಿಮ್ಮ ಯಾವೊಂದು ಸಮಸ್ಯೆಗಳಿದ್ದರೂ ನಾನು ನಿವಾರಿಸಲು ಸಿದ್ಧ. ಜಮೀನ್ದಾರರಿಗೆ ನೀವು ಈ ಸಲಿ ಬೆಳೆದ ಪೂರ್ತಿ ಬೆಳೆಯನ್ನು ಕೊಟ್ಟು ಬಿಡಿ. ಅದರಿಂದ ಇದ್ದ ಅಲ್ಪಸ್ವಲ್ಪ ತೊಡಕು ನಿವಾರಣೆಯಾಗುತ್ತೆ. ಮೇಲೆ ಬಾಕಿ ಏನಿದ್ದರೂ ನಾನು ಸಂತೋಷದಿಂದ ಪೂರೈಸುವೆ. ಮುಂದೆ ನಿಮ್ಮ ಎಲ್ಲಾ ಭಾರವನ್ನು ನಾನು ನಿರ್ವಹಿಸುವೆ. ನನ್ನ ತಂದೆ ತಾಯಿಯರು ಬಹಳ ಹಿಂದೆಯೇ ಗತಿಸಿದರು. ಇನ್ನು ನೀವೇ ನನ್ನ ತಾಯಿ ತಂದೆ. ಕುಮುದಳೇ ಜೀವನ ಸರ್ವಸ್ವ. ಇದರಲ್ಲಿ ಕಿಂಚಿತ್ ಕುಂದೆಸಗದಂತೆ ನಡೆದುಕೊಳ್ಳುವುದು ನನ್ನ ಧರ್ಮ ಎಂದು ನಾನು ತಿಳಿದುಕೊಂಡಿರುವೆ."

"ತುಂಬಾ ಸಂತೋಷ..." ಮುಂದೆ ಮಾತು ಹೊರಡಲಿಲ್ಲ ದೇವಯ್ಯ ನಿಗೆ. ಒಡಲ ಸಂತಸ ಕೊರಳೊತ್ತಿತು. ಕಣ್ಣುಗಳಲ್ಲಿ ಆನಂದಾಶ್ರುಜಲ ಫಳ ಫಳನೆ ಮಿನುಗಿತು.

ಕುಮುದ ಕಾಫಿಯ ಬಸಿಯನ್ನು ಟ್ರೇಯಲ್ಲಿಟ್ಟು ನುಡಿದಳು,

"ನಾನು ಅನೇಕ ಧ್ಯೇಯೋದ್ದೇಶಗಳನ್ನಿಟ್ಟುಕೊಂಡಿರುವೆ. ಸಾಮಾಜಿಕ ಸೇವೆ ಸಲ್ಲಿಸುವುದು ನನ್ನಿಷ್ಟ. ಅಲ್ಲದೆ ಹೆಂಗಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಹತ್ತಿಕ್ಕಲು ಮತ್ತು ಪುರುಷ ಸಮಾನತೆಯನ್ನು ಪಡೆದು ಕೊಳ್ಳಲು ಸ್ತ್ರೀ ಜನರಿಗೆ ಸಹಾಯ ಮಾಡುವ ಯೋಜನೆಯನ್ನು ಹೊಂದಿರುವೆ. ನನ್ನ ಸಮಯವೆಲ್ಲಾ ಕೇವಲ ಸಂಸಾರ ಸುಖಕ್ಕಾಗಿಯೇ ಮೀಸಲಿಡಲಾರೆ. ನನ್ನ ಕಾಲಮಾನದ ಅಪವ್ಯಯ ಆಗಬಾರದು ಎಂಬುದು ಮಹೋದ್ದೇಶ. ಹಾಗೆಂದು ಹದ್ದು ಮೀರಿ ವರ್ತಿಸಬೇಕೆಂದೇನೂ ಇಲ್ಲ. ನೀವು ನನ್ನೆಲ್ಲಾ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ಮತ್ತು ನೆರವು ನೀಡಿದರೆ ಸಾಕು. ನೀವು ಏನಂತೀರಿ ? ನಿಮಗೆ ಸಮ್ಮತಿ ತಾನೇ ?"

"ಆಗಬಹುದು. ವಿದ್ಯಾವತಿಯರು ಇಂತಿಂತಹ ಸಮಾಜ ಸೇವೆಯನ್ನು ಬಯಸುವುದು ಸಹಜವೇ. ಆದರೆ, ಕೌಟುಂಬಿಕ ಸಮಯ, ಕೌಟುಂಬಿಕ ಶಾಂತಿ ಅಳಿಸಬಾರದೆಂಬುದನ್ನು ನೀನು ಮನಗೊಂಡರೆ ಸಾಕು."

"ಅದನ್ನು ನಾನು ಬಲ್ಲೆ." ಎಂದ ಬಳಿಕ ಅವಳು ಮುಂದುವರಿದಳು, "ಸಾವಿರದೊಂಭೈನೂರೆಂಭತ್ತ ಮೂರರಲ್ಲಿ ಮಾಡಿದ ಕ್ರಿಮಿನಲ್ ಕಾಯಿದೆಯ ಪ್ರಕಾರ ಮಡದಿಯು ಗಂಡನ ಮೇಲೆ ಬಲಾತ್ಕಾರ ಅತ್ಯಾಚಾರ ಆಪಾದನೆ ಹೊರಿಸಬಹುದು ! ಅವಳ ಸಂಪೂರ್ಣ ಅನುಮತಿಯಿಲ್ಲದೆ ಲೈಂಗಿಕ ಕ್ರಿಯೆಗೆ ಬಲಾತ್ಕರಿಸುವಂತಿಲ್ಲ. ಇಬ್ಬರ ಪರಸ್ಪರ ಪ್ರೀತಿಯ ಬಂಧ ಸುಜೀವನಕ್ಕೆ ದಾರಿ. ಇಂದು ಶೇಕಡಾ ಐವತ್ತರಷ್ಟು ಸಂಸಾರಗಳಲ್ಲಿ ಸಂತೋಷನೇ ಮಾಯವಾಗಿದೆ. ಆನಂದಪುರದಲ್ಲಿ ಆನಂದವೇ ಇಲ್ಲದಿರುವಂತೆ ಸ್ತ್ರೀಯರ ಮೇಲೆ ಬಲಾತ್ಕಾರ–ಅತ್ಯಾಚಾರ–ಹಿಂಸೆಗಳು ಅವ್ಯಾಹತವಾಗಿ ನಡೆಯುತ್ತಿವೆ. ಸ್ತ್ರೀಯರನ್ನು ಪಶುಗಳಂತೆ ನಡೆಸಿಕೊಳ್ಳುತ್ತಾರೆ ಪುರುಷರು. ಸದಾ ಸಂಶಯದೃಷ್ಟಿಯಿಂದ ನೋಡುತ್ತ ಧರ್ಮಕರ್ಮಗಳನ್ನು ವಿಾರಿ ನಡೆಯುವುದು ಎಲ್ಲೆಲ್ಲೂ ಕಂಡು ಬರುತ್ತದೆ. ಮೇಲಾಗಿ, ವರದಕ್ಷಿಣೆ ಹಿಂಸೆ ಬೇರೆ. ಸ್ತ್ರೀಯ ವೈಯಕ್ತಿಕ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯ ಗಳನ್ನು ಕಸಿದು ಪಶು ಜೀವನಕ್ಕೆ ತಳ್ಳಿ ಬಿಡುವುದು ಮನೆ ಮನೆಯಲ್ಲೂ ಇದ್ದದ್ದೇ.

"ಶ್ರೀರಾಮ ನಿರ್ಜೀವ ವಸ್ತುವಿನಂತೆ ಕಡೆಗಾಣಿಸಿ ಗರ್ಭಿಣಿ ಮಡದಿ ಯನ್ನು ಕಾಡಿಗಟ್ಟಿದ. ಸಹಧರ್ಮಿಣಿಯನ್ನು ಜೂಜಿಗೆ ಪಣವೊಡ್ಡಿದ ಧರ್ಮರಾಯ; ತನ್ನ ಗಂಡನೆಂದು ಸಂಪೂರ್ಣ ನಂಬಿ ಅವನಾಸೆಯನ್ನು ಧರ್ಮಪೂರ್ವಕವಾಗಿ ಸಲ್ಲಿಸಿದ ಅಹಲ್ಯಳನ್ನು ಶಿಲೆಯಾಗಿಸಿದ ಗೌತಮ ಮಹರ್ಷಿ. ತನ್ನ ಅಮೋಘವಾದ ಸತ್ಯದ ಹಿರಿಮೆಯನ್ನು ಎತ್ತಿ ಹಿಡಿಯಲು ಸತಿಯನ್ನು ಮಾರಿದ ಹರಿಶ್ಚಂದ್ರ ಚಕ್ರವರ್ತಿ. ಘೋರಾಟವಿಯಲ್ಲಿ ಮಧ್ಯ ರಾತ್ರಿ ನಿದ್ರೆಯಲ್ಲಿದ್ದ ಮಡದಿಯನ್ನು ಬಿಟ್ಟು ಹೋದ ನಳ ಚಕ್ರವರ್ತಿ. ಇವರೆಲ್ಲಾ, ಅಂದಿಂದಿಗೂ ಪುರುಷೋತ್ತಮರು ! ಧರ್ಮ ಪ್ರಭುಗಳು !

"ಶ್ರೀಹರೀ, ನಮ್ಮ ಸಮಾಜ ಸ್ತ್ರೀಯರನ್ನು ಎಷ್ಟೊಂದು ಅಧೋ ಗತಿಗೆ ಇಳಿಸಿದೆ ನೋಡಿ ! ಅಷ್ಟೇ ರೀತಿಯಲ್ಲಿ ಅವಳಿಂದ ಸಿಗುವ ಲೈಂಗಿಕ ಸ್ಥಿತಿಯನ್ನೂ ಕೆಳಗೆ ಇಳಿಸಿ ಬಿಟ್ಟಿದೆ ಎಂದರೆ ತಪ್ಪಲ್ಲ. ಅವಳೊಂದು ಹೆರುವ

ಯಂತ್ರ ಮತ್ತು ಮನೆಗೊಂದು ಪಗಾರವಿಲ್ಲದ ತೊತ್ತು. ಇದು ಇಂದಿನ ವಸ್ತುಸ್ಥಿತಿ. ಈ ಎಲ್ಲಾ ನ್ಯೂನತೆಗಳನ್ನು ಕಡಿದುಕೊಳ್ಳಬೇಕೆಂಬುದು ನನ್ನಾಸೆ."

ಅದರಿಂದ ಅವನೇನೂ ವ್ಯಥೆ-ಬೇಸರ ಹಚ್ಚಿಕೊಳ್ಳಲಿಲ್ಲ. ಎಲ್ಲಾ ನಿನ್ನ "Will and Wish" ಎಂದುಬಿಟ್ಟ. ಸಾಮಾಜಿಕ ಅನ್ಯಾಯ-ದೌರ್ಜನ್ಯಗಳ ಮೇಲೆ ಹರಿದಾಡಿತು ಅಂತರ್ದೃಷ್ಟಿ.

ಅದುವರೆವಿಗೂ ಉಸಿರು ಹಿಡಿದು ಕುಳಿತಿದ್ದ ತಂದೆ ತಾಯಿಯರಿಗೆ ಹೋದ ಜೀವ ಬಂದಂತಾಯಿತು.

ರಾಮನಾಥ ಉದ್ವೇಗವಿಲ್ಲದ ಸಹಜವಾದ ದನಿಯಲ್ಲಿ ಮುಂದುವರಿದ "ನಾನು ಅಂದಿಂದಿಗೂ ನಮ್ಮ ಸಮಾಜದಲ್ಲಿ ಇಂಥಿಂಥಹ ನ್ಯೂನತೆಗಳನ್ನು ಸ್ವಂತ ಕಣ್ಣುಗಳಿಂದ ನೋಡುತ್ತಿರುವೆ. ಹಾಗೆಂದು, ನಾನು ಹೃದಯ ಹೀನನಲ್ಲ. ನನ್ನ ಈರ್ವರು ಮಡದಿಯರನ್ನು ತುಂಬ ಪ್ರೀತಿ–ಗೌರವ-ಶಾಂತಿ–ಸಂತೋಷಗಳ ಸಂಸಾರದಲ್ಲಿ ಪಾಲಿಸಿದವನು. ಅವರು ಅನಾರೋಗ್ಯದಿಂದ ನರಳಿದಾಗ ನನ್ನ ಕೈಲಾದಷ್ಟು–ಶಕ್ತಿಮೀರಿ ಪ್ರಯತ್ನಿಸಿರುವೆ. ಎಂದೂ ಅವರನ್ನು ಉಪೇಕ್ಷಿಸಿದವನಲ್ಲ. ಆದರೆ, ದೇವೇಚ್ಛೆ ಬೇರೆಯಾಗಿತ್ತು." ಅತ್ಯಂತ ಭಾರವಾದ ದನಿಯಲ್ಲಿ ವಿಷಯವನ್ನು ಹೊರ ಹಾಕಿದ.

ಯಾರೂ ಮಾತಾಡಲಿಲ್ಲ.

ಅನಂತರ ಅವನೇ ಅಂದ "ಈ ಬಗ್ಗೆ ಯಾರನ್ನಾದರೂ ವಿಚಾರಿಸಿಕೋ...."

"......"

— ೦ —

೬

ಶಿವಾನಿ ಬಂದಾಗ ಮಧ್ಯಾಹ್ನದ ಸುಡು ಬಿಸಿಲು ಉರಿಯುವ ಸಮಯ.

ಕಳೆದ ಮೂರು ನಾಲ್ಕು ತಿಂಗಳಿಂದ ಮಳೆ ಬಿದ್ದಿರಲಿಲ್ಲ. ಉರಿ ಬಿಸಿಲಿನ ಝಳ ಅಪಾರ.

ಬೆವರೊಳಸಿಕೊಳ್ಳುತ್ತಲೇ ಬಂದ ಅವಳು "ಮೊದಲಿಷ್ಟು ತಣ್ಣೀರಿನಲ್ಲಿ ಮುಖ ಮಜ್ಜನ ಮಾಡದೇ ಗತಿಯಿಲ್ಲ" ಎನ್ನುತ್ತ ನೇರವಾಗಿ ನೀರುಮನೆಗೇ ಹೋದಳು. ತಣ್ಣನೆಯ ನೀರನ್ನು ನಾಲ್ಕೈದು ಚೊಂಬು ಸುರಿದು ಚೆನ್ನಾಗಿ ಕೈಕಾಲು ಮುಖ ಮಜ್ಜನ ಮಾಡಿ ತನುಮನಗಳಿಗೆ ತಂಪೂಡಿಸಿದ ಬಳಿಕ ಹಾಯೆನಿಸಿತು ಅವಳಿಗೆ, ಬಿಸಿನೆತ್ತರಿನ ಝುರಿ ಮೈಯಲ್ಲಿ ತಣ್ಣಗೆ ಹರಿದಾಡಿದಂತೆ ಭಾಸವಾಯಿತೇನೋ..."ಈಗ ತಣ್ಣಗಾಯ್ತು" ಎಂದಳು.

ಕುಮುದ್ವತಿ ತುಟಿಗಳಲ್ಲಿ ಮಂದಹಾಸ ಸೂಸಿ ನುಡಿದಳು,

"ಅಕ್ಕಾ, ನೀವು ಬೆಳಗಿನ ಹೊತ್ತು ಬಂದಿದ್ದರೆ ತಣ್ಣಗಿರುತಿತ್ತು. ಮೇಲಾಗಿ, ಸಾಯಂಕಾಲದವರೆಗೆ ಇದ್ದು ಹೋಗಬಹುದಾಗಿತ್ತು. ಸುಡು ಬಿಸಿಲಲ್ಲಿ ಬಂದು ತಪ್ಪು ಮಾಡಿದಿರಿ."

"ಹರೇ ರಾಂ! ಬೆಳಗ್ಗೆಯೇ ಬರುವುದೆಂದರೆ ನನ್ನ ಮನೆಯ ಗತಿಯೇನು ?"

"ಶ್ರೀಹರಿ, ವಾರದಲ್ಲಿ ಒಂದು ದಿನ ತಾನೇ? ಸಾಯಂಕಾಲ ಹೋಗಿ ಒಲೆ ಹಚ್ಚಿದರಾಯ್ತು."

"ಆಗಲಿ ಕುಮೂ, ನೀನು ಸಂಸಾರ ಹಿಡಿದಾಗ ಹೇಗಿರುತ್ತಿ ನಾನು ನೋಡುವೆ ಬಿಡು. ಈಗ ಅಮ್ಮ ಇದ್ದಾರೆ, ಮಗಳಿಗೆ ಸರಾಗ."

"ಬಿಡಿ, ಆಗಲಾ ಅಮ್ಮನನ್ನು ಇಟ್ಟುಕೊಳ್ಳುವವಳೇ! ಅಮ್ಮನನ್ನು ಬಿಟ್ಟು ನಾನೇಕೆ ಹೋಗಲಿ ?"

"ಅಪ್ಪನನ್ನು ಏನು ಮಾಡುತ್ತೀ ?" ಕಣ್ಣುಗಳಲ್ಲಿ ತುಂಟ ಛಾಯೆ ಇಣು ಕಿತು.

"ಇಬ್ಬರನ್ನೂ ಕರೆದುಕೊಂಡು ಹೋಗುವೆ. ಎಲ್ಲರೂ ಬಿಟ್ಟು ಹೋಗಿದ್ದಾರೆ. ನಾನೂ ಬಿಟ್ಟು ಹೋದರೆ ಅವರ ಗತಿಯೇನು ? ನೀವೇ ಯೋಚನೆ ಮಾಡಿ."

ಬೆಂಚಿನ ಮೇಲೆ ಇಬ್ಬರೂ ಅಕ್ಕಪಕ್ಕದಲ್ಲಿ ಕುಳಿತುಕೊಂಡರು.

"ಬೇಷ್ ಕುಮೂ ! ಗಂಡ ಒಬ್ಬನೇ ಇದ್ದ ಮನೆಯಾದರೆ ಇದು ಸಾಧ್ಯ ನೋಡು. ರಾಂದಾದ ಆದರೆ ಎಲ್ಲಕ್ಕೂ ಲಾಯಕ್ಕು. ದೊಡ್ಡ ಮನೆ ಸಿರಿವಂತಿಕೆ ಎಲ್ಲಾ ಇದೆ. ಅವನು ಎಷ್ಟು ಮಂದಿಯನ್ನು ಬೇಕಾದರೂ ಸಾಕಿಯಾನು !" ಮಂದಹಾಸ ಬೀರಿದಳು ಶಿವಾನಿ. ಹುಬ್ಬುಗಳು ಏರಿ ಇಳಿದುವು.

ಕುಮುದ ಮಾತಾಡಲಿಲ್ಲ. ವಿಷಯವನ್ನು ಬಹಿರಂಗಗೊಳಿಸದೆ ಸುಮ್ಮನಾದಳು. ಪ್ರಸನ್ನವಾದ ಮುಖಬಿಂಬದಲ್ಲಿ ಹೂನಗೆ ಅರಳಿತು. ಅದೇ ವೇಳೆಗೆ ಅಲ್ಲಿಗೆ ಬಂದ ಸೀತಮ್ಮ ನುಡಿದಳು,

"ಓ, ನಿನಗೊತ್ತಿಲ್ಲ ಅಲ್ಲವೇ ? ರಾಮನಾಥನಿಗೆ ಕುಮುದಳನ್ನು ಕೊಡುವ ಬಗ್ಗೆ ನಿನ್ನೆ ಒಪ್ಪಂದವಾಯಿತು. ಇನ್ನು ಒಳ್ಳೆಯ ದಿವಸ ನೋಡಿ ಲಗ್ನವಿಡಿಸಬೇಕು."

"ಏ ಕಳ್ಳಿ ! ನೀನು ಹೇಳಲೇ ಇಲ್ಲವಲ್ಲ ?"

"ಹೇಳುತಿದ್ದೆ, ಅಷ್ಟರಲ್ಲೇ ಅಮ್ಮ ಹೇಳಿದರಲ್ಲಾ, ಇನ್ನೇನು ?"

"ತುಂಬಾ ಅಭಿನಂದನೆಗಳು ಕುಮೂ !" ಎಂದು ಹಾರ್ದಿಕವಾಗಿ ಕೈ ಕುಲುಕಿದಳು ಅವಳು.

"ಶ್ರೀಹರೀ ! ನಾನು ಯೋಚಿಸಿದ್ದೇ ಒಂದು. ಆದಾಗಿದ್ದೇ ಒಂದು ಬಿಡಿ. ನಾನು ಎಷ್ಟೋ ಸಲ ಮದುವೆಯಾಗಲೇ ಬಾರದು ಎಂದುಕೊಂಡಿದ್ದೆ. ನಮಗೊಂದು ಗೇಣು ಭೂಮಿಯೂ ಇಲ್ಲ. ಅಪ್ಪಾಜಿಗೆ ಈ ವಯಸ್ಸಿನಲ್ಲಿ ವ್ಯವ

ಸಾಯ ಮಾಡಿ ಗೇಣಿ ಕೊಡುವುದು ಕಷ್ಟ. ಜಮೀನು ಬಿಟ್ಟರೆ ವಾಸಕ್ಕೆ ಗತಿ ಯಿಲ್ಲ. ಸ್ವಲ್ಪ ಸಾಲವೂ ಇದೆ. ಈ ಎಲ್ಲಾ ಕಾರಣದಿಂದ ಒಪ್ಪಿಕೊಂಡೆ. ದೈವೇಚ್ಛೆ ಹಾಗಿತ್ತು. ಶ್ರೀಹರಿ ಹೇಗೆ ಮಾಡಿಸುತ್ತಾನೋ ಹಾಗಾಗಲಿ."

ಕುಮುದ್ವತಿ ತಟ್ಟೆಯಲ್ಲಿ ಹುರಿಗಾಳು ಮತ್ತು ಜಿಲೇಬಿಯನ್ನು ಮುಂ ದಿಟ್ಟು ನಾನೇ ಮಾಡಿದ್ದು 'ರುಚಿ ನೋಡಿ' ಎಂದಳು.

"ಪತಿದೇವರಿಗೆ ಮಾಡಿದ್ದಾರೆ ರಾಣಿಯವರು !" ಹಾಸ್ಯಪ್ರಧಾನವಾಗಿ ನುಡಿದಳು ಶಿವಾನಿ.

ಆ ಮಾತಿಗೆ ಮರು ನುಡಿಯದೆ ಎಳೆನಗು ಬೀರಿದಳು ಕುಮುದ್ವತಿ.

ದೇವಯ್ಯ ಜಮೀನ್ದಾರರ ಕಡೆಗೆ ಹೋಗಿದ್ದವನು ಹಣೆಯ ಮೇಲಿನ ಬೆವರಿನ ಹನಿಗಳನ್ನು ಒರೆಸಿಕೊಳ್ಳುತ್ತ ಮೆಟ್ಟಿಲು ಹತ್ತಿದ,

"ದಾರಿಯಲ್ಲಿ ಶಿವು ಸಿಕ್ಕಿದ್ದ ಕುಮೂ ! ವಸಂತ—ವಾಸುರವರು ನನ್ನ ಮೇಲೆ ಕೋಪದ ಕಿಡಿ ಕಾರುತ್ತಿದ್ದಾರಂತೆ. ಅವರು ಎಂದಾದರೂ ಅಪಾಯ ಮಾಡುವವರೇ. ಬಹಳ ಸಣ್ಣ ಮನಸ್ಸಿನವರು. ಇಲ್ಲಿಗೆ ಬಂದು ಇನ್ನೇನು ಗಲಾಟೆ ಹಚ್ಚುತ್ತಾರೋ ಎನಿಸುತ್ತೆ !"

"ಈವೊತ್ತೊಂದು ದಿನ ಹೇಗಾದರೂ ಕಳೆಯುತ್ತೆ ಬಿಡಿ." ಎಂದಳು ಕುಮುದ್ವತಿ.

"ಕೃಷ್ಣ ಸೋಮು ಇಬ್ಬರೂ ಇಂದು ಇರುತ್ತಾರೆ. ಈವೊತ್ತೆಲ್ಲಾ ಅವ ರಿಗೆ ಸಾಮಾನು ಹಂಚಿಕೆಯಾಗುತ್ತೆ. ನಾಳೆ ಜಮೀನ್ದಾರರಿಗೆ ಹೋಗುತ್ತೆ ಮನೆ. ಈವೊತ್ತು ರಾತ್ರಿ ಮಾತ್ರ ನಾವು ಇಲ್ಲಿರುತ್ತೇವೆ. ಶಿವಾನೀ! ನೀನಿನ್ನು ಬಂದರೆ ಪದ್ಮಾಲಯಕ್ಕೇ ಬರಬೇಕು. ಮದುವೆಗೆ ಹಿಂದಿನ ದಿನವೇ ಬಾ ಶಿವಾನೀ ! ಬಹುಶಃ ಮುಂದಿನ ಶುಕ್ರವಾರವೇ ಧಾರಾಮುಹೂರ್ತ !" ವಿವರಿ ಸಿದ ದೇವಯ್ಯ.

"ಆಗಲಿ, ಮಾವಾ ! ದೇವರು ಚೆನ್ನಾಗಿಟ್ಟಿರಲಿ ! ರಾಂದಾದ ಇದುವರೆಗೆ ಬಹಳ ಕಷ್ಟ ಪಟ್ಟಿದ್ದಾರೆ. ಇನ್ನಾದರೂ ಸುಖ—ಶಾಂತಿ ಲಭಿಸಲಿ." ಹಾರೈಸಿದಳು ಶಿವಾನಿ.

"ನಾನು ನನ್ನ ಮಿಷಿನ್ ಒಂದೇ ತೆಗೆದುಕೊಂಡು ಹೋಗುವೆ. ಮನೆ ಸಾಮಾನೆಲ್ಲಾ ಅಣ್ಣಂದಿರಿಗೆ. ಇನ್ನೇನು ಅಣ್ಣಂದಿರೂ ಬರುತ್ತಾರೆ. ವ್ಯವಸಾಯ ಅಪ್ಪಾಜಿಗೆ ನಿಜಕ್ಕೂ ಕಷ್ಟವಾಗಿತ್ತು. ಸಧ್ಯ ಭಂಗ ತಪ್ಪಿತು."

"ದೇವರು ದೊಡ್ಡವನು ಕುಮೂ! ಎಲ್ಲಾ ಕಾಲದಲ್ಲೂ ಅವನ ಸಹಾಯವೇ ಸಹಾಯ!"

o o o o

ಹೆಮ್ಮರದ ನೆತ್ತಿಯ ಮೇಲೆ ಕೋಗಿಲೆಯೊಂದು ಇನಿದನಿಯಲ್ಲಿ ಹಾಡಿತು ಕುಹೂ ಕುಹೂ ಕುಹೂ ಊ ಊ ಊ ಊ! ಕುಹೂ ಊ ಊ ಊ ಊ!

....ಸಾಯಂ ಸೊಬಗು ಎಲ್ಲೆಡೆಯೂ ತುಂಬಿ ಹರಡಿ ಮನಮನವನ್ನೂ ಸೆಳೆಯುವಷ್ಟು ರಮಣೀಯ.

...ಅರುಣಾರುಣ ಪಶ್ಚಿಮ ಘಟ್ಟಗಳ ಮೇಲೆ ಹೊನ್ನ ಹರಿವಾಣದಂತೆ ಜಗಜಗಿಸುತ್ತಿದ್ದಾನೆ ಹೊಂಗಾಂತಿಯನ್ನು ಹರಸುತ್ತ.

ರಾಮನಾಥ ಸ್ನಾನಕ್ಕೆ ಹೋಗಿದ್ದಾನೆ. ದೇವಯ್ಯ ಅಂಗಳದ ಸ್ವಚ್ಛತೆ ಗೈಯುತ್ತಿದ್ದ. ಆಳುಗಳ ಮೇಲ್ವಿಚಾರಣೆಯಲ್ಲಿದ್ದ. ಹೂ ಗಿಡಗಳ ಪಾತಿ ಅಗೆತ, ಗೊಬ್ಬರ ಹಾಕುವಿಕೆ, ನೀರು ಹಾಕುವಿಗೆ ಇಂತಿಂತಹ ಕೆಲಸ ಕಾರ್ಯಗಳು ಅಂಗಳದ ತುಂಬೆಲ್ಲಾ ನಡೆಯುತಿದ್ದುವು. ಇದ್ದಕ್ಕಿದ್ದಂತೆಯೇ ವಸಂತ ಆಗಮಿಸಿದ. ಎದುರಿಗೇ ಸಿಕ್ಕಿದ ದೇವಯ್ಯನನ್ನು ಕಾಣುತ್ತಲೂ ಸಿಟ್ಟು–ರೋಷ ನೆತ್ತಿಗೇರಿತು! ಕೂಡಲೇ ಉಚ್ಚ ದನಿಯಲ್ಲಿ "ನಿನಗಿಲ್ಲೇನು ಕೆಲಸ? ನಮ್ಮ ಮನೆ ಹಾಳು ಮಾಡಲು ಬಂದಿದ್ದೀ!" ಎಂದ. ಕೆಕ್ಕರಿಸಿ ಕ್ರೂರ ದೃಷ್ಟಿಯಿಂದ ನೋಡುತ್ತ. ಸಿಟ್ಟು ಎಂದರೆ ಮೈಯೆಲ್ಲಾ ಉರಿಯುವಷ್ಟು ಸಿಟ್ಟು.

"ನಿನಗೇಕಷ್ಟು ಕೋಪ? ನಾನು ಮಾಡುತ್ತಿರುವುದು ಒಳ್ಳೆಯ ಕೆಲಸವಲ್ಲವೇ ನೀನೇ ನೋಡು! ನಾನೇನೂ ಹಾಳು ಮಾಡುತ್ತಿಲ್ಲ. ಸುಮ್ಮಸುಮ್ಮನೇ ಸಿಟ್ಟಾಗಬೇಡ...."

"ನಿನ್ನನ್ನಿಲ್ಲಿ ಈ ಪಾರುಪತ್ಯಕ್ಕೆ ಕರೆದವರಾರು?" ಎನ್ನುತ್ತ ಮೇಲೇರಿ ಹೋದ. ಇನ್ನೇನು ಪೆಟ್ಟುಗಳು ಬೀಳಬೇಕು. ಆ ಕೂಡಲೇ ಅಲ್ಲಿದ್ದ ಆಳುಗಳೆಲ್ಲ

ಕೂಡಿ ಅಡ್ಡ ಬಂದರು. ಆದರೂ ಬಿಡಲಿಲ್ಲ. ಅಡ್ಡ ಬಂದ ಆಳುಗಳನ್ನು ಎಳೆದು ಹಾಕಿ ದೇವಯ್ಯನೆಡೆಗೆ ನುಗ್ಗಿ ಏಟು ಬಿಟ್ಟಾಗಲೇ ರಾಮನಾಥ ಧಾವಿಸಿ ಬಂದ. ನೋಡಿದರೆ ವಸಂತನ ಸಿಟ್ಟು ಘನ ಘೋರ!

"ಏ! ಏ! ಯಾಕೋ?" ಎಂದು ಎದುರಾದ ರಾಮನಾಥ.

ಆದರೂ ಜಗ್ಗುವವನೇ ಅಲ್ಲ. ಆ ಕೂಡಲೇ ಆಳುಗಳಿಗೆ "ಏನು ನೋಡುತ್ತೀರೋ ಅವನನ್ನು ತಳ್ಳಿ ಆಚೆ!"

ಅಪ್ಪಣೆ ಕೊಟ್ಟ ರಾಮನಾಥ. ಇಬ್ಬರು ಮೂವರು ಅವನನ್ನು ಹಿಡಿದುಕೊಂಡಿದ್ದಂತೆಯೇ ವಸಂತ ಒದರಿದ. "ಈ ಹಾಳು ಮೂಳು ಜನರನ್ನು ಸೇರಿಸಿಕೊಂಡು ಮನೆ ಹಾಳು ಮಾಡುತ್ತಿದ್ದೀರಿ! ಇಂದೇ ಇವರನ್ನೆಲ್ಲಾ ಒದ್ದೋಡಿಸಿ ಇಲ್ಲಿಂದ!"

ರಾಮನಾಥ ಕೆರಳಿದ ಕೇಸರಿಯಾದ.

"ಹೋಗು...ಹೋಗು! ನಿನ್ನ ಮನೆಯ ಪಾರುಪತ್ಯ ನೋಡಿಕೋ! ಇಲ್ಲಿಗೆ ಬಂದು ನೀನು ಹೊಡೆಯುವುದೆಂದರೇನು? ನಿನ್ನ ಬುದ್ಧಿ ಕೆಟ್ಟಿದೆಯೇ?"

ಆದುವರೆಗೆ ಅಪ್ಪನ ಉಗ್ರ ರೋಷವನ್ನು ಕಂಡಿರದ ಅವನು ಅಲ್ಲಿಂದ ದಡದಡನೆ ಹೊರಟುಹೋದ. ಒಡಲ ಕಿಚ್ಚೆಲ್ಲಾ ತಲೆಯನ್ನು ಮುತ್ತಿ ಕುದಿಯ ಹತ್ತಿದೆ.

ರಾಮನಾಥ ದೇವಯ್ಯನ ತೋಳು ಹಿಡಿದು ಒಳಗಡೆ ಬರಮಾಡಿಕೊಳ್ಳುತ್ತ ಪ್ರೀತಿ ಗೌರವಗಳಿಂದ ದೈನ್ಯಯುತ ವಾಣಿಯಲ್ಲಿ ಅಂದ,

"ಬುದ್ಧಿಯಿಲ್ಲದ ಹುಡುಗ. ದಯವಿಟ್ಟು ಬೇಸರಿಸಬೇಡಿ. ಕೈಮುಗಿದು ಕೇಳಿಕೊಳ್ಳುವೆ."

ರಾಮನಾಥನ ಕೇಳಿಕೆಗೆ ದೇವಯ್ಯ ಕರಗಿ ಹೋದ. ಒಳಗಿದ್ದವರೆಲ್ಲಾ ಹೊರಬಂದು ಅವನು ಕೂಗಾಡುತ್ತಾ ಹೋಗುತ್ತಿದ್ದುದನ್ನು ನೋಡಿದರು. ಬಿಡದಿಯ ಬಾಗಿಲಲ್ಲೇ ನಿಂತು ನೋಡುತ್ತಿದ್ದ ಕುಮುದ್ವತಿಯ ಮೈ 'ಜುಂ' ಎಂದು ಕಂಪನವೆನ್ನಬಹುದಾದ ಮಟ್ಟಿಗೆ ಮೆಲ್ಲಮೆಲ್ಲನೆ ಅದುರಿತು ಮೈ. ನಾಗಮ್ಮ ಸಾವಿತ್ರಿ ಸೀತಮ್ಮ ಎಲ್ಲಿದ್ದರಲ್ಲೇ ಮೂರ್ತಿವತ್ತಾದರು.

“ಈ ಹುಡುಗರ ಉಗ್ರರೂಪ ಅರ್ಥವೇ ಆಗುವುದಿಲ್ಲ” ಎಂದಳು ನಾಗಮ್ಮ.

“ತಂದೆ ಕಥೆ ಹೇಗಾದರೂ ಆಗಲಿ. ಆಸ್ತಿ ಮನೆ ತಮಗೆ ಬೇಕು ಅಷ್ಟೆ. ತಂದೆಯ ಕ್ಷೇಮ ಬೇಕಿಲ್ಲ.” ಸಾವಿತ್ರಿ ಪ್ರತಿಕ್ರಿಯಿಸಿ “ಇವರಿಬ್ಬರಿಗೂ ಮದುವೆಗೆ ಆಹ್ವಾನ ಕೊಡುವುದೇ ಬೇಡ. ಹೀಗಿದ್ದವರನ್ನು ಬರಮಾಡಿದರೆ ಮತ್ತೆ ಗಲಾಟೆ ಮಾಡುವುದು ಸತ್ಯ.”

“ಸರಿ...ಹೇಳುವುದೇ ಬೇಡ ಬಿಡು” ಎಂದ ರಾಮನಾಥ. ಒಡಲಿನ ಬೇಸರ–ಸಂಕಟಗಳು ಮುಖದಲ್ಲಿ ಮುದ್ರೆಯೊತ್ತಿದುವು.

“ಇದ್ದವರಿಬ್ಬರೂ ಹೀಗಾಡಿದರೆ ಬಾಂಧವ್ಯ ಏನುಳಿಯಿತು ? ಮಕ್ಕಳಿಗೆ ಪ್ರೀತಿ–ವಿಶ್ವಾಸ–ಗೌರವಗಳು ಇರಕೂಡದೇ? ಇದು ಎಂತಹ ದುರ್ವ್ಯವಹಾರ? ಛಿ ! ನಾಚಿಗೆಗೇಡು !”

ಇವರೆಲ್ಲಾ ಮಾತಾಡುತಿದ್ದರೆ ಸೀತಮ್ಮ ಬೆಕ್ಕಸಬೆರಗಾಗಿ ನೋಡುತಿದ್ದಾಳೆ. ಮುಂದೇನು ಗತಿಯೋ...ಎಂಬ ಭಯ ಮನದಲ್ಲಿ. ಮನೆ ಬಿಟ್ಟು ಬಂದಾಗಿದೆ. ಮುಂದೆ ಇಲ್ಲಿಂದ ಹೊರಡಬೇಕಾಗಿ ಬಂದರೆ ಹೋಗುವುದೆಲ್ಲಿಗೆ ? ಮೈಯಲ್ಲಿ ನೆತ್ತರು ಹೆಪ್ಪುಗಟ್ಟಿದಷ್ಟು ಜೀವ ಭಾರ. ತನ್ನ ಬಿಡದಿಗೆ ಹೋಗಿ ಕುಳಿತುಕೊಂಡಳು ಮಂಚದ ಮೇಲೆ.

ನಾಗಮ್ಮ, ಸಾವಿತ್ರಿಯರು ಅಲ್ಲಿಗೇ ಬಂದರು. ಸ್ವಲ್ಪ ಹೊತ್ತು ಅದೇ ವಿಷಯ ಎಲ್ಲರ ಬಾಯಲ್ಲಿ ನಲಿಯಿತು. ಅನಂತರ,

“ಪದ್ಮಳ ಒಡವೆಗಳಿಗೆಲ್ಲಾ ಒಪ್ಪ ಹಾಕಿಸಿದ್ದೇವೆ, ಸಧ್ಯ ಇವೇ ಸಾಕು. ಮುಂದೆ ಬೇಕಾದರೆ ಹೊಸ ತರಹ ಮಾಡಿಸಿಕೊಳ್ಳಬಹುದು” ನಾಗಮ್ಮ ನುಡಿದಳು.

“ನನಗೆ ಒಡವೆಗಳು ಇಷ್ಟನೇ ಇಲ್ಲ. ನಾನೊಂದನ್ನೂ ತೊಡುವುದಿಲ್ಲ. ನನಗೆ ನಿರಾಭರಣೆಯಾಗಿರುವುದೇ ಇಷ್ಟ.”

“ಅದೇಕಮ್ಮಾ ಹಾಗೆನ್ನುತ್ತಿ ? ಮದುವೆ ಹೆಣ್ಣು ಒಡವೆ ಹಾಕದಿದ್ದರೆ ಹೇಗೆ ?”

"ಒಡವೆ ಬೇಡ ಬರೀ ಹೂಹಾರ ಹಾಕಿದರೆ ಸಾಕು."

ಅದೇ ವೇಳೆಗೆ ರಾಮನಾಥ ದೇವಯ್ಯನೊಡನೆ ಕಾಣಿಸಿಕೊಂಡ. ನಾಗಮ್ಮ ನುಡಿದಳು,

"ಒಡವೆಗಳೇ ಬೇಡವೆನ್ನುತ್ತಾಳೆ ಕುಮುದ್ವತಿ. ಮದುವೆ ಹೆಣ್ಣು ಒಡವೆ ಧರಿಸದಿದ್ದರೇನು ಚೆನ್ನ ?"

"ಅವಳಿಷ್ಟಕ್ಕೇ ಬಿಟ್ಟುಬಿಡಿ" ಎಂದ ರಾಮನಾಥ.

ಅವಳ ಸ್ವಭಾವ ಗೊತ್ತಿದ್ದುದರಿಂದ ಒತ್ತಾಯಿಸಲು ಇಷ್ಟ ಪಡಲಿಲ್ಲ ರಾಮನಾಥ.

"ತಾಳಿ ?"

"ಅದೂ ಬೇಡ. ಹೂ ಹಾರವೇ ಸಾಕು" ಎಂದಳು ಕುಮುದ್ವತಿ. ಅದು ವರೆಗೆ ಲಜ್ಜೆಯನ್ನೇ ಅರಿಯದಿದ್ದ ಅವಳಿಗೆ ಇಂದೇಕೋ ಲಜ್ಜೆಯು ಮೂಡಿ ಮುಖಬಿಂಬ ಕೆಂಪು ಕೆಂಪು ತಳೆಯಿತು.

"ಅದು ಹೇಗಾದೀತು ಅಮ್ಮಣ್ಣಿ ? ಮದುವೆಯ ಸಂಕೇತವೇ ಮಾಂಗಲ್ಯ. ಅದನ್ನೂ ಬೇಡವೆಂದರೆ ಹೇಗೆ ?" ಸಾವಿತ್ರಿಯ ಪ್ರಶ್ನೆ.

ಸೀತಮ್ಮನಿಗೆ ಒಡಲೆಲ್ಲಾ ಕಸಿವಿಸಿ. ಈ ಮಗಳ ಹಠವಾದಿತನದಿಂದ ಯಾರ್ಯಾರ ಮನಸ್ಸು ಒಗರಾಗಿ ಏನೇನು ಹಗರಣ ಹುಟ್ಟಿಕೊಳ್ಳುತ್ತದೋ, ಎಂದು. ಅವಳು ಅದೇ ಗಳಿಗೆಯಲ್ಲಿ ತನ್ನನ್ನು ತಾನು ಸಾವರಿಸಿಕೊಂಡು ನುಡಿದಳು,

"ಧಾರಾಮುಹೂರ್ತಕ್ಕೆ ತಾಳಿ ಇರಲಿ. ಹತ್ತೂ ಜನರ ಮುಂದೆ ತಾಳಿ ಇಲ್ಲದೇ ಧಾರೆಯೆರೆಯುವುದು ಹೇಗೆ ? ಇದಂತೂ, ಎಲ್ಲರಿಗೂ ಬೇಸರ ತರುತ್ತೆ ನೋಡು !"

"ಮದುವೆಯ ಸಂಕೇತವಾಗಿ ಗಂಡು ಮಾಂಗಲ್ಯಧಾರಣೆ ಮಾಡಿಕೊಳ್ಳು ರೆಯೇ ? ವಿದೇಶಗಳ ಕಡೆ ನೋಡಿ ಮಾಂಗಲ್ಯ ಯಾರಿಗೂ ಇಲ್ಲ. ಜೀವನದಲ್ಲಿ ನಾವೂ ಅಲ್ಪಸ್ವಲ್ಪ ಸುಧಾರಣೆ ತರೋಣ. ಮೊದಮೊದಲು ನಾಲ್ಕು ಜನ ಮಾತಾಡುತ್ತಾರೆ ಅನಂತರ ಯಾರೂ ಮಾತಾಡುವುದಿಲ್ಲ..."

ಅದಕ್ಕೆ ರಾಮನಾಥ ಅಂದ,

"ಧಾರಾ ಮುಹೂರ್ತದಲ್ಲಿ ಮಾಂಗಲ್ಯ ಹಾಕಿಸಿಕೊ. ಅನಂತರ ನಿನ್ನ ಇಷ್ಟ ಬಂದಂತೆ ಮಾಡಿಕೊ..."

ಆ ಮಾತಿಗೆ ಒಪ್ಪಿದ ಕುಮುದ್ವತಿ ಒಂದು ಗಳಿಗೆ ತಡೆದು ಹೇಳತೊಡಗಿದಳು,

"ನಾನು ಈ ವಿಚಾರವನ್ನು ಕುರಿತು ಆಳವಾಗಿ ಯೋಚಿಸಿರುವೆ. ಸುಮ್ಮ ಸುಮ್ಮನೆ ಹೇಳುತ್ತಿಲ್ಲ. ಓಬೀರಾಯನ ಕಾಲದ ಮೂಢ ನಂಬಿಕೆಗಳಿಗೆಲ್ಲಾ ಇಂದೂ, ಈಗಲೂ ಜೀವದಾನ ಮಾಡುತ್ತಾ ಹೋಗುವುದು ಸರಿಯಲ್ಲ. ಒಬ್ಬಿಬ್ಬರು ಹೊಸ ವಿಧಾನ ಕಂಡುಕೊಂಡರೆ ಅನಂತರ ಉಳಿದವರು ಅನುಸರಿಸುತ್ತಾರೆ. ಮುಂದಿನ ಹುಡುಗಿಯರಿಗೆ ನಾವು ಮೇಲ್ಪಂಕ್ತಿಯಾಗುವಂತೆ ಬಾಳಿದರೆ ಸಮಾಜ ಸುಧಾರಣೆಯಾಗುತ್ತದೆ. ವಾದ್ಯಮೇಳ, ಸಾವಿರಾರು ಮಂದಿಯ ಗದ್ದಲ–ಗೊಂದಲ; ಭೂರಿ ಭೋಜನ ಒಂದೂ ಬೇಡ. ತೀರಾ ಸರಳವಾಗಿ ಎರಡೂ ಮನೆತನದ ಹತ್ತು ಮಂದಿಯ ಮುಂದೆ ದೇವಸ್ಥಾನದಲ್ಲಿ ಹೂ ಹಾರ ಧರಿಸಿದರೆ ಸಾಕು. ಸಾವಿರಾರು ಮಂದಿ ಕೂಡಿ ಗದ್ದಲ ಹೂಡಿ ಮಾಡಿದರೂ 'ಮದುವೆ'. ತೀರಾ ಸರಳವಾಗಿ ಸದ್ದು ಗದ್ದಲಗಳಿಲ್ಲದಂತೆ ಮಾಡಿಕೊಂಡರೂ 'ಮದುವೆ' ಅಂದಮೇಲೆ, ಸರಳತನವೇ ಇರಲಿ. ಖರ್ಚು ವೆಚ್ಚಗಳ ಗೋಜೇ ಬೇಡ. ಕೂಡಿದವರಿಗೆ ಸಿಹಿ ಹಂಚಿದರಾಯಿತು."

ಆ ಮಾತಿಗೆ ಯಾರೂ ಮರು ನುಡಿಯಲಿಲ್ಲ. ನಾಗಮ್ಮ–ಸಾವಿತ್ರಿಯರಿಗೆ ಒಡಲಾಳದಲ್ಲಿ ಕಸಿವಿಸಿ ಇದ್ದರೂ ತೋರಿಕೊಳ್ಳಲು ಇಷ್ಟಪಡಲಿಲ್ಲ. 'ಸಮಾಜದ ಗೊಡ್ಡು ಸಂಗ್ರದಾಯಗಳನ್ನು ಮುರಿದು ಸುಧಾರಿಸಿಕೊಳ್ಳುವುದರಲ್ಲಿ ಅರ್ಥವಿದೆ. ಇಂದಿನ ವಿದ್ಯಾವಂತರು ಸುಧಾರಿಸಿಕೊಳ್ಳಬೇಕು' ಎಂದು ಬೆಳಿಗ್ಗೆ ಅಣ್ಣನಾಡಿದ್ದ ಮಾತುಗಳು ಕಿವಿಯಲ್ಲಿ ಮತ್ತೆ ಮತ್ತೆ ಮೊರೆದುವು. ಭಾವೀ ದಂಪತಿಗಳ ಅಭಿಪ್ರಾಯ ಒಂದೇ ಆಗಿದೆ. ಮತ್ತೆ ನಾವೇಕೆ ತಲೆ ಹಾಕಬೇಕು ಎಂದುಕೊಂಡರಾ ಸುದತಿಯರು.

° ° ° °

ವಿಶ್ವೇಶ್ವರಭಟ್ಟರು ಸಣ್ಣ ಬುಟ್ಟಿಯಲ್ಲಿ ತೀರ್ಥ ಪ್ರಸಾದಗಳನ್ನಿಟ್ಟು ಕೊಂಡು ಬಂದರು ಮನೆಗೆ. ಶಿವಾಲಯದ ಭಟ್ಟರಾದ ಅವರು ಊರಿನಲ್ಲಿ ಎಲ್ಲ ರಿಗೂ ಪುರೋಹಿತರೇ. ಜಾತಕ ನೋಡಿ ಸಂಬಂಧ ಕೂಡಿಸುವಲ್ಲಿ, ಶಾಸ್ತ್ರ ಸಂಪ್ರದಾಯಗಳನ್ನು ಹೇಳುವಲ್ಲಿ, ನಿಮಿತ್ತ ನೋಡಿ ಭೂತಗಣ ಬಿಡಿಸುವಲ್ಲಿ ಊರಿಗೇ ಪ್ರಸಿದ್ಧ. ಅಲ್ಲಿ ಅವರಿಲ್ಲದ ಯಾವ ಶುಭ ಕಾರ್ಯವೂ ನಡೆಯುವು ದಿಲ್ಲ. ಮನೆ ಮನೆಗೂ ಅವರು ಬೇಕು. ಶಿವಾಲಯವು ಸದಾ ಭಕ್ತಜನರಿಂದ ತುಂಬಿ ಹೋಗಿರುತ್ತದೆ. ಪೌರೋಹಿತ್ಯದಲ್ಲೇ ಅವರು ಸಂವೃದ್ಧ ಜೀವನ ನಡೆ ಸುತ್ತಾರೆ. ಎಲ್ಲ ಪೂಜಾರಿಗಳಂತೆ ಅವರು ಬಡತನದ ದಳ್ಳುರಿಗೆ ಸಿಕ್ಕಿದವರಲ್ಲ.

ರಾಮನಾಥ ಅವರನ್ನು ಬರಮಾಡಿಕೊಂಡು ಹಜಾರದಲ್ಲಿ ಕುಳ್ಳಿರಿಸಿ ತಾನೂ ದೇವಯ್ಯನೊಂದಿಗೆ ಕುಳಿತುಕೊಂಡ. ಉಭಯ ಕುಶಲೋಪರಿಯು ನಡೆಯಿತು.

"ದೇವಸ್ಥಾನದ ಪಾಳಿ ಶಿಥಿಲಗೊಂಡಿದೆ. ಅದಕ್ಕೊಂದಿಷ್ಟು ಕಾಯಕಲ್ಪ ಮಾಡಬೇಕಾಗಿದೆ. ಊರವರಿಂದ ವಂತಿಗೆ ಪಡೆದು ಬ್ಯಾಂಕಿನಲ್ಲಿ ಇಡುಗಂಟಾಗಿ ಡುವ ಯೋಚನೆ ಇದೆ. ಈಗ ತಾನೇ ಹಣ ಸೇರಿಸುವ ಕಾರ್ಯ ಆರಂಭಿಸಿರುವೆ. ಇದೋ ನೋಡಿ ಈ ನೋಟ್ ಬುಕ್. ಇದರಲ್ಲಿ ಲೆಕ್ಕ ಬರೆದಿಟ್ಟಿರುವೆ. ನೀವು ನಿಮ್ಮಿಂದ ಎಷ್ಟು ಸಾಧ್ಯವಾದೀತೋ ಅಷ್ಟು ಕೊಟ್ಟು ಸ್ವಾಮಿಗೆ ನಿಮ್ಮ ಸೇವೆ ಸಲ್ಲಿಸಿಬಿಡಿ."

ರಾಮನಾಥ ಲೆಕ್ಕ ನೋಡಿದ. ಅದುವರೆಗೆ ಐದು ಸಾವಿರದವರೆಗೆ ಹಣ ಕೈಗೂಡಿದೆ. ದೇವಸ್ಥಾನದ ಪೌಳಿ ಶಿಥಿಲವಾಗಿರುವುದೂ ಸತ್ಯವೇ. ಭಟ್ಟರ ಉದ್ದೇಶ ಸ್ತುತ್ಯವಾದುದು ಮಾತ್ರವಲ್ಲ ಎಲ್ಲರೂ ಅದನ್ನು ಮನಗೊಂಡು ಮುಕ್ತ ಹೃದಯದಿಂದ ಹಣ ನೀಡಲು ಮುಂದಾಗಬೇಕು, ಎನಿಸಿತು. ಆ ಕೂಡಲೇ ಅಂದ "ನಾನು ಐದು ಸಾವಿರ ಕೊಡುವುದಲ್ಲದೆ ಅದರ ದುರಸ್ತಿಯನ್ನು ಸುಸೂತ್ರವಾಗಿ ನಡೆಸುವಾಗ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವೆ."

"ಒಳ್ಳೆಯದು ಸ್ವಾಮಿ......"

ಆಗಲೇ ನೋಟ್ ಬುಕ್ಕಿನಲ್ಲಿ ಐದು ಸಾವಿರ ರೂಪಾಯಿಗಳ ಕೊಡಿಗೆ ಯನ್ನು ಬರೆದು ಸಹಿ ಹಾಕಿದ ರಾಮನಾಥ.

"ಭಟ್ಟರೇ, ಹೆಣ್ಣು ಗಂಡಿನ ಜಾತಕ ನೋಡಿಬಿಡಿ. ತರುತ್ತೇನೆ." ಎಂದಷ್ಟು ನುಡಿದು ಒಳ ಹೋದಳು ನಾಗಮ್ಮ.

ಬಿಡದಿಯಲ್ಲಿದ್ದ ಸೀತಮ್ಮನನ್ನು ಕಂಡು "ಅಮ್ಮಾ, ಕುಮೂ ಜಾತಕ ಕೊಡ್ತೀರಾ? ಭಟ್ಟರು ಬಂದಿದ್ದಾರೆ, ಒಮ್ಮೆ ನೋಡಿಸಿಬಿಟ್ಟೋಣ."

ಕುಮುದ್ವತಿ ಆ ಮಾತು ಕೇಳಿ ನುಡಿದಳು,

"ಜಾತಕ ನೋಡುವ ಅಗತ್ಯವಿಲ್ಲ ಬಿಡಿ. ದಯವಿಟ್ಟು ಏನೂ ತಿಳಿದು ಕೊಳ್ಳಬೇಡಿ."

"ಏಕಮ್ಮಾ, ಜಾತಕ ನೋಡುವುದರಿಂದ ತೊಂದರೆ ಏನು?"

"ಹಿಂದಿನ ಎರಡೂ ಸಂಬಂಧಗಳನ್ನು ಜಾತಕ ನೋಡಿ ಮಾಡಿದ್ದಾರೆ ತಾನೇ? ಅದರಿಂದ ಏನಾಯ್ತು ಯೋಚಿಸಿ ನೋಡಿ."

"ಹಾಗಿದ್ದರೆ 'ಬೇಡ' ಅಂತೀಯೇನು?"

"ಖಂಡಿತ....ಅದರ ಅವಶ್ಯಕತೆಯಿಲ್ಲ, ಬಿಡಿ."

ಸೀತಮ್ಮ ಕೇಳಿದಳು "ಬೇಡವೇ ಕುಮೂ?"

"ಬೇಡ ಬೇಡ. ನಮ್ಮ ಹಣೆಯಲ್ಲಿ ದೇವರು ಏನು ಬರೆದಿದ್ದಾನೋ ಅದು ಆಗಿಯೇ ತೀರುತ್ತದೆ. ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯ ವಿಲ್ಲ."

"ಅದು ನಿಜವೇ" ಎಂದುಕೊಂಡಳು ನಾಗಮ್ಮ.

ಹೊರಬಂದು "ಜಾತಕ ಇಲ್ಲ, ಭಟ್ಟರೇ...ಅದಿಲ್ಲದಿದ್ದರೂ ಆದೀತು, ಜಾತಕ ಬಿಟ್ಟೇ ಮಾಡೋಣ. ಒಳ್ಳೆಯ ಮುಹೂರ್ತ ನೋಡಿ ಹೇಳಿ" ಎಂದಳು.

ರಾಮನಾಥ ಮತ್ತು ದೇವಯ್ಯ ಅವಳ ಮುಖಭಾವನೆಯನ್ನು ಅವ ಲೋಕಿಸಿ ಸುಮ್ಮನಾದರು.

ಭಟ್ಟರು ಒಂದು ಗಳಿಗೆ ತನ್ನಲ್ಲೇ ಆಲೋಚಿಸಿ ನುಡಿದರು "ಶುಕ್ರವಾರ ಬೆಳಿಗ್ಗೆ ಒಂಭತ್ತು ಗಂಟೆಗೆ ಒಳ್ಳೆಯ ಮುಹೂರ್ತವಿದೆ. ಅದರಲ್ಲೇ ಮಾಡಿ ಕೊಳ್ಳಬಹುದು."

"ಎರಡೂ ಮನೆಯ ಒಳಗ ಮಾತ್ರ ಬರುತ್ತೇವೆ. ಮದುವೆಯ ಕರೆಯೋಲೆ ಇಲ್ಲ. ನಮ್ಮ ತೋಟದ ಆಳುಕಾಳುಗಳು ಕೂಡಿ ಇಪ್ಪತ್ತು ಮಂದಿ ಇದ್ದಾರು. ಸಿಹಿ ಕಾರ ಹೆಚ್ಚು ಮಾಡಿದ್ದರೆ ಬಡವರಿಗೆ ಹಂಚಬಹುದು."

"ಆಯಿತು ಸ್ವಾಮಿ. ಏಳು ಗಂಟೆಗೇ ಬಂದುಬಿಡಿ. ಸತ್ಯನಾರಾಯಣ ವ್ರತಕ್ಕೆ ಸಕಲ ಸಾಮಗ್ರಿಗಳನ್ನು ಹೊಂದಿಸಿಕೊಳ್ಳಬೇಕು. ಪೂಜೆ–ಪ್ರಾರ್ಥನೆಗಳಿಗೆ ಸಮಯವಿರುತ್ತದೆ."

"ಆಗಲಿ."

ಮದುವೆ ಖರ್ಚಿಗೆ ಹಣ ಕೊಟ್ಟು ಕೈ ಮುಗಿದ ರಾಮನಾಥ.

ಹರಿವಾಣಕ್ಕೆ ದಕ್ಷಿಣೆ–ಹಣ್ಣು–ಕಾಯಿಗಳನ್ನು ತುಂಬಿಕೊಟ್ಟಳು ನಾಗಮ್ಮ.

ರಾಮನಾಥ ಆನಂದ ತುಂದಿಲತೆಯಲ್ಲಿ ಮುಳುಗಿ ಮೈಮರೆತ. ಜಗತ್ತೇ ಮಧುಮಯವಾಗಿ ತೋರಿತು. ಇನ್ನು ಮೂರೇ ಮೂರು ದಿನ ಮದವೆಯ ಮುಹೂರ್ತಕ್ಕೆ. ಅನಂತರ ಕುಮುದ್ವತಿ ತನ್ನ ಹೃದಯ ಸಾಮ್ರಾಜ್ಯದ ರಾಣಿ. ಮನೋಮಂದಿರದ ಪರಮ ದೇವತೆ. ವಿಷಯ ಮನವರಿಕೆಯಾದೊಡನೆಯೇ ದೇಹದಾದ್ಯಂತ ಪುಳಕಿತನಾದ. ಅವಳ ಧ್ಯೇಯೋದ್ದೇಶಗಳು ಮತ್ತು ವಿಚಾರ ಧಾರೆಯ ಪರಮಾವಧಿಯನ್ನು ನೆನೆಸಿಕೊಂಡರೆ ಹೃದಯ ವ್ಯಾಪ್ತಿಗೆ ಮೀರಿ ಮಿಡಿಯುತ್ತದೆ ದಡ ದಡ ದಡ.

ಕಾರಿನ ಡ್ರೈವರ್ ಪುಟ್ಟಸ್ವಾಮಿ ಅಂಗಳದ ಬದಿಯಲ್ಲಿ ಕಾರನ್ನು ತೊಳೆಯುತಿದ್ದ. ರಕ್ತವರ್ಣ ರಂಜಿತವಾದ ಅದು ಪ್ರೀತಿಯ ವಸ್ತು. ನಗರಕ್ಕೆ ಹೋಗಿ ಗೃಹ ಸಾಮಗ್ರಿಗಳನ್ನು ತರುವುದಿತ್ತು. ಸಾಮಾನಿನ ಉದ್ದುದ್ದ ಪಟ್ಟಿಯನ್ನೇ ತಯಾರಿಸಿದ್ದಾರೆ ನಾಗಮ್ಮ–ಸಾವಿತ್ರಿಯರು. ಮಕ್ಕಳಿಬ್ಬರೂ ವಿನಾ ಕಾರಣ ಗದ್ದಲವೆಬ್ಬಿಸಿ ಮದುವೆಯ ಸಮಾರಂಭದಲ್ಲಿ ಪಾಲ್ಗೊಳ್ಳದಂತೆ ದೂರವಾದುದು ವ್ಯಸನಕರ. ಕುಟುಂಬ ಸ್ನೇಹಪೂರ್ಣವಾಗಿ–ಇರಬೇಕಾದುದು ನ್ಯಾಯ ಆದರೂ, ಸ್ನೇಹ ಸಂಬಂಧಕ್ಕೆ ಎಳ್ಳು ನೀರು ಬಿಟ್ಟರು. ಹೀಗಾಗಬಾರದಿತ್ತು. ಅದೊಂದೇ ತೀರಾ ವ್ಯಸನಕರ...ಎಂಬುದು ಮನಸ್ಸನ್ನು ಕೊರೆಯುತ್ತಿರುತ್ತದೆ ಸರ್ವತ್ರ ಸದಾ.

ರಾಮನಾಥ ಎಲ್ಲಾ ವಿಷಯಗಳನ್ನೂ ಮನದಲ್ಲಿ ಹುಗಿದಿಟ್ಟು ನಗರಕ್ಕೆ ಹೊರಡಲು ಅಣಿಯಾದ.

ಅಂಗಳದ ಮರದ ಮೇಲೆ ಕಾಗೆಗಳು ಸೇರಿಕೊಂಡು ಕರ್ಕಶವಾಗಿ ಕೂಗುತ್ತ ಗೊಂದಲ ಹೂಡಿದ್ದುವು. ಅತ್ತ ಕಲ್ಲು ಒಗೆದು ಕೈಚಪ್ಪಾಳೆ ತಟ್ಟಿ ಓಡಿಸಿದ. ಆದರೆ, ಅವು ಕೇಳಬೇಕೆ ? ಅವುಗಳ ರಾಜ್ಯವೇ ರಾಜ್ಯ. ಭಯ–ರೋಗ–ರುಜಿನಗಳನ್ನು ಕಾಣದ ಅವು ಸುಖಜೀವಿಗಳು.

ಲೋಕದಲ್ಲಿ ಮಂದ ಮಂದ ಸಂಚಾರಿ ಮಾರುತನ ಸಹಕಾರ–ಸ್ನೇಹ–ಸೇವೆ ಅವ್ಯಾಹತವಾಗಿ ನಡೆದಿತ್ತು, ಪ್ರಾಣಿಕೋಟಿ ಹರ್ಷ ಪುಳುಕಿತವಾಗುವಂತೆ.

ಎಲ್ಲೋ ಏನೋ ಮೈನಾ ಹಕ್ಕಿಗಳು ಎಡೆಬಿಡದೆ ಕೂಗುತಿದ್ದುವು,

ಸುಖಮಾಪತಿತಂ
  ದುಃಖಮಾಪತಿತಂ ತಥಾ ।
ಚಕ್ರವತ್ ಪರಿವರ್ತಂತೆ
  ದುಃಖಾನಿ ಚ ಸಖಾನಿ ಚ ॥

ಎಂಬಂತೆ ಅರ್ಥಪೂರ್ಣವಾಗಿ ; ಭಾವಪೂರ್ಣವಾಗಿ.

— ೦ —

೭

ಸಾಯಂ ಬ್ರಹ್ಮಮುಹೂರ್ತಕ್ಕೆ ಪದಾರ್ಪಣೆ ಮಾಡಿದ ಅರುಣಾರುಣ ಇಳಿಮುಖನಾಗಿದ್ದ. ಹಗಲಿನ ಸುಡು ಬಿಸಿಲಿನ ಬೇಗೆ ತಣಿಯುತ್ತಿದೆ ಅನುಕ್ರಮವಾಗಿ. ಓಕುಳಿಯಲ್ಲಿ ಮಿಂದಂತೆ ಕೆಂಗಲಿಸುವ ಪಶ್ಚಿಮ ದಿಗ್ದೇಶದಲ್ಲಿ ಕೆನ್ನೀಲಗೆಂಪಿನ ಮೋಡಗಳು ಬೃಹದ್ ಗುಡಿ ಗೋಪುರ ಕಟ್ಟಿ ಸಿದ್ಧಗೊಳ್ಳುತ್ತಿವೆ ಅರುಣಾರುಣನ ಸ್ವಾಗತಕ್ಕೆ. ಒಯ್ಯೊಯ್ಯನೆ ತೀಡಿ ಬರುವ ಮಂದಮಂದಾನಿಲ; ಪರಿಸರದಲ್ಲಿ ತುಂಬಿ ಹರಡಿದ ಪುಷ್ಪ ಸೌರಭದ ನರುಗಂಪು; ಪಕ್ಷಿಗೊರಳ ಸಂಧ್ಯಾರಾಗ; ಎಲ್ಲವೂ ಸಾಯಂ ಸೊಬಗಿನ ಶೀತಲ ಶಾಂತಿಗೆ ಪೂರಕ.

ನಿರ್ಜನವಾದ ಪ್ರದೇಶ. ಗದ್ದೆ ತೋಟಗಳ ಕೆಲಸ ಮುಗಿಸಿ ಎಲ್ಲರೂ ಮನೆಗಳನ್ನು ಸೇರಿಬಿಟ್ಟಿದ್ದಾರೆ. ಎಲ್ಲಿಂದ ಎಲ್ಲಿಯವರೆಗೂ ನಿಶ್ಶಬ್ದ–ನೀರವ.

ಬೀಸುಗಾಳಿಯನ್ನು ಭೇದಿಸುತ್ತ ಕಾರು ವಸಂತನ ಮನೆ ಬಾಗಿಲಲ್ಲಿ ನಿಂತಿತು. ಅದರಿಂದ ನಾಗಮ್ಮ ಸಾವಿತ್ರಿಯರು ಇಳಿದರು. ವಸಂತ ಮನೆಯಲ್ಲಿಯೇ ಇದ್ದ. ಸೋದರತ್ತೆಯರನ್ನು ಕಂಡು ಸಂತಸದಿಂದ ತಲೆಬಾಗಿಲಿಗೆ ಬಂದು ಸ್ವಾಗತಿಸಿದ.

"ಬನ್ನಿ, ಬನ್ನಿ. ಅಪರೂಪವಾಗಿ ಬಂದಿದ್ದೀರಿ. ಮಾವಂದಿರು ಬರಲಿಲ್ಲವೇ ?"

"ಒಮ್ಮೆ ಬಂದು ಹೋದರು. ನಾಡಿದ್ದು ಪುನಃ ಬರುತ್ತಾರೆ ವಸೂ."

"ನ್ಯಾಯವಾಗಿ ನೀನು ಬಂದು ನಮ್ಮನ್ನು ವಿಚಾರಿಸಿಕೊಳ್ಳಬೇಕಿತ್ತು. ನೀನಂತೂ ಬರಲಿಲ್ಲ. ನಮ್ಮ ನಮ್ಮೊಳಗೆ ಇರಬೇಕಾದ ಸ್ನೇಹ ಸಂಬಂಧವನ್ನು ಎಂದೋ ಕೈಬಿಟ್ಟಿದ್ದೀಯೋ. ನಾವಾದರೂ ಬಂದು ನೋಡಿಕೊಂಡು ಹೋಗೋಣವೆಂದು ಬಂದಿದ್ದಾಯ್ತು. ಮಕ್ಕಳೆಲ್ಲಿ ?"

ನಾಗಮ್ಮನ ಮಾತಿಗೆ ಅವನೆಂದ,

"ನಮ್ಮ ಕೆಲಸವೇ ನಮಗೆ ಸರಿಹೋಗುತ್ತೆ. ನಿಮ್ಮ ಮನೆಗೆ ಬರಬಾರದೆಂದೇನೂ ಬಯಸಲಿಲ್ಲ. ಕಾಲ ಉರುಳಿದ್ದೇ ತಿಳಿಯದಂತೆ ಉರುಳುತ್ತನೆ ದಿನಗಳು. ಬನ್ನಿ ಕುಳಿತುಕೊಳ್ಳಿ. ಹೇಗಿದ್ದೀರಿ ? ಮಾವಂದಿರು ಬಂದಿದ್ದರೆ ಚೆನ್ನಾಗಿತ್ತು. ನೀವು ಮಾತ್ರ ಬಂದಿದ್ದೀರಿ ಅತ್ತೇ……."

ಬಳಬಳನೆ ಅಷ್ಟು ಮಾತಾಡಿ ಹಿಂದುಗಡೆ ಇದ್ದ ಮಡದಿಯನ್ನು ಕೂಗಿ ಕರೆದ. ಅರು ವರ್ಷದ ಸತ್ಯ ತಾಯಿಯ ಸೆರಗು ಹಿಡಿದುಕೊಂಡೇ ಒಳಬಂದ. ಅವಳೂ ಬಳಿಯಲ್ಲಿ ಕುಳಿತುಕೊಂಡಳು.

ನಾಗಮ್ಮ ಹೇಳತೊಡಗಿದಳು,

"ಏನೂ ಇಲ್ಲ ಕೇಳು, ನೀನು ಮೊದಲಿಂದಲೂ ಒಂದೇ ಸಮನೆ ಕಾಲು ಕೆರೆದು ಜಗಳಕ್ಕೆ ನಿಲ್ಲುತ್ತಿ ತಂದೆಯೊಂದಿಗೆ. ಹೆತ್ತ ತಂದೆಯಲ್ಲಿ ಗೌರವ–ಘನತೆ ಇರಬೇಡವೇ ? ಪಾಲು ಪಡೆದು ಬೇರೆ ಇರುವುದಕ್ಕಿಂತ ಅವರೊಂದಿಗೇ ಇದ್ದಿದ್ದರೆ ಎಷ್ಟು ಚೆನ್ನಾಗಿತ್ತು ? ಆ ದೇವಯ್ಯನವರಿಗೆ ಹೊಡೆಯುವುದೆಂದರೇನು ? ಅಣ್ಣನನ್ನು ನೆನೆಸಿಕೊಂಡರೆ ನಮಗೆ ಕರುಣೆಯ ಕಟ್ಟೆ ಒಡೆಯುತ್ತೆ. ಇಬ್ಬರು ಮಡದಿಯರನ್ನು ಕಳೆದುಕೊಂಡು ಸಂಕಟಪಟ್ಟಿಲ್ಲವೆ ? ಅವರಿಗೆ ನೀವೂ ಇನ್ನಿಷ್ಟು ತಾಪ ಕೊಟ್ಟರೇನು ಚಂದ ಹೇಳು ? ಅವನನ್ನು ಮದುವೆಯಾಗಬಾರದೆಂದು ತಡೆಯುವ ನೀವು ಅವರ ಸ್ನೇಹ ಸಂಬಂಧ ಇಟ್ಟುಕೊಳ್ಳಲಿಲ್ಲವೇಕೆ ? ಅವರಿಗೆ ಕೌಟುಂಬಿಕ ಜೀವನ ಬೇಡವೇ ? ಆ ಮನೆಯನ್ನು ನಡೆಸಿಕೊಳ್ಳುವವರು ಯಾರು ? ಅಣ್ಣನ ಕ್ಷೇಮ ನೋಡುವವರಾರು ? ಇದನ್ನೆಲ್ಲಾ ನೀನಲ್ಲದೆ ಇನ್ಯಾರು ಯೋಚಿಸಬೇಕು ? ಸುಮ್ಮನೆ ಜಗಳ–ದ್ವೇಷ ಇದು ಸರಿಯಲ್ಲ ವಸೂ."

"ನಾನೊಮ್ಮೆ ಹೋಗಿ ಹೇಳಿದೆ. ಅಲ್ಲೇ ಇರುವೆ ಎಂದು. ಅಪ್ಪಾಜಿ ಒಪ್ಪಲಿಲ್ಲ. ಈ ವಯಸ್ಸಿನಲ್ಲಿ ಮದುವೆಯಾದರೆ ಆಸ್ತಿ ಮನೆ ಪರಭಾರೆಯಾಗುತ್ತೆ. ಆಸ್ತಿ ಪೂರ್ತಿ ನಮಗೇ ಬರಬೇಕಾದುದು ನ್ಯಾಯ. ನಾವೇ ವಂಶದ ಹಿರಿಯ ಮಕ್ಕಳು ಅತ್ತೇ."

ಮುಖಬಿಂಬದಲ್ಲಿ ಅಸಮಾಧಾನ ಹೆಪ್ಪುಗಟ್ಟಿತು. ಅವನು ಬುಸುಗುಟ್ಟಿದ.

"ನೀವು ಸ್ನೇಹಭಾವದಿಂದ ಇರೋಲ್ಲ. ಮನೆಯಲ್ಲಿ ದಿನವೂ ಗಲಾಟೆ-ಗದ್ದಲ-ಅಶಾಂತಿ ಇದೆಲ್ಲಾ ಯಾರಿಗೆ ಬೇಕು ? ಅದಕ್ಕೆ ಅಣ್ಣ ನೀನಲ್ಲಿರುವುದನ್ನು ನಿರಾಕರಿಸಿರಬೇಕು. ನಾಡಿದ್ದು ಶುಕ್ರವಾರ ದೇವಸ್ಥಾನದಲ್ಲಿ ಕುಮುದ್ವತಿಯನ್ನು ಮದುವೆಯಾಗುತಿದ್ದಾರೆ. ನಾನು ನಿಮ್ಮನ್ನು ನೋಡುವ ಸಲುವಾಗಿ ಬಂದೆ. ಲಕ್ಷ್ಮೀ ಅತ್ತಿಗೆ ನಮ್ಮಲ್ಲಿ ತುಂಬಾ ಸ್ನೇಹದಿಂದ ಇದ್ದು ನಮ್ಮ ಕಷ್ಟ ಸುಖಗಳನ್ನು ನೋಡಿ ಆದರಿಸಿದ್ದಳು. ನಿಮ್ಮಿಬ್ಬರನ್ನೂ ನಾವು ಎತ್ತಿ ಆಡಿಸಿ ಪ್ರೇಮದಿಂದ ಬೆಳೆಸಿದ್ದೇವೆ. ಆ ಸ್ನೇಹ ಕೆಡಿಸಿಕೊಳ್ಳಬಾರದೆಂದೆ ನಾವು ಬಂದದ್ದು, ನಿಮ್ಮನ್ನು ಮದುವೆಗೆ ಆಹ್ವಾನಿಸುತ್ತಿಲ್ಲ. ಏಕೆಂದರೆ ನೀವಲ್ಲಿ ಗಲಾಟೆ ಮಾಡಿ ಅಶಾಂತಿ ಹಬ್ಬಿಸಬಾರದೆಂದು ಅಷ್ಟೇ. ಇನ್ನೇನಿಲ್ಲ. ನೀವೆಲ್ಲರೂ ಕೂಡಿ ಸಂತೋಷದಿಂದ ಭಾಗವಹಿಸುವಂತಿದ್ದರೆ ಎಷ್ಟು ಚೆನ್ನಿತ್ತು ? ಇದನ್ನೆಲ್ಲಾ ಯೋಚಿಸಿ ನೋಡು ವಸಂತ."

ಅದೇ ವೇಳೆಗೆ ವಾಸು ಬಂದ. ಇಬ್ಬರ ಮನೆಯೂ ಹತ್ತಾರು ಮಾರು ಅಂತರದಲ್ಲಿಯೇ. ಅವನು ಬರಬರುತ್ತಲೇ ಅಂದ "ನನ್ನ ಮನೆಗೆ ಬರುವುದಿಲ್ಲವೇ ?"

"ವಾಸೂ, ಖಂಡಿತ ಬರುತ್ತೇವೆ. ಕುಳಿತುಕೊ. ಇಲ್ಲಿ ಸ್ವಲ್ಪ ಹೊತ್ತಿದ್ದು ಅನಂತರ ನಿನ್ನ ಮನೆಗೆ. ಹೇಗಿದ್ದಾಳೆ ಸುಮಿ ?"

ಅಲ್ಲೇ ತುಂಬಾ ಹೊತ್ತು ಮಾತುಕತೆಗಳಾದುವು- ಸಾವಿತ್ರಿಯೂ ಹೇಳಿದ್ದು ಅದನ್ನೇ. ನೀವಿಬ್ಬರೂ ದ್ವೇಷ ಸಾಧನೆಗೆ ಹೊರಟಿದ್ದು ತಪ್ಪು ಎಂದು.

ಅದಕ್ಕೆ ಅವರಿಬ್ಬರೂ ಮಣಿಯುವವರೇ ಅಲ್ಲ. ಬೇಕಾದಷ್ಟು ಮಂದಿ ಆಳು ಕಾಳುಗಳಿದ್ದಾರೆ. ಮತ್ತೇಕೆ ಮದುವೆ ? ಆಸ್ತಿ ಪೂರಾ ನಮಗೇ ಬರಬೇಕು, ಎಂಬುದೇ ಹಠ.

"ಇಡೀ ಆಸ್ತಿಯನ್ನು ಸಮನಾಗಿ ಮೂರು ವಿಭಾಗ ಮಾಡಿದ್ದಾನೆ ಅಣ್ಣ. ಅವನಲ್ಲಿ ವ್ಯವಸಾಯ ನಿಷ್ಠೆ ಇದೆ. ಚೆನ್ನಾಗಿ ದುಡಿದುಕೊಳ್ಳುತ್ತಾನೆ. ಕೇಳು,

ಇದ್ದುದನ್ನೇ ರೂಢಿಸಿಕೊಳ್ಳದೆ ಬೇಕಾಬಿಟ್ಟೆ ಆಡಿ ಉತ್ಪತ್ತಿ ಕಡಿಮೆ ಮಾಡಿ ಕೊಂಡ ನಿಮಗೆ ಹೊಟ್ಟೆ ಉರಿ ಅಲ್ಲದೆ ಮತ್ತೇನು ? ನೀವು ಸಧ್ಯ ಕೊಂಕು-ದ್ವೇಷ ಇವುಗಳನ್ನೆಲ್ಲಾ ಬಿಟ್ಟು ಅಪ್ಪನಂತೆಯೇ ಚೆನ್ನಾಗಿ ದುಡಿದುಕೊಂಡು ಸುಖವಾಗಿರುವುದನ್ನು ಕಲಿಯುವುದು ಒಳ್ಳಿತು.

ಮೋಹಿನಿಯು ಕಾಫಿ-ತಿಂಡಿ ತಂದಿತ್ತಳು ಅತಿಥಿ ಸತ್ಕಾರಕ್ಕಾಗಿ.

ಹುಡುಗರು ಮಾತಾಡಲಿಲ್ಲ. ಒಡಲ ಕಿಚ್ಚೂ ತಣಿಯಲಿಲ್ಲ. ಎಲ್ಲಕ್ಕೂ 'ಹ್ಞೂ' ಎಂದರು ಅಷ್ಟೆ. ಸಾವಿತ್ರಿ ಕೊನೆಯದಾಗಿ ನುಡಿದಳು.

"ನಿಮ್ಮನ್ನು ಎತ್ತಿ ಆಡಿಸಿದ ಸಲಿಗೆ–ಪ್ರೀತಿಗಳಿಂದ ನಾವು ಇಷ್ಟು ಹೇಳಿ ದ್ದಾಯ್ತು. ನೀವು ನಮ್ಮ ಮೇಲೂ ಕೋಪಗೊಳ್ಳುವುದಾದರೆ ನಾವೇನೂ ಮಾಡಲಾರೆವು. ನಿನ್ನಮ್ಮ ಮತ್ತು ಪದ್ಮ ಇಬ್ಬರೂ ಒಳ್ಳೆಯ ಗೃಹಿಣಿಯರೇ. ಅದೃಷ್ಟವಿಲ್ಲ. ಅವರು ಬದುಕಿದ್ದಿದ್ದರೆ ಮರು ಮದುವೆ ಎಲ್ಲಿ ಬರುತಿತ್ತು? ಕಾಲೋಚಿತವಾಗಿ ವರ್ತಿಸುವುದನ್ನು ಎಲ್ಲರೂ ಕಲಿಯಬೇಕು. ಸುಮ್ಮನೆ ದ್ವೇಷ ಹಚ್ಚಿಕೊಳ್ಳುವುದರಿಂದ ನಿಮಗೇ ಕಷ್ಟ. ನಾವಿನ್ನು ವಾಸು ಮನೆಗೆ ಹೋಗಿ ಸುಮಿಯನ್ನು ಮಾತಾಡಿಸಿಕೊಂಡು ಹೋಗುತ್ತೇವೆ."

ಇಬ್ಬರೂ ಎದ್ದರು. ವಾಸುವು ಅವರೊಂದಿಗೆ ಹೊರಟ.

೦ ೦ ೦ ೦

ದೇವಯ್ಯನೊಡನೆ ರಾಮನಾಥ ವರಾಂಡದಲ್ಲಿ ಕುಳಿತಿದ್ದ.

ಮದುವೆಯ ಸಮಾರಂಭಕ್ಕಾಗಿ ಹೆಚ್ಚಿನ ಕೆಲಸವೇನೂ ಇರಲಿಲ್ಲ. ಆಳು ಗಳು ತೋರಣ ಕಟ್ಟುತಿದ್ದಾರೆ. ನಾಗಮ್ಮ ಸಾವಿತ್ರಿ ಮತ್ತು ಸೀತಮ್ಮ ಕೂಡಿಕೊಂಡು ಬಗೆಬಗೆಯ ತಿಂಡಿ ತೀರ್ಥಗಳನ್ನು ಮಾಡುತಿದ್ದಾರೆ. ಅಡಿಗೆ ಯವಳಾಗಿ ನೇಮಕಕೊಂಡು ಕೆಲಸ ನಿರ್ವಹಿಸುವ ರಂಗಮ್ಮ ನುರಿತ ಅಡಿಗೆ ಯವಳು. ಕೆಲಸ ಕಾರ್ಯದಲ್ಲಿ ಚತುರೆ. ಆದ್ದರಿಂದ ಎಲ್ಲರಿಗೂ ಸಂತೋಷವೇ.

ಮರುದಿನ ಬೆಳಗ್ಗೆಯೇ ಧಾರಾಮುಹೂರ್ತ.

ಬಿಡದಿ ಮನೆಯಿಂದ ಹೊರ ಹೆಜ್ಜೆ ಇಟ್ಟಿರಲಿಲ್ಲ ಕುಮುದ್ವತಿ.

ಕೃಷ್ಣ—ಸೋಮು ಮನೆಯನ್ನು ಖಾಲಿ ಮಾಡಿ ಜಮೀನ್ದಾರರಿಗೆ ಮನೆಯನ್ನು ವಹಿಸಿಕೊಟ್ಟು, ಮದುವೆಗೆ ಬಂದರು ಮಡದಿ ಮಕ್ಕಳ ಸಹಿತ. ಮನೆಯಲ್ಲಿ ಮದುವೆಯ ವಿಜೃಂಭಣೆ ಇಲ್ಲದೆ ಹೋದರೂ ಅಪೂರ್ವ ಸಂತಸದ ಸಮಾರಂಭ. ಆಳುಗಳಿಗೆ ನೆರೆಯುವರಿಗೆ ಮೂರು ದಿನದಿಂದ ಪಾಯಸದೂಟ. ನಗೆ ಮಾತುಗಳಿಂದ ತುಂಬಿ ನಲಿಯಿತು ಪದ್ಮಾಲಯ.

ಪದ್ಮಳ ಒಡವೆ ವಸ್ತುಗಳೇ ಹೇರಳವಾಗಿರುವಾಗ ಕೆಲವನ್ನಾದರೂ ಧರಿಸು ಎಂದು ನಾಗಮ್ಮ ಸಾವಿತ್ರಿಯರ ಒತ್ತಾಯ ಕುಮುದ್ವತಿಗೆ.

"ದಯವಿಟ್ಟು ಕ್ಷಮಿಸಿ ಅಮ್ಮಾ. ನನಗೆ ಒಡವೆ ಇಷ್ಟವೇ ಇಲ್ಲ," ಎಂಬುದು ಅವಳ ವಾದ.

"ಒಡವೆಯೆಲ್ಲಾ ಏನು ಮಾಡುತ್ತೀ ಹೇಳು ?"

"ಸಮಯೋಚಿತವಾಗಿ ಉಪಯೋಗಿಸಿಕೊಳ್ಳೋಣ. ಈಗಂತೂ ನನಗೆ ಏನೂ ಬೇಡವೇ ಬೇಡ."

"ಬೆಂಡೋಲೆ ತಾಳಿ ಎರಡಾದರೂ ಇರಲಿ. ಕಾಲಾಂತರದಲ್ಲಿ ಏನಾದರೂ ಮಾಡಿಕೋ..........ನೀನು ಸಣ್ಣ ಸಣ್ಣ ಕಾರಣಕ್ಕೂ ಹಠ ಮಾಡಬೇಡಮ್ಮಾ."

ಸಾವಿತ್ರಿಯ ಧ್ವನಿ ನಯವಾಗಿ ಹರಿದು ಬಂತು.

ಸೀತಮ್ಮ ಗೋಗರೆದಳು,

"ಎಲ್ಲರೂ ಬಾಯಿತುಂಬಾ ಹೇಳುತ್ತಿರುವಾಗ ನೀನು ಇಷ್ಟೊಂದು ನಿಮಿರಿ ನಿಲ್ಲುವುದು ಸರಿಯಲ್ಲ. ಎಲ್ಲರಿಗೂ ಬೇಸರ ಮಾಡಿದರೆ ಮದುವೆಯಲ್ಲಿ ಸಂತೋಷವೆಲ್ಲಿಂದ ಬರುತ್ತೆ ? ಎಲ್ಲರೂ ನಗುನಗುತ್ತ ಇರಬೇಕಾದ ಸಂದರ್ಭ ಇದು, ಯೋಚನೆ ಮಾಡು ಮಗಳೇ ! ಯಾರ ಮನಸ್ಸಿಗೂ ಬೇಸರ ಮಾಡಬೇಡ."

ಆ ಮಾತಿಗೆ ಮಣಿದಳು ಕುಮುದ್ವತಿ. ಬೆಂಡೋಲೆ ಮತ್ತು ಚಿಕ್ಕದೊಂದು ಸರವನ್ನು ಈಸಿಕೊಂಡು ಹಾಕಿಕೊಳ್ಳುತ್ತ "ಮೂರು ದಿನ ಮಾತ್ರ ಹಾಕಿಕೊಳ್ಳುವೆ. ಅನಂತರ ಆಕ್ಷೇಪಿಸಬಾರದು."

"ಸಧ್ಯ, ಅಷ್ಟಾದರೂ ಒಪ್ಪಿಕೊಂಡೆಯಲ್ಲಾ ಆದೇಸ ಂತೋಷ" ಎಂದು ಬೆನ್ನು ತಟ್ಟಿದಳು ಸಾವಿತ್ರಿ. ನಾಗಮ್ಮ–ರಂಗಮ್ಮ ಇವರು ಸಂತೋಷಪಟ್ಟರು.

ಮರುದಿನ ಬೆಳಿಗ್ಗೆ ಎಲ್ಲರೂ ದೇವಸ್ಥಾನಕ್ಕೆ ಹೊರಟರು. ರಾಮನಾಥನ ಭಾವಂದಿರೂ ಬಂದಿದ್ದರು.

ಪರಿಸರದವರು, ಆಳುಗಳು ಕೂಡಿ ನಲವತ್ತು–ಐವತ್ತು ಮಂದಿ ಮಾತ್ರ ಇದ್ದರು ದೇವಾಲಯದಲ್ಲಿ. ಪೂಜೆ, ವ್ರತಗಳ ನಂತರ ಮಾಂಗಲ್ಯ ಧಾರಣೆ. ಹನ್ನೊಂದು ಗಂಟೆಯ ಹೊತ್ತಿಗೆ ಎಲ್ಲಾ ಮುಗಿದು ದಂಪತಿಗಳಾದರು ರಾಮನಾಥ ಕುಮುದ್ವತಿಯರು.

ಅನಂತರ ಅಲ್ಲಿಯೇ ಊಟೋಪಚಾರ.

ವಿಶ್ವೇಶ್ವರಭಟ್ಟರು "ಇಂತಹ ಸರಳ ವಿವಾಹವನ್ನು ನಾನು ಈವರೆವಿಗೆ ಮಾಡಿಸಿರಲೇ ಇಲ್ಲ. ಇದೇ ಮೊದಲು. ದೇವರು ಮಂಗಳವನ್ನುಂಟುಮಾಡಲಿ," ಎಂದು ಬಾಯಿತುಂಬಾ ಹರಸಿದರು.

ಅನಂತರ ಫಲ ತಾಂಬೂಲಗಳ ವಿನಿಯೋಗ.

ಬಂದ ಅತಿಥಿಗಳು ಒಬ್ಬೊಬ್ಬರಾಗಿ ಹೊರಟರು. ಎಲ್ಲರೂ ಹೊರಟ ಮೇಲೆಯೇ ಸಾವಿತ್ರಿ ನಾಗಮ್ಮ ಸೀತಮ್ಮ ರಂಗಮ್ಮ ಎಲ್ಲರನ್ನೂ ಕಾರು ಮನೆ ಮುಟ್ಟಿಸಿ ಹಿಂದಿರುಗಿ ಬಂತು, ದಂಪತಿಗಳನ್ನು ಕರೆದೊಯ್ಯಲು. ಕೊನೆಯಲ್ಲಿ ಉಳಿದವರು ದಂಪತಿಗಳೊಂದಿಗೆ ಕಾರು ಹತ್ತಿದರು.

ಗೃಹಿಣಿಯಾಗಿ ಒಳಬಂದ ಕುಮುದ್ವತಿ ಪತಿಯ ಕೈ ಹಿಡಿದುಕೊಂಡು ನಡೆದಳು ದೇವರ ಮನೆಗೆ. ಇಬ್ಬರೂ ದೇವರಿಗೆ ಪೂಜೆ ಸಲ್ಲಿಸಿದರು. ಅಲ್ಲಿಯೂ ಭಟ್ಟರ ನೇತೃತ್ವದ ಪೂಜೆ. ಅನಂತರ, ಹಜಾರದಲ್ಲಿ ಅಳಿದ ಮಡದಿಯರಿಬ್ಬರ ಚಿತ್ರಪಟಗಳು ಬಾಗಿಲ ಅಕ್ಕಪಕ್ಕದಲ್ಲಿ. ಅಲ್ಲಿಯೂ ಹೂವಿಟ್ಟು ಕೈ ಮುಗಿದು ಪೂಜೆ ಸಲ್ಲಿಸಿದರು. ಕುಮುದ್ವತಿ ಅಡ್ಡಬಿದ್ದು ಮನದಲ್ಲೇ ಆಶೀರ್ವಾದ ಪಡೆದುಕೊಂಡಳು. ಅನಂತರ ಕೋಣೆ ಕೋಣೆಯನ್ನು ಹೊಕ್ಕು ಎಲ್ಲೆಲ್ಲಿ ಯಾವ ಯಾವ ಪಟಗಳಿದ್ದುವೋ ಅಲ್ಲಿಯೇ ಆರತಿಯನ್ನು ಬೆಳಗಿದರು ದಂಪತಿಗಳು.

ರಾಮನಾಥ ಮಡದಿಯ ಹಸ್ತವನ್ನು ಅದುಮಿ ಅಂದ,

"ಇನ್ನು ಮುಂದೆ ಎಲ್ಲಾ ನಿನ್ನದೇ. ನಾನೂ ಸಹ ನಿನ್ನ ಉಡಿಯ ಮಗುವೇ. ನೀನೇ ಸಂಬಾಳಿಸಿಕೊಂಡು ಹೋಗಬೇಕು. ನೀನು ಕಲಿತು ಬಲಿತ ನಿಷ್ಣಾತೆ. ನಿನಗೆ ನಾನು ಹೇಳಬೇಕಾದುದು ಏನೂ ಇಲ್ಲ." ದನಿಯಲ್ಲಿ ಹಾಲು ಸಕ್ಕರೆಯೇ ಹರಿದು ಬಂತು.

ಕುಮುದ್ವತಿಯ ಮುಖಬಿಂಬ ಅರಳಿ ಹೂನಗೆ ಚೆಲ್ಲಿತು. ಅವಳು ಮಾತಾಡಲಿಲ್ಲ.

ಅವನು ಆನಂದ ತುಂದಿಲತೆಯಲ್ಲಿ ಮಡದಿಯ ನಿಮ್ನೋನ್ನತ ಶರೀರದ ಮೇಲೆ ಕಣ್ಣಾಡಿಸಿದ. ಅಂದು, ವಿವಾಹ ಪೂರ್ವದಲ್ಲಿ ಅವಳೆಂದ ಮಾತುಗಳು ಕಿವಿಗಳಲ್ಲಿ ಮರು ಪ್ರಸಾರ ಹೊಂದಿದುವು.......ಸಾವಿರದೊಂಭೈನೂರೆಂಭತ್ತ ಮೂರರ ಕ್ರಿಮಿನಲ್ ಕಾಯಿದೆಯ ಪ್ರಕಾರ ಮಡದಿಯು ಗಂಡನ ಮೇಲೆ ಬಲಾತ್ಕಾರ ಅತ್ಯಾಚಾರ ಆಪಾದನೆ ಮಾಡಬಹುದು...! ಅವಳ ಸಂಪೂರ್ಣ ಅನುಮತಿಯಿಲ್ಲದೆ ಲೈಂಗಿಕ ಕ್ರಿಯೆಗೆ ಬಲಾತ್ಕರಿಸುವಂತಿಲ್ಲ. ಇಬ್ಬರ ಪರಸ್ಪರ ಪ್ರೀತಿಯ ಸಂಬಂಧ ಸುಜೀವನಕ್ಕೆ ದಾರಿ.......

ರಾಮನಾಥ ಏನೋ ಹೇಳಲು ಹೋಗಿ, ಅನಂತರ ನಾಲಿಗೆಯನ್ನು ಹಾಗೇ ಅದುಮಿ ಹಿಡಿದು ಸಮಯೋಚಿತವಾಗಿ ನುಡಿದ, "ಈ ಎಲ್ಲಾ ಸರ್ವಸ್ವವೂ ನಿನ್ನದೇ ನೀನು ನಿನ್ನಿಷ್ಟದಂತೆ ನಡೆದುಕೊಳ್ಳಬಹುದು."

ಅವಳ ಕೆನ್ನೆಗಳಲ್ಲಿ ಲಜ್ಜೆಯ ಕೆಂಗುಲಾಬಿಗಳು ಅರಳಿದುವು.

ಅವನು ಅಲ್ಲಿಂದ ಹೊರಟುಹೋದ. ಕುಮುದ್ವತಿ ಮನೆಯ ವಸ್ತುವಸ್ತುಗಳನ್ನೂ ನೋಡುತ್ತ ಒಳ ಹೊರಗೆ ಸುತ್ತಾಡಿ ಮತಿಗತಿಗೆ ಆನಂದವನ್ನು ತುಂಬಿಕೊಂಡಳು. ಕಣ್ಮನಗಳು ಮಂತ್ರಮುಗ್ಧವಾದುವು. ವಸ್ತುವಸ್ತುಗಳನ್ನು ಸತ್ಯ ಸುಂದರವಾಗಿ ಜೋಡಿಸಲ್ಪಟ್ಟ ಸುಂದರ ಗೃಹ. ನಾಗರಿಕ ಅಲಂಕಾರ. ನಾಗರಿಕ ಅಭಿರುಚಿ. ತಾನು ಹೊಸದಾಗಿ ಮಾಡುವುದೇನೂ ಉಳಿದಿಲ್ಲ ಎಂದುಕೊಂಡಳು.

ಶ್ರೀಹರಿ, ನಿಜವಾಗಿಯೂ ರಾಂದಾದ ದೈವವಂಚಿತ.......ಎಂದು ಅಂತರಂಗ ಕೂಗಿ ಹೇಳಿತು.

ಅಕ್ಕಂದಿರಿಬ್ಬರೂ ಬಿಟ್ಟುಕೊಟ್ಟ ಸ್ಥಾನದಲ್ಲಿ ತಾನಿರುವುದರಿಂದ ಅವರಿಗಿಂತಲೂ ಹೆಚ್ಚಿನ ದಕ್ಷತೆಯಿಂದ ಊರಿಗೊಂದು ಶೋಭೆಯಾಗಿ ಬಾಳಬೇಕೆಂಬ ಯೋಚನೆ ಮನದಲ್ಲಿ. ಕೇರಾ ಸಾಮಾನ್ಯ ಗೃಹಿಣಿಯಂತೆ ಮಕ್ಕಳು ಮರಿ ಮಾಡಿಕೊಳ್ಳುವುದರಲ್ಲಿ ವಿಶೇಷವೇನಿಲ್ಲ ಎನಿಸಿತು. ಮುಂದೆ ? ಅದು ಮನ ದಾಳದ ಪ್ರಶ್ನೆ.

ನಾಗಮ್ಮ–ಸಾವಿತ್ರಿಯರು ಮನೆಯ ಭಾಗ ವಿಭಾಗಗಳನ್ನು ತೋರಿಸುತ್ತ "ಅಂದಿನಿಂದಲೂ ಗೃಹ ಕಾರ್ಯಗಳ ನಿರ್ವಹಣೆ ವಹಿಸಿದ ಹಿಂದಿನ ಮಡದಿಯರಿಬ್ಬರೂ ಉತ್ತಮ ಗೃಹಿಣಿಯರೆ, ಆಗಿದ್ದರೂ ರೋಗಗಳ ಪಿಚಂಡಿ ಹಸ್ತಗಳಲ್ಲಿ ಸಿಲ್ಕಿ ನರಳಿದ ನತದೃಷ್ಟರು. ಅವರಿಗೆ ಸಂಪೂರ್ಣ ಸಹಾಯಕನಾಗಿ ನಿಂತ ಅಣ್ಣನ ಒಡಲಲ್ಲಿ ಮರುಕದ ಕರಂಡವೇ ತುಂಬಿದೆ. ಅಣ್ಣ ಎಲ್ಲ ರೀತಿಯಿಂದಲೂ ಬುದ್ಧಿವಂತ. ಮೇಲಾಗಿ, ದಯಾವಂತ. ಇಂತಹ ಗಂಡಸರು ನಮ್ಮಲ್ಲಿ ಅಪೂರ್ವ ಎಂದೇ ಹೇಳಬೇಕು. ನೀನು ತುಂಬಾ ಅದೃಷ್ಟವಂತೆ ಎಂದರೆ ಕೋಪಿಸಿಕೊಳ್ಳುವುದಿಲ್ಲ ಅಲ್ಲವೇ ?" ಎಂದಳು ಸಂತಸಪೂರ್ಣ ದನಿಯಲ್ಲಿ. ಕೂಡಲೇ ಮುಖಬಿಂಬ ಅರಳಿದ ಮಂದಾರವಾಯಿತು.

ಕುಮುದ್ವತಿ ಉತ್ತರಿಸದೆ ಮುಗುಳು ನಕ್ಕಳು.

ಸಾವಿತ್ರಿ ಮತ್ತೆ ಅದೇ ಧಾಟಿಯಲ್ಲಿ ಮುಂದುವರಿದಳು "ಅಪ್ಪ–ಅಮ್ಮ ಒಂದೇ ವರ್ಷದಲ್ಲಿ ತೀರಿಕೊಂಡರು. ಮತ್ತೆ ಮೂರು ವರ್ಷಗಳ ಬಳಿಕ ಲಕ್ಷ್ಮಿ ಅತ್ತಿಗೆ ತೀರಿಕೊಂಡರು. ಅವರನ್ನು ಉಳಿಸಿಕೊಳ್ಳಲು ಸತತ ಪ್ರಯತ್ನ ಪಟ್ಟಿದ್ದಾನೆ ಅಣ್ಣ. ಆದರೆ, ಕಾಣದ ಕೈಗಳ ಪೈಶಾಚಿಕತೆ ಹೇಗೆ, ಯಾವ ಗಳಿಗೆಯಲ್ಲಿ, ಕತ್ತು ಹಿಸುಕುತ್ತೆ ಎಂಬುದನ್ನು ಪರಮಾತ್ಮ ಮಾತ್ರ ಬಲ್ಲ. ಹೋಗಲಿ ಬಿಡು, ಪದ್ಮ ದೂರದವಳಲ್ಲ. ಅವಳನ್ನು ಚಿಕ್ಕಂದಿನಿಂದಲೂ ಕಂಡಿದ್ದೇವೆ. ತುಂಬಾ ಆರೋಗ್ಯವಾಗಿ ದಷ್ಟಪುಷ್ಟವಾಗಿದ್ದ ಹೆಣ್ಣು. ಅಂತಹವಳಿಗೆ ಅರ್ಬುದ ರೋಗ ಬರಬೇಕೆ ? ಇದಕ್ಕೇನೆನ್ನಬೇಕು ಹೇಳು. ಅಣ್ಣ ದೈವಭಕ್ತ ; ಧರ್ಮನಿಷ್ಠ. ಅದರೂ, ಭಗವಂತ ಅವನಿಗೆ ನೀಡಿದ್ದು ಭಂಗವೇ. ಇನ್ನು ನಿನ್ನಿಂದಲಾದರೂ ಅವನ ಜೀವನ ಸುಖಮಯವಾಗಿರಲಿ. ನೀನು ಅವನ ಆಶೋತ್ತರಗಳಿಗೆ ವ್ಯತಿರಿಕ್ತವಾಗಿ ನಿಲ್ಲಬೇಡ ಕಂಡೆಯಾ. ಅವನದು ಬಲು

ನೊಂದ ಜೀವ. ಅವನಿಗೆ ಬೇಕಾದುದು ಶಾಂತಿ–ಸಮಾಧಾನಗಳು ಮಾತ್ರ. ಇನ್ನಾದರೂ ಅವನ ಜೀವನ ಸುಖಮಯವಾಗಿರಲಿ ಎಂದು ಹಾರೈಸುವೆ. ಅವನಿಗೆ ತಾಯಿ ತಂದೆಯರಲ್ಲೂ ಅಪಾರವಾದ ಭಕ್ತಿಯಿತ್ತು. ತಂಗಿಯರಲ್ಲೂ ಅಪರಿಮಿತ ಪ್ರೇಮ. ಇಂತಹ ಸದ್‌ವ್ಯಕ್ತಿ ಅಪರೂಪ ಈ ಕಾಲದಲ್ಲಿ. ಎಲ್ಲಿ ಯಾವ ಮನೆಯಲ್ಲಿ ನೋಡಿದರೂ ಸ್ವಾರ್ಥವೇ ಪರಮಾರ್ಥ. ತಾನುಂಟೋ ಮೂರು ಲೋಕವುಂಟೋ ಎಂಬ ಸ್ವಾರ್ಥಸಾಧನೆಗಾಗಿ ಇತರರಿಗೆ ಹಿಂಸೆ. ಇದು ಇಂದಿನ ಸಮಾಜ.”

‘ಹೌದು’ ಎಂಬಂತೆ ತಲೆದೂಗಿದಳು ಕುಮುದ.

“ಇಂತಹ ಕಾಲಮಾನದಲ್ಲಿ ನಮ್ಮಣ್ಣ ಚೊಕ್ಕ ಬಂಗಾರ-ಅಪರಂಜಿ ; ಅಂದರೆ ಅತ್ಯುಕ್ತಿಯೇನಲ್ಲಿ. ಅಂತಹವನನ್ನು ನೀನು ಮನಸ್ಸು ನೋಯಿಸ ಬೇಡ ತಾಯಿ. ನಿನಗೆ ಹಲವು ಧ್ಯೇಯೋದ್ದೇಶಗಳಿರಬಹುದು. ಸುಧಾರಣೆಯ ಹಂಬಲ ಮತ್ತೊಂದು ಮಗದೊಂದು ಏನಿದ್ದರೂ ಇಬ್ಬರೂ ಕೂಡಿಯೇ ಮಾಡಿ. ಬಹುಶಃ ಅಣ್ಣ ‘ಬೇಡ’ ಎನ್ನಲಾರ. ಇಂತಹವನ ಹೊಟ್ಟೆಯಲ್ಲಿ ಎರಡು ಕುನ್ನಿಗಳಂತೆ ಹುಟ್ಟಿದರು ವಸಂತ ವಾಸು. ಅವರನ್ನು ತಹಬಂದಿಗೆ ತರಲು ಪ್ರಯತ್ನಿಸಿ ಸೋತಿದ್ದಾನೆ ಅಣ್ಣ. ದುರದೃಷ್ಟ ಹೀಗಾಗಬಾರದಾಗಿತ್ತು.”

ಕುಮುದ್ವತಿ ‘ಶ್ರೀಹರೀ ಅಕ್ಷರಶಃ ಸತ್ಯ’ ಎಂದುಕೊಂಡಳು. ಒಡಲಲ್ಲಿ ಕರುಣೆಯ ಕಟ್ಟೆ ಬಿರಿಯಿತು. ದೇಹದಾದ್ಯಂತ ತಣ್ಣನೆಯ ನೆತ್ತರಿನ ಝರಿ ಚಿಲ್ಲನೆ ಹರಿದಾಡಿತು. ನೈನವಿರುಗಳು ಮೆಲ್ಲನೆ ನಿಮಿರಿದವು. ಸಾಂತ್ವನದ ಮಳೆಗರೆಯಿತು ಹೃದಯ ಬನ.

“ನೋಡು, ನೀನು ಹಲವಾರು ಕಾರ್ಯಕ್ರಮ ಇಟ್ಟುಕೊಂಡವಳು. ಒಳ್ಳೆ ವಿದ್ಯಾವಂತೆ ನಿನ್ನ-ಧ್ಯೇಯ ಸಾಧನೆಗಾಗೆ ಹದ್ದುಮೀರಿ ವರ್ತಿಸಿ ಅವನಿಗೆ ಬೇಸರ ಉಂಟುಮಾಡಬೇಡ. ಇದು ನಿನ್ನ ಮನೆ ; ನಿನ್ನ ಯಜಮಾನ; ಮುಂದೆ ನಿನ್ನ ಮಕ್ಕಳು ಎಲ್ಲಾ ನಿನ್ನವೇ. ನಾವು ಎಂದಾದರೂ ಹೀಗೆ ಬಂದು ಹೋಗುತ್ತೇವೆ ಅಷ್ಟೇ. ನಮಗೂ ನಿಮ್ಮ ಆಶ್ರಯ–ನೆರವು-ಸ್ನೇಹ ಎಲ್ಲಾ ಬೇಕು. ನಾವು ಎಂದಿಗೂ ಭೇದಭಾವ ಎಣಿಸಿದವರಲ್ಲ. ನಾವಿಬ್ಬರು ಮಾತ್ರ

ವಲ್ಲ. ನಮ್ಮಿಬ್ಬರ ಯಜಮಾನರುಗಳೂ ಅಷ್ಟೆ. ಈ ಮನೆಯ ಅಳಿಯಂದಿರಾಗಿ ಮಕ್ಕಳ ಪಾತ್ರವನ್ನೇ ವಹಿಸಿದ್ದಾರೆ. ಅಣ್ಣನ ಕಷ್ಟ ಸುಖಗಳಲ್ಲಿ ಸಮ ಭಾಜನರಾದವರು. ಮುಂದೆಯೂ ನಾವು ಅದೇ ರೀತಿ ಬಾಳುವವರೇ. ನೀನು ಅದನ್ನು ಗಮನದಲ್ಲಿಟ್ಟುಕೊಂಡು ನಮ್ಮೊಡನೆ ಬೆರೆತು ಬಾಳಬೇಕು ಎಂಬುದು ನಮ್ಮಾಶಯ."

"ತುಂಬ ಸಂತೋಷ ಅಮ್ಮಾ. ನೀವು ಆಗಾಗ ಬರುತ್ತೀರಿ. ಅಣ್ಣಂದಿರೂ ಬರಬೇಕು. ಹಾಗಿದ್ದರೇನೇ ಕುಟುಂಬ ಸೌಖ್ಯ. ಸಂಜೀವನ ಸಂಬಂಧ, ಶಾಂತಿ ಸಮಾಧಾನ."

ಇವರ ಮಾತುಕತೆ ನಡೆಯುತಿದ್ದಂತೆಯೇ ಹಿರಿಯ ಅಳಿಯ ನಾಗರಾಜ ಅಲ್ಲಿಗೆ ಬಂದ. ಹಾಸ್ಯಪ್ರಧಾನವಾದ ದನಿಯಲ್ಲಿ ನುಡಿದ "ಅಮ್ಮಾವರು ಏನು ಹೇಳುತ್ತಾರೆ? ನಾವೆಲ್ಲಾ ಈ ಮನೆಯ ಅವಿಭಾಜ್ಯ ಅಂಗ ಎಂದರೆ ಒಪ್ಪುತ್ತಾರೆಯೋ ?"

"ಖಂಡಿತ" ನಕ್ಕು ನುಡಿದಳು ಕುಮುದ್ವತಿ. "ಶಾಂತಿ–ಸಮಾಧಾನ–ಸಂತೋಷವೇ ಬಾಳಿಗೆ ಬೆಳಕು."

ಸಾವಿತ್ರಿ ಸಂತಸದಿಂದ ನುಡಿದಳು ಭಾವನನ್ನು ಕುರಿತು,

"ಕುಮೂ ಸಾಮಾಜಿಕ ಸೇವೆ ಮಾಡಬೇಕೆಂಬ ಆಸೆ ಉಳ್ಳವಳು. ಇನ್ನು ಸಂಸಾರಿಕ ಸಂಬಂಧವನ್ನು ಬಿಟ್ಟುಕೊಡುತ್ತಾಳೆಯೇ ? ಸಾಮಾಜಿಕ ಎಂದ ಮೇಲೆ ಸಂಸಾರ ಹೊರತಲ್ಲ, ಎಂಬುದನ್ನು ಹೇಳಿಕೊಡಬೇಕಾಗಿಲ್ಲವಷ್ಟೆ, ಭಾವ ?"

ಅಷ್ಟರಲ್ಲಿ ಸಾವಿತ್ರಿಯ ಪತಿ ಗಣೇಶ ಅಲ್ಲಿಗೆ ಬಂದು ಇವರ ಮಾತುಕತೆಯಲ್ಲಿ ಭಾಗವಹಿದ,

"ದಂಪತಿಗಳು ನಮ್ಮ ಕಡೆಗೆ ಬಂದು ನಮ್ಮ ಆತಿಥ್ಯವನ್ನು ಸ್ವೀಕರಿಸಬೇಕು, ಅಲ್ಲದೆ ಆಗಾಗ ಬರುತಿದ್ದು ನಮ್ಮ ಕಷ್ಟ ಸುಖಗಳಲ್ಲಿ ಭಾಗವಹಿಸಿ ಎಲ್ಲವನ್ನೂ ಹಂಚಿಕೊಳ್ಳಬೇಕು."

"ಆಗಬಹುದು, ಸ್ನೇಹ ಸಂಬಂಧವೇ ನಮಗೆ ಇಷ್ಟ. ನೀವುಗಳೂ ಆಗಾಗ ಬರುತ್ತಿರಬೇಕು" ಎಂದಳವಳು. ಸ್ನೇಹ ಸೌಹಾರ್ದಗಳ ಆಗರವಾಗಿ. ಆನಂದ ಭಾವದಿಂದ ಮುಖಬಿಂಬ ಅರಳಿ ಮಂದಾರವಾಯಿತು.

o o o o

ಮುಂದೆರಡು ದಿನಗಳಿದ್ದು ಸುಖ ಸಂತೋಷಗಳಿಂದ ಕಾಲಹರಣ ಮಾಡಿ ಗಣೇಶ–ನಾಗರಾಜ, ನಾಗಮ್ಮ–ಸಾವಿತ್ರಿಯರು ತಮ್ಮ ತಮ್ಮ ಮನೆಗಳಿಗೆ ಹೊರಟರು. ಇಬ್ಬರೂ ಜಮೀನು ಮನೆ ಉಳ್ಳವರು. ಅನುಕೂಲವಂತರೂ ಹೌದು. ಅವರನ್ನು ಎಲ್ಲರೂ ನಲ್ಮೆಯಿಂದ–ಪರಮ ಪ್ರೀತಿಯಿಂದ ಬೀಳ್ಕೊಟ್ಟರು.

ಮನೆಯಲ್ಲಿ ತುಂಬಿದ್ದ ಗಜಿಬಿಜಿ ಹರಿಯಿತು.

ಅಳಿಯ–ಮಾವ ಒಟ್ಟಾಗಿಯೆ ವ್ಯವಸಾಯದಲ್ಲಿ ಮೇಲ್ವಿಚಾರಣೆ ನಡೆಸತ್ತಾರೆ. ಸೀತಮ್ಮ ಅಂದಿನಂತೆಯೇ ಒಳಗಣ ಕೆಲಸದಲ್ಲಿ ಪಾಳ್ಗೊಳ್ಳುತ್ತ ಮೇಲ್ವಿಚಾರಣೆಯನ್ನೂ ನಡೆಸುತ್ತಾಳೆ. ರಾಮನಾಥನಿಗೆ ಅವರಿಬ್ಬರ ಕಾರ್ಯ ನಿರ್ವಹಣೆ ಇಷ್ಟವಾದರೂ ಶ್ರಮವಹಿಸುವವರಲ್ಲಾ ಎಂಬ ಕರುಣೆಯೂ ಇತ್ತು. ಆದರೆ, ಸುಮ್ಮನೆ ಕಾಲಹರಣ ಮಾಡುವುದು ಇಬ್ಬರಿಗೂ ಸಮ್ಮತವಲ್ಲ. ಕೈ ಕಾಲುಗಳಿಗೆ ಚಟುವಟಿಕೆ ಇರಬೇಕು ಎಂಬುದು ಇಬ್ಬರ ಮನದಾಸೆ, ಅಂದಿಂದಿಗೂ ಕೈತುಂಬಾ ಕೆಲಸ ಮಾಡಿದ ಜೀವ, ಈಗ ಬಿಟ್ಟುಕೊಡಲಾರರು ಕೂಡ.

ಮನೆಯ ಆವರಣದಲ್ಲಿ ಹಸುರು ಕಕ್ಕುವ ಹೆಮ್ಮರಗಳು. ಹಲ ಕೆಲವು ಹಣ್ಣಿನ ಮರಗಳು, ಹೂತೋಟ, ತರಕಾರಿಯ ತೋಟ ಎಲ್ಲವೂ ಸಮರ್ಪಕವಾಗಿಯೇ ಇವೆ. ಎಲ್ಲಿಯೂ ತಿದ್ದುಪಡಿ ಮಾಡುವ ಅಗತ್ಯವಿಲ್ಲ. ದಿನಚರಿ ಸಮರ್ಪಕವಾಗಿ ನಡೆದರೆ ಸಾಕು. ಕುಮುದ್ವತಿ ಒಳ ಹೊರಗಣ ಎಲ್ಲಾ ವ್ಯವಸ್ಥೆಯನ್ನೂ ಗಮನಿಸುತ್ತಾ ಬಂದಳು.

ಮನೆಯೊಳಗಣ ಯಾವುದೊಂದು ವಸ್ತುವನ್ನು ಸ್ಥಳಾಂತರಿಸುವುದೆಂದರೆ ಹೀಗಿರುವುದೇ ಚೆನ್ನು ಎನ್ನುತ್ತದೆ ಒಳದನಿ. ಯೋಚಿಸುವುದರೊಳ

ಗಾಗಿ ಆಳು ಕಪಿನೀಪತಿ"ಈಗ ಇದ್ದ ಹಾಗಯೇ ಬಿಡಿ. ಅದು ಬುದ್ಧಿಯವರಿಗೂ ಇಷ್ಟ; ಮೊದಲ ಅಮ್ಮ ಪದ್ಮಮ್ಮನವರಿಗೂ ಇಷ್ಟವಾಗಿತ್ತು. ಮತ್ತೇಕೆ ಬದಲಾವಣೆ ?" ಎನ್ನುತಿದ್ದ.

ಅವನು ಪ್ರಥಮ ಗೃಹಿಣಿ ಲಕ್ಷ್ಮಿಯ ಕಾಲದಿಂದಲೂ ಇದ್ದವನು. ಆ ಮನೆಯ ಹಿತಾಹಿತಗಳೆಲ್ಲಾ ಗೊತ್ತು. ಅವನ ಮಾತಿಗೆ ಪ್ರತಿ ಹೇಳುವುದಾಗಲೀ ತನ್ನದೇ ಆದ ಬದಲಾವಣೆಯನ್ನು ಮಾಡುವುದಾಗಲಿ ಸಾಧ್ಯವಾಗುತ್ತಿರಲಿಲ್ಲ ಅವಳಿಗೆ.

ಕುಮುದ್ವತಿ ತನ್ನೆಲ್ಲಾ ತಿದ್ದುಪಡಿಗಳಲ್ಲೂ ಸೋತುಹೋದಳು.

ಲಗ್ನವಾಗಿ ತಿಂಗಳೊಂದು ಉರುಳಿ ಹೋಯಿತು.

ಸತಿಪತಿಗಳಲ್ಲಿ ಸ್ನೇಹ–ಸಲಿಗೆ ಬೆಳೆಯಿತು. ಆನಂದರಸ ತಂತಾನೇ ಉಕ್ಕತೊಡಗಿತು. ಪತಿಯ ಗುಣಾದರ್ಶಗಳು ಅಂಗೈ ನೆಲ್ಲಿಕಾಯಿಯಷ್ಟು ಸುಸ್ಪಷ್ಟ. ಅನೇಕ ಮಂದಿ ತರುಣರನ್ನು ನಿರಾಕರಿಸಿ ಮದುವೆಯನ್ನು ಮುಂದೂಡಿಕೊಂಡು ಬಂದಿದ್ದ ತನ್ನ ಹೆಜ್ಜೆ ದಿಕ್ಕೆಡಲಿಲ್ಲ ಎಂಬ ಧೈರ್ಯ ಮತ್ತು ದಿವ್ಯ ಸಮಾಧಾನ ಮನಸ್ಸಿಗೆ. ನಿಷೇಕ ಪ್ರಸ್ತಕ್ಕೆ ಗೊತ್ತುಪಡಿಸಿದ್ದ ದಿನ ಬಳಿ ಸಾರಿ ಬಂತು. ಕುಮುದ್ವತಿ ಸುಖ–ಸಂತೋಷ–ಲಜ್ಜೆಗಳಿಂದ ತುಂಬಿ ತುಯ್ಯಲಾಡಿದಳು.

ಆದರೂ, ಕೇವಲ ಪತಿಯ ಹೃದಯ ಬನದ ರಾಣಿಯಾಗಿ, ಅಂಗೈಲಾಡುವ ಗಿಣಿಯಾಗಿ ಬಾಳಲಾರೆ ಎಂದೇ ಹೇಳುತಿತ್ತು ಆಂತರಿಕ ಧ್ವನಿ.

"ಬನ್ನಿ, ಈವತ್ತು ಎಲ್ಲರೂ ಹೋಗಿ ಶಿವಾಲಯದಲ್ಲಿ ಒಂದು ಪೂಜೆ ಸಲ್ಲಿಸಿ ಬರೋಣ."

ರಾಮನಾಥನ ಕರೆಗೆ ಎಲ್ಲರೂ ಓಗೊಟ್ಟರು. ಹಣ್ಣು ಕಾಯಿ ಹೂಗಳ ಸಮೇತ ಕುಮುದ್ವತಿ ಅಣಿಯಾದಳು ಸಂತೋಷದಿಂದ. ದೇವಯ್ಯ ಮಡದಿಯೊಂದಿಗೆ ಹಿಂದಿನ ಸೀಟಿನಲ್ಲಿ ಕುಳಿತ. ರಾಮನಾಥ ಸ್ಟೇರಿಂಗ್ ಹಿಡಿದ. ಅವನ ಪಕ್ಕಕ್ಕೆ ಕುಳಿತಳು ಕುಮುದ್ವತಿ. ದೇವಸ್ಥಾನದಲ್ಲಿ ಪೂಜೆ ಮುಗಿಯುವಷ್ಟರಲ್ಲಿ ಸಂಜೆಗಪ್ಪು ಕವಿಯಿತು. ಎಲ್ಲರೂ ಮನೆಗೆ ಹಿಂದಿರುವಾಗ ಮೇಜಿನ ಮೇಲೆ

ಊಟ ಅಣಿಯಾಗಿತ್ತು. ರಂಗಮ್ಮ ಬಡಿಸಲು ಕಾದಿದ್ದಳು. ಇನ್ನೂ ಮೂವತ್ತಾರರ ಹರೆಯ. ಗಂಡುಮಗನನ್ನು ಕಳೆದುಕೊಂಡ ಅನಾಥೆ. ಆದರೂ ನಿತ್ಯ ಉತ್ಸಾಹದ ಚಿಲುಮೆ. ಅಂದಿನ ಸಂತಸದ ಸಲುವಾಗಿಯೇ ಸಿಹಿಯೊಡನೆ ವಿಶೇಷ ಅಡಿಗೆ ತಯಾರಿಸಿದ್ದಾಳೆ ರಂಗಮ್ಮ. ಸೀತಮ್ಮನಾಗಲೀ ಕುಮುದ್ವತಿಯಾಗಲೀ ಅದರ ಕಡೆ ಗಮನ ಕೊಡದಿದ್ದರೂ ಅವಳು ಮರೆಯಲಿಲ್ಲ. ಆ ಮನೆಯ ಅವಿಭಾಜ್ಯ ಅಂಗವಾಗಿ ಬೆರೆತು ಹೋದ ಅವಳಿಗೆ ತಿಳಿ ಹೇಳುವ ಅಗತ್ಯವಿರಲಿಲ್ಲ. ಸ್ವತಂತ್ರವಾಗಿ ಯೋಚಿಸಬಲ್ಲ ಅವಳು ಅನಕ್ಷರಸ್ಥೆಯೂ ಸಹ-ಕುಮುದ್ವತಿ ಅವಳಿಗೆ ನಿನ್ನ ಕೆಲಸದ ನಂತರ ಪುಸ್ತಕ ಪೆನ್ಸಿಲ್ ಹಿಡಿ. ನಾನೇ ನಿನಗೆ ಗುರು. ನೀನು ವಿದ್ಯೆ ಕಲಿಯಬೇಕು ಎಂದಾಗ ಅವಳು ಸಂತಸದಿಂದ ಕಲಿಯತೊಡಗಿದ್ದಾಳೆ ಬಿಡುವಿನ ವೇಳೆಯಲ್ಲಿ.

ಎಲ್ಲರೂ ಮೇಜಿನ ಮುಂದೆ ಕುಳಿತರು. ಸಾನಂದದಿಂದ ಸಾಗಿತು ಊಟ. ಅನಂತರ ಕುಳಿತು ಸ್ವಲ್ಪ ಹೊತ್ತು ತಂಗಾಳಿಯ ಸೇವನೆಯ ಪರಿಪಾಠ. ಎಲ್ಲರ ಮುಖಬಿಂಬದ ಮೇಲೂ ಸಂತಸದ ಅಭಿರಾಮ ಕಳೆ. ರಾಮನಾಥ ಸೆಜ್ಜೆಯ ಮನೆಗೆ ಹೋಗುತ್ತ ಚಾಚಿದ ಅನ್ನೃತ ಹಸ್ತವನ್ನು ಹಿಡಿದುಕೊಂಡು ಹಿಂಬಾಲಿಸಿದಳು ಕುಮುದ್ವತಿ ಆನಂದದ ಅರಗಿಣಿಯಾಗಿ, ಪವಿತ್ರ ಪ್ರೇಮದ ತರಂಗಿಣಿಯಾಗಿ.

— ೦ —

೮

ರಾಮನಾಥ ಭಾವಂದಿರ ಕರೆಯ ಮೇರೆಗೆ ಅವರ ಮನೆಗೆ ಎರಡೆರಡು ದಿನ ಹೋಗಿ ಬಂದ. ಜೊತೆಗೆ ಮಡದಿ ಮಾತ್ರವಲ್ಲ, ದೇವಯ್ಯ ದಂಪತಿಗಳೂ ಇದ್ದರು. ಆ ಊರಿನ ದೇವಸ್ಥಾನಗಳು ಮತ್ತು ಪ್ರೇಕ್ಷಣೀಯ ಸ್ಥಳಗಳು ಎಲ್ಲವನ್ನೂ ಸುತ್ತಾಡಿ ನೋಡಿ ಹಿಂದಿರುಗಿ ಬಂದರು ಮನೆಗೆ.

ಕುಮುದ್ವತಿ, ರಾಮನಾಥನಿಂದ ಕಾರ್ ಡ್ರೈವಿಂಗ್ ಕಲಿತುಕೊಂಡಳು. ಎರಡು ಮೂರು ದಿನದಲ್ಲೇ ಕಲಿತ ಅವಳ ಚಾಕಚಕ್ಯತೆಯನ್ನು ಮೆಚ್ಚಿಕೊಂಡ ರಾಮನಾಥ.

"ನಾನೂ ಅಷ್ಟೆ, ಎರಡು ದಿನದಲ್ಲೇ ಕಲಿತುಕೊಂಡೆ" ಎಂದ ಹುಬ್ಬೇರಿಸಿ.

ಅವಳು ನಕ್ಕು ನುಡಿದಳು—"ಇನ್ನು ಡ್ರೈವರಿಗೆ ಕೆಲಸವಿಲ್ಲವಷ್ಟೆ ?"

"ಅವನಿಗೆ 'ರೈಟರ್' ಕೆಲಸ ಕೊಡುವೆ. ಎಂದಾದರೂ ಸಮಯ ಬಿದ್ದಾಗ ಡ್ರೈವಿಂಗ್ ಮಾಡು ಎಂದರಾಯಿತು.

"ಅದು ಒಳ್ಳೆತು."

ರಾಮನಾಥ ಹಾಸಿಗೆಯ ಮೇಲೆ ಅಡ್ಡಾಗಿದ್ದಾನೆ. ಪಕ್ಕದಲ್ಲಿ ಕುಳಿತಿದ್ದ ಕುಮುದ್ವತಿಯ ಮೃದು ಹಸ್ತವನ್ನು ಅದುಮಿ ಹಿಡಿದು ಲಲ್ಲೆಗೈಯ್ಯುತ್ತ ಅವನೆಂದ,

"ಈ ಸಲ ಮಳೆ ಬೆಳೆ ಸಂಮೃದ್ಧಿ. ಬಹುಶಃ ನಿನ್ನ ಅದೃಷ್ಟವೇ ಇರಬೇಕು."

ಕುಮುದ್ವತಿ ಮುಗುಳು ನಕ್ಕು, "ತೋಟಗಾರಿಕೆಯೂ ನನಗೆ ಇಷ್ಟ. ಅಣ್ಣಂದಿರು ಬಿಟ್ಟು ಹೋದಮೇಲೆ ನಾನು ತುಂಬಾ ಸಹಾಯ ಮಾಡಿರುವೆ ಅಪ್ಪಾಜಿಗೆ."

"ತೋಟಗಾರಿಕೆ ನೀನು ಮಾಡಬೇಕಾಗಿಲ್ಲ. ಜನ ಇದ್ದಾರೆ. ಮೇಲ್ವಿಚಾರಣೆಗೆ ನಾನಿರುವೆ. ಇದೆಲ್ಲಾ ನಿನಗೇನು ಗೊತ್ತು ? ಅಲ್ಪಸ್ವಲ್ಪ ಕೈಗೂಡಿಸಬಹುದು ಅಷ್ಟೆ."

ಆ ಆಕ್ಷೇಪಕ್ಕೆ ಉತ್ತರಿಸಿದಳು ಅವಳು,

"ಹೆಂಗಸರನ್ನು ತೆರೆಮರೆಯ ಅಂಧಕಾರದಲ್ಲಿಟ್ಟು 'ನಿನಗೇನು ಗೊತ್ತು?' ಎಂದುಬಿಟ್ಟರೆ ಯಾವತ್ತೂ ಹೀಗೆಯೇ...ಆದ್ದರಿಂದ ಈ ಮಾತನ್ನು ಇನ್ನು ಮುಂದೆ ಹೇಳಬಾರದು. ಯಾರಿಗಾದರೂ ಗೊತ್ತುಪಡಿಸಿದರೆ ತಾನೇ ಗೊತ್ತಾಗುವುದು ? ಆಯಾಯಾ ಕಾಲದ ಕಾಮಗಾರಿ ತಿಳಿದುಕೊಂಡರಾಯಿತಷ್ಟೆ?"

"ಅದು ನಿಜ. ಕೆಲ ಮಂದಿ ಮಹಿಳೆಯರು ಗಂಡ ಗತಿಸಿದ ನಂತರ ತಾವೇ ಮಾಡಿಸಿಕೊಂಡಿದ್ದಾರೆ," ಒಪ್ಪಿಕೊಂಡ ರಾಮನಾಥ.

"ಶ್ರೀಹರೀ ! ಗಂಡ ಗತಿಸಿದ ನಂತರವೇ ಏಕೆ ? ಮೊದಲೇ ತಿಳಿದುಕೊಂಡಿದ್ದರೆ ಒಳ್ಳಿತಷ್ಟೆ ?"

"ನಿಜ...ಆದರೆ, ಈ ಕಾಲದಲ್ಲಿ ಎಲ್ಲಾ ಆಳುಗಳನ್ನೂ ನಂಬುವಂತಿಲ್ಲ. ಹೆಣ್ಣು ಎಷ್ಟೆಂದರೂ ಅಬಲೆ. ಒಬ್ಬಳೇ ಮುಂದಾಗಬೇಕಾದರೆ ಹತ್ತು ಬಾರಿ ಯೋಚಿಸಬೇಕು. ಇಂದಿನ ಪರಿಸ್ಥಿತಿ ಅಷ್ಟು ಹಿತವಾಗಿಲ್ಲ. ಆದ್ದರಿಂದ......."

ಮುಂದೆ ಮಾತಾಡಗೊಡದೆ ಅವಳು ನುಡಿದಳು "ಅಂದರೆ ತೆರೆ ಮರೆಯಲ್ಲಿರು ಅಂತ !"

ಅವನು ನಕ್ಕುಬಿಟ್ಟ. ಕುಮೂ ತನ್ನ ದನಿಯನ್ನೂ ಹರಿಯಬಿಟ್ಟಳು. ಪರಸ್ಪರ ಮುದ್ದಿನ ಹೂಮಳೆಯನ್ನು ಕರೆದು ಹೊರಬಂದರು ಪ್ರಸನ್ನಮುಖದಿಂದ. ದೇವಯ್ಯ ವರಾಂಡದಲ್ಲಿ ಅಡ್ಡಾಡುತಿದ್ದ. ಮಾಲಿ ಹುಡುಗ ಹೂ ಗಿಡಗಳಿಗೆ ನೀರೆರೆಯುತಿದ್ದಾನೆ. ಗಿಡಗಳಲ್ಲೆಲ್ಲಾ ಅರಳಿ ನಿಂತ ಹೂ ಸಂವೃದ್ಧಿಯಿಂದ ಸೌರಭಯುಕ್ತ ನಸುಗಂಪಿನ ಮಧುರ ಕಂಪು ಹರಡಿತ್ತು ಪರಿಸರದಲ್ಲಿ.

ರಾಮನಾಥ ಅಭಿರಾಮ ಭಂಗಿಯಲ್ಲಿ ದೇವಯ್ಯನಿಗೆ–

"ಕುಮೂ ವ್ಯವಸಾಯಕ್ಕೂ ಮುಂದೆ" ಎಂದಬಳಿಕ ಮಡದಿಯ ಕಡೆ ತಿರುಗಿ ಮತ್ತೆಂದ "ನೀನು ಉಳಬಲ್ಲೆಯಾ ನೇಗಿಲು ಹಿಡಿದು?"

"ಅದಕ್ಕೆಲ್ಲಾ ಗಂಡಾಳು ಇರುತ್ತಾರೆ ಬಿಡಿ."

"ಮಾಡುವೆ ಎಂದಮೇಲೆ ಎಲ್ಲವನ್ನೂ ಮಾಡಬೇಕಷ್ಟೆ?" ಹುಬ್ಬೇರಿಸಿದ ಅವನು.

"ಮಾಡೋಣ, ಯಾವ ಯಾವುದು ಸಾಧ್ಯವೋ ಅದನ್ನು ಮಾಡಿ, ಮಾಡಿಸುವುದನ್ನು ಮಾಡಿಸಿಕೊಳ್ಳುವೆ, ಟಿಲ್ಲರ್ ನಡೆಸುವುದು, ಮಿಷನ್ನಿನಲ್ಲಿ ಉಳುವುದು ಇಂಥ ಕೆಲಸಗಳನ್ನು ಮಾಡಬಹುದಲ್ಲ? ಅದು ಬಿಟ್ಟು 'ನಿನಗೇನು ಗೊತ್ತು?' ಎಂದುಬಿಟ್ಟರೆ ಸ್ತ್ರೀಯರಿಗೆ ಕಾಲಾವಕಾಶ ಕೊಟ್ಟಂತಾಗುವುದಿಲ್ಲ. ಪ್ರತಿಯೊಂದನ್ನೂ ಗೊತ್ತುಪಡಿಸುವುದರಲ್ಲೇ ಸಮತೆ. ಸ್ತ್ರೀಯರನ್ನು ಅಡಿಗೆ ಮುಸುರೆಗೆ ಮಾತ್ರ ನಿಯಮಿಸಿ ಗಂಭೀರ ವ್ಯವಹಾರವನ್ನು ತಾವೇ ವಹಿಸಿಕೊಂಡರೆ 'ನಿಮಗೇನು ಗೊತ್ತು?' ಎನ್ನುವುದಕ್ಕೆ ಅನುಕೂಲ."

ಮಗಳ ಖಡಾಖಂಡಿತವಾದ ಮಾತಿನಿಂದ ಬೆಚ್ಚಿದ ದೇವಯ್ಯ ತನ್ನ ಅಭಿಪ್ರಾಯವನ್ನು ಹೊರಹಾಕಿದ "ಮಗಳೇ ಹೆಣ್ಣು ಎಂದೆಂದೂ ಹೆಣ್ಣಾಗಿಯೇ ಬಾಳಬೇಕು. ಹೀಗೆಲ್ಲಾ ಹಠವಾದಿಯಾಗಬಾರದು" ಕಣ್ಣು ಮಿಸುಕಿ ಸೂಚನೆ ಕೊಟ್ಟ ಕೂಡಾ. ಹೀಗೆಲ್ಲಾ ಮಾತಾಡಿ ಏನು ಗಂಡಾಂತರ ತರುತ್ತಾಳೋ ಎಂಬ ಅಗಾಧ ಭಯ–ಕಳವಳ ಮನಸ್ಸಿಗೆ- ವೃದ್ಧ ಜೀವ ತತ್ತರಿಸಿತು, ಒಳಗಿಂದೊಳಗೆ.

"ಇದು ಹಠವಾದವಲ್ಲ ಅಪ್ಪಾಜಿ. ಹೆಣ್ಣನ್ನು ಅಬಲೆಯಾಗಿಸುವ ವಿಧಾನ. ಹೆಣ್ಣಿಗೂ ಗಂಡಿಗಿರುವಂತೆಯೇ ಆರ್ಥಿಕ ಸ್ವಾತಂತ್ರ್ಯ ವೈಯಕ್ತಿಕ ಸ್ವಾತಂತ್ರ್ಯ ಇಲ್ಲದಿರುವುದು ಸರಿಯಲ್ಲ. ಇಂದಿನ ಆಧುನಿಕ ರೀತಿಯ ಸೌಕರ್ಯ ಒದಗಿಸಿಕೊಂಡರೆ ಮನೆಗೆಲಸ ಸುಲಭ. ತುಂಬಾ ಸಮಯದ ಉಳಿತಾಯವಾಗುತ್ತದೆ. ಅದರಿಂದ ಆಸ್ತಿ ವ್ಯವಹಾರ ನೋಡಿಕೊಳ್ಳಬಹುದು. ಸಮಾನತೆ ಇಲ್ಲದಿರುವುದರಿಂದಲೇ ಸಂಸಾರದಲ್ಲಿ ಏರುಪೇರು. ಸುಖ ಶಾಂತಿಗಳೂ ದೂರ. ಸಂಸಾರದಲ್ಲಿ ಸಮರಸ ಬರಬೇಕಾದರೆ ಇಬ್ಬರ ಮನಃಬುದ್ಧಿಗಳೂ ಒಂದಾಗು

ವಂತಿರಬೇಕು. ಎಲ್ಲ ವ್ಯವಹಾರಗಳನ್ನೂ ಇಬ್ಬರೂ ಏಕೀಭವಿಸಿ ಮಾಡುವುದು ಸರ್ವಾಂಗ ಸುಂದರ. ಅದು ಬಿಟ್ಟು ಹೆಂಗಸರನ್ನು ಕೆಲಸಕ್ಕೆ ಬಾರದವರೆಂದು ಒಳಗಣ ವ್ಯವಹಾರಕ್ಕೆ ಮೀಸಲಿರಿಸಿದರೆ ಅವಳ ಜ್ಞಾನ ಅರಳುವುದೆಂತು? ಗಂಡ ಮುಂಚಿತವಾಗಿ ತೀರಿಕೊಂಡರೆ ಸಮೀಪಸ್ಥರೆಲ್ಲ ಹಿರಿದು ತಿನ್ನುತ್ತಾರೆ. ಅಂತಹ ಪ್ರಸಂಗ ಯಾವತ್ತೂ ಬರಬಾರದು ನೋಡಿ."

"ಇದನ್ನು ಯಾರಾದರೂ ಕಲಿತ ಒಬ್ಬಿಬ್ಬರು ಜಾರಿಗೆ ತರಬಹುದೇ ಹೊರತು ಎಲ್ಲರಿಂದ ಎಲ್ಲಿ ಸಾಧ್ಯವಾಗುತ್ತೆ ಹೇಳು?"

"ಬಿಟ್ಟುಕೊಟ್ಟು ಕಲಿಸಬೇಕು. ರಾಂದಾದ ಇಲ್ಲಿಯವರೆಗೆ ಬಿಡುವಿಲ್ಲದೇ ದುಡಿದವರು ತಾನೆ! ಇನ್ನು ಮುಂದಿನದನ್ನು ನಾನು ನಿರ್ವಹಿಸುವೆ.. ಅದರಲ್ಲಿ ತಪ್ಪೇನು?"

ನೀನು ಏಕಾಂಗಿಯಾಗಿ ಹತ್ತಾರು ಆಳುಗಳನ್ನು ನಿರ್ವಹಿಸುವುದು ಕಷ್ಟ. ನನ್ನೊಂದಿಗೆ ಕೂಡಿದರೆ ತೊಂದರೆಯಿಲ್ಲ." ರಾಮನಾಥ ದೃಢಮನದಿಂದ ನುಡಿದ.

ಎಲ್ಲರೂ ಒಳ್ಳೆಯವರೇ ಇರುವುದಿಲ್ಲ. ಯಾರಾದರೂ ಅಪಾಯವೆಸಗಿದರೇನು ಗತಿ? ಇದೆಲ್ಲವನ್ನೂ ನೀನು ಯೋಚಿಸಿ ಹೆಜ್ಜೆ ಮುಂದಿಡಬೇಕು." ತಂದೆಯ ಅಭಿಪ್ರಾಯ.

"ಸರಿ ಬಿಡಿ, ಇಬ್ಬರೂ ಒಟ್ಟಾಗಿಯೇ ದುಡಿಯೋಣ. ನೀವೂ ಬನ್ನಿ, ಅಪ್ಪಾಜಿ. ಒಳಗಡೆಯ ಕೆಲಸ ಹೆಚ್ಚಲ್ಲ. ನಾನು ಕೈತುಂಬ ಕೆಲಸವಿಲ್ಲದೆ ಇರಲಾರೆ. ಏನಾದರೂ ಸಾಮಾಜಿಕ ಸೇವೆ ಹೆಚ್ಚಿಕೊಳ್ಳಬೇಕು. ಬಡಜನರ ವಿದ್ಯಾಭ್ಯಾಸ, ಬಾಲವಾಡಿ ಹೀಗೆ ಏನಾದರೂ ಮಾಡಬೇಕಾಗಿದೆ."

"ಅದಕ್ಕೇನು ಬೇಕಾದಷ್ಟು ಮಾಡಬಹುದು" ರಾಮನಾಥ ತಲೆಯಾಡಿಸಿದ.

ಆದರೂ ದೇವಯ್ಯನ ಮನದಲ್ಲಿ ಕಳವಳ. ಈ ಹುಡುಗಿ ಏನು ಗಂಡಾಂತರ ತಂದಿಡುತ್ತಾಳೋ ಎಂಬ ಚಿಂತೆ. ಏನಿದ್ದರೂ ನಿಧಾನವಾಗಿ ಸಾಧಿಸಬೇಕೇ ಹೊರತು ಹಠವಾದ ಸರಿಯಲ್ಲ ಎನಿಸಿತು. ಒಮ್ಮೆಲೇ ಅಷ್ಟು ಮುಂದೆ ಹೋಗ

ಬಾರದೆಂದು ಅವಳಿಗೆ ಕಣ್ಸೂಚನೆ ಕೊಡುತ್ತಲೇ ಇರುತ್ತಾನೆ. ಆದರೆ, ಅವಳ ರೀತಿ ನೀತಿಗಳೇ ಬೇರೆ. ಹೆಜ್ಜೆ ಹಿಂದೆಗೆಯುವಳೇ ಅಲ್ಲ.

o o o o

ಆಳು ಕಪಿನೀಪತಿ ಓಡಿಯೋಡಿ ಬಂದ.

"ಬುದ್ಧೀ ಬುದ್ಧೀ ! ವಸಂತಣ್ಣನ ಹಸುಗಳು ನಮ್ಮ ಗದ್ದೆ ತೋಟಕ್ಕೆ ನುಗ್ಗಿವೆ. ಅವರು ಬೇಕು ಬೇಕೆಂತಲೇ ತೋಟಕ್ಕೆ ಅಟ್ಟುತ್ತಾರೆ. ಒಂದಿನ ವಾಸಣ್ಣನವು ನುಗ್ಗಿದರೆ ಇನ್ನೊಂದಿನ ವಸಂತಣ್ಣನದು. ನೀವು ಅವರನ್ನು ಕಟ್ಟಿ ಹಾಕಿರಿ ಎಂದು ಎಷ್ಟು ಬಾರಿ ಕೇಳಿಕೊಳ್ಳಲಿಲ್ಲ ? ಅವರಿಗೆ ಲಕ್ಷ್ಯವೇ ಇಲ್ಲ... ಸುಮ್ಮನಿದ್ದುಬಿಡುತ್ತಾರೆ."

"ಈಗ ಹೊರಗಟ್ಟಿ ಬಂದೆಯೇನು ?"

"ಹೌದು ಬುದ್ಧೀ. ಅವರು ಕಟ್ಟುವುದಾಗಲೀ ದೂರ ಬಯಲಿನ ಕಡೆ ಅಟ್ಟುವುದಾಗಲೀ ಮಾಡುವುದಿಲ್ಲ. ನಾವು ಅಟ್ಟಿದೊಡನೆ ನಮ್ಮ ಹಿಂದೆಯೇ ಬರುತ್ತವೆ ಅವು."

ಆಗ ಕುಮುದ್ವತಿ ಮುಂದೆ ಬಂದು "ಇಡೀ ತೋಟದ ಸುತ್ತಲೂ ಮುಳ್ಳು ತಂತಿ ಹಾಕಿಸಿಬಿಡಿ. ತಂತೀ ಸಾಲು ಒತ್ತೊತ್ತಾಗಿದ್ದರೆ ದನ ನುಗ್ಗುವುದಿಲ್ಲ."

"ಅದೇ ಮೇಲು. ದಿನವೂ ಇದೆಲ್ಲಿಯ ಗೋಳು ? ಎಂದ ರಾಮನಾಥ, ಕಪಿನೀಪತಿಯನ್ನು ಅಲ್ಲಿನ ಕಂಟ್ರಾಕ್ಟ್‌ದಾರರನ್ನು ಕರೆಯಲು ಆಗಲೇ ಕಳುಹಿಸಿದ.

"ಈ ಪಂಟಿಗತನಕ್ಕೆ ಏನು ಮಾಡೋಣ ಹೇಳಿ ದೇವಯ್ಯನವರೇ ? ಮನೆ ಮಕ್ಕಳೇ ಹೀಗೆ ಮಾಡಿದರೆ ಇನ್ನು ಹೊರಗಿನವರು ಏನು ಮಾಡಿ, ಯಾರು ?" ವಿಷಾದ ವಾಣಿಯಲ್ಲಿ ನುಡಿದ ರಾಮನಾಥ.

"ಅದೇ ಆಗಲೇ ಹೇಳಿದೆನಲ್ಲಾ, ಈ ಕಾಲದಲ್ಲಿ ಧರ್ಮ ಕರ್ಮ ಇಲ್ಲವೇ ಇಲ್ಲ. ಯಾರನ್ನೂ ನಂಬುವಂತಿಲ್ಲ." ಇಂತಹ ಜನರ ಮಧ್ಯೆ ಹೆಣ್ಣುಮಕ್ಕಳು ಮುಂದಾದರೆ ಏನಾಗಬೇಡ ?"

"ಹಾಗೆಲ್ಲಾ ಹೆದರಿದರೆ ಬದುಕು ಸಾಗುವುದೆಂತು ಅಪ್ಪಾಜಿ ?"

"ಹೆಜ್ಜೆ ಮುಂದಿಡಬೇಕಾದರೆ ಯೋಚಿಸಲೇಬೇಕು. ಕಾಲ ಕೆಟ್ಟು ಹೋಗಿದೆ."

ಕಂಟ್ರಾಕ್ಟುದಾರ ಬಂದ. ಇಡೀ ತೋಟಕ್ಕೆ ತಂತಿ ಬೇಲಿ ಬಿಗಿಯಲು ಒಪ್ಪಂದವಾಯಿತು. ಅವನು ಅಂದೇ ಶುರು ಮಾಡಿ, ಕಲ್ಲುಕಂಬಗಳನ್ನು ಸಾಲಾಗಿ ನೆಡಿಸಿ ಒತ್ತೊತ್ತಾಗಿ ತಂತಿ ಸಾಲುಗಳನ್ನು ಬಿಗಿಸಿದ. ಕೇವಲ ಒಂದು ವಾರ ಕಾಲ ಹಿಡಿದು ಬೇಲಿ ಭದ್ರವಾಯಿತು.

ಕುಮುದ್ವತಿ ಆಗಾಗ ತಂದೆಯೊಂದಿಗೆ ಅಥವಾ ಪತಿಯೊಂದಿಗೆ ಕೆಲಸ ದೆಡೆಗೆ ಹೋಗಿ ಬರುವುದು ರೂಢಿ. ರಾಮನಾಥ ಮಡದಿಯೊಡನೆ ಅಲ್ಲಿಗೆ ಹೋದಾಗ, ಆಳುಗಳೊಡನೆ ಕಟು ಮಾತಾಡಿ ಗದ್ದಲವೆಬ್ಬಿಸುವ ಉದ್ದೇಶ ದಿಂದ ಅಲ್ಲಿಗೆ ಬಂದ ವಸಂತ ತಂದೆಯನ್ನು ನೋಡಿ ನಾಚಿಕೆಯಿಂದ ಮುಂದು ವರಿಯಲಾರದೆ ಹಾಗೇ ಹಿಂದಿರುಗಿ ಹೋದ.

ರಾಮನಾಥನಿಗೆ ಅವನನ್ನು ನೋಡಿ ಸಿಟ್ಟು ನಗುಗಳೆರಡೂ ಏಕಕಾಲ ದಲ್ಲಿ ಮೂಡಿದುವು. ಹಾನೆಯೇ ತೆಂಗು ಅಡಿಕೆಗಳ ತೋಟದಲ್ಲಿ ಸುತ್ತಾಡಿ ಮನೆಯ ಕಡೆ ಹಿಂದಿರುಗುತಿದ್ದಾಗ ಮಡದಿಯ ಮುಖಾರವಿಂದವನ್ನು ನೋಡಿ ನುಡಿದ,

"ನೀನು ಕೆಲಸ ಮಾಡುವುದರಲ್ಲಿ, ಹೊರ ಹೋಗುವುದರಲ್ಲಿ ಯಾವ ಆಕ್ಷೇಪಣೆಯೂ ಇಲ್ಲ. ಆದರೆ, ಹೆಣ್ಣು ಅಬಲೆ ಎಂಬುದನ್ನು ಯಾವತ್ತೂ ಮರೆಯಬಾರದು. ನಿನ್ನ ಸಂರಕ್ಷಣೆಗೆ ತಯಾರಿದ್ದುಕೊಂಡೇ ನೀನು ಹೊರ ಹೊರಡಬೇಕು. ಆಳುಗಳನ್ನೇ ಆಗಲಿ ಬಂಧುಗಳನ್ನೇ ಆಗಲಿ ನಂಬುವುದು ಕಷ್ಟ ಈ ಕಾಲದಲ್ಲಿ. ಆದ್ದರಿಂದ ಗೃಹದ್ವೇಶವೇ ಕ್ಷೇಮ ಹೆಂಗಳೆಯರಿಗೆ."

"ಈ ಧೋರಣೆಯಿಂದಲ್ಲವೇ ಹೆಣ್ಣು ಗೃಹಬಂಧಿಗಳಾಗಿರುವುದು ? ಅನುಪಯುಕ್ತವಾಗಿ ಬಣ್ಣದ ಬೊಂಬೆಗಳಾಗಿ ಸುಜ್ಞಾನರಹಿತರಾಗಿ ಅಡಿಗೆಮುಸುರೆಗಳಿಗೆ ಪಕ್ಕಾಗಿ ಉಳಿದಿರುವುದು ? ಈ ದೇಶದ ಭವ್ಯ ಭವಿಷ್ಯವನ್ನು ರೂಪಿಸತಕ್ಕಂತಹ ಮಹಿಳೆಯರ ಅಂಗೋಪಾಂಗಗಳನ್ನು ಮುರಿದು ಮೂಲೆಗೆ ತಳ್ಳಿರುವುದರಿಂದಲ್ಲವೇ ರಾಷ್ಟ್ರದ ಪ್ರಗತಿಯಲ್ಲಿ ಕುಂಠಿತ ? ರಾಷ್ಟ್ರದ ಅರ್ಧಾಂಶವಾದ ಹೆಂಗಸರು ವೈಯ್ಯಕ್ತಿಕ ಸ್ವಾತಂತ್ರ್ಯವನ್ನೇ ಅರಿಯರು. ಆರ್ಥಿಕ ಸ್ವಾತಂತ್ರ್ಯವಂತೂ ಕನಸಿನ ಮಾತು. ದಯಾ ದಾರಿದ್ರ್ಯವೇ ಪರಮ ಗತಿ. ಹೆಣ್ಣಾಗಿ ಹುಟ್ಟುವುದೇ ಬಾಳಿನ ದುರಂತಕ್ಕೆ ಎಂದು ನಂಬಿದವರೂ ಉಂಟು. ಅನಕ್ಷರೆಯಾಗಿ ಹೆರುವ ಯಂತ್ರವಾಗಿ ಕಣ್ಣೀರ ಕಡಲಲ್ಲಿ ಮುಳುಗೇಳುತ್ತಾರೆ. ಪುರುಷರ ಕಾಮೋಪಭೋಗದ ದೃಷ್ಟಿ ಬದಲಾದ ಹೊರತು ಸ್ತ್ರೀಯರಲ್ಲಿ ದಿಟ್ಟತನವನ್ನೂ ಆತ್ಮಶಕ್ತಿಯನ್ನೂ ಕಾಣಲಾರೆವು, ಅಂದಮೇಲೆ ದೈಹಿಕ ಸೌಂದರ್ಯವೊಂದೇ ನಮ್ಮ ಪಾಲಿಗೆ ದಕ್ಕುವ ವಸ್ತು, ಇಂದಿನ ಪರಿಸ್ಥಿತಿಯಲ್ಲಿ."

ಕುಮುದ್ವತಿ ಆವೇಶದಿಂದ ಹರಿಸಿದ ವಾಕ್ಯಲಹರಿ ರೈಲಿನ ವೇಗದಲ್ಲಿ ಮನದಾಳಕ್ಕೆ ಇಳಿಯಿತು. ರಾಮನಾಥ ಅವಳನ್ನೇ ಆಶ್ಚರ್ಯ ಕುತೂಹಲದಿಂದ ನಿಟ್ಟಿಸಿದ. ಏನೂ ಮಾತಾಡಲಿಲ್ಲ.

ಸ್ವಲ್ಪಹೊತ್ತು ವಿಚಾರಮಗ್ನನಾದ. ದೇಶದ ಮನೆ ಮನೆಯ ಸತ್ಯ ಚಿತ್ರ ಅಕ್ಷಿ ಪಟಲದ ಮುಂದೆ ಸಾಗಿ ಹೋಯಿತು. ಅವಳ ಅಭಿಪ್ರಾಯದ ಅಕ್ಷರ ಅಕ್ಷರವನ್ನೂ ಪ್ರದರ್ಶಿಸುವಂತಹ ಸಾಮಾಜಿಕ ವಲಯವನ್ನು ಮೆಲುಕು ಹಾಕಿತು ಮನಸ್ಸು. ಮೆಲ್ಲನೆ ಬಿಸಿಯುಸಿರೊಂದು ತನ್ನ ಗಮನಕ್ಕೆ ಬಾರದೆಯೇ ತಪ್ಪಿಸಿಕೊಂಡಿತು.

ಅವಳು ಮುಂದುವರಿದಳು "ಎಷ್ಟೋ ಜನ ಕಲಿತ ಮಹಿಳೆಯರಿದ್ದಾರೆ. ಅವರಿಗೂ ಪ್ರಪಂಚ ಜ್ಞಾನವಿಲ್ಲ. ಒಡವೆ ವಸ್ತುಗಳ ವ್ಯಾಮೋಹ, ದೇಹಾಲಂಕಾರ ಇವುಗಳಲ್ಲೇ ಮುಳುಗಿರುತ್ತಾರೆ ನೋಡಿ. ಸಾಮಾಜಿಕ ಶಾಸ್ತ್ರ ಸೂತ್ರಗಳು ಅವರನ್ನೂ ಬಿಗಿದು ಹೆಡೆಮುರಿಗಟ್ಟಿವೆ. ಪರಂಗರಾನುಗತಿಯಲ್ಲಿ ನಡೆದು ಬಂದ ಗಿಳಿಪಾಠ ಅಂದಿಂದಿಗೂ ರಕ್ತಗತವಾಗಿದೆ. ಅಂದರೆ ತಮ್ಮನ್ನು

ಅಂಕೆಯಲ್ಲಿಡುವ ವಿಧಾನ ಇದು ಎಂಬುದನ್ನು ಅವನು ಇನ್ನೂ ಅರ್ಥ ಮಾಡಿ ಕೊಂಡಿಲ್ಲ."

ರಾಮನಾಥ ನಕ್ಕುಬಿಟ್ಟ. ಕುಮುದ್ವತಿ ಅವನ ನಗೆಯಲ್ಲಿ ಪಾಲ್ಗೊಂಡು ಮುಂದುವರಿದಳು—"ನಮ್ಮಲ್ಲಿ ಸ್ತ್ರೀ ಜನ ಎಷ್ಟು ಹೀನಸ್ಥಿತಿಯಲ್ಲಿದ್ದಾರೆ ? ಅವಳು ದುಡಿಯುವುದು ಅವನು ಕೂಲಿ ಹಣ ತೆಗೆದುಕೊಳ್ಳುವುದು. ಆ ಹಣದ ಕುಡಿತಕ್ಕೆ ಹೋಗಿ ಕೊನೆಗೆ ಇವರಿಗೆ ದೊರೆಯುವುದು ಹೊಡೆತ ಬಡಿತಗಳ ಉಂಬಳಿ. ಆರ್ಥಿಕದಾರಿದ್ರ್ಯ ಜ್ಞಾನದಾರಿದ್ರ್ಯಗಳಿಂದ ತನ್ನತನವನ್ನೇ ಕಳೆದುಕೊಂಡಿರುವ ಸ್ತ್ರೀಯರನ್ನು ನೋಡಿದರೆ ಕರುಳು ಕರಗುತ್ತದೆ, ತಾವು ದುಡಿದ ಹಣವನ್ನು ತಾವು ದಕ್ಕಿಸಿಕೊಳ್ಳಲಾರದ ದುಸ್ಥಿತಿ. ಅಂದರೆ ಅತೀವ ಸಂಕಷ್ಟದ. ಪರಿಸ್ಥಿತಿ ಹೇಗಿರಬಹುದು ? ಹಲಕೆಲವು ಮಂದಿ ಮಾತ್ರವಾದರೆ ಹೇಗಾದರೂ ಸರಿಹೋಗಿಸಬಹುದು. ಈ ಶತಕೋಟಿ ಬ್ರಹ್ಮಾಂಡವನ್ನು ಇಂದು ಬ್ರಹ್ಮ ಬಂದರೂ ಸರಿಹೋಗಿಸಲಾರನೇನೋ. ದೇಶಕ್ಕೆ ಸ್ವಾತಂತ್ರ್ಯ ಬಂದು ಅರ್ಧ ಶತಮಾನ ತುಂಬುತ್ತಿದೆ. ಜನಗತಿಯನ್ನು ನೆನೆಸಿಕೊಂಡರೆ ಹೊಟ್ಟೆಯುರಿಯುತ್ತೆ. ಜಮೀನ್ದಾರರೂ ಅಷ್ಟೇ, ಇಂದೂ ಕೈತುಂಬ ಕೂಲಿ ಕೊಡುವುದಿಲ್ಲ. ಎಲ್ಲಾ ರೀತಿಯಲ್ಲೂ ಬಡವರ ಶೋಷಣೆ ನಡೆಯುತ್ತದೆ. ಇದು ತೀರಾ ವಿಷಾದಕರ."

ಇಬ್ಬರೂ ಮನೆ ಮುಟ್ಟಿದಾಗ ದೇವಯ್ಯ ಪತ್ರಿಕಾವಲೋಕನದಲ್ಲಿದ್ದ. ಸೀತಮ್ಮ ಕೆಲಸದ ಮೇಲ್ವಿಚಾರಣೆ ಮುಗಿಸಿದ್ದಳು. ಮನೆಯೆಲ್ಲಾ ಒಪ್ಪ ಓರಣ ವಾಗಿಬಿಟ್ಟಿವೆ. ಮಾಡುತ್ತೇನೆಂದರೂ ಕೆಲಸವಿಲ್ಲ. ಪರಿಸರದ ಮಕ್ಕಳಿಗೆ ಪಾಠ ಹೇಳುವುದು ಲೇಸು ಎನಿಸಿತು ಕುಮುದ್ವತಿಗೆ.

ಪ್ರೌಢಾರುಣ ನೆತ್ತಿಯ ಮೇಲೆ ರಣಾಣಿಸುತಿದ್ದ.

ಪಕ್ಷಿಗಳು ಗಿಡಮರಗಳನ್ನಾಶ್ರಯಿಸಿವೆ, ಬಿಸಿಲ ಬೇಗೆಯನ್ನು ತಡೆಯ ಲಾರದೆ. ನಾಯಿಗಳು ಜಗಲಿಯಲ್ಲಿ ಯಜಮಾನನನ್ನು ನಿರೀಕ್ಷಿಸುತ್ತ ಕುಳಿ ತಿದ್ದುವು. ಯಜಮಾನರು ದೂರದಲ್ಲಿ ಕಂಡಾಗಲೇ ಹಿಗ್ಗಿನಿಂದ ಕಟ್ಟಿದ್ದ ಸರ ಪಳಿಯನ್ನು ಜಗ್ಗಾಡತೊಡಗಿದುವು ; ಬೌಬೌ ವೂ ವೂ ಕುಂಯಿ ಕುಂಯಿ ರಾಗವನ್ನು ಹರಿಸುತ್ತ.

ದೇವಯ್ಯ ಎದ್ದು ಕೊರಳ ಸರಪಳಿಗುನ್ನು ಕಳಚಿದ. ಆ ಕ್ಷಣವೇ ಓಡಿದುವು ಯಜಮಾನನ ಕಾಲಬಳಿಗೆ. ಅವನು ಅಂಗಳದಲ್ಲೇ ಇದ್ದಾನೆ ಅಂಗಳದ ಸ್ವಚ್ಛತೆ ಮತ್ತು ಹೂ ಗಿಡಗಳ ಸಂದೋಹ ಪೂತು ಶೃಂಗಾರಗೊಂಡ ದೃಶ್ಯ ಸುಮನೋಹರ.

ಅವನು ಅಲ್ಲಿಂದಲೇ ದೇವಯ್ಯನಿಗೆ ಅಂದ,

"ತಂತಿ ಬೇಲಿ ಕಟ್ಟಿದ್ದುದರಿಂದ ದನಗಳ ಕಾಟ ಇಲ್ಲವೇ ಇಲ್ಲ, ನೋಡಿ."

ಅಷ್ಟರಲ್ಲೇ ಎತ್ತಿನ ಗಾಡಿ ಗಡಬಡಿಸುತ್ತ ಅಂಗಳಕ್ಕೆ ಬಂತು ಅದರ ತುಂಬ ಕಿತ್ತ ತೆಂಗಿನಕಾಯಿಗಳ ಹೇರು. ಬದಿಯಲ್ಲಿ ಖಾಲಿ ಮಾಡಿ ಮತ್ತೆ ಹೊರಟಿತು ಗಾಡಿ ಪುನಃ ತುಂಬಿಕೊಂಡು ಬರಲು. ಎತ್ತುಗಳು ದಣಿಯಬಾರದೆಂದು ವಿಪರೀತ ಹೊರೆಯ ಭಾರವಿಲ್ಲ. ಅದನ್ನು ಕಟ್ಟುನಿಟ್ಟಾಗಿ ನೋಡಿಕೊಳ್ಳುತ್ತಾನೆ ರಾಮನಾಥ.

ದೇವಯ್ಯ ಅಂದ—"ನಾನಾಗಲೇ ತೋಟಕ್ಕೆ ಹೋಗಿದ್ದೆ. ಇನ್ನೂ ಎರಡು ಗಾಡಿ ಕಾಯಿಗಳನ್ನು ಕೊಯ್ದಾಗಿದೆ. ರೈಟರ್ ಅಲ್ಲಿಯೇ ಇದ್ದಾನೆ. ಈ ಸಲ ತೆಂಗಿನ ಬೆಳಸು ಸೊಗಸಾಗಿದೆ."

"ನಿಮ್ಮ ಮಗಳ ಪುಣ್ಯ. ನಾನಾಗಲೇ ಒಮ್ಮೆ ಅವಳಿಗೆ ಹಾಗೆಂದು ಹೇಳಿರುವೆ."

"ಯಾರ ಪುಣ್ಯವೋ ಅಂತೂ ಬೆಳೆ ಚೆನ್ನಾಗಿದೆ- ದೇವರು ದೊಡ್ಡವನು."

"ಅದು ನಿಜ" ಎಂದಳು ಕುಮುದ ಸಾನಂದದಿಂದ.

೦ ೦ ೦ ೦

ದೇವಯ್ಯ ಬೆಳಿಗ್ಗೆ ಹಾಸಿಗೆ ಬಿಟ್ಟೇಳುವಾಗಲೇ ವಿಪರೀತ ಜ್ವರ. ತಲೆ ಸಿಡಿಯುವಷ್ಟು ತಲೆನೋವು. ಏಳಲಾರದಷ್ಟು ಜೀವ ಬಳಲಿತ್ತು, ಜ್ವರದ ತಾಪದಿಂದ.

ರಾಮನಾಥ ನಗರಕ್ಕೆ ಹೋಗಿ ವೈದ್ಯರನ್ನು ಕರೆತಂದ.

ರೋಗಿಯ ದೇಹಸ್ಥಿತಿಯನ್ನು ಪರೀಕ್ಷಿಸಿ ಔಷಧಿ ಬರೆದು ಕೊಟ್ಟು ಹೋದ ಡಾ॥ ಶಂಕರಭಟ್. ಊರಲ್ಲೆಲ್ಲಾ ಡಿಂಗೂ ಜ್ವರದ ಹಾವಳಿ. ಮನೆ ಮನೆಯಲ್ಲೂ ವಾರಗಟ್ಟಲೆ ತಿಂಗಳುಗಟ್ಟಲೆ ಉಳಿದು ಆತಿಥ್ಯ ಪಡೆಯುತ್ತಿತ್ತು ರೋಗ. ಅದು ಮನಸ್ಸಿಗೆ ಎಲ್ಲಿಲ್ಲದ ಕಳವಳ. ಸೀತಮ್ಮ ಮಗ್ಗಲು ಬಿಟ್ಟು ಕದಲಲಿಲ್ಲ. ಶಂಕರಭಟ್ಟರ ತಿರುಗಾಟವೂ ತಪ್ಪಲಿಲ್ಲ. ಕುಮುದ್ವತಿಯ ಚಟುವಟಿಕೆಯೂ ನಿಂತುಹೋಯಿತು. ದೇವಯ್ಯ ಎಲುಬು ಚರ್ಮವಾದ.

ಎಂಟು ಹತ್ತು ದಿನಗಳು ಸತಾಯಿಸಿದ ಬಳಿಕ ಜ್ವರ ಬಿಟ್ಟಿತು. ದೇವಯ್ಯ ಸಂಪೂರ್ಣ ಚೇತರಿಸಿಕೊಳ್ಳಲು ಬಹಳ ದಿನಗಳೇ ಬೇಕಾಗುವಷ್ಟು ಬಳಲಿ ಬೆಂಡಾಗಿದ್ದ. ಊಟೋಪಚಾರಗಳು ಕೊಠಡಿಯಲ್ಲಿಯೇ ನಡೆದುವು. ರಾಮನಾಥ ತುಂಬಾ ಮುತುವರ್ಜಿ ವಹಿಸಿ ಬಾರಿಬಾರಿಗೂ ಬಂದು ನೋಡುತ್ತ ಕೊಠಡಿಯಲ್ಲಿ ಕುಳಿತು ಮಾತಾಡಿ ಹೋಗುತಿದ್ದ.

ದೇವಯ್ಯ ಪಲ್ಲಂಕದ ಮೇಲೆ ಕುಳಿತು ಬಳಲಿದ ದನಿಯಲ್ಲಿ ಮಗಳಿಗೆಂದ,

"ಮಗಳೇ, ನೀನು ಎಲ್ಲಕ್ಕೂ ಎದುರು ಮಾತಾಡಿ ಮೊಂಡು ವಾದ ಹೂಡುತ್ತಿ. ಅದರಿಂದ ರಾಮನಾಥನಿಗೆ ಎಂಥ ನೋವೋ.......ಪಾಪ, ಇಬ್ಬರು ಮಡದಿಯರನ್ನು ಕಳೆದುಕೊಂಡು ನೊಂದು ನೀರಾದವ ನೀನವನ ಮನಸ್ಸಿಗೆ ಸಂತಸದ ರಸಾನ್ನವನುಣಿಸಬೇಕೇ ಹೊರತು ಮೊಂಡು ವಾದ ಹೂಡಬಾರದು. ಈ ಸಮಾಜವನ್ನು ಸರಿಪಡಿಸುವುದೆಂದರೆ ಉಪ್ಪಿನ ಬೊಂಬೆಯೊಂದು ಸಮುದ್ರವನ್ನು ಅಳೆಯ ಹೋದಂತೆ ಎಂಬುದು ತಪ್ಪಲ್ಲ."

"ಅಪ್ಪಾಜೀ, ಇದು ಮೊಂಡುತನ ಅಲ್ಲ. ನಾನು ಮೊದಲಿಂದಲೂ ಕೈತುಂಬಾ ಕೆಲಸ ಮಾಡಿದವಳು. ಟೈಲರಿಂಗ್ ಮಾಡಿ ಕೈತುಂಬಾ ಸಂಪಾದಿಸುತಿದ್ದೆ. ಈಗದರಿಂದ ಸಂಪಾದನೆಯಾಗಬೇಕಾಗಿಲ್ಲ. ಇಲ್ಲೊಂದು ಚಿಕ್ಕ ಮಕ್ಕಳ ಶಾಲೆ ಆರಂಭಿಸುವೆ. ಹಿಂದಿನ ಬಿಡದಿಯಲ್ಲಿ ಟೈಲರಿಂಗ್ ಶಾಲೆ ಆರಂಭಿಸಿ ಹೆಣ್ಣು ಮಕ್ಕಳಿಗೆ ಕಲಿಸುವ ಯೋಚನೆ ಮಾಡಿರುವೆ. ಬಡ ಮಕ್ಕಳು ಕಲಿ

ತರೆ ನಾಲ್ಕು ಕಾಸು ಸಂಪಾದಿಸಿಕೊಳ್ಳುತ್ತಾರೆ. ನನಗೆ ಕೆಲಸವಿಲ್ಲದೆ ಕಾಲಹರಣ ಸಾಧ್ಯವಿಲ್ಲ."

ಸೀತಮ್ಮ ನಡುವೆ ಬಾಯಿ ಹಾಕಿದಳು,

"ಕೆಲಸದ ವಿಷಯ ಬೇರೆ. ಹಠವಾದದಿಂದ ಮನಸ್ತಾಪ ಬಂದರೇನು ಗತಿ ? ನಮ್ಮ ಬಳಿ ಹೇಗಿದ್ದರೂ ಸರಿಯೆ. ರಾಮನಾಥರೊಂದಿಗೆ ಹುಷಾರಾಗಿರು. ಹೇಳಿ ಕೇಳದೆ ಯಾವ ಕೆಲಸವನ್ನೂ ಮಾಡಬೇಡ."

"ಅಮ್ಮಾ ನಾನು ಮಾಡುವುದೂ ವಿಷಯ ವಿಮರ್ಶೆ. ಅದರಿಂದ ಅಭಿಪ್ರಾಯಭೇದ ಬಂದರೂ ಮತ್ತೆ ನಿರ್ಣಯ ಒಂದೇ ಆಗುತ್ತದೆ. ಇಂತಹ ವಿಚಾರದಲ್ಲಿ ನೀವೇಕೆ ತಲೆ ಕೆಡಿಸಿಕೊಳ್ಳುತ್ತೀರಿ ?"

"ಅವರು ಒಪ್ಪಿಗೆ ನೀಡಿದರೆ ಒಳ್ಳೆತು. ಅವರು ಒಪ್ಪದಿದ್ದರೆ ಮುಂದಾಗ ಬೇಡ."

"ನಿಮಗೇಕೆ ಚಿಂತೆ ? ಹೇಗೆ ನಿರ್ವಹಿಸುತ್ತೇನೆ ನೀವೇ ನೋಡುತ್ತೀರಿ..."

"ಅವನು ಹೇಳಿದಂತೆ ಕೇಳಿಕೋ ಮಗಳೇ !" ಗೋಗರೆಯಿತು ಮಾತೆಯ ನುಡಿ.

ಅವಳು ಕಿಲಕಿಲನೆ ನಕ್ಕುಬಿಟ್ಟಳು.

— • —

ಲ

ಮನೆಯ ಪರಿಸರದಲ್ಲೇ ಹಳೆಯ ಕಾಲದ ಒಕ್ಕಲು ಕಾಳಜ್ಜನ ಮನೆ.

ಅವನು ಅಂದಿಂದಿಗೂ ಇವರ ಜಮೀನನ್ನೇ ಉತ್ತು ಬಿತ್ತಿ ಬದುಕಿ ಬಾಳಿದವ. ಉಳುವವನೇ ಹೊಲದೊಡೆಯ ಕಾಯಿದೆಯನ್ವಯ ಒಡೆಯರ ಐದೆಕೆರೆ ಜಮೀನಿಗೆ ಅವನೇ ಒಡೆಯನಾದ. ಅಂದೇ ರಾಮನಾಥ ಪ್ರತಿಮಾತಿಲ್ಲದೆ ಜಮೀನನ್ನು ಬಿಟ್ಟುಕೊಟ್ಟಿದ್ದ. ಆದರೂ, ಹಿಂದಿನ ಭಯ ಭಕ್ತಿ ಬಿಟ್ಟವನಲ್ಲ ಕಾಳಜ್ಜ. ತಾನು ಬೆಳೆದ ತರಕಾರಿ–ಬಾಳೆಕಾಯಿ ಆಗಾಗ ತಂದು ಕೊಟ್ಟು ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೋಗುವುದು ವಾಡಿಕೆ.

ಇವರೂ ಗಾಳಿ ಸವಾರಿಗಾಗಿ ಅತ್ತ ಹೋದಾಗ ಅವನ ಮನೆಯತ್ತ ಹಣಿಕಿ 'ಹೇಗಿದ್ದೀ ಅಜ್ಜಾ ?' ಎಂದು ವಿಚಾರಿಸಿಕೊಳ್ಳದೆ ಇರುತ್ತಿರಲಿಲ್ಲ. ಅವನು ಕಬ್ಬು ಗಾಣವಾಡಿದ್ದ. ಒಂದು ಚೊಂಬು ಕಬ್ಬಿನ ಹಾಲನ್ನು ಹಿಡಿದುಕೊಂಡು ಮನೆಗೆ ಬಂದ.

ಜಗಲಿಯ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಲೇ ಕೇಳಿದ,

"ಹೇಗಿದ್ದೀರಿ ಅಮ್ಮಣ್ಣಿ ?" ಎಂದವನು ಪುನಃ "ಊರಲ್ಲೆಲ್ಲಾ ಡಿಂಗೂ ಜ್ವರ ಸ್ವಲ್ಪ ಕಡಮೆಯಾಗಿದೆ. ಆದರೇನು ಎಲ್ಲರನ್ನೂ ಸತಾಯಿಸಿಬಿಟ್ಟಿದೆ. ಸಕಾಲದಲ್ಲಿ ಔಷಧೋಪಚಾರ ನಡೆಸಿ ಬಚಾವಾದರು ಜನ.

"ದೇವರ ದಯ."

ಸೀತಮ್ಮ ಹೊರಬಂದಳು.

"ಬುದ್ಧಿಯವರಿಗೆ ಜ್ವರ ಬಿಟ್ಟಿತೇ ಅಮ್ಮಣ್ಣಿ ? ಹೇಗಿದ್ದಾರೆ ಈಗ ?"

"ಜ್ವರ ಬಿಟ್ಟು ಒಂದು ವಾರವಾಯ್ತು. ಪೂರ್ತಿ ಸುಧಾರಿಸಿಕೊಳ್ಳಲು ಇನ್ನೊಂದು ವಾರವೇ ಬೇಕು."

"ಹೌದು ಅಮ್ಮಣ್ಣೀ. ಬಲು ಬಳಲಿಬಿಡುತ್ತಾರೆ ಜನ, ಈ ಜ್ವರ ಬಂದರೆ."

ಕುಮುದ್ವತಿ ಅವನಿಗೆ ಕಾಫಿ ತಿಂಡಿಯನ್ನು ಕೊಟ್ಟು ಉಪಚರಿಸಿ ಹತ್ತು ರೂಪಾಯಿನ ನೋಟನ್ನೂ ಕೊಟ್ಟು ನುಡಿದಳು, ಕಬ್ಬಿನ ಹಾಲು ತರುವ ತೊಂದರೆಯೇಕೆ ತೆಗೆದುಕೊಂಡಿರಿ ತಾತಾ ? ನೀವು ಸುಮ್ಮನೆ ಬಂದು ಹೋಗುತ್ತಿದ್ದರೆ ಸಾಕು."

ಅವನ ಸತಿ ಮರಣಿಸಿ ಏಳೆಂಟು ವರ್ಷಗಳೇ ಆದುವು. ಮಗ ಮೈ ಮುರಿದು ದುಡಿಯಲಾರದೆ ಎಂದೋ ಮನೆ ಬಿಟ್ಟು ಹೋದವನು ಹಿಂದಿರುಗಲೇ ಇಲ್ಲ. ಅವನು ಬದುಕಿದ್ದಾನೋ ಇಲ್ಲವೋ ಅದೂ ತಿಳಿಯದು. ಇಂದು ಮಗಳು ಅಳಿಯ ಮತ್ತು ಇಬ್ಬರು ಮೊಮ್ಮಕ್ಕಳು ಅವನಿಗೆ ಆಧಾರ.

"ಅಮ್ಮಣ್ಣಿ ಹಸು ನಾಳೆ ನಾಡಿದ್ದರಲ್ಲಿ ಕರು ಈಯುತ್ತೆ. ಬುದ್ಧಿಯವರಿಗೆ ಗಿಣ್ಣು ಬಹಳ ಇಷ್ಟ. ಹಾಲು ತಂದುಕೊಡುವೆ ಗಿಣ್ಣು ಮಾಡಿಕೊಡಿ."

"ಆಗಲಿ ಅಜ್ಜಾ."

ಅಜ್ಜ ಕಾಫಿ ತಿಂಡಿ ಮುಗಿಸಿ ತಟ್ಟೆ ಲೋಟಗಳನ್ನು ಬರಿದು ಮಾಡಿದ.

"ನಿಮ್ಮ ದೃಷ್ಟಿ ಚೆನ್ನಾಗಿದೆಯೇ ?"

"ಚೆನ್ನಾಗಿದೆ ಅಮ್ಮಾ. ಭಗವಂತ ಕೊನೆಯತನಕ ಹೀಗೇ ಇಟ್ಟಿದ್ದರೆ ಸಾಕು. ನಾನು ಓದುವುದು ಪತ್ರಿಕೆ ಮಾತ್ರ. ಒಮ್ಮೊಮ್ಮೆ ಪತ್ರಿಕೆ ಓದುವುದೇ ಬೇಸರ. ನಮ್ಮದೊಂದು ಬಗೆಯ ಕಷ್ಟವಾದರೆ, ವಿದೇಶಗಳ ಕಡೆ ನೋಡಿ, ನೆಣಗೊಬ್ಬಿನಿಂದ ಯುದ್ಧ ಹೂಡಿ ಸುಟ್ಟು ಸೀಗಡಿಯಾಗಿ ಸಾಯುತ್ತಾರೆ. ಅವರದು ಇನ್ನೊಂದು ಬಗೆಯ ಕಷ್ಟ. ಉತ್ತರ ಭಾರತದಲ್ಲಿ ನೆತ್ತರಿನ ಹೊಳೆ ಹರಿಯುತ್ತದೆ. ಪತ್ರಿಕೆ ಓದುವುದು ರೇಡಿಯೋ ಕೇಳುವುದು ಎರಡೂ ದುಃಖವೇ. ಈ ಜನರಿಗೆ ದೇವರೇ ಬುದ್ಧಿ ಕೊಡಬೇಕು. ಭಾರತ ಇಂದು ಭಾರತವಾಗಿ ಉಳಿದಿಲ್ಲ. ನಮ್ಮ ಸಂಸ್ಕೃತಿ ದಿಕ್ಕಾಪಾಲಾಗಿ ಗಾಳಿಯಲ್ಲಿ ತೂರಿ ಹೋಗಿದೆ. ನೋಡಿದರೆ ನಾಗರಿಕ ಕಾಲಮಾನ. ನಾಗರಿಕ ಜನಾಂಗ.

ಆಗುತ್ತಿರುವುದೆಲ್ಲಾ ಅನಾಗರಿಕವೇ. ನಮ್ಮ ರಾಷ್ಟ್ರ ಹೀಗಾಗುತ್ತೆಂದು ನಾವು ಎಂದಾದರೂ ಭಾವಿಸಿದ್ದೇವೆಯೇ ? ಈ ಪಾಪವನ್ನು ಗಂಗೆಯೂ ತೊಳೆಯಲಾರದು ; ಸಾಗರವೂ ತೊಳೆಯಲಾರದು ; ಬಿಡಿ.”

“ಖಂಡಿತ....!”

“ತೋಟದ ಕಡೆ ಬಂದಾಗ ಮನೆಯ ಕಡೆ ಬನ್ನಿ ಅಮ್ಮಣ್ಣಿ.”

“ಆಗಲಿ ಅಜ್ಜಾ.”

ರಾಮನಾಥ ಗದ್ದೆಯ ಕಡೆಯಿಂದ ಬಂದವನು ಕಾಳಜ್ಜನನ್ನು ಕಂಡು,

“ಏನಪ್ಪಾ, ಸೌಖ್ಯವಾಗಿದ್ದೀಯಾ ?”

“ಹ್ಞೂಂ ; ಇದುವರೆಗೆ ಕಾಣಲಿಲ್ಲವಲ್ಲಾ ಬುದ್ಧೀ ?”

“ತೋಟದ ಕಡೆ ಹೋಗಿದ್ದೆ. ತೋಟದಲ್ಲಿ ಕಳ್ಳತನ ನಡೆಯುತ್ತದೆ. ಬಾಳೆಗೊನೆ ತೆಂಗಿನಕಾಯಿ ಹೆಚ್ಚು ಹೆಚ್ಚಾಗಿ ಕಳುವಾಗುತ್ತಿವೆ. ರಾತ್ರಿ ಕಾವಲು ಮಾತ್ರ ಸಾಲದು. ಇನ್ನು ಹಗಲು ಕಾವಲೂ ಬೇಕಾಗಿದೆ.”

“ಕಾಲ ಕೆಟ್ಟುಹೋಯ್ತು ಬುದ್ಧೀ....ಇವರಿಗೆ ದುಡಿದುಕೊಂಡು ತಿನ್ನುವುದಕ್ಕೇನಾಗಿದೆ ? ನಾಚಿಗೆಗೇಡು ! ಇಂಥ ಬಂಥ ಬದುಕಿಗೇನೆನ್ನೋಣ ಬುದ್ಧೀ ?”

“ನಮ್ಮ ನಾಯಿಗಳನ್ನು ಮುಂದೆ ತೋಟದ ಕಾವಲಿಗೆ ಬಳಸಿಕೊಳ್ಳಬೇಕಾಗಿದೆ. ಇನ್ನೂ ಕೆಲವು ಕಾವಲು ನಾಯಿಗಳನ್ನು ತರಬೇಕು. ಇಲ್ಲದಿದ್ದರೆ ಕಷ್ಟವೇ ಅಜ್ಜಾ !”

“ನಿಮ್ಮ ತಂತಿ ಬೇಲಿಯನ್ನು ಸುಲಭವಾಗಿ ದಾಟುತ್ತಾರೆ. ಏಣಿ ಇಟ್ಟುಕೊಂಡರೆ ಆಯಿತಲ್ಲ. ಆ ಕಡೆಯೊಂದು ಈ ಕಡೆಯೊಂದು ಗಿಡ್ಡಗಿಡ್ಡದ ಏಣಿ ಇದ್ದರೆ ಸಾಕು. ಏರಿ ಇಳಿಯುವುದು ಸುಲಭ. ಕೊಂಡೊಯ್ಯುವುದೂ ಸುಲಭ. ನಾಯಿಗಳು ಈ ಕಡೆಯಿದ್ದರೆ ಆ ಕಡೆ ನಡೆಯುತ್ತೆ ಕಳ್ಳತನ. ಬುದ್ಧೀ....ಕಾಲ ಕೆಟ್ಟುಹೋಯ್ತು. ಧರ್ಮ ಕರ್ಮ ಇಲ್ಲವೇ ಇಲ್ಲ.” ಎಂದ

ಅವನು ಪುನಃ "ಬುದ್ಧೀ ! ನಾಯಿಗಳೇ ಸೂಕ್ತ. ನಾಯಿಗಳೊಂದಿಗೆ ಒಬ್ಬ ಕಾವಲುಗಾರ ಓಡಾಡಿಕೊಂಡಿದ್ದರೆ ಸಾಕು. ಅವನ ಕೈಗೊಂದು ಕ್ಯಾಟ್ ಬಿಲ್ ಕೊಟ್ಟುಬಿಡಿ."

"ಅದಿದ್ದೇ ಇದೆ. ಹಕ್ಕಿ ಹೊಡೆದುಬಿಡುತ್ತಾರೆ ಈ ಕಟುಕರು. ನಾನು ಹಕ್ಕಿ ಹೊಡೆಯಬಾರದೆಂದು ಅಪ್ಪಣೆ ಮಾಡಿರುವೆ. ತೋಟದ ತುಂಬ ಹಕ್ಕಿಗಳ ಚಿಲಿಪಿಲಿ ಎಷ್ಟು ಅಮೋಘ !"

"ಹೌದು ಅವಿಲ್ಲದಿದ್ದರೆ ಜೀವಾಳವೇ ಇಲ್ಲ. ಆದರೆ, ಅವು ತೆನೆಯನ್ನು ಹಾಲು ಬಲಿಯುವ ಮುನ್ನ ತಿಂದು ಹಾಳು ಮಾಡುತ್ತವೆ. ಅದೊಂದು ಕಷ್ಟ."

ಕಾಳಜ್ಜ ಕೈ ಮುಗಿದು ಹೊರಟ. ಅಂಗಳದಂಚಿನವರೆಗೂ ಹೋಗಿ ಆತ್ಮೀಯತೆಯಿಂದ ಬೀಳ್ಕೊಟ್ಟಳು ಕುಮುದ್ವತಿ. ಸ್ನೇಹಪೂರ್ಣ ದೃಷ್ಟಿ ಪರಸ್ಪರ ಬೀಳ್ಕೊಟ್ಟುವು.

೦ ೦ ೦ ೦

ಗೌರು ಈರಯ್ಯನ ಹೆಂಡತಿ. ಇಬ್ಬರೂ ತೋಟದ ಕೆಲಸಗಾರರೇ.

ಗೌರು ಅಳುತ್ತಳುತ್ತಲೇ ಬಂದಿದ್ದಾಳೆ ಮನೆಗೆ. ಮೈಯಲ್ಲಿ ಹಸಿರುಗಟ್ಟಿದ ಬಾಸುಂಡೆಗಳು. ಮುಖದಲ್ಲಿ ಊತ. ಕೆಂಡದುಂಡೆಗಳಾದ ಕಣ್ಣುಗಳು. ಕೆದರಿದ ಕೂದಲು. ಅವಳ ಅಸ್ತವ್ಯಸ್ತ ಸ್ಥಿತಿಯನ್ನು ನೋಡಿದರೆ ಎದೆಗರಗುವಂತಹ ಕರುಣಾಜನಕ ದೃಶ್ಯ.

"ಏನಮ್ಮಾ, ಏನಾಯ್ತು ? ಏಕೆ ಹೀಗಿದ್ದಿ ?" ಆತುರ ಕಾತರಗಳಿಂದ ಕೂಡಿದ ದನಿಯಲ್ಲಿ ಕೇಳಿದಳು ಸೀತಮ್ಮ. ಮನದಲ್ಲಿ ಕಾರುಣ್ಯ ದ್ರವ್ಯ ಕರಗಿತು ಮಂಜಿನಂತೆ.

ವಿಷಯ ತಿಳಿದು ರಂಗಮ್ಮ ಕುಮುದ್ವತಿಯರೂ ಜಗಲಿಗೆ ಬಂದರು. ಎಲ್ಲರಿಗೂ ಜಜ್ಜರಿತವಾಯಿತು ಹೃದಯ. ಉಸಿರಿಡಿದು ನೋಡಿದರು ಸಂಕಟದಿಂದ.

ರಂಗಮ್ಮ ಒಂದೇ ಉಸಿರಿಗೆ ಹೇಳಿದಳು "ಇದು ಈರಯ್ಯನ ಉಂಬಳಿ. ಅವನಿಗೆ ದಿನವೂ ಬಡಿಯುವುದೇ ಕೆಲಸ. ಇವಳ ಕೂಲಿ ಹಣವನ್ನು ತೆಗೆದು ಕೊಳ್ಳುವುದೂ ಅವನೇ. ಪಾಪ, ಅವಳಿಗೆ ನೆಟ್ಟಗೆರಡು ಸೀರೆ ಕೊಡುವುದಿಲ್ಲ. ಅವಳು ಹಗಲೆಲ್ಲಾ ದುಡಿದು ಅವನ ಬಡಿತಕ್ಕೊಳಗಾಗಬೇಕು ನೋಡಿ ! ಅಕ್ಕ ಪಕ್ಕದವರು ಯಾರು ಹೇಳಿದರೂ ಕೇಳುವವನಲ್ಲ. ಮಹಾ ಕ್ರೂರಿ–ದುಷ್ಟ !"

"ಶ್ರೀಹರೀ ! ಅವನಿಗೇನು ಬಂತು ಕೇಡು ? ಎಷ್ಟು ಹೊಡೆದಿದ್ದಾನೆ, ಎಂಥ ಧೂರ್ತ ? ಯಾರೂ ಇರಲಿಲ್ಲವೇ ಅಲ್ಲಿ ?"

"ಪಾಪಿಗಳು ! ಸ್ತ್ರೀಯೆಂಬ ಕರುಣೆಯಿರಕೂಡದೇ ? ಕಂಡವರ ಮಕ್ಕಳನ್ನು ದಂಡಿಸುವುದು ಸುಲಭ."

"ಅವನಿಗೂ ಹಾಗೆಯೇ ಚೆಚ್ಚಬೇಕು. ಆಗ ಅದರ ರುಚಿ ತಿಳಿಯುತ್ತೆ."

ತಲಾಕ್ಕೊಂದು ಮಾತು ಹೊರಬಿದ್ದುವು, ಸಿಟ್ಟಿನಿಂದ.

ಗೌರು ಒಂದೇ ಸಮನೆ ಅಳುತಿದ್ದಾಳೆ. ಅವಳ ಬೆನ್ನಿನ ಮೇಲೆ ಕೈಯಿಟ್ಟು ಸಮಾಧಾನಪಡಿಸುತ್ತ ನುಡಿದಳು ಕುಮುದ್ವತಿ "ನಿನಗೆ ಬದುಕಿನ ಹಾದಿ ಕಲಿಸಿಕೊಡುವೆ, ಹೆದರಬೇಡ."

"ಏನಾಯ್ತು ಹೇಳು, ಇಷ್ಟು ಹೊಡೆಯಲು ಕಾರಣ ?" ಕೇಳಿದಳು ಸೀತಮ್ಮ.

"ಏನೂ ಇಲ್ಲಮ್ಮ, ಅಕ್ಕಿ ಬೇಳೆ ಖರ್ಚಾಯ್ತು ಅಂತ ಹೊಡೆತ. ಹೊಟ್ಟೆತುಂಬ ಉಣ್ಣುವುದು ಬಿಡುವುದಿಲ್ಲ. ಅಕ್ಕಿ ಖರ್ಚಾಗಬಾರದು ಹೇಗೆ?"

"ಛೆಃ ! ಪಾಪ. ನೀನು ದಿನವೂ ಬಿಡುವಿನ ವೇಳೆಯಲ್ಲಿ ಇಲ್ಲಿಗೆ ಬಾ. ನಿನಗೆ ನಾನು ಟೈಲರಿಂಗ್ ಕಲಿಸುವೆ. ಅದನ್ನು ಐದಾರು ತಿಂಗಳು ಕಲಿತರೆ ಸಾಕು. ಮುಂದೆ ಅದರಿಂದ ಒಳ್ಳೆ ಸಂಪಾದನೆಯಾಗುತ್ತದೆ. ಕೂಲಿ ಕೆಲಸಕ್ಕಿಂತ ಇದು ಲೇಸು. ನಿನ್ನ ಗಂಡನನ್ನು ಕರೆಸಿ ಅವನಿಗೆ ಸರಿಯಾಗಿ ಛೀಮಾರಿ ಹಾಕೋಣ."

ಅವಳು ಕಾಲಿಗೆ ಬಿದ್ದು ಹೇಳಿದಳು "ಅವನು ನನಗೆ ಬೇಡವೇ ಬೇಡ. ಅವನಿಂದ ಸದಾ ಪೆಟ್ಟು ತಿಂದು ಸಾಕಾಗಿದೆ. ನೀವು ಮನೆ ಕೆಲಸ ಕೊಟ್ಟರೆ ನಿಮ್ಮ ಪಾದಸೇವೆಯನ್ನು ಮಾಡಿಕೊಂಡು ಬಿದ್ದಿರುವೆ. ನೀವು ಎರಡು ಹೊತ್ತು ಊಟ ಕೊಟ್ಟರೆ ಸಾಕು ಪಗಾರವೂ ಬೇಡ, ಏನೂ ಬೇಡ, ಅಮ್ಮಣ್ಣಿ !" ದನಿ ಗೋಗರೆಯಿತು. ಕಣ್ಣುಗಳಲ್ಲಿ ಕಂಬನಿಯ ಕೋಡಿ ಹರಿದು ಹೋಯಿತು.

ಆಗ ಅವಳದೊಂದು ಸಮಸ್ಯೆಯು ಉದ್ಭವಿಸಿತು ದಿಢೀರನೆ.

ಮನೆ ಕೆಲಸಕ್ಕೆ ರಂಗಮ್ಮ ಇದ್ದಾಳೆ. ಹೊರಗಣ ಕೆಲಸಕ್ಕೆ ಕಪಿನೀಪತಿ ಇದ್ದಾನೆ. ಇನ್ನು ಇವಳನ್ನೇನು ಮಾಡುವುದು ? ಹಿರಿಯ ಸಮಸ್ಯೆ.

ರಾಮನಾಥ ಒಳ ಬಂದ. ಅವಳ ಸ್ಥಿತಿಗತಿಯನ್ನು ಗಮನಿಸಿದೊಡನೆ ಸಿಟ್ಟು ಕುದಿಯಿತು ಒಡಲಲ್ಲಿ. ಕಪಿನೀಪತಿಯನ್ನು ಕಳುಹಿಸಿ ಈರಯ್ಯನನ್ನು ಬರಮಾಡಿದ. ಕೆಲಸಕ್ಕೆ ಹೋಗದೆ ಬಿಡಾರದಲ್ಲೇ ಇದ್ದ ಅವನಿಗೆ ಗೊತ್ತಿತ್ತು ದೂರು ಕೊಂಡೊಯ್ದಿದ್ದಾಳೆಂದು.

ಅವನು ತಲೆಬಾಗಿ ನಡುಗುತ್ತ ನಿಂತ.

ರಾಮನಾಥ ರೇಗಿ ಅವನನ್ನು ಹೊಡೆಯುವಂತೆಯೇ ಹತ್ತಿರಕ್ಕೆ ಜಿಗಿದ. ದಣಿಯ ಉಗ್ರ ಕೋಪವನ್ನು ನೋಡಿ ಅವನು ಹೆದರಿ ಕಂಗಾಲಾಗಿ ಒಮ್ಮೆಗೇ ಅಂದ "ಬುದ್ಧಿ ದಯವಿಟ್ಟು ಕ್ಷಮಿಸಿ ತಪ್ಪು ಮಾಡಿಬಿಟ್ಟೆ. ಇನ್ನು ಮುಂದೆ ಹೀಗೆ ಮಾಡುವುದಿಲ್ಲ !"

"ಇನ್ನೇನಾದರೂ ನೀನು ತಪ್ಪಿ ನಡೆದರೆ ನಿನ್ನ ಪೋಲೀಸಿಗೆ ಕೊಟ್ಟು ಬಿಡುವೆ !"

"ಇಲ್ಲ ಸ್ವಾಮಿ ! ಕಾಲ್ ಹಿಡಿವೆ ನಿಮ್ಮ. ಇನ್ನು ಸರಿಯಾಗಿರುವೆ" ಎಂದು ಕಾಲುಮುಟ್ಟಿ ಬೇಡಿಕೊಂಡ ಬಳಿಕ ಬಿಡಾರಕ್ಕೆ ಒಂದಿರುಗಿದ. ಮಡದಿ ತಲೆಯೆತ್ತಲಿಲ್ಲ.

ಕುಮುದ್ವತಿ ಕೂಗಿ ಹೇಳಿದಳು "ನೀನು ಇನ್ನೇನಾದರೂ ಹೀಗಾಡಿದರೆ ಅಂದೇ ಲಾಕಪ್ ಸೇರುವೆ ಜೋಕೆ !" ಅನಂತರ ಇತ್ತ ತಿರುಗಿನೋಡುತ್ತ "ನೀವು ಅವನಿಗೂ ಚೆನ್ನಾಗಿ ಬಾರಿಸಬೇಕಾಗಿತ್ತು. ಅವನೂ ಸಹ ಪೆಟ್ಟಿನ ರುಚಿ ನೋಡಬೇಡವೇ ? ಅವನನ್ನು ಹಾಗೇ ಬಿಟ್ಟುದುದು ತಪ್ಪಾಯ್ತು" ಎಂದಳು ರಾಮನಾಥನಿಗೆ.

"ಈ ಬಾರಿ ಕ್ಷಮಿಸೋಣ. ಇನ್ನೇನಾದರೂ ಹೀಗೆ ಮಾಡಿದರೆ ಮುಂದೆ ಸರಿಯಾದ ಪಾಠ ಕಲಿಸಿದರಾಯ್ತು."

ದೇವಯ್ಯ ವಿಷಾದವಾಣಿಯಲ್ಲಿ ಅಂದ "ನಮ್ಮಲ್ಲಿ ಮನೆಮನೆಯಲ್ಲೂ ಇದೊಂದು ಗೋಳು. ಹುಡುಗರಿಗೆ ಧರ್ಮಕರ್ಮ ಏನೇನೂ ಇರುವುದಿಲ್ಲ. ಹೆಂಡತಿಯರನ್ನು ಬಡಿಯುವುದೇ ಒಂದು ಹೆಮ್ಮೆಯ ದ್ಯೋತಕ. ವಿದ್ಯೆ–ಬುದ್ಧಿಯಿಲ್ಲ. ಸಂಸ್ಕೃತಿ–ಸಂಸ್ಕಾರಗಳಿಲ್ಲ. ಹೇಗೆ ಯಾವ ರೀತಿ ನಡೆದುಕೊಳ್ಳಬೇಕು ಎಂಬುದು ಅರ್ಥವಾಗದ ಮೂಢರು. ಸ್ತ್ರೀ ಜನರ ಪ್ರಾಣ ಹಿಂಡುತ್ತಾರೆ. ಇದೊಂದು ರಣಗೋಳು...."

"ಕಂಡವರ ಮಕ್ಕಳನ್ನು ಬಡಿಯುವುದು ಎಷ್ಟು ಸರಾಗ ?" ಎಂದಳು ಸೀತಮ್ಮ.

ಮನಸ್ಸು ಬಿಸಿಲಟ್ಟಿದ ಮಂಜಿನಂತೆ ಕರಗಿ ಹರಿಯಿತು.

ರಾಮನಾಥ ಕರುಣಾತರ ಸ್ವರದಿಂದ ಅಂದ,

"ಧರ್ಮ ಕರ್ಮ ಏನೇನೂ ಇಲ್ಲದವರ ಕೃತಿ ಇದು, ಸದಾ ಬುದ್ಧಿ ಹೇಳುತ್ತಿರಬೇಕು."

ಕುಮುದ್ವತಿ ತಿರಸ್ಕಾರದ ನೋಟ ಬೀರಿದಳು, "ಸ್ವಾತಂತ್ರ್ಯ ಹೀನ ಪರಿಸ್ಥಿತಿಯಿಂದ ಬರುವ ಉಂಬಳಿ ಇದು."

೦ ೦ ೦ ೦

ಬೆಳಿಗ್ಗೆ ತೋಟದ ಕೆಲಸಕ್ಕೆ ಹೋದ ಆಳುಗಳು ನೋಡುತ್ತಾರೆ, ತೋಟದ ತುಂಬಾ ಬಾಳೆಯ ಸಸಿಗಳು ಕತ್ತರಿಸಿ ಬಿದ್ದಿವೆ! ಐವತ್ತು–ಅರವತ್ತು ಗೊನೆಗಳು ಕಳುವಾಗಿವೆ! ಕಳ್ಳತನ ಬಹಳ ಜೋರಾಗಿಯೇ ನಡೆದಿದೆ, ದುಷ್ಟರ ದುಷ್ಕೃತನಕ್ಕೆ ಎಣೆಯೇ ಇಲ್ಲ. ನಳನಳಿಸಿ ಬೆಳೆದ ಎಳೆಬಾಳೆ ಸಸಿಗಳನ್ನು ಕತ್ತರಿಸಿ ಹಾಕಲು ಹೇಗೆ ಮನಸ್ಸಾಯಿತೋ !....ನೋಡಿದರೆ ಎಂತಹ ಕಟುಕರಿಗೂ ಎದೆ 'ದಸಕ್' ಎನ್ನುವಂತಹ ದೃಶ್ಯ !

"ಅಯ್ಯೋ ದೇವರೇ !" ಚೀರಿದ ವೆಂಕಟಪ್ಪ.

"ಇದು ಚಿಕ್ಕಯ್ಯವರದ್ದೇ ಕೆಲಸ ! ಮತ್ತಾರೂ ಇಷ್ಟು ಧೈರ್ಯ ಮಾಡಲಾರರು ! ಹಾಗೆಂದು ನಾವು ಹೇಳಿದರೆ ಬುದ್ಧಿಯವರು ಏನೆಂದಾರೋ.... !"

"ನೀನೇನೂ ಹೇಳಬೇಡ ತಿಮ್ಮಾ, ಬುದ್ಧಿಯವರೇ ಬಂದು ನೋಡಲಿ. ಅವರಿಗೇ ತಿಳಿಯುತ್ತೆ !"

"ಅಂಥ ಮುಳ್ಳು ಬೇಲಿ ಹತ್ತಿ ಹಾರಿದ್ದಾರಲ್ಲ, ಇದೀಗ ಆಶ್ಚರ್ಯ !"

"ಕಳ್ಳರಿಗೆ ಮುಳ್ಳು ಗಿಳ್ಳು ಲೆಕ್ಕವಿಲ್ಲ ಬಿಡು !"

"ನಾನು ಹೋಗಿ ಬುದ್ಧಿಯವರಿಗೆ ತಿಳಿಸಿ ಬರುವೆ !"

ವೆಂಕಟಪ್ಪ ಓಡುತ್ತಲೇ ಬಂದು ವಿಷಯವನ್ನು ಒದರಿದ,

"ಬುದ್ಧೀ ! ಬುದ್ಧೀ! ತೋಟ ಏನಾಗಿ ಹೋಗಿದೆ ? ನೀವು ಬಂದು ನೋಡಿ!"

"ಏನಯ್ಯಾ, ಏನಾಗಿದೆ ?"

"ನಿಮ್ಮ ಮುಳ್ಳು ಬೇಲಿ ಕಳ್ಳರಿಗೆ ಯಾವ ಲೆಕ್ಕ ? ಬಾಳೆ ಸಸಿಗಳನ್ನು ಕೊಚ್ಚಿಹಾಕಿ, ಬಾಳೆ ಗೊನೆಗಳನ್ನು ಕದ್ದಿದ್ದಾರೆ ದುಷ್ಟರು !"

"ನಿಜವಾಗಿ !"

"ಬಂದು ನೋಡಿ, ಸ್ವಾಮಿ ! ಹೊಟ್ಟೆಯುರಿಯುತ್ತೆ ! ಈ ಸರಹದ್ದಿನಲ್ಲಿ ಇಷ್ಟು ಧೈರ್ಯವಾಗಿ ಕಳ್ಳತನ ಮಾಡುವವರು ಯಾರೂ ಇಲ್ಲ ಬಿಡಿ. ಯಾರೋ ಹೊರಗಿನವರಿರಬೇಕು ! ಅಥವಾ ಚಿಕ್ಕಯ್ಯನವರೋ !"

"ಸರಿ ಬಿಡು...ಉದ್ಧಾರವಾಯ್ತು. ಯಾವಾಗ ಧ್ವಂಸ ಮಾಡಿದ್ದಾರೆ ?"

"ಎಲ್ಲೋ ಬೆಳಗಿನ ಝಾವ ಮಾಡಿರಬೇಕು. ಕಡಿದ ಸಸಿಗಳು ಇನ್ನೂ ಬಾಡಿಲ್ಲ ಬುದ್ಧಿ !

"ನೀನು ದೂರ ಹೋಗುವಂತೆ ಎಲ್ಲರ ಮನೆಯ ಮುಂದೆ ಹಾದು ಹೋಗು. ಸರಿಯಾಗಿ ನೋಡುತ್ತ ಹೋದರೆ ಕಡಿದ ಎಲೆ ಚೂರು ಪಾರುಗಳು ಯಾರ್‍ಯಾರ ಮನೆಯ ಮುಂದೆ ಚೆಲ್ಲಿವೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸು. ಯಾರ ಮನೆ ಕಡೆ ಬಿದ್ದಿವೆಯೋ ಅವರೇ ಕಳ್ಳರು ! ನೀನು ನೋಡಿದ ತಕ್ಷಣ ಓಡಿಬಂದು ಬಿಡಬೇಡ. ಎಂದಿನಂತೆಯೇ ಮುಂದೆ ಅಂಗಡಿ ಸಾಲಿಗೆ ಹೋಗಿ ಬಾ. ಯಾರಿಗೂ ಅನುಮಾನ ಬರಿಸಬೇಡ !"

ಒಡೆಯನ ಸಲಹೆಯ ಮೇರೆಗೆ ವೆಂಕಟಪ್ಪ ಬಂದ ನೇರಕ್ಕೇ ಹಿಂದಿರುಗಿ ಹೋದ. ಸ್ವಲ್ಪ ಹೊತ್ತು ಎಲ್ಲರ ಬಾಯಲ್ಲೂ ಅದೇ ವಿಚಾರವಿಶೇಷ ನಲಿಯಿತು. ರಾಮನಾಥ ಮಕ್ಕಳ ಹೇಸು ಕೃತ್ಯವನ್ನು ನೆನೆದು ನೊಂದುಕೊಂಡ. ಅವರಲ್ಲದೆ ಇನ್ಯಾರೂ ಇದನ್ನು ಮಾಡಿರಲಾರರು ಎಂದೇ ಹೇಳುತ್ತಿದೆ ದೃಢವಾದ ಮನಸ್ಸು. ಗೌರವಯುತ ಮನೆತನ. ಕಾಲಾನುಕಾಲದಿಂದ ಮರ್ಯಾದಸ್ಥರಾಗಿಯೇ ಬಾಳಿ ಬಂದವರು. ಈ ಹೀನ ಮಕ್ಕಳಿಂದ ಎಲ್ಲವು ಗಾಳಿಗೆ ಹೊಟ್ಟು ತೂರಿದಂತಾಯಿತು ! ಛೀ ! ನಾಚಿಗೆಗೇಡು ! ಎಂದುಕೊಂಡ ತನ್ನಲ್ಲಿ. ಬಾಯಿ ಬಿಟ್ಟು ಏನೂ ಹೇಳಲಿಲ್ಲ.

ಸ್ವಲ್ಪ ಹೊತ್ತಿನೊಳಗಾಗಿ ತೋಟದಿಂದ ಧಾವಿಸಿ ಬಂದ ವೆಂಕಟಪ್ಪ ಹೇಳಿದ, "ಇದೆಲ್ಲಾ ಚಿಕ್ಕಯ್ಯನವರ ಕೆಲಸವೇ ? ತೋಟದಂಚಿನಿಂದ ಅವರ ಮನೆಯವರೆಗೆ ಚೂರುಪಾರುಗಳು ಕಂಡೂ ಕಾಣದಂತೆ ಅಲ್ಲಲ್ಲಿ ಬಿದ್ದಿವೆ! ಅವರನ್ನು ನೋಡಿದರೆ ಏನೂ ತಿಳಿಯದವರಂತೆ ಇದ್ದಾರೆ. ಬಹಳ ದುಷ್ಟಬುದ್ಧಿ ಜನ. ತಂದೆಗೇ ಅನ್ಯಾಯ ಮಾಡುತಿದ್ದಾರಲ್ಲ, ಇವರಿಗೆ ದೇವರು ದಂಡಿಸದೆ ಬಿಡುತ್ತಾನಾ ಸ್ವಾಮಿ ?"

"ದೇವರು ದಂಡಿಸುವುದು ಅನಂತರ. ಈಗ ಏನು ಮಾಡುವುದು ಹೇಳು."

"ಪೇಟೆ ದಾರಿ ಹಿಡಿದು ನೀವು ಕಾರಿನಲ್ಲಿ ಹೋದರೆ ಗಾಡಿ ಸಿಕ್ಕಾವು. ಅವು ಇನ್ನೂ ಪೇಟೆ ಮುಟ್ಟಿರಲಿಕ್ಕಿಲ್ಲ. ಹೋಗಿ ನೋಡಬಹುದು. ಗೊನೆ ಇನ್ನೂ ಎಂಟು ಹತ್ತು ದಿನ ಗಿಡದ ಮೇಲೆ ಬಲಿಯಬೇಕಿತ್ತು. ಆಗಲೇ ಕಿತ್ತಿದ್ದಾರೆ. ತುಂಬಾ ಕೇಡಿಗಳು ಇವರು !"

ರಾಮನಾಥ ದೇವಯ್ಯನನ್ನು ಕುರಿತು ಅಂದ,

"ಅವನೆಂದಂತೆ ಪೇಟೆ ದಾರಿಯಲ್ಲಿ ಹೋದರೆ ಗಾಡಿಗಳು ಸಿಕ್ಕಬಹುದು. ಆದರೆ, ತಂದೆ ಮಕ್ಕಳ ವ್ಯಾಜ್ಯ ಆಫೀಸು ಕಟ್ಟೆ ಹತ್ತುವುದಾಗಲೀ ಕೋರ್ಟು ಕಛೇರಿ ಹತ್ತುವುದಾಗಲೀ ಸರಿಯಲ್ಲ. ಈಗೇನು ಮಾಡೋಣ ಹೇಳಿ ?"

"ಯೋಚಿಸಿ ನೋಡು. ಕಂಪ್ಲೇಂಟ್ ಕೊಡದೆ ಹೋದರೆ ಇವರು ಮುಂದೆಯೂ ಹೀಗೆಯೇ. ತಂತಿ ಬೇಲಿಯನ್ನು ಹತ್ತಿ ಹಾರಿ ಕತ್ತರಿಸಬೇಕಾದರೆ ಎಂತಹ ಜಿದ್ದು ? ಆಗೆಲ್ಲಾ ದನ ನುಗ್ಗಿಸುತಿದ್ದರು. ಈಗ ನೋಡಿದರೆ ಹೀಗೆ. ಮುಂದೆ ಮುಂದೆ ಹೆಚ್ಚುತ್ತಲೇ ಹೋಗಬಹುದು. ಆದ್ದರಿಂದ ಸ್ವಲ್ಪ ತಡೆಗಟ್ಟಿ ಇದ್ದರೆ ಒಳ್ಳೆಯದು, ಎಂದೇನು ?"

"ಅದು ಸರಿಯಾದರೂ ಸಹ..." ಅಲ್ಲಿಗೇ ತುಂಡುಗಡಿಯಿತು ವಾಕ್ಯಸರಣಿ. ರಾಮನಾಥ ಯೋಚನಾಪರವಶನಾದ. ಮನದಲ್ಲಿ ಅಳಿದ ಮಡದಿ ಲಕ್ಷ್ಮಿ ಸುಳಿಸುಳಿದಳಿದಳು.

ಆಗ ಅಲ್ಲಿಗೆ ಬಂದ ಕುಮುದ್ವತಿ ಚಿಂತಾಕ್ರಾಂತಳಾಗಿ ನುಡಿದಳು "ಶ್ರೀಹರಿ, ನಮ್ಮ ಮೇಲಿನ ದ್ವೇಷವನ್ನು ಬಾಳೆಯ ಸಸಿಗಳ ಮೇಲೆ ತೀರಿಸಬೇಕೇ ? ಅವು ಏನು ಮಾಡುತಿದ್ದುವು ಇವರಿಗೆ ? ವೃಥಾ ದ್ವೇಷ ಸಾಧನೆ, ಒಡಲ್ಕಿಚ್ಚು, ಸಣ್ಣ ಮನಸ್ಸಿನ ಹೀನ ಕೃತ್ಯ. ಇದು ಸರಿಯಲ್ಲ. ಇವರಿಗೇಕೆ ಇದೆಲ್ಲಾ ಅರ್ಥವಾಗುವುದಿಲ್ಲ ? ಅದೇ ಆಶ್ಚರ್ಯ ! ವಿದ್ಯೆ ಬುದ್ಧಿ ಕಲಿತವರು, ಒಳ್ಳೆಯ ಮನೆತನದಿಂದ ಬಂದವರು ಹೀಗಿದ್ದರೆ ಬೇರೆಯವರ ಸ್ಥಿತಿ ಹೇಗಿರಬೇಡ ?"

"ಅದು ನಿಶ್ಚಯ. ಕಾಲ ಕೆಟ್ಟುಹೋಗಿದೆ. ಅವರಿಗೇ ಇದು ಅವಮಾನ ಎಂಬುದನ್ನು ಅರಿಯದೇ ಹೋದರೆ ಮಾಡುವುದೇನು ? ಮೊದಲಿಂದಲೂ

ತಪ್ಪಿದ್ದಾರೆ ಅಲ್ಲವೇ, ಮುಂದೆಯೂ ಹೀಗೆಯೇ ಎನ್ನೋಣ. ಪರಿಸ್ಥಿತಿ ಅವರಿಗೇ ತಿರುಗು ಬಾಣವಾದಾಗ ಅವರು ಬುದ್ಧಿ ಕಲಿತಾರು, ಅಷ್ಟೆ." ಅತ್ಯಂತ ನಿರಾಶೆಯ ದನಿಯಲ್ಲಿ ನುಡಿದ ದೇವಯ್ಯ.

ಪ್ರತ್ಯಗ್ನ ಸ್ನಾನ ಮಾಡಿ ಹೊರಬಂದ ಸೀತಮ್ಮ ವಿಷಯ ತಿಳಿದು ಕಂಗಾಲಾದಳು.

"ಶ್ರೀಹರೀ, ನಾವು ನೇರವಾಗಿ ಅವರ ಮೇಲೆ ದೂರು ಕೊಡುವುದು ಬೇಡ. ವೆಂಕಟಪ್ಪನಿಂದಲೇ ಕೊಡಿಸಿ. ನಾನು ಕಾವಲು ನಡೆಸಿಕೊಂಡಿದ್ದೆ, ರಾತ್ರಿ ಕಳ್ಳತನವಾಗಿದೆ ಎಂದು ಅವನು ಹೇಳಿಕೆ ಕೊಡಲಿ. ಹೇಗೂ ಹಗಲು ಕಾಯುವವನು ಅವನೇ. ನಿನ್ನೆ ರಾತ್ರಿ ಕಾವಲು ಕಾಯಲಿಲ್ಲ. ಆಗ ಇಂಥ ದುಷ್ಕೃತ್ಯ ನಡೆದು ಹೋಗಿದೆ" ಎಂದು ದೂರು ಕೊಡುವುದು ಒಳ್ಳೆಯದು. ನೀವು ಅವನನ್ನು ಕಾರಿನಲ್ಲಿ ಕರೆದುಕೊಂಡು ಹೋಗಿ, ದಾರಿಯಲ್ಲಿ ಗಾಡಿಗಳು ಕಂಡರೆ ಕಣ್ಣಿಂದ ನೋಡಿದ ಹಾಗಾಯಿತಲ್ಲ." ಎಂದಳು ಸತೀಮಣಿ.

"ಅದು ಸರಿ, ಹಾಗೆಯೇ ಮಾಡೋಣ" ಎಂದ ರಾಮನಾಥ.

ಇನ್ನೂ ಡ್ರೈವರ್ ಬಂದಿರುವುದಿಲ್ಲವಾದುದರಿಂದ ಅವನ ಯೋಚನೆ ಬಿಟ್ಟು ತಾನೇ ಕಾರ್ ಹೊರತೆಗೆದ ರಾಮನಾಥ. ಮರುಗಳಿಗೆಯಲ್ಲೇ ವೆಂಕಟಪ್ಪನೊಡನೆ ಅಲ್ಲಿಂದ ಹೊರಟಾಗಿತ್ತು ಅವನು. ಕಾರು ಸದ್ದು ಮಾಡುತ್ತ ಪ್ರಾಕಾರದ ಬಾಗಿಲನ್ನು ದಾಟಿ ಕಣ್ಮರೆಯಾಯಿತು.

ದೇವಯ್ಯ ಅತ್ಯಂತ ವಿಷಾದ ವಾಣಿಯಲ್ಲಿ ಅಂದ,

"ಮಕ್ಕಳು ಹೀಗಿದ್ದರೆ ಮಾಡುವುದೇನು ? ಇಂತಹವರನ್ನು ಮನೆಯಲ್ಲಿ ಸೇರಿಸಿಕೊಂಡಿದ್ದಿದ್ದರೆ ಬಹಳ ಕಷ್ಟವಿತ್ತು ರಾಮನಾಥನಿಗೆ. ಪಾಪ, ಅವನಿಗೆ ಇದೊಂದು ತೀರಾ ದುರಾದೃಷ್ಟ. ಅನುಭವಿಸಲಾರದ ಸಂಕಟ. ದೇವರು ಈ ಕಷ್ಟ ಕೊಡಬಾರದಿತ್ತು."

"ಹೌದಪ್ಪ, ದೈವಕ್ಕೆ ಏಕೆ ಕಣ್ಣಿಲ್ಲವೋ..." ಎಂದಳು ಸೀತಮ್ಮ. ಒಂದು ಗಳಿಗೆ ತಡೆದು "ವಿನಾಕಾರಣ ಕಿನಿಸಿಗೆ –ದುಃಖ–ಸಂಕಟ. ಮಕ್ಕಳು

ಸರಿಯಾಗಿದ್ದರೇನೇ ಚೆನ್ನ. ಇಲ್ಲದಿದ್ದಲ್ಲಿ ಜೀವನವೇ ನರಕ. ನಮಗೂ ಇದೇ ಗೋಳು. ಈ ಕಾಲದ ಮಕ್ಕಳು ಮಕ್ಕಳೇ ಅಲ್ಲ. ಮನೆ ಮನೆಯಲ್ಲೂ ದುಷ್ಟ ಮಕ್ಕಳಿದ್ದಾರೆ ಈಗ...ನಿಜಕ್ಕೂ ಕಾಲ ಕೆಟ್ಟು ಹೋಗಿದೆ."

ಕುಮುದ್ವತಿ ಮಾತಾಡಲಿಲ್ಲ. ಮುಖಬಿಂಬದ ಮೇಲೆ ವಿಶಾದ ಕಳೆ ಜೇಗಿತು.

ದೇವಯ್ಯ 'ಹೌದು' ಎಂಬಂತೆ ತಲೆಯಾಡಿಸಿದ.

"ನನಗೂ ಚಿಂತೆಯಾಗಿದೆ ಅಪ್ಪಾಜಿ. ಕುಟುಂಬ ಅಂದಮೇಲೆ ನಾಲ್ಕು ಮಂದಿ ಕೂಡಿದ್ದರೇನೇ ಚೆನ್ನು. ನಿಮ್ಮನ್ನು ನಾವು ಅಲ್ಲಿಯೇ ಬಿಟ್ಟಿದ್ದರೆ ನಮಗಿಲ್ಲಿ ಒತ್ತಾಸೆ ಕೊಡುವವರೇ ಇರಲಿಲ್ಲ. ಈಗ ನೀವಿಲ್ಲಿರುವುದರಿಂದ ನಮಗೆಷ್ಟೋ ಆಸರೆ ಮತ್ತು ಸಂಜೀವನ ಯೋಗ. ನೀವೂ ಇಲ್ಲವಾಗಿದ್ದಿದ್ದರೆ ಇಲ್ಲಿ ಯಾರಿದ್ದಾರೆ ನಮಗೆ ? ನಾನು ಪೇಟೆ–ಪಟ್ಟಣಗಳ ಗೊಂದಲವನ್ನು ಬಯಸುವವಳೇ ಅಲ್ಲ ಇಂತಹ ಸಂಮೃದ್ಧಿಯಾದ ಜಮಿನಾನ್ದಾರಿಯೇ ಸರ್ವಾಂಗ ಸುಂದರ ಮತ್ತು ಶಾಂತಶೀತಲ. ಇಂತಹ ಪ್ರಶಾಂತಿ ಪಟ್ಟಣದಲ್ಲಿ ಹೇಗೆ ಬಂದೀತು ? ಆ ಗದ್ದಲ–ಗಲಾಟೆ ಯಾರಿಗೆ ಬೇಕು ?"

ಸೀತಮ್ಮ ನಕ್ಕು ನುಡಿದಳು "ನಿನ್ನ ಬಿಟ್ಟು ಇರುವುದೆಂದರೆ ನಮಗೂ ತುಂಬಾ ಕಷ್ಟವಾಗುತಿತ್ತು; ದೇವರು ಕರುಣೆ ದೋರಿ ನಮ್ಮನ್ನು ಒಂದೆಡೆ ಸೇರಿಸಿದ್ದಾನೆ. ಅದೊಂದು ದೊಡ್ಡ ಉಪಕಾರ. ನಾವು ದೇವರಿಗೆ ಎಷ್ಟು ಋಣಿಯಾಗಿದ್ದರೂ ಸಾಲದು. ಮುಂದೆಯೂ ಭಗವಂತ ಹೀಗೆಯೇ ನಡೆಸಿ ಕೊಂಡರೆ ಸಾಕು."

ವಾಕ್ಯಲಹರಿ ಪೂರ್ಣಗೊಳ್ಳುವುದರೊಳಗಾಗಿ ಕಣ್ಣುಗಳಂಚಿನಲ್ಲಿ ಸುಖಾ ಶ್ರುಗಳು ಸಣ್ಣಗೆ ಬೆಳ್ಳಿ ಗೆರೆಯಂತೆ ಮೂಡಿ ಥಳಥಳಿಸಿತು.

"ಈ ಸಲ ತೆಂಗಿನ ಬೆಳೆ ಸೊಗಸಾಗಿ ಬಂದಿದೆ. ಅದಕ್ಕಿನ್ನೆಷ್ಟು ಮಂದಿ ಕಳ್ಳರೋ...ದೇವರ್ರಿಗೇ ಗೊತ್ತು. ಸರಿಯಾದ ಕಾವಲನ್ನು ಏರ್ಪಡಿಸಿಕೊಳ್ಳದೇ ಹೋದರೆ ಕಷ್ಟವೇ" ಎಂದ ದೇವಯ್ಯ.

"ರಾತ್ರಿ ಕಾವಲಿಗೆ ಇಬ್ಬರನ್ನು ನೇಮಿಸಬೇಕಾಗುತ್ತದೆ. ಒಬ್ಬ ಮಲಗುವುದಕ್ಕೆ ಹೆದರುತ್ತಾನೆ."

ಕುಮುದ್ವತಿ ವಿಚಾರಾತ್ಮಕವಾಗಿ ನುಡಿದಳು,

ಸೀತಮ್ಮ ನಿಟ್ಟುಸಿರು ಬಿಟ್ಟು ಒಡಲ ಸಂಕಟವನ್ನು ತೋಡಿಕೊಂಡಳು, "ತಂದೆ ನೋಡಿದರೆ ದೈವೀಕ ಪುರುಷ ! ಛೀ ! ಛೀ ! ಹೀಗಾಗಬಾರದಿತ್ತು. ಮುಂದೆ ಇವರೇನು ದುಡಿದು ತಿನ್ನುತ್ತಾರೋ ದೇವರಿಗೇ ಗೊತ್ತು. ಇಬ್ಬರಿಗೂ ಹೆಂಡತಿ ಮಕ್ಕಳು ಇದ್ದಾರೆ. ಮುಂದೆ ಅವರ ಗತಿಯೇನು ? ಮಕ್ಕಳು ಇದೇ ಚಾಳಿ ಕಲಿತು ಕುಲಗೆಟ್ಟು ಹೋಗುತ್ತದೆ ವಂಶ. ಅಷ್ಟು ತಿಳಿದುಕೊಳ್ಳದೆ ಹೋದರೆ ವಂಶವೇ ಹಾಳಾಯ್ತು ಬಿಡು."

ಆಗ ಅಲ್ಲಿಗೆ ಬಂದ ರಂಗಮ್ಮ ಸಿಟ್ಟಿನಿಂದ ತುಟಿ ಕಚ್ಚಿ ಅಂದಳು,

"ಸಾವಿತ್ರಮ್ಮ-ನಾಗಮ್ಮನವರು ಹೇಳುತಿದ್ದರು ಅವ್ವಾ ! ಎಳೆತನದಲ್ಲಿ ತಾಯಿಗೆ ಖಾಹಿಲೆ ಅಂತ ಮುದ್ದು, ಅನಂತರ ತಬ್ಬಲಿ ಮಕ್ಕಳು ಅಂತ ಮುದ್ದು ಮಾಡಿ ಸಾಕಿದ ಮಕ್ಕಳಂತೆ ಅವರು. ಅತೀ ಮುದ್ದು ತಲೆ ಕೆಡಿಸಿತೇನೋ.... ಅದಕ್ಕೇ ಹೀಗಾಡುತಿದ್ದಾರೆ ಎನಿಸುತ್ತೆ. ನಾವು ಕುರುಡು ಎಂದರೆ ದೈವ ಕುರುಡೆ ? ಇವರ ದುಷ್ಟತನ ಇವರಿಗೇ ತಿರುಗು ಬಾಣವಾಗದೇನು ? ಮೊದಲೇ ಗಾದೆಯಿದೆ ಮಾಡಿದ್ದುಣ್ಣೋ ಮಹರಾಯ ಅಂತ, ನೋಡುತ್ತಿರಿ ಅವ್ವ ಏನಾಗುತ್ತೆ ಅಂತ. ಇವರು ತಿಳಿದುಕೊಂಡಷ್ಟು ಸುಲಭವಲ್ಲ ಬಾಳು-ಬದುಕು."

ಎಲ್ಲರ ಮುಖಬಿಂಬದಲ್ಲೂ 'ವಿಷಾದ' ಭಾವ ಮುದ್ರೆ ಮೂಡಿತು.

— ೦ —

೯

ಪದ್ಮಾಲಯದಲ್ಲಿದ್ದ ನಾಲ್ಕು ಕೊಠಡಿಗಳಲ್ಲಿ ಒಂದು ದೇವಯ್ಯ ದಂಪತಿಗಳಿಗೆ ವಿಶಾಸಲು. ಮೇಲಾಗಿ, ಮನೆಯವರಂತೆಯೇ ಎಲ್ಲಾ ಬಗೆಯ ಕಾರ್ಯ ಚಟುವಟಿಕೆಗಳ ನಿರ್ವಹಣೆಯಲ್ಲಿ ಸುಖಾವಕಾಶ. ಬೇಕು ಬೇಡಗಳಿಲ್ಲ, ಭೇದ ಭಾವಗಳಿಲ್ಲ. ತಮ ತಮಗೆ ಕೂಡಿದಷ್ಟು ಕೆಲಸ ಕಾರ್ಯಗಳನ್ನು ಮುಕ್ತ ಮನದಿಂದ ಸಲ್ಲಿಸುವ ದಿನಚರಿ. ರಾಮನಾಥನ ಪಾಲಿಗೆ ಅವರು ತಂದೆ ತಾಯಿಗಳಂತೆಯೇ.

ಅಂದಮೇಲೆ, ತಮ್ಮದಾಗಿ ಒಂದಡಿ ನೆಲವೂ ಇಲ್ಲವಲ್ಲಾ ಎಂದು ಕೊರಗುತಿದ್ದ ದಿನಗಳು ಅಂದಿಗೇ ಅರುಗಾದುವು. ಅಂದಿನ ಗೇಣಿ ಜಮೀನಿನ ಕ್ಲಿಷ್ಟಕರ ಜೀವನ ಅಂದಿಗೇ ಮುಗಿಯಿತು. ಆದರೂ ಅಂದು, ಈಗೇನೋ ಅಂದ ಚೆಂದ. ಮುಂದೆ ಹೇಗೋ ಎಂಬ ಅಳುಕು ಮನದ ಮೂಲೆಯಲ್ಲಿ ಇದ್ದೇ ಇತ್ತಷ್ಟೆ. ಅದಿಂದು ನಿವಾರಣೆಯಾಗಿ ಉಸಿರಾಡುತ್ತವೆ ವೃದ್ಧ ಜೀವಗಳು.

ಅವರಿಗೆ ಬೇಕುಬೇಕಾದ ಬಟ್ಟೆಗಳನ್ನು ನಗರಕ್ಕೆ ಹೋದಾಗ ರಾಮನಾಥನೇ ಮಡದಿಯೊಡನೆ ಖರೀದಿಸುತ್ತಾನೆ. ಆಗಾಗ ಅಷ್ಟಿಷ್ಟು ಹಣವನ್ನು ಕೈಲಿಡುತ್ತಾನೆ. ಒಲ್ಲೆ ಎಂದರೂ ಕೇಳುವುದಿಲ್ಲ ರಾಮನಾಥ.

ಅಳಿಯ–ಮಾವ ಇಬ್ಬರೂ ಒಟ್ಟಾಗಿಯೇ ಕೆಲಸ ಕಾರ್ಯಗಳ ಮೇಲ್ವಿಚಾರಣೆ ನಡೆಸುತ್ತಾರೆ. ಒಬ್ಬ ಮೇಸ್ತ್ರಿ ಮಾಡುವಷ್ಟೇ ಕೆಲಸವನ್ನು ಶ್ರಮಭಾರದಿಂದ ನಿರ್ವಹಿಸುತ್ತಾನೆ ದೇವಯ್ಯ.

ದೇವರು ನನಗೆ ಅನುಗ್ರಹಿಸಿದ್ದು ಮಡದಿಯನ್ನು ಮಾತ್ರವಲ್ಲ. ದಯಾಪೂರ್ಣ ತಂದೆ ತಾಯಿಯರನ್ನೂ ಅನುಗ್ರಹಿಸಿದ್ದಾನೆ, ಎಂದು ತನ್ನಲ್ಲೇ ತಾನೇ ಅಂದುಕೊಳ್ಳುತ್ತಾನೆ, ರಾಮನಾಥ ಸಮಾಧಾನಪೂರ್ವಕವಾಗಿ.

"ಅಮ್ಮಾ...ಅಮ್ಮಾ!" ಎನ್ನುತ್ತಲೇ ಒಳಬಂದಳು ಕುಮುದ್ವತಿ.

"ಏನಮ್ಮಾ...?"

"ಪೋಲೀಸಿನವರು ಕಳವು ಮಾಲನ್ನು ಹಿಡಿದಿದ್ದಾರಂತೆ. ಎರಡು ಗಾಡಿ ತುಂಬ ಬಾಳೆ ಗೊನೆಗಳು ಸಿಕ್ಕಿವೆ."

"ಕಳ್ಳರಾರು?"

"ಅವರೇ! ವಸಂತ, ವಾಸು. ಆದರೆ, ಅವರನ್ನು ಏನೂ ಮಾಡಬಾರದೆಂದು ಪೋಲೀಸಿನವರನ್ನು ಕೇಳಿಕೊಂಡಾಗಿದೆ. ಪೋಲೀಸಿನವರು ಏನು ಮಾಡುತ್ತಾರೋ ನೋಡಬೇಕು..."

"ಒಳ್ಳೆಯದಾಯ್ತು. ತಂದೆ ಮಕ್ಕಳೊಳಗೆ ವ್ಯಾಜ್ಯ ಸರಿಯಲ್ಲ. ಯಾರಿಗೂ ತಿಳಿಯದಂತೆ ಸುಮ್ಮನಿರುವುದು ಲೇಸು," ಎಂದಳು ಸೀತಮ್ಮ.

"ಶ್ರೀಹರೀ! ಎಷ್ಟು ಮುಚ್ಚಿಟ್ಟರೂ ಇದು ಪ್ರಚಾರವಾಗದಿದ್ದೀತೇ? ಇಂಥವರ ಮಕ್ಕಳು ಎಂದು ಆಡಿಕೊಳ್ಳದಿರುತ್ತಾರೆಯೇ ಜನ? ಅದೇ ವ್ಯಸನ ಅಮ್ಮಾ"

"ಆದರೂ, ನಮ್ಮಿಂದಾದಷ್ಟು ಗುಟ್ಟು ಮಾಡುವುದು ಲೇಸು. ಮುಂದೆ ದೇವರು ಮಾಡಿಸಿದಂತಾಗುತ್ತೆ. ಇನ್ನೇನು ಮಾಡೋಣ ಹೇಳು? ಸ್ವಲ್ಪ ಹೊತ್ತು ತನ್ನೊಳಗೇ ಯೋಚಿಸಿದ ಸೀತಮ್ಮ ಪುನಃ "ಬಡವರದ್ದಾದರೆ ಪ್ರಚುರಗೊಳ್ಳುವುದು ಕಡಿಮೆ. ಪ್ರಚುರವಾದರೂ ಜನ ಗಮನಿಸುವುದಿಲ್ಲ. ನಿಮ್ಮಂಥವರದು ಜನರ ನಾಲಿಗೆಯ ಮೇಲೆ ನಲಿಯುತ್ತದೆ......ಇದು ದುರದೃಷ್ಟ-"

"ನಿಜ ಅಮ್ಮಾ...ಆಳುಗಳಿಗೆ ಬಾಯಿ ಬಿಡಬೇಡಿ, ಎಂದು ಹೇಳಿದ್ದಾಗಿದೆ. ಆದರೂ, ಜನರ ಬಾಯಿ ಕಟ್ಟಲಾಗುತ್ತದೆಯೇ?"

ಆದರೇನು? ವಿಧಿ ಬಯಸಿದ್ದು ಇನ್ನೊಂದು....

ಪೋಲೀಸಿನವರು ಕಳ್ಳತನದ ಸಂಪೂರ್ಣ ಮಾಹಿತಿ ದೊರೆತುದರಿಂದ ವಸಂತನನ್ನು ಅರೆಸ್ಟ್ ಮಾಡಿ ಠಾಣೆಗೆ ಕರೆದೊಯ್ದು ವಿಚಾರಣೆ ಮಾಡಿದ

ನಂತರ ಇನ್ನೂರು ರೂಪಾಯಿ ದಂಡ ವಿಧಿಸಿ ಬಿಟ್ಟುಬಿಟ್ಟರು. ಆಗ ಉರಿಯುವ ಒಡಲಿಗ್ಗಿಚ್ಚಿಗೆ ತುಪ್ಪ ಹೊಯ್ದಂತಾಯಿತು. ಇಲ್ಲದ ಸಲ್ಲದ ಕೋಪ ತಾಪ ಗಳು ಬುಗಿಲೆದ್ದುವು. ಮನದ ಮರಿ ನಾಗರ ವಿಷ ಕಾರಹತ್ತಿತು, ಎಂದಿಗೂ ಕೊನೆಗಾಣದಂತೆ. ವಸಂತ ಗಗನಕ್ಕೆ ನಿಮಿರಿ ನಿಂತ.

೦ ೦ ೦ ೦

ಹಿಂದಿದ್ದ ಬಿಡದಿಯಲ್ಲಿ ಚಿಕ್ಕ ಮತ್ತು ಚೊಕ್ಕದಾದ ಮೂರು ಕೊಠಡಿ ಗಳು ಮತ್ತು ಒಂದು ಉದ್ದನೆಯ ವರಾಂಡ. ಪರಿಸರದ ಮಕ್ಕಳಿಗೆ ಪಾಠ ಹೇಳಲು ಮತ್ತು ಹೆಣ್ಣುಮಕ್ಕಳಿಗೆ ಟೈಲರಿಂಗ್ ಕಲಿಸಲು ಬಿಡದಿಯನ್ನು ಸ್ವಚ್ಛಗೊಳಿಸಿ ಸುಣ್ಣ ಬಣ್ಣ ಹಚ್ಚಿಸಿ ದುರಸ್ತಿ ಮಾಡಿಸಿಕೊಂಡಳು ಕುಮು ದ್ವತಿ. ಮನೆಯ ಸುತ್ತುಮುತ್ತೂ ಹತ್ತಿಪ್ಪತ್ತು ಏಳೆಂಟು ವರ್ಷದವರೆಗಿನ ಮಕ್ಕಳು ದೊರೆಯುತ್ತಾರೆ. ನಗರಕ್ಕೆ ಹೋಗಿ ಶಾಲೆಗೆ ಬೇಕಾಗುವ ಪರಿಕರಣ ಗಳು, ಪುಸ್ತಕ ಸ್ಲೇಟು ಬಳಪ ಪೆನ್ಸಿಲ್‌ಗಳನ್ನು ಕೊಂಡು ತಂದಳು ಕುಮು ದ್ವತಿ. ಬೆಂಚು ಮೇಜು ಡೆಸ್ಕುಗಳನ್ನು ಮನೆಯಲ್ಲೇ ಆಚಾರಿಗಳನ್ನಿಟ್ಟು ಕೊಂಡು ತಯಾರಿಸಿ ಶಾಲೆಯನ್ನು ಸಜ್ಜುಗೊಳಿಸಿದಳು. ಆದರೆ, ಉಂಡಾಡಿ ಮಕ್ಕಳು ಶಾಲೆಗೆ ಬಂದಾವೇ ? ಆ ಮಕ್ಕಳನ್ನು ಕರೆತರಬೇಕಾದರೆ ಮನೆ ಮನೆಗೂ ತಾನೇ ಹೋಗಬೇಕಾಯಿತು. ಈ ಎಲ್ಲಾ ಚಟುವಟಿಕೆಗಳಿಂದ ರಾಮನಾಥ ಅಸಮಾಧಾನಗೊಂಡಾನು ಎಂಬ ಭಯ–ಅಳುಕು ತಂದೆ ತಾಯಿ ಗಳಿಗೆ.

ಆದರೇನು ? ಆ ಮಗಳು ಕೇಳುವವಳೇ ಅಲ್ಲ. ಅವಳ ಓಡಾಟವೇ ಓಡಾಟ.

ಅಂತೂ, ಹತ್ತಿಪ್ಪತ್ತು ಮಕ್ಕಳು ಕೂಡಿದರು. ಮಕ್ಕಳನ್ನು ತಪ್ಪದೆ ಕಳುಹಿಸಬೇಕೆಂದು ಮನೆ ಮನೆಯ ಹಿರಿಯರಿಗೆ ಮನವಿ ಮತ್ತು ಆದೇಶಗಳು ಒಂದುಗೂಡಿಯೇ ಮುಟ್ಟಿದುವು. ಟೈಲರಿಂಗಿಗೆ ಎಂಟ್ಹತ್ತು ಹುಡುಗಿಯರು ಧಾವಿಸಿ ಬಂದುದರಿಂದ ಒಂದು ಮಿಷಿನ್ ಸಾಲದಾಯ್ತು. ಇನ್ನೆರಡು ಮಿಷಿನ್ ಗಳನ್ನು ಕೊಂಡು ಕಾರ್ಯವನ್ನು ವಿಸ್ತರಿಸಿದಳು, ಕುಮುದ್ವತಿ.

ಪ್ರಪ್ರಥಮ ದಿನಗಳಲ್ಲಿ ಸ್ವಲ್ಪ ಕಷ್ಟವೆನಿಸಿದರೂ ಅನಂತರ ಕಷ್ಟವಾಗಲಿಲ್ಲ ಅದರ ನಿರ್ವಹಣೆ. ಮಗಳ ಕಾರ್ಯದಲ್ಲಿ ಕೈ ಬಿಡುವು ದೊರೆತಾಗ ಸೀತಮ್ಮನೂ ಪಾಲ್ಗೊಂಡು ಸಮಯವನ್ನು ಸದುಪಯೋಗ ಮಾಡಿಕೊಳ್ಳುವಳು. ಹಗಲೆಲ್ಲಾ ಒಂದಲ್ಲ ಒಂದು ಬಗೆಯ ಕೆಲಸ ಕೈಗೂಡಿದರೆ ಮೈ ಮನಗಳು ಚಕಮಕಿಯಾಗುವಷ್ಟು ಹಿತ.

ಗೌರು ಮಕ್ಕಳ ಶಾಲೆಗೆ ಆಯಾ ಆಗಿ ನೇಮಿಸಲ್ಪಟ್ಟುದುದರಿಂದ ಪಕ್ಕದಲ್ಲಿಯೇ ಟೈಲರಿಂಗ್ ಕಲಿಯುವ ಅನುಕೂಲ ಲಭಿಸಿತು. ಅವಳು ಅದರಲ್ಲಿ ಅಪೂರ್ವ ಆಸಕ್ತಿಯಿಂದ ಭಾಗವಹಿಸಿ ಕಲಿಯತೊಡಗಿದಳು, ಮನ ಮುಟ್ಟಿ. ಮಕ್ಕಳು ಮತ್ತು ಹೆಂಗಳೆಯರ ಬಗ್ಗೆ ಅಷ್ಟಾಗಿ ಲಕ್ಷ್ಯ ಹರಿಯದಿರುವ ಗ್ರಾಮೀಣ ಬದುಕಿನಲ್ಲಿ ಅದೊಂದು ಅಪೂರ್ವ ಯೋಗ. ಕರುಣಾ ಸಮುದ್ರದಲ್ಲಿ ಒಂದು ಹನಿ–ಒಂದೇ ಒಂದು ಹನಿ.

ಆದರೆ, ಈ ಜೀವನವೇ 'ಆದರೆ' ಮಯ.

'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ.'

ಮನುವಿನ ಧರ್ಮಸೂತ್ರ ಅಂದಿಂದಿಗೂ ಒಂದೇ ವಿಧಾನದಲ್ಲಿ ನಡೆದುಕೊಂಡು ಬಂದಿದೆ. ಹೆಂಗಳೆಗೆ ಮನೆಯೊಳಗಿನ ವ್ಯವಹಾರ ಒಂದೇ ಸರಾಗ. ಮತ್ತೆಲ್ಲವೂ ಗಂಡಿನ ಕೈಯಲ್ಲೇ. ಅಕಸ್ಮಾತ್ ಗಂಡಿನಾಸರೆ ತಪ್ಪಿದರೆ ಅವಳು ಬಾಯಿ ಬಡಿದುಕೊಂಡು ಸಾಯಬೇಕು, ಅಂತಹ ಕರುಣಾಜನಕ ಪರಿಸ್ಥಿತಿ ಬರುತ್ತೆ ಅವಳಿಗೆ. ಏಕೆಂದರೆ ಅವಳು ಸಂಪೂರ್ಣ ವಂಚಿತಳು ಜ್ಞಾನ ಕಿರಣದಿಂದ.

ಭಾರತದ ಈ ದುರ್ವಿಧಾನವು ಈ ಶತಮಾನದಲ್ಲಿ ಹರಿಯುವುದಿಲ್ಲ. ಆಕೆ ನಾಲ್ಕು ಕಾಸು ಗಳಿಸಿಕೊಂಡರೂ ಅದರ ಒಡೆತನ ಅವನಿಗೇ. ಈ ಪರಿಸ್ಥಿತಿಯಲ್ಲಿ ಭಾರತದ ಕೋಟ್ಯಾನುಕೋಟಿ ಮಹಿಳೆಯರು ನರಳುತ್ತಲಿದ್ದಾರೆ. ಅವರ ಜನ್ಮೋದ್ಧಾರಕ್ಕೆ ಪುರುಷೋತ್ತಮರ ಸಹಕಾರ ಮತ್ತು ಸಹಾನುಭೂತಿ ಮುಖ್ಯ. ಪುರುಷ ವರ್ಗದ ಅವಕೃಪೆಯ ಗಾಢಾಂಧಕಾರ ಕಾಂಡ ಕಳೆದು

ಕೃಪಾಪೋಷಣೆಯು ನವ ಅರುಣೋದಯವಾದರೆ ಮಾತ್ರ ಭಾರತ ರಾಷ್ಟ್ರ ಸಂವೃದ್ಧಿ ಎಂಬುದು ಕರತಲಾಮಲಕ.

ಆದ್ದರಿಂದ ತನ್ನದೇನಿದ್ದರೂ ಅಳಿಲ ಮಳಲ ಸೇವೆ ಎಂಬುದು ಮನೋಗತ.

ಕುಮುದ್ವತಿಯು ಇದೇ ವಿಚಾರದಲ್ಲಿ ಆಲೋಚನಾ ಮಗ್ನಳಾಗಿ ಕಾರ್ಯ ನಿರ್ವಹಿಸುವಳು. ಸಮಗ್ರ ಭಾರತವೇ ಮೈ ಕೊಡವಿ ಮಡಿಯುಡುವವರೆಗೆ ಎಷ್ಟು ಮಾಡಿದರೂ ಅಷ್ಟೆ. ಅಂದಮೇಲೆ, ಎಷ್ಟು ಸಾಧ್ಯವೋ ಅಷ್ಟು ಮಾಡೋಣ ಎಂಬ ಸಂತೃಪ್ತಿ ಮನದಲ್ಲಿ.

೦ ೦ ೦ ೦

ಸೀತಮ್ಮ ಮಗಳ ಮನೋಧರ್ಮಕ್ಕೆ ಸಂಜೀವನದ ಆಶಾಲೋಲುಪ್ತಿಗೆ ಸಂತೋಷಿಸಿದರೂ ಭಾವ ಗಾಂಭೀರ್ಯದಿಂದ ನುಡಿದಳು,"

"ಈ ಹೆಣ್ಣುಮಕ್ಕಳೆಲ್ಲಾ ಮಿಷಿನ್ ಕೊಂಡು ವೃತ್ತಿಯನ್ನು ಮುಂದುವರಿಸಬಲ್ಲರಾದರೆ ಸಂತೋಷವೇ. ಯಾರ್ಯಾರ ಹಣೆಯಲ್ಲಿ ಏನೇನು ಬರೆದಿದ್ದಾನೋ ಭಗವಂತ. ಇವರ ಭವಿಷ್ಯ ಯಾವ ರೀತಿಯಲ್ಲಿ ರೂಪುಗೊಳ್ಳುತ್ತದೋ ಅದೇ ಅಸ್ಪಷ್ಟ. ನತದೃಷ್ಟ ಜೀವಿಗಳು.

"ನನಗೂ ಅದೇ ಆಲೋಚನೆ ಆಗಾಗ ಬರುತ್ತಲೇ ಇರುತ್ತದೆ. ಮುಗ್ಧ ಹೆಣ್ಣುಗಳು ದಗ್ಧ ಬಾಳಿನಲ್ಲಿ ಬೆಂದು ಬೇಯುವುದನ್ನು ನೋಡಿದರೆ ಸಂಕಟವಾಗುತ್ತದೆ. ಮೂರೂಮುಕ್ಕಾಲು ವೀಸೆ ಹೆಣ್ಣುಗಳ ಬದುಕಿನಲ್ಲಿ ಆಧುನಿಕ ಜೀವನ ಸೌಕರ್ಯವಿಲ್ಲ. ಬಡಬಾಳು ಜಡ ಬುದ್ಧಿಗಳ ಸಂಮಿಲನ ಅಂದಮೇಲೆ, ಎಲ್ಲಿಯ ಆಧುನೀಕರಣ? ಜೀವನ ಸುಧಾರಣೆ ಬಹಳ ಕಷ್ಟವಿದೆ."

"ಈಗೀಗ ಹೆಣ್ಣುಮಕ್ಕಳಲ್ಲಿ ಉತ್ಸಾಹ ತೋರುತ್ತಿದೆ. ಮುಂದೆ ಇದೇ ರೀತಿಯಲ್ಲಿ ಹೆಚ್ಚಿದರೆ ಈ ಕೊಠಡಿ ಸಾಲಲಾರದು. ಬಿಡದಿಯ ಹಿಂಭಾಗದಲ್ಲಿ "ಒಂದು ವಿಶಾಲವಾದ ಹಜಾರವನ್ನು ನಿರ್ಮಿಸಿಕೊಳ್ಳುವೆನೆಂದು ರಾಂದಾದನಿಗೆ

ಹೇಳಿರುವೆ. ಆಗಲಿ ಎಂದಿದ್ದಾರೆ. ನಮ್ಮ ಕೈಲಿ ಎಷ್ಟು ಸಾಧ್ಯವೋ ಅಷ್ಟು ಮಾಡೋಣ. ಮುಂದಿನದು ದೈವೇಚ್ಛೆ."

"ನಮ್ಮ ಮಕ್ಕಳು ಕಾಲೋಚಿತವಾಗಿ ಸಂವೃದ್ಧ ಜೀವನ ನಡೆಸುವಂತಾದರೆ ಸಾಕು. ನಮ್ಮ ಹೃದಯ ಗ್ರಂಥ ಭಂಡಾರದಲ್ಲಿ ಎಂತೆಂತಹ ಶಬ್ದಗಳಿವೆ? ಸಂಸ್ಕೃತಿ-ಸಂಭ್ರಮ-ಸಮಯಪ್ರಜ್ಞೆ-ಧರ್ಮನಿಷ್ಠೆ-ಪ್ರೇಮಾಮೃತ-ನಿಸ್ವಾರ್ಥ ಇಂತಿಂತಹ ಶಬ್ದ ಸಂಪತ್ತಿಗೆ ಕೊನೆಯೇ ಇಲ್ಲ. ಇವುಗಳನ್ನು ರಾಷ್ಟ್ರ ಅರ್ಥ ಮಾಡಿಕೊಳ್ಳುವುದಿಲ್ಲವೋ ಅಥವಾ ಅವುಗಳಿಗೆ ಅರ್ಥವೇ ಇಲ್ಲವೋ ಎಂಬ ಅನುಮಾನ ಮೂಡುತ್ತದೆ, ಇಂದಿನ ಪರಿಸ್ಥಿತಿಯನ್ನು ಅವಲೋಕಿಸಿದರೆ."

ರಾಮನಾಥ ಅಲ್ಲಿಗೆ ಬಂದ. ಹತ್ತಿಪ್ಪತ್ತು ಮಕ್ಕಳು ಪಾಠ ಕಲಿಯುತ್ತಿದ್ದಾರೆ. ಎಲ್ಲರಲ್ಲೂ ಕಾರ್ಯನಿಷ್ಠೆ ಕಂಡುಬರುತ್ತಿದೆ. ಮನಸ್ಸು ಆನಂದೋತ್ಕರ್ಷತೆಯಲ್ಲಿ ನಲಿಯುವಂತಹ ದೃಶ್ಯ.

ರಾಮನಾಥ ಮಡದಿಯೊಂದಿಗೆ ಬೆಂಚಿನ ಮೇಲೆ ಕುಳಿತು ಅಂದ,

"ನೀನು ಮಾಡಬೇಕು ಎನ್ನುತ್ತಿದ್ದುದೆಲ್ಲ ಈಗ ಒಂದನೆಯ ಹಂತಕ್ಕೆ ಬಂತು. ಮುಂದೆ ?"

"ನೀವೂ ಪಾಲ್ಗೊಂಡರೆ ಕಾರ್ಯಗತಿ ದ್ವಿಗುಣಿಸುತ್ತದೆ."

"ನನ್ನದೇನು ಪಾತ್ರ ಇಲ್ಲಿ ?"

"ದಯೆ-ಕರುಣೆಗಳ ಕೃಪಾದೃಷ್ಟಿ."

ಅವನು ಗಟ್ಟಿಯಾಗಿ ನಕ್ಕುಬಿಟ್ಟ.

ಅವಳು ನಕ್ಕು ನುಡಿದಳು "ಈ ದೇಶದಲ್ಲಿ ಪುರುಷರ ಕೃಪಾದೃಷ್ಟಿ ಇಲ್ಲದಿದ್ದರೆ ಎಷ್ಟೇ ನಿಷ್ಠೆಯಿದ್ದರೂ ನಾವು ತಲೆಯೆತ್ತುವುದು ಸಾಧ್ಯವೇ ಇಲ್ಲ ನೋಡಿ. ಮನೆ ಮನೆಯಲ್ಲೂ ಇದೇ ಗೋಳು. ಪುರುಷ ಪ್ರಾಧಾನ್ಯತೆಯಿಂದ ಸ್ವಾತಂತ್ರ್ಯ ಸೊನ್ನೆ. ವಿದ್ಯಾ ವಿಹೀನತೆಯಿಂದ ಪಶುತ್ವಕ್ಕೆ ದಾರಿ. ಆದರೂ ನಗುನಗುತ್ತಾ ಇರುವುದೊಂದು ದೇವರು ಸ್ತ್ರೀ ಜಾತಿಗೆ

ಕೊಟ್ಟ ವರ. ಸಹನೆ–ಸಂತಸ, ಕರ್ತವ್ಯನಿಷ್ಠೆ, ಧರ್ಮನಿಷ್ಠೆಗಳ ಸಂಪುಟ ನಮ್ಮ ಸ್ತ್ರೀ ಲೋಕ. ಆದ್ದರಿಂದಲೇ ಪತಿವ್ರತಾಧರ್ಮ ಇಂದಿಗೂ ಎಂದಿಗೂ ಜೀವಂತ ಉಳಿಯುತ್ತದೆ ನಮ್ಮ ರಾಷ್ಟ್ರದಲ್ಲಿ ಎಂಬುದು ಸತ್ಯ. ಈ ಬಗೆಯ ಹಿಂಸೆಗಳನ್ನೆಲ್ಲಾ ತಾಳಿಕೊಂಡಿದ್ದಾರಲ್ಲಾ, ಯೋಚಿಸಿ ನೋಡಿ."

ರಾಮನಾಥ ತಲೆದೂಗಿದ.

ಅವಳು ಮುಂದುವರಿದಳು "ಸ್ತ್ರೀಯರನ್ನು ವಿದ್ಯೆ ಬುದ್ಧಿಗಳಿಂದ ದೂರ ವಿಡುವುದು ತಂತಮ್ಮ ಸ್ವಪ್ರಯೋಜನಕ್ಕಾಗಿ. ಅವರಿಗೆ ಏನೂ ತಿಳಿಯದಿದ್ದರೆ ಅಂಗೈಲಾಡುವ ಗಿಳಿಯಾಗುತ್ತಾರೆ ಎಂದು. ಕುರುಬ ಕುರಿಗಳನ್ನು ಸಾಕು ವುದು ಸ್ವಪ್ರಯೋಜನಕ್ಕಾಗಿ."

"ಪರಂಪರಾನುಗತಿಯಲ್ಲಿ ನಡೆದು ಬಂದ ಪದ್ಧತಿ. ಇದು ಅಷ್ಟು ಸುಲಭಕ್ಕೆ ಬಗೆಹರಿಯುವುದಿಲ್ಲ. ಕಾಲಕ್ರಮೇಣ ಸರಿಹೋಗಬೇಕು ಅಷ್ಟೆ."

"ಅಷ್ಟರಲ್ಲಿ ಇಂದಿನ ಮಹಿಳೆಯರ ಸಮಾಧಿಯಾಗಿರುತ್ತದೆ."

"ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ. ಎಲ್ಲಾ ಕಡೆಯೂ ಹೀಗೆಯೇ."

ಇಬ್ಬರೂ ತುಂಬಾ ವಿದ್ಯಾವಂತರಾಗಿದ್ದರೇನೇ ಜೀವನ ಸ್ವಾರಸ್ಯ."

"ನೀನು ಯಾವುದನ್ನು ಸ್ವಾರಸ್ಯ ಎನ್ನುವೆಯೋ ಅದರಲ್ಲಿ ಸ್ವಾರಸ್ಯವೇ ಇರುವುದಿಲ್ಲ."

"ಅಂದರೆ...?"

"ಸ್ವಾರಸ್ಯವೆಂದರೆ ಆಧುನಿಕ ರಸ ಪ್ರಜ್ಞೆ. ಅದಿಲ್ಲದೆ ಇದ್ದರೆ ಸರ್ವತ್ರ ಸೋಲು ಎಂದೇ ಹೇಳಬೇಕು...."

ಅವಳು ಮಾತನ್ನು ಮುಂದುವರಿಯದಂತೆ ನುಡಿದಳು "ನೋಡಿ ಇದು ಪ್ರಜಾಪ್ರಭುತ್ವ. ಇಲ್ಲಿ ವ್ಯಕ್ತಿ ವ್ಯಕ್ತಿಗೂ ಸ್ವಾತಂತ್ರ್ಯವಿರಬೇಕು. ಅವರವರ ಮನೋಭಾವವನ್ನು ಧೈರ್ಯದಿಂದ ಸರ್ವ ಸ್ವಾತಂತ್ರ್ಯದಿಂದ ವ್ಯಕ್ತಪಡಿ

ಸುವ ಹಕ್ಕು ಇರಬೇಕು. ರಸಪ್ರಜ್ಞೆಯೆಂದರೆ ಸರಸಿಯಾಗಿ ಬಾಲಂಗೋಚಿಯಾಗಿ ಹೆರುವ ಯಂತ್ರವಾಗಿ ದುಡಿಯಬೇಕೇ ?"

"ನಿನ್ನ ವ್ಯಕ್ತಿತ್ವಕ್ಕೆ ಈಗ ಬಂದಿರುವ ಕುಂದೇನು ? ಸ್ವಾತಂತ್ರ್ಯ ನಿನಗೇನು ಕಡಿಮೆಯಾಗಿದೆ...?"

"ಶ್ರೀಹರಿ, ನನ್ನ ದೃಷ್ಟಿಯಿಂದ ಎಲ್ಲರನ್ನೂ ನೋಡಲಾಗುತ್ತದೆಯೆ ? ನಾನೊಂದು ವಿಶೇಷವೆಂದರೆ ತಪ್ಪಲ್ಲ. ನೀವು ಕೊಡದಿದ್ದರೂ ನಾನು ಕಸಿಯಬಲ್ಲೆ. ನನ್ನಂತೆ ಎಲ್ಲರೂ ಇದ್ದರೆ ಸಾಕಲ್ಲ. ಈ ಪರಿಸರದಲ್ಲಿ ನನ್ನಂತೆ ಯಾರೂ ಇಲ್ಲ ಬಿಡಿ. ಲೋಕಪ್ರಜ್ಞೆಯಿದ್ದು ಲೋಕ ವ್ಯವಹಾರದಂತೆ ನಮ್ಮಲ್ಲಿ ವ್ಯವಹಾರವಿಲ್ಲದಿದ್ದರೆ....?"

"ಸತ್ಯ..." ತಲೆದೂಗಿದ ರಾಮನಾಥ.

"ವಸ್ತು ವಸ್ತುವನ್ನು ಕೈಗೂಡಿಸಿಕೊಂಡರೆ ಅದನ್ನೇ ಸ್ವಾತಂತ್ರ್ಯ ಎನ್ನಲುಂಟೆ ? ನಿಮ್ಮಂತೆ ಸಕಲ ವ್ಯವಹಾರವನ್ನು ಕೈಗೂಡಿಸಿಕೊಳ್ಳುವುದರಲ್ಲಿ ನಾವು ಸ್ವಾತಂತ್ರ್ಯ ಪಡೆದರೆ ನಮ್ಮ ಪುಣ್ಯ."

"ನೀನು ಲೋಕದ ಡೊಂಕನ್ನು ಬೆದಕುತ್ತ ಕುಳಿತರೆ ನಿನ್ನ ಕಾರ್ಯವಿಧಾನವೇ ಮೊಟಕಾಗುತ್ತೆ. ನಿನಗೆ ಇನ್ನೂ ಸಂಪೂರ್ಣ ಸ್ವಾತಂತ್ರ್ಯ ಬೇಕು ಎನ್ನುವುದಾದರೆ ನಾನು ರಾಜಕೀಯಕ್ಕೆ ಧುಮುಕಿ ಆಸ್ತಿಯ ವ್ಯವಹಾರವನ್ನು ನಿನಗೇ ವಹಿಸಿಕೊಡುವೆ. ನೀನೇ ನೋಡಿಕೊ."

"ಹಾಗಲ್ಲ, ನಾನು ಹೇಳುವುದು. ನೀವು ಅರುಗಾಗಿ ಕೆಲಸ ನೋಡಿಕೊಳ್ಳುವುದಕ್ಕೂ ನೀವಿದ್ದು ಕೆಲಸ ನೋಡಿಕೊಳ್ಳುವುದಕ್ಕೂ ತುಂಬಾ ವ್ಯತ್ಯಾಸವಿದೆ."

"ಅಂದರೆ ಸ್ವೇಚ್ಛೆ."

"ಅದೇ ಗಂಡಸರು ಹಿಡಿಯುವ ತಪ್ಪು ದಾರಿ."

"ಅಂದರೆ....?" ಹುಬ್ಬೇರಿಸಿದ ಅವನು.

"ನೀವು ಹೇಗಿರುತ್ತೀರೋ ನಾವೂ ಹಾಗೆಯೇ ಅಲ್ಲವೇ ? ಮೊದಲು ವಿಚಾರ ವಿನಿಮಯ, ಅನಂತರ ಕೆಲಸ. ಆರ್ಥಿಕ ಸಮಾನತೆ, ನಿಮ್ಮಂತೆಯೇ ನಾವೂ ಬ್ಯಾಂಕಿಂಗ್‌ನಲ್ಲಿ ಸಮಭಾಗಿಗಳಾಗಬೇಕಷ್ಟೆ ? ಯೋಚಿಸಿ ನೋಡಿ."

"ಆಗಬಹುದು ಇಷ್ಟಪಟ್ಟರೆ. ಅಂತಃಪ್ರಜ್ಞೆ ಅರಳದ ಹೆಂಗಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ಹೊಂದಿದರೆ ಏನು ಮಾಡಬಲ್ಲರು ಗೊತ್ತೆ ? ಸೀರೆ ಒಡವೆ ವಸ್ತು ರಾಶಿರಾಶಿಯಾಗಿ ಬಂದು ಬೀಳುತ್ತವೆ ಮನೆಗೆ." ಫಕಫಕನೆ ನಕ್ಕು ಬಿಟ್ಟ ರಾಮನಾಥ.

ಅವಳೂ ನಕ್ಕು ನುಡಿದಳು "ಅದಕ್ಕೆ ತಕ್ಕಂತೆ ಅವಳನ್ನು ರೂಪಿಸಿದ್ದು ನಮ್ಮ ಸಮಾಜ. ಸ್ತ್ರೀ ಜನರಿಗೆ ಒಡವೆ ವಸ್ತುಗಳ ವ್ಯಾಮೋಹ ಕಳೆಯುವ ವರೆಗೂ ಸ್ವಾತಂತ್ರ್ಯದ ಕಲ್ಪನೆ ಸುವ್ಯರ್ಥ ಎಂದರೆ ತಪ್ಪಲ್ಲವೇನೋ. ಇದಕ್ಕೆಲ್ಲಾ ನಿಮ್ಮಂತಹ ಗಂಡಸರು ಸಮಾಜ ಸುಧಾರಕರಾಗಬೇಕು. ಕಾಲೋಚಿತವಾದ ಸುಧಾರಣೆಗಳು ಆಗುತ್ತಿದ್ದರೆ ಈ ವೇಳೆಗಾಗಲೇ ನಮ್ಮ ಸಮಾಜ ಎಷ್ಟೋ ಸುಧಾರಿಸಿರುತ್ತಿತ್ತು. ನಮ್ಮ ದುರ್ದೈವ. ಇದುವರೆಗೆ ಏನೂ ಆಗ ಲಿಲ್ಲ ಬಿಡಿ."

"ಸರಿ....ಇದೊಂದು ಜಡ ಸಮಾಜ. ನಿಂತ ನೀರಿನಂತೆ ಕೆಸರು–ಬಗ್ಗಡ. ನಗರಗಳಲ್ಲಾದರೆ ಸ್ತ್ರೀಯರು ಅಲ್ಪಸ್ವಲ್ಪ ಅರ್ಥ ಮಾಡಿಕೊಂಡಾರೇನೊ. ಇಲ್ಲಂತೂ ತುಂಬಾ ಕಷ್ಟವೇ. ಮಾರ್ಕ್ಸ್ ವಾದ ಹುಟ್ಟಿದ್ದೂ ಹೀಗೆಯೇ. ಜನರು ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಬುದ್ಧಿವಂತರಿರಬೇಕು. ವ್ಯಕ್ತಿ ಸ್ವಾತಂತ್ರ್ಯ ದಕ್ಕಿತೆಂದರೆ ಅದರೊಂದಿಗೇನೇ ಎಲ್ಲಾ ಬಗೆಯ ಸ್ವಾತಂತ್ರ್ಯಗಳೂ ಸುಲಭ್ಯ. ಪ್ರಜಾಪ್ರಭುತ್ವದಲ್ಲಿ ಸ್ವಾತಂತ್ರ್ಯ ವಿಲ್ಲವೆಂದು ಯಾರು ಹೇಳುತ್ತಾರೆ ? ಮುಖ್ಯವಾಗಿ ಆ ಸ್ವಾತಂತ್ರ್ಯವನ್ನು ಸದುಪಯೋಗಪಡಿಸಿಕೊಳ್ಳುವಂತಹ ಬುದ್ಧಿವಂತಿಕೆ ಮತ್ತು ಸಜ್ಜನಿಕೆ ತಿಳಿದುಕೊಂಡರೆ ಸ್ವಾತಂತ್ರ್ಯ ನಿನ್ನ ಕಾಲಬುಡದಲ್ಲಿ ಬಿದ್ದು ಹೊರಳುತ್ತೆ" ದೃಢ ಕಂಠದಿಂದ ನುಡಿದ ರಾಮನಾಥ.

"ಉದಾಹರಣೆಗೆ ನಮ್ಮ ತಾಯಿಯನ್ನೇ ತೆಗೆದುಕೊಳ್ಳಿ. ಸದಾ ಕೆಲಸ ಕಾರ್ಯಗಳಲ್ಲಿ ಮನವಿಟ್ಟು ಬುದ್ಧಿವಂತಿಕೆ ಮತ್ತು ಸಜ್ಜನಿಕೆಯಿಂದ ಕಾಲ ಹರಣ ಗೈಯ್ಯುವ ಸ್ತ್ರೀ. ಅವರು ಅಪ್ಪನ ಹಣದಲ್ಲಿ ಐದು ರೂಪಾಯಿ ಬ್ಯಾಂಕಿನಿಂದ ತೆಗೆಯಲಾರರು. ಹಣದ ವ್ಯವಹಾರ ಏಕಮುಖವಾಗಿ ಹರಿಯುತ್ತದೆ. ಅವರಿಗೆ ವ್ಯಕ್ತಿ ಸ್ವಾತಂತ್ರ್ಯ ಏನಿದೆ? ಸ್ವೇಚ್ಛೆಯಿಂದ ಕೆಲಸ ಮಾಡುವುದೆಷ್ಟೋ ಅಷ್ಟೆ."

"ಇದನ್ನೆಲ್ಲಾ ಗಮನಿಸಬೇಕಾದುದು ನ್ಯಾಯವೇ. ಮುಖ್ಯವಾಗಿ ಅವರವರಿಗೇ ಮನಸ್ಸಿಲ್ಲದಿರುವಾಗ ಮಾಡುವುದೇನು? ಎಷ್ಟೋ ಜನ ಇರುತ್ತಾರೆ, ಅವರಿಗೆ ಸ್ವಾತಂತ್ರ್ಯದ ಸದುಪಯೋಗ ತಿಳಿಯದಿದ್ದರೆ ಮಾಡುವುದೇನು? ಈ ಸಮಾಜದ ವಿವೇಚನಾಶಕ್ತಿಯೇ ಅಷ್ಟು."

"ಸಧ್ಯ ಅದನ್ನೇ ಸರಿಪಡಿಸಬೇಕು ಎನ್ನುವುದು ನಾನು."

"ಮಾಡು, ಏನು ಮಾಡುತ್ತೀಯೋ ಮಾಡು."

"ನಾನೊಬ್ಬಳೇ ಏನು ಮಾಡಬಲ್ಲೆ ಹೇಳಿ? ನಿಮ್ಮಂತಹವರು ದಂಡು ಗಟ್ಟಿ ಮುಂದಾಗಬೇಕು. ತ್ಯಾಗ ಮನೋಭಾವದಿಂದ ಮುಗ್ಧ ಜನರನ್ನು ಉದ್ಧರಿಸಿ, ಸಾಮಾಜಿಕ ಕಲ್ಮಶವನ್ನು ತೊಡೆದು ಹಾಕುವುದೇ ಸರಿಯಾದ ಕ್ರಮ. ಆದರೆ, ಅದು ಅಷ್ಟು ಸುಲಭವೇ? ಅಲ್ಲದೆ, ಕಲ್ಮಶವೆಂದರೆ ಸಾಮಾನ್ಯವೇ? ಮತಿಮಾಂದ್ಯದಿಂದ ಹಳಸಿ ಹೋಗಿದೆ ಜನರಾಶಿ. ತಮ್ಮ ತಮ್ಮ ಅನಾಚಾರ–ಅನ್ಯಾಯಗಳನ್ನೇ ಘನವಾಗಿ ನಂಬಿದ ಜಡ ಮತಿಗಳು! ಇವರನ್ನು ಸರಿಪಡಿಸಲು ಸಾಕ್ಷಾತ್ ಪರಬ್ರಹ್ಮನೇ ಬಂದರೂ ಆದೀತೋ ಇಲ್ಲವೋ ಊಹಿಸುವುದು ಕಷ್ಟ. ಆದರೆ, ಹಾಗೆಂದು ಕೈಬಿಡುವುದರಲ್ಲಿ ಅರ್ಥವಿಲ್ಲ, ನಮ್ಮನಮ್ಮ ಕೈಲಾದಷ್ಟು ಸೇವೆ ಸಲ್ಲಿಸುವುದೇ ಸರ್ವೋತ್ತಮ," ಎಂದಳು ಕುಮುದ್ವತಿ.

"ಕುಮೂ, ಪಾಶ್ಚಾತ್ಯರಿಗಿರಬಹುದಾದ ದಿಟ್ಟತನ ಮತ್ತು ಧೀಮಂತಿಕೆ ನಮ್ಮಲ್ಲಿಲ್ಲ. ಪರಂಪರಾನುಗತಿಯಲ್ಲಿ ಸ್ತ್ರೀಯರು ತೆರೆಯ ಮರೆಯಲ್ಲಿ

ಬಾಳಿದ್ದಾರೆ. ನಮ್ಮ ರೀತಿನೀತಿಗಳೇ ಬೇರೆ, ಅವರ ರೀತಿನೀತಿಗಳೇ ಬೇರೆ. ಅವರದು ವಿಶಾಲ ಮನೋಭಾವ. ನಮ್ಮದು ಮಿಜಿಮಿಜಿ ಬದುಕು. ಇಂತ ಹದರಲ್ಲಿ ಸುಧಾರಣೆಯೆಂದರೆ ದೀರ್ಘ ಕಾಲದ ಪ್ರಯತ್ನ ಬೇಕು ; ತಪಸ್ಸು ಬೇಕು. ನಮಗೆ ಇಷ್ಟೆಲ್ಲಾ ನಿರ್ವಹಿಸುವ ಕಾಲಾವಕಾಶವಾದರೂ ದೊರೆಯುವ ಗ್ಯಾರಂಟಿ ಇದೆಯೇ ? ತಳಪಾಯ ಹಾಕುವುದರೊಳಗಾಗಿ ಜೀವ ಪುಟ ನೆಗೆದು ಹಾರುವ ಸಂದರ್ಭಗಳೇ ಹೆಚ್ಚು ಅಂದಮೇಲೆ..."

ಅವನು ಅಷ್ಟಕ್ಕೇ ಸುಮ್ಮನಾದ.

"ಇದಕ್ಕೆ ಕಾರಣ ಪುರುಷ ಪ್ರಧಾನವಾದ ರಾಷ್ಟ್ರ. ಹೆಣ್ಣುಗಳಿಗೆ ನೂರಾರು ಬಗೆಯ ಕಟ್ಟುನಿಟ್ಟು ಶಾಸ್ತ್ರಗಳ ಕಡ್ಡಾಯ, ಘೋಷಾ ಪದ್ಧತಿ, ಜ್ಞಾನ ದಾರಿದ್ರ್ಯ ಮುಂತಾದುವು ಕಾರಣ. ಇದಕ್ಕೆಲ್ಲಾ ಪುರುಷವರ್ಗವೇ ಸೂತ್ರದಾರಿ ಎಂದರೆ ತಪ್ಪಲ್ಲ. ಅಲ್ಲದೆ, ಇದನ್ನೆ ದೈವದತ್ತವಾಗಿ ಶಾಸ್ತ್ರಸಮ್ಮತವಾಗಿ ಒಪ್ಪಿಕೊಂಡಿದ್ದಾರೆ ಸ್ತ್ರೀ ಜನ. ಪಾಪ... ಅವರಿಗೆ ತಲತಲಾಂತರದಿಂದ ನಡೆದು ಬಂದಿರುವ ಗಿಣಿ ಪಾಠ.

"ನಿಜ...ನಮ್ಮ ಸಾಮಾಜಿಕ ಕ್ಷೇತ್ರದಲ್ಲಿ ಈ ಎಲ್ಲವೂ ರಕ್ತಗತವಾಗಿ ಹೋಗಿದೆ. ಇಂದು ಒಮ್ಮೆಗೇ ತೊಡೆದು ಹಾಕುವುದು ಯಾರಿಗಾದರೂ ಕಷ್ಟವೇ...."

ಕುಮುದ ತಲೆದೂಗಿದಳು. ಮಾತಾಡಲಿಲ್ಲ.

— ೦ —

೦೧

ಬೆಳಗಿನ ಒಂಭತ್ತರ ಸಮಯ.

ಮಾಗಿಯ ಕಾಲ. ಬೆಚ್ಚನೆಯ ಚೆಂಬಿಸಿಲಿಗೆ ಮೈಗೊಡುವಷ್ಟು ಹಿತ.

ಗಿಡ ಮರಗಳಲೆಲ್ಲಾ ಹಣ್ಣೆಲೆ ಬಿಟ್ಟು, ಹೊಸ ಚಿಗುರು ತಳೆದು ನಳನಳಿಸುತ್ತಿವೆ. ವಸಂತ ಪ್ರಭುವಿನ ಒಡ್ಡೋಲಗ ವಿವಿಧ ವರ್ಣ ಪೂಸಿ ಸಿಂಗರಿಸಿದಂತೆ ಹೊಸ ತಳಿರುಗಳಿಂದ ವರ್ಣವರ್ಣಾಂತವಾಗಿ ಮನಮೋಹನ ರೂಪುಗೊಂಡ ಸುಂದರ ಸಂಪತ್ತು. ಸಕಲವೂ ಮಧುಮಯವಾಗಿ ತೋರುವ ಜಗತ್ತಿನಲ್ಲಿ ವಿವಿಧ ಪಕ್ಷಿಗೊರಳ ಇನಿ ಇಂಚರದ ಶೃತಿಯೊಂದಿಗೆ ಕೋಗಿಲೆಯೊಂದು ಸಾನುರಾಗದಿಂದ ಹಾಡುತ್ತಿದೆ ಕಿವಿಗೊಟ್ಟು ಆಲೈಸುವಷ್ಟು ಮೃದು ಮಧುರವಾಗಿ.

ಪ್ರಶಾಂತ ಸಮಯದಲ್ಲಿ ಎಲ್ಲವೂ ಸುಂದರಾತಿಸುಂದರ.

ಕುಮುದ್ವತಿ ಬೆಳಗಿನ ಫಲಹಾರ ಮುಗಿಸಿ ಹೊರಬರುವುದಕ್ಕೂ ಸರಸಿ ಮುಂಬಾಲಿಗೆ ಬರುವುದಕ್ಕೂ ಸರಿಹೋಯಿತು. ಆತ್ಮೀಯ ಗೆಳತಿಗೆ ಆಲಿಂಗನ ನೀಡಿ ಸ್ವಾಗತಿಸಿದಳು ಕುಮುದ್ವತಿ—"ನೀನು ಬಂದುದು ಸಂತೋಷವಾಯ್ತು. ಆದರೆ, ಏನೋ ಒಂದು ಬಗೆಯಾಗಿದ್ದೀಯಲ್ಲಾ ಏಕೆ? ಮೈಯಲ್ಲಿ ಆರೋಗ್ಯವಿಲ್ಲವೆ ಹೇಗೆ ?"

"ಹಾಗೇ ಅಂದುಕೋ ಕುಮೂ."

ಒಳಬಂದ ಅವಳು ನೀರಸ ನಗೆ ಬೀರಿ ಗೆಳತಿಯೊಂದಿಗೆ ಕುಳಿತುಕೊಂಡಳು. ಶರೀರ ಕರಗಿ ಅರ್ಧವಾಗಿದೆ. ಮುಖದಲ್ಲಿ ಮೊದಲಿನ ವರ್ಚಸ್ಸೇ ಇಲ್ಲ. ಮನೋಭಾವ ಸಪ್ಪೆಸಪ್ಪೆ.

"ಕುಮೂ, ಅಮ್ಮಾ ಎಲ್ಲಿ ಕಾಣಿಸುತ್ತಿಲ್ಲ ?"

"ಒಳಗಿದ್ದಾರೆ ಬಾ."

ಒಳಗಡೆ ಕರೆದುಕೊಂಡು ಹೋದಳು ಕುಮುದ್ವತಿ.

"ಅಮ್ಮಾ. ಇಲ್ಲಿ ನೋಡಿ ! ಯಾರು ಬಂದಿದ್ದಾರೆ ?"

"ಓ ಸರಸು ! ಬಾ, ಬಹಳ ಅಪರೂಪಕ್ಕೆ ಬಂದಿದ್ದೀ, ಹೇಗಿದ್ದೀಯಮ್ಮಾ ? ಇದೇನು, ಮದುವೆಯಾದವಳು ಸಂತೋಷವಾಗಿ ನಲಿನಲಿಯುತ್ತ ಇರಬೇಕು. ನೀನು ಶೀರಾ ಸಪ್ಪೆಯಾಗಿದ್ದೀಯಲ್ಲ ಏಕೆ? ಮೈಗೆ ಹುಷಾರಿಲ್ಲವೇ?"

ಪ್ರಶ್ನೆಗಳು ಮೇಲಿಂದ ಮೇಲೆ ಏಳುತಿದ್ದರೆ ಏನುತ್ತರಿಸಬೇಕೋ ತಿಳಿಯದು ಅವಳಿಗೆ.

"ಸ್ವಲ್ಪ ಅನಾರೋಗ್ಯ..." ಎಂದು ಮೊಟಕು ಉತ್ತರ ನೀಡಿ ಸುಮ್ಮನಾದಳು.

ಅವಳನ್ನು ಊಟದ ಮೇಜಿಗೆ ಪ್ರೀತಿಯಿಂದ ಕರೆದೊಯ್ದು ಉಪ್ಪಿಟ್ಟು ಕಾಫಿ ಮುಂದಿಟ್ಟಳು ಕುಮುದ್ವತಿ. ಮನೆಯಲ್ಲಿ ತಿಂಡಿ ಆಗಿದೆ ಸ್ವಲ್ಪ ಸಾಕು, ಎನ್ನುತ್ತ ಸ್ವಲ್ಪ ಮಾತ್ರವೇ ತೆಗೆದುಕೊಂಡು ಕಾಫಿ ಕುಡಿದಳು ಸರಸು. ಬೆಂಕಿಯಲ್ಲಿ ಬೇಯಿಸಿದ ಬಾಳೆಎಲೆಯಂತೆ ಬಾಡಿ ಕಂದಿ ಕುಂದಿದ ಮುಖಬಿಂಬ, ಕಳೆಗುಂದಿದ ಕಣ್ಣು, ನೋವಿನ ಭಾವಮುದ್ರೆ ಇವುಗಳಿಂದ 'ಸರಸು' ಅಲ್ಲವೇನೋ ಎಂಬಷ್ಟು ಬದಲಾವಣೆಯಾಗಿದೆ ಅವಳಲ್ಲಿ.

"ಅಮ್ಮನ ಮನೆಗೆ ಬಂದಿದ್ದೆ. ಹಾಗೇ ನಿನ್ನನ್ನು ನೋಡಿ ಹೋಗುವ ಮನಸ್ಸಾಯಿತು ಬಂದೆ."

"ಒಳ್ಳೆಯ ಕೆಲಸ ಮಾಡಿದೆ ಈ ದಿನ ನೀನು ಇಲ್ಲೇ ಇದ್ದುಬಿಡು."

ತಾಯಿಯ ಮಾತಿಗೆ ಮಗಳೂ ದನಿಗೂಡಿಸಿದಳು "ಹೌದು ಸರಸೂ, ಖಂಡಿತ ನೀನು ಇಲ್ಲೇ ಇರಬೇಕು. ನನಗಿಲ್ಲಿ ಸರಿಯಾದ ಜೊತೆಗಾರರಿಲ್ಲದೆ ಬೇಸರವಾಗಿದೆ."

"ಖಾಯಂ ಆಗಿ ಒಂದು ಕೆಲಸ ಕೊಟ್ಟುಬಿಡು. ನಾನು ಇಲ್ಲೇ ಇದ್ದು ಬಿಡುವೆ. ಈ ಸಂಸಾರ ಜಂಜಡ ಯಾರಿಗೆ ಬೇಕು ಹೇಳು ?"

ಅವಳ ಭುಜವನ್ನು ಅದುಮಿ ಹಿಡಿದುಕೊಂಡು "ಹಾಗೊಂದು ವೇಳೆ. ಇಲ್ಲಿಯೇ ಇರಬಹುದಾಗಿದ್ದರೆ ಎಷ್ಟು ಸೊಗಸಾಗಿರುತಿತ್ತು ? ನಿಜವಾಗಿಯೂ ನಾನು ಸಂತುಷ್ಟಳಾಗಿರುತಿದ್ದೆ ಸರಸೂ." ಎಂದಳು ಕಮುದ್ವತಿ.

ಸರಸಿ ಕಿಲಕಿಲನೆ ನಕ್ಕುಬಿಟ್ಟಳು.

ಕಾಫಿ ಮುಗಿಸಿದ ಬಳಿಕ ಕೈ ಬಾಯಿ ತೊಳೆದು ಒಳಬಂದ ನಂತರ ಬಾಯಿ ಬಿಟ್ಟಳು ಸರಸು,

"ಮನೆಯಲ್ಲಿ ವರದಕ್ಷಿಣೆಯ ಕಾಟ ವಿಪರೀತವಾಗಿದೆ. ಅನುಭವಿಸಲಾರೆ, ಅಲ್ಲಿ ಇರಲೂ ಆರೆ, ಬಿಡಲೂ ಆರೆ, ಹಾಗಾಗಿದೆ ನನ್ನ ಪರಿಸ್ಥಿತಿ. ಮದುವೆ ಯಲ್ಲಿ ಐವತ್ತುಸಾವಿರ ರೂಪಾಯಿ ಕೊಟ್ಟಾಗಿದೆ. ಅದಕ್ಕೆ ಲೆಕ್ಕವೂ ಇಲ್ಲ. ರಶೀದಿಯೂ ಇಲ್ಲ. ಈಗ ಮತ್ತೆ ಐವತ್ತು ಸಾವಿರ ತಾ. ನಾವು ಮನೆ ಕಟ್ಟಿ ಕೊಳ್ಳಬೇಕಾಗಿದೆ, ಎಂಬುದು ವಾದ. ನಮ್ಮ ಮನೆಯ ಸ್ಥಿತಿಗತಿಯಲ್ಲಿ ಇನ್ನೂ ಐವತ್ತು ಸಾವಿರವೆಂದರೆ ಎಲ್ಲಿಂದ ತರಬೇಕು ? ಆ ಐವತ್ತು ಸಾವಿರ ದಲ್ಲಿ ನನಗೊಂದು ಚಿಕ್ಕಾಸು ಸಿಕ್ಕಲಿಲ್ಲ. ಎಷ್ಟೋ ಮಂದಿ ಅಪ್ಪಾಜಿಗೆ ಕೊಡ ಬೇಡಿ ಎಂದು ಹೇಳಿದ್ದುಂಟು. ಮಗಳು ಸುಖವಾಗಿರುತ್ತಾಳೆ ಎಂದು ನಂಬಿ ದರು ಅಪ್ಪ ಅಮ್ಮ. ಈಗ ನೋಡಿದರೆ ರಣ ಹಿಂಸೆಯ ರಂಗವಾಗಿದೆ ಮನೆ."

"ಶ್ರೀಹರೀ ! ಇದಕ್ಕೇನೆನ್ನೋಣ ? ನಿನ್ನ ಬಾಳು ಹೀಗಾಗುತ್ತೆ ಎಂದು ನಾನು ಭಾವಿಸಿರಲಿಲ್ಲ. I feel very sorry for you ! ನೀನದನ್ನೇನೂ ಮನಸ್ಸಿಗೆ ಹಚ್ಚಿಕೊಳ್ಳಬೇಡ. ನಿನಗೆ ಅವರು ಹಿಂಸೆ ಕೊಟ್ಟರೆ ಅಮ್ಮನ ಮನೆಯಲ್ಲೇ ಇದ್ದುಬಿಡು. ಮುಂದೆ ಏನು ಮಾಡಬಹುದೋ, ನೋಡೋಣ."

"ನನಗೆ ದಿಕ್ಕೇ ತೋಚದಂತಾಗಿದೆ."

"ನೀನು ಚಿಂತೆ ಹಚ್ಚಿಕೊಳ್ಳಲೇಬಾರದು. ಇಂತಹ ಹೀನ ಕೃತ್ಯವನ್ನು ಬಹಿರಂಗಗೊಳಿಸಿ ಎದುರು ನಿಂತು ಗೆಲ್ಲಬೇಕು. ಧೈರ್ಯದಿಂದ ಭರಿಸಬೇಕು.

ನಿನಗಲ್ಲಿ ಸಾಧ್ಯವಾಗದಿದ್ದರೆ ಜೀವಕ್ಕೆ ಹಾನಿ ಮಾಡಿಕೊಳ್ಳುವಂತಹ ಹೀನ ಕೃತ್ಯವನ್ನು ಕೈಕೊಳ್ಳಬೇಡ. ನಾನು ಇಂಥ ನತದೃಷ್ಟ ಸ್ತ್ರೀಯರಿಗಾಗಿ "ಸ್ತ್ರೀ ವಿಮೋಚನ ಸಂಘ"ವನ್ನು ಸ್ಥಾಪಿಸಬೇಕೆಂದಿರುವೆ. ನೀನು ಬಂದುದು ಒಳ್ಳೆಯದಾಯ್ತು. ನಾವು ಕೂಡಿಯೇ ಯೋಚಿಸೋಣ. ಮನೆಮನೆಯನ್ನು ಹೊಕ್ಕು ಮಹಿಳೆಯರನ್ನು ಸಂಘ ಸದಸ್ಯರನ್ನಾಗಿ ಮಾಡಬೇಕಾಗಿದೆ. ನನ್ನ ಜೊತೆ ಕೂಡಿ ಓಡಾಡಲು ಯಾರಾದರೂ ಬೇಕಾಗಿತ್ತು. ನಿಸ್ಸಂಕೋಚವಾಗಿ ಸ್ವಲ್ಪದಿನ ಇಲ್ಲೇ ಇರು."

ಅವಳು ಗಂಭೀರ ಮುದ್ರೆ ತಾಳಿದಳು. ನಾನು ಏನು ಮಾಡಲಿ? ನನ್ನಿಂದೇನಾದೀತು ಎಂಬ ಚಿಂತೆ ಮನೋಮಂಡಲವನ್ನು ಆವರಿಸಿತು. ದೇಹದಾದ್ಯಂತ ಸಣ್ಣನೆ ನಡುಗಿದಳು, ಆಂತರಂಗಿಕ ತುಮುಲದಿಂದ.

"ನೀನು ಧೈರ್ಯಗೆಡಬಾರದು. ಇದನ್ನು ಮುಚ್ಚಿಡಬಾರದು ಕೂಡ. ಪೋಲೀಸಿಗೆ ದೂರು ಕೊಟ್ಟು ಬಹಿರಂಗಗೊಳಿಸು !"

"ರಾಮರಾಮಾ ! ನನ್ನನ್ನು ಸಿಗಿದು ತೋರಣ ಕಟ್ಟಿಯಾರು ! ಪೋಲೀಸಿಗೆ ದೂರು ಕೊಡುವುದು ಅಷ್ಟು ಸುಲಭವೇ ?"

"ಅಷ್ಟು ಹೆದರಿಕೊಂಡರೆ ಹೇಗೆ ಹೇಳು ? ಧೈರ್ಯಂ ಸರ್ವತ್ರ ಸಾಧನಂ ಎಂಬುದನ್ನು ಮರೆಯದಿರು. ನೀನು ಹೇಗೂ ಬಂದಿದ್ದೀಯೆ. ನಾವಿಬ್ಬರೂ ಕೂಡಿ ಮನೆಮನೆಗೆ ಭೇಟಿ ನೀಡಿ ಸಂಘಕ್ಕೆ ಸದಸ್ಯರನ್ನು ಕೂಡಿಸೋಣ. ಬಹು ಜನ ಸದಸ್ಯರಿಲ್ಲದೆ ಸಂಘ ಆಗುವುದಿಲ್ಲ. ಸಂಘ ಸ್ಥಾಪನೆಗೆ ನಾವೊಂದು ಕಾರ್ಯಕಲಾಪವನ್ನು ಸಿದ್ಧಪಡಿಸಬೇಕು. ಅದಕ್ಕಾಗಿ ಒಂದು ಫೈಲು ಪುಸ್ತಕ ಆಫೀಸು ಎಲ್ಲಾ ಆಗಬೇಕು. ಆಗಾಗ ಮೀಟಿಂಗ್ ಸೇರಿ ಆಗು–ಹೋಗುಗಳನ್ನು ಚರ್ಚಿಸಿ ಮಾಡಬೇಕಾದುದನ್ನು ನಿರ್ಣಯಿಸಬೇಕು. ಸಂಘ ಅಂದ ಮೇಲೆ ಎಲ್ಲಾ ಕ್ರಮಬದ್ಧವಾಗಿ ನಡೆಯಬೇಕು. ಇದಕ್ಕೆ ನೀನು ಏನು ಹೇಳುತ್ತಿ ?"

"ನನಗೆ ತಲೆ ಕೆಡುವಂತಹ ಪ್ರಸಂಗ ಬಂದಿರುವುದರಿಂದ ಬುದ್ಧಿಯೇ ಓಡುವುದಿಲ್ಲ. ನೀನು ಹೇಗೆ ಹೇಳಿದರೆ ಹಾಗೆ."

"ಹಾಗೆಂದುಬಿಟ್ಟರೆ ಸಾಲದು. ಯೋಚನೆಮಾಡು."

"ಆಗಲಿ ನಾನಲ್ಲಿ–ನೀನಿಲ್ಲಿ ಇರುವುದರಿಂದ ಸಾಧ್ಯತೆಯನ್ನು ಕುರಿತು ಯೋಚಿಸಬೇಕಾಗಿದೆ."

"ನೀನಿಲ್ಲಿ ಇರುವಷ್ಟು ಕಾಲ ಓಡಾಡೋಣ. ಅಂತೂ, ನಾವು ಏನಾದರೂ ಮಾಡಬೇಕಾಗಿದೆ. ಇಂತಹ ಹೀನ ವ್ಯವಹಾರವನ್ನು ನೋಡಿಕೊಂಡು ಸುಮ್ಮನಿರುವುದು ಸರಿಯಲ್ಲ."

ದೇವಯ್ಯ ಅಲ್ಲಿಗೆ ಬಂದು ಸರಸು ಕತೆಯನ್ನು ಕೇಳಿ ನೊಂದು ನೀರಾಗಿ ನುಡಿದ,

"ನಿಮ್ಮಪ್ಪನಿಗೆ ಮದುವೆಯಲ್ಲಿ ವರದಕ್ಷಿಣೆ ಕೊಡಬೇಡವೆಂದು ಬಹಳ ಹೇಳಿದ್ದೆ. ಆದರೆ, ಅವನು ಬಯಸಿದ್ದು ಮಗಳ ಸುಖವನ್ನು. ಮುಂದೆ ಹೀಗಾಗುತ್ತೆ ಎಂದು ಊಹಿಸಲಿಲ್ಲ. ಪಾಪ, ಈಗ ಹೆತ್ತವರಿಗೆ ಹೇಗಾಗಿರಬೇಡ ? ಎಂತಹ ಕ್ರೂರಿಗಳು ಈ ಜನ ? ಅವರಿಗೆ ಹೃದಯವೇ ಇಲ್ಲ ಬಿಡು. ಧರ್ಮ ಕರ್ಮ ಅರಿಯದ ಮುತ್ಠಾಳರು. ಇವರನ್ನು ಪೋಲೀಸಿಗೆ ಕೊಡಬೇಕು. ಸರಿಯಾಗಿ ಚಾಟಿ ಏಟು ಬಿದ್ದರೆ ಸರಿಹೋಗುತ್ತಾರೆ."

"ಸುದ್ದಿ ಹೀಗೆ ಇಲ್ಲೆಲ್ಲಾ ಹರಡಿತು ಎಂದರೆ ನನ್ನ ಜೀವಂತ ಹೂಳಿಬಿಟ್ಟಾರು ! ಮನೆಯಲ್ಲಿ."

"ಇದು ಬಹಿರಂಗವಾಗಲೇಬೇಕು. ಇಲ್ಲದಿದ್ದರೆ ನಿನ್ನ ಸಮಾಧಿಯಾಗುತ್ತೆ !"

"ಅದು ಹೇಗಿದ್ದರೂ ಆಗಿಯೇ ತೀರುತ್ತೆ ! ಅದಕ್ಕೇ ನಾನು..." ಅಷ್ಟಕ್ಕೆ ವಾಕ್ಯ ಸರಣಿ ತುಂಡುಗಡಿದು ಅಂತರಂಗ ಸಣ್ಣಗೆ ನಡುಗಿತು.

"ನೀನು ಅಮ್ಮನ ಮನೆಯಲ್ಲೇ ಇದ್ದು, ನೀವು ವರದಕ್ಷಿಣೆ ಕೊಟ್ಟಿರುವ ಐವತ್ತು ಸಾವಿರವನ್ನು ವಾಪಸ್ ಕೊಡಿ ಎಂದು ದಬಾಯಿಸು."

"ಇದನ್ನೆಲ್ಲಾ ನೀವು ಹಿರಿಯರು ಕೂಡಿ ನಿರ್ಣಯಿಸಿ. ನಾನು ಏನು ಮಾಡಿದರೂ ತಪ್ಪಾಗುತ್ತದೆ. ಆದ್ದರಿಂದ ನಾನು ಬಾಯೇ ಬಿಡುವುದಿಲ್ಲ."

ಆಗ ಅಲ್ಲಿಗೆ ಬಂದ ರಾಮನಾಥ ಸರಸಳ ಯೋಗಕ್ಷೇಮ ವಿಚಾರಿಸಿದ ನಂತರ ನುಡಿದ,

"ನಾನೂ ನಿನ್ನ ತಂದೆಗೆ ವರದಕ್ಷಿಣೆ ಕೊಡಬೇಡ ಎಂದು ಹೇಳಿದವರಲ್ಲಿ ಒಬ್ಬ ಪಾಪ, ಅವನು ಮಗಳು ಸುಖವಾಗಿರುತ್ತಾಳೆಂದು ಪೂರ್ಣ ನಂಬಿದ್ದು ತಲೆಕೆಳಗಾಯಿತು. ಛೀ ನತದೃಷ್ಟ ವ್ಯಕ್ತಿ."

ಕಲ್ಲಿಗಿಂತ ಕಲ್ಲಾಗಿ ಕುಳಿತಿದ್ದ ಸೀತಮ್ಮ ನುಡಿದಳು,

"ನೀನು ಈ ಸಲಿ ಅಮ್ಮನ ಮನೆಯಿಂದ ಹೋಗಲೇಬೇಡ. ಅವರಲ್ಲಿ ಪ್ರೀತಿ ವಿಶ್ವಾಸಗಳಿಲ್ಲ. ಅಂದಮೇಲೆ ನೀನು ಹೋಗುವುದಾದರೂ ಏಕೆ ? ಧೈರ್ಯ ಮಾಡಿ ನಿಂತುಬಿಡು."

ಆ ಮಾತಿಗೆ ಉತ್ತರಿಸಲಿಲ್ಲ ಸರಸು. ತನ್ನಲ್ಲೇ ಯೋಚನಾಕ್ರಾಂತಳಾದಳು. ಚಿಲ್ಲನೆ ಸಣ್ಣ ಚಳಿಯ ಝುರಿ ಹರಿದಾಡಿತು ಮೈಯಲ್ಲಿ.

ಕುಮುದ್ವತಿ ಸರಸುವೊಂದಿಗೆ ಅಡ್ಡಾಡುತ್ತ ಅಂಗಳಕ್ಕೆ ಬಂದಳು.

"ಈ ಸಲಿ ನೀನು ಕೆಲವು ದಿನ ಇದ್ದುಬಿಡು. ನಾವು ಕೂಡಿ ಮಾತಾಡಿ ಕೆಲಸ ಮಾಡೋಣ. ಸಂಘದ ಖರ್ಚುವೆಚ್ಚಗಳ ನಿರ್ವಹಣೆ ನನ್ನದು. ಗ್ರಾಮ್ಯ ಮಹಿಳೆಯರು ಕುಡಿಯುವ ನೀರಿನ ಅಭಾವದಿಂದ ಕಂಬನಿಕರೆಯುತ್ತಿದ್ದಾರೆ. ಕೆರೆ ಹೂಳು ತುಂಬಿ ಗಿಡ ಗೆಂಟೆಗಳು ಮುಂಬೆಳೆದು ಕೊಳಕಾಗಿದೆ. ಅದರ ಕಡೆಗೆ ಊರವರ ಅಥವಾ ಸರಕಾರದ ಲಕ್ಷ್ಯವಿಲ್ಲ. ಇಂಥಿಂಥ ಕುಂದು ಕೊರತೆಗಳನ್ನು ನಾವು ಮುಂದೆ ನಿಂತು ನಿವಾರಿಸಿಕೊಳ್ಳಬೇಕು. ಊರಿನಲ್ಲಿ ಸಾಕಷ್ಟು ಶಾಲೆಗಳಿಲ್ಲ. ಈ ಜನಪದಕ್ಕೆ ಮಕ್ಕಳನ್ನು ಓದಿಸುವ ಆಸಕ್ತಿಯೂ ಇಲ್ಲ. ಇವೆಲ್ಲ ಸರಿಯಾಗಬೇಕೆಂದರೆ ಸಮಾಜ ಸುಧಾರಕರಿಂದಲ್ಲದೆ ಸಾಧ್ಯವಿಲ್ಲ. ಈ ಜನಕ್ಕೆ ಮನದಟ್ಟಾಗುವಂತೆ ತಿಳಿಯ ಹೇಳಬೇಕು. ನಾವು ನಮ್ಮದಷ್ಟನ್ನೇ ನೋಡಿಕೊಂಡರೆ ಗ್ರಾಮೋದ್ಧಾರ ಆಗದು. ಈಗ ನಿನ್ನ ಸಮಸ್ಯೆಯನ್ನೇ ತೆಗೆದುಕೋ. ಸುಮ್ಮನಿದ್ದರೆ ಸಾಧ್ಯವಾದೀತೇನು ? ಇವಕ್ಕೆಲ್ಲಾ ಪರಿಹಾರ ಕಂಡುಕೊಳ್ಳಬೇಕು."

"ನಿಜ ಕುಮೂ. ಹತ್ತೊ ಜನ ಒಟ್ಟಾಗಿ ನಿಂತರೆ ಕೆಲಸ ಸುಗಮ."

೦ ೦ ೦ ೦

ಸರಸು ಅಂದೇ ತಾಯಿ ಮನೆಗೆ ಹಿಂದಿರುಗಿ ಒಂದು ವಾರ ತಂಗುವ ಯೋಚನೆಯಿಂದ ಬಟ್ಟೆ ಬರೆಗಳು ತೆಗೆದುಕೊಂಡು ಸಂಜೆಯೇ ಹಿಂದಿರುಗಿ ಬಂದಳು.

ಮರುದಿನದಿಂದಲೇ ಆರಂಭವಾಯಿತು ಸ್ತ್ರೀ ವಿಮೋಚನಾ ಸಂಘದ ಚಟುವಟಿಕೆ. ಕುಮುದ್ವತಿ ಗೆಳತಿಯನ್ನು ಕುರಿತು ನುಡಿದಳು,

"ಮೊದಲು ನಾವೊಂದು ಸಂಘದ ಪ್ರಾಣಾಳಿಕೆಯನ್ನು ರೂಪಿಸೋಣ. ನಮ್ಮಲ್ಲಿನ ಕುಂದುಕೊರತೆಗಳ ನಿವಾರಣೆಗೆ ಏನೇನು ಆಗಬೇಕು ಎಂಬುದನ್ನು ನಾವು ಬರೆಯಬೇಕು. ಇದೋ ಪೆನ್ನು ಪುಸ್ತಕ. ನಾನು ಹೇಳುವೆ ನೀನು ಬರೆ."

ಒಡನೆ ಪುಸ್ತಕ ತೆಗೆದುಕೊಂಡು ಸಿದ್ಧಳಾದಳು ಸರಸು.

1) ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಕಡ್ಡಾಯ. ಅವರು ಕಲಿಯುವ ಷ್ಟು ಕಲಿಸಲೇಬೇಕು.

2) ಅಪ್ಪನ ಆಸ್ತಿಯಲ್ಲಿ ಗಂಡುಮಕ್ಕಳಿಗೆ ಇದ್ದಂತೆಯೇ ಹೆಣ್ಣುಮಕ್ಕಳಿಗೂ ಆಸ್ತಿ ಹಕ್ಕಿನಲ್ಲಿ ಸಮಾನಾವಕಾಶವಿರಬೇಕು.

3) ಅಪ್ಪನ ಆಸ್ತಿಯನ್ನು ಹಂಚಲು ಸಾಧ್ಯವಿಲ್ಲದಿದ್ದರೆ ಮಗಳ ಪಾಲಿನ ಆಸ್ತಿಯ ಬೆಲೆಯನ್ನು ಅವಳಿಗೆ ನೀಡಬೇಕು.

4) ಆ ಹಣ ಅವಳಿಗೆ ಮಾತ್ರವೇ. ಅವಳ ಗಂಡನಿಗಲ್ಲ.

5) ಗಂಡನ ದುಡಿಮೆಯಲ್ಲಿ ಯಾ ಆಸ್ತಿಯಲ್ಲಿ ಸಮಪಾಲು ಅವಳಿಗೆ ದಕ್ಕಲೇಬೇಕು.

6) ಅವಳಿಗೆ ವೈಯಕ್ತಿಕ ಸ್ವಾತಂತ್ರ ಸಂಪೂರ್ಣ ಲಭಿಸಬೇಕು.

7) ಆರ್ಥಿಕ ಸ್ವಾತಂತ್ರ್ಯ ಯಾವ ರೀತಿಯಿಂದಲೂ ನೊಟಕಾಗ ಬಾರದು.

8) ಸಂಸಾರದಲ್ಲಿ ಸ್ತ್ರೀ ಪುರುಷರು ಸರ್ವ ವಿಧದಲ್ಲೂ ಸಮಾನರು.

9) ಮನೆಗೆಲಸದಲ್ಲಿ ಹೊರಗಿನವರ ಸಹಾಯವಿಲ್ಲದೆ ಹೋದರೆ ಅವಳಿಗೆ ಸಹಾಯ ನೀಡುವುದು ಪತಿಯ ಕರ್ತವ್ಯ. ಪೂರಾ ಕೆಲಸ ಅವಳ ಮೇಲೆ ಹೊರಿಸಿ ಅವಳಿಗೆ ಹಿಂಸೆ ಕೊಡಬಾರದು.

10) ವಿಧವೆಯಾದರೆ ಮರು ಮದುವೆಗೆ ಅವಕಾಶವಿರಬೇಕು.

11) ಗಂಡ ಒಂದುವೇಳೆ ಹಿಂಸ್ರ ಪಶುವಾಗಿದ್ದರೆ ಅವನಿಂದ ಸುಲಭ ಬಿಡುಗಡೆಗೆ ಅವಕಾಶವಿರಬೇಕು.

"ಈಗ ಹೇಳು, ಈ ಸಂಘಕ್ಕೆ ಏನೆಂದು ಹೆಸರಿಡೋಣ ?" ಕೇಳಿದಳು ಕುಮುದ್ವತಿ.

"ನೀನೇ ಸಂಸ್ಥಾಪಕಳು., ನೀನು ಹೇಳಿದಂತೆಯೇ ಇರಲಿ. ಬಹುಶಃ ಸಂಘಕ್ಕೆ ಪದ್ಮಾಲಯವೇ ನೆಲೆ. ಅಂದಮೇಲೆ 'ಪದ್ಮ' ಇಂದಲೇ ಶುರುವಾಗುವುದು ಒಳ್ಳಿತು. ಮುಂದಕ್ಕೆ ಏನು ಜೋಡಿಸುತ್ತೀ ಯೋಚಿಸು."

ಸ್ವಲ್ಪ ಹೊತ್ತು ಯೋಚಿಸಿ ನುಡಿದಳು, ಕುಮುದ್ವತಿ,

"'ಪದ್ಮ ರಾಜೇಶ್ವರೀ ಸ್ತ್ರೀ ಕಲ್ಯಾಣ ಸಂಘ' ಎಂದು ಹೆಸರಿಸೋಣವೇ ?

"ಆಗಬಹುದು. ಓ ! ಭೇಷಾಗಿದೆ ಹೆಸರು !"

"ನಿಜವಾಗಿ.... ?"

"ಹೌದಮ್ಮಾ...."

ಕುಮುದ್ವತಿಯು ತಾಯಿಯನ್ನು ಕೂಗಿ ಕರೆದಳು "ಅಮ್ಮಾ...!"

ಆ ಕರೆಗೆ ಓಗೊಟ್ಟ ತಾಯಿ ಅಲ್ಲಿಗೆ ಬಂದಳು.

"ಅಮ್ಮಾ 'ಪದ್ಮ ರಾಜೇಶ್ವರೀ ಸ್ತ್ರೀ ಕಲ್ಯಾಣ ಸಂಘ' ಎಂದು ಹೆಸರಿಸಿದರೆ ಆದೀತೇ ? ನಾವು ಶುರು ಮಾಡುವ ಸಂಘಕ್ಕೆ ?"

"ಆಗಬಹುದು. ರಾಮನಾಥರನ್ನು ಕೇಳು. ಅವರು ಹೇಗೆ ಹೇಳಿದರೆ ಹಾಗೆ."

"ಅವರು ತೋಟದಿಂದ ಬರಲಿ. ಅನಂತರ ಮಾತಾಡೋಣ."

"ಸ್ತ್ರೀಯರಿಗೆ ಅಕ್ಷರ ಜ್ಞಾನವಿಲ್ಲ. ಇವರಿಗೆ ಏನಾದರೂ ಹೇಳಿದರೆ ಅರ್ಥವೇ ಆಗುವುದಿಲ್ಲ. ಆದ್ದರಿಂದ ಅವರಿಗೆ ಶಿಕ್ಷಣದ ಅಗತ್ಯವೂ ಇದೆ. ಪ್ರೌಢ ಮಹಿಳೆಯರಿಗೆ ಅಕ್ಷರ ಜ್ಞಾನವನ್ನುಂಟುಮಾಡಬೇಕು. ಯಾರಿಗೇ ಆಗಲಿ, ನಾಲ್ಕಕ್ಷರ ಕಲಿತರೆ ಅಥವಾ ಪ್ರಾಥಮಿಕ ಶಿಕ್ಷಣ ಪಡೆದರೆ ಏನು ಅರ್ಥವಾದೀತು ? ವಿದ್ಯೆ ಬುದ್ಧಿಯಿಲ್ಲದ ಜನ ಸಾಮಾನ್ಯರಲ್ಲಿ ತಿಳಿವಳಿಕೆ ಏನಿರುತ್ತೆ ? ಇದನ್ನೆಲ್ಲಾ ಯೋಚಿಸಿದರೆ ಈ ಜನ್ಮದಲ್ಲಿ ನಮ್ಮ ಕಲ್ಯಾಣವಾಗುತ್ತೆ ಎನಿಸುವುದೇ ಇಲ್ಲ," ಎಂದಳು ಸರಸು ನಿರಾಶಾಪೂರ್ಣವಾದ ವಾಣಿಯಲ್ಲಿ.

"ಅದೇ ಪ್ರಾಮುಖ್ಯವಾದ ತೊಂದರೆ. ಜೊತೆಜೊತೆಗೆ ಮೂಢ ನಂಬಿಕೆಗಳಿಗೆ ಕೊನೆ ಮೊದಲೇ ಇಲ್ಲ. ಅದನ್ನು ಪ್ರಯತ್ನಿಸಿದರೂ ಕಳೆಯಲಾಗುವುದಿಲ್ಲ. ರಕ್ತಗತವಾಗಿಬಿಟ್ಟಿದೆ. ಯಾರಾದರೂ ಸಮಾಜ ಸುಧಾರಕರು ತಲೆಗೆ ತಟ್ಟುವಂತೆ ಹೇಳುತ್ತಲೇ ಇದ್ದರೆ ಏನಾದರೂ ಅಲ್ಪಸ್ವಲ್ಪ ಬದಲಾವಣೆಯಾದೀತೇನೋ. ಸದಾ ಕಂಠಶೋಷಣೆ ಮಾಡುವವರು ಯಾರಿದ್ದಾರೆ ಇಲ್ಲಿ ? ವಿದ್ಯೆ ಬುದ್ಧಿಗಳಿಲ್ಲದ ಜನಸಮುದಾಯದಲ್ಲಿ ಮೂಢನಂಬಿಕೆಗೆ ಕೊನೆಮೊದಲೇ ಇರುವುದಿಲ್ಲ, ಅಂತಹವರನ್ನು ನೇರ್ಪಡಿಸುವುದು ಅಷ್ಟು ಸುಲಭವಲ್ಲ. ಏನೋ ಹೆಜ್ಜೆಯನ್ನು ಮುಂದಿಡುತಿದ್ದೇವೆ. ದೇವರೇ ನಮಗೆ ಸರಿದಾರಿ ತೋರಿಸಬೇಕು. "ಎಂದಳು ಅವಳು ಆಸೆ–ನಿರಾಸೆಗಳಲ್ಲಿ ಹೊಯ್ದಾಡಿತು ಮನಸ್ಸು.

ಸ್ವಲ್ಪ ಹೊತ್ತು ರುದ್ರ ಮೌನ ರಾಜ್ಯವಾಳಿತು.

"ರಾಂದಾದ ಮನೆಗೆ ಬಂದ ಮೇಲೆ ಈ ವಿಚಾರವನ್ನು ಕೂಲಂಕಶವಾಗಿ ಮಾತಾಡಿ ಪರಿಶೀಲಿಸಿದನಂತರ ಮುಂದಿನ ಕಾರ್ಯಕ್ರಮ ಕೈಕೊಳ್ಳೋಣ."

o o o o

ರಾಮನಾಥ ಮತ್ತು ದೇವಯ್ಯ ಇವರು ಭಾವೀ ಸಂಘದ ಪ್ರಾಣಾಳಿಕೆಯನ್ನು ನೋಡಿ 'ಅಸ್ತು' ಎಂದರೂ "ಇದೆಲ್ಲಾ ಕನಸಿನ ಗಂಟು. ಕೈಗೂಡದ ವಿಷಯ. ಹಾಗೆಂದು ಬದಿಗೊತ್ತುವುದರಲ್ಲೂ ಅರ್ಥವಿಲ್ಲ. ಪ್ರಯತ್ನ ಮಾಡಿ ನೋಡಿ. ನಿಮ್ಮ ಪ್ರಯತ್ನ ಫಲಿಸಿದರೆ ಪುಣ್ಯ" ಎಂದು ನಿರಾಶಾಭಾವನೆಯನ್ನು ವ್ಯಕ್ತಪಡಿಸಿದರು.

ಗ್ರಾಮ್ಯ ಜೀವನದ ಸುವಿಸ್ತಾರವಾದ ಬದುಕು. ಅಲ್ಲಲ್ಲಿ ವಿರಳವಿರಳವಾಗಿ ಅವರವರ ಗದ್ದೆ ತೋಟಗಳ ಅಂಚಿನಲ್ಲಿ ಹಳೆಹಳೆಯ ಕುಟೀರಗಳು, ಸಣ್ಣ ಪುಟ್ಟ ದೊಡ್ಡ ಬಗೆಬಗೆಯ ಕುಟೀರಗಳ ರೂಪುರೇಷೆಗಳು; ವಿನ್ಯಾಸಗಳು ಹೆಚ್ಚು ಕಡಿಮೆ ಒಂದೇ ಬಗೆಯವು. ಹಳೆತನ ಹೋಗಲಿಲ್ಲ. ಹೊಸತನ ಬರಲಿಲ್ಲ. ಸಾಮಾನ್ಯ ಜೀವನದ ಸಾಮಾನ್ಯ ಜನಪದ. ತೀರಾ ಸಾಮಾನ್ಯವೇ ಎಲ್ಲ. ಗ್ರಾಮದಲ್ಲಿ ಶಾಲೆಯಿದ್ದರೂ ಕಲಿಯುವ ಆಸಕ್ತಿಯಿಲ್ಲ. ಕಲಿಸುವ ಮನಸ್ಸೂ ಇಲ್ಲ. ಏನೋ ಒಂದು ಬಗೆಯ ನೀರಸಭಾವ. ಇನ್ನೇನೋ ಒಂದು ಬಗೆಯ ಜಡತ್ವ. ಮತ್ತೇನೋ ಒಂದು ರೀತಿಯ ಅರ್ಥಹೀನ ವಿಶ್ವಾಸ. ಯೋಚಿಸಿಯೂ ಅರ್ಥೈಸದ ಮನಮತಿಗಳು. ಈ ಎಲ್ಲಾ ಕಾರಣಗಳಿಂದ ನಾವೀನ್ಯತೆಯನ್ನು ಕಂಡರಿಯಲಿಲ್ಲ ಜೀವನ ರಥ ; ಕಣ್ಣು ಕಟ್ಟಿದ ಕುದುರೆಗಳಂತೆ ಓಡುವುದು ಒಂದೇ ನಿಟ್ಟಿನಲ್ಲಿ. ಮುಗ್ಗರಿಸಿದರೂ, ಮುಗ್ಗರಿಸದಿದ್ದರೂ ಒಂದೇ ಪಥ.

ಮಧ್ಯಾಹ್ನ ಸ್ವಲ್ಪ ಮುಂಚಿತವಾಗಿಯೇ ಚಹ ಮುಗಿಸಿ ಸರಸು ಮತ್ತು ತಾಯಿಯರನ್ನು ಕೂಡಿಕೊಂಡು ಮನೆಮನೆಯ ಭೇಟಿಗೆ ಹೊರಟಳು ಕುಮುದ್ವತಿ. ಡ್ರೈವರ್ ಪುಟ್ಟಸ್ವಾಮಿ ಸ್ಟೀರಿಂಗ್ ಹಿಡಿದ. ಎಲ್ಲಾ ಮನೆಗಳ ಬಳಿಗೂ ಕಾರು ಹೋಗುವುದಿಲ್ಲವಾದ್ದರಿಂದ ಎಲ್ಲಾದರೊಂದು ಕಡೆ ಅನುಕೂಲವಾದ ಸ್ಥಳದಲ್ಲಿ ಕಾರನ್ನು ಬಿಟ್ಟು ಮನೆಮನೆಗೂ ಕಾಲ್ನಡಿಗೆಯ ಭೇಟಿ. ಗೃಹಿಣಿಯರನ್ನು ಕಂಡು ಮೂಢ ನಂಬಿಕೆಗಳಿಂದ ಮತ್ತು ಸಾಮಾಜಿಕ ಧೋರಣೆಯಿಂದ ಹೆಂಗಳೆಯರು ಪಡುತ್ತಿರುವ ಪಾಡನ್ನು ಸಂಪೂರ್ಣ ನಿವಾರಿಸಲೆಂದು ತಾವು ಕೈಕೊಳ್ಳುವ ಕಾರ್ಯವನ್ನು ವಿವರಿಸಿದರೆ ಯಾರಿಗಾದರೂ ತಲೆಗೆ ಹೋಗಬೇಕೆ ? ತಮ್ಮ ಮೇಲೆ ನಡೆಯುತ್ತಿರುವ ದೌರ್ಜನ್ಯ ಜೀವನದ ಅವಿಭಾಜ್ಯ ಅಂಗ ಎಂದು ನಂಬಿದವರೇ ಎಲ್ಲ. ಇಂದಿನ, ಇತ್ತೀಚಿನ ಶಾಲೆ ಕಾಲೇಜುಗಳಲ್ಲಿ ಕಲಿತ ಹುಡುಗಿಯರಿಗಿದು ಅರ್ಥವಾದರೇನು ? ಅತ್ತ ಗಮನ ಹರಿಸುವಷ್ಟು ಚಾಕಚಕ್ಯತೆ ಇದ್ದರಷ್ಟೆ? ತಲೆ ಹೊಡೆದುಕೊಂಡು ವಿವರಿಸಬೇಕಾದರೆ ಸಾಕು ಎನಿಸಿತು ಸರಸು ಕುಮುದ್ವತಿಯರಿಗೆ. ಪದ್ಮ ರಾಜೇಶ್ವರೀ ಸ್ತ್ರೀ ಕಲ್ಯಾಣ ಸಂಘ ಎಂದರೇನು ? ಅದರ ಹುಟ್ಟು ಏತಕ್ಕಾಗಿ ? ಅದನ್ನು ಹೆಂಗಳೆ

ಯರು ಒಟ್ಟುಗೂಡಿ ನಡೆಸಿಕೊಂಡು ಹೋಗುವ ಬಗೆಯನ್ನು ವಿವರಿಸಿದರೆ ಏನುತ್ತರಿಸಬೇಕೋ ತಿಳಿಯದೆ ಮಿಕಿಮಿಕಿ ನೋಡಿದವರೇ ಹೆಚ್ಚು.

ಇಂಥ ಪರಿಸ್ಥಿತಿಯಲ್ಲಿ ಕೆಲಸ ಮುಂದುವರಿಸುವುದು ಹೇಗೆ ಎಂಬ ಪ್ರಶ್ನೆ ತಲೆಯಲ್ಲಿ ನಿಮಿರಿ ನಿಲ್ಲುತ್ತದೆ. ಆದ್ದರಿಂದ, ಎಲ್ಲಾ ಮನೆಗಳಿಗೂ ಹೋಗುವುದಕ್ಕಿಂತ ಎಲ್ಲೆಲ್ಲಿ ಕಲಿತ ಹುಡುಗಿಯರು ಇದ್ದಾರೋ ಅಂತಹ ಕಡೆಗೇ ಹೋಗುವ ಕಾರ್ಯವನ್ನು ಹಮ್ಮಿಕೊಂಡರು ಹುಡುಗಿಯರು.

ಮೊದಲ ದಿನ ಸುತ್ತಿದ್ದೆಲ್ಲಾ ವ್ಯರ್ಥವೇ ಅಯ್ತು.

ಸಂಜೆಯಲ್ಲಿ ಮನೆಗೆ ಮರಳಿದಾಗ ರಾಮನಾಥ ಮತ್ತು ದೇವಯ್ಯ ಮುಂದಿನ ಹೂದೋಟದಲ್ಲಿ ಅಡ್ಡಾಡುತಿದ್ದರು.

ಕಾರು ಅಂಗಳದಲ್ಲಿ ನಿಲ್ಲುತ್ತಲೂ ಎಲ್ಲರೂ ಇಳಿದರು. ಯಾರ ಮುಖ ಮಂಡಲದಲ್ಲೂ ಉತ್ಸಾಹದ ಗೆಲುವಿಲ್ಲ. ರಾಮನಾಥ ನಗುತ್ತ ಹಾಸ್ಯದ ಧಾಟಿಯಲ್ಲಿ ಕೇಳಿದ,

"ನಿಮ್ಮ ಕಾರ್ಯಸಾಧನೆ ಎಲ್ಲಿಯವರೆಗೆ ಬಂತು ?"

"ಏನೂ ಇಲ್ಲ." ಗೋಣು ಆಡಿಸಿದಳು ಕುಮುದ್ವತಿ.

ದೇವಯ್ಯ ಅಂದ "ಗ್ರಾಮ್ಯ ಮಹಿಳೆಯರು ಅಷ್ಟು ದೂರ ಆಲೋಚನೆ ಮಾಡುವಷ್ಟು ಪ್ರಬುದ್ಧರಿರುತ್ತಾರೆಯೇ ? ಬಹಳ ಮುಗ್ಧ ಜನ. ಪರಿಸ್ಥಿತಿಗೆ ಹೊಂದಿಕೊಳ್ಳುವುದು ಗೊತ್ತು. ಹೊಡೆತ ಬಡಿತ ತಿಂದುಕೊಂಡು ನಮ್ಮ ಹಣೆಯ ಬರಹ ಎಂದು ಸುಮ್ಮನಿರುತ್ತಾರೆ. ವಿದ್ಯಾವಂತ ಮಹಿಳೆಯರು ಮಾತ್ರ ಅರಿತುಕೊಂಡಾರು."

"ಹೌದು, ನಾವು ಎಲ್ಲೆಲ್ಲಿ ಯಾದ ಯಾವ ಮನೆಯಲ್ಲಿ, ವಿದ್ಯಾವಂತ ಮಹಿಳೆಯರಿದ್ದಾರೋ ಅಂತಹ ಕಡೆ ಮಾತ್ರ ಹೋಗುವುದೆಂದು ತೀರ್ಮಾನಿಸಿ ಹಿಂದಿರುಗಿ ಬಂದಿದ್ದಾಯ್ತು."

"ಅದೇ ಸರಿ."

ಮೂವರೂ ಕೈಕಾಲು ತೊಳೆಯಲು ಒಳ ಹೋದರು.

— o —

೧೧

....ಸಂಧ್ಯಾ ಸೂರ್ಯ ಪಶ್ಚಿಮ ದಿಗ್ದೇಶದಲ್ಲಿ ಅಸ್ತಗಿರಿಯ ಮಸ್ತಕದ ಕಡೆಗೆ ಇಳಿಯತೊಡಗಿದ್ದ.

...ಸಾಂಧ್ಯ ಗೀತಗಳನ್ನು ಉಲಿಯುವ ಪಕ್ಷಿಗಳ ಸಡಗರ–ಸಂಭ್ರಮ–ಅಪರಂಪಾರ.

ತರತರದ ಧ್ವನಿಗಳು ತರತರದ ರಾಗಮಾಲೆಯನ್ನು ಮೃದು ಮಂದವಾಗಿ ಹರಿಯಬಿಡುತ್ತಿವೆ ಏಕಪ್ರಕಾರವಾಗಿ. ಆ ಪುಟ್ಟಪುಟ್ಟ ಬಾಯಿಗಳಿಗೆ ಬಿಡುವೇಇಲ್ಲ. ರಾಗಾನುರಾಗವೇ ರಾಗ. ಆನಂದವೋದವೇ ಮೋದ.

ಸಾಯಂ ಸಮೀರನ ಅತಿ ಮಧುರವಾದ ಚಾಮರ ಸೇವೆ ಮನಃಪ್ರಾಣಗಳಿಗೆ ಹಿತಕರ. ಮಳೆ ಮೋಡವಿರುವುದರಿಂದ ವಾತಾವರಣ ಇನ್ನಿಷ್ಟು ತಣ್ಣಗೆ.

ಎಲ್ಲರೂ ಸಂಜೆಯ ವಿಶ್ರಾಂತಿಗಾಗಿ ವರಾಂಡದಲ್ಲಿ ಮಂಡಿಸಿ ಮಾತುಕತೆಯಲ್ಲಿ ತಲ್ಲೀನರಾಗಿರುವಾಗ ಪ್ರಾಕಾರದ ಬಾಗಿಲು 'ಕಣಿಲ್' ಎಂದು ಸದ್ದು ಮಾಡಿ ಯಾರೋ ಬಂದುದನ್ನು ಸೂಚಿಸಿತು. ತಕ್ಷಣೆ ಎಲ್ಲರ ದೃಷ್ಟಿಯೂ ಸಹಜವಾಗಿ ಅತ್ತ ಹೊರಳಿತು. ಬಂದವನು ಸರಸಿಯ ಗಂಡ ನಂದೀಶ.

ಅವನು ಬರಬರುತ್ತಲೇ 'ನಮಸ್ಕಾರ' ಎಂದು ಕೈ ಜೋಡಿಸಿದ.

"ನಮಸ್ಕಾರ ಬನ್ನಿ ...ಬನ್ನಿ." ರಾಮನಾಥ ಸ್ವಾಗತಿಸಿದ.

ಎಲ್ಲರ ಮುಖಬಿಂಬಗಳಲ್ಲೂ ಪರಸ್ಪರ ಸಂದರ್ಶನದ ಫಲವಾಗಿ ನಗೆ ಮುಗುಳು ಅರಳಿತು. ಎದೆಯಾಳದ ಕಹಿ ಭಾವನೆಯನ್ನು ತಮ್ಮ ತಮ್ಮಲ್ಲೇ ಹುದುಗಿಟ್ಟುಕೊಂಡು ಏನೂ ಅರಿಯದವರಂತೆ ಇದ್ದುಬಿಟ್ಟಿದ್ದಾರೆ ಎಲ್ಲರೂ. ಸರಸು ಮಾತನಾಡಲೋ ಬೇಡವೋ ಎಂಬ ಯೋಚನೆಯಲ್ಲಿ ಕಲ್ಲಿಗಿಂತ ಕಲ್ಲಾಗಿ

ನಿಂತು ನೋಡಿದಳು, ಹೃದಯ ವ್ಯಾಪ್ತಿಗೆ ಮೀರಿ ಮಿಡಿಯಿತು. ದಡ, ದಡ, ದಡ,

"ಬಹಳ ಅಪರೂಪವಾಗಿ ಬಂದಿದ್ದೀರಿ," ಎಂದ ರಾಮನಾಥ.

"ನನಗೂ ರೈತಾಪಿ ವೃತ್ತಿ. ಬಿಡುವು ಸಿಗಬೇಕಲ್ಲ. ನಿಮ್ಮಂತೆಯೇ ನಾನು.".

ಸರಸು ಒಳ ಹೋಗುವ ಯೋಚನೆಯಲ್ಲಿದ್ದುದನ್ನು ನೋಡಿ ಮೆಲ್ಲನೆ ಮೊಣಕೈಯಿಂದ ತಿವಿದು ಹೋಗಬೇಡವೆಂದು ಸೂಚನೆ ಕೊಟ್ಟಳು ಕುಮುದ್ವತಿ.

ಅವನು ಮಡದಿಯನ್ನು ಕೇಳಿದ–"ಇಲ್ಲಿಗೆ ಯಾವಾಗ ಬಂದೆ ?"

"ಮೊನ್ನೆ."

"ನಿನ್ನ ಕರೆದೊಯ್ಯಲೆಂದು ನಿಮ್ಮ ಮನೆಗೆ ಹೋಗಿದ್ದೆ. ಅಲ್ಲಿ ತಿಳಿಯಿತು, ನೀನು ಇಲ್ಲಿದ್ದೀಯೆಂದು. ಹಾಗೆಯೇ ಇಲ್ಲಿಗೆ ಬಂದೆ. ಹೊರಡು ಹೋಗೋಣ."

"ಈಗಲೇ ಏನವಸರ ಕುಳಿತುಕೊಳ್ಳಿ. ಬರುವುದರೊಳಗೇ ಹೋಗುವ ಬಯಕೆ" ಎಂದಳು ಕುಮುದ್ವತಿ. ಮುಖದ ಮೇಲೆ ಜಾಹೀರಾತಿಗೆ ಅರಳುವಂತಹ ಕೃತಕ ನಗೆ ಅರಳಿತು.

ಅನಂತರ ಉಭಯಕುಶಲೋಪರಿಯೂ ನಡೆಯಿತು. ಅತಿಥಿ ಸತ್ಕಾರವೂ ಮುಗಿಯಿತು. ಮಳೆ ಬೆಳೆಯ ವಿಚಾರವಾಗಿಯೂ ಕೆಲವು ಮಾತುಕತೆಗಳಾದುವು. ಬಳಿಕ ಬಾಯಿ ಬಿಟ್ಟಳು ಸರಸು–"ನಾನು ಅಮ್ಮನ ಮನೆಯಲ್ಲಿ ಒಂದು ತಿಂಗಳು ಇರುವ ಯೋಚನೆ ಮಾಡಿರುವೆ. ನಾನೀಗ ಬರುವುದಿಲ್ಲ."

"ಅದೆಲ್ಲಾ ಆಗೋಲ್ಲ. ನನಗಲ್ಲಿ ತುಂಬಾ ಕೆಲಸವಿದೆ. ನನಗೆ ಸಹಾಯಕರಿಲ್ಲ."

"ಏನೇ ಇರಲಿ, ಹೇಗಾದರೂ ಸುಧಾರಿಸಿಕೊಳ್ಳಿ. ಈ ಸಲಿ ನಾನು ಬರಲಾರೆ."

ಕಂಡವರ ಮನೆಯಲ್ಲಿದ್ದುಕೊಂಡು ಕಡ್ಡಿ ಮುರಿದಂತೆ ತಟ್ಟನೆ ಹಾಗೆಂದುದು ಅವನಿಗೆ ಮುಖಭಂಗವಾಯಿತು. ತನ್ನೊಳಗೇ ಬುಸುಗುಟ್ಟಿದ. ಬಂದೆ

ರಡು ಗಳಿಗೆ ನಿರಾತಂಕವಾಗಿ ಉರುಳಿ ಹೋದುವು. ಅವನು ಏನೂ ಹೇಳಲಿಲ್ಲ, ಅತ್ತೆಯ ಮನೆಯಲ್ಲಾಗಿದ್ದಿದ್ದರೆ ತನ್ನ ಶೂರತನ ತೋರಿಸುತ್ತಿದ್ದನೇನೋ.... ಮುಖಬಿಂಬ ವಿವರ್ಣವಾಯಿತು ತಟ್ಟನೆ ಎದ್ದು ನಿಂತ.

"ನಾನಿನ್ನು ಹೊರಡುವೆ."

"ಈಗಲೇ ಏನಷ್ಟು ಅವಸರ ?"

"ಬಸ್ಸು ಹಿಡಿಯಬೇಕಲ್ಲ?" ದೃಷ್ಟಿ ಕೈಗಡಿಯಾರದ ಮೇಲೆ ಹರಿಯಿತು. ಇನ್ನು ಹೆಚ್ಚು ಹೊತ್ತು ಇರಲು ಸಮಯವೂ ಇರಲಿಲ್ಲ. ಅವನು ಮಡದಿಯ ಕಡೆ ತಿರುಗಿ ನೋಡದೆ ಮೆಟ್ಟಲಿಳಿದ. ಸಿಟ್ಟು–ರೋಷಗಳ ಗಣಿಯಾದ ಅವನು ಎಲ್ಲರಿಗೂ ಒಂದೇ ಎಂಬಂತೆ Good bye ಹೇಳಿ ಹೊರಟೇಬಿಟ್ಟ. ಬಿರು ಬಿರನೆ ನಡೆಯುತಿದ್ದ ಅವನನ್ನು ಎಲ್ಲರ ಕಣ್ಣುಗಳೂ ನಿಟ್ಟಿಸಿ ನೋಡಿದುವು. ಅವನು ಉಗ್ರನಾಗಿ ತೋರಿಬಂದ. ಹೆಜ್ಜೆಹೆಜ್ಜೆಯಲ್ಲೂ ಪೌರುಷೇಯದ ಮುದ್ರೆ ಬೀಳುತಿತ್ತು, ದಪದಪನೆ.

ಅವನು ಪ್ರಾಕಾರದ ಬಾಗಿಲನ್ನು ದಾಟಿ ಹೋಗುವವರೆಗೂ ಸುಮ್ಮನಿದ್ದು ಅನಂತರ ನುಡಿದಳು ಸರಸು—"ರಾಂದಾದ ಇಲ್ಲಿ ಕೇಳಿ, ವರದಕ್ಷಿಣೆಗಾಗಿ ಕಾಟವೆಂದರೆ ಸಾಮಾನ್ಯ ಕಾಟವಲ್ಲ. ಹಿಂಸೆ ಅಂದರೆ ಕಠಿಣ ಹಿಂಸೆ. ನಾನು ಹೇಗೆ ತಾಳಲಿ ಹೇಳಿ. ಗಂಡಸಾಗಿ ಹುಟ್ಟಿ ಆಸ್ತಿ ಮನೆಯಿದ್ದು, ಕೈ ತುಂಬ ದುಡಿದುಕೊಳ್ಳುವ ಶಕ್ತಿಯಿದ್ದು ಹೆಂಡತಿಗೆ ಹಿಂಸೆ ಕೊಡುವುದೆಂದರೆ ನಾಚಿಗೆಯಾಗಬಾರದೆ ಇವರಿಗೆ ? ಅಪ್ಪ ಐವತ್ತು ಸಾವಿರ ಕೊಟ್ಟಿದ್ದಾರಲ್ಲ ಇನ್ನೂ ದುರಾಸೆ. ಆದರಲ್ಲಿ ಐವತ್ತು ಪೈಸೆ ಕೂಡ ನನಗೆ ಬರಲಿಲ್ಲ. ನೀವೂ ಹೇಳಿದಿರಿ. ಇನ್ನೂ ಅನೇಕರು ವರದಕ್ಷಿಣೆ ಕೊಡಬೇಡವೆಂದು ಅಪ್ಪಾಜಿಗೆ ಹೇಳಿದರು. ಆಸ್ತಿ ಮನೆ ಇದ್ದವನು. ಮಗಳು ಸುಖವಾಗಿರುತ್ತಾಳೆಂದು ಪೂರ್ಣ ನಂಬಿ ಐವತ್ತು ಸಾವಿರ ಕೊಟ್ಟರು ಅಪ್ಪಾಜಿ. ನಾನು ಅಂದು ಅಪ್ಪಾಜಿಗೆ ಹೇಳಿದ್ದೆ. ನೀವು ಕೊಡುವ ಹಣ ನಿಮ್ಮ ಮಗಳಿಗೆ ಆಪದ್ಧನದಂತೆ ಉಳಿಯುವುದಾದರೆ ಕೊಡಿ. ಬಡಪಾಯಿ ಹೆಣ್ಣಿಗೆ ಪಾಕೆಟ್ ಮನಿ ಆಗುತ್ತೆ, ಎಂದು. ಆದರೆ, ಅಪ್ಪಾಜಿ ನೇರವಾಗಿ ಅವರಿಗೇ ಕೊಟ್ಟುಬಿಟ್ಟರು. ಅದರ ಪರಿಣಾಮ

ಈಗ ಮತ್ತೆ ಐವತ್ತು ಸಾವಿರದ ಬೇಡಿಕೆ. ಅದೂ ಕೂಡ ಕಡ್ಡಾಯವಾಗಿ, ಪ್ರಾಣಹಿಂಸಕವಾಗಿ. ನನಗೆ ದಿನವೂ ಕಣ್ಣೀರು ಸುರಿಸುವುದೇ ಆಗಿದೆ. ಒಂದೊಂದು ದಿನ ಕಳೆಯುವುದೂ ಪರಮ ಹಿಂಸೆಯಾಗಿದೆ. ಹೇಗೆ ಕಾಲಹರಣ ಮಾಡಲಿ ಹೇಳಿ."

ಎರಡೂ ಕಣ್ಣುಗಳಲ್ಲಿ ಕಂಬನಿಯ ಕೋಡಿ ಹರಿದು ಹೋಯಿತು.

"ಸುಮ್ಮನಿರು ಅಳಬೇಡ. ನೀನು ತಾಯಿ ಮನೆಯಲ್ಲೇ ಸ್ವಲ್ಪ ದಿನ ಇದ್ದುಬಿಡು. ನೋಡೋಣ ಮುಂದೇನಾಗುತ್ತೆ ಅಂತ. ನೀನು ಕಣ್ಣೀರು ಸುರಿಸಿ ದುಃಖ ಹಚ್ಚಿಕೊಂಡು ದೇಹಾರೋಗ್ಯ ಕೆಡಿಸಿಕೊಳ್ಳಬೇಡಮ್ಮ. ಖಂಡಿತ ಧೈರ್ಯ ತಂದುಕೊ. ಸಮಾಧಾನ ಹೊಂದು."

ಧ್ವನಿಯಲ್ಲಿ ಕರುಣೆ–ದಯೆಗಳ ರಸವನ್ನೇ ಹರಿಸಿದ ರಾಮನಾಥ.

ದೇವಮ್ಮ ಖಿನ್ನಮನಸ್ಕನಾಗಿ ಅಂದ,

"ನಮ್ಮ ಕಾಲದಲ್ಲಿ ಇದೆಲ್ಲ ಇರಲೇ ಇಲ್ಲ. ಈಚೀಚೆಗೆ ಶುರುವಾಗಿದೆ ದುಷ್ಟ ಪದ್ಧತಿ. ಮನೆಮನೆಯಲ್ಲೂ ಇದೇ ಗೋಳು ? ಹೆಣ್ಣುಮಕ್ಕಳ ಗೋಳಿಗೆ ಕಿವಿ ಕೊಡುವವರೇ ಇಲ್ಲ, ಇಡೀ ಸಮಾಜ ಕಿವುಡು–ಕುರುಡು. ಇವರು ಯಾರ ಮೊರೆ ಹೋಗಬೇಕು ? ಈ ಹುಡುಗರಿಗೇಕೆ ಬುದ್ಧಿಯಿಲ್ಲವೋ ಎನಿಸುತ್ತೆ. ಎಂತಹ ಹೀನಾಯ ? ಇನ್ನೆಂತಹ ನೀಚತನ ? ಛಿಃ ! ಛಿಃ ! ಇದಕ್ಕಿಂತ ಹೇಸು ಜೀವನ ಇನ್ನುಂಟೆ ? ನಾಚಿಕೆ ಏಕಿಲ್ಲವೋ ? ಇವರ ಜನ್ಮ ಜೀವಂತ ಸುಡಬೇಕು !"

ಸೀತಮ್ಮ ದನಿಗೂಡಿಸಿದಳು "ಬಾಳು ಚೆನ್ನಾಗಿದ್ದರೇನೇ ಚೆನ್ನ. ಹೀಗಾದರೆ ದೇವರೇ ಗತಿ ತೌರುಮನೆಯೂ ಇಲ್ಲ; ಗಂಡನ ಮನೆಯೂ ಇಲ್ಲ. ಬಾಳು ಅತಂತ್ರ. ಕೈಲಿ ಕಾಸೂ ಇರುವುದಿಲ್ಲ. ದೂರ ಹೋಗಿ ಬದುಕುವುದಾದರೂ ಹೇಗೆ ? ಛೆಃ ! ಛೇಃ ! ಅನ್ಯಾಯ !"

"ನಮ್ಮಲ್ಲಿ ಹೆಂಗಳೆಯರಿಗೆ ಸ್ವಾತಂತ್ರ್ಯ ಜೀವನ ಎಂದರೇನೆಂಬುದೇ ತಿಳಿಯದು. ಅವರನ್ನು ತೆರೆಯ ಮರೆಯಲ್ಲಿಯೇ ಬೆಳೆಸಿ ಪ್ರಪಂಚ ವ್ಯವಹಾರದಿಂದ ದೂರವಾಗಿಡುವುದರಿಂದ ಈ ಗೋಳು. ವಿದೇಶೀಯರಂತೆ ಆರ್ಥಿಕ–

ವೈಯಕ್ತಿಕ ಸ್ವಾತಂತ್ರ್ಯ ಹೊಂದಿದವರಾದರೆ ಇಂತಹ ಗಂಡಂದಿರ ಬಳಿ ಒಂದು ಗಳಿಗೆಯೂ ಇರುತ್ತಿರಲಿಲ್ಲ ಹೆಣ್ಣು ಮಕ್ಕಳು. ಈ ದುರ್ಭರ ಬಾಳಿನ ಕಣ್ಣೀರು–ದುಃಖ–ದುಗುಡ ಇರುತ್ತಿರಲಿಲ್ಲ. ಹೊರ ಹೋಗಿ ತಮ್ಮ ಕಾಲಮೇಲೆ ತಾವು ನಿಂತುಕೊಳ್ಳುತಿದ್ದರು. ತಂದೆಯ ಆಸ್ತಿಯಲ್ಲಿಯೂ ಪಾಲಿಲ್ಲ ; ಗಂಡನ ಆಸ್ತಿಯಲ್ಲಿಯೂ ಪಾಲಿಲ್ಲ. ಅಂದಮೇಲೆ, ಸರಸಿಯ ಜೀವನನೇ ಉದಾಹರಣೆಗೆ ಸಾಕು."

ಆಗ ಕುಮುದ್ವತಿ ಹೇಳತೊಡಗಿದಳು, "ಅಪ್ಪಾಜೀ, ಒಂದು ಕಾಲದಲ್ಲಿ ನೀವು ಮಾಡಿದ್ದೂ ಇಷ್ಟೆ. ಅಮ್ಮನಿಗೆ ದುಡಿಯುವುದಕ್ಕೆ ಅವಕಾಶ ಕೊಟ್ಟಿದ್ದರೇ ಹೊರತು ಆರ್ಥಿಕ ವ್ಯವಹಾರ ಏನಾದರೂ ಕೊಟ್ಟಿದ್ದಿರೇನು ? ಕಾಸೇನಿದ್ದರೂ ನಿಮ್ಮ ಕಿಸೆಯೊಳಗೆ. ಯಾವ ಗಂಭೀರ ವ್ಯವಹಾರಕ್ಕೂ ಅವಕಾಶವಿಲ್ಲ. ಬೌದ್ಧಿಕ ಅಪಮೌಲ್ಯವೇ ಸರ್ವತ್ರ ಸದಾ. ಯಾವೊಂದು ಮಾತಿಗೂ "ನಿನಗೇನು ಗೊತ್ತು" ಎಂದುಬಿಟ್ಟರೆ ಮುಗಿಯಿತು...ಕೇಳಿ, ಹೆಣ್ಣು ಏನಿದ್ದರೂ ಸೊತ್ತಾಗಿತೊತ್ತಾಗಿ ಭೋಗವಸ್ತುವಾಗಿ ಉಳಿಯಲು ಕಾರಣ ಪುರುಷ ಪ್ರವೃತ್ತಿ. ಮನೆ ಮನೆಯಲ್ಲೂ ಇದೇ ಗತಿ.

"ನಾನು ಹೊಲಿಗೆ ಕಲಿತು ಮಿಷಿನ್ ಕೊಂಡಮೇಲೆ ಅಮ್ಮ ನನ್ನೊಂದಿಗೆ ಕಲಿತು ಜೀವನ ಮೌಲ್ಯವನ್ನು ಎತ್ತಿ ಹಿಡಿದರು. ನಿಮ್ಮ ಗೇಣಿ ವ್ಯವಸಾಯಕ್ಕಿಂತ ನಮ್ಮ ಮಿಷಿನ್ ವ್ಯವಸಾಯ ಉತ್ತಮ ವೃತ್ತಿಯಾಗಲಿಲ್ಲವೇ ? ಜೀವನಕ್ಕೆ ನಾನಾ ಮಾರ್ಗಗಳಿವೆ. ಅವರವರ ಮನೋಭಾವಕ್ಕೆ ಅನುಗುಣವಾಗಿ ಪ್ರವೃತ್ತಿ ಮಾರ್ಗವನ್ನು ಬಾಲ್ಯದಿಂದಲೇ ತೋರಿಕೊಟ್ಟರೆ ಅವರು ಸ್ವಾವಲಂಬಿಗಳಾಗುತ್ತಿರಲಿಲ್ಲವೇ ? ನಮ್ಮಲ್ಲಿ ಹೆಣ್ಣುಮಗಳನ್ನು ಸಾಕುವುದೇ ತೆರೆಮರೆಗೆ ಪಕ್ಕಾಗಿ. ದಾಸ್ಯಜೀವನದ ಸಲುವಾಗಿ. ಅಂದರೆ ಒಪ್ಪಿಕೊಳ್ಳುವಿರಾ ?"

ಆ ಕೊನೆಯ ಮಾತು "ಅಂದರೆ ಒಪ್ಪಿಕೊಳ್ಳುವಿರಾ ?" ದಿಟ್ಟ ಪ್ರಶ್ನೆ ಸರ್ರನೆ ಎದೆಯಾಳಕ್ಕೆ ಇಳಿಯಿತು. ದೇವಯ್ಯ 'ಹೌದು' ಎಂಬಂತೆ ತಲೆದೂಗಿದ ಮಾತಾಡಲಿಲ್ಲ.

ರಾಮನಾಥನ ಮನೋಭಿತ್ತಿಯಲ್ಲಿ ಅಳಿದ ಸತೀಮಣಿಯರು ಸರಕ್ಕನೆ ಸುಳಿಸುಳಿದಳಿದರು. ಅವರಿಬ್ಬರೂ ತನ್ನ ಜೀವನದಲ್ಲಿ ಅಂಗೈಲಾಡುವ ಗಿಣಿಗಳಾ

ಗಿಯೇ ಉಳಿದು ಸಗ್ಗಕ್ಕೆ ಸಂದವರು. ತನ್ನ ಪ್ರೇಮಾದರದಲ್ಲಿ ಸುಖವಾಗಿ ಬಾಳಿದವರಾದರೂ ಅವರ ಜೀವನ ಮೌಲ್ಯ ಒಡವೆ ವಸ್ತುಗಳು ಮಾತ್ರವೇ. ಅದನ್ನಂತೂ, ಅವರವರ ಆಸೆ-ಅಭಿಲಾಷೆಗಳ ರೀತ್ಯ ಪೂರ್ಣಮನದಿಂದ ನಿರ್ವಂಚನೆಯಿಂದ ಪೂರೈಸಿರುವೆ ಅದರಲ್ಲಿ ಕುಂದಿಲ್ಲ ಎಂದುಕೊಂಡ.

ಅಂತರಂಗ ಕೂಗಿ ಹೇಳಿತು—ಈ ರಾಷ್ಟ್ರದಲ್ಲಿ ಸ್ತ್ರೀಯರು ಎಂದಿಗೂ ಎರಡನೇ ದರ್ಜೆಯವರೇ ! ಈ ಶತಮಾನದಲ್ಲಿ ಪ್ರಥಮ ದರ್ಜೆಯ ಪ್ರಜೆಗಳಾ ಗುವುದು ಸಾಧ್ಯವೇ ಇಲ್ಲ.

੦ ੦ ੦ ੦

ರಾಮನಾಥನಿಗೆ ವಿಪರೀತ ಜ್ವರ. ನಗರದಿಂದ ಡಾ|| ಶಂಕರಭಟ್ಟರು ಬಂದರು. ಚಿಕಿತ್ಸೆ ನಡೆಯುತಿದ್ದರೂ ಜ್ವರ ಬಿಡಲಿಲ್ಲ. ನಾಲ್ಕೈದು ದಿನ ಚೆನ್ನಾಗಿಯೇ ಮಲಗಿಸಿಬಿಟ್ಟಿತು. ಕುಮುದ್ವತಿಯು ಹಚ್ಚಿಕೊಂಡಿದ್ದ ಕೆಲಸ ಕಾರ್ಯಗಳು ಹಿಂದೆಯೇ ಉಳಿದುವು. ಪತಿಯ ಬಳಿಯಿಂದ ಕದಲಲಾಗಲಿಲ್ಲ ಕುಮುದ್ವತಿಗೆ. ಮನೆಮನೆಗೆ ಹೋಗಿ ಸ್ತ್ರೀಯರನ್ನು ಕಂಡು ಬರಲೆಂದು ತಾನು ಉಳಿಸಿಕೊಂಡಿದ್ದ ಸರಸು ಅಮ್ಮನ ಮನೆಯಲ್ಲಿ, ನಾಲ್ಕು ದಿನ ಕಳೆದು ಬರುವೆ ಎಂದು ಹೊರಟು ಹೋದಳು.

ಒಂದು ವಾರದ ಬಳಿಕ ರಾಮನಾಥ ಜ್ವರ ಬಿಟ್ಟು ಚೇತರಿಸಿಕೊಂಡ. ಅಲ್ಲಿಯವರೆಗೆ ಕೆಲಸಗಳ ನೋಲ್ವಿಚಾರಣೆ ದೇವಯ್ಯನದೇ. ತೆಂಗಿನಕಾಯಿ ಕೀಳಿಸುವುದು ಸುಲಿಸುವುದು ಇತ್ಯಾದಿ.

ಸರಸು ಮತ್ತೆ ಮನೆಗೆ ಬಂದಳು ಗೆಳತಿಯ ಕಾರ್ಯಕಲಾಪಗಳಲ್ಲಿ ಭಾಗ ವಹಿಸಲು. ಗೆಳತಿಯನ್ನು ಕಂಡು ಆನಂದಿತಳಾದ ಕುಮುದ್ವತಿ ಆತ್ಮೀಯ ಆಲಿಂಗನ ನೀಡಿ ಬರಮಾಡಿಕೊಂಡಳು. ಪರಸ್ಪರ ದರ್ಶನ ಲಾಭದಿಂದ ಎರಡೂ ಮುಖಬಿಂಬಗಳು ಅರಳಿ ಹೂವಾದುವು.

ರಾಮನಾಥ ಅಂದ "ಯಾವುದಾದರೂ ಸಮಾರಂಭಗಳಲ್ಲಾದರೆ ಬಹು ತೇಕ ಮಹಿಳೆಯರು ಸಿಗುತ್ತಾರೆ. ಮನೆಮನೆಗೂ ಹೋಗುವುದೆಂದರೆ ತುಂಬಾ ಪ್ರಯಾಸವೇ. ನೋಡು, ನಿನಗೆ ಹೇಗೆ ಸಾಧ್ಯವೋ ಹಾಗೆ ಮಾಡು."

"ಈಗ ಸಧ್ಯಕ್ಕೆ ಕೆಲವು ಮನೆಗಳಿಗೆ ಹೋಗಿ ಬರುತ್ತೇನೆ. ಸರಸು ಬಂದಿದ್ದಾಳೆ."

"ಆಗಲಿ, ಹೋಗಿ."

ಪುಟ್ಟಸ್ವಾಮಿ ಕಾರು ತಂದು ಮುಂಬಾಗಿಲಿನಲ್ಲಿ ನಿಲ್ಲಿಸಿದ.

ಸೀತಮ್ಮ ಸರಸುರವರೊಡನೆ ಕಾರು ಹತ್ತಿದಳು ಕುಮುದ್ವತಿ. ಕಾರು ಹೊರಟಿತು. ಹಿಂದಿನ ಸಲದಂತೆಯೇ ನಾಲ್ಕಾರು ಮನೆಗಳಿಗೆ ಸಮೀಪವಾಗಿ ಎಲ್ಲಾದರೂ ತಣ್ಣೆರಳಲ್ಲಿ ಕಾರು ನಿಲ್ಲಿಸಿದರೆ ಮುಂದೆ ಕಾಲ್ನಡಿಗೆಯ ಪಯಣ. ಮೊದಲ ಮನೆಯನ್ನು ಮುಟ್ಟಿದಾಗ ಮನೆಯೊಡತಿ ಮನೆಯ ಜಗಲಿಯಂಚಿನಲ್ಲಿ ಅಕ್ಕಿಯನ್ನು ಸುರಿದುಕೊಂಡು ಹಸನು ಮಾಡುತ್ತಿದ್ದುದು ಕಂಡುಬಂತು. ವಿದ್ಯಾವಂತ ಮಗಳು ತಾಯಿಗೆ ನೆರವು ನೀಡುತ್ತಿದ್ದಾಳೆ. ಇವರನ್ನು ನೋಡುತ್ತಲೂ ಒಮ್ಮೆಲೇ ದಂಗು ಬಡಿದಂತಾಯಿತು. ತಾಯಿ ಮಗಳ ಆಶ್ಚರ್ಯ ವಿಸ್ತೃತ ನಯನಗಳು ನೋಡಿಯೇ ನೋಡಿದುವು.

ಆ ಮುಹೂರ್ತದಲ್ಲಿ ಸ್ವಾಗತಿಸುವುದೂ ಸಹ ಮರೆತು ಹೋಯಿತು. ಕೆಲವು ನಿಮಿಷಗಳು ಅವಾಕ್ಕಾಗಿದ್ದು ನಂತರ ಎಚ್ಚತ್ತು "ಬನ್ನಿ, ಬನ್ನಿ; ಬಡವರ ಮನೆಗೆ ಭಾಗ್ಯಲಕ್ಷ್ಮಿ ಬಂದಂತಾಯಿತು ಬನ್ನಿ;" ಎಂದಳು ಮಗಳು. ಇಬ್ಬರ ಮುಖಗಳೂ ಹೂವಿನಂತೆ ಅರಳಿ ಪ್ರಸನ್ನವಾದುವು.

ತಾಯಿ ಮೈಯ್ಯಲ್ಲಿದ್ದ ಧೂಳನ್ನು ಕೊಡವಿ ಬಂದು ಕುಳಿತುಕೊಂಡಳು ಅತಿಥಿಗಳ ಪಕ್ಕದಲ್ಲಿ. ಕುಮುದ್ವತಿ ವಿಷಯವನ್ನು ಮುಂದಿಟ್ಟಳು,

"ನೋಡೀಮ್ಮಾ, ನಾವು ನಮ್ಮ ಮನೆಯಲ್ಲಿ 'ಪದ್ಮಾ ರಾಜೇಶ್ವರೀ ಸ್ತ್ರೀ ಕಲ್ಯಾಣ ಸಂಘ' ಎಂಬ ಹೆಸರಿನಲ್ಲಿ ಸಂಘ ಸ್ಥಾಪನೆ ಮಾಡುತ್ತೇವೆ. ನೀವೆಲ್ಲಾ ಮನೆಗೊಬ್ಬರು ಅದರ ಸದಸ್ಯರಾಗಿ ಸಂಸ್ಥೆಯನ್ನು ವೃದ್ಧಿಪಡಿಸಿ. ಸಂಘ ಎಂದಮೇಲೆ ಒಬ್ಬಿಬ್ಬರ ಕೆಲಸವಲ್ಲ. ಹಲವು ಹತ್ತು ಮಂದಿ ಕೂಡಿಯೇ ನಡೆಸಬೇಕು. ಮುಂದೆ ಅವರ ಮೂಲಕ ನಿಮ್ಮ ಮತ್ತು ನಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಬಹುದು. ಸ್ತ್ರೀ ಜನ ಬುದ್ಧಿವಂತರಾದರೆ ಇವೆಲ್ಲಾ ಸುಲಭಸಾಧ್ಯ. ನಾವು ನಮ್ಮನಮ್ಮ ಆಗು–ಹೋಗುಗಳನ್ನು ಸರಿಯಾಗಿ ಅವ

ಲೋಕಿಸಿ ಏನೇನು ಆಗಬೇಕು ಮತ್ತು ಏನೇನು ಆಗಬಾರದು ಎಂಬುದನ್ನು ಅರಿತುಕೊಂಡರೆ ದಾರಿ ಸುಗಮ."

ಮಗಳು 'ಹೌದು' ಎಂಬಂತೆ ತಲೆದೂಗಿದರೆ ತಾಯಿ "ಏನೋಪ್ಪ ನನಗಿದೆಲ್ಲ ಅರ್ಥವಾಗುವುದಿಲ್ಲ..." ಎಂದುಬಿಟ್ಟಳು.

ಮಗಳು ಸಂತುಷ್ಟಳಾಗಿ ನುಡಿದಳು "ನಾನು ಸಂಘ ಸದಸ್ಯತ್ವ ಪಡೆದುಕೊಳ್ಳುವೆ."

"ನೀನು ಮಾತ್ರವಲ್ಲ. ನಿನ್ನ ಗೆಳತಿಯರನ್ನೂ ಸಂಘ ಸದಸ್ಯರನ್ನಾಗಿ ಮಾಡಬೇಕು. ನೀನು ನಿನ್ನ ಗೆಳತಿಯರೊಡನೆ ಬಂದು ಭಾಗವಹಿಸು. ನಾವು ಮೀಟಿಂಗ್ ಕರೆಯುತ್ತೇವೆ ಆಗಾಗ. ಅಲ್ಲಿಗೆ ಬಂದು ಎಲ್ಲಾ ರೀತಿಯಲ್ಲೂ ಸಹಕರಿಸಬೇಕು ಆಯಿತೇ ?"

"ಆಗಬಹುದು...."

ಸಂಘದ ಪ್ರಾಣಾಳಿಕೆಯನ್ನು ನಮೂದಿಸಿದ್ದ ಪುಸ್ತಕ ಮತ್ತು ಫೈಲುಗಳನ್ನು ತೆಗೆದು ತೋರಿ ಅವಳ ಸಹಿಯನ್ನು ಮತ್ತು ವಿಳಾಸವನ್ನು ಪಡೆದುಕೊಂಡರು.

"ನಾನು ಇವರ ಮಾತು ಕೇಳುತ್ತ ನಿನ್ನ ಮಾತನಾಡಿಸಲೇ ಇಲ್ಲ ಸರಸು. ಯಾವಾಗ ಬಂದೆ ಇಲ್ಲಿಗೆ ? ತುಂಬಾ ಇಳಿದು ಹೋಗಿದ್ದಿ. ಏಕೆ ಮೈಯ್ಯಲ್ಲಿ ಆರೋಗ್ಯವಿಲ್ಲವೇ ?" ಎಂದು ಬಲ್ಮೆಯಿಂದ ಕೇಳಿದಳು ಮನೆಯೊಡತಿ ಸರಸುವನ್ನು.

"ಅಷ್ಟಾಗಿ ಆರೋಗ್ಯ ಸರಿಯಿಲ್ಲ," ಮೆಲುದನಿಯಲ್ಲಿ ನುಡಿದಳು ಸರಸು. ಎದೆಯಾಳದಿಂದ ನಿಟ್ಟುಸಿರೊಂದು ಮೆಲ್ಲನೆ ತಪ್ಪಿಸಿಕೊಂಡಿತು.

"ಊರಿನಲ್ಲಿ ವಯಸ್ಕರ ಶಿಕ್ಷಣ ಸಮಿತಿಯಿದೆ. ಇಲ್ಲಿಂದ ಅಮ್ಮಂದಿರು ಹೋಗುವುದೇ ಇಲ್ಲ. ಅವರಿಗೆ ಕೈಬಿಡುವು ದೊರೆಯುವುದು ಕಷ್ಟ ಕೂಡ. ಎಷ್ಟು ಮಾಡಿದರೂ ಮುಗಿಯದ ಕೆಲಸ ಮನೆಗಳಲ್ಲಿ. ಕೂಲಿಗೆ ಹೋಗಿ ಬಂದು ಮನೆಗೆಲಸ ಮಾಡುವುದರಲ್ಲೇ ಸಮಯ ಕಳೆಯುತ್ತೆ ಅಂದಮೇಲೆ ಜ್ಞಾನಾರ್ಜನೆ ಕಷ್ಟವೇ."

ಸೀತಮ್ಮ ನಿಟ್ಟುಸಿರು ಬಿಟ್ಟಳು. ಮನಸ್ಸು ತನ್ನ ಜೀವಮಾನದ ಪಾವಟಿಗೆಗಳನ್ನು ಚಕಚಕ ಇಳಿಯಿತು...ದಿನವೆಲ್ಲ ಜಮೀನಿನಲ್ಲಿ ದುಡಿತ. ಬಾಲ್ಯದಲ್ಲಿ ತಂದೆಯ ಮನೆಯಲ್ಲಿ ಅನಂತರ ಗಂಡನ ಮನೆಯಲ್ಲಿ. ಐದನೆಯ ಕ್ಲಾಸಿನವರೆಗೆ ಓದಿ ಕಲಿತ ಅಕ್ಷರ ಜ್ಞಾನ ದಿನದಿನ ಬಾಡಿ ಬತ್ತಿ ಕಮರಿ ಹೋಗುತಿದ್ದಾಗ ಮಗಳು ಕುಮುದ್ವತಿಯ ಆಸರೆಯಿಂದ ಹಸಿರು ಹಸಿರಾಗತೊಡಗಿತು. ಶಾಲೆಯಿಂದ ಪುಸ್ತಕಗಳನ್ನು ತಂದು 'ಓದಿ ಅಮ್ಮಾ' ಎನ್ನುವಳು. ಹೊಲಿಗೆ ಕಲಿತು, ನೀವೂ ಕಲಿಯಿರಿ ಎಂದು ಕಲಿಯಲು ಹಚ್ಚಿದಳು. ತಾನು ಓದಿದ ಪುಸ್ತಕಗಳ ಇತಿಹಾಸವನ್ನು ಬಿಡಿಸಿ ಹೇಳಿ ಪ್ರಾಪಂಚಿಕ ಜ್ಞಾನವನ್ನು ಮನಸ್ಸಿಗೆ ಜಡಿದು ತುಂಬುವುದು ಸಾಯಂಚರಿ. ಆ ಮಗಳಿಂದಾಗಿ ತಾನು ಕಲಿತುದು ಅಲ್ಪಸ್ವಲ್ಪವೇನಲ್ಲ. ದೇವಯ್ಯನ ಸಹಚರ್ಯದಲ್ಲಿ ಪಡೆದುಕೊಂಡುದು ಅತೀವ ದೈಹಿಕ ಶ್ರಮ. ಶ್ರಮಿಕ ಫಲವೆಲ್ಲ ಪತಿಯ ಕಿಸೆಗೆ. ಆತನಿಗೆ ಬೇರೇನೂ ಹೆಚ್ಚಿನ ದುರಭ್ಯಾಸಗಳಿಲ್ಲದಿದ್ದರೂ ಕಾಸು ಬಿಚ್ಚುವವನಲ್ಲ. ಈ ಮಗಳಿಂದಾಗಿ ಬಾಳಿಗೆ ಬೆಳಕು ಬಂದುದು. ಮುಂದೆಯೂ ಅವಳೇ ಗತಿ. ದೇವಗು ಅಷ್ಟು ಉಪಕಾರ ಮಾಡಿದರೆ ಸಾಕು...ಎದೆಯ ಹಕ್ಕಿ ತನ್ನಲ್ಲೇ ಹಾರೈಸಿತು.

ಮನೆಯ ಗರತಿ ನುಡಿದಳು "ಶಿವಶಿವಾ ! ನಮ್ಮಲ್ಲಿ ಹೆಂಗಸರಿಗೊಂದು ನೀತಿ ಗಂಡಸರಿಗೊಂದು ನೀತಿ. ಗಂಡಸರು ಏನು ಮಾಡಿದರೂ ಬದ್ಧ. ಹೆಣ್ಣಿಗೆ ನಿಶಿದ್ಧ. ಅವಳು ಹೆಜ್ಜೆ ಮುಂದಿಟ್ಟರೆ ಹೊಡೆತ–ಬಡಿತಗಳ ಉಂಬಳಿ. "ಅಯ್ಯೋ" ಎನ್ನುವವರಿಲ್ಲ. ಜೀವನವೆಂದರೆ ನರಕ."

"ಪಾಪ, ಹೇಳುವವರಿಲ್ಲ. ಕೇಳುವವರಿಲ್ಲ. ಶತಮೂರ್ಖರ ವ್ಯವಹಾರ ಹೀಗೆಯೇ. ಇದೆಲ್ಲಾ ಸರಿಹೋಗುವುದು ಅಷ್ಟು ಸುಲಭವೂ ಅಲ್ಲ. ಅದಕ್ಕೇ ಹೇಳುವುದು ಸಂಘ ಸಂಸ್ಥೆಗಳಿದ್ದರೆ ಲೇಸು ಅಂತ. ಇದನ್ನು ನೀವೆಲ್ಲರೂ ಕೂಡಿ ದಯವಿಟ್ಟು ಬಲಪಡಿಸಿರಿ."

"ನಾವು ಸಂಘ ಸಂಸ್ಥೆಗಳಲ್ಲಿ ಭಾಗವಹಿಸುವುದು ಗೊತ್ತಾದರೂ ಸಾಕು ; ನಮ್ಮ ಪ್ರಾಣಕ್ಕೆ ಕುತ್ತು. ನಮ್ಮ ಭಂಗ ಪರಮಾತ್ಮ ಬಲ್ಲ."

"ಸುದ್ದಿ ಬಿಚ್ಚದ ಹಾಗೆ ಕೆಲಸ ಮಾಡಿ."

"ಆಗಲಿ, ಆಗಲಿ."

ಮೂವರೂ ಅಲ್ಲಿಂದ ಬೀಳ್ಕೊಂಡು ಹೊರಟರು. ಹಾದಿ ನಡೆಯುತ್ತ ಬಾಯ್ಬಿರಿದಳು ಸರಸು,

"ತೆರೆಮರೆಯಲ್ಲಿ ನಡೆಯುವ ದೌರ್ಜನ್ಯ ದೇವರಿಗೆ ಮಾತ್ರ ಗೊತ್ತು. ಗಂಡುಜಾತಿಯಿಂದ ಮಹಿಳೆಯರಿಗೆ ಸಲ್ಲುವ ತ್ರಾಸ ಅಷ್ಟಿಷ್ಟಲ್ಲ. ಎಲ್ಲೋ ಕೆಲ ವರಿದ್ದಾರೆ ಒಳ್ಳೆಯವರು. ಉಳಿದವರು ವರ್ತಮಾನ ಯುಗಧರ್ಮದ ಹುರುಳನ್ನು ಅರಿತುಕೊಳ್ಳದ ಹುಂಬರು. ನಮ್ಮ ಜನ ಈ ಜನ್ಮದಲ್ಲಿ ಅರಿತು ಕೊಳ್ಳುವುದಿಲ್ಲ ಬಿಡು. ಭಾರತ ಸಂಸ್ಕೃತಿ ಹಿರಿದು. ಒಳಗಣ ಕುಕರ್ಮ ಬಲ್ಲ ವರೇ ಬಲ್ಲರು."

"ಅಂದಿಂದಿಗೂ ಸಾಮಾನ್ಯವಾಗಿ ಎಲ್ಲರೂ ಈ ಧೋರಣೆಯಲ್ಲಿ ಸಿಲ್ಕಿ ನರ ಳಿದವರೇ. ಸ್ತ್ರೀ ಜಾತಿ ಎಲ್ಲವನ್ನು ಒಳಗೊಂಡು ನಗುನಗುತ್ತ ಬಾಳುವ ವರ ವನ್ನು ಭಗವಂತನಿಂದ ಪಡೆದುಕೊಂಡಿರುವುದೊಂದು ವಿಶೇಷವೇ. ಇದು ಸ್ತ್ರೀ ತಪೋ ಬಲ..."

ಸೀತಮ್ಮ ಅನುಮೋದಿಸುತ್ತ ನುಡಿದಳು, "ಹಳ್ಳಿಯಲ್ಲೂ ಅಷ್ಟೆ, ದಿಳ್ಳಿ ಯಲ್ಲೂ ಅಷ್ಟೆ. ಹೆಣ್ಣು ಎಂದರೆ ತಾತ್ಸಾರ. ಗೌರವದ ಪ್ರಶ್ನೆ ದೂರದೂರವೇ. ಹೆಣ್ಣನ್ನು ಹೇಗೆಂದರೆ ಹಾಗೆ ಚೆಂಡಾಡಬಹುದು ಈ ದೇಶದಲ್ಲಿ. ಬುದ್ಧಿಹೀನರ ವ್ಯವಹಾರ ತುಂಬ ಕಷ್ಟ."

ಮೂವರೂ ಇನ್ನೊಂದು ಮನೆಗೆ ಹೋದರು. ಅಲ್ಲಿದ್ದವರು ಅಜ್ಜಿ ಮತ್ತು ಮೊಮ್ಮಗಳು ಇಬ್ಬರೇ. ಇವರು ವಿಷಯವನ್ನು ಮುಂದಿಡುತ್ತಲೂ ಅಜ್ಜಿ ಬಚ್ಚಬಾಯನ್ನು ತೆಗೆದು ನಕ್ಕು ನುಡಿದಳು,

"ಹಾಗೆಂದರೇನವ್ವ ಇಸ್ಸಿಸ್ಸೀ ! ನಮಗೇತಕ್ಕೆ ಈ ದುರ್ವ್ಯವಹಾರ.... ನಮ್ಮ ಗಂಡಸರು ಮೊದಲೇ ಕುಡಿದು ತಲೆ ಕೆಟ್ಟವರು. ಇನ್ನು ಇಂತಹದೇನಾ ದರೂ ಕಿವಿಗೆ ಬಿತ್ತು ಎಂದರೆ ತಲೆ ಮತ್ತಿಷ್ಟು ಕೆಟ್ಟೀತು. ಇದೆಲ್ಲ ಆಗಿಹೋಗುವ ಕೆಲಸವಲ್ಲ. ಸುಮ್ಮನೆ ಹೋಗಿ ನೀವು !"

ಸರಿ, ಅಲ್ಲಿ ಮುಂದೆ ಮಾತಾಡಲಾಗದೇ ಹೊರಟೇಬಿಟ್ಟರು. ಹುಡುಗಿ ಮನೆಯ ಬೇಲಿಯಂಚು ದಾಟುವವರೆಗೂ ಬೆಂಬಳಿಯೇ ನಡೆದು ಬಂದು ಹೇಳಿ ದಳು,

“ನೀವೆಲ್ಲ ಶುರು ಮಾಡಿ ಮುಂದೆ ನೋಡೋಣ, ನಾನಿರುವೆ, ಹಿಂದೆ.”

ಹುಡುಗಿಯ ಆಶ್ವಾಸನೆಗೆ ಸಂತಸಪಟ್ಟರು ಎಲ್ಲಾ.

ಅಲ್ಲೇ ಸಮೀಪದಲ್ಲೇ ಇನ್ನೊಂದು ಮನೆ. ಯಜಮಾನ ಬೀಡಿ ಸೇವನೆಯಲ್ಲಿ ಮುಳುಗಿ, ಜಗಲಿಯ ಮೇಲೆ ಕಾಲು ಚಾಚಿ ಕುಳಿದ್ದಾನೆ. ಹೆಂಗಸರಾರೂ ಕಾಣಿಸುತ್ತಿಲ್ಲ.

ಇವರು ಒಳ ಹೋಗುತ್ತಲೂ ಎದ್ದು ನಿಂತು ಕೈಜೋಡಿಸಿ “ಓ ನೀವು! ಅಮ್ಮಾವ್ರು, ಇಲ್ಲಿಯತನಕ...?”

“ಮನೆಯಲ್ಲಿ ಹೆಂಗಸರಿಲ್ಲವೇ?”

“ಇದ್ದಾರೆ. ಇಬ್ಬರಿಗೂ ‘ಮುಟ್ಟು’ ಹಿಂದಿನ ಜಗುಲಿಯಲ್ಲಿದ್ದಾರೆ ನೋಡಿ.”

“ಅವರನ್ನು ಇಲ್ಲಿಯೇ ಕರೆಯಿರಿ.”

“ಇಸ್ಸಿಸ್ಸೀ ಇಲ್ಲಿಗೆ ಕರೆಯುವುದುಂಟೇ? ಮೂರು ದಿನ ಸೂತಕ ಅಲ್ಲವೇ?”

“ಇದು ದೇಹಪ್ರಕೃತಿಯ ನಿಯಮ. ಇದು ಸೂತಕವೂ ಅಲ್ಲ, ಏನೂ ಅಲ್ಲ. ಆದಕ್ಕೇಕೆ ಹೊರಗೆ ಉಳಿಯಬೇಕು? ಇದು ತೀರಾ ಮೂಢನಂಬಿಕೆ.”

“ಹಾಗೆಂದರೆ ಎಂತದವ್ವಾ. ಹಿಂದಿನಿಂದಲೂ ನಡೆದು ಬಂದ ಪದ್ಧತಿ. ಶಾಸ್ತ್ರಕಾರರು, ಪುರೋಹಿತರು, ಭಟ್ಟರು ಎಲ್ಲರೂ ಒಪ್ಪುತ್ತಾರೆ. ಬಾಂಬ್ರರ ಮನೆಯಲ್ಲೂ ಉಂಟಷ್ಟೆ?”

“ಯಾರು ಮಾಡಿದರೂ ಇದು ತಪ್ಪು! ಕರೆಯಿರಿ ಅವರನ್ನು.”

ಯಜಮಾನ ಅವರನ್ನು ಕೂಗಿ ಕರೆದ. ಅವರು ಹೊರಗಡೆ ಅಂಗಳಕ್ಕೆ ಬಂದರು ಮಾತ್ರ. ಇವರು ಕಂಠಶೋಷಣೆ ಮಾಡಿದರೂ ತಮ್ಮ ಆಚಾರವನ್ನು ಬದಲಿಸಲಾಗಲೀ ಬಿಡಲಾಗಲೀ ಒಪ್ಪಲಿಲ್ಲ. ಅದರಿಂದ ‘ಮುಟ್ಟು ಚಿಟ್ಟಾಗಿ’ ಮಾರಿಯಮ್ಮನಿಗೆ ಸಿಟ್ಟು ಬಂದು ಮನೆ ಮಂದಿಯೆಲ್ಲಾ ಮಾರಿ ರೋಗಕ್ಕೆ ಬಲಿಯಾಗಿ ಸಾಯುತ್ತಾರೆ. ಅಥವಾ ಕಣ್ಣು ಕುರುಡಾಗಿ ನರಳುತ್ತಾರೆ. ಈ ರಣಗೋಳು ಯಾರಿಗೆ ಬೇಕು ಹೇಳಿ?” ಎಂದುಬಿಟ್ಟರು!

ಇನ್ನು ಸಂಘ ಸಂಸ್ಥೆಯ ವಿಚಾರ ತಲೆಗೆ ಹೋಗುವುದೆಂತು ? ಅವರೊಂದಿಗೆ ಮಾತಾಡಿ ಇವರೇ ಸುಸ್ತಾಗಿ ಹಿಂದಿರುಗಿ ಬರುವಂತಾಯಿತು. ಅಂತಹವರ ಬಗ್ಗೆ ವ್ಯಸನ–ಕರುಣೆಗಳಲ್ಲದೆ ಮತ್ತೇನೂ ಮಾಡುವಂತಿಲ್ಲ ಎಂದು ಕೊರಗಿತು ಆತ್ಮಸಂಪುಟ.

ಮೂವರೂ ವಿಷಾದಭಾವದಿಂದ ಹೊರಬಂದರು.

ಅಲ್ಲಿಂದ ಮುಂದಿನ ಮನೆ. ಅಲ್ಲಿಯೂ ಅಷ್ಟೆ. ಎಷ್ಟೋ ಮನೆಗಳಲ್ಲಿ ಕಲಿತ ಹುಡುಗಿಯರಿದ್ದಾರೆ. ವಿಷಯ ಮನದಟ್ಟಾದರೂ ಹೆಜ್ಜೆ ಹಿಂದಿಡಬೇಕೋ ಮುಂದಿಡಬೇಕೋ ಎಂಬ ತುಮುಲ ಮನದಲ್ಲಿ. ತಲತಲಾಂತರದಿಂದ ಪರಮ ದಾಸ್ಯ ಜೀವನದಲ್ಲಿ ಬಾಳಿ ಬದುಕಿದವರು. ತಮ್ಮ ಬದುಕು ನೀಡಿದ ಕಷ್ಟ ಸುಖಗಳನ್ನು 'ವರ'ವೆಂದೇ ಸ್ವೀಕರಿಸಿದವರು. ಗ್ರಾಮೀಣ ಬದುಕಿನಲ್ಲಿ ಇದೊಂದು ವಿಶೇಷ ಎನಿಸುವುದಿಲ್ಲವೇನೋ...ಯೋಚಿಸಿದರೆ. ನಾಗರಿಕ ಕಾಲಮಾನದ ನಾಗರಿಕ ಜೀವನದಲ್ಲಿನ ಅಗತ್ಯಗಳೇನು ಎಂಬುದನ್ನು ಯೋಚಿಸದ ಮುಗ್ಧೆಯರು ವಿಸ್ಮಯವಿಮೂಕರಾದರೂ ಸಂಘ ಸದಸ್ಯತ್ವ ಕೈಕೊಂಡರು, ಹಲ ಕೆಲವು ಮನೆಗಳಲ್ಲಿ. ಎಲ್ಲರಿಗೂ ವಿಷಯ ಮನದಟ್ಟಾಗುವಂತೆ ತಿಳಿಸಿಕೊಡಬೇಕಾದರೆ ಕಂಠಶೋಷಣೆ ಮಾಡಲೇಬೇಕಾಯಿತು.

ಒಂದು ಮನೆಯಲ್ಲಿ ವಿವಾಹಿತ ವಿದ್ಯಾವಂತ ಗರತಿಯೊಬ್ಬಳು ಒಡಲ ಸಂಕಟವನ್ನು ತೋಡಿಕೊಂಡಳು—"ಅಮ್ಮಾ , ನೀವನ್ನುವುದರಲ್ಲಿ ಗಂಭೀರವಾದ ಅರ್ಥವಿದೆ. ನಾವು ಸಂಸಾರಕ್ಕೆ ಸರಿಸಮನಾಗಿ ಭುಜ ಕೊಡುವವರು. ನಮಗೆ ಆರ್ಥಿಕ–ವೈಯಕ್ತಿಕ ಸ್ವಾತಂತ್ರ್ಯ ಲವಲೇಶವೂ ಇಲ್ಲ. ನಮಗೆ ಹಣ ಬೇಕಾದರೆ ಗಂಡ ಯಾವ 'ಮೂಡ್'ನಲ್ಲಿದ್ದಾರೆಂದು ಮೊದಲು ನೋಡಿಕೊಳ್ಳಬೇಕು. ಕಾಡಿ ಬೇಡಿ ಪ್ರಾಂಜಲಿಯೊಡ್ಡಿ ಪಡೆಯುವ ಗೋಳು ಯಾರಿಗೆ ಬೇಕು ? ಎಷ್ಟೋ ಸಲ ಕಣ್ಣೀರು ಕರೆಯಬೇಕು. ಇಂಥ ಬದುಕಾದರೂ ಏಕೆ ಬೇಕು ಹೇಳಿ? ನಮ್ಮ ದುಡಿಮೆಯ ಫಲವೆಲ್ಲಾ ಇವರ ಬೀಡಿ ಸಿಗರೇಟು ಮದ್ಯ ಇರತಹ ಹಾಳು ಹವ್ಯಾಸಗಳಿಗೆ ಸಲ್ಲುತ್ತದೆ. ನಾವದನ್ನು ಕಣ್ತುಂಬ ನೋಡಿಕೊಂಡು ಕಣ್ಣಿದ್ದೂ ಕುರುಡಾಗಿ ಬಾಳಬೇಕು......"

ಮಾತು ಮುಗಿಯುವುದರೊಳಗಾಗಿ ದನಿ ಗದ್ಗದಿಸಿತು. ಅವಳು ಅಲ್ಲಿಗೆ ಸುಮ್ಮನಾದಳು.

ಕುಮುದ್ವತಿ ಅವಳ ಬೆನ್ನು ತಟ್ಟಿ ಸಂತೈಸಿ ನುಡಿದಳು ಈ ಎಲ್ಲಾ ಕಾರಣಗಳಿಂದಲೇ ನಮಗೆ ಸಂಘ ಸ್ಥಾಪನೆ ಮಾಡುವ ಉದ್ದೇಶ ಉಂಟಾಗಿದೆ. ನೀನು ಮಾತ್ರವಲ್ಲ, ನಿಮ್ಮ ಪರಿಸರದ ಹೆಂಗಳೆಯರನ್ನು ಸಂಘ ಸದಸ್ಯರನ್ನಾಗಿ ಮಾಡಿ ಸಂಸ್ಥೆಗೆ ಬೆಂಬಲ ನೀಡಬೇಕು."

"ಆಗಲಿ, ಆಗಲಿ."

"ಈ ಸಂಸ್ಥೆಯ ಅಂಗವಾಗಿ ಬಾಲವಾಡಿಗಳು, ಶಾಲೆಗಳು ಪ್ರೌಢ ಸ್ತ್ರೀಯರಿಗೆ ಅಕ್ಷರಭ್ಯಾಸ ಮತ್ತು ಶಿಕ್ಷಣವನ್ನು ನೀಡುವ ಸಂಯೋಜನೆ ಹಾಕಿಕೊಳ್ಳಬೇಕು. ಪ್ರಪಂಚ ಜ್ಞಾನಕ್ಕಾಗಿ ಸಮಾಜ ಸುಧಾರಣೆಯ ಕಾರ್ಯಕಲಾಪಗಳು ನಡೆಯಬೇಕು. ಇದಕ್ಕೆ ಎಲ್ಲರ ಸಹಕಾರ–ಸಹಾಯ ಬೇಕು."

"ಆಗಬಹುದು. ನಿಮಗೆ ಒಳ್ಳೆತಾಗಲಿ."

"ನಿಮ್ಮ ಶುಭಾಶೀರ್ವಾದ ಇರಲಿ. ದೇವರು ದೊಡ್ಡವನು. ಅವನೇ ನಮಗೆ ದಾರಿ ತೋರಿಸಬೇಕು."

"ದೇವರು ಕೊಟ್ಟರೂ ಪೂಜಾರಿ ಕೊಡ." ಎದೆಯ ಹಕ್ಕಿ ಚೀರಿತು. ಗೃಹಿಣಿ ನೀರಸ ಭಾವದಿಂದ ನೋಡಿದಳು. ತುಟಿಗಳು ಬಿರಿಯಲಿಲ್ಲ.

— ೦ —

೧೨

ಅಂದು ಹೊರಟುದುದು ಕೃಷ್ಣ ಮತ್ತು ಸೋಮುರವರ ಕಡೆಗೆ.

ಕಾರು ಮನೆಯಂಗಳಕ್ಕೇ ಹೋಯಿತು. ಅಂಗಡಿಯಲ್ಲಿ ವ್ಯಾಪಾರದ ಹುರುಪು ಇದ್ದ ಸಮಯ.

ಕೃಷ್ಣ ತನ್ನವರನ್ನು ನೋಡಿ ಎದ್ದು ಬಂದು ಸ್ವಾಗತಿಸಿದ,

"ಏನಮ್ಮ, ಇಂದು ವಿಶೇಷ ?"

"ಒಳಗೆ ಹೋಗೋಣ ಅನಂತರ ಎಲ್ಲಾ."

ಎಲ್ಲರೂ ಒಳಹೊಕ್ಕರು. ಕಾಮಾಕ್ಷಿ ಮಾಡುತಿದ್ದ ಕೆಲಸವನ್ನು ಅಲ್ಲಿಯೇ ಬಿಟ್ಟು ಬಂದಳು. ಕುಶಲ ಪ್ರಶ್ನೆಗಳ ಬಳಿಕ ಕುಮುದ್ವತಿ ತಾನು ಬಂದ ಉದ್ದೇಶವನ್ನು ಮುಂದಿಟ್ಟಳು. ಕೃಷ್ಣ ಜೋರಾಗಿ ನಕ್ಕು ನುಡಿದ,

"ಮಡದಿಯರನ್ನು ನಮ್ಮ ಮೇಲೆ ಎತ್ತಿಕಟ್ಟುವ ಉದ್ದೇಶ!"

"ಹಾಗಲ್ಲಪ್ಪಾ; ನಮ್ಮ ಸಾಮಾಜಿಕ ಸುಧಾರಣೆ ಆಗಲೇಬೇಕು. ಇನ್ನೂ ಎಷ್ಟು ಕಾಲ ಹೀಗೆ ? ಎಲ್ಲರೂ ನಾಗರಿಕತೆಗೆ ಪಕ್ಕಾಗಿರಬೇಕು."

ಅವನು ಮಾತಾಡದೆ ವ್ಯಾಪಾರದ ಕಡೆಗೆ ಗಮನ ಕೊಟ್ಟ.

ಕಾಮಾಕ್ಷಿ ಆತಿಥ್ಯ ನೀಡಿ ನುಡಿದಳು "ನಾನು ಸಂಘ ಸದಸ್ಯಳಾಗುವೆ. ಅಲ್ಲದೆ ಇಲ್ಲಿಯ ಪರಿಸರದ ಹೆಂಗಸರನ್ನು ಕಂಡು ಮಾತಾಡಿ ಸದಸ್ಯರನ್ನು ಕೂಡಿಸಿ ಕೊಡುವೆ. ಸದಸ್ಯತನದ ಶುಲ್ಕ ಎಷ್ಟು ?"

"ಸಧ್ಯ, ಹತ್ತು ರೂಪಾಯಿ ಹಾಕೋಣ ಎಂದುಕೊಂಡಿರುವೆ. ಬಡ ಹೆಂಗಸರು ಅಷ್ಟು ಹಣ ಕೊಡಲಾರರು ಎಂದರೆ ಐದು ರೂಪಾಯಿ ಮಾಡಬಹುದು. ಎಲ್ಲವೂ ಎಷ್ಟು ಜನ ಕೂಡುತ್ತಾರೆ ಕೆಲಸ ಹೇಗೆ ನಡೆಯುತ್ತೆ ಎಂಬುದರ ಮೇಲೆ ಅವಲಂಬಿಸುತ್ತದೆ. ಈಗಿನ್ನೂ ಆರಂಭ ಹಂತದಲ್ಲಿರುವುದರಿಂದ

ದೃಢವಾಗಿ ಹೇಳುವಂತಿಲ್ಲ. ಕಲಿತ ಹೆಂಗಳೆಯರು ಮಾತ್ರ ಇರಲಿ. ಸರಿಯಾಗಿ ಸಹಕರಿಸುವಂತಹವರನ್ನು ಮಾತ್ರ ಕೂಡಿಸು."

ಕಾಮಾಕ್ಷಿ ಒಪ್ಪಿಗೆಯಿತ್ತು ಬೀಳ್ಕೊಟ್ಟಳು.

ಅನಂತರ ಅಲ್ಲೇ ಹತ್ತಿರದಲ್ಲಿ ಸೋಮುವಿನ ಮನೆ.

ಸೋಮು ಇರಲಿಲ್ಲ. ಅವನ ಪತ್ನಿ ಶಾಂತಿಯೇ ವ್ಯಾಪಾರ ಹಿಡಿದಿದ್ದಳು. ಅಂಗಳದಲ್ಲಿ ಕಾರಿನಿಂದಿಳಿದ ಇವರನ್ನು ನೋಡುತ್ತಲೂ ಸಂತಸದಿಂದ ಸ್ವಾಗತಿಸಿದಳು ಅವಳು.

"ಬನ್ನಿ ಅಮ್ಮಾ! ಎಷ್ಟು ದಿವಸಗಳ ಮೇಲೆ ಬರುತ್ತಿದ್ದೀರಿ? ಬನ್ನಿ, ಬನ್ನಿ."

"ಸೋಮು ಎಲ್ಲಮ್ಮಾ?"

"ಅವರಿಗೇನು? ಎಲ್ಲಾದರೂ ತಿರುಗಿಕೊಂಡಿರುತ್ತಾರೆ. ಅನಂತರ ಬಂದರೆ ಗಲಾಟೆ."

ಒಂದು ಗಳಿಗೆ ತಡೆದು ಪುನಃ ಮುಂದುವರಿದಳು ಶಾಂತಿ "ನಾನು ಒಳಗೂ ಗೆಯ್ಯುತ್ತ ವ್ಯಾಪಾರ ಮಾಡಿದರೆ ಹಣ ಬಂದಿದ್ದು ಸಾಲದು ಅಂತ ಗಲಾಟೆ. ಎಷ್ಟು ವ್ಯಾಪಾರವೋ ಅಷ್ಟು ಬರುತ್ತೆ. ಹೆಚ್ಚು ಹಣ ಎಲ್ಲಿಂದ ತರಲಿ ನಾನು?"

ಒಳಗಡೆ ಎಲ್ಲರೂ ಕುಳಿತರು ಕುಮುದ್ವತಿ ತಾನು ಬಂದ ಉದ್ದೇಶವನ್ನು ತಿಳಿಸಿ, ಸಂಘ ಸದಸ್ಯತ್ವವನ್ನು ಪಡೆದುಕೊಳ್ಳಲು ಹೇಳಿದಳು ವಿವರಿಸಿ. ಅವಳು ವಿಷಯವನ್ನು ಮನದಟ್ಟು ಮಾಡಿಕೊಳ್ಳುತ್ತ "ಖಂಡಿತ ನಮಗೆ ಇಂತಹ ಸಂಘದಾಶ್ರಯ ಬೇಕೇಬೇಕು. ಆಗಲಿ, ನಾನು ಸದಸ್ಯಳಾಗುವೆ. ಇನ್ಯಾರಾದರೂ ಇದ್ದರೆ ಸೇರಿಸಲು ಪ್ರಯತ್ನಿಸುವೆ," ಎಂದಳು.

ಅವಳು ನೀಡಿದ ಸರಳಾತಿಥ್ಯವನ್ನು ಸ್ವೀಕರಿಸಿ ಹೊರಟರು ಅಲ್ಲಿಂದ. ಅಂಗಳದ ಕಲ್ಲೆಡವಿ ಕಾಲು ಉಳುಕಿತು ಕುಮುದ್ವತಿಗೆ. ಸ್ವಲ್ಪೇ ಹೊತ್ತಿನೊಳಗಾಗಿ ಬುರ್ರನೆ ಊದಿಕೊಂಡಿತು ಕಾಲು ಹೆಜ್ಜೆ. ಮುಂದಿನ ಮನೆಮನೆ ಸುತ್ತುವಿಕೆ

ಯನ್ನು ಮೊಟಕುಗೊಳಿಸಿ ಹಿಂದಿರುಗಿದರು ಮನೆಗೆ. ಕಾಲುನೋವು ತುಂಬಾ ಇತ್ತು. ನಗರಕ್ಕೆ ಹೋಗಿ ಡಾಕ್ಟರಿಗೆ ತೋರಿಸಿ ಚಿಕಿತ್ಸೆ ಪಡೆಯದೆ ಗತ್ಯಂತರ ವಿಲ್ಲ. ರಾಮನಾಥ ಬಂದು ಅದುಮಿ ನೋಡಿದ. 'ಹಾ' ಎಂದಳು ಮಡದಿ.

ಅವಳು ನುಡಿದಳು "ಸ್ವಲ್ಪದರಲ್ಲಿ ತಪ್ಪು ಹೆಜ್ಜೆಯಿಟ್ಟೆ. ಜಾರಲಿಲ್ಲ. ಬೀಳಲಿಲ್ಲ. ಅಷ್ಟಕ್ಕೇ ಹೀಗಾಯಿತು."

"ಆಗಲಿ, ಹೋಗೋಣ."

ಇಬ್ಬರೂ ನಗರದ ಆಸ್ಪತ್ರೆಯ ಅಭಿಮುಖವಾಗಿ ಪಯಣಿಸಿದರು.

o o o o

ವಸಂತ–ವಾಸುರವರಿಗೆ ಬಾಳೆಕಾಯಿ ಕದ್ದು ಮುಖಭಂಗವಾದ ಮೇಲೆ ಮುಂದೇನು ? ಎಂಬ ಪ್ರಶ್ನೆ ಧುತ್ತೆಂದು ಎದುರು ನಿಂತಿತು.

ಸ್ನೇಹ–ಸಹಕಾರಗಳು ಕಡಿದು ಹೋದುವು. ದ್ವೇಷ ಸಾಧನೆಗೂ ಅವಕಾಶವಾಗದಷ್ಟು ಮುಜುಗರ ಮನಸ್ಸಿಗೆ, ಮೈ ಮುರಿದು ಕೆಲಸ ಮಾಡುವ ಹುಮ್ಮಸ್ಸು ಅಥವಾ ಆಸ್ಥೆ ಅಥವಾ ಸಂಜೀವನ ಸ್ಫೂರ್ತಿ ಅಥವಾ ಸುಸಂಸ್ಕಾರ ಯಾವುದೂ ಇಲ್ಲದ ಜಡಮತಿಗೆ ಕುಹಕತನವೇ ನಿತ್ಯ ಚರಿ. ವಾಸು ಮನೆಗೆ ಬಂದಾಗ ವಸಂತ ಅಂದ,

"ನಾವು ಪಡೆದುಕೊಂಡ ಭಾಗ ಫಲವತ್ತಾದುದಲ್ಲ. ಅಪ್ಪಾಜಿಯ ಭಾಗ ಸದಾ ಹಸುರು ಕುಕ್ಕುತ್ತದೆ. ಹೆಚ್ಚು ಗಮನ ಕೊಡುತ್ತಾರೆಂದರೂ ಅವರು ಇಟ್ಟುಕೊಂಡ ಭಾಗ ನಿಜವಾಗಿಯೂ ಫಲವತ್ತಾದುದು. ನಮ್ಮಿಬ್ಬರ ಜವಿಾನು ಅಷ್ಟಕ್ಕಷ್ಟೇ. ನಾವು ಮೋಸ ಹೋದುದು ನಮಗೇ ಗೊತ್ತಿಲ್ಲ ಬಿಡು."

"ಈಗೇನೂ ಮಾಡುವಂತಿಲ್ಲ. ಭಾಗಗಳಾಗಿ ರಿಜಿಸ್ಟರ್ ಆಗಿ ಹೋಗಿದೆ. ಇನ್ನು ಕೇಳುವುದಕ್ಕೂ ಆಗುವುದಿಲ್ಲ. ಬೇರೆ ಯಾವುದಾದರೂ ರೀತಿಯಲ್ಲಿ ಕಕ್ಕಿಸಿಕೊಳ್ಳಬೇಕು."

ಕಕ್ಕಿಸುವುದೆಂದರೆ ಮಂತ್ರ ಮಾಟ ಮಾಡಿಸುವುದೊಂದೇ ದಾರಿ. ಯಾರಾದರೂ ಅಂತಹ ಮಂತ್ರವಾದಿಗಳಿದ್ದರೆ.......ಏನಾದರೂ ಮಾಡಬಹು

ದಿತ್ತು. ಈ ಪರಿಸರದಲ್ಲಿ ಅಂತಹವರಾರು ? ಪ್ರಯೋಗನೆಂದರೆ ಗುರಿ ತಪ್ಪಲೇ ಬಾರದು. ಹಾಗಿದ್ದರೆ ಮಾತ್ರ ಮಾಡಿಸಬೇಕು. ಅಲ್ಲದೆ, ಹಿಡಿದ ಕೆಲಸ ಕೈಗೂಡದಿದ್ದರೆ ಏನು ಪ್ರಯೋಜನ ?"

"ಹೌದು...ಹೌದು."

ಇಬ್ಬರೂ ಯೋಚನಾಕ್ರಾಂತರಾದರು. ಸ್ವಲ್ಪ ಹೊತ್ತು ರುದ್ರಮೌನ ರಾಜ್ಯವಾಳಿತು. ಅನಂತರ ವಸಂತನೆಂದ "ಈ ಕಾಲದಲ್ಲಿ ಮಂತ್ರ ಮಾಟಕ್ಕೆ ಬೆಲೆಯಿಲ್ಲ. ಅಂತಹ ಪ್ರಭಾವಯುತ ಮಂತ್ರವಾದಿಗಳೂ ಇಲ್ಲ. ಅಂದಮೇಲೆ ಗೂಂಡಾಗಿರಿ ಸೂಕ್ತ ಕ್ರಮ."

"ಊರಿಗೆ ದಣಿಯಾಗಿ ಬಾಳಿದವರ ಮೇಲೆ ಗೂಂಡಾಗಿರಿಗೆ ಮುಂದಾಗುವವರಾರು ? ಇದು ದೊಡ್ಡ ಪ್ರಶ್ನೆ. ಯಾರನ್ನಾದರೂ ಛೋಡಿಸುವುದೆಂದರೆ ಅದರ ಬಣ್ಣ ಬಯಲಾಗುವುದು ಖಂಡಿತ. ಇದನ್ನೆಲ್ಲಾ ಗಮನದಲ್ಲಿಟ್ಟು ಕೊಂಡೇ ಕೆಲಸ ಮಾಡಬೇಕು."

ಇಬ್ಬರಲ್ಲೂ ವಿಷಯ ಚರ್ವಿತಚರ್ವಣವಾದರೂ ದೃಢ ನಿರ್ಧಾರ ಮೂಡಲಿಲ್ಲ. ವಾಸು ಸ್ವಲ್ಪ ಹೊತ್ತಿದ್ದು ಹಿಂದಿರುಗಿ ಹೋದ.

ಮಧ್ಯರಾತ್ರಿ ! ರಾಮನಾಥನ ಕಣದಲ್ಲಿದ್ದ ಭತ್ತದ ಮೆದೆಗೆ ಬೆಂಕಿ ಬಿತ್ತು !!

ಚಟಚಟಲ್ ಸದ್ದು ! ಬೆಂಕಿಯ ಕೆನ್ನಾಲಿಗೆಗಳ ಆಮೋದದಾವೇಶ ! ಭಯಂಕರ ಭೀಭತ್ಸ ದೃಶ್ಯ ಮಲಗಿದ್ದವರನ್ನು ತಟ್ಟನೆ ಬಡಿದೆಬ್ಬಿಸಿತು. ನೋಡಿದರೆ ಬೆಂಕಿಯ ಬೆಳಕಿನಲ್ಲಿ ಕಾಣಿಸಿತೊಂದು ವ್ಯಕ್ತಿಯ ಕರ್ರನೆಯ ಕರಿಯ ಚಿತ್ರ! ಆಗಲೇ ದೂರದಲ್ಲಿ ಧಾವಿಸಿ ಓಡುತ್ತಿದೆ ! ಒಡನೆ ಆಳುಗಳೆಲ್ಲಾ ಗಡಬಡಿಸಿ ನೀರು ತರುತಿದ್ದರೆ ಒಂದಿಬ್ಬರು ಕಿಚ್ಚಿಟ್ಟು ಓಡುತಿದ್ದ ವ್ಯಕ್ತಿಯನ್ನು ಬೆನ್ನಟ್ಟಿದರು. ಸುತ್ತಲೂ ಮುಳ್ಳು ತಂತಿಯ ಬೇಲಿಯಾದ್ದರಿಂದ ತಟ್ಟನೆ ಹತ್ತಿ ಹಾರಲಾಗದೆಯೇ ಸಿಕ್ಕಿಬಿದ್ದ ಕಳ್ಳ. ಕತ್ತಲಲ್ಲಿ ಯಾರೆಂದು ಗುರುತು ಹತ್ತದೆ ಚೆನ್ನಾಗಿ ಹೊಡೆತ ಬಿಟ್ಟು ಒಡ್ಡಿ ಕೊಟ್ಟಿಗೆಯ ಕೋಣೆಯಲ್ಲಿ ಕೂಡಿಹಾಕಲು ಸಮರ್ಥರಾದರು ಆಳುಗಳು. ಎಷ್ಟು ನೀರು ಒಯ್ದರೂ ಭತ್ತದ ಮೆದೆಯನ್ನು

ಉಳಿಸಿಕೊಳ್ಳಲಾಗಲಿಲ್ಲ. ಕೊಟ್ಟಿಗೆಗೂ ಬೆಂಕಿ ದಾಟಿತು. ನಾಲ್ಕೈದು ರಾಸು ಗಳ ಕೊರಳ ಹಗ್ಗವನ್ನು ಬಿಚ್ಚಿದರೂ ಇನ್ನೆರಡು ಮೂರು ಹಸುಗಳು ಸುಟ್ಟು ಭಸ್ಮೀಭೂತವಾದುವು. ಕೇವಲ ಒಂದು ತಾಸಿನೊಳಗಾಗಿ ಅನಾಹುತ ನಡೆದು ಹೋಯಿತು ! ಎಲ್ಲರ ಪ್ರಯತ್ನದಿಂದ ಬೆಂಕಿ ಅಷ್ಟಕ್ಕೆ ನಂದಿಹೋಗಿ ದೊಡ್ಡ ಅನಾಹುತವಾಗುವುದು ತಪ್ಪಿತು. ಮರ್ಮರ ಮರುಗಿದರು ಜನ. ಬೆಂಕಿಯ ಭೀಭತ್ಸ ಭಯಾನಕ ಆಘಾತದಲ್ಲಿ ತಲ್ಲೀನರಾದ ಜನರಿಗೆ ಕೂಡಿಹಾಕಿದ ವ್ಯಕ್ತಿಯ ಕಡೆಗೆ ಗಮನ ಹರಿಯಲವಕಾಶವಾಗಲಿಲ್ಲ. ಭಸ್ಮವಾಗಿದ್ದ ಬೆಂಕಿಯ ರಾಶಿಗೆ ಕೊನೆಯ ಕಿಡಿಯನ್ನು ಆರಿಸುವವರೆಗೂ ನೀರು ಹೊತ್ತು ಹುಯ್ಯುವ ಗಡಿಬಿಡಿ–ಗದ್ದಲ ಗಲಾಟೆಗಳು ಬೆಳಗಾಗುವವರೆಗೂ ನಡೆದುವು. ಅರ್ಧ ಕೊಟ್ಟಿಗೆ ಸುಟ್ಟಿದೆ. ಮೂರು–ನಾಲ್ಕು ಹಸು–ಕರುಗಳು ಸತ್ತು ಬಿದ್ದಿವೆ ! ಉಳಿದ ಹಸುಗಳು ದಿಕ್ಕಾಪಾಲಾಗಿ ಎಲ್ಲಿ ಓಡಿದುವೋ......ಬೆಂಕಿ ಅಡಗಿದರೂ ಕಾವು ಅಡಗಿರಲಿಲ್ಲ. ಉಷ್ಣೋಷ್ಣ ಹಬೆ—ಉಷ್ಣೋಷ್ಣ ವಾಯು. ಉಷ್ಣೋಷ್ಣವೇ ಎಲ್ಲಾ !

ಇಡೀ ಮನೆಯಲ್ಲಿ, ಪರಿಸರದ ಆಳುಗಳ ಬಿಡಾರದಲ್ಲಿ ಒಂದು ಹನಿಯೂ ನೀರಿಲ್ಲ. ಬಾವಿಯಲ್ಲೂ ಸೇದಿಸೇದಿ ಹೊಯ್ಯಲಾಗಿದೆ. ಅದರಲ್ಲೂ ಅರ್ಧ ಖಾಲಿ! ಎಲ್ಲಾ ಬಿಂದಿಗೆಗಳೂ ಖಾಲಿ ! ಖಾಲಿ !

ಬೆಳ್ಳಗೆ ಬೆಳಗಾಯಿತು.

ಅದುವರೆಗೂ ನೆನಪಿರದ ಕಳ್ಳ ವ್ಯಕ್ತಿಯ ಕಡೆಗೆ ಎಲ್ಲರ ಗಮನ ಒಮ್ಮೆಗೇ ಹರಿಯಿತು. ಕೂಡಲೇ ಒಡ್ಡಿ ಕೊಟ್ಟಿಗೆಯ ಕಡೆಗೆ ಎಲ್ಲರೂ ಧಾವಿಸಿದರು. ಆಳು ಗಳು ಹೋಗಿ ಕದ ತೆರೆದರೆ ಮೈ ಮುದುರಿ ಕುಳಿತಿದ್ದಾನೆ ವಾಸು !

"ಓ ! ಸಣ್ಣ ಬುದ್ಧಿ ಸ್ವಾಮಿ !"

ರಾಮನಾಥ ಮತ್ತು ಎಲ್ಲರೂ ಅತ್ತ ಧಾವಿಸಿದರು. ಸೀತಮ್ಮ ಕುಮು ದ್ವತಿ ರಂಗಮ್ಮ ಎಲ್ಲರೂ ಡಂಗು ಬಡಿದು ನೋಡಿದರು ! ಇಬ್ಬರು ಆಳುಗಳು ಅವನನ್ನು ಹೊರಕ್ಕೆ ಎಳೆತಂದರು !

ರಾಮನಾಥ ಒಂದೇ ನಿರ್ಧಾರದಿಂದ ಅಂದ—"ಬಿಟ್ಟುಬಿಡಿ. ಇಂತಹವರ ಮುಖ ನೋಡಬಾರದು ! ರಾತ್ರಿ ಬೇರೆ ಏಟು ಬಿದ್ದಿದೆ !"

"ಅಯ್ಯಾ ! ರಾತ್ರಿ ನಮಗೆ ಎಷ್ಟು ಗೋಳಾಗಿದೆ. ಮೇಲಾಗಿ ಎಷ್ಟು ನಷ್ಟ ? ಸುಮ್ಮನೆ ಏಕೆ ಬಿಡಬೇಕು. ಊರೊಳಗೆ ತೆಂಗಿನಚಿಪ್ಪಿನ ಹಾರ ಹಾಕಿ ಮೆರವಣಿಗೆ ಮಾಡಿಬಿಡುತ್ತೇವೆ !"

"ಬೇಡ ! ಆಗಿದ್ದು ಆಗಿಹೋಯ್ತು. ಇನ್ನೇಕೆ ಜಿದ್ದು ? ಬಿಟ್ಟುಬಿಡುವುದೇ ಲೇಸು !"

ಆದರೆ ಆ ಜನ ಕೇಳಬೇಕಲ್ಲ. ಕತ್ತಿಗೊಂದು ತೆಂಗಿನಚಿಪ್ಪಿನ ಹಾರ ಹಾಕಿ ತಲೆಗೊಂದು ಮುಳ್ಳಿನ ಕಿರೀಟ ಇಟ್ಟು ಊರೊಳಗೊಂದು ಸುತ್ತು ಮೆರವಣಿಗೆ ಮಾಡಿಸುತ್ತ ಕೂಗಿದರು ಜನ.

ಬಂಗಾರದ ಬೆಳೆಗೆ ಬೆಂಕಿ ಇಟ್ಟವರು ಇವರೇ ಹೊಯ್ !
ಇವರೇ ಸಣ್ಣ ಬುದ್ಧಿಯವರು ಹೊಯ್ ! ಹೊಯ್
ಮೂಕ ಧೇನುಗಳನ್ನು ಸುಟ್ಟವರು ಇವರೇ ಹೊಯ್ ! ಹೊಯ್ !

೦ ೦ ೦ ೦

ಕುಮುದ್ವತಿಯ ಕಾಲು ಊತ ಇಳಿಯಲಿಲ್ಲ. ನೋವು ಇದ್ದುದರಿಂದ ಸರಾಗವಾಗಿ ನಡೆಯುವುದೂ ಕಷ್ಟ.

"ನೀನು ರಾತ್ರಿ ನೀರು ಸೇದುವಾಗ ಕಾಲಿನ ಮೇಲೆ ತುಂಬಾ ಭಾರ ಬಿಟ್ಟಿದ್ದಿ. ನೀನು ನೀರು ಸೇದಬೇಡವೆಂದು ಎಷ್ಟು ಹೇಳಿದರೂ ಕೇಳಲಿಲ್ಲ. ನಾನು ಸೇದಿಕೊಡುತಿದ್ದೆ" ಎಂದಳು ಸರಸು ಅತ್ಯಂತ ಮೂಕ ವೇದನೆಯಿಂದ.

ಸೀತಮ್ಮ, ರಂಗು ಎಲ್ಲರೂ ಹಾಗೇ ಅಂದರು. "ಆದರೆ ಆಗಿನ ಸಂದರ್ಭದಲ್ಲಿ ನೀರು ಸೇದಿ ಸೇದಿ ಹಾಕದೆ ಗತ್ಯಂತರವಿರಲಿಲ್ಲ. ಎಲ್ಲರೂ ತಂಬಿಗೆಯಲ್ಲಿ ಬಿಂದಿಗೆಯಲ್ಲಿ ಒಂದೇ ಸಮನೆ ಹೊತ್ತೊಯ್ಯುತ್ತಿರುವಾಗ ಸೇದುವವರು ಬೇಕೇ

ಬೇಕಿತ್ತು. ಏನಾದರಾಗಲಿ ಪೂರ್ತಿ ಮನೆಮಠ ಸುಟ್ಟು ಹೋಗುವಂತಹ ಅಗಾಧವಾದ ಗಂಡಾಂತರ ತಪ್ಪಿತಲ್ಲ ಎಂಬುದೊಂದು ಸಮಾಧಾನ ಮನಸ್ಸಿಗೆ. ಆದರೂ, ಆ ಘೋರ ದೃಶ್ಯ ಎಷ್ಟು ಭಯಾನಕವಾಗಿತ್ತು ? ಹಸುಗಳ ಮರಣ....ಭತ್ತದ ಮೆದೆಯ ಭಸ್ಮ ಸಾಮಾನ್ಯವೇ ಸರಸು ? ಎಂಥ ನೀಚ ತನ !"

ಸರಸು ಅಂದಳು "ನೀನಿನ್ನು ನಡೆಯುವಂತಾಗಬೇಕಾದರೆ ಒಂದು ವಾರ ಕಾಲವಾದರೂ ಬೇಕು. ನಾನು ಅಮ್ಮನ ಮನೆಗೆ ಹೋಗುವೆ. ನೀನು ಸಧ್ಯ ಹೊರಹೊರಡುವಂತಿಲ್ಲವಲ್ಲಾ ?"

"ನೀನು ಮಾತ್ರ ಒಂದು ನೆನಪಿನಲ್ಲಿಟ್ಟುಕೊ ಸರಸು. ಹೆದರಿ ಹೈರಾಣಾಗಿ ತಲೆ ಬಾಗಿದರೆ ಮುಗಿಸುತ್ತಾನೆ ನಂದೀಶ ! ಆದ್ದರಿಂದ ಧೈರ್ಯವಾಗಿರು." ಅವಳ ಕೊರಳನ್ನು ತೋಳ್ಬಳ್ಳಿಯಿಂದ ಸುತ್ತು ಬಳಸಿ ಆಲಂಗಿಸಿ ನಲ್ಮೆಯಿಂದ ನುಡಿದಳು ಕುಮುದ್ವತಿ.

ಕಣ್ಣಿನಲ್ಲಿ ನೀರಾಡಿಸುತ್ತ ನುಡಿದಳು ಅವಳು, "ಒಂದೊಂದು ದಿನವನ್ನೂ ಕಳೆಯುವುದೂ ಕಷ್ಟವೇ. ಹಿಂಸೆ ಎಂದರೆ ರಣಹಿಂಸೆ."

ರಾಮನಾಥ ತನ್ನ ದನಿಯನ್ನು ಹರಿಯಬಿಟ್ಟು "ಹೆಣ್ಣಿನ ಶೋಷಣೆ ನಡೆಯುತ್ತಿರುವುದು ಸತ್ಯವೇ. ಅಪಮೌಲ್ಯ ಗೈದು ಮೂಲೆಗೊತ್ತಿ ಭೋಗ ವಸ್ತುವಾಗಿ ಅಂಕೆಯಲ್ಲಿಡುವುದೂ ದಿಟ. ವಿದ್ಯಾವಂತರು ಕೂಡ ಇದರಿಂದ ಹೊರತಲ್ಲ. ಇಂಥ ಪರಿಸ್ಥಿತಿಯಲ್ಲಿ ಸ್ತ್ರೀಯರು ಸಿಡಿದೇಳಬೇಕೇ ಹೊರತು ಮೂಕಪಶುಗಳಾಗಿರಬಾರದು."

"ಸಿಡಿದೇಳುವುದು ಇನ್ನೂ ಕಷ್ಟ ರಾಂದಾದಾ ! ತಲೆ ಬಗ್ಗಿಸಿ ನಡೆದರೆ ಒಂದೊಂದು ದಿನ ಕಳೆಯಬಹುದು ನೋಡಿ. ಬಾಯಿ ಬಿಟ್ಟರೆ ಮೂಲೆ ಮೂಲೆಯಲ್ಲಿರುವ ಕೋಲು ಕತ್ತಿಗಳು ಎಚ್ಚೆತ್ತುಕೊಳ್ಳುತ್ತವೆ.ಅದಕ್ಕೇನು ಮಾಡೋಣ ಹೇಳಿ ? ಎಲ್ಲರನ್ನೂ ನಿಮ್ಮ ನೇರಕ್ಕೆ ನೋಡಿದರೆ ಆಗುತ್ತದೆಯೇ ? ನಿಮ್ಮಂತಹವರು ಶೇಕಡಾ ಎಷ್ಟು ಮಂದಿ ಸಿಕ್ಕುತ್ತಾರೆ ಹೇಳಿ ?"

ವಾಕ್ಯಲಹರಿ ಮುಗಿಯುವ ಹೊತ್ತಿಗೆ ದನಿ ಗದ್ಗದವಾಗಿ ಕಣ್ಣುಗಳಲ್ಲಿ ನೀರು ಥಳಥಳಿಸಿತು.

ರಾಮನಾಥ ಗಂಭೀರವಾಗಿ ಎದೆಯ ಮೇಲೆ ಕೈಗಳೆರಡನ್ನೂ ಕಟ್ಟಿ ಯೋಚಿಸಿದ. ಅಂತರ್ದೃಷ್ಟಿ ಮನೆಮನೆಯನ್ನೂ ಹೊಕ್ಕು ನೋಡಿತು–ಎಲ್ಲಾ ಕಡೆಯೂ ಸ್ತ್ರೀ ಜನರಿಗೆ ಸ್ವಾತಂತ್ರ್ಯ ಸೊನ್ನೆ. ಅವರು ಗಾಡಿ ಎತ್ತುಗಳಂತೆ ಮೂಕ ಪಶುಗಳಾಗಿ ದುಡಿಯುತ್ತಿರುವುದೂ ಸತ್ಯ. ಅವರವರ ಸುಖ–ಶಾಂತಿಗಳು ಅದೃಷ್ಟಾದೃಷ್ಟಗಳ ಮೇಲೆಯೇ ಅವಲಂಬಿಸುತ್ತವೆ ಅಷ್ಟೆ. ಅದನ್ನು ಅರ್ಥೈಸುವಂತಹ ಜಾಣೆಯರು ನೊಂದು ನೋಯುತ್ತಾರೆ. ಇಲ್ಲದವರು ಅದನ್ನೆ ನಂಬಿ ಮುಳುಗಿ ಸಾಯುತ್ತಾರೆ...”

ರಾಮನಾಥ ನಿಟ್ಟುಸಿರು ಬಿಟ್ಟ. ಮಾತಾಡಲಿಲ್ಲ.

ಸೀತಮ್ಮ ನಲ್ಮೆ–ಕರುಣೆಗಳು ತುಂಬಿದ ಸಂಕಟಪೂರ್ಣ ದನಿಯಲ್ಲಿ ತನ್ನ ಸಲಹೆಯನ್ನು ಹೊರಹಾಕಿದಳು “ಏನೇ ಬರಲಿ ಕೆರೆ–ಬಾವಿ–ಬೆಂಕಿಗಳಿಗಾಹುತಿಯಾಗುವಂತಹ ಹೀನ ಕೆಲಸ ಮಾತ್ರ ಮಾಡಬೇಡ. ಅಮ್ಮನ ಮನೆಯಲ್ಲೇ ಇದ್ದುಬಿಡು.”

“ಅವರಿಲ್ಲಿ ಇರಗೊಡಿಸುತ್ತಾರೆಯೇ ಅಮ್ಮಾ?”

“ಹೋಗಲೇಬೇಡ. ಕೊಠಡಿಯೊಳಗೆ ಕದ ಮುಚ್ಚಿ ಕುಳಿತುಕೊ. ನಿನಗೆ ತೀರಾ ಕಷ್ಟಕ್ಕೆ ಬಂದರೆ ನೀನು ಇಲ್ಲಿಗೆ ಬಂದುಬಿಡು. ನಿನಗೆ ರಕ್ಷಣೆ ಕೊಡೋಣ ಪೋಲೀಸಿಗೆ ದೂರು ಕೊಟ್ಟು ನಿನಗೊಂದು ಕೆಲಸ ಹುಡುಕೋಣ. ದೇವರಿದ್ದಾನೆ, ಹೆದರಬೇಡ. ಜೀವನಕ್ಕೆ ನಾನಾ ಮಾರ್ಗಗಳಿವೆ. ಹೇಗಾದರೂ ಬದುಕು ಸಾಗುತ್ತೆ. ಒಂದುವೇಳೆ ನಿನಗೆ ಸಂಸಾರ ಮಕ್ಕಳು ಮರಿ ಬೇಕೇ ಆಗಿದ್ದರೆ ಇವನಿಂದ ಡೈವೋರ್ಸ್–ವಿವಾಹ ವಿಚ್ಛೇದನ ಪಡೆದುಕೊಂಡು ಬೇರೆ ಮದುವೆಯಾಗಲೂಬಹುದು. ನೀನು ಮಾತ್ರ ಹೆದರಬೇಡ....”

ಕುಮುದ್ವತಿ ಒಂದೇ ಸಮನೆ ಹೇಳುತ್ತಲೇ ಇದ್ದಾಳೆ. ಇವಳೇನು ಕೇಳಿದಳೋ ಬಿಟ್ಟಳೋ ಇವಳಿಗೇ ಗೊತ್ತು. ಕಲ್ಲಿಗಿಂತ ಕಲ್ಲಾಗಿ ನಿಂತಿದ್ದಾಳೆ– ಸರಸು ಮುಖಮುಡಿಯಾಗಿ.

o o o o

ಕುಮುದ್ವತಿಗೆ ಹೊಟ್ಟೆಯಲ್ಲಿ ಏನೋ ಒಂದು ಬಗೆಯ ತೊಳೆಸು–ವಾಕರಿಕೆ.

ಹಾಸಿಗೆಯಲ್ಲಿ ಹಾಗೇ ಅಡ್ಡಾಗಿದ್ದಾಳೆ. ನೀರು ಕುಡಿಯಲೇ ? ನಿಂಬೆಹುಳಿ ಶರಬತ್ ಕುಡಿಯಲೇ ? ಎಂಬ ಯೋಚನೆ ಮನದಲ್ಲಿ. ಆದರೆ ಏಳಲಾಲಾಗಲೀ, ಎದ್ದು ಕುಡಿಯಲಾಗಲೀ ಮನಸ್ಸೇ ಇಲ್ಲ. ಸರಸುವನ್ನು ಅದೇ ತಾನೇ ಬಿಟ್ಟು ಬಂದಿದ್ದಳು ಅವರ ಮನೆಗೆ. ಅಲ್ಲಿ ಜಾನಕಮ್ಮ ಒತ್ತಾಯಪೂರ್ವಕವಾಗಿ ಅರ್ಧ ಬಿಸಿ ಹಾಲು ಕೊಟ್ಟಿದ್ದಳು. ಅದು ಅಂತಹ ದುಷ್ಪರಿಣಾಮವನ್ನೇನೂ ಮಾಡಿರಲಾರದು...ಎಂಬ ಯೋಚನೆ ಮನದಲ್ಲಿ.

ಸೀತಮ್ಮ ಬಂದು ಕೇಳಿದಳು "ಏನಮ್ಮಾ ಮಲಗಿದ್ದೀ ?"

"ಹೊಟ್ಟೆಯಲ್ಲಿ ತೊಳೆಸು..."

"ಅವರ ಮನೆಯಲ್ಲಿ ಏನೂ ತಿಂದಿಲ್ಲವಷ್ಟೆ ?"

"ಇಲ್ಲ, ಅರ್ಧ ಲೋಟ ಹಾಲು ಮಾತ್ರ..."

ಅಷ್ಟರಲ್ಲಿ ರಂಗಮ್ಮ ಅಲ್ಲಿಗೆ ಬಂದಳು. "ಏಕೆ ಎಂಬುದು ನನಗೆ ಗೊತ್ತಾಯಿತಮ್ಮಾ !"

"ಏನು ಹೇಳು ?" ಕುತೂಹಲದಿಂದ ಪ್ರಶ್ನಿಸಿದಳು ಸೀತಮ್ಮ. ಅವಳ ಮರ್ಮ ತಿಳಿಯಲಿಲ್ಲ. ಕುಮುದ್ವತಿ ಶೌಚಾಲಯಕ್ಕೆ ಹೋಗಿ ವಾಂತಿ ಮಾಡಿಮಾಡಿದಳು, ಬೆಳಗ್ಗೆ ತಿಂದಿದ್ದೆಲ್ಲಾ ಸಂಪೂರ್ಣವಾಗಿ ಹೊರಬಿತ್ತು.

ರಂಗಮ್ಮ ಖುಷಿಯಿಂದ ಹೇಳಿದಳು,

"ನನಗ್ಗೊತ್ತಮ್ಮಾ ! ಮಿಂದು ಎರಡು ತಿಂಗಳಾಯಿತು ಅಮ್ಮಾವರು!"

ಸಂತೋಷದಿಂದ ಕೈಚಪ್ಪಾಳೆ ತಟ್ಟಿದಳು ಅವಳು. ಆ ಕೂಡಲೆ ಕುಮುದ್ವತಿಯ ಚೆಂಗೆನ್ನೆಗಳಲ್ಲಿ ಕೆಂಪು ಗುಲಾಬಿಯ ರಂಗು ಅರಳಿತು. ಸೀತಮ್ಮ ಪ್ರಸನ್ನಮುಖಿಯಾದಳು. ಪರಸ್ಪರ ಆನಂದಮೋದದಿಂದ ಆಲಂಗಿಸಿಕೊಂಡರು. ರಂಗಮ್ಮ ತುಂಬ ಹೃದಯದಿಂದ ಆ ಸುಖಾನಂದವನ್ನು ಸೂರೆಗೊಂಡಳು. ಸೀತಮ್ಮ "ಓ ! ನನ್ನ ಗಮನಕ್ಕದು ಬಂದೇ ಇರಲಿಲ್ಲ !"

"ನನಗೊತ್ತಿತ್ತು ಧೃಡೀಕರಣಕ್ಕಾಗಿ ಕಾದಿದ್ದೆ." "ಅಮ್ಮ, ಗಂಡು ಮಗುವೇ ಆಗಬೇಕು ನೋಡಿ ! ನಾನು ದೇವರಿಗೆ ಹರಕೆ ಹೊತ್ತಿದ್ದೇನೆ !"

ಅವಳ ಕೈಯನ್ನು ಅದುಮಿ ಹಿಡಿದು "ನಿನ್ನ ಸಂತೋಷವೇ ನನ್ನ ಸಂತೋಷ. ಆದರೆ, ಗಂಡುಮಗುವೇ ಆಗಬೇಕೆಂದೇನೂ ಇಲ್ಲ. ಯಾವುದಾದರೂ ಸರಿಯೆ."

ಸ್ವಲ್ಪ ಹೊತ್ತಿನ ಬಳಿಕ ಮತ್ತೆ ಆಯಿತು ವಾಂತಿ. ಸೀತಮ್ಮ ಶರಬತ್ತು ತಂದುಕೊಟ್ಟಳು. ಕುಡಿದು ವಿಶ್ರಾಂತಿ ಪಡೆಯುತ್ತಿರುವಾಗಲೇ ರಾಮನಾಥ ಆಗಮಿಸಿದ.

"ಏಕೆ ಮಲಗಿದ್ದೀ ? ಏನಾಯಿತು ?"

"ಸುಮ್ಮನೆ..."ಎನ್ನುವುದರೊಳಗಾಗಿ ಮುಖಬಿಂಬ ಕೆಂಪುಕೆಂಪು ತಳೆಯಿತು.

"ಓ, ನನಗೀಗ ತಿಳಿಯಿತು !"

ಮಗ್ಗುಲಲ್ಲಿ ಕುಳಿತು ಮನಸಾರೆ ಮುದ್ದಿಸಿ ಹೂ ಮುತ್ತುಗಳನ್ನೊತ್ತಿದ.

"ನಾಳೆ ಡಾಕ್ಟರ ಬಳಿಗೆ ಹೋಗಿಬರೋಣ. ನೀನಿನ್ನು ಸಂಪೂರ್ಣ ವಿಶ್ರಾಂತಿ ತೆಗೆದುಕೊ. ಸ್ವಲ್ಪ ದಿವಸ ಓಡಾಟವನ್ನು ಕಡಿಮೆ ಮಾಡುವುದೊಳ್ಳೆಯದು."

ಅವಳು ಮಾತಾಡದೆ ಮುಗುಳು ನಕ್ಕಳು. ವಿಷಯ ದೇವಯ್ಯನಿಗೂ ಮುಟ್ಟಿತು. ಆನಂದಾಬುಧಿಯಲ್ಲಿ ತೇಲಾಡಿತು ಪದ್ಮಾಲಯ.

ಮುಂದಿನ ಅಂಗಣಕ್ಕೆ ಬಂದರೆ ಅಂದಿನ ಭೀಕರ ಅಗ್ನಿ ಅನಾಹುತವ ಉಳಿಕೆ ಪಳಿಕೆ ಕಂಡೇ ಕಾಣುತ್ತದೆ. ರುದ್ರ ಭಯಾನಕ ಚಿತ್ರ ಚಿತ್ತಬಿತ್ತಿಯಲ್ಲಿ ತೇಲಿ ನಲಿಯುತ್ತದೆ. ಅರ್ಧ ಸುಟ್ಟ ಕೊಟ್ಟಿಗೆ ಹಸುಗಳ ಸಾವು ಹೃದಯವಿದ್ರಾವಕ. ಅದನ್ನು ಮನಸ್ಸಿನಿಂದ ಮರೆಯಾಗಿಸಲು ಇಚ್ಛಿ ಕುಮುದ್ವತಿಗೆ. ಅದರ ಕುರುಹನ್ನು ಆದಷ್ಟು ಬೇಗ ನಿವಾರಣೆ ಮಾಡುವುದು ಒಳ್ಳೆತೆಂಬ ಕಾರಣಕ್ಕಾಗಿ ನಾಲ್ಕಾರು ಆಳುಕಾಳುಗಳು ಕೆಲಸ ಮಾಡುತ್ತಿದ್ದಾರೆ. ಹಸುವಿನ ಕೊಟ್ಟಿಗೆಯನ್ನು ಹಿಡಿದು ಕೆಡವಿ ಹೊಸದಾಗಿಯೇ ಕಟ್ಟುವ ಉದ್ದೇಶದಿಂದ ಕೆಲಸಕ್ಕೆ ಜನಗಳನ್ನು ಹಚ್ಚಿದ್ದಾಯ್ತು. ಮಧ್ಯಾಹ್ನದ ಒಳಗಾಗಿ ಕಟ್ಟಡ ನೆಲಸಮವಾಯ್ತು.

ವರಾಂಡದಲ್ಲಿ ಕುಳಿತಿದ್ದ ಕುಮುದ್ವತಿ ರಾಮನಾಥನಿಗೆಂದಳು "ನೋಡಿ ನಾಲ್ಕು ಮಂದಿ ಆಳುಕಾಳುಗಳ ಸಂಸಾರವಿದೆ. ತುಂಬಾ ನಿಷ್ಠಾವಂತ ಆಳುಗಳು. ಅವರಿಗೆ ಕೊಟ್ಟಿರುವ ಬಿಡಾರಗಳು ಏನೇನೂ ಚೆನ್ನಿಲ್ಲ. ನಾವು ಅವರಿಗೆ ಒಂದು ಕೊಠಡಿ ಒಂದು ನಡುಮನೆ ಅಡಿಗೆ ಮನೆ ಬಚ್ಚಲು ಇರುವ ಪುಟ್ಟ ಮತ್ತು ಚೊಕ್ಕ ಮನೆಗಳನ್ನು ಕಟ್ಟಿಕೊಡುವುದು ಲೇಸು. ಈ ಸಲಿ ಕಟ್ಟಿಕೊಡೋಣ. ಇದರೊಂದಿಗೆ ಅದೂ ನಡೆಯಲಿ. ಏನು ಹೇಳುತ್ತೀರಿ ?"

"ನಾಲ್ಕು ಮನೆ ಎಂದರೆ ಎಷ್ಟಾಗುತ್ತೆ ಕುಮೂ? ಅದರ ವೆಚ್ಚವನ್ನು ಕುರಿತು ಯೋಚಿಸಿದ್ದೀಯೇನು ?"

"ಆಗುತ್ತೆ....ಹತ್ತಿರ ಹತ್ತಿರ ಎಂಭತ್ತು ಸಾವಿರವೇ ಆದೀತು. ಅದಕ್ಕೋಸ್ಕರ ಚಿಂತೆ ಬೇಡವೇ ಬೇಡ, ಜೀವಕ್ಕೆ ಜೀವ ಕೊಡುವಂತಹ ಒಳ್ಳೆಯ ಜನಗಳು ಎಂಬುದನ್ನು ಮರೆಯಬಾರದು. ಅವರ ಕೆಲಸ ಮಾತ್ರವಲ್ಲ, ಅವರ ಯೋಗಕ್ಷೇಮವನ್ನೂ ನಾವು ಗಮನಿಸಬೇಕು. ದಯವಿಟ್ಟು ಯೋಚಿಸಿ ನೋಡಿ."

ರಾಮನಾಥ ತನ್ನಲ್ಲೇ ಯೋಚಿಸಿದ. ಅವಳೆನ್ನುವುದರಲ್ಲಿ ಸತ್ಯಾಂಶವಿದೆ. ಅದನ್ನು ತೀರಾ ತಳ್ಳಿಹಾಕುವುದೂ ಸರಿಯಲ್ಲ....ಎಂಬ ಯೋಚನೆಯಲ್ಲಿರುವಾಗಲೇ ದೇವಯ್ಯ ಅಲ್ಲಿಗೆ ಬಂದ. ಅವನ ಮುಖವನ್ನು ನಿಟ್ಟಿಸಿ ನೋಡುತ್ತ ರಾಮನಾಥನೆಂದ,

"ನಾಲ್ಕು ಮಂದಿ ಆಳುಗಳಿಗೂ ನಾಲ್ಕು ಮನೆ ಕಟ್ಟಿಸೋಣ ಎನ್ನುತ್ತಾಳೆ ಕುಮೂ."

"ಏಕೆ ಆಗಬಾರದು ಅಪ್ಪಾಜಿ ? ತಿಂಗಳು ತಿಂಗಳೂ ಮೂವತ್ತು ನಲವತ್ತು ಸಾವಿರ ರೂಪಾಯಿ ತೆಂಗಿನಕಾಯಿಗಳಿಂದ ಬರುತ್ತದೆ. ಅವರಿಗೆ ಮನೆ ಕಟ್ಟಿಕೊಟ್ಟರೆ ಸಂತುಷ್ಟರಾಗುತ್ತಾರೆ. ಅವರ ಸಂತೋಷವೇ ನಮ್ಮ ಸಂತೋಷ ಅಲ್ಲವೇ ? ಎಲ್ಲರೂ ಬಲು ನಿಷ್ಠಾವಂತ ಜನ. ಮತ್ತೇಕೆ ಹಿಂಜರಿಕೆ ?"

ದೇವಯ್ಯ ತನ್ನಲ್ಲೇ ಯೋಚಿಸಿದ. ಮಗಳ ಯೋಜನೆ ಕೈಕಚ್ಚುವಂತಾದ್ದು. ಇವಳು ಇಷ್ಟು ನಿಷ್ಠುರವಾಗಿ ವರ್ತಿಸಬಾರದು ಎನಿಸಿತು ಅವನಿಗೆ. ಒಂದು ಗಳಿಗೆ ಸುಮ್ಮನಿದ್ದು ಅನಂತರ ನುಡಿದ—"ಹಣವನ್ನು ಅಷ್ಟು ಲಘುವಾಗಿ ಭಾವಿಸಬಾರದು. ಮಾಡಲೇಬೇಕಾದಲ್ಲಿ ನಿಧಾನವಾಗಿ ಮಾಡಿದರಾಯಿತು. ಮೊನ್ನೆ ತಾನೆ ನಡೆದ ಅಗ್ನಿ ಅನಾಹುತದಿಂದ ಚೇತರಿಸಿಕೊಳ್ಳುವುದೇ ಬೇಕಾದಷ್ಟಾಯಿತು. ಈಗ ಇದನ್ನೂ ಹಚ್ಚಿಕೊಂಡರೆ ಗತಿಯೇನಾಗಬೇಡ ?"

"ಅದು ನನಗೂ ಗೊತ್ತು ಅಪ್ಪಾಜೀ. ಈ ಸಾಲಿನಲ್ಲಿ ಅಲ್ಲದಿದ್ದರೆ ಮುಂದಿನ ಸಾಲಿನಲ್ಲಾದರೂ ಕಟ್ಟಬಹುದು. ಅದರ ಪ್ಲ್ಯಾನ್ ಮತ್ತು ಸಾಮಗ್ರಿಗಳ ಹೊಂದಾಣಿಕೆ ಈ ತಕ್ಷಣವೇ ಆಗುವುದಿಲ್ಲವಲ್ಲಾ ? ಮರ ಕೊಯ್ಯಿಸಬೇಕು. ಹೆಂಚು ತರಿಸಬೇಕು. ನೀರಿರುವ ತಾಣ ನೋಡಿ ಬಾವಿ ತೋಡಿಸಬೇಕು. ಈ ಎಲ್ಲಾ ಕಾರ್ಯಗಳೂ ಕೈಗೂಡಬೇಕಾದರೆ ಎಷ್ಟೆಷ್ಟೋ ಸಮಯ ವ್ಯಯವಾಗುತ್ತೆ. ಅನಂತರ ಕಾರ್ಯ ಯೋಜನೆ. ಸಧ್ಯ, ವಿಷಯವನ್ನು ಮುಂದಿಟ್ಟಿರುವೆ, ಅಷ್ಟೆ."

ಇಬ್ಬರೂ ಸಮ್ಮತಿ ಸೂಚಿಸಿದಂತೆ ಸುಮ್ಮನಾದರು.

— ೦ —

೧೩

ಕೃಷ್ಣ-ಸೋಮು ಜೋಡಿಯಾಗಿಯೇ ಹೊರಟರು ಪದ್ಮಾಲಯಕ್ಕೆ. ಅಂದು ಭಾನುವಾರ ಅರ್ಧ ದಿನ ಮಾತ್ರ ರಜೆ ಅಂಗಡಿಗಳಿಗೆ.

ಸೋಮು ಅಂದ-"ನಾವು ಇಷ್ಟು ದಿನ ಕಳೆದ ಮೇಲೆ ಹೋಗುತಿದ್ದೇವೆ. ಊರೆಲ್ಲಾ ಬೆಂಕಿ ಬಿದ್ದ ವಿಷಯ ಗೊತ್ತಾಗಿವೆ. ನಮಗೆ ತಿಳಿಯಲಿಲ್ಲವಲ್ಲಾ ? ನಾವು ತಡವಾಗಿ ಹೋಗಿ ಮುಖ ತೋರುವುದೆಂತು ?"

"ಬೇಗ ತಿಳಿಯಲಿಲ್ಲ ಎನ್ನಬಹುದು, ಆದರೂ ಸಂಕೋಚ. ಕಳೆದ ಭಾನುವಾರ ತಿಳಿದಿದ್ದರೆ ಅಂದೇ ಹೋಗಬಹುದಾಗಿತ್ತು. ನಮಗೆ ಯಾರೂ ಹೇಳಲಿಲ್ಲ. ಆ ಕಡೆಯಿಂದ ಯಾರೂ ಅಂಗಡಿಗೆ ಬರಲಿಲ್ಲ ಅದಕ್ಕೇ ನಮಗೂ ತಿಳಿಯಲಿಲ್ಲ." ಸ್ವಲ್ಪ ಹೊತ್ತು ಸುಮ್ಮನಿದ್ದು ಅನಂತರ ಸೋಮು ಪುನಃ ನುಡಿದ- "ನಾವು ಎಷ್ಟು ದುಡಿದರೂ ಕುಮುದ್ವತಿಯ ಸಮಕ್ಕೆ ಬರಲಾರೆವು. ಅವಳು ಧನವಂತನ ಕೈ ಹಿಡಿದು ಭಾಗ್ಯವಂತೆಯಾದಳು. ನಾವೂ ಅವಳ ಮಟ್ಟಕ್ಕೇರಿದರೇನೇ ಗೌರವ ಈ ಸಲಿ ನಾನು ಎಲೆಕ್ಷನ್ನಿಗೆ ನಿಂತು ಅಸೆಂಬ್ಲಿಯ ಮೆಂಬರಾಗುವ ಯೋಚನೆಯಲ್ಲಿರುವೆ."

"ಸರಿ. ನಿನಗ್ಯಾರು ಕೊಡುತ್ತಾರೆ ಓಟು ? ಅದಕ್ಕೆಷ್ಟು ಸಾಧನೆಯಾಗಬೇಕು ? ಇದೇನು ಸಾಮಾನ್ಯವೇ ? ಹಣಕ್ಕೇನು ಮಾಡುತ್ತಿ ?"

"ಯಾವುದಾದರೂ ಪಾರ್ಟಿಯಿಂದ ನಿಂತರೆ ಹೆಚ್ಚು ಕಷ್ಟವಾಗದು."

"ಯಾವ ಪಾರ್ಟಿ ನಿನ್ನನ್ನು ಚುನಾಯಿಸಲು ಸಿದ್ಧವಿದೆ ? ಮುಖ್ಯವಾಗಿ ನಿನಗೆ ಜನಸಂಪರ್ಕವಿಲ್ಲ. ಸಮಾಜ ಸೇವೆ ಏನೆಂಬುದೇ ತಿಳಿಯದು. ಇದು ಹೇಗಾಗುತ್ತೆ ?

"ಅಂಗಡಿಗೆ ಬರುವ ಗ್ರಾಹಕರು ಕಡಿಮೆ ಇದ್ದಾರೆಯೇ ? ನಾನು ಎಲ್ಲರನ್ನೂ ಕೇಳುತ್ತಿರುವೆ. ಜನ ಒಪ್ಪಿದ್ದಾರೆ. ಪ್ರಚಾರ ಮಾಡುವುದಾಗಿಯೂ ಹೇಳುತಿದ್ದಾರೆ ನೋಡೋಣ."

ನಡಿಗೆ ಚುರುಕಾಗಿ ಸಾಗಿತು. ಸುತ್ತಮುತ್ತಲೂ ಹಬ್ಬಿ ಹರಡಿದ ವನ ಶ್ರೇಣಿಯಲ್ಲಿ ಅಂಕುಡೊಂಕಾಗಿ ಹರಿದ ಹಾದಿ. ತಣ್ಣನೆಯ ವಾತಾವರಣದಲ್ಲಿ ಕಾಲ್ನಡಿಗೆ ಬಲು ಹಿತ. ತಂಗಾಳಿಯ ಮೃದುಮಂದ ತೀಟದಿಂದ ಮರ್ಮರಿಸುವ ಎಲೆಗಳ ಮರ್ಮರ ಲೀಲೆ. ಆಗೊಮ್ಮೆ ಈಗೊಮ್ಮೆ ಹಾರಾಡುವ ಪಕ್ಷಿಗಳ ಇನಿ ಇಂಚರದೊಂದಿಗೆ ಕಮನೀಯ ರಾಗವನ್ನು ಹರಿಯಬಿಡುವ ಕೋಗಿಲೆಯ ಸ್ವರ. ಮನೆ ಮುಟ್ಟಿದಾಗ ಮೊಟ್ಟಮೊದಲಿಗೇ ದೃಷ್ಟಿಗೆ ಬಿತ್ತು, ಕಣದಲ್ಲಿನ ಅಸ್ತವ್ಯಸ್ತವಾದ ಭಯಂಕರ ದೃಶ್ಯ. ಸ್ವಲ್ಪ ಹೊತ್ತು ಅಲ್ಲೇ ಕಾಲಾಡಿ ಇಬ್ಬರೂ ಒಳಬಂದರು.

ರಾಮನಾಥ ದೇವಯ್ಯನೊಂದಿಗೆ ತೋಟದ ಕಡೆ ಹೋಗಿದ್ದ. ಒಳಗಿನ ಹಜಾರದಲ್ಲಿ ಬಟಾಣಿ ಬಿಡಿಸುತ್ತ ಕುಳಿತಿದ್ದ ತಾಯಿ ಮಗಳು ದೃಷ್ಟಿಗೆ ಬಿದ್ದರು. ಕಣ್ಣು ಮುಖಗಳಲ್ಲಿ ಸ್ವಾಗತದ ಕಳೆ ಬೆಳಗಿತು.

"ಇಬ್ಬರೂ ಬನ್ನಿ ಇಲ್ಲೇ ಕುಳಿತುಕೊಳ್ಳಿ" ಎಂದಳು ಕುಮುದ್ವತಿ.

ತಾಯಿ ಮುಖಭಾವವೂ ಅದನ್ನೇ ಸೂಚಿಸಿತು. ಇಬ್ಬರೂ ಕುಳಿತುಕೊಂಡರು. ಎಲ್ಲರ ಮುಖಬಿಂಬದಲ್ಲೂ ಸುಖದುಃಖದ ಮುದ್ರೆಯೊತ್ತಿತ್ತು.

ಸ್ವಲ್ಪ ಹೊತ್ತು ಬೆಂಕಿ ಅನಾಹುತವನ್ನು ಕುರಿತು ಮಾತುಕತೆಗಳಾದುವು. ಅನಂತರ ಕೃಷ್ಣ ಕೇಳಿದ "ಅಪ್ಪಾಜಿ ಮತ್ತು ಭಾವನನ್ನು ನೋಡಲು ತೋಟಕ್ಕೆ ಹೋಗೋಣವೇ ?"

"ಅದೇಕಷ್ಟು ಅವಸರ ? ಇನ್ನೇನು ಇಷ್ಟರಲ್ಲಿಯೇ ಬಂದುಬಿಡುತ್ತಾರೆ."

ಇಬ್ಬರೂ ಆ ಮಾತಿಗೆ ಒಪ್ಪಿದರು. ರಂಗಮ್ಮ ಕಾಫಿ ತಿಂಡಿಯನ್ನು ತಂದು ಮುಂದಿಟ್ಟಳು.

ಕಾಫಿ ಮುಗಿಯುವಷ್ಟರಲ್ಲಿ ರಾಮನಾಥ ದೇವಯ್ಯನೊಂದಿಗೆ ಆಗಮಿಸಿದ. ಪಟ ಪಟನೆ ಪಾದರಕ್ಷೆಗಳ ಮೊಳಗು ಮೊಳಗಿತು.

"ಏನಪ್ಪಾ ಅಪರೂಪವಾಗಿ ಬಂದಿದ್ದೀರಿ ?"

"ಬೆಂಕಿ ಬಿದ್ದುದು ನಮಗೆ ತಡವಾಗಿ ತಿಳಿಯಿತು. ಇತರೆ ದಿನಗಳಲ್ಲಿ ಅಂಗಡಿ ಮುಚ್ಚುವಂತಿಲ್ಲ. ಭಾನುವಾರಕ್ಕಾಗಿ ಕಾಯಬೇಕಾಯ್ತು."

ದೇವಯ್ಯ ಮಾತಾಡದಿದ್ದರೂ ಮನದಲ್ಲೇ ನೊಂದುಕೊಂಡ. "ಒಂದಿನ ಮಧ್ಯಾಹ್ನ ಮುಚ್ಚಿದ್ದಿದ್ದರೆ ಏನಾಗುತಿತ್ತು ? ಇವರಿಗೆ ಧರ್ಮ ಕರ್ಮ ಇದ್ದರಷ್ಟೆ ?" ಕೂಗಿ ಹೇಳಿತು ಅಂತರ್ವಾಣಿ.

ಸೀತಮ್ಮನೂ ಹಾಗೇ ಅಂದುಕೊಂಡಳು ಮೂಕವೇದನೆ ಕರುಳನ್ನು ಇರಿಯಿತು.

೦ ೦ ೦ ೦

ಟೈಲರಿಂಗ್ ಶಿಕ್ಷಣಕ್ಕಾಗಿ ಇನ್ನೆರಡು ಮಿಷಿನ್‌ಗಳನ್ನು ಕೊಂಡುಕೊಂಡಿದ್ದಳು ಕುಮುದ್ವತಿ. ಕಲಿಕೆಯವರು ಹೆಚ್ಚುತ್ತಲೇ ಇದ್ದಾರೆ. ಅದರಲ್ಲಿ ಕಲಿತು ನುರಿತ ಹಿರಿಯ ವನಿತೆಯರು ಇತರರಿಗೆ ಕಲಿಸುವುದರಿಂದ ಅಲ್ಲಿಯೇ ತನ್ನೆಲ್ಲಾ ಸಮಯವನ್ನು ಕಳೆಯಬೇಕಿರಲಿಲ್ಲ ಕುಮುಧ್ವತಿಗೆ. ಮಕ್ಕಳ ಪಾಠಕ್ಕೆ ಹಿರಿಯ ವಿದ್ಯಾರ್ಥಿನಿಯರು ಸಹಾಯಕರಾಗುವುದರಿಂದ ಅದುವರೆಗೆ ಹಾಗೂ ಹೀಗೂ ಕಳೆದಳು. ಇನ್ನು ಮುಂದೆ ಉಪಾಧ್ಯಾಯರನ್ನು ಕರೆಯದೆ ಗತ್ಯಂತರವಿಲ್ಲ. ವಿದ್ಯಾರ್ಥಿಗಳೂ ಹೆಚ್ಚುತಿದ್ದಾರೆ. ಅಲ್ಲಿಂದ ಮುಂದಕ್ಕೆ ಪ್ರಾಥಮಿಕ ಶಾಲೆಗೆ ಕಳುಹಿಸುವ ಏರ್ಪಾಡು. ಬಾಲವಾಡಿಯಲ್ಲಿ ಅಕ್ಷರಭ್ಯಾಸ ಮತ್ತು ಆಟಗಳು ಪ್ರಧಾನ. ಸೀತಮ್ಮ ರಂಗಮ್ಮನವರುಗಳು ಕೈಬಿಡುವು ದೊರೆತಾಗ ಬಂದು ಕೂಡಿದರೂ ಸಾಲದು ಸಹಾಯ ಹಸ್ತಗಳು.

ಗೌರು ಆಗಲೇ ಹೊಲಿಗೆ ಕಲಿತುಕೊಂಡಿದ್ದಾಳೆ. ಇತರೆ ಕಲಿಕೆಯವರಿಗೆ ಸಹಾಯಕಳಾಗಿ ನಿಲ್ಲುವಷ್ಟು ನಿಷ್ಣಾತೆ. ಚುರುಕು ಬುದ್ಧಿಯ ಅವಳಿಗೆ ಹೆಚ್ಚು

ಹೇಳಿಕೊಡುವ ಅಗತ್ಯ ಬೀಳಲಿಲ್ಲ. ಆದರೆ, ಅವಳಂತೆ ಎಲ್ಲರೂ ಇರಲಿಲ್ಲ. ಕಲಿಸು ವುದೇ ಬೇಸರ ಎನಿಸುವಷ್ಟು ಕಿನಿಸಿಗೆ ಮನಸ್ಸಿಗೆ. ಆದರೂ ನಿಧಾನವಾಗಿ ಕಲಿತು ಕೊಳ್ಳಲಿ ಎಂದು ಸುಮ್ಮನಾಗುವಳು ಕುಮುದ್ವತಿ. ಬಹಳಮಟ್ಟಿಗೆ ಸೀತಮ್ಮ ಕಲಿಸುವುದರಲ್ಲಿ ಮುಂದಾಗುವಳು. ಜೊತೆಗೆ ಗೌರು ಇರುತಿದ್ದುದರಿಂದ ಹೆಚ್ಚು ಶ್ರಮವೆನಿಸದು. ಗೌರು ಗಂಡನಿಗೆ ತನ್ನ ಹೆಂಡತಿ ಟೈಲರಿಂಗ್ ಕಲಿತು ನಾಲ್ಕು ಕಾಸು ಗಳಿಸಿಕೊಳ್ಳುವಂತಾದಳೆಂದು ಹಿಗ್ಗು–ಹೆಮ್ಮೆ, ಇನ್ನೂ ಏನೇನೋ. ಅವನ ಹಿಂಸ್ರಕ ಪಶುತ್ವ ಹಾಗೇ ಕಮರಿ ಹೋಗಿತ್ತು. ಆತ ಸ್ವಲ್ಪಸ್ವಲ್ಪವಾಗಿ ಸುಧಾರಿಸಿಕೊಳ್ಳುತಿದ್ದಾನೆ.

ರಾಮನಾಥ ಕೊಟ್ಟಿಗೆಯ ಕಟ್ಟಾಣಿಕೆಯನ್ನು ಗಮನಿಸುತ್ತ ಅಂಗಳದಲ್ಲಿ ನಿಂತಿದ್ದ. ಒಂದು ವಾರದೊಳಗಾಗಿ ಕಟ್ಟಡ ಎದ್ದಿತು. ಮೇಲೆ ಹೆಂಚು ಹೊದಿಸಿ ಸಾರಣೆಯ ಕೆಲಸ ಹಿಡಿದಿದ್ದಾರೆ. ಇನ್ನೇನು ಒಂದೆರಡು ದಿನಗಳಲ್ಲಿ ಕಟ್ಟಡ ಉಪಯೋಗಕ್ಕೆ ಬರುತ್ತದೆ. ಭತ್ತದ ಮೆದೆಯ ಭಸ್ಮರಾಶಿಯನ್ನೆಲ್ಲಾ ಬಳಿದು ಸ್ವಚ್ಛಗೊಳಿಸಿದ್ದಾರೆ. ಅಗ್ನಿ ಅನಾಹುತದಿಂದ ಆದ ನಷ್ಟ ಸಣ್ಣದೇನೂ ಅಲ್ಲ. ರಾಮನಾಥ ವಿಧಿಯಿಲ್ಲದೆ ಸಹಿಸಿಕೊಂಡಿದ್ದ.

ವಸಂತ ವಾಸುರವರಿಗೆ ಆದ ಮುಖಭಂಗದಿಂದ ಹೊರಗೆಲ್ಲೂ ತಲೆ ಹಾಕು ತ್ತಲಿಲ್ಲ. ಗದ್ದೆ ತೋಟಗಳ ಕೆಲಸ ಅಲ್ಲಲ್ಲೇ ನಿಂತುಹೋದುವು. ಮಾನಸಿಕ ನೆಮ್ಮದಿಗೆ ಮದ್ಯ ಮಾದಕ ವಸ್ತುಗಳ ಮರೆ ಹೋಗುವುದು ಅನಿವಾರ್ಯ ವಾಯಿತು ಅವರಿಗೆ.

ವಸಂತನ ಮಡದಿ ಪತಿಯ ದುಶ್ಚಟಗಳನ್ನು ಬಿಡಿಸಲು ಪ್ರಯತ್ನಿಸಿ ವಿಫಲತೆಯಿಂದ ನೊಂದು ನೀರಾದಳು. ಗದ್ದೆ–ತೋಟಗಳ ಉಸ್ತುವಾರಿಯನ್ನು ತಾನೇ ಕೈಕೊಳ್ಳದೆ ವಿಧಿಯಿಲ್ಲವಾಯಿತು. ವಾಸುವಿನ ಪತ್ನಿ ಸುಮಿಯೂ ಅಷ್ಟೆ. ಆಸ್ತಿಯಿದ್ದೂ ದುಡಿಯುವ ಕೈಗಳಿಲ್ಲದೆ ಅತಂತ್ರವಾಯಿತು ಬದುಕು. ಅಪವ್ಯಯದ ಹೊರೆಯಿಂದ ಕುಗ್ಗಿತು ಜೀವ.

೦ ೦ ೦ ೦

ಬೆಂಕಿಯ ಹಗರಣದಿಂದ ಜಾಗೃತವಾದುವು ಮನಃಬುದ್ಧಿಗಳು.

ಮುಂದೇನು ಎಂಬ ಪ್ರಶ್ನೆ ಆಗಾಗ ಮತ್ತೆ ಮತ್ತೆಏಳುತ್ತಲೇ ಇರುತ್ತದೆ. ಮುಂದೆಂದೂ ಇಂತಹ ಅನಾಹುತಗಳು ಸಂಭವಿಸದಂತೆ ನಿತ್ಯ ರಕ್ಷಣೆಯನ್ನು ಪಡೆಯುವ ಯೋಜನೆಯನ್ನು ರೂಪಿಸಿಕೊಳ್ಳುವುದು ಅನಿವಾರ್ಯ. ಏನು ಮಾಡಿದರೆ ಆದೀತು ಎಂಬುದು ಚಿಂತನೀಯವಾದ ವಿಚಾರ.

ರಾಮನಾಥ ದೇವಯ್ಯನನ್ನು ಕುರಿತು ಅಂದ,

"ಶಾಶ್ವತವಾದ ರಕ್ಷಣೆಗೆ ಏನು ಮಾಡೋಣ ? ತಂತಿ ಬೇಲಿಗೆ ರಾತ್ರಿ ಹೊತ್ತು ವಿದ್ಯುಚ್ಛಕ್ತಿ ಹರಿಸಿದರೆ ಎಂಬ ಯೋಚನೆ ಬರುತ್ತೆ. ಆದರೆ, ಅದು ಅಪಾಯ. ಯಾರಾದರೂ ಮಕ್ಕಳು ಮರಿ ಮುಟ್ಟಿದಲ್ಲಿ ಕಷ್ಟ. ಅದಕ್ಕಾಗಿ ಯೋಚನೆಯಾಗಿದೆ." ಕಳಕಳಿಯ ದನಿ ಎದೆಯಾಳದಿಂದ ಹರಿದು ಬಂತು.

"ಬಿಡಿ, ಕಲಿತ ಮಕ್ಕಳೇ ಹೀಗಾದರೆ ಕಲಿಯದ ಮಕ್ಕಳ ಗತಿಯೇನು ? ಇವರು ಹೊಂದಿಕೊಂಡು ಬಾಳುವವರೂ ಅಲ್ಲ. ದೂರದಲ್ಲಿದ್ದು ತಣ್ಣಗಿರುವವರೂ ಅಲ್ಲ. ರಾತ್ರಿ ಕಾವಲು ಕಾಯುವುದೆಂದರೆ ಇಬ್ಬಿಬ್ಬರು ಬೇಕು. ವೃಥಾ ಖರ್ಚು, ವಿಪರೀತವಾಯಿತು ಇದು. ಖಂಡಿತ ದಯೆ ತೋರಬಾರದು."

"ಅವರು ಹೇಗಾದರೂ ಇರಲಿ, ಅದನ್ನಿಷ್ಟು ಮನಸ್ಸಿಗೆ ಹಚ್ಚಿಕೊಳ್ಳುವುದು ಬೇಡ. ಕೆಲವರ ಸ್ವಭಾವವೇ ಹಾಗೆ. ಅವರಿಗೆ ನಿಮ್ಮ ಧೋರಣೆ ಸರಿಯಲ್ಲ ಬದಲಿಸಿಕೊಳ್ಳಿರಿ ಎನ್ನುವುದು ಏನೇನೂ ಪ್ರಯೋಜನವಿಲ್ಲ. ಅವರ ಇಚ್ಛೆಯೇ ಇಚ್ಛೆ. ಹಠವೇ ಹಠ. ಅಂದಮೇಲೆ, ಅವರನ್ನು ಅವರ ಪಾಡಿಗೆ ಬಿಟ್ಟುಬಿಡುವುದು ಲೇಸು ; ಅಂದರೆ ಅವರಾಗಿಯೇ ಅರಿತುಕೊಳ್ಳಲೊಂದು ಅವಕಾಶ ಕೊಟ್ಟಂತಾಗುತ್ತದೆ."

'ಹೌದು' ; ಎಂಬಂತೆ.ತಲೆಯಾಡಿಸಿದಳು ಕುಮುದ್ವತಿ,

ಸ್ವಲ್ಪಹೊತ್ತು ರುದ್ರ ಮೌನ ರಾಜ್ಯವಾಳಿತು. ಅನಂತರ ರಾಮನಾಥನೇ ಮೌನ ಮುರಿದ,

"ಬೇಲಿಗೆ ವಿದ್ಯುಚ್ಛಕ್ತಿಯನ್ನು ಬ್ಯಾಟರಿಗಳ ಮೂಲಕ ಹರಿಸಿದರೆ ಪ್ರಾಣಾಪಾಯವಿಲ್ಲವೆಂದು ನನ್ನ ಸ್ನೇಹಿತ ಹೇಳಿದ. ಹೇಳಿದ. ಅದನ್ನು ಸರಿಯಾದವರಿಂದ ತಿಳಿಯಬೇಕು. ಅನಂತರ ಮಾಡುವುದೋ, ಬಿಡುವುದೋ ಯೋಚಿಸಿದರಾಯ್ತು. ಅಲ್ಲಿಯತನಕ ರಾತ್ರಿ ಕಾವಲುಗಾರರು ಇರಲೇಬೇಕು. ಕ್ಷೇತ್ರ ವಿಶಾಲವಾದುದು. ಒಳ್ಳೆಯ ಟಾರ್ಚ್ ಲೈಟುಗಳನ್ನು ಕೊಟ್ಟು, ಅವರೊಂದಿಗೆ ನಾಯಿಗಳನ್ನು ಕಳುಹಿಸಿದರೆ ಆದೀತು." ಎಂದ ದೇವಯ್ಯ.

"ಅದೇ ಸರಿಯಾದ ಕ್ರಮ." ತಲೆದೂಗಿದ ರಾಮನಾಥ.

ಡ್ರೈವರ್ ಪುಟ್ಟಸ್ವಾಮಿ ಬಂದವನು ಹೇಳಿದ,

"ಸ್ವಾಮಿ, ಈಚೀಚೆಗೆ ವಸಂತ–ವಾಸುರವರಲ್ಲಿ ಅದೇನು ಮನಸ್ತಾಪ ಬೆಳೆದಿದೆಯೋ ಏನೋ ದಿನವೂ ಕೂಗಾಡುತ್ತ ಬೈದಾಡುತ್ತ ಇರುತ್ತಾರೆ. ಸದಾ ಕಂಡಕಂಡಾಗಲೆಲ್ಲಾ ಉರಿದು ಬೀಳುವುದು ಕಾಣಿಸುತ್ತೆ. ಹೀಗೇಕಾಯಿತೋ ತಿಳಿಯದು. ಅಂತೂ ಭಯಂಕರ ದ್ವೇಷ ಕಾಣಿಸುತ್ತದೆ. ಅಂತೂ, ತಮ್ಮ ತಮ್ಮ ಮನೆಗೇ ಕಿಚ್ಚು ಹಚ್ಚುವುದಕ್ಕೂ ಹೇಸುವುದಿಲ್ಲ...ಅವರು."

"ಅದೇಕೆ ? ಅವರವರೊಳಗೆ ದ್ವೇಷ ಹುಟ್ಟಲು ಕಾರಣ ?"

"ದೇವರಿಗೇ ಗೊತ್ತು."

ಗಗನದೆಡೆಗೆ ಕೈತೋರಿದ ಪುಟ್ಟಸ್ವಾಮಿ.

"ಇಬ್ಬರೂ ಕುಡಿತ ಬೇರೆ ಕಲಿತಿದಾರಂತೆ. ಕುಡಿತ ಅಂದಮೇಲೆ ಇಂತಹದೆಲ್ಲಾ ಆಗಲೇಬೇಕು. ಏನೂ ಮಾಡುವಂತಿಲ್ಲ." ವಿಷಾದ ವಾಣಿಯಲ್ಲಿ ನುಡಿದ ರಾಮನಾಥ.

"ಅವರಿಬ್ಬರಿಗೂ ಬುದ್ಧಿ ಹೇಳುವಂತಹವರು ಯಾರೂ ಇಲ್ಲವೇ ?" ಕೇಳಿದಳು ಕುಮೂ.

"ಯಾರು ಹೇಳಿದರೂ ಇವರು ಕೇಳಬೇಕಲ್ಲ ?"

"ಅಪ್ಪಾಜೀ, ನಾವೆಲ್ಲಾ ನಿಮ್ಮಲ್ಲಿ ಎಷ್ಟೊಂದು ಗೌರವ ಭಾವನೆಯನ್ನು ಇಟ್ಟುಕೊಂಡಿದ್ದೇವೆ. ಈ ಕಾಲದ ಮಕ್ಕಳ ರೀತಿ ನೀತಿಗಳೇ ತೀರ

ವಿಭಿನ್ನ. ಸಹಕಾರವಿಲ್ಲದಿದ್ದರೆ ಹೋಗಲಿ. ಪ್ರೀತಿ ಗೌರವಗಳಿದ್ದಿದ್ದರೆ ಸಾಕಿತ್ತು. ಸದ್ವಂಶಸ್ಥರಾಗಿ ಹೀಗಿದ್ದರೆ ಹೇಗೆ? ಮುಂದೆ ಮಕ್ಕಳು ಇದೇ ದಾರಿ ಹಿಡಿಯುತ್ತಾರೆ ; ತಾವು ಆ ಪ್ರಸಂಗದಲ್ಲಿ ಸಿಕ್ಕಿದಾಗ ಗೊತ್ತಾಗುತೆ ್ಣಡಿ."

ಜಿಗುಪ್ಸೆ–ತಿರಸ್ಕಾರಗಳ ವಿಷಾದಕಳೆ ಎಲ್ಲರ ಮುಖಗಳ ಮೇಲೂ ಬೆಳಗಿತು.

೦ ೦ ೦ ೦

ಸರಸಿ ತಾಯಿ ಜಾನಕಮ್ಮ ಬಂದಾಗ ಬೆಳಗಿನ ಹತ್ತರ ಸಮಯ. ನಡೆದುಕೊಂಡೇ ಬಂದಿದ್ದಾಳೆ. ನಡೆದ ಆಯಾಸವೋ ಒಡಲು ತಳಮಳವೋ ಯಾವುದೋ ಮುಖವರ್ಣವನ್ನು ಕಳೆಗುಂದಿಸಿವೆ. ವೇದನಾಭರಿತವಾದ ದೀನ ಛಾಯೆ ಕಣ್ಣುಗಳಲ್ಲಿ.

"ಬನ್ನಿ ಜಾನಕಮ್ಮ, ಏಕೆ ತುಂಬ ಸೊರಗಿದ್ದೀರಿ ? ಸರಸು ಮನೆಯಲ್ಲಿ ದ್ದಾಳೆಯೇ ?"

ಅವಳನ್ನು ಅತ್ಯಾದರದಿಂದ ಬರಮಾಡಿಕೊಳ್ಳುತ್ತ ಕೇಳಿದಳು ಕುಮು ದ್ವತಿ.

ಜಾನಕಮ್ಮ ಕುಮುದ್ವತಿಯ ಹಿಂದೆ ಒಳಬಂದಳು. ಆಗಲೇ ಎದುರಾದ ಸೀತಮ್ಮ ಅವಳ ಮುಖಭಾವವನ್ನು ನೋಡಿ ಮನದಲ್ಲೇ ನೊಂದುಕೊಂ ಡಳು. ಕುಳಿತುಕೊಳ್ಳುವ ಮುನ್ನ ಜಾನಕಮ್ಮ ಒಡಲ ಸಂಕಟವನ್ನು ತೋಡಿ ಕೊಂಡಳು,

"ಇಲ್ಲಿಂದ ಹಿಂದಿರುಗಿದ ಮೇಲೆ ಸರಸಿ ಒಂದು ವಾರ ಮಾತ್ರ ಇದ್ದು ದಷ್ಟೆ ನಮ್ಮಲ್ಲಿ. ನಂದೀಶ ಬಂದು ಅವಳನ್ನು ಇರಗೊಡದೆ ಕರೆದುಕೊಂಡು ಹೋದ. ಅವರಿವರ ಹೇಳಿಕೆಯ ಪ್ರಕಾರ ಅವಳಿಗೆ ತುಂಬಾ ಹಿಂಸೆ ಕೊಡುತಿ ದ್ದಾನಂತೆ. ಅವಳಿಂದ ಕಾಗದವಿಲ್ಲ. ಹೋಗಿ ಕರೆದುಕೊಂಡು ಬರೋಣವೆನ್ನಿ

ಸಿದೆ. ಯಾರೋ ಹೇಳಿದ್ದು ಕೇಳಿಕೊಂಡು ಹೋಗುವುದು ಹೇಗೆ ಎನ್ನಿಸುತ್ತೆ. ಹೋಗಲೋ ಬಿಡಲೋ ಎಂಬ ಸಮಸ್ಯೆ ಬೇರೆ. ಹೋಗಲೂ ಆರೆ, ಬಿಡಲೂ ಆರೆ ಹೀಗಿದೆ ನನ್ನ ಪರಿಸ್ಥಿತಿ."

ವಾಕ್ಯಲಹರಿ ಕೊನೆಗೊಳ್ಳುವುದರೊಳಗಾಗಿ ಕಣ್ಣುಗಳಲ್ಲಿ ಕಂಬನಿಗಳು ತಟಪಟನೆ ಉದುರಿದುವು.

"ನೀವು ಚಿಂತೆ ಹಚ್ಚಿಕೊಳ್ಳಬೇಡಿ ಆ್ಯಂಟಿ. ಹೋಗಿ ನೋಡಿಕೊಂಡು ಬರುವುದೇ ಒಳ್ಳೆಯದು."

"ಮೊನ್ನೆ ಪುಷ್ಪ ಹೋಗಿದ್ದಾಳಲ್ಲ."

"ಆದರೇನಾಯಿತು ? ಹೋಗಿ ಬನ್ನಿ. ಅವಳ ಮುಖ ನೋಡಿಬಂದರೆ ನಿಮಗೆ ಸಮಾಧಾನವಲ್ಲವೇ ? ಖಂಡಿತ ಹೋಗಿ ಬನ್ನಿ. ಹೆದರುವುದೇಕೆ ?"

ಸೀತಮ್ಮನೂ ಹಾಗೇ ಅಂದಳು—"ನೀನು ಹೋಗಿ ಬರದಿದ್ದರೆ ಅವಳ ಸ್ಥಿತಿಗತಿ ತಿಳಿಯುವುದೇ ಇಲ್ಲವಲ್ಲ. ಸುಮ್ಮನೆ ಕೊರಗುವುದಾಗುತ್ತೆ. ಅದಕ್ಕಿಂತ ನೋಡಿಕೊಂಡು ಬರುವುದು ಪರಮ ಲೇಸು. ಹೋಗಿ ಬಾ ಜಾನಕಮ್ಮ."

ಕುಮುದ್ವತಿ ಒಳಗೆ ಹೋಗಿ ಸಿಹಿ ಕಾರಗಳನ್ನು ತಂದು ಆತಿಥ್ಯ ನೀಡಿದಳು. ಗೆಳತಿಗಾದ ಅಪಚಾರದಿಂದ ಮನಸ್ಸೆಲ್ಲ ಮುಜುಗರ–ಕಳಕಳಿಗಳಿಂದ ಕೂಡಿದ ಚಿಂತೆ. "ಮೈ ಮುರಿದು ದುಡಿದು ತಿನ್ನಲಾರದೆ ಹೆಣ್ಣನ್ನು ಕಾಡುವುದೆಂದರೇನು ? ನಾಚಿಕೆಯಾಗಬಾರದೇ ? ಸುಡಬೇಕು ಇವರ ಜನ್ಮ ! ಏನ ನ್ಯಾಯ ಇದು ? ಅವನಿಗೇನು ವಿದ್ಯೆಯಿಲ್ಲವೇ ? ಬುದ್ಧಿಯಿಲ್ಲವೇ ? ಅವನನ್ನು ಹಿಡಿದು ಅಲ್ಲಾಡಿಸಿ ಕೇಳಬೇಕು ಏನಾಗಿದೆ ನಿನಗೆ ಅಂತ ?ಹತ್ತು ಜನ ಕೂಡಿ ಮುತ್ತಿಗೆ ಹಾಕಿ ಛೇಡಿಸುವುದು ಒಳ್ಳಿತು. ಮಾನ ಕಳೆದು ಮೂರಾಬಟ್ಟೆ ಮಾಡಬೇಕು ! ಆಗಲೇ ಬುದ್ಧಿ ಬರೋದು."

"ಏನಾದರೂ ಮಾಡು ತಾಯಿ. ನನ್ನನ್ನು ಈ ಸಂಕಟದಿಂದ ಪಾರು ಮಾಡಿ ನನಗೊಂದು ಉಪಕಾರ ಮಾಡು. ನಾನು ಸಹಿಸಲಾರೆ. ಹೆತ್ತ ಕರುಳು ಕರಗುತ್ತಿದೆ."

"ಒಮ್ಮೆ ನೀವುನೋಡಿ ಬನ್ನಿ. ಹೇಗಿದೆ ಪರಿಸ್ಥಿತಿ ಎಂಬುದನ್ನು ಖಚಿತ ಪಡಿಸಿಕೊಳ್ಳಿ, ಅನಂತರ ಮಾತಾಡೋಣ."

"ಹೋದರೆ ಅವಮಾನ ಮಾಡಬಹುದು ಎಂಬ ಭಯ ನನಗೆ. ಈಚೆ ಗಷ್ಟೇ ಬಂದು ಹೋಗಿದ್ದಾಳೆ, ಏನು ಮಾಡಲಿ ?"

"ಅದಕ್ಕೇನಂತೆ ಹೋಗಿ ಬನ್ನಿ. ನೀವು ಹೋದರೆ ಅವಳಿಗೂ ಸ್ವಲ್ಪ ಸಮಾಧಾನ. ಸುಖವಾಗಿದ್ದರೆ ಅಲ್ಲೇ ಇರಲಿ, ಇಲ್ಲದಿದ್ದರೆ ಕರೆತನ್ನಿ. ನೀವು ಅಂಜಬಾರದು. ನೀವು ಜೋರಾಗಿದ್ದರೆ ಅವರು ಮೆತ್ತಗಾಗುತ್ತಾರೆ. ನೀವು ಆಗಾಗ ಹೋಗಿ ಬರುತ್ತಿರುವುದೇ ಒಳ್ಳೆತು."

ಜಾನಕಮ್ಮ ಕಣ್ಣೀರು ಮಿಡಿಯುತ್ತ ನುಡಿದಳು, "ಎಂಥ ಅನ್ಯಾಯಿ ಗಳ ಮನೆಗೆ ಮಗಳನ್ನು ಕೊಟ್ಟೆ. ಗಿಳಿ ಮರಿಯಂತೆ ಸಾಕಿದ ಮಗು."

"ಅವಳಿಗೆ ತೊಂದರೆಯಾಗುತಿದ್ದರೆ ಕರೆತಂದುಬಿಡಿ."

"ಕರೆತಂದರೆ ಮುಂದೆ ಮಾಡುವುದೇನು ? ನಮ್ಮ ಬದುಕು ಇನ್ನೆಷ್ಟು ದಿನವೋ....ಅನಂತರ ಅವಳನ್ನು ನೋಡುವವರಾರು ?"

"ಯಾರೆಲ್ಲಾ ಏಕೆ ನೋಡಬೇಕು ? ಬಿ. ಎ. ಓದಿದ್ದಾಳೆ. ಯಾವುದಾದ ರೊಂದು ಕೆಲಸಕ್ಕೆ ಹಚ್ಚಿದರಾಯಿತು. ನಿಮ್ಮ ಜಮೀನಿನಲ್ಲೇ ಒಂದು ಭಾಗ ವನ್ನು ಕೊಟ್ಟರೆ ನೋಡಲಾರಳೇನು ? ಹೆಣ್ಣುಮಕ್ಕಳೆಂದರೆ ಏಕಷ್ಟು ಚಿಂತೆ ನಿಮಗೆ ? ಗಂಡಸಿಲ್ಲದೆ ಬದುಕುವುದು ಸಾಧ್ಯವಿಲ್ಲವೆ ಹೆಣ್ಣಿಗೆ ?"

ಅವಳ ಮೂಕ ಮೌನವೇ ಉತ್ತರವಾಯಿತು.

"ಆ್ಯಂಟಿ ಇಲ್ಲಿ ಕೇಳಿ, ಗಂಡಸಿನ ಆಧಾರವಿಲ್ಲದೆ ಹೆಣ್ಣು ಬದುಕಲಾರಳು ಎಂಬ ಅಭಿಪ್ರಾಯಕ್ಕೆ ಏಕೆ ಬಂದಿದ್ದೀರಿ ಹೇಳಿ ? ಎಷ್ಟು ಮಂದಿ ಹೆಂಗಳೆ ಯರು ಜಮೀನು ಮನೆ ನೋಡಿಕೊಂಡಿಲ್ಲ ? ಎಷ್ಟು ಜನ ಆಫೀಸು ಕೆಲಸ ಹಿಡಿದು ಬದುಕುತ್ತಿಲ್ಲ ? ನಿಮಗೆ ಅಷ್ಟು ಕಷ್ಟವೆನಿಸಿದ್ದೇಕೆ ?"

"ಈ ಕಾಲದಲ್ಲಿ ಯಾರನ್ನೂ ನಂಬುವಂತಿಲ್ಲ. ಧರ್ಮ ಕರ್ಮ ಇಲ್ಲದ ಜನ. ಒಂಟಿ ಹೆಣ್ಣು ಹೇಗಿದ್ದಾಳು ಹೇಳು?"

"ಅಂತಹ ಪ್ರಸಂಗ ಬಂದರೆ ಮತ್ತೆ ಮದುವೆ ಮಾಡಿದರಾಯಿತು."

ಜಾನಕಮ್ಮ ಯೋಚನಾಕ್ರಾಂತಳಾದಳು. ತಲೆಯಲ್ಲಿ ಚಿಂತೆಯ ಕೀಟ ಭೈರಿಗೆಯಂತೆ ಕೊರೆಯತೊಡಗಿತು, ಹೃದಯ ಕಲ್ಲು ಹೊತ್ತಷ್ಟು ಭಾರಾತಿ ಭಾರ. ಪ್ರಯತ್ನಿಸಿದರೂ ತುಟಿಗಳು ಬಿರಿಯಲಿಲ್ಲ.

"ನನ್ನ ಮಾತು ಕೇಳಿ ಜಾನಕಮ್ಮ...."

"ಕುಮಾ, ನನಗೀಗ ಹೇಳಿ ಕೇಳುವ ಸಹನೆಯೇ ಇಲ್ಲವೇನೋ ಎನಿಸುತ್ತಿದೆ. ಜೀವ ದಿನದಿನಕ್ಕೂ ಜಡವಾದಂತೆ ಮರಗಟ್ಟುತ್ತಿರುವೆ. ಒಡಲಲ್ಲಿ ಬೆಂಕಿ ಹೊತ್ತಿದಂತಿದೆ."

"ನೀವು ತೀರಾ ಧೈರ್ಯಗೆಟ್ಟಿದ್ದೀರಿ, ಅದಕ್ಕೇ ಹೀಗೆ. ಇಷ್ಟು ಕುಗಬಾರದು. ಆ ಬಳಿಕ, ಅವಳ ಭವಿಷ್ಯವನ್ನು ರೂಪಿಸುವುದು ಕಷ್ಟವೇನಲ್ಲ. ಚಿಂತಿಸಬೇಡಿ ; ನಾನವಳನ್ನು ಖಂಡಿತ ಬೆಂಬಲಿಸುವೆ."

ಜಾನಕಮ್ಮನ ಎದೆಯಾಳದಿಂದ ನಿಟ್ಟುಸಿರೊಂದು ತಪ್ಪಿಸಿಕೊಂಡಿತು. ಅವಳು ಸುಮ್ಮನಾದಳು.

— ০ —

೧೪

ಸಾಯಂಕಾಲದ ಸಂಚಾರವನ್ನು ಕೈಗೊಂಡಿದ್ದರು ರಾಮನಾಥ ಮತ್ತು ಕುಮುದ್ವತಿ.

ಶಾಂತ ಸಮೃದ್ಧವಾದ ವಾತಾವರಣದಲ್ಲಿ ಸಾಯಂ ಸೊಬಗು ತುಂಬಿ ಹರಡಿತ್ತು. ವಿಹಂಗಮಗಳ ಸುಮಧುರ ಇಂಚರ ಕಿವಿಗಿಂಪಾಗಿ ಮೊಳಗುತ್ತಿದೆ. ಕೆಂಗಲಿಸುವ ಸೂರ್ಯ ಇನ್ನೇನು ಮುಳುಗಲಿದ್ದಾನೆ. ನಿಸರ್ಗ ಸೌಂದರ್ಯವನ್ನು ಎಷ್ಟು ಸವಿದರೂ ಸಾಲದು ಎನಿಸುವಷ್ಟು ಅಮೋಘ.

ಇಬ್ಬರೂ ಸುತ್ತಾಡಿ ಕಾಲುಗಳು ದಣಿದ ನಂತರ ಗದ್ದೆಯಂಚಿನ ಕರಿಯ ಕಗ್ಗಲ್ಲಿನ ಮೇಲೆ ಮಂಡಿಸಿದರು. ಹಿಂದೆ ಹಿರಿಯ ಮಡದಿ ಲಕ್ಷ್ಮಿಯಿದ್ದಾಗಲೂ ಅನಂತರ ಪದ್ಮಳ ಸಹಚರ್ಯದಲ್ಲೂ ರಾಮನಾಥ ಆಗಾಗ ಅಲ್ಲಿ ಕುಳಿತು ವಿಶ್ರಮಿಸುತಿದ್ದ. ದಂಪತಿಗಳು ಎಷ್ಟೋ ಹೊತ್ತು ಮಾತಾಡಿ ಮಸುಗಪ್ಪು ಕವಿಯುವ ಹೊತ್ತಿಗೆ ಮನೆಗೆ ಹಿಂದಿರುಗುತಿದ್ದರು ಆನಂದದಿಂದ.

ಇಂದೂ ಅದೇ ಬಂಡೆಯ ಮೇಲೆ ಕುಳಿತೊಡನೆಯೇ ಅಂದಿನ ನೆನಪು ಮೂಡಿತು ರಾಮನಾಥನಿಗೆ. ಬಂಡೆಯ ಬದಿಯಲ್ಲಿ ಜಳಜಳಿಸಿ ಹರಿಯುವ ತೊರೆ. ಬೇಸಗೆಯಲ್ಲಿ ಬತ್ತದ ನೀರು. ಸ್ವಲ್ಪ ತಗ್ಗಿನಲ್ಲಿರುವುದರಿಂದ ಮೆಟ್ಟಲುಗಳ ಮೂಲಕ ಇಳಿದು ನೀರು ಮುಟ್ಟಬೇಕು. ಜಳಜಳಿಸಿ ಹರಿಯುವ ನೀರಿನ ಮಂಜುಳ ಗಾನ, ಜುಳು. ಜುಳು. ಜುಳು.

ಸುತ್ತಮುತ್ತಲೂ ಪ್ರಕೃತಿಯ ವೈಭವದಲ್ಲಿ ಕಣ್ಣಾಡಿಸುತಿದ್ದರೆ ಮೈಮರೆಯುವಷ್ಟು ಮತ್ತಾಗುತ್ತದೆ ಮನಸ್ಸು. ರಾಮನಾಥ ಅವಳ ಭುಜವನ್ನು ತೋಳಿನಿಂದ ಸುತ್ತು ಬಳಸಿ ನಲ್ಮೆಯಿಂದ ಹೇಳತೊಡಗಿದ–

ಕುಮುದಾ ನಮ್ಮಕಡೆ, "ಈ ಸುತ್ತುಮುತ್ತಿನ ಪರಿಸರದಲ್ಲಿ ದುಡಿಯುವ ಕಾರ್ಮಿಕ ಸಮುದಾಯಕ್ಕೆ ತಕ್ಕ ಪ್ರತಿಫಲ ದೊರೆಯುತ್ತಿಲ್ಲ ಎಂದರೆ ಏನೇನೂ ತಪ್ಪಲ್ಲ. ಸ್ವಂತ ಜಮೀನು ಆಸ್ತಿಯ ವಿಚಾರ ಒತ್ತಟ್ಟಿಗಿರಲಿ. ಪ್ರಕೃತಿದತ್ತವಾದ ಪ್ರತಿಯೊಂದು ಐಶ್ವರ್ಯದಲ್ಲೂ ಬುದ್ಧಿಜೀವಿಗಳ ಹಿಂಡು ಮಕರಂದಕ್ಕೆ ಮುತ್ತುವ ದುಂಬಿಗಳಾಗುತ್ತಾರೆ. ಅದು ಸಂಪೂರ್ಣ ಕರಗತವಾಗಬೇಕಾದರೆ ಕಾರ್ಮಿಕ ವರ್ಗವಿಲ್ಲದೆ ಸುತರಾಂ ಸಾಧ್ಯವಿಲ್ಲ. ಅಂದಮೇಲೆ, ಶೇಕಡಾ ಇಂತಿಷ್ಟು ಲಾಭಾಂಶ ಕಾರ್ಮಿಕರಿಗೆ ಎಂಬುದು ನಿಗದಿಯಾಗಬೇಕು. ಕಾರ್ಮಿಕ ವರ್ಗ ನಮ್ಮಲ್ಲಿ ಪೂರಾ ವಂಚಿತರು. ಅವರಿಗೆ ಸಲ್ಲಬೇಕಾದ ನ್ಯಾಯದಾನ ದೂರದೂರವೇ. ಅವರಿಗೆ ಆರ್ಥಿಕ, ರಾಜಕೀಯ, ಸಾಮಾಜಿಕ ಸಮಾನತೆಯ ಉತ್ತಮ ಭವಿಷ್ಯದ ಪರಿಕಲ್ಪನೆಗೆ ಇಂದಿನ ರೀತಿಯಲ್ಲಿ ಆಸ್ಪದವಿಲ್ಲ. ಧನಿಕರು ದಯಾಪರರಾಗಿರದಿದ್ದರೆ ಎಂದೆಂದಿಗೂ ಅವರಿಗೆ ಉತ್ತಮ ಭವಿಷ್ಯ ಇಲ್ಲವೇ ಇಲ್ಲ. ನಾವಿನ್ನೂ ಈ ವಿಚಾರದಲ್ಲಿ ಪುರಾತನಿಗಳೇ. ಅತೀ ಸ್ವಾರ್ಥದ ಪರಮಾವಧಿಯೇ ಸೈ! ಮಹಾತ್ಮಾ ಗಾಂಧೀಜಿಯವರು 'unto the lost' ಎಂಬ ಸಣ್ಣ ಪುಸ್ತಕದಿಂದ ಕರ್ಮಜ್ಞಾನ ಪಡೆದರು ಮಾರ್ಕ್ಸ್‌ವಾದನನ್ನೇ ತೆಗೆದುಕೋ ಅದು ಹೇಳುವುದು ಅದನ್ನೇ. ಇಂದಿನ ವಿಪರೀತ ಪರಿಸ್ಥಿತಿಯನ್ನು ಗಮನಿಸಿದರೆ ಕಂಬನಿ ಮೂಡುತ್ತೆ. ಬೆಲೆಗಳು ಗಗನದಲ್ಲಿ. ಬದುಕು ದುಸ್ತರ.

...ಅಂದಮೇಲೆ, ನಾವು ಯೋಚಿಸಬೇಕಾದುದೇ. ಈ ಪರಿಸರದಲ್ಲೆಲ್ಲಾ ದಿನಗೂಲಿ ಎಂದರೆ ನಾಲ್ಕು ರೂಪಾಯಿ ಮತ್ತು ಒಂದು ಸೇರು ಅಕ್ಕಿ ಗಂಡಾಳಿಗೆ. ಹೆಣ್ಣಾಳಿಗೆ ಮೂರು ರೂಪಾಯಿ ಒಂದು ಸೇರು ಅಕ್ಕಿ (ಒಂದು ಕೆ. ಜಿ. ಗಿಂತ ಸ್ವಲ್ಪ ಜಾಸ್ತಿ) ಮಾತ್ರ. ಎಲ್ಲರೂ ಅನುಸರಿಸುವ ಕ್ರಮ ಇದೇ. ಇದು ಸರಿಯಲ್ಲ ಎಂದು ಎಷ್ಟೋ ಬಾರಿ ಕಡ್ಡಾಯವಾಗಿ ಹೇಳಿರುನೆ, ಬೆಳೆಗಾರರ ಮೀಟಿಂಗಿನಲ್ಲಿ. ನಾವು ಇನ್ನು ಮುಂದೆ ಸಂಬಳದ ಕ್ರಮವನ್ನು ಪರಿಶೀಲಿಸಬೇಕು. ಇದು ಸರಿಯಲ್ಲ ಎಂಬುದರಲ್ಲಿ ಅರ್ಥವಿದೆ."

"ಮಾರ್ಕ್ಸ್ ವಾದದಲ್ಲಿ ಪ್ರತಿಪಾದಿಸಿರುವಂಥ ಭೌತಿಕ ಆರ್ಥಿಕ ವಿಶ್ಲೇಷಣೆ, ವರ್ಗಸಂಸರ್ಗದ ಶಕ್ತಿ, ಕ್ರಾಂತಿಚಾಲನ ಶಕ್ತಿ, ಕ್ರಾಂತಿಕಾರಿಗಳ ಸ್ಥಾನಮಾನ, ಸರ್ವಸಮಾನತೆ ಇವುಗಳ ಸಮಸ್ಯೆಯನ್ನು ಪರಿಶೀಲಿಸಿದರೆ ಮಾರ್ಕ್ಸ್

ತತ್ವದಲ್ಲಿ 'ವಿಚಾರ'ಕ್ಕಿಂತ 'ವಸ್ತು'ವಿಗೆ ಆದ್ಯತೆ. ನಾವು ಅನುಭವಿಸುತ್ತಿರುವ ವೈಭವಯುತ ಜೀವನ ಕಾರ್ಮಿಕರ ಶ್ರಮಿಕ ಜೀವನದಿಂದ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಆದ್ದರಿಂದ, ಅವರಿಗೆ ಉತ್ತಮ ಭವಿಷ್ಯವನ್ನು ರೂಪಿಸುವುದು ನಮ್ಮ ಆದ್ಯ ಕರ್ತವ್ಯ ಎಂಬುದನ್ನು ಯೋಚಿಸಬೇಕು." ಎಂದಳು ಕುಮುದ್ವತಿ. ಪುನಃ ಒಂದು ಗಳಿಗೆ ತಡೆದು ಮುಂದುವರಿದಳು "ಖಂಡಿತ... ಅವರನ್ನು ನಾವು ಪೂರಾ ಅವಲಂಬಿಸುತ್ತೇವೆ. ನಮ್ಮನ್ನು ಅವರು ಅವಲಂಬಿಸುತ್ತಾರೆ. ಅಂದಮೇಲೆ, ನಮ್ಮ ನಮ್ಮ ಅವಲಂಬನ ಸತ್ ಸಂಮೃದ್ಧಿಯಲ್ಲಿರಬೇಕು. ಎಲ್ಲ ಕಾರ್ಮಿಕರು ಗುಡಿಸಲಿನಲ್ಲಿ ವಾಸಿಸುತ್ತಾರೆ. ಅವರಿಗೆ ತಕ್ಕ ಪುಟ್ಟಪುಟ್ಟ ಮನೆಗಳನ್ನು ಒದಗಿಸುವುದು ಯಜಮಾನನ ಕರ್ತವ್ಯ. ನಾನು ಅಂದೇ ಹೇಳಿದಾಗ ನೀವು ಹೆಚ್ಚಿನ ಖರ್ಚು ಬೀಳುತ್ತೆ ಎಂದುಬಿಟ್ಟರಿ. ವಿಶಾಲ ದೃಷ್ಟಿಯಿಂದ ಯೋಚಿಸಿ ನೋಡಿ. ನಾವು ಇನ್ನೂ ಏನೇನೋ ಮಾಡಬೇಕಾಗುತ್ತೆ ಎಂಬುದು ಅರ್ಥವಾಗುತ್ತೆ. ನಮಗೂ ಅವರಿಗೂ ಧಣಿ-ಶಿಷ್ಯ ಸಂಬಂಧ ಸ್ನೇಹಾನುರಾಗದಿಂದ ಕೂಡಿರಬೇಕು ಎಂದರೆ ಏನಂತೀರಿ ? ಈ ಸಲಿ ಮನೆ ಕಟ್ಸೋಣ...."

...ಅದು ಸರಿಯೆ....

ರಾಮನಾಥ ಗಂಭೀರವಾಗಿ ಯೋಚಿಸಿದ. ತಾನು ಏನಾದರೂ ಹೇಳಬೇಕೆಂದರೆ ಬಾಯೇ ಬರಲಿಲ್ಲ. ಅವಳು ತೀವ್ರ ಪ್ರಗತಿಗಾಮಿ ಮತ್ತು ಹಠವಾದಿ ಎಂಬುದು ಗೊತ್ತೇಗೊತ್ತು. ಇಬ್ಬರೂ ಮನೆಯ ಕಡೆ ಹೊರಟರು. ವರಾಂಡದಲ್ಲಿ ದೇವಯ್ಯ ಮಡದಿಯೊಡನೆ ಮಂಡಿಸಿದ್ದ. ಆಳುಗಳು ಕೂಲಿ ಪಡೆದು ಹೊರಟುಹೋಗಿದ್ದರು. ಈಚೆಗೆ ಅವರ ಸಂಬಳವನ್ನು ದುಪ್ಪಟ್ಟುಗೊಳಿಸಲಾಗಿತ್ತು. ಅದರಿಂದ ಅವರ ಸಂತೋಷ ಹೇಳತೀರದು ; ಕೆಲಸದಲ್ಲಿ ಎಲ್ಲರೂ ಹುರುಪು ತೋರುತಿದ್ದಾರೆ. ಅವರಿಗೆ ಇನ್ನೂ ಕೆಲವು ಸವಲತ್ತುಗಳನ್ನು ಒದಗಿಸುವ ಯೋಚನೆಯೂ ಇದೆ. ಅದರಲ್ಲಿ ದಂಪತಿಗಳು ಒಂದು ಇತ್ಯರ್ಥಕ್ಕೆ ಬಂದಿದ್ದಾರೆ. ಮನೆಗಳನ್ನು ಕಟ್ಟಿಸುವುದಕ್ಕೆ ಇನ್ನೂ ಕೈಹಾಕಿರಲಿಲ್ಲ. ಈಗದರಲ್ಲಿ ಅವಳ ಒತ್ತಾಯ.

ರಾಮನಾಥ ದೇವಯ್ಯನನ್ನು ಕುರಿತು ಅಂದ,

"ಕುಮೂ ಈ ಸಾಲಿನಲ್ಲೇ ಕಾರ್ಮಿಕರಿಗೆ ಮನೆ ಕಟ್ಟಿಸೋಣ ಎನ್ನುತ್ತಿದ್ದಾಳೆ."

"ನಾಲ್ಕೈದು ಮನೆಗಳೆಂದರೆ ಸಾಮಾನ್ಯವೇ ? ಹಣ ಎಷ್ಟಾದೀತು ? ನೀನು ಯೋಚಿಸಿದ್ದೀಯೇನು ? ಒಮ್ಮೆಗೇ ಆಕಾಶಕ್ಕೆ ಹಾರಬಾರದು. ಚಾಪೆಯ ಅಳತೆ ನೋಡಿ ಕಾಲು ಚಾಚಬೇಕು ಮಗಳೇ !" ಸಾವಧಾನದಿಂದ ಅಂದ ದೇವಯ್ಯ.

"ಅಪ್ಪಾಜೀ, ನೀವೆಲ್ಲರೂ ಹಳೆಯ ಕಾಲದ ಪದ್ಧತಿಯ ನೆರಳಿನಲ್ಲಿ ಬೆಳೆದು ಬಾಳಿದವರು. ನಾವು ಕಾಲೋಚಿತವಾಗಿ ನಡೆಯುವುದನ್ನು ಕಲಿಯಬೇಕು. ಇಂದಿನ ಸುಧಾರಣೆಯನ್ನು ನೀವು ಒಪ್ಪುವವರಲ್ಲ. ನೋಡಿ, ಈಚೆಗೆ ಪಗಾರ ಹೆಚ್ಚಿಸಿದುದರಿಂದ ಆಳುಗಳು ಸಂತೋಷವಾಗಿದ್ದಾರೆ. ಪ್ರೀತಿ–ಆಸ್ತೆಗಳಿಂದ ನಡೆಯುತ್ತಿದೆ ಕೆಲಸ. ಹೀಗೆಯೇ ಒಂದೊಂದೇ ಸೌಲಭ್ಯಗಳನ್ನು ಹೆಚ್ಚಿಸುತ್ತ ಹೋಗುವುದು ಯುಕ್ತ. ಪಾಪ, ಬಡವರು. ಅವರನ್ನು ನಿರ್ಲಕ್ಷಿಸಬಾರದು."

"ಹಾಗೆಲ್ಲ ಹಠ ಮಾಡಬಾರದು ಮಗಳೇ ! ಮಾಡೋಣ, ನಿಧಾನವಾಗಿ ಪ್ರಯತ್ನಿಸಬೇಕು. ಒಂದೇ ಬಾರಿಗೆ ಹೇಗಾಗುತ್ತೆ, ಹೇಳು ?"

ಮಡಿಲು ತುಂಬಿದ ಅವಳ ನಿಮ್ನೋನ್ನತ ಶರೀರದ ಅಂಗಾಂಗಗಳಲ್ಲಿ ಹೊಮ್ಮುತ್ತಿದ್ದ ಮಾರ್ದವ ಮೃದುತ್ವ ಕಣ್ಣಿಗೆ ಹಬ್ಬವಾಗುವಷ್ಟು ಮೋಹಕ. ರಾಮನಾಥ ಆ ಮೋಹನ ರೂಪಿನ ಮೇಲೆ ಕಣ್ಣಾಡಿಸುತ್ತ ನುಡಿದ—"ನೀನು ಆಗಲೇಬೇಕೆಂದರೆ ಯೋಚಿಸೋಣ. ಒಮ್ಮೆ ಕಟ್ಟಿದರೆ ಮತ್ತೆ ಕಟ್ಟುವ ಅಗತ್ಯ ವಿಲ್ಲವಷ್ಟೆ ? ಈ ವರ್ಷದ ಕೊನೆಯಲ್ಲಿ ಕಟ್ಟೋಣ. ಸಾಮಗ್ರಿಗಳನ್ನು ಒದಗಿಸಬೇಕಲ್ಲ ! ಅದಕ್ಕೂ ಸಾಕಷ್ಟು ಕಾಲಾವಕಾಶ ಬೇಕು."

ರಾಮನಾಥ ಮುಖಮಜ್ಜನ ಮಾಡಲು ಶೌಚಾಲಯಕ್ಕೆ ಹೋದ.

"ಮಗಳೇ ನೀನು ಅವಸರಿಸಿ ಹಠ ಹಿಡಿಯಬಾರದು. ಕಾಲೋಚಿತವಾಗಿ ನಡೆಯಬೇಕು. ರಾಮನಾಥನ ಮನಸ್ಸಿಗೆ ನೋವುಂಟುಮಾಡಬೇಡ" ಎಂದ ದೇವಯ್ಯ ನೊಂದ ಮನದಿಂದ.

"ಅಪ್ಪಾಜೀ, ನಾವು ಏನು ಮಾಡಿದರೂ ಅದನ್ನು ನಾವೇ ಕಣ್ತುಂಬ ನೋಡಿ ಸಂತೋಷಪಡುವಂತಿರಬೇಕು. ಮುಂದೆ ಎಂದೋ ನಾವು ಸಾಯುವ ಕಾಲದಲ್ಲಿ ಮಾಡಿದರೆ ಏನು ಫಲ ಹೇಳಿ ?"

"ಅದು ಸರಿ ; ಆದರೂ, ನಿಧಾನಿಸುವುದು ಒಳ್ಳಿತು," ಎಂದಳು ಸೀತಮ್ಮ.

"ಅಮ್ಮಾ ! ನಿಮಗೂ ಅದೇ ಉತ್ತರ."

ಇಬ್ಬರೂ ಅಲ್ಲಿಗೆ ಸುಮ್ಮನಾದರು, ಅವಳು ಹೇಳತೊಡಗಿದಳು— "ಈ ಲೋಕ ನಮಗಾಗಿ ಅಥವಾ ಧನಿಕರಿಗಾಗಿ ಮಾತ್ರವಲ್ಲ. ಯಾರ ಶ್ರಮಿಕ ವೃತ್ತಿಯಿಂದ ನಾವು ಐಷಾರಾಮದ ಜೀವನ ನಡೆಸುತ್ತೇವೋ ಅಂಥ ಬಡ ಬಂಧುಗಳ ಭಂಗ ಬನ್ನಗಳನ್ನು ಪೂರ್ತಿ ಅಲ್ಲದಿದ್ದರೂ ನಮ್ಮಿಂದಾದಷ್ಟು ನೋಡಲೇಬೇಕಾದುದು ನಮ್ಮ ಧರ್ಮ. ಹಿಂದೆ ಜಮಿನ್ದಾರರು ತಮ್ಮ ವೈಭವಯುತ ಜೀವನದಲ್ಲಿ ಒಂಟೆ–ಕುದುರೆ–ಚಿನ್ನ–ಬೆಳ್ಳಿಗಳ ವಿಚಾರವನ್ನು ಬಣ್ಣಿಸುತ್ತ ಮಾತಾಡುತಿದ್ದರೆ ಭೃತ್ಯರು ಮೌನವಾಗಿ ಕಾಲುಗಳನ್ನು ಒತ್ತುತ್ತಿದ್ದರು. ಅದು ಅಂದಿನ ರೂಢಿ. ಆ ಭೃತ್ಯರಿಗೆ ಸಲ್ಲುತಿದ್ದ ಪಗಾರದ ವಿಷಯ ಕೇಳಲೇಬೇಡಿ. ಅವರು ದಣಿಗಳ ಕಥಾ ಜಗತ್ತನ್ನು ಕೇಳುತ್ತ ಮನಕ್ಕೆ ಆನಂದವನ್ನು ತುಂಬಿಕೊಳ್ಳುತಿದ್ದರು. ಅವರಿಗೆ ಮನೋಕ್ಲೇಶವಾಗಲೀ, ಒಡಲ ಸಂಕಟವಾಗಲೀ ಇರಲಿಲ್ಲ ಎಂದೇನಿಲ್ಲ. ಇದ್ದರೂ ತೋರ್ಪಡಿಸದ ಶ್ರದ್ಧಾವಂತ ಭಕ್ತರಾಗಿರುತಿದ್ದರು. ಅವರ ಜೀವನ ಸೇವೆಯಲ್ಲಿಯೇ ಸಂತೃಪ್ತಿ ಪಡೆಯುತಿತ್ತು. ಆದರೆ, ಈಗ ಕಾಲ ಬದಲಾಗಿದೆ. ಜನ ಬುದ್ಧಿವಂತರಾಗುತಿದ್ದಾರೆ. ತಮ್ಮ ತಮ್ಮ ಸ್ಥಿತ್ಯಂತರವನ್ನು ಅರಿತುಕೊಳ್ಳುತಿದ್ದಾರೆ. ಬದುಕು ಸುಧಾರಿಸಿಕೊಳ್ಳುವ ಹಂಬಲವಿದೆ. ಜಗತ್ತಿನ ಪರಿಚಯ ಹೊಂದುತಿದ್ದಾರೆ. ಅಂದಮೇಲೆ, ಅವರು ಹಿಂದಿನಂತೆಯೇ ಗುಲಾಮಿ ಪದ್ಧತಿಯನ್ನು ಒಪ್ಪಿಕೊಳ್ಳಲು ಇನ್ನು

ತಯಾರಿರುತ್ತಾರೆ ಎಂದುಕೊಳ್ಳಬೇಡಿ. ಅವರು ತಮ್ಮ ಬೇಡಿಕೆಯನ್ನು ಮುಂದಿಡುವ ಮೊದಲೇ ನಾವು ನಮ್ಮ ಕರ್ತವ್ಯವನ್ನು ಪೂರೈಸಿದರೆ ಕ್ಲೇಶವಿಲ್ಲ, ಅಲ್ಲವೇ? ಕಾಲೋಚಿತವಾಗಿ ನಾವು ಸುಧಾರಿಸಿಕೊಳ್ಳಲೇಬೇಕು, ಎಂದರೆ ಒಪ್ಪುತ್ತೀರಷ್ಟೆ?"

ಅಪ್ಪ–ಅಮ್ಮ ಇಬ್ಬರೂ ಮಾತಾಡಲಿಲ್ಲ. ಮಗಳ ಹಠ ಮೊದಲಿಂದಲೂ ಗೊತ್ತಿದ್ದದ್ದೇ. ಅವಳ ಅಭಿಪ್ರಾಯಕ್ಕೆ ಎದುರು ವಾದ ಹೂಡುವುದು ವ್ಯರ್ಥ ಎಂಬುದು ಮನೋಗತ. ಇದರಿಂದ ರಾಮನಾಥನಿಗೆ ಬೇಸರವಾದೀತೇನೋ ಎಂಬ ಭಯ ಮನೋಮಂಡಲದಲ್ಲಿ ಅಸ್ತಿಭಾರ ಹಾಕಿಬಿಟ್ಟಿದೆ. ಪ್ರಗತಿಯ ಹೆಜ್ಜೆ ಹೆಜ್ಜೆಯಲ್ಲೂ ದಿಟ್ಟತನ ಇದ್ದಷ್ಟೂ ಹೃದಯ ಢಣಢಣಿಸುತ್ತದೆ. ಮುಂದೇನೋ ಎಂಬ ಭಯ ಮನಸ್ಸಿಗೆ. ಮುಖ್ಯವಾಗಿ ತಾವಿಬ್ಬರೂ ಆತನ ಸುಖಾಶ್ರಿತರು, ಎಂಬ ಚಿತ್ರ ಧುತ್ತೆಂದು ಮುಂದೆ ನಿಲ್ಲುತ್ತದೆ.

ರಂಗಮ್ಮ ರಾತ್ರಿಯ ಊಟಕ್ಕೆ ಅಣಿಗೊಳಿಸುತ್ತಿರುವುದರಲ್ಲಿ ತಲ್ಲೀನಳಾಗಿದ್ದಾಳೆ. ಮನೆ ತುಂಬ ಸಂಧ್ಯಾ ದೀಪಗಳು ಉರಿಯುತ್ತಿವೆ. ದೇವರ ಕೋಣೆಯಲ್ಲಿ ಉರಿಸಿದ ನಂದಾದೀಪಕ್ಕೆ ಇನ್ನಷ್ಟು ತೈಲವೆರೆದು ಬತ್ತಿಯನ್ನು ನೂಕಿ ಮಂಗಳಾರತಿ ಬೆಳಗಿದರು ಸೀತಮ್ಮ ಮತ್ತು ಕುಮುದ್ವತಿಯರು. ಕಗ್ಗತ್ತಲು ಕವಿಯುತಿದ್ದಂತೆ ಮುಂಬಾಗಿಲು ಮುಚ್ಚಿಕೊಂಡಿತು ಪದ್ಮಾಲಯ. ನಾಯಿಗಳು ಒಳಬಂದು ಹಜಾರದಲ್ಲಿ ಕಾಯುತಿದ್ದುವು ರಾತ್ರಿಯ ಊಟಕ್ಕಾಗಿ. ಊಟದ ಸಮಯಕ್ಕೆ ಇನ್ನೂ ಒಂದು ತಾಸು ಉಳಿದಿತ್ತು.

ರಾಮನಾಥ ಪುಸ್ತಕಾವಲೋಕನದಲ್ಲಿ ಮನವಿಟ್ಟಿದ್ದ.

ಸೀತಮ್ಮ ಕಳಕಳಿಯ ದನಿಯಲ್ಲಿ. ಮಗಳಿಗೆಂದಳು "ಮಗಳೇ. ನೀನು ಹೀಗೆಲ್ಲಾ ಹಠ ಹಿಡಿಯಬಾರದು, ಅತೀ ವಾದದಿಂದ ಮನಸ್ಸಿಗೆ ಬೇಸರ ಊಡಿಸುತಿದ್ದಿ. ಒಂದೇ ಸಲ ಅಷ್ಟೊಂದು ಹಣ ಖರ್ಚು ಮಾಡಲು ಯಾರ ಮನ ಒಪ್ಪುತ್ತೆ ಹೇಳು? ಮನೆ ಕಟ್ಟಿಸುವುದೆಂದರೆ ನಾಲ್ಕನ್ನೂ ಒಟ್ಟಿಗೇ ಕಟ್ಟಿಸಬೇಕು. ಒಬ್ಬರಿಗೆ ಕೊಟ್ಟು, ಒಬ್ಬರಿಗೆ ಬಿಡುವುದಕ್ಕಾಗುವುದಿಲ್ಲ. ಎಲ್ಲದರಲ್ಲೂ ದೀರ್ಘಾಲೋಚನೆ ಉತ್ತಮ. ಹಠ ಹೊತ್ತು ಅವನ ಮನಸ್ಸಿಗೆ ಸಂಕಷ್ಟ ತರ

ಬೇಡ. ವ್ಯಕ್ತಿ ಎಷ್ಟು ಒಳ್ಳೆಯವನು ? ನಿನ್ನೊಂದಿಗೆ ನಮ್ಮ ಭಾರವನ್ನೂ ಹೊತ್ತಿರುವುದು ಕಾಣದೇ ? ಇಷ್ಟು ಧಾರಾಳತನ ಯಾರಲ್ಲಿರುತ್ತೆ ಹೇಳು ? ಚಿನ್ನದಂತಹ ಮನುಷ್ಯ ಎಂದರೆ ಯಾರಾದರೂ ಒಪ್ಪಿಕೊಂಡಾರು...ಮುಖ್ಯ ವಾಗಿ ದೇವರು ಚೆನ್ನಾಗಿಟ್ಟಿರಬೇಕು."

ದೇವಯ್ಯನೂ ಹಾಗೇ ಅಂದ.

"ನೀವು ಯಾವಾಗ ಒಂದೇ ಸಲಕ್ಕೆ ಅನುಮತಿ ಕೊಟ್ಟಿರಿ ಹೇಳಿ ಅಪ್ಪಾಜಿ? ನಾನು ಮಕ್ಕಳ ಶಾಲೆ, ಟೈಲರಿಂಗ್ ತರಗತಿ ತೆರೆಯುವೆ ಎಂದಾಗಲೂ ಅದೂ ಇದೂ ಸಬೂಬು ಹೇಳಿದಿರಿ. ಈಗ ಅವು ಸುಸೂತ್ರವಾಗಿ ನಡೆಯುತ್ತಿವೆ. ಉತ್ತಮ ಕಾರ್ಯ ಸಾಧನೆಗೆ ಏಕೆ ಹೆದರುತ್ತೀರಿ ? ನಾವು ಇನ್ನೊಬ್ಬರಿಗೆ ಉಪ ಕಾರಿಗಳಾಗಿರಬೇಕೇ ಹೊರತು ಕೃಪಣರಾಗಬಾರದು. ಮಾರ್ಕ್ಸ್ ವಾದ, ಲೆನಿನ್ ವಾದ, ಗಾಂಧೀ ವಾದಗಳನ್ನು ನಾನು ಸರಿಯಾಗಿ ಅರ್ಥ ಮಾಡಕೊಂ ಡಿರುವೆ. ನಾವು ಬಡವರಾಗಿದ್ದಿದ್ದರೆ ಇದೆಲ್ಲಾ ಬೇಡವೇಬೇಡವಾಗಿತ್ತು. ಆದರೆ, ಹಾಗಲ್ಲವಲ್ಲಾ ?"

"ಮುಂದೇನು ಬೇಸರವೋ ಎಂಬ ಯೋಚನೆ ಅಷ್ಟೆ."

"ನನಗಾ ಭಯವಿಲ್ಲ. ನಿಮ್ಮನ್ನು ಟೈಲರಿಂಗ್‌ನಲ್ಲೇ ಸಾಕುವೆ. ಮಧ್ಯೆ ಮಧ್ಯೆ ಸಾಮಾಜಿಕ ಸೇವೆ ಮಾಡಿ ಮನಸ್ಸಿಗೆ ಶಾಂತಿ ಪಡೆಯುಕೊಳ್ಳುವೆ ಬಿಡಿ. ನಾನು ಯಾವುದಕ್ಕೂ ಹೆದರುವುದಿಲ್ಲ. ರಾಂದಾದನನ್ನು ಮದುವೆಯಾಗಿದ್ದೇ ಏನಾದರೂ ಸಾಧಿಸಬೇಕೆಂಬ ಉದ್ದೇಶದಿಂದ."

ದೇವಯ್ಯನ ಮುಖಬಿಂಬದ ಮೇಲೆ ವಿಷಾದ ಕಳೆಯ ಛಾಯೆ ಮುದ್ರಿ ಯೊತ್ತಿತು.

ಸೀತಮ್ಮ ದೀರ್ಘ ನಿಟ್ಟುಸಿರನ್ನು ಹೊರಹಾಕಿದಳು.

ಜಗಲಿ ಅಂಚಿನಲ್ಲಿ ನಿಂತು ದೂರ ಗಗನದತ್ತ ದೃಷ್ಟಿಯನ್ನು ಅಟ್ಟಿದಳು ಕುಮುದ್ವತಿ. ಚಂದ್ರಮನಿಲ್ಲದ ನೀಲಾಕಾಶ, ಜಗಜಗಿಸುವ ಅಸಂಖ್ಯಾತ ಬೆಳ್ಳಿಚುಕ್ಕಿಗಳ ಕೂಟ. ಜೆಳರ್ತು ಜೆಂಡಾದ ಬೆಳ್ಮೋಡಗಳ ಮಹಾ

ಮೇಳ. ಅಗಾಧವಾದ ಜಗತ್ತಿನ ತಾಂತ್ರಿಕತೆ ಎಂತಹ ಮಧುಮಯವಾಗಿದೆ? ಲೋಕೇಶ್ವರನ ಶಕ್ತಿ ಸಂಯೋಜನೆಯ ವಿಶೇಷತೆಯ ಒಂದೇ ಒಂದು ಕಣ ವನ್ನಾದರೂ ಸೃಷ್ಟಿಸಲು ಸಾಧ್ಯವೇ ? ಮರುಕ್ಷಣದ ವಿಚಾರ ಏನೆಂದು ನಮಗೊತ್ತಿಲ್ಲ. ಆದರೂ, ನಮ್ಮ ಗರ್ವಕ್ಕೆ ಎಣೆಯೇ ಇಲ್ಲ.

ಸಣ್ಣ ತಿರಸ್ಕಾರದ ನಗು ತುಟಿಗಳಲ್ಲಿ ಮೂಡಿ ಮಾಯವಾಗಿ, ಪುರಾತ ತನವೇ ಆಗಿಹೋಯಿತು ಮರು ಕ್ಷಣದಲ್ಲಿ. ಎದೆಯ ಮೇಲೆ ಎರಡೂ ಕೈ ಗಳನ್ನು ಕಟ್ಟಿಕೊಂಡು ಹಾಗೇ ಮೈಮರೆತು ನಿಂತಿದ್ದಾಳೆ ಕುಮುದ್ವತಿ. ಮನಸ್ಸು ಭವಿಷ್ಯದ ವೇದಿಕೆಯ ಮೇಲೆ ಅಂಡಲೆಯ ಹತ್ತಿತು.......ಈ ಕ್ಷಣಿಕ ಬಾಳಿನಲ್ಲಿ ತಾವು ಸಾಧಿಸಬಹುದಾದ ಸಣ್ಣಪುಟ್ಟ ಕಾರ್ಯ ಯೋಜನೆಗೂ ಎಷ್ಟೊಂದು ತೊಡಕು ? ಮತ್ತು ದುರಾಸೆಯ ಉರುಳು ? ಅಂದಮೇಲೆ...

ಹಿಂದಿನಿಂದ ಬಂದು ಭುಜದ ಮೇಲೆ ಕೈಯಿಟ್ಟು "ಕುಮೂ ಊಟ ಮಾಡೋಣವೇ" ಎಂದ ರಾಮನಾಥ. ದನಿಯಲ್ಲಿ ಪ್ರೇಮದ ಹೊನಲೇ ಹರಿದು ಬಂತು. ಹಾಗೇ ಆ ಕೈಯನ್ನು ಅದುಮಿ ಹಿಡಿದುಕೊಂಡು ತಲೆಗೆ ತಲೆಯನ್ನು ಮೃದುವಾಗಿ ಗಟ್ಟಿಸಿ ಅವಳೆಂದಳು,

"ಊಟದ ಸಮಯವಾಯಿತೇನು ? ಸಮಯ ಉರುಳಿದ್ದೇ ತಿಳಿಯಲಿಲ್ಲ ನೋಡಿ. ಕಾಲಗತಿಯಲ್ಲಿ ಕೊಚ್ಚಿ ಹೋಗುವ ನಮ್ಮ ಆಶೋತ್ತರಗಳು ನಮ್ಮನ್ನು ಯಾವ ದಿಕ್ಕಿಗೆ ಎಳೆದೊಯ್ಯುತ್ತವೆಯೋ ದೇವರಿಗೇ ಗೊತ್ತು. ಆದರೂ, ನಾವು ನಮ್ಮ 'ಇರು'ವಿಕೆಗೆ ಎಂತಹ ಬೆಲೆ ಕೊಡುತ್ತೇವೆ ಈ ಅಶಾಶ್ವತವಾದ ಶರೀರಗಳನ್ನು ದೃಢವಾಗಿ ನಂಬಿ !"

"ನಿಜ ಕುಮೂ. ಮರು ಗಳಿಗೆಯು ನೀಡಬಹುದಾದ ಸುಖ–ದುಃಖ ಗಳ ನೆರಳನ್ನೂ ಸಹ ಅರಿತುಕೊಳ್ಳಲಾರದ ಪರಿಯಿಂದಲೇ ನಾವು ಜಗತ್ತನ್ನು ಮರೆಯಲು ಕಾರಣ. ಅಷ್ಟೇ ಅಲ್ಲ, ಅದರಿಂದಲೇ ನಾವು ಪೂರ್ಣ ಸುಖಿಗಳು ಕೂಡ."

ಇಬ್ಬರ ತುಟಿಗಳಲ್ಲೂ ಮಂದಹಾಸ ಅರಳಿತು. ಒಳ ಹೋದರು. ಊಟದ ಮೇಜು ಅಣಿಯಾಗಿತ್ತು. ಹಿಂದೆಯೇ ದೇವಮ್ಮ ಸೀತಮ್ಮ ಒಳ ಬಂದರು.

"ಈವೊತ್ತು ಊಟಕ್ಕೇನು ಮಾಡಿದ್ದೀ ರಂಗಮ್ಮಾ ?" ಎಂದ ರಾಮನಾಥ.

"ಅಮ್ಮಾವರು ಹೇಳಿದ್ದು ಬಿಸಿಬೇಳೆಬಾತ್. ನಾನು ಮಾಡಿದ್ದು ಮೊಸರು ವಡೆ !"

ಎಲ್ಲರೂ ನಕ್ಕುಬಿಟ್ಟರು.

"ಬಾತಿಗೆ ಬೇಕಾದ ತರಕಾರಿ ಇರಲಿಲ್ಲ. ಅದಕ್ಕೇ...."

"ಇರಲಿ, ಇರಲಿ. ಪರವಾಯಿಲ್ಲ."

೦ ೦ ೦ ೦

ಮುಂದೆರಡು ತಿಂಗಳು ಕಳೆದುವು.

ಸುಖಪ್ರಸವವಾಗಿ ಹೆಣ್ಣುಮಗುವಿನ ತಾಯಿಯಾದಳು ಕುಮುದ್ವತಿ. ಗಂಡುಮಗುವಿನ ನಿರೀಕ್ಷೆಯಲ್ಲಿದ್ದ ಎಲ್ಲರಿಗೆ ನಿರಾಸೆ ಮೂಡಿದರೂ ಎಲ್ಲರ ಪ್ರೀತಿಗೂ ಪಾತ್ರವಾಯಿತು ಮುದ್ದು ಮಗು. ಕುಮುದ್ವತಿ ಬಯಸಿದುದು ಹೆಣ್ಣು ಮಗುವನ್ನೇ. ಪಡೆದುದೂ ಹೆಣ್ಣುಮಗುವನ್ನೇ. ಅವಳ ಹೃದ್ಗಡಲು ಪ್ರೇಮಾಮೃತದಿಂದ ತುಂಬಿ ತುಳುಕಿತು.

ಆಸ್ಪತ್ರೆಯಲ್ಲಿ ಮೂರು ದಿನವಿದ್ದು ಹಿಂದಿರುಗಿದ ಅವಳಿಗೆ ಮನೆಯೀಗ ಸ್ವರ್ಗಸದೃಶ. ಆನಂದವೇ ಮೂರ್ತೀಭವಿಸಿ ಬಂದಷ್ಟು ಮಹದಾನಂದ.

ರಾಮನಾಥನಿಗಂತೂ ಎಷ್ಟು ವರ್ಷಗಳನಂತರ ಬಂದಿದೆ ಮನೆಗೆ ಮಗು. ಮಕ್ಕಳಿಲ್ಲದಿದ್ದರೆ ಮನೆಯೇ ಅಲ್ಲ ಎಂಬ ವಿಚಾರ ದೋಹನಕ್ಕೆ ಉತ್ತರ ಸಿಕ್ಕಿತು ಪ್ರೇಮಪುತ್ಥಳಿಯಿಂದ. ಆ ಎಳೆ ಮಗುವನ್ನೇ ಎತ್ತಿ ಮುದ್ದಾಡುತಿದ್ದ ಮನದಣಿಯೆ.

ರಂಗಮ್ಮ ಒಮ್ಮೆ ಕೆಲಸ ಮಾಡಿದರೆ ಇನ್ನೊಮ್ಮೆ ಮಗುವಿನ ಬಳಿ ಕುಳಿತು ಲಾಲಿಸುವಳು ಆನಂದ ಸ್ರೋತವನ್ನು ಹರಿಸುತ್ತ. ಸೀತಮ್ಮ–ದೇವಯ್ಯನವರಿಗೂ ಎಲ್ಲಿಲ್ಲದ ಸಂತಸ. ಹೊತ್ತು ಆತ್ಮೀಯತೆಯ ಸನ್ನಿಧಿಯಲ್ಲಿ ಸಾನಂದದಿಂದ ಉರುಳುತಿತ್ತು.

ದಿನಗಳು ವಾರಗಳು ಕಳೆದುವು.

ಮಗುವಿನ ನಾಮಕರಣೋತ್ಸವಕ್ಕೆ ಬಂಧು ಬಳಗವನ್ನೆಲ್ಲಾ ಆಹ್ವಾನಿಸಿ ಔತಣಕೂಟವನ್ನೇರ್ಪಡಿಸಿದ ರಾಮನಾಥ. ಶಿವಾನಿ ಮತ್ತೆ ಎಳೆಮಗುವಿನ ತಾಯಾದುದರಿಂದ ಬಂದಿರಲಿಲ್ಲ. ಸರಸಿಗೆ ಕಳುಹಿಸಿದ ಆಹ್ವಾನ ಪತ್ರಿಕೆಗೆ ಉತ್ತರವೂ ಇಲ್ಲ ; ತಾನು ಬರಲೂ ಇಲ್ಲ. ತುಂಬಿದ ಮನೆಯಲ್ಲಿ ಬಹು ಜನರ ಸಮಾರಂಭ. ನಾಮಕರಣದನಂತರ ಭೂರೀ ಭೋಜನದ ಏರ್ಪಾಡು.

ಹೆಣ್ಣುಮಕ್ಕಳು ಜೋಗುಳ ಹಾಡಿ ತೊಟ್ಟಿಲು ತೂಗಿ ಶ್ರೀನಿಧಿ ಎಂದು ಹೆಸರಿಸಿದರು ಸುಂದರ ಮಗುವಿಗೆ. ನಗೆಮಾತುಗಳ ಹಾಸ್ಯ ಪರಿಹಾಸ್ಯಗಳ ಚಟಾಕಿಯೊಂದಿಗೆ ಆನಂದರಸ ಚೆಲ್ಲಿ ಸೂಸಿತು ಪದ್ಮಾಲಯದಲ್ಲಿ.

ಸಂಜೆಯ ಇಳಿಹೊತ್ತಿಗೆ ಎಲ್ಲರೂ ಹೊರಡುತ್ತಲೂ ಆತ್ಮೀಯತೆಯಿಂದ ಬೀಳ್ಕೊಟ್ಟರು ಅತಿಥೇಯರು. ಸಮೀಪಸ್ಥರು ನಡೆದು ಹೋದರು. ದೂರದ ಬಂಧುಗಳು ಕಾರುಗಳಲ್ಲಿ ಹೊರಟರು. ಸಾವಿತ್ರಿ-ನಾಗಮ್ಮ ಇವರು ಹೆರಿಗೆಯಾದಂದೇ ಬಂದಿದ್ದರು. ಅವರೂ ಇಂದು ಹೊರಟರು. ಮಾಮರದ ನೆತ್ತಿಯಲ್ಲಿ ಕೋಗಿಲೆಯೊಂದು ಹುದುಗಿ ಹಾಡಿತು ಕುಹು ಕುಹೂೂೂ ! ಕುಹು ಕುಹು ೂೂೂೂ !

ಒಂದೆರಡು ಬಾರಿಯೇ ? ಮತ್ತೆಮತ್ತೆ ಹಾಡುತ್ತಲೇ ಇದೆ, ಇನಿದನಿಯಲ್ಲಿ.

"ದೇವರು ಎಂತಹ ಅಮೋಘ ಸ್ವರವನ್ನು ನೀಡಿದ್ದಾನೆ ಕೋಗಿಲಿಗೆ ? ಬಲು ಪುಣ್ಯ ಜೀವಿಗಳು ಕೋಗಿಲೆಗಳು."

ರಾಮನಾಥನ ಮಾತಿಗೆ ದೇವಯ್ಯ "ಅಂಥ ಸುಸ್ವರ ಹೊಂದಿದ್ದರೂ ಅದಕ್ಕೆಷ್ಟು ಸಂಕೋಚ ? ಅದೆಂದಾದರೂ ಸೃಷ್ಟಿಗೆ ನಿಲುಕುತ್ತದೆಯೇ ?"

"ಬಲ್ಲಿದರ ಜಾಣ್ಮೆ ಅದು."

"ಏನಿಲ್ಲದವರೇ ಬಡಾಯಿ ಕೊಚ್ಚುವುದು ?"

"ಖಂಡಿತ......"

ಒಳಗಡೆ ಮಗು ಅತ್ತ ಧ್ವನಿ ಕೇಳಿಬರುತ್ತಲೂ ಒಳ ಹೋಗುತ್ತಾ ಕುಮುದ್ವತಿ ನುಡಿದಳು,

"ನನ್ನ ಮಗಳ ಸ್ವರವೂ ಹಾಗೆಯೇ ಇದೆ ಬಿಡಿ."

ಎಲ್ಲರ ಮುಖದಲ್ಲೂ ಅರಳಿತು ಮಂದಹಾಸ, ಸಾನಂದಪೂರ್ವಕವಾಗಿ.

ಆಕಾಶವಾಣಿಯಲ್ಲಿ ಮಧುರವಾದ ಸ್ತ್ರೀ ಕಂಠದಿಂದ ಸಂಗೀತವೊಂದು ಹೇದಿು ಬರುತಿತ್ತು,

ತ್ವಯಿಮಯಿ ಸರ್ವತ್ರೈಕೋ ವಿಷ್ಣುಃ ।

ಸರ್ವಾಸ್ಮಿನ್ನಪಿ ಪಶ್ಯಾತ್ಮಾನಂ

ಸರ್ವತ್ರೋತ್ಸಜ ಭೇದ ಜ್ಞಾನಂ ।

ರಾಮನಾಥ ಭಾವಾನಿಷ್ಟನಾಗಿ ಆಲೈಸಿದ. ಈ ಜೀವನ ಯೋಗ ಅಶಾಶ್ವತವಾದ ಶರೀರಗಳ ಮೇಲೆ ಅವಲಂಭಿಸಿಯೂ ನಾವು ನಮ್ಮನ್ನು ಕಂಡುಕೊಳ್ಳುವ ಕಡೆ ಗಮನ ಹರಿಸುವ ಸುವಿಚಾರವನ್ನೇ ಮರೆತುಬಿಡುವುದು ಆಶ್ಚರ್ಯ...ಎನಿಸಿದಾಗಲೇ ದೇವಯ್ಯ ಅಂದ "ಈ ಪ್ರಪಂಚ ಇಷ್ಟೆ. ದೀಪದ ಬುಡ ಎಂದೆಂದಿಗೂ ಕತ್ತಲೆಯೇ...."

"ಅದು ನಿಜ..."ಪ್ರಯತ್ನಿಸಿದರೂ ಮುಂದೆ ಮಾತುಗಳು ಹೊರಡಲಿಲ್ಲ. ದೃಷ್ಟಿ ದೂರ ಗಗನ ನೀಲಿಯಲ್ಲಿ ಚಲಿಸುತಿತ್ತು. ಮನಸ್ಸು ಇನ್ನೆಲ್ಲೋ...

— o —

೧೫

ಅದೊಂದು ತೀರಾ ಸಂಕಟಕರವಾದ ದುರ್ದಿನ.
ಮನಸ್ಸಿಗೆ ಆಘಾತವಾಗುವಂತಹ ದುಃಖಭರಿತ ದಿನ.

ಸರಸಿಯ ಸಾವಿನ ಘೋರ ಸುದ್ದಿ ತಾಯಿ ಮನೆಗೆ ತಲ್ಪಿದ್ದು ಸ್ವಲ್ಪ ತಡವಾಗಿಯೇ. ತಂದೆ ತಾಯಿಯವರು ಹೋಗಿ ನೋಡುತ್ತಾರೆ ಶವ ದಹನ ವಾಗಿ ಎಂದೋ.

"ಹುಡುಗಿಗೆ 'ಬ್ರೈನ್ ಫೀವರ್' ಬಂದಿತ್ತು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಡಾಕ್ಟರಿಗೆ ತೋರಿಸಿದರೂ ಪ್ರಯೋಜನವಾಗಲಿಲ್ಲ, ನೋಡಿ. ನಾವೇನೂ ಅಲಕ್ಷ್ಯ ತೋರಲಿಲ್ಲ. ಬಾಯಿ ಹುಣ್ಣಾಗಿ ಶವ ಕೊಳೆಯಹತ್ತಿದು ದುದರಿಂದ ದಹನ ಕಾರ್ಯ ನಡೆಸಲೇಬೇಕಾಯ್ತು, ನಡೆಸಿದೆವು."

"ಮೊದಲೇ ನಮ್ಮನ್ನೇಕೆ ಕರೆಯಲಿಲ್ಲ ?"

"ಇಷ್ಟು ಬೇಗನೆ ಮರಣ ಸಂಭವಿಸುತ್ತೆ ಎನಿಸಲಿಲ್ಲ ನಮಗೆ. ತುಂಬ ಅನ್ಯಾಯವಾಯ್ತು. ಏನು ಮಾಡೋಣ ? ದಯವಿಟ್ಟು ಮನಸ್ಸಿಗೆ ಹಚ್ಚಿ ಕೊಳ್ಳಬೇಡಿ. ಮುಖ್ಯವಾಗಿ ದೈವೇಚ್ಛೆ ಹಾಗಿತ್ತು."

ನೆರೆಹೊರೆಯವರ ಪ್ರಕಾರ ಕೊರಳಿಗೆ ನೇಣು ಬಿಗಿದಿದ್ದಾರೆ ಎಂದು. ಸತ್ತ ಸುದ್ದಿ ಬೆದಕಿದರೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಹೇಳುತಿ ದ್ದಾರೆ. ಯಾರಿಗೂ ಖಚಿತವಾದ ಸುದ್ದಿ ತಿಳಿಯದು. ಊಹೆ ಮಾತ್ರ. ಹಾಗೇ ಒಬ್ಬರು ಬಿರುಸು ಮಾತು ಕೇಳಿಸಿತು ಅಂದರೆ, ಇನ್ನೊಬ್ಬರು ಇಲ್ಲ ಎನ್ನುತ್ತಾರೆ ಬೆಳಿಗ್ಗೆ ಇದ್ದಕ್ಕಿದ್ದಂತೆಯೇ ಸಾವಿನ ಸುದ್ದಿ ! ಶವ ಪರೀಕ್ಷೆಯ ನಾಟಕವಾಡಿ ತಕ್ಷಣವೇ ಅಂತ್ಯ ಸಂಸ್ಕಾರ ನಡೆಸಿಬಿಟ್ಟರು. ಇದು ಕೊಲೆಯೇ ಹೊರತು ನಿಜವಾದ ಸಾವಲ್ಲ ಎಂದು ಹೊರಗಿನವರು ಅಂಬೋಣ.

ಶಂಕರಪ್ಪ ದಂಪತಿಗಳು ದುಃಖ ಸಂಕಟದಿಂದ ಹಿಂದಿರುಗಿ ಬಂದರು. ಜಾನಕಮ್ಮ ಹಾಸಿಗೆ ಹಿಡಿದಳು, ಶಂಕರಪ್ಪ ತಲೆಯ ಮೇಲೆ ಕೈ ಹೊತ್ತು ಕುಳಿತ.

ಪದ್ಮಾಲಯಕ್ಕೆ ವಿಷಯ ನಾಲ್ಕನೆಯ ದಿನ ತಿಳಿಯಿತು. ಕುಮುದ್ವತಿ ಮತ್ತು ರಾಮನಾಥರು ಮಗುವನ್ನು ಸೀತಮ್ಮನ ಬಳಿ ಬಿಟ್ಟು ಅಲ್ಲಿಗೆ ಹೊರಟರು.

ಜಾನಕಮ್ಮ ಕಲ್ಲಿಗಿಂತ ಕಲ್ಲಾಗಿ ಹಾಸಿಗೆಯಲ್ಲಿ ಮಲಗಿದ್ದಾಳೆ. ತಲೆ ದಿಂಬು ತೊಯ್ದು ಹೋಗಿದೆ. ಅವರನ್ನು ನೋಡಿದರೆ ಮನ ಕರಗುವಂತಹ ದೃಶ್ಯ.

"ನೀನು ಹೇಳಿದಂತೆ ನಾವು ಹೋಗಲಾಗಲೇ ಇಲ್ಲ. ಒಂದು ವಾರ ಬಿಟ್ಟು ಹೋಗೋಣ ಎಂದು ಕಾದಿದ್ದೆವು. ಅವಳು ನಮಗೊಂದು ಕಾಗದವನ್ನೂ ಬರೆಯಲಿಲ್ಲ. ಪಾಪ, ಅದೆಷ್ಟು ಹಿಂಸೆ ಕೊಟ್ಟರೋ, ಹೇಗೆ ಸಹಿಸಿಕೊಂಡಳೋ....ಆ ದಿನ ಅವನು ಕರೆಯ ಬಂದಾಗ "ನಾವು ಇನ್ನೂ ಎರಡು ವಾರ ಇರಲಿ. ಅನಂತರ ಕಳುಹಿಸುತ್ತೇವೆ" ಎಂದು ಎಷ್ಟು ಕೇಳಿಕೊಳ್ಳಲಿಲ್ಲ ? ಅದಕ್ಕೆ ಒಪ್ಪಲೇ ಇಲ್ಲ ನಂದೀಶ. ಅವಳನ್ನು ಹೊರಡಿಸಿಯೇಬಿಟ್ಟ. ಇಲ್ಲಿಂದ ಹೋಗಿ ಆರು ತಿಂಗಳೊಳಗಾಗಿ ಈ ಸುದ್ದಿ ! ಧೂರ್ತ ಜನ....! ಇಷ್ಟು ನಿಶ್ಚಯಿಸುತ್ತಾರೆ ಎಂದು ನಾವು ತಿಳಿಯಲಿಲ್ಲ. ಸ್ವಲ್ಪ ದಿನ ಬಿಟ್ಟು ಹೋಗಿ ಬರೋಣ ಎಂದುಕೊಂಡಿದ್ದೆವು. ಹೆತ್ತೊಡಲಿಗೆ ಕಿಚ್ಚು ಹಚ್ಚಿದರು" ಬಿಕ್ಕಿದಳು ಅವಳು.

"ಪಾಪ, ಅನ್ಯಾಯವಾಯಿತು. ಪ್ರಾಣ ಕಳೆದುಕೊಳ್ಳುವ ಸ್ಥಿತಿ ತಲುಪುವವರೆಗೆ ಅಲ್ಲಿದ್ದಳಲ್ಲಾ ಅದೇ ವ್ಯಥೆ. ಅವರು ಕಾಗದ ಬರೆಯುವುದಕ್ಕೂ ಅವಕಾಶ ಕೊಡುತ್ತಿರಲಿಲ್ಲವೇನೋ....ಅದೇ ದುಃಖ–ಸಂಕಟ. ಛೀ ! ಛೀ ! ಎಷ್ಟು ಕಷ್ಟ ಅನುಭವಿಸಿದಳೋ....ದೇವರಿಗೇ ಗೊತ್ತು. ಹಿಂಸೆಯಿಂದ ಪ್ರಾಣ ಕಳೆದುಕೊಳ್ಳುವುದೆಂದರೆ ಸಾಮಾನ್ಯವೇ ? ಎಷ್ಟು ಗೋಳಾಡಿದಳೋ......." ಕಂಬನಿ ಮಿಡಿದಳು ಕುಮುದ್ವತಿ.

ಜಾನಕಮ್ಮ ಕುಮುದ್ವತಿಯ ಕೊರಳನ್ನು ಕಟ್ಟಿಕೊಂಡು ಕಂಬನಿಗೆರೆದಳು.

"ನೀನು ಹೇಳಿದ್ದೆ, ಹೋಗಿಬನ್ನಿ ಅಂತ. ನಾನೇ ಎಡೆಗುಂದಿದೆ. ಆದರೆ, ಹೀಗಾಗುತ್ತೆ ಎಂದು ನಾನು ಭಾವಿಸಿರಲೇ ಇಲ್ಲ."

ಇಬ್ಬರಿಗೂ ಕಂಬನಿಯ ಕೋಡಿ ಎರಡೂ ಕಣ್ಣುಗಳಲ್ಲಿ ಹರಿದು ಹೋಯಿತು.

"ಪೋಲೀಸಿಗೆ ದೂರು ಕೊಡಿ."

"ದೂರು ಕೊಟ್ಟು ಮಾಡುವುದೇನು ? ಮಗಳು ಬದುಕುತ್ತಾಳೆಯೇ?"

ಒಡಲ ಸಂಕಟದಿಂದ ಧ್ವನಿ ಗದ್ಗದಿಸಿತು.

ಶಂಕರಪ್ಪ ದುಃಖಭಾರದಿಂದ ಮೂಕಮೌನ ತಾಳಿದ. ಕಣ್ಣುಗಳು ರಂಗುರಂಗಾಗಿದ್ದುವು. ಬಿಸಿಯುಸಿರು ಬಿಟ್ಟು ಸುಮ್ಮನೆ ಕುಳಿತುಕೊಂಡ.

ರಾಮನಾಥ ನುಡಿದ "ನೀವು ಪ್ರಪ್ರಥಮವಾಗಿ ವರದಕ್ಷಿಣೆ ಕೊಟ್ಟಿದ್ದೇ ತಪ್ಪು. ಈಗ ಮಗಳೂ ಇಲ್ಲ, ಹಣವೂ ಇಲ್ಲ. ನೀವು ವರದಕ್ಷಿಣೆ ಕೇಳಿದಾಗಲೇ ಹೆಣ್ಣು ಕೊಡುವುದನ್ನು ನಿರಾಕರಿಸಬೇಕಾಗಿತ್ತು. ನಾನಂದೇ ನಿಮಗೆ ಹಣ ಕೊಡಬೇಡಿ ಎಂದಿದ್ದೆ. ನೀವು ಅವನನ್ನು ಸಂಪೂರ್ಣ ನಂಬಿ ಮೋಸ ಹೋದಿರಿ. ಇನ್ನು ನೀವು ಸುಮ್ಮನಿರಲೇಬಾರದು. ಖಂಡಿತ ಪೋಲೀಸರಿಗೆ ದೂರು ಕೊಟ್ಟುಬಿಡಿ. ಮಗಳ ಮುಖ ನೋಡದಂತೆ ಸುಟ್ಟುಬಿಟ್ಟರಲ್ಲ, ಅದರಲ್ಲೂ ಅವರಲ್ಲಿ ದಹನ ಕ್ರಿಯೆ ಇಲ್ಲವಂತೆ. ಕೊಲೆಯ ಗುಟ್ಟು ಬಯಲಾಗುತ್ತೆ ಎಂದು ಮಾಡಿದ ಕುತಂತ್ರ ಇದು. ನೀವು ತಿಳಿದೂ ತಿಳಿದೂ ಸುಮ್ಮನಿರಬಾರದು. ಅವನನ್ನು ಜೇಲಿಗೆ ಹಾಕಿಸಿ."

ಜಾನಕಮ್ಮ ಮಾತಾಡಲಿಲ್ಲ. ಶಂಕರಪ್ಪ ತಲೆ ಬಾಗಿದ.

ಸ್ವಲ್ಪ ಹೊತ್ತು ಮೌನ ಭಾರದಿಂದ ಉರುಳಿತು. ಅನಂತರ ಶಂಕರಪ್ಪ ಅಂದ,

"ನೀವು ಬೇಕಾದರೆ ಡಾಕ್ಟರನ್ನೇ ಕೇಳಿ ನೋಡಿ ಎಂದು ಸವಾಲು ಹಾಕಿದ ನಂದೀಶ. ಆ ಡಾಕ್ಟರನ್ನೂ ಬುಟ್ಟಿಗೆ ಹಾಕಿಕೊಂಡಿರಬೇಕು. ಇಂತಹ ಡಾಕ್ಟರುಗಳೂ ಇದ್ದಾರೆ ನೋಡಿ ! ಮಗಳಿಲ್ಲ. ಅಲ್ಲಿ ಸ್ವಲ್ಪ ಹೊತ್ತೂ ಇರಲಾಗಲಿಲ್ಲ. ಬಂದುಬಿಟ್ಟೆವು. ನನಗೆ ಏನು ಮಾಡಲೂ ತೋಚುತ್ತಿಲ್ಲ. ದೂರು ಕೊಟ್ಟರೆ ಕೋರ್ಟು ಕಛೇರಿ ಅಲೆಯಬೇಕಲ್ಲ, ನಮ್ಮ ಸಂಕಷ್ಟಗಳೇ ನಮಗೆ ಸಾಕಾಗಿವೆ. ಇನ್ನು ಇದನ್ನೂ ಹಚ್ಚಿಕೊಳ್ಳುವುದೆಂದರೆ ತಲೆ ಕೆಟ್ಟೀತು !"

"ಹಾಗೆಂದರೆ ಅವರಿಗಿನ್ನೂ ಸರಾಗ."

"ನಾವು ಎಷ್ಟು ಹೋರಾಟ ನಡೆಸಿದರೂ ಮಗಳಂತೂ ಬರುವುದಿಲ್ಲ. ಇದರಿಂದ ನಮಗಿಷ್ಟು ಮಾನಸಿಕ ಹಿಂಸೆ ಮತ್ತು ಕಾಲವ್ಯಯ ಮತ್ತೇನಿಲ್ಲ."

"ಹಾಗೆಂದು ಸುಮ್ಮನಿದ್ದರೆ ತಪ್ಪಿತಸ್ಥರಿಗೆ ಶಿಕ್ಷೆ ಏನೇನೂ ಬೇಡವೇ ? ನೀವೇಹೀಗೆಂದುಬಿಟ್ಟರೆ ದೂರು ಕೊಡುವವರಾರು ? ಇವರನ್ನು ಸುಮ್ಮನೆ ಬಿಟ್ಟರೆ ಮುಂದೆ ಎಲ್ಲರೂ ಹೀಗೆಯೇ ಮಾಡುತ್ತಾರೆ, ಗೊತ್ತೇ ? ಮುಂದೆ ಮತ್ತೆಷ್ಟು ಹೆಣ್ಣುಗಳು ಬಲಿಯಾಗುತ್ತಾರೆ. ಇದನ್ನೆಲ್ಲಾ ನೀವು ಯೋಚಿಸಿದ್ದೀರಾ ?"

"ನಾವು ಮುಂದೆ ಹೋದರೂ ಅದರಲ್ಲಿ ಸಂತೋಷವಿಲ್ಲ. ಕಂಬನಿ ಸುರಿಸುತ್ತಲೇ ಕೋರ್ಟಿಗೆ ಹೋಗಬೇಕು. ಕೋರ್ಟುಗಳಲ್ಲೂ ನ್ಯಾಯ ಕಣ್ಮರೆಯಾಗಿದೆ."

"ಏನಾದರೂ ಆಗಲಿ, ವಿಷಯ ಕೋರ್ಟು–ಕಛೇರಿ ಹತ್ತಲೇಬೇಕು."

ಅನಂತರ ದಂಪತಿಗಳು ದೂರು ಕೊಡಲು ಒಪ್ಪಿಕೊಂಡರು.

○ ○ ○ ○

ತೊಟ್ಟಿಲಲ್ಲಿ ಕೈಕಾಲು ಆಡಿಸುತ್ತಾ ನಗುತಿದ್ದಾಳೆ ಶ್ರೀನಿಧಿ.

ಎಳೆನಗುವಿನ ಅಲೆ ಮಾಡು ಮುಟ್ಟುವಂತೆ ಮೊಳಗುತಿದ್ದರೆ ಎಲ್ಲರಿಗೂ ಆನಂದ. ಎಲ್ಲರ ಉಳಿತಾಯದ ಸಮಯಕ್ಕೆ ಈಗ ಬಹಳ ಬೆಲೆ. ಗಂಭೀರ

ವಾತಾವರಣಕ್ಕೊಂದು ಮಗು ಬಂದುದು ಎಲ್ಲರ ರಾಗ ಭಾವಗಳ ಉದ್ದೀಪನೆಗೆ ದಾರಿ. ರಾಮನಾಥ ಮಗಳನ್ನು ಭುಜದ ಮೇಲೆ ಕೂಡಿಸಿಕೊಂಡು ಕುದುರೆಯಾಟ ಆಡುತ್ತಿದ್ದ. ನಕ್ಕು ನಲಿಯುತ್ತಿತ್ತು ಮಗು, ಆನಂದರಸವನ್ನು ಸೂಸಿ. ಮಗುವಿನ ಆಗಮನ ಕತ್ತಲೆಗೆ ದೀಪ ತಂದಂತೆ ಮಹೋಜ್ವಲವಾಯಿತು ಮನೆಯ ಬೆಳಕು.

ಎತ್ತಿನ ಗಾಡಿಯೊಂದು ಗೆಜ್ಜೆ ಸರಗಳ ಗೈಲ್‌ಗೈಲ್ ಸದ್ದಿನೊಡನೆ ಗಡಬಡಿಸಿ ಬಂದು ಮುಂಬಾಗಿಲ ಅಂಗಳದಲ್ಲಿ ಬಂದು ನಿಂತಿತು. ಅದರಿಂದ ಐವರು ಮಕ್ಕಳೊಡನೆ ಇಳಿದಳು ಶಿವಾನಿ. ಅವಳು ಕುಮುದ್ವತಿಯ ಮಗುವನ್ನು ನೋಡಿರಲಿಲ್ಲ. ಅಂದು ನೋಡಿ ಹೋಗುವ ಉದ್ದೇಶದಿಂದಲೇ ಬಂದಿದ್ದಳು. ಸೋದರಮಾವ ಮತ್ತು ಅತ್ತೆ ತಮ್ಮ ಮನೆಯನ್ನು ಬಿಟ್ಟು ಮಗಳ ಮನೆಯನ್ನೇ ಸೇರಿಕೊಂಡ ಮೇಲೆ ಅವಳಿಗೆ ತೌರಿನ ದಾರಿ ಕಟ್ಟಿತು. ಹೋಗಿ ಬರುವುದಕ್ಕೆ ಉತ್ತಮ ಬಾಂಧವ್ಯದಿಂದ ಕೂಡಿದ ಮನೆಯೇ ಇಲ್ಲವಾಗಿ ಹೃನ್ಮನಗಳಿಗೆ ಕಿಸಿಸಿಗೆ. ಅದರಿಂದ ಕುಮುದ್ವತಿಯ ಮನೆಗೇ ಬಂದಿದ್ದಳು. ಸೀತಮ್ಮ ಎಲ್ಲರಿಗೂ ಕೈಕಾಲಿಗೆ ನೀರು ಕೊಟ್ಟು ಬಲ್ಮೆಯಿಂದ ಬರಮಾಡಿಕೊಂಡಳು.

ಅಂದಿಂದಿನ ಮಾತುಕತೆಗಳೆಲ್ಲಾ ಒಂದೇ ಬಾರಿಗೆ ಹೊಮ್ಮುವಂತೆ ಪ್ರೇಮವತ್ತಾಗಿ ಹರಿದುವು ಬಳಬಳನೆ. ಮಗುವಿನ ಸ್ನಾನದಲ್ಲಿ ಗಮನವಿಟ್ಟಿದ್ದ ಕುಮುದ್ವತಿ ಬಂದು ಕೂಡಿಕೊಂಡಳು. ಶಿವಾನಿ ಮಗುವನ್ನು ಎತ್ತಿಕೊಂಡು ಮನದಣಿಯೆ ಮುದ್ದಿಟ್ಟಳು.

"ಪರವಾಯಿಲ್ಲ ಕುಮೂ, ನಿನ್ನ ಮಗಳಿಗೆ ಹೊಸಬರೆಂಬ ಭಯ ಇನಿತೂ ಇಲ್ಲ, ಮಕ್ಕಳು ಇದ್ದರೆ ಹೀಗಿರಬೇಕು. ನಿನಗಿಂತ ಹೆಚ್ಚಾಗಿ ರಾಂದಾದರನ್ನೇ ಹೋಲುತ್ತೆ ಮಗು. ತುಂಬಾ ಆಟದ ಅರಗಿಳಿ. ನಿನಗೆ ಇಷ್ಟು ದಿನಗಳ ಮೇಲೆ ಬಂದ ಮಗು ರಚ್ಚೆ ಹಿಡಿದು ಅಳುತ್ತ ಕರಕರೆ ಕೊಡಬೇಕಿತ್ತು ! ನಿನಗೆ ಸುಖ ಕೊಡುವುದನ್ನು ನೋಡಿದರೆ ನನಗೆ ಹೊಟ್ಟೆ ಉರಿ ! ಮುಂದಿನ ವರ್ಷ ನಿನಗಿನ್ನೊಂದು ಗಂಡು ಮಗು !" ಹಾಸ್ಯಪ್ರಧಾನವಾಗಿ ನುಡಿದಳು ಶಿವಾನಿ, ಪ್ರಸನ್ನ ಮುಖಬಿಂಬದಲ್ಲಿ ಸುಹಾಸವನ್ನು ಸೂಸಿ.

"ಶ್ರೀಹರೀ ! ನನಗಿದೊಂದೇ ಸಾಕು. ನಾನಿನ್ನು ಹೆರಲಾರೆ. ವಂಶಕ್ಕೊಂದು ಕುಡಿಯಿದ್ದರೆ ಸಾಕಲ್ಲ. ಮತ್ತೇಕೆ ಇನ್ನೊಂದು ?"

ಹೆಣ್ಣುಮಗಳು ಎಷ್ಟು ದಿನವಿದ್ದಾಳು ? ಮದುವೆಯಾದ ಮೇಲೆ ಅವಳೇ ಬೇರೆ ನೀವೇ ಬೇರೆ. ಅನಂತರ....?"

ಕೊನೆಯ ವಾಕ್ಯ ಅನಂತರ...? ಎದೆಯಾಳಕ್ಕಿಳಿಯಿತು.

ಒಂದು ಗಳಿಗೆ ಯೋಚಿಸಿ ನುಡಿದಳು ಕುಮುದ್ವತಿ,

"ಅಳಿಯನನ್ನೇ ಮನೆಯಲ್ಲಿಸು ಎಂದರಾಯಿತು."

"ಅವನು ಕೇಳಬೇಕಲ್ಲ? "

"ಹೇಗೆಂದರೆ ಹಾಗೆ ಎಲ್ಲವೂ ಕಾಲೋಚಿತ."

ಕುಮುದ್ವತಿ ಶಿವಾನಿಯ ಸಂಸಾರವನ್ನು ಕಣ್ತುಂಬ ನೋಡಿದಳು. ಮೂರು ಹೆಣ್ಣು, ಎರಡು ಗಂಡು. ಶ್ರೀನಿಧಿಯನ್ನು ನೋಡುತ್ತ ಆನಂದಪರವಶರಾಗಿದ್ದಾರೆ ಮಕ್ಕಳು. ಕೊನೆಯ ಗಂಡುಮಗು ಶ್ರೀನಿಧಿಗಿಂತ ಎರಡು ತಿಂಗಳು ಮಾತ್ರ ಹಿರಿದು.

ಹುಡುಗಿಯರು "ಅಮ್ಮಾ ನಾನು ಎತ್ತಿಕೊಳ್ಳುವೆ !" ಎಂದು ಕೈಚಾಚಿದರು, ಕಾಡಿಬೇಡಿ.

ಶಿವಾನಿ ಎಲ್ಲರಿಗೂ ಕೈಯಿಂದ ಮುಟ್ಟಿಸಿದಳು "ನೀವು ಎತ್ತುವುದಾದರೆ ಈಗ ಕಷ್ಟ, ಮಗು ಸ್ವಲ್ಪ ದೊಡ್ಡದಾಗಲಿ. ಅನಂತರ ಎತ್ತುವಿರಂತೆ, ಇನ್ನೊಮ್ಮೆ ಬಂದಾಗ ಮಗು ಬೆಳೆದಿರುತ್ತೆ. ಈಗ ಸಾಕು....ಸಾಕು. ನಿಮ್ಮ ಕೊಳಕು ಕೈಯಲ್ಲಿ ಮುಟ್ಟಬಾರದು" ಎಂದಳು ಶಿವಾನಿ.

ರಂಗಮ್ಮ ಎಲ್ಲರಿಗೂ ಕಾಫಿ ತಿಂಡಿಯ ಆತಿಥ್ಯ ನೀಡಿದಳು.

ಕುಮುದ್ವತಿ ಶಿವಾನಿಯನ್ನು ಕುರಿತು "ಇನ್ನು ಮುಂಬರುವ ಮಕ್ಕಳನ್ನಾದರೂ ತಡೆಗಟ್ಟಿ. ನೀವು ಇನ್ನೂ ಹೆರುವುದೆಂದರೆ ಸೋತು ಹೋಗುತ್ತೀರಿ. ಈಗಲೇ ಎಚ್ಚರ ವಹಿಸಲೇಬೇಕು."

ಸೀತಮ್ಮ ಅವಳ ಪರವಾಗಿ ಮಾತಾಡಿದಳು "ಒಬ್ಬೊಬ್ಬರಿಗೆ ಒಂದೊಂದು ಬಗೆಯ ಸಂಕಷ್ಟ. ಅವಳು ಏನು ಮಾಡಿಯಾಳು? ಅವಳು ಎಷ್ಟೆಂದರೂ ಹೆಣ್ಣು–ಅಬಲೆ–ದೀನೆ. ಅಂದಮೇಲೆ 'ಶರಣು' ಎನ್ನದಿದ್ದರೆ ಗತಿಯೇ ಇಲ್ಲ. ಗಂಡಿನ ಭುಜಬಲದ ಮುಂದೆ ಅವಳು ಮಾಡುವುದಾದರೂ ಏನು? ಧರ್ಮ ಕರ್ಮ ಇಲ್ಲದವರ ಮುಂದೆ ವಾದ ಸಲ್ಲ. ಪುರುಷ ಪ್ರಧಾನವಾದ ದೇಶದಲ್ಲಿ ನಾವು ಏನು ಮಾಡಿದರೂ ತಪ್ಪಾಗುತ್ತದೆ. ಎಲ್ಲೋ ಕೆಲವರಿರುತ್ತಾರೆ ಪುಣ್ಯವಂತರು. ಅಂತಹವರ ಬದುಕು ಸುಂದರವಾಗಿರುತ್ತೆ. ಆ ಪುಣ್ಯ ಎಲ್ಲರಿಗೂ ಇರಬೇಕಲ್ಲ." ಭಾವನಾಪೂರ್ವಕವಾಗಿ ನುಡಿ ಹೊರಬಿತ್ತು. ಮುಖಬಿಂಬದಲ್ಲಿ ಕಾರುಣ್ಯ ಭಾವಮುದ್ರೆಯೊತ್ತಿತು.

ಶಿವಾನಿ ಮೂರು ದಿನ ಇದ್ದು ಸಂತೋಷದಿಂದ ಕಾಲಹರಣ ಮಾಡಿದಳು ಮಕ್ಕಳ ಸಹಿತ.

○ ○ ○ ○

ಹೊರಗಣ ಕೆಲಸದ ಆಳು ಮಂಜು ಬಂದು ಹೇಳಿದ,

"ಅಮ್ಮಾ, ಎಮ್ಮೆಯೂ ಹಾಲು ಕೊಡಲಿಲ್ಲ. ಹಸುವೂ ಹಾಲು ಕೊಡಲಿಲ್ಲ. ಹಾಲಿಗೇನು ಮಾಡುವುದು?"

"ಇನ್ನೂ ಸ್ವಲ್ಪ ಪ್ರಯತ್ನಪಡು."

"ನಾನು ನನ್ನ ಕೈಲಾದ ಸಾಹಸವನ್ನೆಲ್ಲಾ ಮಾಡಿದೆ. ಆದರೂ, ಕೊಡಲಿಲ್ಲ ನೋಡಿ."

"ಸ್ವಲ್ಪ ತಿಂಡಿ ಇಟ್ಟಿದ್ದರೆ?"

"ಅವು ಸೊಗಸಾಗಿ ತಿನ್ನುತ್ತವೆ ಅಷ್ಟೆ. ಕರು ಕಟ್ಟಿಹಾಕಿ ಬಂದೆ."

"ಆಗಲಿ ಬಿಡು. ಇನ್ನು ಬೆಳಿಗ್ಗೆಯೇ ಸೈ."

ಅವನು ಹೊರಟುಹೋದ.

ರಾತ್ರಿ ಎಲ್ಲರೂ ದೀಪ ಆರಿಸಿ ಮಲಗಿದನಂತರ ಸದ್ದಿಲ್ಲದೆ ಆಲೈಸಿದರೆ ಹಟ್ಟಿಯಲ್ಲಿ ಹಾಲು ಕರೆಯುವ ಸದ್ದು ! ದೇವಯ್ಯ ರಾಮನಾಥ ಇಬ್ಬರೂ ಕೈಯಲ್ಲಿ ಟಾರ್ಚ್ ಹಿಡಿದು ಹಟ್ಟಿಗೆ ಹೋಗಿ ಸ್ವಿಚ್ ಅದುಮಿದರೆ ಅದೇ ಮಂಜು ಹಾಲು ಕರೆದುಕೊಳ್ಳುತಿದ್ದಾನೆ ! ಆ ಕೂಡಲೇ ಅವನು ಚೊಂಬನ್ನು ಅಲ್ಲಿಯೇ ಬಿಟ್ಟು ಓಡಿಹೋದ.

ಇಬ್ಬರೂ ಗಟ್ಟಿಯಾಗಿ ನಕ್ಕುಬಿಟ್ಟರು.

ಅಂದಿನ ಟಪ್ಪಾಲಿನಲ್ಲಿ ಬಂದ ಅನೇಕ ಕಾಗದಗಳೊಂದಿಗೆ ಕೋರ್ಟಿನಿಂದ ಬಂದ ಕರೆಯೋಲೆಯೊಂದಿತ್ತು. ಏನೆಂದು ಒಡೆದು ನೋಡಿದರೆ ಸರಸಿಯ ಕೊಲೆ ಮೊಕದ್ದಮೆಯಲ್ಲಿ ಸಾಕ್ಷಿಯಾಗಿ ಬರಲು ನಿರೂಪ ಬಂದಿತ್ತು ಕುಮುದ್ವತಿಗೆ. ಅಂದೇ ಜಾನಕಮ್ಮನಿಗೆ ತಾನು ಸಾಕ್ಷಿ ಹೇಳುವುದಾಗಿ ಹೇಳಿ ಬಂದಿದ್ದಾಳೆ. ಅದರ ಪ್ರಕಾರ ಹೋಗಲೇಬೇಕು. ಅವಳು ಸಾಕ್ಷಿ ಹೇಳುತ್ತೇನೆಂದು ಒಪ್ಪಿಕೊಂಡುದುದು ರಾಮನಾಥನಿಗೆ ತಿಳಿದಿರಲಿಲ್ಲ. ಅದನ್ನು ನೋಡಿದ ಮೇಲೆ ಅಸಮಾಧಾನ ಭುಗಿಲೆದ್ದಿತು ಮನದಲ್ಲಿ.

"ನೀನು ಹಾಗೆಂದು ಒಪ್ಪಿಕೊಳ್ಳಬಾರದಾಗಿತ್ತು. ಈ ಮೊಕದ್ದಮೆಗಳು ವರ್ಷಾನುಗಟ್ಟಲೆ ಬೆಳೆಯುತ್ತವೆ. ನೀನು ಏಕಾಂತ ನಿಷ್ಠೆಯಿಂದ ಒಪ್ಪಿಗೆ ಕೊಟ್ಟಿದುದು ತಪ್ಪು. ಹತ್ತಿರದವರು ಯಾರಾದರೂ ಸಾಕ್ಷಿ ಹೇಳುತಿದ್ದರು. ಈ ಹಾಳು ಹವ್ಯಾಸ ನಿನಗೇಕೆ ಬೇಕು ? ಇದು ಖಂಡಿತ ತೀರಾ ಅಸಹ್ಯ. ನನಗೊಂದು ಮಾತು ಹೇಳಲಿಲ್ಲ ಕೂಡ."

ಅವನ ಮುಖಭಾವದಲ್ಲಿ ಕಂಡುಬಂದ ಕೋಪದ ಮುದ್ರೆಯನ್ನು ನೋಡಿದಳು ಕುಮುದ್ವತಿ. ಅವನೆಂದೂ ಅಷ್ಟು ಕೋಪ ತಳೆದವನಲ್ಲ. ಆ ಮುಹೂರ್ತದಲ್ಲಿ ಏನೆನ್ನಬೇಕೋ ಹೊಳೆಯಲಿಲ್ಲ. ಹೋಗಲೋ ಬೇಡವೋ ಎಂಬ ಪ್ರಶ್ನೆಯೂ ಎದ್ದಿತು ತಲೆಯಲ್ಲಿ, ಪ್ರಯತ್ನಿಸಿದರೂ ತುಟಿಗಳು ಬಿರಿಯಲಿಲ್ಲ. ಎಂದೂ ಇಂತಹ ತೊಡಕಿಗೆ ಸಿಕ್ಕಿರಲಿಲ್ಲ ಎಂದುಕೊಂಡಳು ಮನಸ್ಸಿನಲ್ಲಿ. ಚಿಂತಾಕ್ರಾಂತವಾಯಿತು ಚಿತ್ತ.

ದೇವಯ್ಯ ಎದುರಿಗೆ ಬಂದು "ಕುಮೂ, ನೀನೇಕೆ ಇಂತಹ ಹುಚ್ಚು ಸಾಹಸಕ್ಕೆ ಕೈ ಹಾಕುತ್ತೀ ಹೇಳು ? ಒಳ್ಳೆಯ ಸಂಸಾರಕ್ಕೆ ಹುಳಿ ಹಿಂಡುವ ಕೆಲಸ ಮಾಡಬೇಡ. ಬೇರೆ ಯಾರಾದರೂ ಸುಮ್ಮನಿರುವ ವಿಷಯುವಲ್ಲ ಇದು. ಸಂಸಾರದಲ್ಲಿದ್ದುಕೊಂಡು ಸ್ವತಂತ್ರವಾಗಿ ಯಾವ ನಿರ್ಣಯವನ್ನೂ ಕೈಕೊಳ್ಳಬೇಡ ಕಂಡೆಯಾ ? ಈಗ ಹೇಗಾದರೂ ತಪ್ಪಿಸಿಕೊಳ್ಳುವಂತೆ ಮಾಡು."

ಅವಳಿಗೆ ಏನನ್ನಬೇಕೋ ಹೊಳೆಯಲಿಲ್ಲ. ಒಡಲಾಳದಲ್ಲಿ ದುಃಖದ ಕಟ್ಟೆ ಬಿರಿಯಿತು. ಅದನ್ನು ಹಾಗೇ ಅದುಮಿ ಹಿಡಿದು ಹೊರ ಹೋದಳು. ಅಂಗಳದಲ್ಲಿ ತಂಗಾಳಿಯಾಟದಿಂದ ಹೂಗಿಡಗಳು ಬಾ ಬಾರೆಂದು ಕರೆಯುವಂತೆ ತಲೆಯಾಡಿಸುತ್ತಿವೆ, ಅತ್ತಿತ್ತ ತೂಗಾಡುತ್ತ. ವರ್ಣವರ್ಣಾಂತು ದಳ ಬಿರಿದ ಹೂಗಳ ಸೊಬಗು ಅವರ್ಣನೀಯ, ಸುಮ ಸೌರಭ ಮನಃಪ್ರಾಣಗಳನ್ನು ಮುತ್ತುತ್ತದೆ. ಶೀತಶೀತಲ ವಾತಾವರಣ ತುಂಬಾ ಹಿತಕರ. ಅದರೇನು ? ಅದೇ ವಿಚಾರ ವಿಪ್ಲವದಲ್ಲಿ ಸಿಕ್ಕಿ ತೊಳಲುತ್ತಿದೆ ಮನಸ್ಸು, ಪ್ರಯತ್ನಿದರೂ ಬಿಡಿಸಿಕೊಳ್ಳಲಾಗಲಿಲ್ಲ ಅದರಿಂದ. ಅಲ್ಲೇ ಸ್ವಲ್ಪ ಹೊತ್ತು ಅಡ್ಡಾಡಿ ಒಳಬಂದಳು. ಆ ವಿಚಾರವಾಗಿ ಮತ್ತೆ ಮಾತುಕತೆಗಳಾಗಲಿಲ್ಲ. ರಾಮನಾಥ ಹೋಗು–ಬಿಡು ಯಾವುದನ್ನೂ ಹೇಳಲಿಲ್ಲ. ಅತೀವ ಬಿಗುಮಾನ ಮನದಲ್ಲಿ. ಮಾತುಕತೆಯಲ್ಲೂ ಹಿಡಿತ. ಹೆಜ್ಜೆ ಹೆಜ್ಜೆಯಲ್ಲೂ ಸಿಟ್ಟಿನ ಗತ್ತು ಇದ್ದೇ ಇತ್ತು. ನಗೆ ಮಾತಿಲ್ಲ ; ತಮಾಷೆಯಿಲ್ಲ. ಮಗುವಿಂದಾಗಿ ಅಲ್ಪಸ್ವಲ್ಪ ಮಾತುಕತೆಗಳಾದುವು.

ಸೀತಮ್ಮ ದೇವರಿಗೆ ಸಂಧ್ಯಾದೀಪವಿಡುತಿದ್ದಾಳೆ.

ರಾಮನಾಥ ಪುಸ್ತಕಾವಲೋಕನದಲ್ಲಿದ್ದ. ಎಲ್ಲಿಯೂ ಸದ್ದು–ಗದ್ದಲದ ಸೊಲ್ಲಿಲ್ಲ. ಸತ್‌ಶಾಂತಿ ಮಯವೇ ವುಲ್ಲ. ಡ್ರೈವರ್ ಪುಟ್ಟಸ್ವಾಮಿ ಕಾರಿನ ಬೀಗದಕ್ಕೈಯನ್ನು ತಂದು ಒಳಗಿಟ್ಟು ನುಡಿದ—"ಸ್ವಾಮಿ, ಈಚೀಚೆಗೆ ಚಿಕ್ಕಬುದ್ಧಿಯವರಲ್ಲಿ ಪರಸ್ಪರ ಬದ್ಧ ದ್ವೇಷ ಬೆಳೆಯುತ್ತಿದೆ. ಹೆಚ್ಚು ಹೆಚ್ಚಾಗಿ ಆಗಾಗ ಜಗಳವಾಡುತ್ತಿರುತ್ತಾರೆ. ಏನು ಕಾರಣವೋ ತಿಳಿಯದು. ನಮ್ಮ ಮನೆಗೆ ಕೂಗಾಡುತ್ತಿರುವುದು ಕೇಳಿಸುತ್ತಿರುತ್ತದೆ."

"ನಿಜವಾಗಿ...?"

"ಹೌದು ಸ್ವಾಮಿ. ಕೂಡಿಯುತ್ತಾರೆ ಬೇರೆ. ಜಮೀನಿನ ಉಸ್ತುವಾರಿಯೂ ಇಲ್ಲ. ಕೆಲಸ ಬೇಕಾಬಿಟ್ಟಿ ನಡೆಯುತ್ತಿದೆ. ಉತ್ತಮ ಬೆಳೆಯೂ ಬರುತ್ತಿಲ್ಲ. ಅಂತೂ ಇಬ್ಬರ ಜೀವನವೂ ಸುಖವಿಲ್ಲ. ನೀವಿದ್ದಂತೆ ಅವರಿಲ್ಲ."

"ಬುದ್ಧಿ ಇಲ್ಲದೆ ಹೋದರೆ ಆಗುವುದೇ ಹೀಗೆ. ಇಲ್ಲಿದ್ದಾಗಲೂ ಅವರು ಸರಿಯಾಗಿರಲಿಲ್ಲ. ಕರೆಕರೆ ತಡೆಯಲಾರದೆ ಪಾಲು ಕೊಟ್ಟು ಕಳುಹಿಸಿ ಕೊಟ್ಟೆ."

"ಕಳಿಸಿದ್ದು ಒಳ್ಳೆಯದಾಯಿತು ಎನಿಸುತ್ತೆ, ಅವರಿರುವ ರೀತಿಯನ್ನು ನೋಡಿದರೆ."

"ಹೌದು" ಎಂಬಂತೆ ತಲೆದೂಗಿದ.

ದೇವಯ್ಯ ವಿಷಯವನ್ನು ಅನುಮೋದಿಸುತ್ತ ನುಡಿದ "ನಾನೂ ಈ ವಿಷಯ ಆಗಾಗ ಕೇಳುತ್ತಿರುವೆ. ಅವರಿವರು ಈ ವಿಷಯ ಮಾತಾಡುತ್ತಿರುತ್ತಾರೆ. ಇಬ್ಬರಿಗೂ ಮನೆ ಮಠ ಎಲ್ಲಾ ಬೇರೆಬೇರೆ, ಏಕೆ ಹೀಗೆ ಜಗಳವಾಡುತ್ತಾರೋ ದೇವರಿಗೇ ಗೊತ್ತು. ಅವರವರಲ್ಲಿ ಜಗಳ ಹುಟ್ಟಲು ಕಾರಣವೇ ಇಲ್ಲ. ದ್ವೇಷ ಅಷ್ಟೆ."

ಪುಟ್ಟಸ್ವಾಮಿ ಹೊರಟುಹೋದ, "ಹೌದು" ಎಂದಷ್ಟು ನುಡಿದು.

ರಾಮನಾಥ ವಿಷಾದ ವಾಣಿಯಲ್ಲಿ ಅಂದ, "ಹುಡುಗರು ಕೆಟ್ಟರೆ ಸಂಸಾರ ಹಾಳು. ಆಸ್ತಿ ಹಾಳು. ಜೀವಮಾನವೇ ಹಾಳು. ಯೋಚಿಸಿಕೊಂಡರೆ ತುಂಬಾ ವ್ಯಸನವಾಗುತ್ತೆ. ಅವರ ತಾಯಿ ಲಕ್ಷ್ಮಿ ತುಂಬಾ ಒಳ್ಳೆಯ ಸ್ವಭಾವದವಳು. ಅವಳಿದ್ದಿದ್ದರೆ ಎಷ್ಟು ದುಃಖವಾಗುತಿತ್ತು ಅವಳಿಗೆ? ಪಾಪ, ಅವಳ ಹೊಟ್ಟೆಯಲ್ಲಿ ಈ ಧೂರ್ತರು ಜನ್ಮ ಎತ್ತಿದ್ದು ತುಂಬಾ ಆಶ್ಚರ್ಯಕರ, ದೇವಯ್ಯನವರೇ."

"ದೈವೇಚ್ಛೆ!"

ಸ್ವಲ್ಪ ಹೊತ್ತು ರುದ್ರ ಮೌನ ರಾಜ್ಯವಾಳಿತು.

ರಾಮನಾಥನ ಒಡಲಲ್ಲಿ ಕಸಿವಿಸಿಯ ಝರಿ ಜಪ್ಪನೆ ಹರಿದಾಡಿತು; ಸುಮ್ಮನೆ ತನ್ನೊಳಗೇ ವಿಚಾರಶೀಲನಾದ.

ಕೈಯಲ್ಲಿದ್ದ ಪುಸ್ತಕದ ಮೇಲೆ ಹರಿಯಿತು ದೃಷ್ಟಿ. ಪುಟದ ಕೊನೆಯಲ್ಲಿ ಕಂಡ ಸಾಲುಗಳು ಮನವನ್ನು ಸೆಳೆದುವು.

All they that take the sword shall
perish with the sword.

ನಿಟ್ಟುಸಿರೊಂದು ತನಗರಿಯದಂತೆಯೇ ತಪ್ಪಿಸಿಕೊಂಡಿತು.

....ಬಾಲ ರವಿ ಬೆಳ್ಮೋಡಗಳ ಮರೆಯಲ್ಲಿ ವಿರಾಜಮಾನನಾಗಿದ್ದ.

....ಉಜ್ವಲೋಜ್ವಲ ಅರುಣ ಕಿರಣಗಳು ಹರಡಿ ತೆರೆಮರೆಯಾಟವಾಡುತ್ತಿವೆ ಕೋಲು ಕೋಲಾಗಿ.

...ಚೆಂಬಿಸಿಲ ಚುಂಬನದಿಂದ ಪ್ರದೀಪ್ತವಾಗಿದೆ ಶಾಂತ ಶುಭ್ರ ನೀಲಾಕಾಶ.

....ಬೆಳಗಿನ ಪ್ರಶಾಂತ ಸುಂದರ ಸಮಯದಲ್ಲಿ ಪಕ್ಷಿಗೊರಳ ಸುಪ್ರಭಾತದ ವಿವಿಧ ಸ್ವರಗಳ ರಾಗಾರುಣತಾನ ಬಲೂ ಮನೋಜ್ಞವಾಗಿ ಸತ್ಯ ಸುಂದರವಾಗಿ ಹರಿಯುತಿದ್ದರೆ ಕಿವಿಗೊಟ್ಟು ಆಲೈಸುವಷ್ಟು ಹಿತ. ಎಲ್ಲಿಯೂ ಸದ್ದು ಗದ್ದಲಗಳ ಸೊಲ್ಲಿಲ್ಲ. ನೀರಸ-ನಿಷ್ಪಂದ-ನಿರಾತಂಕ.

ಹೊತ್ತಿಗೆ ಮುಂಚೆಯೇ ಪ್ರಾತಃವಿಧಿಗಳನ್ನು ಪೂರೈಸಿದ ಕುಮುದ್ವತಿ ತಾಯಿಗೆಂದಳು,

"ಅಮ್ಮಾ, ನನಗೆ ಸರಸಿ ಬರೆದ ಕಾಗದಗಳನ್ನು ಜಾನಕಮ್ಮನಿಗೆ ಕೊಟ್ಟು ಬರುವೆ. ನನ್ನ ಹೇಳಿಕೆಯನ್ನು ಲಿಖಿತ ರೂಪದಲ್ಲಿ ಕೊಡುವುದಾದರೆ ಕೊಡಬಹುದು. ಅಂತೂ ಜಾನಕಮ್ಮನನ್ನು ಕಂಡು ಅವರಿಗೆ ಧೈರ್ಯದ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಇಷ್ಟರೊಳಗಾಗಿಯೇ ಈ ಕಾಗದ

ಗಳನ್ನು ತಲುಪಿಸಬೇಕಿತ್ತು ನನಗೆ ಬಿಡುವು ದೊರೆಯಲಿಲ್ಲ. ಇಂದು ಏಪ್ರಿಲ್ ಹನ್ನೊಂದನೆಯ ತೇದಿ. ಇಂದು ಅವರ ಕೇಸಿರುವುದು ನಿಮಗೆ ಗೊತ್ತಿಲ್ಲ?"

"ಹೌದು" ಎಂಬಂತೆ ತಲೆಯಾಡಿಸಿದಳು ಸೀತಮ್ಮ.

ರಾಮನಾಥ ವಿಷಯವನ್ನು ತಿಳಿದು ಸುಮ್ಮನಾದ. ಆಕ್ಷೇಪಣೆ ಎತ್ತ ಲಿಲ್ಲ. ಅವನು ಹೊರ ಹೋಗುತ್ತಲೂ ಗೋಗರೆವ ದನಿಯಲ್ಲಿ ನುಡಿದಳು ಸೀತಮ್ಮ "ನೀನು ಯಾವ ಗಂಡಾಂತರವನ್ನೂ ತಂದುಕೊಳ್ಳಬೇಡ ಮಗೂ!" ಅಂತರ್ವೇದನೆಯಿಂದ ಮುಖಬಿಂಬ ಕೆಂಪುಕೆಂಪು ತಳೆಯಿತು ಮುಂದೆ ಮತ್ತೇನೂ ಮಾತಾಡಲು ಮನಸ್ಸು ಬರಲಿಲ್ಲ. ಸೀತಮ್ಮ ಅಷ್ಟಕ್ಕೇ ಸುಮ್ಮ ನಾದಳು.

ಕುಮುದ್ವತಿ ರಾಮನಾಥನಿಗೆ ಹೇಳಿಕೊಂಡು ಹೊರಟಳು. ಕಾರು ಸದ್ದು ಮಾಡುತ್ತ ಸ್ವಲ್ಪೇ ಹೊತ್ತಿನೊಳಗಾಗಿ ಕಣ್ಮರೆಯಾಯಿತು. ಸೀತಮ್ಮನ ಮನಸ್ಸಿಗೆ ಸಮಾಧಾನವೇ ಇಲ್ಲ. ಈ ಮಗಳು ಯಾವ ಗಂಡಾಂತರಕ್ಕೆ ದಾರಿಯೋ ಎಂಬ ಭಯ—ಕೊರಗು.

ಕುಮುದ್ವತಿ ಜಾನಕಮ್ಮನ ಮನೆಯನ್ನು ಮುಟ್ಟಿದಾಗ ನಗರಕ್ಕೆ ಹೊರಡಲು ತಯಾರಿದ್ದರು ದಂಪತಿಗಳು. ದುಃಖದಿಂದ ಕಂದಿ ಕುಂದಿದ ಮುಖಗಳಿಗೆ ಕಂಬನಿಯ ಮಜ್ಜನ. ಮೂರು ಫರ್ಲಾಂಗ್ ದೂರದಲ್ಲಿದ್ದ ಬಸ್ಸು ನಿಲ್ದಾಣಕ್ಕೆ ಹೋಗಿ ಬಸ್ಸು ಹಿಡಿಯುವ ಯೋಚನೆಯಲ್ಲಿರುವಾಗಲೇ ಕಾರು ಮುಂಬಾಗಿಲಿನಲ್ಲಿ ನಿಂತಿತು.

"ಇನ್ನು ಬಸ್ಸು ಹಿಡಿದು ಹೋಗುವುದು ತಡವಾಗುತ್ತೆ. ನಾನೇ ಬಿಟ್ಟು ಬರುವೆ. ಕಾರು ಹತ್ತಿ" ಎಂದಳು ಕುಮುದ್ವತಿ.

ಅವಳಿಗೆ ತೊಂದರೆಯಾಯಿತಲ್ಲ ಎಂಬ ಯೋಚನೆ ಬಂದರೂ ಹಿಂದೆಯೇ ಅವಳ ಸಾಕ್ಷ್ಯ ಇದೆಯಲ್ಲಾ ಎಂಬ ಯೋಚನೆಯಿಂದ ಮರು ನುಡಿಯದೆ ಕಾರು ಹತ್ತಿದರು ಶಂಕರಪ್ಪ ಮತ್ತು ಜಾನಕಮ್ಮ.

"ನೀನು ಸರಸಿಯ ಕಾಗದಗಳನ್ನು ಹೊಂದಿದವಳು ಮಾತ್ರವಲ್ಲ. ನೀನ ವಳ ಗೆಳತಿಯಾಗಿ ಎಲ್ಲಾ ವಿಚಾರವನ್ನೂ ಕೂಲಂಕಶವಾಗಿ ಅರಿತವಳು. ನೀನೇ ಸರಿಯಾದ ಮತ್ತು ಪ್ರಾಮುಖ್ಯವಾದ ಸಾಕ್ಷಿಯಿಂದು" ಎಂದ ಶಂಕರಪ್ಪ.

ಜಾನಕಮ್ಮ ಗದ್ಗದಿತ ವಾಣಿಯಲ್ಲಿ "ಹೌದಮ್ಮಾ" ಎಂದಳು ಮಾತ್ರ.

ಕುಮುದ್ವತಿ ಕಾರನ್ನು ತಿರುವಿನಲ್ಲಿ ತಿರುಗಿಸಿಕೊಂಡು ನೇರ ಹಾದಿ ಹಿಡಿದಳು, ಮಾತಾಡಲಿಲ್ಲ. ಮಾನಸಿಕ ತುಮುಲ ನಡೆದೇ ಇತ್ತು. ಏನೂ ಹೇಳಲಾಗಲಿಲ್ಲ.

"ನಿನ್ನ ಒತ್ತಾಸೆ–ಹೇಳಿಕೆಗಳಿಂದ ನಾವು ದೂರು ಕೊಟ್ಟೆವು. ನೀನೇ ಇಂದು ಇದರ ಸರ್ವಾಧಾರ" ನುಡಿದ ಶಂಕರಪ್ಪ.

ಈಗ ನಾನು ಜಾರಿಕೊಳ್ಳುವುದು ಹೇಗೆ ? ಎನಿಸಿತು ಕುಮುದ್ವತಿಗೆ. ಅವಳ ಕಾಗದಗಳನ್ನು ಕೊಟ್ಟು ಹೋಗಿಬಿಡುವೆ ಎಂದುಕೊಂಡಿದ್ದ ಅಭಿಮತ ತಲೆಕೆಳಗಾಗುತ್ತಿದೆ. ನನ್ನನ್ನೇ ನಂಬಿರುವ ಇವರಿಗೇನು ಹೇಳಲಿ ? ಎಂಬ ಪ್ರಶ್ನೆ ಮನದಲ್ಲಿ.

ಜಾನಕಮ್ಮ ಕಣ್ಣುಗಳನ್ನು ಕರವಸ್ತ್ರದಿಂದ ಒರಿಸುತ್ತ ನುಡಿದಳು, "ಮಗಳ ಸ್ಥಾನದಲ್ಲಿ ನೀನಿದ್ದಿ ಕುಮೂ. ಎಂದಾದರೂ ಹೀಗೆಯೇ ಬಂದು ಹೋಗುತ್ತಿರು. ಇನ್ನೊಮ್ಮೆ ಬರುವಾಗ ಸೀತಮ್ಮ ಮತ್ತು ಮಗುವನ್ನೂ ಕರೆದುಕೊಂಡು ಬಾ. ನಿಮ್ಮನ್ನು ನೋಡಿ ನನ್ನ ದುಃಖ ಪರಿಹರಿಸಿಕೊಳ್ಳುವೆ."

ನಗರ ಮುಟ್ಟಿದ್ದಾಯ್ತು. ಕೋರ್ಟು ಇರುವುದು ನಗರದ ಹೊರ ವಲಯದಲ್ಲೇ. ಕೋರ್ಟಿನ ಮುಂಭಾಗದ ಹೆಮ್ಮರದಡಿಯಲ್ಲಿ ಕಾರನ್ನು ನಿಲ್ಲಿಸಿದಳು. ಮೂವರೂ ಭಾರಭಾರವಾದ ಹೃದಯವನ್ನು ಹೊತ್ತು ಇಳಿದರು. ಜಾನಕಮ್ಮನ ಭುಜದ ಮೇಲೆ ಕೈಯಿಟ್ಟು ಕುಮುದ್ವತಿ "ನೀವು ಧೈರ್ಯ ಗೆಡಬೇಡಿ." ಎಂದಾಗಲೇ ಅವಳು ಅಳುವುದಕ್ಕೆ ಶುರು.

"ಅಯ್ಯೋ ನೀವು ಧೈರ್ಯಗೆಟ್ಟರೆ ಸಾಕ್ಷಿ ಹೇಳುವುದಾದರೂ ಹೇಗೆ !"

ಅವಳು ಅಳುವುದನ್ನು ನಿಲ್ಲಿಸಲೇ ಒಲ್ಲಳು. ಕುಮುದ್ವತಿ ಸಮಾಧಾನಿಸುತ್ತಲೇ ಅವಳೊಡನೆ ಕೋರ್ಟ್ ಹಾಲ್ ಪ್ರವೇಶಿಸಿದಳು. ಅವಳು ಹಿಡಿದ ಕೈಯನ್ನು ಬಿಡಲಿಲ್ಲ. ಹೆಜ್ಜೆ ಹೆಜ್ಜೆಗೂ ಬಿಗಿಯುತ್ತಲೇ ಇದೆ ಮುಷ್ಠಿ. ಒಳ ಹೋದಾಗಲೇ ಕೇಸು ಕೂಗಿಸಿದ್ದರು. ಇವರದೇ ಮೊದಲ ಮೊಕದ್ದಮೆ. ತನ್ನದೇ ಮೊದಲ ಸಾಕ್ಷ್ಯ. ಇನ್ನು ಬೇರೆ ಯೋಚಿಸಲು ಸಮಯವೇ ಇಲ್ಲ.

ಕಟಕಟೆ ಹತ್ತಿದಳು ಕುಮುದ್ವತಿ.

ಒಮ್ಮೆ ಸುತ್ತಲೂ ಕಣ್ಣು ನೋಟ ಹರಿಯಿತು. ಎಲ್ಲರೂ ತಮ್ಮವರೇ. ಸಂದೀಶ ಕೆಕ್ಕರಿಸಿ ನೋಡುತಿದ್ದಾನೆ. ಅವನ ತಾಯಿ ತಂದೆಯರೂ ಕೂಡ ಕಣ್ಣೋಟದಲ್ಲೇ ನುಂಗಿಬಿಡುವಂತೆ ನೋಡುತಿದ್ದಾರೆ. ಎದೆ ಅಳುಕುವಂತಹ ಕ್ರೂರ ಸನ್ನಿವೇಶ.

ಎದುರುಗಡೆಯ ವಕೀಲ ಕೇಳಿದ,

"ನಿಮ್ಮ ಸಾಕ್ಷ್ಯ ಏನಿದೆ ಹೇಳಿಬಿಡಿ."

ಎದುರುಗಡೆ ಎತ್ತರದ ಪೀಠದ ಮೇಲೆ ಕುಳಿತಿದ್ದ ನ್ಯಾಯಾಧೀಶನ ಕಡೆ ಒಮ್ಮೆ ನೋಡಿ ಬಾಯ್ದೆರೆದಳು ಸರಸು.

"ನಾನು ದೇವರ ಮೇಲೆ ಆಣೆ ಮಾಡಿ ಹೇಳುತ್ತಿರುವೆ. ಇದರಲ್ಲಿ ಉತ್ಪ್ರೇಕ್ಷೆಯಾಗಲೀ ಸುಳ್ಳಾಗಲೀ ಇಲ್ಲವೇ ಇಲ್ಲ. ನಾನೂ ಸರಸಿಯೂ ಬಾಲ್ಯದಿಂದಲೂ ಒಟ್ಟಿಗೇ ಓದಿ ಡಿಗ್ರಿ ಪಡೆದವರು. ಅವಳು ಒಳ್ಳೆಯ ಹಾಗೂ ಧೈರ್ಯವಂತ ಹುಡುಗಿ. ಅವಳ ಮದುವೆಯಲ್ಲಿ ವರದಕ್ಷಿಣೆಯಾಗಿ ಐವತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ ಅಪ್ಪ ಅಮ್ಮ. ನಾನು ಮತ್ತು ನಮ್ಮ ಮನೆಯವರು ಹಣ ಕೊಡಬೇಡಿರೆಂದು ಒತ್ತಾಯಪೂರ್ವಕವಾಗಿಯೇ ಅವರಿಗೆ ತಿಳಿಯ ಹೇಳಿದ್ದುಂಟು. ಆದರೆ, ಅವರು ತಮ್ಮ ಮಗಳು ಸುಖವಾಗಿರಲಿ ಎಂದು ಹಾರೈಸಿ ಹಣ ಕೊಟ್ಟರು. ಅದಕ್ಕೆ ರಶೀದಿಯಿಲ್ಲ. ಆ ಹಣದಲ್ಲಿ ಚಿಕ್ಕಾಸನ್ನೂ ಸರಸಿಗೆ ಕೊಡಲಿಲ್ಲ ಸಂದೀಶ. ಅಲ್ಲದೆ, ಇನ್ನೂ ಐವತ್ತು ಸಾವಿರ ರೂಪಾಯಿಗಳನ್ನು ತರಬೇಕೆಂದು ಅವಳಿಗೆ ಒತ್ತಾಯಿಸಿ ಹಿಂಸಿಸುತಿದ್ದರು.

ತಗಾದೆಯ ಮೇಲೆ ತಗಾದೆ. ಹಿಂಸೆಯ ಮೇಲೆ ಹಿಂಸೆ. ದೈಹಿಕ ಹಿಂಸೆ. ಮಾನಸಿಕ ಹಿಂಸೆ ನಡೆದೇ ಇತ್ತು. ಅವಳು ನನಗೆ ಸಿಕ್ಕಿದಾಗಲೆಲ್ಲ ತನ್ನ ಸಂಕಷ್ಟವನ್ನು ತೋಡಿಕೊಂಡು ತೀರಾ ದುಃಖಿಸುತಿದ್ದಳು. ಇಗೋ, ಅವಳು ಬರೆದ ಕಾಗದ ನನ್ನಲ್ಲಿವೆ. ನೋಡಬಹುದು. ನಾನು ಅವಳ ತಂದೆ-ತಾಯಿಗಳಿಗೆ ಖಂಡಿತ ಅವಳನ್ನು ಕಳುಹಿಸಬೇಡಿ ಎಂದು ಕೂಡಾ ಹೇಳಿಕೊಂಡಿದ್ದೆ. ದುರದೃಷ್ಟದಿಂದ ಕಳುಹಿಸಿಕೊಟ್ಟರು. ದುಷ್ಟರು ಅವಳನ್ನು ಕೈಯ್ಯಾರ ಕೊಲೆ ಮಾಡಿ ಸುದ್ದಿ ಹರಡಬಹುದೆಂದು ತಂದೆ-ತಾಯಿಗೆ ತಿಳಿಸದೆಯೇ ದಹನ ಕ್ರಿಯೆಯನ್ನು ನಡೆಸಿಬಿಟ್ಟಿದ್ದಾರೆ ! ಮೇಲಾಗಿ, ಅವರಲ್ಲಿ ಹೂಳುವ ಪದ್ಧತಿಯೇ ಹೊರತು ದಹನ ಕ್ರಿಯೆ ಇರಲಿಲ್ಲ. ಮುಂದೆ ಹೆಣವನ್ನು ತೆಗೆದು ಪೋಸ್ಟ್ ಮಾರ್ಟಂ ಮಾಡುವ ಪ್ರಸಂಗ ಬಾರದಿರಲಿ ಎಂದು ಈ ಕ್ರಮ! ನಿಜವಾದ ಸಾವಾಗಿದ್ದರೆ ಅವಳ ಕಾಹಿಲೆಯನ್ನಾಗಲೀ ಸಾವನ್ನಾಗಲೀ ತಿಳಿಸಲಿಲ್ಲವೇಕೆ ತಾಯಿ ಮನೆಗೆ? ದಹನ ಕ್ರಿಯೆ ಮಾಡಿ ಮೂರು ದಿನಗಳ ನಂತರ ಸಾವಿನ ಸುದ್ದಿ ತಿಳಿಸಲು ಕಾರಣ ವೇನು ? ದಯವಿಟ್ಟು ಪರಾಮರಿಸಿ ನೋಡಿ. ನಾನು ಧೈರ್ಯವಾಗಿ ದೃಢವಾಗಿ ಹೇಳುತ್ತೇನೆ ಇದು ವರದಕ್ಷಿಣೆಯ ಕೊಲೆ !

"ಮದುವೆಯಲ್ಲಿ ಕೊಟ್ಟ ಐವತ್ತು ಸಾವಿರ ರೂಪಾಯಿಗಳನ್ನು ದಯವಿಟ್ಟು ಅವರಿಗೆ ಹಿಂತಿರುಗಿಸುವಂತೆ ಮಾಡಿ ಅವರಿಗೆ ತಕ್ಕ ಶಿಕ್ಷೆ ನೀಡಬೇಕು ಸ್ವಾಮಿ. ಇಲ್ಲದೆ ಇದ್ದರೆ ಇದೇ ಮೇಲ್ಪಂಕ್ತಿಯಾಗುತ್ತದೆ ಮುಂದಿನ ಸಮಾಜಕ್ಕೆ !"

ಕುಮುದ್ವತಿ ತಲೆ ಮಣಿದು ಅಲ್ಲಿಂದ ಇಳಿದು ಬರಲಿದ್ದಾಗ ತಡೆದು ಎದುರುಗಡೆಯ ವಕೀಲ ಕೇಳಿದ,

"ನೀವು ಗೆಳತಿ ಎಂಬ ಕಾರಣದಿಂದಲೇ ಏಕೆ ಈ ಪ್ರಕರಣವನ್ನು 'ವರದಕ್ಷಿಣೆ' ಎಂಬ ಕೆಟ್ಟ ಹೆಸರಿಗೆ ತಿರುಗಿಸಿರಬಾರದು ?"

"ಅಲ್ಲ, ಅಲ್ಲವೇ ಅಲ್ಲ ! ನಾನು ಹೇಳಬೇಕಾದುದನ್ನೆಲ್ಲಾ ಆಗಲೇ ಹೇಳಿರುವೆ. ಅದು ಸಹಜವಾದ ಸಾವಾಗಿದ್ದಿದ್ದರೆ ತಂದೆ ತಾಯಿಗಳಿಗೆ ಕಾಹಿಲೆ ವಿಷಯ ಸಾವಿನ ವಿಷಯ ತಿಳಿಸದೆ ಇರುತಿದ್ದರೆ? ದಹನ ಕ್ರಿಯೆ ಮುಗಿಸಿ ಮೂರು

ದಿನಗಳ ಮೇಲೆ ಸುದ್ದಿ ಕೊಟ್ಟಿದ್ದಾರಲ್ಲ, ಏಕೆ ? ಅವಳು ಬರೆದ ಕಾಗದಗಳ ನ್ನೆಲ್ಲಾ ದಯವಿಟ್ಟು ಪರಿಶೀಲಿಸಿ ನೋಡಿ. ಅವಳು ಬರೆಯುತಿದ್ದುದು ನನಗೆ ಮಾತ್ರ. ಇವು ಈಚಿನವು."

"ನೀವೆಂದಾದರೂ ಗೆಳತಿಯ ಮನೆಗೆ ಹೋಗಿದ್ದಿರಾ ? ಅವಳಿರು ವಂದು ?"

"ಇಲ್ಲ..."

"ಆತ್ಮೀಯ ಗೆಳತಿಯರಾಗಿದ್ದು ಏಕೆ ಹೋಗಲಿಲ್ಲ ?"

"ಅವಳನ್ನು ಚೆನ್ನಾಗಿಟ್ಟುಕೊಂಡಿರಲಿಲ್ಲ, ಆದ್ದರಿಂದ ಹೋಗಲಿಲ್ಲ. ಅವಳು ತಾಯಿ ಮನೆಗೆ ಬಂದಾಗಲೆಲ್ಲಾ ಅಳುತ್ತಲೇ ಇರುತಿದ್ದಳು. ಅವಳ ಕಣ್ಣೀರಿನ ಬಾಳಿನಲ್ಲಿ ನಾನು ಹೋಗಿ ಇರುವುದಾದರೂ ಹೇಗೆ ? ಆದ್ದರಿಂದಲೇ ನಾನು ಹೋಗಲಿಲ್ಲ. ತಾಯಿ ಮನೆಗೆ ಬಂದಾಗಲೆಲ್ಲಾ ಅವಳೇ ಬರುತಿದ್ದಳು, ನನ್ನ ಮನೆಗೆ. ವಾರಗಟ್ಟಲೆ ನಮ್ಮಲ್ಲಿದ್ದು ತನ್ನ ಕಷ್ಟವನ್ನೆಲ್ಲ ಹೇಳಿಕೊಳ್ಳುತಿ ದ್ದಳು. ಅವಳ ದುಃಖ ಅಗಾಧವಾಗಿತ್ತು....ಕೊನೆಗಾಣದ ದುಃಖ ಅದು."

"ನೀವು ಅರಿತರಿತು ಗೆಳತಿಯನ್ನು ಮೊದಲೇ ಹಿಂದಕ್ಕೆ ಕರೆಸಿಕೊಳ್ಳಲಿಲ್ಲ ವೇಕೆ ?"

"ಅವಳಿಗೆ ನಾವು ಹೇಳುತಿದ್ದುದು ಅದೇ. ಆದರೆ, ಅವಳಿಗೆ ಸಂಸಾರನಿಷ್ಠೆ ಯಿತ್ತು. ಎಲ್ಲರಂತೆ ತಾನೂ ಬಾಳಿ ಬದುಕಬೇಕೆಂಬ ಗೌರವ ಪ್ರವೃತ್ತಿಯಿತ್ತು. ಮುಂದಾದರೂ ಸರಿಹೋಗಬಹುದೆಂಬ ನೆಚ್ಚು ಇತ್ತು. ಆದ್ದರಿಂದಲೇ ಅವಳು ತಾಳ್ಮೆ ವಹಿಸಿದ್ದಳು."

"ಈಗ ತಾಯಿ ಹೇಳಿಕೆ ಕೊಡಲಿ."

ಆ ಕೂಡಲೇ ಅವಳು ಕಟಕಟೆಯಿಂದ ಇಳಿದು ಬಂದು ಜಾನಕಮ್ಮ ನನ್ನು "ಈಗ ನೀವು ಕಟಕಟೆ ಹತ್ತಿ. ಧೈರ್ಯಗೆಡಬೇಡಿ. ಅವರು ಕೊಡು ತಿದ್ದ ಹಿಂಸೆಯನ್ನೆಲ್ಲಾ ಒದರಿಬಿಡಿ" ಎಂದು ಪಿಸು ಮಾತಿನಲ್ಲಿ ನುಡಿದು ರಟ್ಟೆ ಹಿಡಿದು ಮೆಲ್ಲಗೆ ಕಟಕಟೆ ಹತ್ತಿಸಿದಳು.

ಸುತ್ತಮುತ್ತಲೂ ತಮ್ಮವರೇ ಇರುವಾಗ ಧೈರ್ಯ ಕುಸಿದು ಕೊರಳು ಕಟ್ಟಿತು. ಅಳಿಯ ಕೆಕ್ಕರಿಸಿ ಇತ್ತಲೇ ನೋಡುತಿದ್ದಾನೆ. ಬೀಗಶಿ–ಬೀಗ ಅಕ್ಕ ಪಕ್ಕದಲ್ಲೇ ಇದ್ದಾರೆ. ಎಲ್ಲರ ನೋಟದಲ್ಲೂ ಒಡಲ್ಗಿಚ್ಚಿನ ಛಾಯೆ. ಎದೆ ಅಳು ಕುವಂತಹ ದೃಶ್ಯ. ಜಾನಕಮ್ಮ ಸಣ್ಣಗೆ ಕಂಪಿಸುತಿದ್ದಾಳೆ. ಮಾತಾಡಲು ಉಸಿರೇ ಹೊರಡದಷ್ಟು ಬಾಯಿ ಒಣಗಿತು.

ಯಾರೋ ಕೂಗಿದರು 'ಇನ್ನೊಬ್ಬರು ತಾಯಿಯ ಜೊತೆ ಇರಬಾರದು.'

ಕುಮುದ್ವತಿ ಅವಳಿಗೆ ಧೈರ್ಯ ಹೇಳಿ ಕೆಳಗಿಳಿದು ಬಂದಳು.

ಆಗ ಜಾನಕಮ್ಮ ತುಟಿಯನ್ನು ನಾಲಿಗೆಯಿಂದ ಸವರಿಕೊಂಡು ದುಃಖ ಭಾರದಿಂದ ಸಂಕಟಪೂರಿತ ದನಿಯಲ್ಲಿ ಹೇಳಿಕೆಯನ್ನು ಆರಂಭಿಸಿದಳು,

"ಸ್ವಾಮಿ, ಶ್ರೀ ಭಗವಂತನ ಮೇಲೆ ಆಣೆಯಿಟ್ಟು ಹೇಳುವೆ. ನನ್ನ ಮಗಳ ಕೊಲೆಯಾಗಿದೆ. ಹಣಕ್ಕಾಗಿ ಕೊಲೆ ಮಾಡಿದ್ದಾರೆ. ಕಂಡವರ ಮಕ್ಕಳನ್ನು ಬಾವಿಗೆ ತಳ್ಳುವುದು ಸುಲಭ. ನಾವು ವರದಕ್ಷಿಣೆಯಾಗಿ ಕೊಟ್ಟ ಹಣದಲ್ಲಿ ಆವಳಿಗೆ ಒಂದು ಪೈಸೆಯೂ ದಕ್ಕಿಲ್ಲ. ಇನ್ನೂ ಐವತ್ತು ಸಾವಿರ ರೂಪಾಯಿಗಳನ್ನು ತರಬೇಕೆಂದು ಹಿಂಸೆ ಆರಂಭಿಸಿದ್ದರು. ಹಿಂಸೆ–ಹಿಂಸೆ ನರಕ ಹಿಂಸೆ ಕೊಟ್ಟಿದ್ದಾರೆ. ಅವಳು ನಮ್ಮಲ್ಲಿಗೆ ಬಂದಾಗಲೆಲ್ಲ ಕಣ್ಣೀರಿನಲ್ಲೇ ಕಾಲ ಕಳೆಯುತಿದ್ದಳು. ನಾವು ಹೆಣ್ಣು ಕೊಡುವಾಗ ಇಂತಹ ಧೂರ್ತರು ಎಂದು ತಿಳಿದುಕೊಳ್ಳಲಿಲ್ಲ. ಎಲ್ಲರನ್ನೂ ನಮ್ಮಂತೆಯೇ ಎಂದು ನಂಬಿಕೊಂಡವರು ನಾವು. ನಮ್ಮ ಮೂರ್ಖತನದಿಂದ ಮಗಳನ್ನು ಕಳೆದುಕೊಂಡೆವು......." ಎಂದು ಗಳಗಳನೆ ಅಳತೊಡಗಿದಳು.

ಆ ಕೂಡಲೇ ಅವಳನ್ನು ಅಲ್ಲಿಂದ ತೋಳು ಹಿಡಿದು ನಡೆಸಿಕೊಳ್ಳುತ್ತ ಹೊರ ಕರೆತಂದಳು ಕುಮುದ್ವತಿ. ಮುಂದಿನದನ್ನು ನೋಡಿಕೊಳ್ಳಲು ಶಂಕರಪ್ಪನಿಗೆ ಹೇಳಿ ಅವಳನ್ನು ಕರೆತಂದು ಮನೆಗೆ ಬಿಟ್ಟು ತಾನು ತನ್ನ ಮನೆಯ ಹಾದಿ ಹಿಡಿದಳು.

ದೃಷ್ಟಿ ಕೈಗಡಿಯಾರದ ಕಡೆ ಹರಿಯಿತು. ಇನ್ನೂ ಹನ್ನೆರಡು ಗಂಟೆ. ಸಾಕ್ಷಿ ಹೇಳಿದುದರ ಬಗ್ಗೆ ಎಷ್ಟೋ ಸಮಾಧಾನ ಮನಸ್ಸಿಗೆ. ಮಗು ತೊಟ್ಟಿಲಲ್ಲೇ ಕೈಕಾಲು ಆಡಿಸುತ್ತ ಕೇಕೆ ಹಾಕಿ ನಗುತಿತ್ತು. ಮಗುವನ್ನು ಎತ್ತಿಕೊಂಡು ಹೊರಬಂದಳು, ತಾನು ಕೋರ್ಟಿಗೆ ಹೋದುದನ್ನಾಗಲೀ ಸಾಕ್ಷಿ ಹೇಳಿದುದನ್ನಾಗಲೀ ಬಾಯಿ ಬಿಟ್ಟು ಯಾರಿಗೂ ಹೇಳಲಿಲ್ಲ. ಎಂದಿನಂತೆಯೇ ದೈನಂದಿನ ಕೆಲಸ ಕಾರ್ಯಗಳು ನಡೆದು ಹೋದುವು, ಸರಾಗವಾಗಿ.

০ ০ ০ ০

ಬೆಳಗಿನ ಶಾಂತಿ ಸಮುದಾಯವನ್ನು ಬೇಧಿಸುತ್ತ ಆಳೊಬ್ಬ ದಿಡುದಿಡು ಓಡಿಬಂದ. ಮುಖಬಿಂಬದಲ್ಲಿ ಮೂಡಿದ ಸ್ವೇದಬಿಂದುಗಳು ಧಾರೆಧಾರೆಯಾಗಿ ಇಳಿಯುತ್ತಿದೆ ಮುಖದ ಮೇಲೆ.

"ಬುದ್ಧೀ....ಬುದ್ಧೀ...!"

ಒಳಗಿದ್ದ ರಾಮನಾಥ ಹೊರಬಂದ. ಆಚ್ಚರಿಯ ನೆರೆ ಉಕ್ಕಿತು ಕಣ್ಣುಗಳಲ್ಲಿ.

"ಬುದ್ಧೀ....ಚಿಕ್ಕಯ್ಯನವರಲ್ಲಿ ರಾಣಾರಂಪ ಆಗಿಹೋಗಿದೆ. ಜೀವ ಉಳಿಯೋಲ್ಲ..."

"ಏನಪ್ಪಾ, ಏನು ಹೇಳು ? ಯಾರಿಂದ ತೊಂದರೆಯಾಗಿದೆ ?"

"ವಸಂತ–ವಾಸು ಬುದ್ಧಿಗಳು ಬಡಿದಾಡುತಿದ್ದಾರೆ. ಬಹಳ ಮಾರಾಮಾರಿ. ಯಾರಾದರೂ ಬಿಡಿಸದಿದ್ದರೆ ಒಬ್ಬರಲ್ಲ ಒಬ್ಬರು ಸಾಯುತ್ತಾರೆ. ಏನು ಗತಿ ಸ್ವಾಮಿ...ಖಂಡಿತಾ ಒಬ್ಬರಲ್ಲ ಒಬ್ಬರು ಸಾಯುತ್ತಾರೆ." ಮತ್ತೆಮತ್ತೆ ಕೂಗಿದ.

ಡ್ರೈವರ್ ಅಲ್ಲಿಯೇ ಇದ್ದ. ತಕ್ಷಣವೇ ಅವನಿಗೆ ಕಾರು ತೆರೆಯಲು ಹೇಳಿ ಕೂಡಲೇ ದೇವಯ್ಯನೊಡನೆ ಹೊರಟ ರಾಮನಾಥ. ಬಾಗಿಲಲ್ಲಿ ನಿಂತ ಕುಮುದ್ವತಿ ಸೀತಮ್ಮ ಇಬ್ಬರೂ ಬೆಪ್ಪಾಗಿ ನೋಡಿದರು. ಹತ್ತು ನಿಮಿಷ

ಗೋಳೂಗಾಗಿ ಕಾರು ಅವರ ಮನೆ ಮುಟ್ಟಿತು. ಆಳು ದುಗ್ಗ ಕಾರಿನಿಂದಿಳಿದು ಅವರು ಹೊಡೆದಾಡುತಿದ್ದೆಡೆಗೆ ಕೈ ತೋರಿದ. ಗದ್ದೆಯಂಚಿನಲ್ಲಿ ಇನ್ನೂ ಅವರಿಬ್ಬರು ಹೊಡೆದಾಡುತ್ತಲೇ ಇದ್ದಾರೆ. ವಾಸು ತಲೆಯಲ್ಲಿ ರಕ್ತ ಇಳಿಯುತ್ತಿದೆ ಗಾಯದಿಂದ. ನಾಲ್ವರೂ ಬಳಿಗೆ ಧಾವಿಸಿ ಬರುತ್ತಲೂ ಇಬ್ಬರೂ ಹಿಂಜರಿದರು. ಚೆನ್ನಾಗಿ ಪೆಟ್ಟು ತಿಂದ ವಾಸು ನಡುಗುತಿದ್ದಾನೆ. ರಾಮನಾಥ ಸನಿಹಕ್ಕೆ ಹೋಗಿ "ಇದೆಂತಹ ಹುಚ್ಚುತನ ಇರುವಷ್ಟು ಕಾಲ ನೆಮ್ಮದಿಯಿಂದ ಇರಬಾರದೇ ? ಛಿಃ ! ಇದೇನಿದು ? ದ್ವೇಷ ವಿನಾಶಕ್ಕೆ ದಾರಿ," ಎಂದ ಕೋಪ ವಿಷಾದಗಳ ವಾಣಿಯಲ್ಲಿ.

ವಸಂತನ ಸಿಟ್ಟು ತಂದೆಯ ಕಡೆ ಹರಿಯಿತು. ಅದೇ ರೋಷದಿಂದ ಎದೆಗೆ ಕೈ ಹಾಕಿ ನೂಕಿಬಿಟ್ಟ ! ತತ್ತರಿಸಿ ಹಿಂದಕ್ಕುರುಳಿದ ರಾಮನಾಥ. ತಲೆಗೆ ಕಲ್ಲು ತಾಗಿತೇನೋ...ಆ ತಕ್ಷಣವೇ ಎತ್ತಿದರೆ ಪ್ರಜ್ಞೆಯೇ ಇರಲಿಲ್ಲ ರಾಮನಾಥನಿಗೆ.

"ಅಯ್ಯೋ, ಏನು ಮಾಡಿಬಿಟ್ಟೆ !" ಆರ್ತದನಿಯಲ್ಲಿ ಚೀರಿದ ದೇವಯ್ಯ. ಭಯ ಭೀತಿಯಿಂದ ವ್ಯಾಪ್ತಿಗೆ ಮೀರಿ ಮಿಡಿಯಿತು ಹೃದಯ. ಆಳು–ಡ್ರೈವರ್‌ರೊಡನೆ ಎತ್ತಿ ಕಾರಿನಲ್ಲಿ ಮಲಗಿಸಿಕೊಂಡು ಆಸ್ಪತ್ರೆಯ ಹಾದಿ ಹಿಡಿದ ದೇವಯ್ಯ. ಕಾರು ಓಡಿಯೇ ಓಡಿತು ಶರ ವೇಗದಿಂದ. ಮೂವರಿಗೂ ಭಯ–ದುಃಖಗಳೊತ್ತಿ ನಡುಗುತ್ತಿದೆ ಮೈ. ಅದೃಷ್ಟವಶಾತ್ ತಲೆಬಾಗಿಲಿನಲ್ಲೇ ಎದುರಾದರು ಡಾಕ್ಟರು. ತುರ್ತು ಚಿಕಿತ್ಸೆಗಾಗಿ ತುರ್ತು ಚಿಕಿತ್ಸಾ ಘಟಕದಲ್ಲಿರಿಸಿಕೊಂಡು ಕಾರನ್ನು ಕಳುಹಿಸಿಕೊಟ್ಟರು ಮನೆಗೆ, ತಾಯಿ ಮಕ್ಕಳನ್ನು ಕರೆತರಲು. ಪುಟ್ಟಸ್ವಾಮಿ ನಡೆದ ವಿಷಯವನ್ನು ಒದರಿ "ಅಮ್ಮಾ, ಅಲ್ಲೇ ಕೈಕಾಲು ಮುರಿದು ಕೂಡಿಸುತಿದ್ದೆ ! ಯಜಮಾನರಿಗಾಗಿ ಆಸ್ಪತ್ರೆಗೆ ಧಾವಿಸುವುದು ಹೊರತು ಇನ್ನೇನಕ್ಕೂ ಅವಕಾಶವಿರಲಿಲ್ಲ ಆಗ !" ಎಂದ.

ತಾಯಿ ಮಗಳು ಮಗುವನ್ನೆತ್ತಿಕೊಂಡು ರಂಗಮ್ಮನೊಡನೆ ಹೊರಟರು. ಎಲ್ಲರ ಕಣ್ಣುಗಳೂ ಕಣ್ಣೀರಿನ ಕಡಲು. ಹೃನ್ಮನಗಳೂ ಭಯದ ಊಟೆ. ಚಳಿ ಹಿಡಿದಂತೆ ನಡುಗುತಿದೆ ಮೈ. ಕಾರು ವಾಯು ವೇಗದಿಂದ

ಮತ್ತೆ ಮುಟ್ಟಿತು ಆಸ್ಪತ್ರೆಯನ್ನು. ಎದುರಿಗೇ ಸಿಕ್ಕಿದ ಡಾಕ್ಟರು ತಕ್ಷಣವೇ ಅಂದರು ಪ್ರಜ್ಞೆ ಹೋಗಿದೆ, ಹೆದರಬೇಡಿ. ಜೀವಕ್ಕೇನೂ ಅಪಾಯವಿಲ್ಲ."

ಹೋದ ಜೀವ ಬಂದಂತಾಯಿತು ತಾಯಿ ಮಕ್ಕಳಿಗೆ. ಆಗ ನೆನವರಿಕೆಯಾಯಿತು ತಾವು ಭಯದ ಸುಳಿಯಲ್ಲಿ ಸಿಕ್ಕಿ ಹಾಲು–ನೀರು–ಕಾಫಿ ಏನನ್ನೂ ತರಲಿಲ್ಲ ಎಂದು. ಚಿಕಿತ್ಸಾ ಘಟಕದಲ್ಲಿದ್ದ ರಾಮನಾಥನನ್ನು ಒಬ್ಬೊಬ್ಬರಾಗಿ ಹಣಿಕಿ ನೋಡಿ ಹೊರಬಂದರು. ಪುನ; ಕಾರು ಹಿಂದಿರುಗಿತು ಅಗತ್ಯ ವಸ್ತುಗಳಿಗಾಗಿ ; ಸೀತಮ್ಮ ರಂಗಮ್ಮನೊಡನೆ ಕಾರು ಹತ್ತಿದಳು. ಆದರೂ ಒಡಲ ಕಳವಳ–ತಳಮಳ ನಡುಗಿಸುತ್ತದೆ ಮೈ. ಹೇಗೋ ಹಾಗೆ ಬೇಕು ಬೇಕಾದುದನ್ನೆಲ್ಲಾ ಬಾಚಿಕೊಂಡು ಹೊರಟಳು ಸೀತಮ್ಮ. ರಂಗಮ್ಮ ಒಂದೇ ಸಮನೆ ಅಳುತಿದ್ದಾಳೆ, ಜಗಲಿ ಅಂಚಿನಲ್ಲಿ ನಿಂತು. ಕಾರು ಕಣ್ಮರೆಯಾಗುವವರೆಗೂ ಕದಲಲಿಲ್ಲ. ನಂತರ ಅಲ್ಲಿಯೇ ಮೆಟ್ಟಿಲಿನ ಮೇಲೆ ಕುಳಿತಳು ದುಃಖಿತಳಾಗಿ. ದುಃಖವನ್ನೇ ದುಃಖಿತಗೊಳಿಸುತ್ತಿದೆ ಒಡಲ ದು;ಖ.

ರಾಮನಾಥನಿಗೆ ತಲೆಯಲ್ಲಿ ಗಾಯವೇನೂ ಆಗಿರಲಿಲ್ಲ. ಪೆಟ್ಟು ತಾಗಿದ ಕಡೆ ಊದಿ ದುಂಡಾಗಿತ್ತು. ತುರ್ತು ಚಿಕಿತ್ಸಾ ಘಟಕದಲ್ಲಿಯೇ ಇದ್ದಾನೆ. ಮೂಗಿನ ಮೂಲಕ ಆಹಾರ ಸಂಯೋಜನೆ ನಡೆಯುತಿತ್ತು. ಮಗ್ಗುಲು ಬಿಡದೆ ಕಾದಿತ್ತು ಕುಟುಂಬ. ದೇವಯ್ಯನ ವಾಸ್ತವ್ಯ ಅಲ್ಲೇ. ಅವ್ಯಾಹತ ಚಿಕಿತ್ಸೆಯೊಂದಿಗೆ ದೇವಸ್ಥಾನದಲ್ಲಿ ಪೂಜೆ ಪುನಸ್ಕಾರಗಳು ಎಡೆಬಿಡದೆ ನಡೆದುವು. ವೈದ್ಯರು ಭರವಸೆ ನೀಡಿದ್ದಾರೆ, ಆದರೂ ಪ್ರಜ್ಞೆ ಮರಳಲಿಲ್ಲ. ವಾರವೊಂದು ಉರುಳಿ ಹೋಯಿತು. ಎಲ್ಲರನ್ನೂ ಆತಂಕಸಾಗರದಲ್ಲಿ ಮುಳುಗಿಸಿತು ದುರ್ಘಟನೆ.

ದಿನಗಳು ಉರುಳುತ್ತಲೇ ಇವೆ, ಚಿಕಿತ್ಸೆಯೂ ನಡೆಯುತ್ತಿದೆ.

"ಇನ್ನು ಎರಡು ಮೂರು ದಿನಗಳಲ್ಲಿ ಪ್ರಜ್ಞೆ ಮರಳುತ್ತದೆ" ಎಂದರು ವೈದ್ಯರು.

ಆ ಸುದಿನ ಈಗಲೇ ಬಂದರೆ ಸಾಕಲ್ಲ, ಎಂಬಷ್ಟು ಆತಂಕ ಮನಸ್ಸಿಗೆ. ದುಃಖ ದುಗುಡಗಳು ಕೊರಳೊತ್ತುತ್ತನೆ. ಒಂದೊಂದು ಗಳಿಗೆಯನ್ನು ಕಳೆಯುವುದೂ ಸಹ ದುಃಖಭಾರದಿಂದಲೇ.

ಮತ್ತೆ ಎರಡು ದಿನ ಉರುಳಿದುವು : ಒಂದೇ ಪ್ರಕಾರವಾಗಿ.

ಕೊನೆಗೊಮ್ಮೆ ಪ್ರಜ್ಞೆ ಮರಳಿತು. ಮೂಗಿನಲ್ಲಿ ತೊಡಿಸಿದ್ದ ಟ್ಯೂಬಿನ ನೋವು. ಮೈಯಲ್ಲಿ ಇಂಜಕ್ಷನ್‌ಗಳ ನೋವು. ಹೊಟ್ಟೆಯಲ್ಲಿ ಹಸಿವೆ–ತಳ ಮಳ–ಆಯಾಸಗಳ ಒಕ್ಕೂಟವಾಗಿತ್ತು ಶರೀರ. ಕಣ್ಣುಗಳನ್ನು ತೆರೆದು ಒಮ್ಮೆ ಸುತ್ತಲೂ ನೋಡಿದ. ತಾನೆಲ್ಲಿದ್ದೇನೆ ಎಂಬುದರ ಅರಿವು ಮೂಡಲಿಲ್ಲ. ಸುತ್ತ ಮುತ್ತ ಬಿರಿಬಿರಿ ನೋಡಿತು ದೃಷ್ಟಿ. ಎಲ್ಲರೂ ಸುತ್ತುವರಿದು "ಹೇಗಿದ್ದೀರಿ?" ಎಂದರು.

ಎಲ್ಲರನ್ನೂ ಮತ್ತೆಮತ್ತೆ ನೋಡಿ ತನ್ನವರೆಂಬುದನ್ನು ಅರಿತುಕೊಂಡ ಬಳಿಕ ಮೆಲುದನಿಯಲ್ಲಿ 'ನಾನೆಲ್ಲಿರುವೆ ?' ಎಂದ.

"ನೀವು ಆಸ್ಪತ್ರೆಯಲ್ಲಿದ್ದೀರಿ..."

"ಹೇಗಿದ್ದೀರಿ ? ನಾನು ಡಾಕ್ಟರ್ ಭಟ್ !"

"ಕೈಯನ್ನು ನಸು ಚಾಚಿ ಡಾಕ್ಟರೇ ?" ಎಂದ ರಾಮನಾಥ.

"ಹೌದು...ನಾನು ಡಾಕ್ಟರು. ನೋಡಿ ನಿಮ್ಮವರೆಲ್ಲಾ ಇದ್ದಾರೆ. ಮಗು ಇಲ್ಲಿದೆ."

"...ನಾನೇಕೆ ಇಲ್ಲಿಗೆ ಬಂದೆ ?"

"ಆ ಮೇಲೆ ಆ ಕತೆಯನ್ನೆಲ್ಲಾ ನಾವು ಹೇಳೋಣ. ಈಗ ನೀವು ಸ್ವಲ್ಪ ಹೊಟ್ಟೆಗೆ ತೆಗೆದುಕೊಳ್ಳಬೇಕು."

ಕುಮುದ್ವತಿ ಹಾಲನ್ನು ಗುಟುಕು ಗುಟುಕಾಗಿ ಕುಡಿಸುತ್ತ ಮಗು ವನ್ನು ಪಕ್ಕದಲ್ಲಿ ಕೂಡಿಸಿದಳು. ಮನಸ್ಸು ತಿಳಿಯಾಗ ಹತ್ತಿತು. ಎಲ್ಲರನ್ನೂ ಸರಿಯಾಗಿ ನಿಟ್ಟಿಸಿ ನೋಡಿದ. ಎಲ್ಲರ ಗುರುತೂ ಹಸಿರು ಹಸಿರು. ಆದರೂ, ಮತ್ತೆಮತ್ತೆ ನೋಡಿದ.

ಕ್ಷೀಣಿತ ದನಿಯಲ್ಲಿ ಎಲ್ಲರನ್ನೂ ಮಾತಾಡಿಸುವ ತವಕ. ಆದರೂ ಮಾತಾಡಲಾರ. ಸುಸ್ತು ತಾಳಲಾರದ ಸುಸ್ತು.

ಅನಂತರ ಒಂದು ವಾರದ ಚಿಕಿತ್ಸೆಯೇ ಬೇಕಾಯಿತು ಮನೆಗೆ ಹಿಮ್ಮರಳಿ ಬರಲು. ಶರೀರ ಸಂಪುಟ ಬಳಲಿದ್ದುದರಿಂದ ಕೆಲವು ದಿನಗಳ ವಿಶ್ರಾಂತಿಯ ಬಳಿಕ ಸಾಮಾನ್ಯ ಸ್ಥಿತಿಗೆ ಬಂದ ರಾಮನಾಥ. ಆದರೂ, ತಲೆ ಭಾರದಿಂದ ಮೆಟ್ಟಿಲಿಳಿಯಲು ಬಹಳ ದಿನಗಳೇ ಬೇಕಾದುವು.

"ನಾವು ಪೋಲೀಸಿಗೆ ದೂರು ಕೊಡಬೇಕಾಗಿತ್ತು. ನಮ್ಮ ದುಃಖ ಸಂಕಟದಿಂದ ದೂರು ಕೊಡಲೇ ಇಲ್ಲ. ಅಷ್ಟು ದೂರ ಯೋಚಿಸುವಷ್ಟು ಮನಶ್ಶಾಂತಿಯೂ ಇರಲಿಲ್ಲ ನಮಗೆ" ಎಂದಳು ಕುಮುದ್ವತಿ.

"ಹೋಗಲಿ ಬಿಡು, ತಂದೆ ಮಕ್ಕಳ ಮಧ್ಯೆ ಕೋರ್ಟು ಕಛೇರಿ ಇವೆಲ್ಲಾ ಸರಿಯಲ್ಲ."

"ಇಷ್ಟಾಯಿತಲ್ಲ, ಒಮ್ಮೆಯೂ ಆಸ್ಪತ್ರೆಗೆ ಬಂದು ನೋಡಲಿಲ್ಲ."

"ನಮ್ಮ ಬಳಿಯೂ ಸರಿಯಾಗಿಲ್ಲ. ಅವರವರೂ ಸ್ನೇಹದಿಂದ ಸುಖವಾಗಿಲ್ಲ. ಈ ಬಗೆಯ ದ್ವೇಷ ಒಳ್ಳೆಯದಲ್ಲ. ತಾವೂ ಮಾನವಾಗಿ ಬಾಳಲಿಲ್ಲ, ನಮ್ಮನ್ನೂ ಮಾನವಾಗಿ ಬಾಳಿಸುತ್ತಿಲ್ಲ, ತಿಳಿಗೇಡಿಗಳು ಅದೇ ದುಃಖ."

ದೇವಯ್ಯ ಅಂದ–"ಈಗಿನ ಹುಡುಗರಿಗೆ ಏನಾಗಿದೆಯೊ,...ಬಹುತೇಕ ಹುಡುಗರು ಹೀಗೆಯೇ. ಗುರು ಹಿರಿಯರಲ್ಲಿ ಭಕ್ತಿ, ಗೌರವಗಳೂ ಇಲ್ಲ, ಸಹಕಾರ–ಸೇವಾ ಮನೋಭಾವನೆಯೂ ಇಲ್ಲ. ಕಲಿತವರೇ ಹೀಗಾದರೆ ಕಲಿಯದವರ ಗತಿಯೇನು ? ಈಗಿನ ಜನಾಂಗವನ್ನು ನೆನೆಸಿಕೊಂಡರೆ ವ್ಯಸನವಾಗುತ್ತೆ. ಧರ್ಮ ಕರ್ಮ ಇಲ್ಲದ ಇವರು ಮನುಷ್ಯರೇ ?"

"ನನಗೂ ಅದೇ ಚಿಂತೆ. ನಮ್ಮ ದೇಶ ಹೀಗಾಗಬಾರದಾಗಿತ್ತು. ಈಚೀಚೆಗೆ ಮನೆಮನೆಯಲ್ಲೂ ಇದೇ ಗೋಳು. ಧರ್ಮ ಕರ್ಮ ಲವಲೇಶವೂ ಇಲ್ಲ. ಹಿಂದೆ ನಮ್ಮ ಕುಟುಂಬ ಬಾಂಧವ್ಯ ಹೇಗಿತ್ತು ? ಈಗ ಏನಾಗಿ ಹೋಗಿದೆ ?" ನಿಟ್ಟುಸಿರು ಬಿಟ್ಟ ರಾಮನಾಥ.

ಅನಂತರ ಎರಡು ವಾರಗಳೇ ಹಿಡಿದುವು ಸಂಪೂರ್ಣ ಆರೋಗ್ಯ ಹೊಂದಿ ಕೆಲಸ ಹಿಡಿಯಬೇಕಾದರೆ. ಮನೆಯಲ್ಲೂ ಗದ್ದೆ ತೋಟಗಳ ಕಠಿಣ ಕೆಲಸ

ರಾಶಿಯಾಗಿ ಉಳಿದಿತ್ತು. ಎಲ್ಲವೂ ಅಸ್ತವ್ಯಸ್ತ. ಅನಂತರ ನಿಧಾನವಾಗಿ ನಿತ್ಯ ಕರ್ಮಗಳಿಗೆಮನ ಗೊಟ್ಟು ಕೆಲಸ ಕಾರ್ಯಗಳನ್ನು ಗಮನಿಸತೊಡಗಿದ. ಅಲ್ಲಿಯತನಕ ದೇವಯ್ಯನದೇ ಉಸ್ತುವಾರಿ.

ಬೆಳಗಿನ ಒಂಭತ್ತರ ಸಮಯದಲ್ಲಿ ಗಾಡಿಯ ಆಳು ಅಪ್ಪು ಬಂದು ಹೇಳಿದ,

"ಬುದ್ಧೀ ! ಒಂದು ಅನಾಹುತವಾಗಿ ಹೋಗಿದೆ ! ಪಾಪ ಚಿಕ್ಕ ಚಿಕ್ಕ ಮಕ್ಕಳು ಅನಾಥರಾದರು ! ಸ್ವಾಮಿ !"

"ಯಾರಿಗೆ ಏನಾಯ್ತು ಹೇಳು ?" ಒಂದೇ ಉಸಿರಿಗೆ ಕೇಳಿದ, ರಾಮನಾಥ. ಮುಖದ ಮೇಲೆ ಆಶ್ಚರ್ಯದ ಮುದ್ರೆಯೊತ್ತಿತು.

"ವಾಸು ಬುದ್ಧಿಯವರು ಮುಂಜಾನೆ ತೀರಿಕೊಂಡಿದ್ದಾರೆ."

"ಹಾ, ನಿಜವಾಗಿ ?"

"ಹೌದು ಬುದ್ಧೀ! ಕೆಲಸಕ್ಕೆ ಬರುವಾಗ ಅಳು–ಗೋಳು ಕೇಳಿಸಿತು. ಮನೆಗೆ ಹೋಗಿ ನೋಡಿ ಹೀಗೆಯೇ ಬಂದೆ. ವಸಂತ ಬುದ್ಧಿಯವರು ಈಗಷ್ಟೆ ಅಲ್ಲಿಗೆ ಹೋಗುತಿದ್ದರು."

"ಅಯ್ಯೋ, ದೇವರೇ ! ಮೂರು ಮಂದಿ ಹೆಣ್ಣು ಮಕ್ಕಳು !"

ರಾಮನಾಥ ಕೂಗಿ ಕರೆದ "ಕುಮೂ...ಕುಮೂ...."

ಅವಳು ಬಳಿಗೆ ಬಂದು "ಏನು ಹೇಳಿ" ಎಂದಳು.

ಅವಳಿಗೆ ಇದ್ದ ವಿಷಯವನ್ನು ತಿಳಿಸಿ "ಈಗ ಇದೊಂದು ಗಂಡಾಂತರಕ್ಕಿಟ್ಟುಕೊಂಡಿತು. ಬರೀ ಹೆಣ್ಣುಮಕ್ಕಳು. ಮುಂದೇನು ಗತಿ !"

ಅವಳು ಗಂಭೀರ ಯೋಚನೆಯಲ್ಲಿ ಮುಳುಗಿದಳು, ತುಟಿಗಳು ಬಿರಿಯಲಿಲ್ಲ.

"ಈಗ ಹೋಗೋಣ. ನೀನು ಸ್ವಲ್ಪ ಹೊತ್ತಿದ್ದು ಹಿಂದಿರುಗಿ ಬಂದು ಬಿಡು. ನಾನಲ್ಲಿದ್ದು ಮುಂದಿನ ಕೆಲಸ ಮುಗಿಸಬೇಕಲ್ಲ, ಊರಿಗೆಲ್ಲಾ ಸುದ್ದಿ ಕೊಡಬೇಕು."

ಮಗುವನ್ನು ರಂಗಮ್ಮನ ವಶಕ್ಕೆ ಒಪ್ಪಿಸಿ ಎಲ್ಲರೂ ಹೊರಟರು.

ಅನಾಥವಾಗಿ ಮಲಗಿದೆ ಶವ. ಹೆಂಡತಿ ಮಕ್ಕಳು ಗೋಳಾಡುತಿದ್ದಾರೆ. ಮೋಹಿನಿ ಮಾತ್ರ ಅಲ್ಲಿದ್ದಾಳೆ. ವಸಂತ ಹಿಂದಿರುಗಿ ಹೋಗಿದ್ದಾನೆ. ಸಹಾಯಕರೇ ಇಲ್ಲದ ಪರಿಸ್ಥಿತಿ. ಕುಮುದ್ವತಿ ಸ್ವಲ್ಪ ಹೊತ್ತಿದ್ದು ಹಿಂದಿರುಗಿದಳು ಮನೆಗೆ. ಅನಂತರ ಊರವರು ಕೂಡಿದ ಮೇಲೆ ಎಲ್ಲರೂ ಅಂತ್ಯ ಸಂಸ್ಕಾರ ಮುಗಿಸುವಷ್ಟರಲ್ಲಿ ಮಧ್ಯಾಹ್ನ ಮೂರು ಗಂಟೆ. ಸುಮಿಯ ತಾಯಿ ತಂದೆ ಇದ್ದುದರಿಂದ ಇವರೆಲ್ಲ ಹಿಂದಿರುಗಿದರು ಮನೆಗೆ.

ಎಲ್ಲರ ಮನೋದೇಶದಲ್ಲಿ ಶೋಕದ ದಟ್ಟವಾದ ಛಾಯೆ ಮುಸುಗಿ ಮ್ಲಾನವಾದುವು ಮುಖ ಮುದ್ರೆಗಳು.

ಆದರೆ, ಭುಜಭಾರ ಅಲ್ಲಿಗೇ ಮುಗಿಯಲಿಲ್ಲ. ತಿಥಿ ಕರ್ಮಗಳ ಕಾರ್ಯವೊಂದಾದರೆ ಗದ್ದೆ ತೋಟಗಳ ಉಸ್ತುವಾರಿಯೂ ಹೆಗಲೇರಿತು. ಅಲ್ಲಿಗೆ ಹೋಗಬೇಕೆಂದರೆ ಆಳುಗಳನ್ನು ಕೂಡಿಕೊಂಡು ಹೋಗಬೇಕು ನೈಗಾವಲಿಗಾಗಿ. ಅಂತಹ ಪರಿಸ್ಥಿತಿಯಲ್ಲಿ ಮುಂದಾಗುವುದೂ ಕಷ್ಟವೇ. ಹಿಂಜರಿಯುವುದೂ ಅಸಹ್ಯವೇ.

ಆದರೂ, ವಿಧಿಯಿಲ್ಲ. ರಾಮನಾಥ ಕುಮುದ್ವತಿಯರು ಎಲ್ಲಕ್ಕೂ ಮುಂದಾದರು.

ತಿಥಿ ಕರ್ಮಾದಿಗಳು ಕಳೆದುವು. ಇನ್ನೇನು ಕೊಯ್ಲಿಗೆ ಬರುತ್ತದೆ ತೋಟ.

ರಾಮನಾಥನೇ ಕೊಯ್ಲು–ಕೃಷಿ ಎರಡನ್ನೂ ವಹಿಸಿಕೊಂಡು ಮೊಮ್ಮಕ್ಕಳಿಗೆ ಸೊಸೆಗೆ ತಾನೇ ಆಧಾರವಾದ. ಇಲ್ಲಿಂದಲೇ ಆಳುಗಳು ಹೋಗಿ ಬರುತ್ತಾರೆ ಕೆಲಸ ಕಾರ್ಯಕ್ಕೆ. ಆಗಾಗ ಎಲ್ಲರೂ ಹೋಗಿ ಬರುವುದೂ ಉಂಟು. ಇದರಿಂದ ಸುಮಿ ಸಂತುಷ್ಟಳಾದಳು. ಜೀವನ ಕ್ರಮ ಸರಾಗವಾಗಿ ನಡೆಯ ಹತ್ತಿತು.

— ೦ —

೧೬

ಸರಸಿಯ ಪತಿ ಮಹಾಶಯನಿಗೆ ಏಳು ವರ್ಷ ಕಠಿಣ ಶಿಕ್ಷೆಯಾಗಿ, ಅವನ ತಾಯಿಗೆ ಮೂರು ವರ್ಷ ಕಠಿಣ ಶಿಕ್ಷೆಯಾದ ವರದಿ ಬಂದಕೂಡಲೇ ಮನಸ್ಸಿಗೆ ಸುಖ ದುಃಖಗಳನ್ನು ತುಂಬಿಕೊಂಡು ಆಗಮಿಸಿದಳು ಜಾನಕಮ್ಮ.

ದೇವಯ್ಯ ರಾಮನಾಥರು ವರಾಂಡದಲ್ಲಿ ಎದುರಾದರು.

"ನಂದೀಶನಿಗೂ ಅವನ ತಾಯಿಗೂ ಕಠಣ ಶಿಕ್ಷೆಯಾದ ವಿಚಾರ ತಿಳಿಯಿತು. ನಿಮಗೂ ವಿಷಯ ತಿಳಿದು ಬಂದಿದೆಯೇ ?" ಆನಂದದಿಂದ ಕೇಳಿದ ರಾಮನಾಥ.

"ಹೌದಪ್ಪಾ, ಅದಕ್ಕೇ ಹೇಳಿ ಹೋಗೋಣವೆಂದು ಬಂದೆ. ಕುಮುದ್ವತಿಯ ಹೇಳಿಕೆಯೇ ಅವರಿಗೆ ಧೃಡವಾದ ಸಾಕ್ಷಿ ! ಅವಳು ಅಷ್ಟು ಖಚಿತವಾಗಿ ಹೇಳದಿದ್ದರೆ ಮೊಕದ್ದಮೆ ಉಳಿಯುತಿತ್ತೋ ಇಲ್ಲವೋ...ಅವಳೇ ನಮ್ಮ ಪಾಲಿಗೆ ಮಗಳು ದೇವರು ಎಲ್ಲಾ. ಅವಳ ಒತ್ತಾಯವಿಲ್ಲದಿದ್ದರೆ ಬಹುಶಃ ನಾವು ಪೋಲೀಸಿಗೆ ದೂರು ಕೊಡುತ್ತಿರಲಿಲ್ಲ ಬಿಡಿ."

ಆಗಲೇ ಗೊತ್ತು ರಾಮನಾಥ ಮತ್ತು ದೇವಯ್ಯನಿಗೆ ಕುಮುದ್ವತಿ ಸಾಕ್ಷಿ ಹೇಳಿದ ವಿಷಯ. ಅದುವರೆಗೆ ಆ ಪ್ರಸ್ತಾಪ ಬಂದಿರಲಿಲ್ಲವಾದುದರಿಂದ ಕುಮುದ್ವತಿಗೆ ಹೇಳಿಕೊಳ್ಳುವ ಪ್ರಸಂಗವೂ ಬಂದಿರಲಿಲ್ಲ. ಅದರಿಂದ ಯಾವ ತೊಂದರೆಯೂ ಆಗಿರದೆ ಸದ್ದಿಲ್ಲದೆ ನಡೆದು ಹೋಗಿದೆ. ಮತ್ತೇಕೆ ಜಿಹಾಸೆ ಎನಿಸಿ ಸುಮ್ಮನಾದರು, ಅಳಿಯ–ಮಾವ.

"ಕಠಿಣ ಶಿಕ್ಷೆಯಾದುದು ಒಳ್ಳೆಯದಾಯ್ತು ಬಿಡಿ. ಇಲ್ಲದಿದ್ದರೆ ಅವರು ಇನ್ನೊಂದು ಹುಡುಗಿಯನ್ನು ತಂದು ಕೊಲ್ಲುತಿದ್ದರು ! ಅದಕ್ಕೆ ತಡೆ ಹಾಕಿದ್ದಲ್ಲದೆ ಹೀನ ಬುದ್ಧಿಯ ಜನರಿಗೆ ಬುದ್ಧಿ ಕಲಿಸಿದಂತಾಯಿತು."

ದೇವಯ್ಯನ ಮಾತನ್ನು ಅನುಮೋದಿಸುತ್ತ ರಾಮನಾಥ ನುಡಿದ,

"ದುಷ್ಟತನಕ್ಕೆ ದೊಣ್ಣೆ ಪೆಟ್ಟೇ ಮದ್ದು ಎಂಬ ಗಾದೆಯಿದೆ. ಅವರಿಗೆ ಒಳ್ಳೆ ಪಾಠ ಕಲಿಸಿದಂತಾಯ್ತು, ಅನುಭವಿಸಲಿ. ನಿಮ್ಮ ಐವತ್ತು ಸಾವಿರ ರೂಪಾಯಿಯನ್ನು ವಾಪಸ್ ಕೊಡಲು ಆದೇಶ ನೀಡಿದ್ದು ಒಳ್ಳೆಯದಾಯ್ತು. ಬಡ್ಡಿ ಸಹಿತ ವಸೂಲ್ ಮಾಡಿಕೊಳ್ಳಿ."

"ಬಡ್ಡಿ ಸಹಿತ ಹಿಂದಿರುಗಿಸಬೇಕೆಂದು ಜಡ್ಜ್‌ಮೆಂಟಿನಲ್ಲಿ ತಿಳಿಸಿದ್ದಾರೆ. ಹಣ ಇನ್ನೂ ಬರಲಿಲ್ಲ. ಯಾವಾಗ ಬರುತ್ತೋ..."

"ಬರಬೇಕಲ್ಲ, ಬಂದೇ ಬರುತ್ತೆ."

ಜಾನಕಮ್ಮ ಒಳ ಬಂದರೆ ಕುಮುದ್ವತಿ ಪದ್ಮ ರಾಜೇಶ್ವರಿ ಸ್ತ್ರೀ ಕಲ್ಯಾಣ ಸಂಘದ ಬಗ್ಗೆ ಅದುವರೆಗೆ ನಡೆದ ಕಾರ್ಯಕ್ರಮಗಳನ್ನು ಪರಿಶೀಲಿಸುತಿದ್ದಳು ಫೈಲನ್ನು ಹಿಡಿದುಕೊಂಡು.

ಪಾದಸಪ್ಪಳ ಕೇಳಿ ತಲೆಯೆತ್ತಿ ನೋಡಿದ ಅವಳು ಸ್ವಾಗತಿಸಿದಳು "ಬನ್ನಿ ಜಾನಕಮ್ಮ, ಜಡ್ಜ್‌ಮೆಂಟ್ ವಿಷಯ ನಮಗೂ ತಿಳಿಯಿತು. ಅಷ್ಟಾದರೂ ನನಗೆ ಸಮಾಧಾನವಿಲ್ಲ ನೋಡಿ, ಕೊಲೆಗೆ ಕೊಲೆಯೇ ಸರಿಯಾದ ಶಿಕ್ಷೆ! ನೇಣು ಬಿಗಿದು ಕೊಲ್ಲಬೇಕಿತ್ತು ! ಅದು ಬಿಟ್ಟು ಏಳು ವರ್ಷ ಕಠಿಣ ಶಿಕ್ಷೆ ಏನೇನೂ ಸಾಲದು. ಜೇಲಿನಿಂದ ಹೊರಬಂದರೆ ಮತ್ತಿದೇ ಗೋಳು. ನಾಗರಿಕ ಕಾಲಮಾನದಲ್ಲಿ ಹುಟ್ಟಿ ಬೆಳೆದು. ವಿದ್ಯೆ ಬುದ್ಧಿಗಳನ್ನು ಪಡೆದು ಕಂಡವರ ಮಗಳನ್ನು ತಂದು ಕೊಲೆ ಮಾಡುವಂಥ ಹೀನ ಕೃತ್ಯ ಕೈಗೊಳ್ಳಲು ಮನಸ್ಸಾದರೂ ಹೇಗೆ ಬಂತು? ಇಂಥಹವರಿಗೆ ಬರೀ ಶಿಕ್ಷೆಯೇ? ನ್ಯಾಯಾಲಯ ಕೊಲೆಗೆ ಕೊಲೆಯೇ ಸರಿಯಾದ ಶಿಕ್ಷೆ ಎಂಬ ತೀರ್ಮಾನಕ್ಕೆ ಬರಬೇಕು. ಅಷ್ಟು ಧೀರತನ ತೋರದಿದ್ದರೆ ವರ ದಕ್ಷಿಣೆ ದುರ್ವ್ಯಾಪಾರ ನಿಲ್ಲುವುದೇ ಇಲ್ಲ! ಎಷ್ಟು ವರ್ಷದಿಂದ ಕಠಿಣ ಶಿಕ್ಷೆ ನೀಡುತಿದ್ದಾರೆ? ಅದರಿಂದ ಕಿಂಚಿತ್ ಸುಧಾರಣೆಯಾಗಿದೆಯೇ ಹೇಳಿ.......ಈ ಕೊಲೆಗಳು ದುಷ್ಟ ದುರಾಶೆಯಿಂದ ನಡೆಯುವಂಥ ಕೊಲೆಗಳು! ಈ ದಿನಗಳಲ್ಲಿ ದಿನದಿನ ನಡೆಯುವ ಕೊಲೆಗಳನ್ನು ಕಂಡು ಕೇಳಿ, ಶಿಕ್ಷೆಯನ್ನು ಬಿಗಿಗೊಳಿಸದಿ

ದಿರುವುದು ತಪ್ಪು! ನ್ಯಾಯಾಲಯ ಈ ದಿಶೆಯಲ್ಲಿ ದಿಟ್ಟ ಹೆಜ್ಜೆ ಮುಂದಿಡಲೇ ಬೇಕು. ಇದನ್ನು ನಾವೂ–ನೀವೂ ಮನೆಯಲ್ಲಿ ಕುಳಿತು ಮಾತಾಡುವುದರಿಂದ ಏನೇನೂ ಪ್ರಯೋಜನವಿಲ್ಲ. ಮಹಿಳಾ ನ್ಯಾಯವಾದಿಗಳು, ಮಹಿಳಾ ನ್ಯಾಯಾಧೀಶರೂ ಮತ್ತು ಸ್ತ್ರೀ ಜನರ ಮೇಲೆ ಅನುಕಂಪ ಇರುವ ಪುರುಷ ನ್ಯಾಯವಾದಿಗಳೂ ಕೂಡಿ ಶಿಕ್ಷೆಯ ಮಾರ್ಪಾಡಿಗೆ ಪ್ರಯತ್ನಿಸಬೇಕು. ಅಂದರೆ, ಹನಿ ಗೂಡಿ ಹಳ್ಳವಾದೀತು."

"ಹೌದಮ್ಮಾ ಹೌದು, ನಾಲ್ಕು ಜನರಿಗೆ ಗಲ್ಲಾದರೆ ದೇಶ ಎಚ್ಚೆತ್ತು ಕೊಳ್ಳುತ್ತದೆ ಇದರ ಸಾಧನೆಗಾಗಿ ಸ್ತ್ರೀ ಸಂಘಗಳು ದನಿಯೆತ್ತಬೇಕು."

ಕುಮುದ ರಂಗಮ್ಮನನ್ನು ಕರೆದು ತಾಯಿಯನ್ನು ಕರೆತರಲು ಹೇಳಿ "ಅಮ್ಮನಿಗೆ ಹೇಳು ಜಾನಕಮ್ಮ ಬಂದಿದ್ದಾರೆ ಅಂತ." ಎಂದಳು ಲಗುಬಗೆಯಿಂದ.

ಪ್ರತ್ಯಗ್ನ ಸ್ನಾನ ಮಾಡಿದ ಸೀತಮ್ಮ ಒದ್ದೆ ಕೂದಲನ್ನು ಆರಿಸಿಕೊಳ್ಳಲು ಹಿಂದುಗಡೆ ಅಂಗಳದಲ್ಲಿ ಅಡ್ಡಾಡುತಿದ್ದಳು ಹೊಂಬಿಸಿಲಿಗೆ ಮೈಯೊಡ್ಡಿ. ರಂಗಮ್ಮನ ಕರೆ ಕೇಳಿ ಒಳಬಂದಳು ಸೀತಮ್ಮ. ಜಾನಕಮ್ಮನನ್ನು ನೋಡುತ್ತಲೂ ಸುಖ ದುಃಖಗಳ ಮುದ್ರೆಯೊತ್ತಿತು ಮುಖಬಿಂಬದಲ್ಲಿ. ಉಭಯಕುಶಲೋಪರಿ ಮತ್ತು ಜಡ್ಜ್‌ಮೆಂಟಿನ ಪ್ರಸ್ತಾಪ ನಡೆಯುತಿದ್ದಂತೆಯೇ ರಂಗಮ್ಮ ಚಹದ ಬಸಿಗಳನ್ನು ತಂದು ಮೂವರಿಗೂ ಕೊಟ್ಟು ಹೋದಳು. ಚಹ ತೆಗೆದುಕೊಳ್ಳುತ್ತ ನುಡಿದಳು ಕುಮುದ,

"ಜಾನಕಮ್ಮಾ, ನೀವು ನಮ್ಮ ಸಂಘದ ಸದಸ್ಯರಾಗಿಬಿಡಿ. ನಿಮ್ಮಿಂದ ಅಲ್ಪಸ್ವಲ್ಪವಾದರೂ ಪ್ರಯೋಜನವಾಗಲಿ ಸ್ತ್ರೀ ಸಮಾಜಕ್ಕೆ."

"ಆಗಲಿ" ಎಂದ ಅವಳು ಸದಸ್ಯತ್ವದ ಶುಲ್ಕವನ್ನು ಕೊಟ್ಟು, ಸಹಿ ಹಾಕಿದಳು.

"ಅವಳನ್ನು ತಲೆಬಾಗಿಲಿನವರೆಗೂ ಹೋಗಿ ಬೀಳ್ಕೊಟ್ಟು ಒಳ ಬಂದರು ಸೀತಮ್ಮ ಮತ್ತು ಕುಮುದ್ವತಿ. ಗೋಡೆಯ ಮೇಲಿನ ಅನ್ ಸೋನಿಯಾ ಗಡಿಯಾರ ಹತ್ತರ ಅಂಕೆಯನ್ನು ಮುಟ್ಟಿ ಗಂಟೆ ಬಾರಿಸಿತು ಡನ್, ಡನ್....

೦ ೦ ೦ ೦

ಕೈಯ್ಯಲ್ಲೊಂದು ಹರಿತವಾದ ಕತ್ತಿಯನ್ನು ಹಿಡಿದುಕೊಂಡೇ ಒಳನುಗ್ಗಿದ್ದಾನೆ ಕುಡಿದು ಅಮಲೇರಿದ ವಸಂತ ! ಕಣ್ಣುಗಳಲ್ಲಿ ರಕ್ತದ ರಂಗು. ಮುಖದ ತುಂಬ ಕಪ್ಪು ಬಿಳುಪಿನ ಗಡ್ಡದ ದಟ್ಟವಾದ ಬೆಳೆ. ಮಾಸಿದ ಉಡುಪು. ಅಸ್ತವ್ಯಸ್ತವಾಗಿದ್ದ ಬಾಚದ ತಲೆಗೂದಲು. ಹೆಗಲ ಮೇಲೊಂದು ಕಗ್ಗೆಂಪಿನ ಅಂಗವಸ್ತ್ರ.

ಒಂದಿಬ್ಬರು ಮೆಟ್ಟಿಲ ಹತ್ತಿರ ತಡೆದರೂ ಮಿಂಚಿನ ವೇಗದಿಂದ ತಪ್ಪಿಸಿಕೊಂಡು ತಂದೆಯ ಕಡೆ ಕತ್ತಿ ಬೀಸಿದ ! ತೋಳಿಗೆ ಬಲವಾದ ಪೆಟ್ಟು ಬಿದ್ದು ರಕ್ತ ಸುರಿಯಿತು. ಆ ತಕ್ಷಣವೇ ಅವನನ್ನು ಎಲ್ಲರೂ ಜಗಲಿಯ ಕೋಣೆಯೊಂದಕ್ಕೆ ತಳ್ಳಿ ಬೀಗ ಹಾಕಿ, ನಗರ ಆಸ್ಪತ್ರೆಗೆ ಧಾವಿಸುವ ಪ್ರಸಂಗ ಬಂತು.

ಎಲ್ಲರೂ ನಡುಗಿ ಹೋಗುವಂಥ ಭೀಭತ್ಸ ಸನ್ನಿವೇಶ !

ಹೆಚ್ಚು ರಕ್ತ ಸುರಿಯದಂತೆ ತೋಳಿಗೆ ಬಟ್ಟೆ ಸುತ್ತಿ ಡಾಕ್ಟರ ಬಳಿಗೆ ಕರೆದೊಯ್ದಳು ಕುಮುದ್ವತಿ. ದೇವಯ್ಯ ಪೋಲೀಸ್ ಸ್ಟೇಷನ್ನಿಗೆ ಧಾವಿಸಿ ವಿಷಯವನ್ನು ವರದಿ ಮಾಡಿದ. ಅವನನ್ನೂ ಕೂಡಿಸಿಕೊಂಡು ಹೊರಟಿತು ಪೋಲೀಸ್ ಜೀಪು. ಸ್ವಲ್ಪೇ ಹೊತ್ತಿನೊಳಗಾಗಿ ವಸಂತ ಪೋಲೀಸರ ಕೈವಶವಾದ ಕತ್ತಿಯ ಸಹಿತ.

ರಾಮನಾಥ ಮತ್ತೆ ಒಂದು ವಾರ ಕಾಲ ಆಸ್ಪತ್ರೆಯಲ್ಲಿರುವುದು ಅನಿವಾರ್ಯವಾಗಿ ಅಲ್ಲೇ ಉಳಿದಳು ಕುಮುದ್ವತಿ ತಾಯಿಯೊಂದಿಗೆ ಮಗುವನ್ನು ಮನೆಯಲ್ಲಿ ಬಿಟ್ಟು. ರಕ್ತಸ್ರಾವವಾದುದರಿಂದ ಸುಸ್ತಾಗಿದ್ದ ರಾಮನಾಥ. ಮೂರು ದಿನ ಜ್ವರ ಬೇರೆ ಕಾಡಿತ್ತು. ನೋವಿನ ಉಪಟಳವೂ ಇತ್ತು.

ಪೋಲೀಸ್ ವಿಚಾರಣೆಯಲ್ಲಿಯೂ ಸಾಕ್ಷಿ ಹೇಳಿದಳು ಕುಮುದ್ವತಿ.

ಆರೋಪ ಸಾಬೀತಾಯಿತು. ಆದರೆ, ಮಗನ ಮೇಲೆ ದೂರು ಕೊಡಬೇಕಾಗಿ ಬಂದ ಕಹಿ ಪ್ರಸಂಗದಿಂದ ನೊಂದು ನೀರಾಯಿತು ಮನಸ್ಸು. ರಾಮನಾಥ ತೀರಾ ವ್ಯಥಿತನಾದ. ಪೋಲೀಸರು ಆಸ್ಪತ್ರೆಯಲ್ಲಿಯೇ ರಾಮನಾಥನ ಹೇಳಿಕೆ ಪಡೆದುಕೊಂಡು ಹೋದರೇನೋ ಹೌದು. ಆದರೆ, ಆ ಘೋರ ಪ್ರಕ

ರಣದಿಂದ ನೊಂದು ಬೆಂದ ಬೇಗುದಿಯಲ್ಲಿ ಬೇಯುತೊಡಗಿದುವು ಹೃನ್ಮನಗಳು. ಕಣ್ಣಿಗೆ ನಿದ್ದೆಯು ಬಾರದು. ಪ್ರಯತ್ನಿದರೂ ದುःಖದಿಂದ ಕದಡಿ ಬಗ್ಗಡವಾದ ಮನःಸರೋವರವನ್ನು ಶಾಂತಿಗೊಳಿಸಲಾರ. ಒಮ್ಮೊಮ್ಮೆ ಕಣ್ಣಮುಂದಿನ ವಸ್ತುಗಳೆಲ್ಲಾ ಗಿರಗಿರನೆ ಸುತ್ತುತ್ತವೆ. ಮಕ್ಕಳ ತಾಯಿ ಲಕ್ಷ್ಮಿಯ ಅಳುಮುಖ ಅಕ್ಷಿ ಪಟಲದ ಮೇಲೆ ಸುಳಿಸುಳಿದಳಿಯುತ್ತದೆ. ಎಲ್ಲವನ್ನೂ ಸಹಿಸಿಕೊಳ್ಳುವುದೆಂದರೆ ಕಲ್ಲಿಗಿಂತ ಕಲ್ಲಾಗುವುದೊಂದೇ ದಾರಿ.

ಕುಮುದ್ವತಿ ದುःಖಪೂರಿತ ದನಿಯಲ್ಲಿ ನುಡಿದಳು "ಬರಬರುತ್ತ ಈ ದೇಶದಲ್ಲಿ ಎಂತಹ ಬಿರುಗಾಳಿ ಬೀಸುತ್ತಿದೆ ಅಪ್ಪಾಜಿ! ಹಿಂದೆಲ್ಲಾ ನಮ್ಮಲ್ಲಿ ಎಂತಹ ಸುಸಂಸ್ಕೃತಿಯಿತ್ತು! ಕಿರಿಯರಿಗೆ ಹಿರಿಯರಲ್ಲಿ ಎಂತಹ ಗೌರವಭಾವನೆಯಿತ್ತು ? ಈಗೀಗ ಮನೆಮನೆಯಲ್ಲೂ ಕಿರಿಯರು ಹಿರಿಯರಿಗೆ ಎದುರು ನಿಲ್ಲುವುದು ಕಂಡುಬರುತ್ತದೆ. ಕುಲಪುತ್ರರು ಎಂಬಂತಹ ಪ್ರೇಮಭಾವನೆ ಕಂಡುಬರುವುದೇ ಇಲ್ಲ. ನಮ್ಮ ಸಂಸ್ಕೃತಿ ನಶಿಸಿ ಹೋಗುತ್ತಿದೆ. ಸಹಕಾರ–ಸೌಜನ್ಯಗಳ ಸ್ಥಾನದಲ್ಲಿ ಮಮಕಾರದ ಮುಂಬೆಳೆ ಗಗನದೆತ್ತರಕ್ಕೆ ಬೆಳೆದಿದೆ. ನಮ್ಮದೇ ಹೀಗಾದರೆ ಮುಂದೆ ಮುಂದೆ ಇನ್ನೂ ಏನು ಕತೆಯೋ ಎನ್ನಿಸುತ್ತೆ."

"ಪೋಲೀಸ್ ಸ್ಟೇಷನ್ನಿನಲ್ಲಿ ವಸಂತ ನನ್ನ ಕೆಕ್ಕರಿಸಿ ನೋಡುತಿದ್ದ. ಪೋಲೀಸ್ ಪಹರೆ ಇಲ್ಲದಿದ್ದರೆ ನನ್ನ ಅಲ್ಲಿಯೇ ಮುಗಿಸಿಬಿಡತಿದ್ದನೇನೋ ಎಂಬಂತಿತ್ತು ಅವನ ಕೋಪ. ನಮ್ಮಿಂದ ಅವರಿಗೆ ಯಾವ ಅಪಕಾರವೂ ಆಗಿಲ್ಲ. ಬರೀ ದ್ವೇಷ ಭಾವನೆ. ವಿನಾಕಾರಣ ಒಡಲ ಕಿಚ್ಚು. ನನಗಿದು ಅರ್ಥವೇ ಆಗುತ್ತಿಲ್ಲ."

ದೇವಯ್ಯನ ಮುಖದಲ್ಲಿ ವಿಷಾದ ಕಳೆ ಬೆಳಗಿತು. ಅವನೆಂದ,

"ಈ ಕ್ಷುದ್ರ ರೋಗ ಎಲ್ಲ ಕಡೆಯೂ ಹರಡುತ್ತಿದೆ. ಇದೆಲ್ಲಾ ಇಂಗ್ಲೀಷಿನಿಂದ ಕಲಿತ ವಿದ್ಯೆ ಎಂತಲೂ ಹೇಳಲಾರೆ. ಭಾರತದ ಸತ್ ಸಂಸ್ಕೃತಿ ಏಕೆ ಹೀಗಾಯಿತೋ ಊಹಿಸುವುದು ಕಷ್ಟ. ಇದಂತೂ ತುಂಬಾ ವ್ಯಸನಕರ."

ರಾಮನಾಥ ಓದುತಿದ್ದ ಪತ್ರಿಕೆಯನ್ನು ಬದಿಗಿಟ್ಟು ನುಡಿದ,

"ಇದೆಲ್ಲಾ ನಮ್ಮ ನಮ್ಮ ಹಣೆ ಬರಹ. ಈಗಲೂ ಎಷ್ಟೋ ಕಡೆ ತುಂಬಿದ ಸಂಸಾರಗಳಿವೆ. ಅವರಲ್ಲಿ ಸ್ನೇಹ–ಸಹಕಾರಗಳ ಭಾವನೆಗಳೂ ಇವೆ. ಯಾವ ದೇಶವೂ ಬರೀ ಸುಖದಲ್ಲೇ ಮುಳುಗಿಲ್ಲ. ಸುಖ ದುಃಖಗಳು ಒಟ್ಟಾಗಿಯೇ ನಡೆಯುತ್ತವೆ, ಒಂದನ್ನು ಬಿಟ್ಟು ಒಂದಿಲ್ಲ."

ಮಾನಸಿಕ ದುಗುಡವನ್ನೆಲ್ಲಾ ಬದಿಗೊತ್ತಿ ಪ್ರಯತ್ನಪೂರ್ವಕವಾಗಿ ನುಡಿದಂತಿತ್ತು ಅವನ ವಾಕ್ಯ ಲಹರಿ ಹರಿದು ಬಂದ ರೀತಿಯನ್ನು ಗಮನಿಸಿದರೆ. ಸ್ವಲ್ಪ ಹೊತ್ತು ಸುಮ್ಮನಿದ್ದು ಅವನೇ ಮುಂದುವರಿದ "ಇಂದಿನ ಪೀಳಿಗೆಯ ಶಿಕ್ಷಣ–ದೀಕ್ಷೆ, ರೀತಿ–ನೀತಿ, ವಿಧಿ–ವಿಧಾನ, ಧರ್ಮ–ಕರ್ಮಗಳು ಎಲ್ಲಿಂದ ಎಲ್ಲಿಗೆ ಯಾವ ದಿಕ್ಕಿಗೆ ಎಳೆಯುತ್ತವೆಯೋ ದೇವರಿಗೇ ಗೊತ್ತು. ಅಂತೂ ಭವಿಷ್ಯವನ್ನು ಹೀಗೇ ಎಂದು ನಿರ್ಧರಿಸುವುದು ಸಾಧ್ಯವಿಲ್ಲ."

ದೇವಯ್ಯ ಎರಡೂ ಕೈಗಳನ್ನು ಮೇಲಕ್ಕೆತ್ತಿ ಗಗನಮುಖಿಯಾಗಿ ದು:ಖ ಭರಿತ ವಾಣಿಯಲ್ಲಿ ನುಡಿದ "ಆ ಪರಮಾತ್ಮ ಎಂಬ ವ್ಯಕ್ತಿ ಇದ್ದಿದ್ದರೆ ನಮ್ಮ ದೇಶ ಇಷ್ಟು ಕೆಡುತ್ತಿರಲಿಲ್ಲ. ದೇವರಿಗೆ ನಮ್ಮ ಬಗ್ಗೆ ಜುಗುಪ್ಸೆ ಹುಟ್ಟಿ ಕಣ್ಣು ಮುಚ್ಚಿಬಿಟ್ಟಿದ್ದಾನೆ ಎನಿಸುತ್ತೆ ನನಗೆ. ಈ ಪ್ರಪಂಚದ ಬೆಳಕಿಗೆ ಬಿಟ್ಟ ತಂದೆ ತಾಯಿಗಳನ್ನು ಕೊಚ್ಚಿ ಕೊಲ್ಲುವ ಮಕ್ಕಳಿಗೆ ಯಾವ ಸಂಸ್ಕೃತಿ ಹೊಣೆಯಾದೀತು ? ಇಂತಹವರಿಗೆ ದೇವರೇ ಬುದ್ಧಿ ಕಲಿಸಬೇಕು."

ಮೂವರ ಮುಖದಲ್ಲೂ ವಿಷಾದ ಕಳೆ ಬೆಳಗಿತು.

o o o o

ನವಿಲಾ ಬಿ. ಎ. ಓದಿದ ಹುಡುಗಿ.

ಇತ್ತೀಚಿನ ದಿನಗಳಲ್ಲಿ ಡಿಗ್ರಿ ಪಡೆದ ಧೀಮಂತಿನಿ. ತುಂಬಾ ಚಟುವಟಿಕೆ. ನವಯುಗದ ನವೋದಯ ಜೀವನಕ್ಕೆ ನಾಂದಿ ಹಾಡಬೇಕೆನ್ನುವ ಅತ್ಯಾಸೆಯನ್ನು ತಲೆ ತುಂಬಾ ತುಂಬಿಕೊಂಡವಳು, ತನ್ನ ಓರಗೆಯ ನಾಲ್ಕಾರು ಹುಡುಗಿಯರನ್ನು ಕರೆದುಕೊಂಡು ನೇರವಾಗಿ ಬಂದಳು ಪದ್ಮಾಲಯಕ್ಕೆ.

ನಾಯಿಗಳು ಬೊಗಳಿದುದನ್ನು ನೋಡಿ ರಂಗಮ್ಮ ಹೊರ ಧಾವಿಸಿ ಬಂದು ನಾಯಿಗಳಿಗೆ ಸರಪಣಿ ತೊಡಿಸಿದಳು.

"ಕುಮುದ್ವತಿಯವರು ಇದ್ದಾರೆಯೇ ?"

"ಇದ್ದಾರೆ."

"ಅವರನ್ನು ಕಾಣಲು ಬಂದೆವು."

ರಂಗಮ್ಮ ಎಲ್ಲರನ್ನೂ ಹಜಾರಕ್ಕೆ ಕರೆದುಕೊಂಡು ಹೋದಳು. ಕುಮುದ್ವತಿಯು ತಾಯಿಯೊಡನೆ ಹೊರಬಂದರೆ ಎಲ್ಲರೂ ಹೊಸ ಮುಖಗಳೇ;ನವಿಲಾ ಮುಂದಾಗಿ ನಮಸ್ಕರಿಸಿ ತನ್ನ ಗೆಳತಿಯರನ್ನು ಪರಿಚಯಿಸಿದ್ದು ಹೀಗೆ—"ಇವಳು ಜಲಜ, ಇವಳು ನಿರ್ಮಲಾ, ಇವಳು ಕಮಲಾ, ಇವಳು ಶಾರಿ, ಇವಳು ನಂದಿನಿ ನಾನು ನವಿಲಾ. ನಾವೆಲ್ಲರೂ ನಿಮ್ಮ ಪದ್ಮ ರಾಜೇಶ್ವರೀ ಸ್ತ್ರೀ ಕಲ್ಯಾಣ ಸಂಘಕ್ಕಾಗಿ ದುಡಿಯುವ ಸಂಕಲ್ಪ ಮಾಡಿದ್ದೇವೆ, ನಿಮಗೆ ಹೇಳಿಕೊಂಡು ಸಂಘ ಸದಸ್ಯರಾಗಿ ದುಡಿಯುವುದು ಗುರಿ. ನೀವು ಹೇಗೆ ಹೇಳಿದರೆ ಹಾಗೆ."

"ಬನ್ನಿ ಬನ್ನಿ, ಬಹಳ ಸಂತೋಷ."

ಎಲ್ಲರಿಗೂ ಸುಖಾಗಮನ ಕೋರಿ ರಂಗಮ್ಮನಿಗೆ ತಣ್ಣನೆಯ ಶರಬತ್ತನ್ನು ತಂದುಕೊಡಲು ಹೇಳಿ ತಾನೂ ಅವರೊಂದಿಗೆ ಕುಳಿತುಕೊಂಡಳು.

"ನೋಡಿ, ಕೆಳದರ್ಜೆಯ ವರ್ಗಗಳಲ್ಲಿ ಹೆಂಡತಿಯರಿಗೆ ಹೊಡೆತ ಬಡಿತ ಹಿಂಸೆಗಳಿಗೆ ಲೆಕ್ಕವೇ ಇಲ್ಲ. ಅವರಿಗೆ ಆರ್ಥಿಕ ಸ್ವಾತಂತ್ರ್ಯ ವೈಯಕ್ತಿಕ ಸ್ವಾತಂತ್ರ್ಯ ಇಲ್ಲವೇ ಇಲ್ಲ. ಅವರ ಗೋಳು ಗಗನ ಮುಟ್ಟುತ್ತದೆ. ಇವರಿಗೆಲ್ಲಾ ಮನುಷ್ಯರಾಗಿ ಬಾಳುವುದನ್ನು ಕಲಿಸುವ ರೀತಿ ಹೇಗೆ ? ಎಂದು ಯೋಚಿಸಿದರೆ ಉತ್ತರವೇ ದೊರಿಯುವುದಿಲ್ಲ. ನಮ್ಮ ಸಾಮಾಜಿಕ ರೀತಿನೀತಿಗಳೇ ಈ ಪರಿಸ್ಥಿತಿಗೆ ಒತ್ತು ಕೊಡುತ್ತವೆ. ಏನು ಮಾಡೋಣ ಹೇಳಿ ?"

ಕುಮುದ್ವತಿಯ ಎದೆಯಾಳದಿಂದ ನಿಟ್ಟುಸಿರೊಂದು ತಪ್ಪಿಸಿಕೊಂಡಿತು. ಸ್ವಲ್ಪ ಹೊತ್ತು ಯೋಚನೆಯಾಳದಲ್ಲಿ ಮುಳುಗಿ ಹೋದಳು ಅವಳು.

ಸೀತಮ್ಮ ವಿಷಾದ ವಾಣಿಯಲ್ಲಿ ನುಡಿದಳು,

"ಹೌದಮ್ಮಾ, ಇದನ್ನು ನಾವೂ ಆಗಾಗ ಕಂಡವರೇ. ನೆರೆ ಹೊರೆಗಳಲ್ಲಿ ಸ್ತ್ರೀಯರ ಆಕ್ರಂದನ ಕೇಳಿರುವೆ. ಹೆಂಗಸರು ಹೊಡೆಸಿಕೊಂಡು ಬಡಿಸಿಕೊಂಡು ಮತ್ತೆ ಅವರ ಕೈಕಾಲುಗಳನ್ನೇ ಹಿಡಿದುಕೊಂಡು ಬಾಳುತ್ತಾರಲ್ಲಾ ಅದೇ ವಿಶೇಷ."

"ವಿಧಿಯಿಲ್ಲ, ಎಲ್ಲಿಗೆ ಬಿಟ್ಟು ಹೋದಾರು? ಅವಿದ್ಯೆ–ಅಜ್ಞಾನಗಳ ಗೋಳಿನಲ್ಲಿ ಜಗತ್ತನ್ನು–ಜಗತ್ತಿನ ಪರಿಸ್ಥಿತಿಯನ್ನು ಕಂಡರಿಯದ ಮುಗ್ಧದುಗ್ಧ ಜನಕೋಟಿ. ಪ್ರೀತಿ–ಗೌರವ, ದಯೆ–ಧರ್ಮ, ನ್ಯಾಯ–ನೀತಿ ಮುಂತಾದ ಮಹತ್ತರ ಜೀವನ ಮೌಲ್ಯವನ್ನು ಕಂಡರಿಯದವರು. ದುರ್ನೀತಿಯನ್ನು ಸರಿಯೆಂದೇ ಪರಿಭಾವಿಸಿದವರು. ಅಂದಮೇಲೆ, ಅವರು ಪಾಠ ಕಲಿಯುವುದಾದರೂ ಹೇಗೆ ? ಜೀವನ ಗತಿ ಸುಧಾರಿಸುವುದಾದರೂ ಹೇಗೆ ? ಈ ಪರಿಸ್ಥಿತಿ ಬದಲಾಗಬೇಕಾದರೆ ವಿದ್ಯೆ ಸಮಾಜವ್ಯಾಪಿಯಾಗಬೇಕು."

"ನಾವೀಗ ವಯಸ್ಕರ ಶಿಕ್ಷಣ ಮತ್ತು ಬಾಲವಾಡಿಗಳನ್ನು ನಡೆಸುವ ಯೋಜನೆ ತಯಾರಿಸಬೇಕು. ಇದಕ್ಕೆಲ್ಲಾ ಸರಕಾರದ ಸಹಾಯ ಪಡೆಯದೆ ಗತ್ಯಂತರವಿಲ್ಲ. ಈ ಯೋಜನೆಗೆ ತುಂಬಾ ಖರ್ಚು ತಗಲುತ್ತದೆ. ಇದನ್ನು ನಾವು ನಾವೇ ನಿರ್ವಹಿಸುವುದೆಂದರೆ ತುಂಬಾ ಕಷ್ಟ. ಇದುವರೆವಿಗೆ ನಡೆದಿರುವುದೆಲ್ಲಾ ನಮ್ಮ ಸ್ವಂತಿಕೆಯಿಂದಲೇ. ಕಾರ್ಯಾರಂಭಕ್ಕೆ ನಾವೇ ಹಣ ಪೂರೈಸಿದ್ದಾಯ್ತು. ಇನ್ನು ಮುಂದೆ ಸಾಧ್ಯವಾಗದು. ನಾವು ಸರಕಾರದ ಸಹಾಯ ಪಡೆಯಲೇಬೇಕು. ಅದೇನು ತಕ್ಷಣ ಸಿಗುತ್ತದೆಯೇ ? ಮೀನ–ಮೇಷ ನೋಡಿ ಕೊಡಮಾಡುವುದೆಂದರೆ ಅಷ್ಟು ಸರಾಗವಲ್ಲ. ವರ್ಷಾ ಕಾಲವೇ ಬೇಕಾಗಬಹುದು. ಈಗೀಗ ವಿದ್ಯೆಗೆ ಆದ್ಯತೆ ಕೊಡುತ್ತಿದೆ ಸರಕಾರ. ಆದರೂ ಅಧಿಕಾರಿಗಳಿದ್ದಾರಲ್ಲಾ, ಕೈ ಬೆಚ್ಚಗಾಗದೆ ಮಣಿಯುವವರಲ್ಲ. ನಮ್ಮ ಶಾಲೆ ದಿನದಿನ ಬೆಳೆಯುತ್ತಿದೆ. ಈ ಕಟ್ಟಡ ಸಾಲದು. ಹಿಂದಿನ ಅಂಗಳದಲ್ಲಿ ಒಂದು ಕಟ್ಟಡ ಏಳಿಸಬೇಕಾಗುತ್ತದೆ. ಇದಕ್ಕೆಲ್ಲಾ ವಿಪರೀತ ಖರ್ಚಾಗುತ್ತದೆ. ಸರಕಾರ ನಿಧಾನಿಸಿದರೆ ನಮಗೆ ತುಂಬಾ ಕಷ್ಟವಾಗುತ್ತದೆ."

"ಸರಕಾರಕ್ಕೆ ಅರ್ಜಿ ಸಲ್ಲಿಸಿದ್ದೀರಾ?"

"ಕಳೆದ ವರ್ಷವೇ ಕೇಳಿದ್ದಾಗಿದೆ. ಒಮ್ಮೆ ಸ್ಥಳ ಪರಿಶೀಲನೆಗೆ ಬಂದು ಹೋದರು. ಮಕ್ಕಳನ್ನೂ ಶಾಲೆಯನ್ನೂ ನೋಡಿ ಮೆಚ್ಚಿ ಹಣ ಕೊಡಿಸುವ ಆಶ್ವಾಸನೆ ನೀಡಿದ್ದಾರೆ. ಆದರೆ ಸರಕಾರದ ದುರ್ನೀತಿ ಗೊತ್ತೇ ಇದೆಯಲ್ಲಾ: ನೋಡೋಣ. ಎಷ್ಟು ಕಾಲ ತೆಗೆದುಕೊಳ್ಳುತ್ತೋ......ನಾನು ಈ ಕಾರ್ಯವನ್ನು ಇಷ್ಟರೊಳಗಾಗಿಯೇ ಒಂದು ಘಟ್ಟಕ್ಕೆ ತರಬೇಕಿತ್ತು. ಆದರೆ, ನಮಗೆ ಬಂದೊದಗಿದ ಗಂಡಾಂತರಗಳು ತಲೆ ಕೆಡಿಸಿದುವು. ಈವರೆವಿಗೆ ಕೆಲಸ ನಡೆಯುವುದೇ ಕಷ್ಟವಾಯಿತು. ಅಂತೂ, ಇಂತೂ ಹೇಗೆಹೇಗೋ ಮಾಡಿಸಿಕೊಂಡೆ. ಇನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಳ್ಳುವ ಯೋಜನೆಯಿದೆ. ನಿಮ್ಮೆಲ್ಲರ ಸಂಪೂರ್ಣ ಸಹಕಾರವಿರಬೇಕು."

"ಆಯಿತು, ಆಯಿತು. ನಿಮ್ಮೊಂದಿಗೆ ನೆರಳಿನಂತೆ ನಾವು ಅನುಸರಿಸುವವರೇ. ನಾವು ಅದಕ್ಕಾಗಿಯೇ ಬಂದದ್ದು."

"ನೀವು ಸಂಘ ಸದಸ್ಯರನ್ನು ಹೆಚ್ಚು ಹೆಚ್ಚಾಗಿ ಕೂಡಿಸಬೇಕು. ತಪ್ಪದೆ ಮೀಟಿಂಗುಗಳಲ್ಲಿ ಭಾಗವಹಿಸಿ ನಿಮ್ಮೆಲ್ಲ ಸಹಕಾರ ನೀಡಿ ಕೆಲಸ ಕಾರ್ಯಗಳನ್ನು ನಡೆಸಿಕೊಡಬೇಕು, ಎಲ್ಲರೂ ಸ್ವಯಂಸೇವಿಕೆಯರಾಗಿ ಬಂದುದು ತುಂಬಾ ಒಳ್ಳೆಯದು. ನಾಡಿದ್ದು ಶುಕ್ರವಾರದಿಂದ ಎಲ್ಲರೂ ಒಂದುಗೂಡಿ ಕೆಲಸ ಆರಂಭಿಸೋಣ. ಇಂದು ಎಲ್ಲರೂ ಸದಸ್ಯತ್ವ ವಹಿಸಿಕೊಳ್ಳಿ."

"ಆಗಬಹುದು" ಎಂದ ನವಿಲಾ ಇತರ ಹುಡುಗಿಯರ ಕಡೆ ನೋಡಿದಳು.

"ಆಗಬಹುದು" ಎಲ್ಲರೂ ಅನುಮೋದಿಸಿದರು.

o o o o

ವಸಂತನಿಗೆ ಒಂದು ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿದರು.

ಆತ ಸೆರೆಮನೆಗೆ ತಳ್ಳಲ್ಪಟ್ಟ. ಅನಂತರ ಎರಡೂ ಮನೆಗಳಲ್ಲಿ ಉಳಿದುದು ತಾಯಿ ಮಕ್ಕಳು.

ವಸಂತನ ಹೆಂಡತಿ ನೋಹಿನಿಗೆ ಒಂದು ವರ್ಷ ಕಾಲಾವಧಿ ಸೆರೆಮನೆಯಲ್ಲಿದ್ದರೆ ಕುಡಿಯುವುದನ್ನು ಬಿಟ್ಟು ಸಭ್ಯ ಗೃಹಸ್ಥನಾಗಿ ಬಂದಾರು ಎಂಬ ದೂರವಾಸೆ ಮನದಲ್ಲಿ. ಅವನ ಕುಡುಕತನ–ದುಷ್ಟತನ ಅವಳನ್ನು ಹಣ್ಣುಗಾಯಿ ನೀರುಗಾಯಿ ಮಾಡಿದ್ದುದು ದಿಟ.

ಅದೇ ರಾಮನಾಥ–ಕುಮುದ್ವತಿಯರಿಗೆ ತಮ್ಮ ದೂರಿಂದಾಗಿ ಹೀಗಾಯ್ತಲ್ಲಾ ಎಂಬ ಕೊರಗು, ರಾಮನಾಥ ಎರಡೂ ಕೈಗಳನ್ನೆತ್ತಿ ಗಗನ ಮುಖಿಯಾಗಿ ಎದೆಯ ಸಂಕಟವನ್ನು ನಿವೇದಿಸಿಕೊಂಡ. "ದೇವರೇ ! ಹೀಗಾಗಬಾರದಿತ್ತು, ಖಂಡಿತ ಹೀಗಾಗಬಾರದಿತ್ತು. ದೂರು ಕೊಡದಿದ್ದರೂ ಇವರ ಉಪಟಳ ತಡೆಯುವುದಕ್ಕಾಗುತ್ತಿರಲಿಲ್ಲ. ನಮಗೆ ಎಂತಹ ಕಷ್ಟ ತಂದಿಟ್ಟೆ......? ನನ್ನನ್ನು ಇಕ್ಕಟ್ಟಿಗೆ ಸಿಕ್ಕಿಸಿ ದುಃಖ ಕೊಟ್ಟೆ" ಎಂದು ಮನೋವೇದನೆಯನ್ನು ನಿವೇದಿಸಿಕೊಂಡ, ಕಣ್ಣುಗಳು ರಂಗು ತಳೆದುವು. ಸಣ್ಣಗೆ ಬೆಳ್ಳಿಯ ಗೆರೆಯಂತೆ ನೀರಾಡಿತು ಕಣ್ಣಂಚಿನಲ್ಲಿ.

ಹಾಗೆಯೇ ಪದಚಾರಣ ಮಾಡಿದ. ಅಳಿದ ಮಡದಿ ಸಾಧ್ವಿ ಲಕ್ಷ್ಮಿ ಮನೋಭಿತ್ತಿಯಲ್ಲಿ ಮೂಡಿ ನಿಂತಳು. ದುಃಖಪೂರಿತ ಹೃದಯ ಮುಗ್ಧ ದುಗ್ಧ ಚಲನವಲನಗಳನ್ನು ಭಾವನಾವೇಶದಲ್ಲಿ ಗಮನಿಸಿತು. ಒಂದುವೇಳೆ ಅವಳು ಬದುಕಿದ್ದಿದ್ದರೆ ಮಕ್ಕಳ ಧೂರ್ತತನಕ್ಕೆ ಬೇಸತ್ತು ವಿಷ ತಿನ್ನುತಿದ್ದಳೇನೋ... ದೇವರು ಅವಳನ್ನು ಅಂದೇ ಒಯ್ದುದು ಒಳ್ಳೆಯದಾಯಿತು ಎಂದು ತನ್ನಲ್ಲೇ ಅಂದುಕೊಂಡ.

ಕುಮುದ್ವತಿಯ ಕೈಬೆರಳು ಹಿಡಿದುಕೊಂಡು ಕುಣಿಕುಣಿಯುತ್ತ ಬಂದಳು ಶ್ರೀನಿಧಿ.

"ಅಪ್ಪಾಜೀ !"

"ಏನು ಮಗೂ ?"

"ನನಗೇ...ನನಗೇ ಕುದುರೆ ಆಟ ಆಡಿಸಿ."

"ಆಗಲಿ, ಬಾ "

ಮಗುವನ್ನು ಭುಜದ ಮೇಲೆ ಕೂಡಿಸಿಕೊಂಡು ಕುದುರೆ ಆಟ ಆಡಿಸಿದ ರಾಮನಾಥ ಹೈ ಹೈ ಹೈ ಕುದುರೆ ! ಹೈಹೈ ಹೈ ಕುದುರೆ !

ನಕ್ಕು ನಲಿಯಿತು ಮಗು ಹೈ ಹೈ ಹೈ ಹೈ !

ಅಂಗಳದ ತುಂಬೆಲ್ಲಾ ಓಡಾಡಿದ ರಾಮನಾಥ. ಮಗು ಸುಖಾನಂದ ದಿಂದ ಎಳೆನಗೆಯ ಹೊನಲನ್ನು ಹರಿಸಿತು, ಅಲೆಅಲೆಯಾಗಿ ತಂಗಾಳಿಯಲ್ಲಿ ತೇಲುವಂತೆ.

ಕುಮುದ್ವತಿ ನುಡಿದಳು, "ವಸಂತ-ವಾಸುರವರ ಸಂಸಾರ ತಬ್ಬಲಿ ಯಾಯ್ತು. ಇನ್ನು ಮುಂದಿನ ಕೆಲಸ ಕಾರ್ಯಗಳ ನಿರ್ವಹಣೆಯನ್ನು ನಾವೇ ವಹಿಸಬೇಕು. ಅವರಿಗೇ ಬಿಟ್ಟರೆ ಸರಿಯಾಗಿ ನಡೆಸುತ್ತಾರೆಂದು ನಂಬುವುದು ಕಷ್ಟ. ವ್ಯವಸಾಯ ಮಾಡಿ ಅವರವರ ಖರ್ಚು ಕಳೆದುಳಿದ ಉತ್ಪತ್ತಿಯನ್ನು ಬ್ಯಾಂಕಿನಲ್ಲಿ ಠೇವಣಿಯಾಗಿಡಬಹುದು."

"ನಾನೂ ಅದನ್ನೇ ಯೋಚಿಸುತ್ತಿರುವೆ. ಒಬ್ಬ ಸರಿಯಾದ ಮೇಸ್ತ್ರಿ ಬೇಕು. ನಾವು ವ್ಯವಸಾಯಕ್ಕೆ ಉಪಯೋಗಿಸುವ ಹಣ ಹಾಳಾಗಬಾರದು."

"ನಾವೇ ಆಗಾಗ ಹೋಗಿ ನೋಡಿಕೊಂಡರೆ ಮೇಸ್ತ್ರಿಯ ಅಗತ್ಯವಿಲ್ಲ. ಆದರೆ, ಅವರು ಯಾವ ರೀತಿಯಲ್ಲಿರುತ್ತಾರೆಂಬುದು ಮುಖ್ಯ. ಅವರೂ ಹೀನಾ ಯವಾಗಿ ವರ್ತಿಸುವುದಾದರೆ ನಾವಲ್ಲಿ ನಿಲ್ಲುವುದು ಸಾಧ್ಯವಿಲ್ಲ. ಸಧ್ಯಕ್ಕೆ ಒಬ್ಬ ಮೇಸ್ತ್ರಿಯೇ ಇರಲಿ. ಮುಂದೆ ನೋಡಿಕೊಳ್ಳೋಣ, ಅಲ್ಲವೇ?"

ಇಬ್ಬರೂ ಮಾತಾಡುತ್ತಾ ಅಲ್ಲಿಯೇ ಅಡ್ಡಾಡಿದರು.

ಸಾಯಂಕಾಲದ ತಂಗಾಳಿ ತಣ್ಣಗೆ ತನುಮನ ತಣಿಸುವಷ್ಟು ಹಿತ. ಗಿಡ ಮರಗಳಲ್ಲಿ ಸಂಧ್ಯಾರಾಗವನ್ನು ಹರಿಸಿ ಮನಸ್ಸಿಗೆ ಮುದವನ್ನೊಡಿಸು ತ್ತಿದೆ ಪಕ್ಷಿಲೋಕ. ಪ್ರಶಾಂತ ಸಮಯ. ಪ್ರಶಾಂತ ವಾತಾವರಣ. ಪ್ರಶಾಂತ ಪರಿಸ್ಥಿತಿಗೆ ಪೂರಕ.

ಕತ್ತಲೆ ಕವಿಯುತ್ತಲೂ ಇಬ್ಬರೂ ಒಳಬಂದರು. ಸಂಧ್ಯಾದೀಪಗಳು ಜಗಜಗನೆ ಉರಿಯುತಿದ್ದುವು. ಶ್ರೀನಿಧಿ ತನ್ನ ಮುದ್ದು ಬೊಂಬೆಯೊಂದನ್ನು ಲಾಲಿ ಹೇಳಿ ತಟ್ಟಿ ಮಲಗಿಸುವುದರಲ್ಲಿದ್ದಾಳೆ.

"ಏನಮ್ಮಾ, ನಿನ್ನ ಮಗು ಮಲಗಲಿಲ್ಲವೇ ?" ತಂದೆಯ ಪ್ರಶ್ನೆ.

"ಉಹೂ, ಮಲಗೋಲ್ಲ ನೋಡಿ !" ಕಣ್ಣುಗಳನ್ನು ಹೊರಳಿಸಿದಳು ಅವಳು.

"ಏಕೆ ?" ಕೇಳಿದಳು ಕುಮುದ.

"ಅದಕ್ಕೆ ಚಾಕ್‌ಲೇಟ್ ಬೇಕಂತೆ !" ಕಿಲಕಿಲ ನಕ್ಕಿತು ಮಗು.

"ಮಗುವಿಗೋ ತಾಯಿಗೋ...?"

ದುಂಬಿ ಕಣ್ಣುಗಳನ್ನು ಅರಳಿಸಿದಳು ಶ್ರೀನಿಧಿ. ಮುದ್ದು ಮುದ್ದಾಗಿ ಕಣ್ಣು, ಮುಖಗಳನ್ನು ಹೊರಳಿಸಿದರೆ ಹೆತ್ತ ಕರುಳು ಆನಂದದ ಹೆಗ್ಗಡಲಾಯಿತು. ಕೂಡಲೇ ಎದೆಗೊತ್ತಿಕೊಂಡು ಮುದ್ದು ಮಾಡಿ ಲಲ್ಲೆಗೈದಳು ತಾಯಿ. ರಾಮನಾಥ ಬೀರುವಿನಿಂದ ಚಾಕಲೇಟ್ ತೆಗೆದುಕೊಟ್ಟು ಕೆನ್ನೆ ಹಿಂಡಿ ಮುದ್ದು ಕೊಟ್ಟ.

"ಒಂದೇನಾ ? ಅಹಹ ಬಹಳ ಜುಗ್ಗ ! ಮಗೂಗೊಂದು ಬೇಡವೇ ?"

ತಲೆ ಆಡಿಸುತ್ತ ಕೇಳಿದಳು ಶ್ರೀನಿಧಿ. ಅವಳ ಮಾತಿನ ಥಾಟ, ಮುಖದಲ್ಲಿ ಹಾವಭಾವ, ಕೇಳಿದ ರೀತಿ ಒಂದಕ್ಕೊಂದು ಪೂರಕವಾಗಿ ಮಂಗಳಮಯವಾಗಿ ತೋರಿದಳು ಮುದ್ದು ಶ್ರೀನಿಧಿ. ಇಬ್ಬರೂ ಮುದ್ದುಗೈದು ಮತ್ತೊಂದು ಚಾಕಲೇಟ್ ನೀಡಿದರು.

— o —

೧೭

ಪದ್ಮ ರಾಜೇಶ್ವರೀ ಸ್ತ್ರೀ ಕಲ್ಯಾಣ ಸಂಘ ಕ್ಷಿಪ್ರ ಗತಿಯಲ್ಲಿ ಬೆಳೆಯುತೊಡಗಿದೆ.

ಮೀಟಿಂಗ್ ಕೂಡುವುದು ಶಿವಾಲಯದ ಪೌಳಿಯ ಕಲ್ಯಾಣ ಮಂಟಪದಲ್ಲಿ. ಅದು ಮಧ್ಯ ಪ್ರದೇಶದಲ್ಲಿರುವುದರಿಂದ ಎಲ್ಲರಿಗೂ ಅಲ್ಲಿಗೆ ಬರಲು ಸರಾಗ.

ಶೀರ ಮುಗ್ಧ ಮನೋಗತಿಯ ಜನರಾಶಿ ಮೂಢ ನಂಬಿಕೆಯಲ್ಲಿ ತೊಳಲುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದ್ದು, ಅದಕ್ಕೆ ಕತ್ತರಿ ಪ್ರಯೋಗ ಮಾಡುವ ಇಚ್ಛೆಯೂ ಇತ್ತು. ಅದು ಪ್ರಚಾರ ಕಾರ್ಯದಿಂದ ಮಾತ್ರ ಸಾಧ್ಯ....ಅದಕ್ಕೊಂದು ಕಾರ್ಯಕ್ರಮ ಹಾಕಿಕೊಳ್ಳುವ ಯೋಚನೆ ಮನದಲ್ಲಿ.

ಮಹಿಳೆಯರ ಸಣ್ಣಪುಟ್ಟ ದೂರುಗಳು ಬರುತ್ತಲೇ ಇರುತ್ತವೆ ಅವ್ಯಾಹತವಾಗಿ. ಆದರೆ, ಪುರುಷ ಪ್ರಧಾನವಾದ ರಾಷ್ಟ್ರದಲ್ಲಿ ಪುರುಷನದೇ ಮೇಲುಗೈ. ಆತ ಕರುಣೆದೋರಿದರೆ ಮಾತ್ರ ಸ್ತ್ರೀಯರಿಗೆ ಸುಖ ಸಂಪತ್ತು. ಇಲ್ಲದಿದ್ದಲ್ಲಿ ದೂರು ಕೊಟ್ಟು ಮನೆಗೆ ಮರಳಿದರೆ ಇನ್ನಷ್ಟು ಕಿರುಕುಳ ಇದ್ದದ್ದೇ. ಪರಿಸ್ಥಿತಿ ಹೀಗಿರುವಾಗ ಸಂಘದ ಕಾರ್ಯ ನಿರ್ವಹಣೆ ಬಲೂ ಕಷ್ಟದಾಯಕವಾಯಿತು ಕುಮುದ್ವತಿ ಮತ್ತು ಸಂಘದ ಸದಸ್ಯರಿಗೆ.

ಮುಂದೇನು ?

ಅದೊಂದು ಬಹು ದೊಡ್ಡ ಪ್ರಶ್ನೆ. ಬಾಲ್ಯ ವಿವಾಹ ನಿಲ್ಲಿಸಲು ಸಾಧ್ಯವಾಯಿತು. ನಿರುದ್ಯೋಗ ಅಥವಾ ಅನುಪಯುಕ್ತ ಅಥವಾ ಮುದುಕ ಅಥವಾ ಕುಡುಕ ವರನಿಗೆ ಮಗಳನ್ನು ಕೊಡದಿರುವಂತೆ ಪ್ರೇರೇಪಿಸುವುದು ಮತ್ತು ಮಗಳ ಇಷ್ಟಾನಿಷ್ಟಗಳನ್ನು ಕೇಳಿ ತಿಳಿದು ಅವಳ ಒಪ್ಪಿಗೆಗೆ ಮಾನ್ಯತೆ ನೀಡುವುದು ಇಂತಿಂಥ ವಿಚಾರಗಳನ್ನು ಜನಮನಕ್ಕೆ ತುಂಬಬೇಕಾದರೆ ಸಾಕುಬೇಕಾಯಿತು. ಊರೊಳಗೆ ಎರಡು ಮೂರು ಶಾಲೆಗಳಿರುವುದರಿಂದ ವಿದ್ಯೆಯಂತೂ

ಲಭಿಸುತ್ತದೆ ಹೆಣ್ಣುಮಕ್ಕಳಿಗೆ. ಮುಂದಿನ ಅಭ್ಯಾಸವೆಂದರೆ ನಗರದಲ್ಲಿ. ಈಚೀಚೆಗೆ ಮುಂದಿನ ಅಭ್ಯಾಸಕ್ಕೂ ಮುಂದಾಗುತಿದ್ದಾರೆ ಹೆಣ್ಣುಮಕ್ಕಳು. ಆದರೇನು ? ಸ್ವಾತಂತ್ರ್ಯ ಸೊನ್ನೆ. ಜಡಭರತಸ್ಥಿತಿ ಬೃಹದಾಕಾರವಾಗಿ ಬೆಳೆದು ಬೇರು ಬಿಟ್ಟಿದೆ.

ವಿದ್ಯೆ ಬುದ್ಧಿಗಳಿಂದ ಏನು ಪ್ರಯೋಜನವೋ ಅದನ್ನು ಅರಿಯುವಷ್ಟು ಆಸ್ಥೆಯಾಗಲೀ ಸಹನೆ ಸಹಕಾರಗಳಾಗಲೀ ಇಲ್ಲವೇ ಇಲ್ಲ. ಗ್ರಾಮೀಣ ಮಂದಿ. ಗ್ರಾಮ್ಯ ಬದುಕು, ಗ್ರಾಮ್ಯ ಬುದ್ಧಿ. ಅಂದಮೇಲೆ ಹೆಜ್ಜೆಹೆಜ್ಜೆಯೂ ಮಂದ ಗತಿಯ ಪಾಲು.

ಮನೆಯಲ್ಲಿ ಟೈಲರಿಂಗ್ ಕಲಿತ ಹೆಣ್ಣುಮಕ್ಕಳಿಗೆ ಟೈಲರಿಂಗ್ ಚೆನ್ನಾಗಿ ಬಂದಿದ್ದರೂ ಮನೆಯಲ್ಲಿ ಸ್ವಂತ ಮಿಷಿನ್ನಿಲ್ಲದೆ ಕೈ ಮೊಟಕು. ಮಿಷಿನ್ ಕೊಂಡುಕೊಡುವವರಿಲ್ಲ. ಕೊಳ್ಳುವೆನೆಂದರೆ ಕೈಯಲ್ಲಿ ಕಾಸಿಲ್ಲ. ಒಂದುವೇಳೆ, ಲಭ್ಯವಿದ್ದು ಹಣ ಗಳಿಸಿದರೆ ಅದು ಗಂಡನ ಅಥವಾ ತಂದೆಯ ಪಾಲು. ಇಂಥ ಪರಿಸ್ಥಿತಿಯಲ್ಲಿ ಸ್ತ್ರೀ ಜೀವನೋದ್ಧಾರ ಕನಸಿನ ಗಂಟು. ಕುಡುಕತನದಿಂದ ಅಥವಾ ಅಧಿಕಾರ ದಂಡದಿಂದ ಅಥವಾ ಪ್ರಕೋಪದಿಂದ ದುರ್ವ್ಯವಹಾರದ ಆಕ್ರೋಶದಿಂದ, ಅಂತೂ ಒಂದಲ್ಲ ಒಂದು ಕಾರಣದಿಂದ ಮನಃಕ್ಲೇಶ ತಪ್ಪಿದ್ದಲ್ಲ, ಹೆಂಗಳೆಯರಿಗೆ.

ಸಾಕ್ಷಿಮಾತ್ರರಂತೆ ಇಲ್ಲಿ ಲೀಲಾಜಾಲವಲ್ಲ ಬದುಕು. ಸಮಾಜದ ವಿಶಿಷ್ಟ ಚೌಕಟ್ಟಿನ ಗೆರೆಯನ್ನು ದಾಟುವಂತಿಲ್ಲ. ಅಂದಮೇಲೆ, ಸ್ತ್ರೀ ಸ್ವಾತಂತ್ರ್ಯ ಯಜ್ಞಕ್ಕೆ ಸ್ತ್ರೀಯರೇ ಸಮಿತ್ತು ಮತ್ತು ಹವಿಸ್ಸು. ಈ ಕಾರಣಗಳಿಂದ ಸಮಾಜದ ಯಾವ ಎಳೆಯನ್ನು ಜಗ್ಗಿದರೂ ಆಗುವ ಅನಾಹುತಕ್ಕೆ ಸ್ತ್ರೀಯಲ್ಲದೆ ಬೇರಿಲ್ಲ ಬಲಿಪಶು. ಆದ್ದರಿಂದ ಸ್ತ್ರೀ ಶಿಕ್ಷಣವೊಂದೇ ಅವರನ್ನು ಗೆಲ್ಲಿಸಬೇಕಾದರೆ. ಆರ್ಥಿಕ ಸ್ವಾತಂತ್ರ್ಯ ವೈಯಕ್ತಿಕ ಸ್ವಾತಂತ್ರ್ಯ ಅಲ್ಪಸ್ವಲ್ಪವಾದರೂ ಲಭಿಸಿದ್ದಲ್ಲಿ ಸ್ತ್ರೀ ಜನರು ಜೀವನ ಸುಖವನ್ನು ಕಾಣುತಿದ್ದರು. ತೀರಾ ದುರಾದೃಷ್ಟವೆಂದರೆ, ತಂದೆಯ ಆಸ್ತಿಯಲ್ಲಿ ಹಕ್ಕಿಲ್ಲ, ಗಂಡನ ಆಸ್ತಿಯಲ್ಲಿ ಹಕ್ಕಿಲ್ಲ. ಜ್ಞಾನವಲಯವೂ ಸೊನ್ನೆ. ಈ ಎಲ್ಲಾ ಕಾರಣದಿಂದ ದಿಗ್ಬಂಧನ ಅನಿವಾರ್ಯ.

ಮನಃಪಕ್ಷಿ ಸಾಮಾಜಿಕ ವಲಯದಲ್ಲಿ ಹಾರಾಡಿ ಜೀವನ ಪರಿಸ್ಥಿತಿಯನ್ನು ಮನಗಾಣುತ್ತಲೂ ದೀರ್ಘವಾದ ನಿಟ್ಟುಸಿರು ಬಿಟ್ಟಳು ಕುಮುದ್ವತಿ. ಚಿಂತಾಕ್ರಾಂತವಾಯಿತು ಮನಸ್ಸು.

ಊರೊಳಗೆ ವರದಕ್ಷಿಣೆಯ ಪಿಡುಗು ಹೋಗಿಯೇ ಇಲ್ಲ. ವರದಕ್ಷಿಣೆಯಿಲ್ಲದೆ ಯಾವ ವರನೂ ಮದುವೆಯಾಗಲು ಮುಂದಾಗುತ್ತಿಲ್ಲ. ಯಾರು ಕೈ ತುಂಬ ಹಣ ಕೊಡಲು ಸಿದ್ಧವೋ ಅಂತಹ ಕಡೆಯೇ ಮನಸ್ಸು. ಕೊಡದಿದ್ದರೆ ಗತಿಯಿಲ್ಲವಲ್ಲಾ ಎಂಬ ಸಂಕಷ್ಟ ಹೆಣ್ಣಿನವರಿಗೆ. ಮಗಳಿಗಾಗಿಯೇ ಕೊಡೋಣ ಮುಂದವಳು ಸುಖವಾಗಿದ್ದಾಳು ಎಂಬ ದೂರದಾಸೆ. ಅದರಲ್ಲಿ ಒಂದು ಚಿಕ್ಕಾಸೂ ಮಗಳಿಗೆ ದಕ್ಕದಿದ್ದರೂ ಕೊಡುವುದರಲ್ಲಿ ಮುಂದೆ. ತಮ್ಮ ಶಕ್ತಿ ಮೀರಿ ದುಡಿದು ಅಳಿಯನನ್ನು ಸಂತೃಪ್ತಿಪಡಿಸುತ್ತಾರೆ. ಸಾಲದ ಹೊರೆಯನ್ನು ಹೊತ್ತು. ನಡೆಯುವುದೆಲ್ಲಾ ತೆರೆಯ ಮರೆಯಲ್ಲಿ. ತಲತಲಾಂತರದಿಂದ ಮಡದಿಯರನ್ನು ಭೋಗವಸ್ತುವಾಗಿ ಭೋಗಿಸಿದವರಿಗೆ ಅವರ ಬಗ್ಗೆ ಕನಿಕರ ಬರುವುದುಂಟೇ ? ಪರಿಸ್ಥಿತಿ ಹೀಗಿರುವಾಗ ಸಾಗರವನ್ನು ಅಳೆಯಲು ಹೋದ ಸಕ್ಕರೆ ಬೊಂಬೆಯಂತಾಗುತ್ತೆ ತಮ್ಮ ಪ್ರಯತ್ನ.

ನಮ್ಮವರೆಲ್ಲಾ ಏಕೆ ಹೀಗಾಗಿದ್ದಾರೆ? ಭಾರತೀಯತೆ ಎಲ್ಲಿ ಹೋಯಿತು? ಸುಸಂಸ್ಕೃತಿಯ ಹೂರಣ ಕೆಟ್ಟದ್ದಾದರೂ ಹೇಗೆ ? ಯೋಚಿಸುತ್ತಾ ಕುಳಿತರೆ ಹೊತ್ತು ಉರುಳಿದುದೇ ತಿಳಿಯದಷ್ಟು ವಿವಶತೆ.

೦ ೦ ೦ ೦

ಶ್ರೀನಿಧಿ ಓರಗೆಯ ಮಕ್ಕಳೊಡನೆ ಶಾಲೆಗೆ ಸೇರಿದ್ದಾಳೆ. ಅವಳ ಚುರುಕು ಬುದ್ಧಿಯ ಸ್ವಭಾವ ಎಲ್ಲರಿಗೂ ಅಚ್ಚುಮೆಚ್ಚು. ಶಾಲೆಯಲ್ಲೂ ಮೆಚ್ಚು. ಆಟ ಪಾಠಗಳಲ್ಲೂ ಮುಂದೆ. ಮುದ್ದು ಮಾತುಗಳಲ್ಲೂ ಮುಂದೆ. ಮನೆಯಲ್ಲೂ ಮೆಚ್ಚು. ಶಾಲೆಯಲ್ಲೂ ಮೆಚ್ಚು. ಅವಳಿಂದ ಮನೆಯಲ್ಲಿ ದಿವಿನಾದ ಬೆಳಕು.

ಪುಟ್ಟಸ್ವಾಮಿ ದಿನವೂ ಕಾರಿನಲ್ಲಿ ಶಾಲೆಗೆ ಬಿಟ್ಟು ಬರುತ್ತಾನೆ. ಸಂಜೆಯಲ್ಲಿ ಕರೆತರುವುದೂ ಅವನೇ. ರಜ ಬಂದಿತೆಂದರೆ ಓರಗೆಯ ಮಕ್ಕಳ ಕೂಟ ಮನೆಯಲ್ಲಿ.

ಇಂದಿರಮ್ಮ....

ಪದ್ಮ ರಾಜೇಶ್ವರಿ ಸ್ತ್ರೀ ಕಲ್ಯಾಣ ಸಂಘ ಕಾರ್ಯದರ್ಶಿಣಿ ಇಂದಿರಮ್ಮ. ಅವಳು ಇತ್ತೀಚೆಗೆ ಬಂದೇ ಇರಲಿಲ್ಲ ಮನೆಗೆ. ಮನೆಯಲ್ಲಿ ಏನೇನೋ ಅಡಚಣೆ, ಏನೇನೋ ತಾಪತ್ರಯ, ಏನೇನೋ ಸಂಕಷ್ಟಗಳು ಒದವಿ ಬಂದು ಅವಳನ್ನು ಹೆಡೆಮುರಿಗಟ್ಟಿತ್ತು. ಅಂದು ಇದ್ದಕ್ಕಿದ್ದಂತೆಯೇ ಬಂದ ಇದಿರಮ್ಮ ನೇರವಾಗಿ ಹಜಾರಕ್ಕೆ ಹೋದಳು,

"ಎಲ್ಲಮ್ಮಾ ರಂಗೂ, ಅಮ್ಮಾ ಕಾಣಿಸುತ್ತಿಲ್ಲ ?"

"ಕೊಠಡಿಯಲ್ಲಿದ್ದಾರೆ. ಬಹುಶಃ ಲೆಕ್ಕ ಪತ್ರ ನೋಡುತ್ತಿರಬಹುದು."

ಅವಳ ಮಾತಿನ ದನಿಯನ್ನು ಕೇಳಿ ಸೀತಮ್ಮ ಹೊರಬಂದಳು.

"ಓ, ಬನ್ನಿ ಇಂದಿರಮ್ಮ, ಬನ್ನಿ ಒಳಗೆ, ಆಫೀಸಿನಲ್ಲಿದ್ದಾಳೆ, ಕುಮುದ್ವತಿ."

ಸೀತಮ್ಮನ ಹಿಂದೆಯೇ ಒಳ ಹೋದಳು ಇಂದಿರಮ್ಮ. ಆಫೀಸಿನ ಲೆಕ್ಕ ಪತ್ರಗಳ ತಪಸಾಣೆಯಲ್ಲಿ ತೀರಾ ಮುಳುಗಿದ್ದಳು ಕುಮುದ್ವತಿ.

"ಬನ್ನಿ ...ಬನ್ನಿ" ಸ್ವಾಗತಿಸಿದಳು ಅವಳು "ಈಚೆಗೆ ಲೆಕ್ಕ ನೋಡಲು ಅವಕಾಶವಾಗಲಿಲ್ಲ. ಈವೊತ್ತು ಎಲ್ಲಾ ಪೂರೈಸಿಬಿಡೋಣ ಎಂದುಕೊಂಡು ಮುಗಿಸುತಿದ್ದೇನೆ."

"ಹಾಗಿದ್ದರೆ ನನ್ನಿಂದ ಅಡಚಣೆಯು ಉಂಟಾಯಿತೇ ?"

"ಇಲ್ಲ, ಬನ್ನಿ."

ಪಕ್ಕದ ಕುರ್ಚಿಯ ಮೇಲೆ ಕುಳಿತುಕೊಂಡಳು ಇಂದಿರಮ್ಮ. ಇನ್ನೊಂದು ಕುರ್ಚಿಯ ಮೇಲೆ ಮಂಡಿಸಿದಳು ಸೀತಮ್ಮ. ಒಂದು ಗಳಿಗೆ ತಡೆದು ಇಂದಿರಮ್ಮ ನುಡಿದಳು,

"ಇಂದಿನ ಸಮಸ್ಯೆಯೆಂದರೆ ಒಂದು ಸ್ವಾರಸ್ಯಕರವಾದ ಸಂಗತಿ. ನಿನಗೆ ಹೇಳಿ ಹೋಗೋಣವೆಂದು ಬಂದೆ."

ತುಟಿಗಳಲ್ಲಿ ಮೃದುವಾದ ಹಾಸ ಹರಿಸಿದಳು ಅವಳು.

"ಏನು ಹೇಳಿ ?"

"ನಮ್ಮ ಶಾರದಮ್ಮನ ಮಗಳು ಶೈಲ ಇಂಜಿನೀಯರನ್ನು ಮದುವೆಯಾದುದು ನಿನಗೆ ಗೊತ್ತಷ್ಟೆ ?"

"ಹೌದು ಬ್ಯಾಂಕಿನಲ್ಲಿ ಕೆಲಸ ಮಾಡುವ ಹುಡುಗಿ ?"

"ಹೌದು, ಹೌದು. ಅವಳು ಹೊತ್ತಿಗೆ ಮುಂಚೆ ಎದ್ದು ಅಡಿಗೆ ಮಾಡಿ ಮನೆಗೆಲಸ ಮುಗಿಸಿ ಬ್ಯಾಂಕಿಗೆ ಹೋಗುತ್ತಾಳೆ. ದಿನವೂ ಬಸ್ಸು ಹಿಡಿದು ಮನೆಗೆ ಬರುವಾಗ ಸಂಜೆ ಆರೂವರೆ ಗಂಟೆಯಾಗುತ್ತೆ. ಅನಂತರ ಮತ್ತೆ ಮನೆಗೆಲಸ ರಾತ್ರಿ ಹತ್ತರನಂತರ ವಿಶ್ರಾಂತಿ. ಇಷ್ಟು ದುಡಿಯುವ ಹೆಣ್ಣಿಗೆ ಆತನ ಕಟ್ಟುಪಾಡೇನು ಗೊತ್ತೆ ? ಪ್ರತಿ ತಿಂಗಳ ಸಂಬಳ ಪೂರ್ತಿ ಅವನ ಕೈಗೊಪ್ಪಿಸಬೇಕು. ಮೇಲಾಗಿ, ಬ್ಯಾಂಕಿನ ಪಾಸ್ ಬುಕ್ ತನ್ನಲ್ಲಿಯೇ ಇರಬೇಕು; ಅಂದರೆ ಅವಳು ಹಣ ಮುಟ್ಟುವಂತಿಲ್ಲ. ಅಂದಮೇಲೆ ಅವಳೇಕೆ ದುಡಿಯಬೇಕು ಹೇಳು ? ನೀನೇನು ಹೇಳುತ್ತಿ ಇದಕ್ಕೆ ?"

"ಶ್ರೀಹರೀ ! ಇದೆಂತಹ ಅನ್ಯಾಯ ? ಅವಳಿಗೆ ಹಣ ದಕ್ಕದ ಮೇಲೆ ದುಡಿಯುವುದಾದರೂ ಏಕೆ ? ಅವಳು ಮೂಕ ಪಶುವಾಗಿರುವುದು ತಪ್ಪು."

"ಈಗ ಯೋಚಿಸು, ಪದ್ಮ ರಾಜೇಶ್ವರೀ ಸ್ತ್ರೀ ಕಲ್ಯಾಣ ಸಂಘ ಇದಕ್ಕೇನು ಪರಿಹಾರ ಸೂಚಿಸಬೇಕು ? ಮುಂದಿನ ಮೀಟಿಂಗಿನಲ್ಲಿ ಈ ವಿಚಾರವನ್ನು ಮುಂದಿಟ್ಟು ಚರ್ಚಿಸೋಣವೇ ? ವಿಷಯ ಬಯಲಿಗಿಟ್ಟರೆ ನಾಚಿ ಸರಿಹೋಗಬಹುದೋ ಎನಿಸುತ್ತೆ. ಎಂಥ ಹೀನ ಮನೋಭಾವದ ಗಂಡಸರಿರುತ್ತಾರೆ ? ಹೃದಯ ಹೀನರು !"

"ಇಂತಹವರಿಗೆ ಭಗವಂತ ಎಂದೂ ಕ್ಷಮಿಸಲಾರ."

"ಮೊದಲು ಸಂಘದ ಮೂಲಕ ಒಂದು ನೋಟೀಸ್ ಕೊಟ್ಟು ಅವನು ಏನು ಹೇಳುತ್ತಾನೆ ಕಾಯ್ದು ನೋಡೋಣ. ಆತ ಸರಿಹೋದರೆ ಆಯ್ತು, ಇಲ್ಲದಿದ್ದರೆ ನಾವು ಸರಿಯಾದ ಕ್ರಮ ಕೈಗೊಳ್ಳಬೇಕು."

“ಮೀಟಿಂಗ್ ಇದೇ ಇಪ್ಪತ್ತೈದರಂದು ಕೂಡುತ್ತದೆ ದೇವಸ್ಥಾನದಲ್ಲಿ. ಅಲ್ಲಿಗೆ ಶೈಲಳನ್ನು ಬರಮಾಡಿಕೊಳ್ಳಬೇಕು.”

“ಅವಳ ಅಭಿಪ್ರಾಯವನ್ನು ತಿಳಿದುಕೊಂಡನಂತರ ಮುಂದಿನ ಕ್ರಮ.”

“ಖಂಡಿತ…”

ದೂರದಲ್ಲೆಲ್ಲೋ ಬುಲ್‌ಬುಲ್ ಹಕ್ಕಿಗಳ ಜೋಡಿ ಚೀರಿಡುತಿದ್ದುವು ವೀತರಾಗದಲ್ಲಿ.

ಯಾಕೋ ಏನೋ ಮನಃಪ್ರಾಣಗಳು ಮೆಲ್ಲನೆ ತುಡಿದುವು. ಇಬ್ಬರೂ ಪರಸ್ಪರ ಮುಖ ನೋಡಿಕೊಂಡರು. ತುಟಿಗಳಲ್ಲಿ ವಿಷಾದದ ಕಿರು ನಗೆ ಮೂಡಿ ಮಾಯವಾಯಿತು.

ರಂಗಮ್ಮ ಮೂವರಿಗೂ ಶರಬತ್ತಿನ ಲೋಟಗಳನ್ನು ತಂದಳು.

೦ ೦ ೦ ೦

ಸೋಮು ದಡದಡನೆ ಮೆಟ್ಟಿಲು ಹತ್ತಿ ಬಂದ. ಮುಖದಲ್ಲಿ ತುಂಬ ನಗುವಿನ ಛಾಯೆ. ಒಳಬರುತ್ತಲೂ ಅವನೆಂದ “ಕುಮೂ ಈ ಸಲಿ ನಾನು ಎಲೆಕ್ಷನ್‌ಗೆ ನಿಲ್ಲುವುದೆಂದು ಖಚಿತ ಮಾಡಿಕೊಂಡೆ. ನಾವು ನಾಲ್ಕು ಮಂದಿಯಲ್ಲಿ ಗಣ್ಯರೆನಿಸಿಕೊಳ್ಳಬೇಕಾದರೆ ನಮಗೂ ಸ್ಥಾನಮಾನಗಳಿರಬೇಕು. ಬರೀ ಅಂಗಡಿಗಾರ ಆದರೆ ಏನು ಪ್ರಯೋಜನ ?”

ಸೀತಮ್ಮ ತನ್ನ ದನಿಗೂಡಿಸಿದಳು “ನೋಡು ಮಗನೇ, ಎಂತೆಂತಹವರೆಲ್ಲಾ ಎಲೆಕ್ಷನ್‌ನಲ್ಲಿ ಸೋತು ಹೋಗುತ್ತಾರೆ. ಇನ್ನು ನೀನು ನಿಲ್ಲುವುದೆಂದರೆ ಕಷ್ಟ. ಜನಬಳಕೆಯಿಲ್ಲ ಸಹಾಯಕರಿಲ್ಲ. ಹೇಗಾದೀತು ಹೇಳು ? ನಿಂತಮೇಲೆ ಗೆದ್ದು ಬರುವ ಧೈರ್ಯವಿರಬೇಕು. ನಿನ್ನಿಂದ ಸಾಧ್ಯವೇ ಹೇಳು ? ಯಾರು ಬೆಂಬಲಿಸುತ್ತಾರೆ ನಿನ್ನ ? ಎಷ್ಟು ಪ್ರಚಾರ ಬೇಕು ? ಎಷ್ಟು ಜನ ಸಹಾಯ ಬೇಕು ? ಇದೆಲ್ಲಾ ನಿನ್ನಿಂದ ಕೈಗೂಡಿಸಿಕೊಳ್ಳಲಾದೀತೇ ? ತುಂಬಾ ಕಷ್ಟದ

ಕೆಲಸ. ಹೆಜ್ಜೆ ಮುಂದಿಟ್ಟು ಅವಮಾನವಾಗಬಾರದು. ನೀನು ತುಂಬಾ ಯೋಚಿಸಿ ಕಣಕ್ಕೆ ಇಳಿ. ಇಲ್ಲದಿದ್ದರೆ ಮಾನ ಕಳೆದುಕೊಳ್ಳಬೇಕಾಗುತ್ತೆ."

"ಅಯ್ಯೋ, ಅಷ್ಟೇಕೆ ಚಿಂತೆ? ಎಂತೆಂತಹವರೋ ಸೋಲುತ್ತಾರೆ. ಇನ್ನು ನಾನು ಸೋತರೆ ಆಗುವ ನಷ್ಟ ಅಷ್ಟರಲ್ಲೇ ಇದೆ."

ಮೂವರೂ ಹಜಾರದಲ್ಲಿ ಮಂಡಿಸಿರುವಾಗಲೇ ದೇವಯ್ಯ ಮತ್ತು ರಾಮನಾಥರು ಅಲ್ಲಿಗೆ ಬಂದು ವಿಷಯ ತಿಳಿದುಕೊಂಡು ಬಾಯಿತುಂಬಾ ನಕ್ಕರು. ರಾಮನಾಥ ತನ್ನ ಅಭಿಪ್ರಾಯವನ್ನು ಹೊರಹಾಕಿದ "ನೋಡು, ಸೋಮೂ. ಈ ಸಲಿ ಎಲೆಕ್ಷನ್ನಿನಲ್ಲಿ ಹುರಿಯಾಳುಗಳೇ ಬಹಳಮಂದಿ ಇದ್ದಾರೆ. ಅವರ ಮಧ್ಯೆ ನೀನು ನುಸಿಯುವುದು ನಾಣ್ಣೀಡು. ನಿನಗೆ ನಿನ್ನ ಗ್ರಾಹಕರು ಮಾತ್ರ ಮತ ಕೊಟ್ಟಾರು. ಅದರಿಂದೇನಾದೀತು ಹೇಳು ?"

ದೇವಯ್ಯ ಅಂದ "ಬಿರುಸಾದ ಪ್ರಚಾರ ಕಾರ್ಯ ಬೇಕು. ಎಲೆಕ್ಷನ್‌ಗಳಲ್ಲಿ ನಡೆಯುವುದೇ ಗೂಂಡಾಗಿರಿ–ಮೋಸ–ಅನೀತಿ–ಅನ್ಯಾಯ. ಇವುಗಳ ಕೋಟೆಯಲ್ಲಿ ಗೆದ್ದು ಬರುವುದು ಕಷ್ಟ. ಮುಂದಾಗಿ ಸೋಲು ಏಕೆ ಅನುಭವಿಸುತ್ತಿ ? ಅದರಿಂದ ನಾಲ್ಕು ಕಾಸೂ ಕಳೆದು ಹೋಗುತ್ತೆ. ತಿಳಿದೂ ತಿಳಿದೂ ಮುಂದಾದರೆ ನಿನಗೆ ಭಂಗ ತಪ್ಪಿದ್ದಲ್ಲ."

"ಬೆಲೆಗಳು ಗಗನಕ್ಕೇರುತ್ತಿವೆ. ದರೋಡೆ–ಡಕಾಯಿತಿಗಳಿಗೆ ಲೆಕ್ಕವಿಲ್ಲ. ಜನ ಬೇಸತ್ತು ಹೋಗಿದ್ದಾರೆ. ಮಾತಾಡಿದರೆ ಚೂರಿ–ಕಡುಗತ್ತಿಗಳು ಮುಂದಾಗುತ್ತವೆ. ಇಂಥ ಕಠಿಣ ಪರಿಸ್ಥಿತಿಯಲ್ಲಿ ಎಲೆಕ್ಷನ್‌ಗೆ ನಿಲ್ಲಬೇಕಾದರೆ ಎಂಟೆದೆಗಳಿರಬೇಕು" ಎಂದಳು ಕುಮುದ್ವತಿ.

"ಹೇಗಾದರೂ ಗೆದ್ದು ಬರದಿದ್ದರೆ ಕೇಳು."

"ಆಗಲಿ, ಗೆದ್ದು ಬಾ. ಇನ್ನೇನು ಬಹಳ ದೂರವಿಲ್ಲ."

"ಹಾಗೆಂದರಾಗದು ನೀವೆಲ್ಲಾ ಪ್ರಚಾರ ಕಾರ್ಯ ಕೈಕೊಳ್ಳಬೇಕು."

"ಸಧ್ಯ ನಮ್ಮ ಕೆಲಸ ನಾವು ಮುಗಿಸಿಕೊಂಡರೆ ಸಾಕು. ಅನಂತರ ನಿನ್ನ ಪ್ರಚಾರ ಕಾರ್ಯ."

"ಹೀಗೆಂದರೆ ಹೇಗೆ? ನಿಮ್ಮವರು-ನಮ್ಮವರು ಕೂಡಿಯೇ ಎಲೆಕ್ಷನ್ನಲ್ಲಿ ಗೆಲ್ಲಬೇಕು. ಹಾಗೇ ಗೆಲ್ಲುವುದು ಸಾಧ್ಯವೇ ಇಲ್ಲ. ನೀವೆಲ್ಲಾ ಮುಂದಾಗಲೇಬೇಕು" ನುಡಿಯನ್ನು ಒತ್ತಾಯಪೂರ್ವಕವಾಗಿಯೇ ಹೊರಹಾಕಿದ ವಾಸು. ಒತ್ತಾಯಿಸಿದರೆ ಎಲ್ಲರೂ ಬೆಂಬಲ ಕೊಡುವರೆಂಬ ದೃಢವಾದ ನಂಬುಗೆಯಿಂದ.

ಆದರೆ, ಆ ಹುಚ್ಚು ಹುಡುಗಾಟದ ಅಮಲು ನೆತ್ತಿಗೇರಿಬಿಟ್ಟಿದೆ. ಕಣಕ್ಕಿಳಿದು ನೋಡುವವರೆಗೂ ಹುಚ್ಚು ಬಿಡದು. ಅರ್ಥವೂ ಆಗದು. ಅವನ ತನುಮನಗಳು ಸಿಗಿನಿಗಿ ನಲಿಯುತ್ತವೆ. ಇಂದೇ ಎಲೆಕ್ಷನ್ ಗೆದ್ದುಬಿಟ್ಟಂತೆಯೇ ತೋಷದ ಆತ್ಮಘೋಷ. ಅಂತಹ ಹುಚ್ಚುತನಕ್ಕೆ ಹೇಳುವುದಾದರೂ ಏನು? ಎಲೆಕ್ಷನ್ ಪರಿಯನ್ನು ಏನೇನೂ ಅರಿಯದ ಹುಂಬ.

ಂ ಂ ಂ ಂ

ಬೆಳಗಿನ ತಂಪು ಹವೆಯಲ್ಲಿ ಬೀಸುಗಾಳಿಯನ್ನು ಬೇಧಿಸುತ್ತ ಆಗಮಿಸಿಸಿದರು ವಿಶ್ವೇಶ್ವರಭಟ್ಟರು. ಕೈಯಲ್ಲಿ ತೀರ್ಥ ಪ್ರಸಾದಗಳ ಹೂಬುಟ್ಟಿ. ಹಣೆಯ ಮೇಲೆ-ಕೆನ್ನೆಯ ಮೇಲೆ ನಿರಿಗೆಗಳು. ಉದ್ದುದ್ದನೆಯ ಹುಬ್ಬು. ಬಿಳಿ ಪಿರಿನ ಕುರುಚಲು ಗಡ್ಡ. ಇವುಗಳು ಅರವತ್ತರ ಪ್ರಾಯವನ್ನು ಸಾರಿ ಹೇಳುತ್ತವೆ.

ಅವರು ಜಗಲಿಯಲ್ಲಿ ನಿಂತು 'ಅಮ್ಮಣ್ಣೀ' ಎಂದು ಕೂಗಿದರು.

ಕುಮುದ್ವತಿ ದನಿ ಕೇಳಿ ಹೊರಬಂದಳು ಲಗುಬಗೆಯಿಂದ ಗಲ್‌ಗಲ್ ಎಂದುವು ಹೆಜ್ಜೆ ಹೆಜ್ಜೆಗಳು.

"ಏನು ಭಟ್ಟರೇ ! ಚೆನ್ನಾಗಿದ್ದೀರಾ ?" ಎಂದು ಕುಶಲೋಪರಿಯನ್ನು ನಡೆಸಿದ ಅವಳು ಪುನಃ "ಬನ್ನಿ ಕುಳಿತುಕೊಳ್ಳಿ" ಬಲ್ಮೆಯಿಂದ ಸ್ವಾಗತಿಸಿದಳು.

ಭಟ್ಟರು ಕುಳಿತುಕೊಂಡು ಕೇಳಿದರು,

"ಎಲ್ಲಿ ಅಳಿಯ-ಮಾವ ಇಬ್ಬರೂ ಕಾಣಿಸುತ್ತಿಲ್ಲವಲ್ಲಾ, ನಾನು ಅಂದಿನಿಂದ ನೋಡುತ್ತಿರುವೆ. ಅವರಿಬ್ಬರೂ ಹಾಲು ಸಕ್ಕರೆ ಬೆರೆತಂತೆ ಬೆರೆತುಕೊಂಡಿ

ದ್ದಾರೆ. ಅದೇ ನಿಮ್ಮ ವಸಂತ–ವಾಸುರವರಿಗೆ ಏನಾಗಿತ್ತು ಹೇಳಿ ? ಒಳ್ಳೆ ಮನೆ ತನದಲ್ಲಿ ಹುಟ್ಟಿ ಕೆಟ್ಟ ಹೆಸರು ಬೆಳೆಸಿಕೊಂಡರು."

"ಹಣೆಬರಹ."

"ನಿಜ ತಾಯಿ ! ಇಗೊಳ್ಳಿ ಪ್ರಸಾದ ತಂದಿರುವೆ."

ಪ್ರಸಾದದ ಬುಟ್ಟಿಯನ್ನು ಕೊಟ್ಟರು ಭಟ್ಟರು. ಕುಮುದ್ವತಿ ಆದನ್ನು ಭಕ್ತಿಯಿಂದ ಸ್ವೀಕರಿಸಿ ತಾಯಿ ಮತ್ತು ರಂಗಮ್ಮನಿಗೆ ಕೊಟ್ಟು ಉಳಿದು ದನ್ನು ದೇವರ ಮುಂದಿಟ್ಟಳು. ಬುಟ್ಟಿಗೆ ಹಣ್ಣು ಕಾಯಿ ದಕ್ಷಿಣೆಯನ್ನು ತುಂಬಿ ತಂದುಕೊಟ್ಟು ನುಡಿದಳು "ಭಟ್ಟರೇ, ಈ ಸಲಿ ದೇವಸ್ಥಾನದ ದುರಸ್ತಿ ಸುಣ್ಣ ಬಣ್ಣಗಳ ಲೇಪ ಆಗಬೇಕಾಗಿದೆ. ನೀವು ಯಾವಾಗ ಹೇಳುತ್ತೀರೋ ಆಗ ಮಾಡೋಣ."

"ಈ ಕಾರ್ತಿಕ ಮಾಸದ ದೀಪಾವಳಿ ಕಳೆಯಲಿ ಅನಂತರ ಮಾಡಿಸೋಣ. ಅಂದಹಾಗೆಯೇ, ಇನ್ನೊಂದು ವಿಷಯ ಹೇಳಲು ಮರೆತುಬಿಟ್ಟೆ. ನೀವು ಕಲ್ಯಾಣ ಮಂಟಪದಲ್ಲಿ ಮೀಟಿಂಗ್ ಮಾಡುವುದಕ್ಕೆ ಅನೇಕರ ವಿರೋಧವಿದೆ ಆದ್ದರಿಂದ ನೀವು ಬೇರೆ ಕಡೆ ಮಾಡಿಕೊಳ್ಳುವುದು ಒಳ್ಳೆತು ಎನಿಸುತ್ತೆ ನನಗೆ."

"ಹಾಗಿದ್ದರೆ ಬಿಡಿ. ನಮ್ಮಲ್ಲೇ ಬೇಕಾದಷ್ಟು ಸ್ಥಳವಿದೆ, ಇಲ್ಲೇ ಮಾಡಿ ದರಾಯಿತು. ಕೆಲವರಿಗೆ ದೂರವಾಗುತ್ತೆ, ಏನು ಮಾಡೋಣ ? ಹೇಗೋ ಹಾಗೆ ಸರಿಪಡಿಸಿಕೊಂಡರಾಯಿತು.

"ಅದೇ ಒಳ್ಳೆತು ಅಮ್ಮಣ್ಣೀ..."

ಯಾರು ಯಾರು ವಿರೋಧಿಸುತಿದ್ದಾರೆಂಬುದು ಅವಳಿಗೆ ಗೊತ್ತು. ಯಾರು ಯಾರ ಮೇಲೆ ದೂರು ಬಂದಿತ್ತೋ ಅಂತಹವರೇ ವಿರೋಧ ಹೂಡಿ ದ್ದರು.

೦ ೦ ೦ ೦

ಎಲೆಕ್ಷನ್ ಬಿರುಗಾಳಿ ಬೀಸಿಯೇ ಬೀಸಿತು, ಗ್ರಾಮ್ಯ ಜೀವನ ಒಮ್ಮೆಗೇ ಆಲೋಡಿತವಾಗುವಂತೆ.

ಎಲ್ಲಾ ಪಾರ್ಟಿಗಳೂ ತಮ್ಮತಮ್ಮ ಗುರಿಯ ಪ್ರಾಣಾಳಿಕೆಯನ್ನು ವಿಧ ವಿಧವಾಗಿ ಬಣ್ಣಿಸುತಿದ್ದರೆ ಆ ವಿಚಾರ ಜನಜಂಗುಳಿಗೆ ಎಷ್ಟರಮಟ್ಟಿಗೆ ಮುಟ್ಟಿತೋ ಹೇಳುವಂತಿಲ್ಲ. ಎಲ್ಲರೂ ಅವಹೇಳನ ಮಾಡುವವರೇ. ಹಿಂದಿನ ಭೂಪರು ಎಲೆಕ್ಷನ್ ಮುಗಿದ ಬಳಿಕ ಇತ್ತ ಮುಖ ಹಾಕಿದವರಲ್ಲ. ಕೆರೆ ಕಟ್ಟೆಗಳ ಬೇಡಿಕೆಗಳು ಹಾಗೆಯೇ ಉಳಿದಿದ್ದುವು. ಯಾವ ಕ್ಷೇತ್ರದಲ್ಲಿಯೂ ಪ್ರಗತಿಯ ಕಾರ್ಯ ನಡೆಯಲಿಲ್ಲ. ಸರಕಾರ ಇದೆಯೋ ಇಲ್ಲವೋ ಅದೂ ಅನುಮಾನ ಎನಿಸುವಷ್ಟು ಅಸಮಾಧಾನ. ಪ್ರಚಾರ ಕಾರ್ಯ ಒಂದೆಡೆ ನಡೆಯುತಿದ್ದರೆ ಜನರಾಶಿಯ ತಿರಸ್ಕಾರ–ಭರ್ತ್ಸನೆ–ವಾಗ್ಬಾಣಗಳು ಇನ್ನೊಂದು ಕಡೆ. ವಾಹನಗಳ ಸದ್ದು, ಮೈಕ್‌ಗಳ ಹಾವಳಿ, ಭಾಷಣಗಳ ಸುರಿಮಳೆ ಇವುಗಳಿಂದಲೂ ಊರಿನ ಶಾಂತಿ ಕೆಡುತ್ತಲೇ ಇತ್ತು. ಯಾವ ಪಾರ್ಟಿ ಬಂದರೆ ಒಳ್ಳಿತು, ಯಾರಿಗೆ ಮತ ಹಾಕಬೇಕು ಎಂಬುದರ ಕಡೆ ಯಾರಿಗೂ ಅಷ್ಟಾಗಿ ಗಮನ ಹರಿಯಲಿಲ್ಲವೇನೋ. ಪ್ರಚಾರಕ್ಕೆ ಕಿವಿಗೊಟ್ಟರೂ ವಿಚಾರಕ್ಕೆ ಇಂಬು ಕೊಡುವವರು ಕಡಿಮೆ.

ಅಭ್ಯರ್ಥಿಗಳ ಗುಂಪಿನಲ್ಲಿ ವಾಸುವೂ ಸೇರಿಕೊಂಡಿದ್ದ.

ಎರಡು ವಾರಗಳ ಬಿರುಸಿನ ಪ್ರಚಾರ ಕಾರ್ಯ ನಡೆದೇ ನಡೆಯಿತು. ವಾಸು ತಾನೊಬ್ಬ ಹುರಿಯಾಳಾಗಿ ಕೈಮುಗಿದು ಹೇಳಿಕೊಂಡ,

"ನಾನೊಬ್ಬ ಪಕ್ಷರಹಿತ ಹುರಿಯಾಳು. ನಾನು ಈ ಊರಿನವನೇ. ಸದಾ ನಿಮ್ಮ ಊರಿನಲ್ಲೇ ಬಿದ್ದಿರುವವ. ನೀವು ಯಾವ ಯಾವ ಕೆಲಸ ಬೇಕಾದರೂ ನನಗೆ ಹೇಳಿ ಮಾಡಿಸಿಕೊಳ್ಳಬಹುದು. ನಿಮ್ಮ ಉಮೇದುವಾರನನ್ನು ಹುಡುಕುವುದಕ್ಕೆ ದೂರ ಹೋಗಬೇಕಾಗಿಲ್ಲ. ಒಮ್ಮೆ ನನ್ನನ್ನು ಗೆಲಿಸಿದರೆ ನಾನು ನಿಮ್ಮ ಕಿಂಕರನೇ ಆಗುವೆ. ದಯವಿಟ್ಟು ನಿಮ್ಮ ಮತ ಹಾಳಾಗದಂತೆ ನೋಡಿಕೊಳ್ಳಿ."

"ಉಮೇದುವಾರರು ನಮ್ಮ ಬಳಿಗೆ ಬರುವುದು ಐದು ವರ್ಷಗಳಿಗೊಮ್ಮೆ. ಎಲೆಕ್ಷನ್ ಮುಗಿದ ನಂತರ ನಮ್ಮನ್ನು ಕೇಳುವವರಿರುವುದಿಲ್ಲ. ನೀವು ಐದು ವರ್ಷಕ್ಕೊಮ್ಮೆ ಬಂದು ಗದ್ದಲವೆಬ್ಬಿಸದಿದ್ದರೆ ನಮ್ಮ ಜೀವನ ಸಾಗದೇನು ?" ಎಂದಳೊಬ್ಬ ವೃದ್ಧೆ.

"ಹಿಂದಿನವರು ಮಾಡಿರಬಹುದು. ನಾವು ಹಾಗೆ ಮಾಡುವವರಲ್ಲ. ಕೈ ಮುಗಿದು ಹೇಳಿಕೊಳ್ಳುವೆ, ನನ್ನನ್ನು ನಂಬಿ ನಾನು ನಿಮ್ಮವನೇ" ಎಂದ; ಮತ್ತೆ ಮತ್ತೆ ಕೈಮುಗಿದ ವಾಸು.

"ನನಗೆ ಇಂತಹ ಉಮೇದುವಾರರನ್ನು ನೋಡಿ ನೋಡಿ ಸಾಕಾಗಿದೆ. ಎಲ್ಲರೂ ಒಂದೇ ದರ್ಜೆಯವರು ಎನಿಸುತ್ತೆ ನನಗೆ."

"ನಮ್ಮನ್ನು ಆ ವರ್ಗಕ್ಕೆ ಸೇರಿಸಬೇಡಿ ತಾಯಿ. ಮುಂದೆ ನೀವು ನನ್ನ ಕೆಲಸವನ್ನು ನೋಡಿದನಂತರ ಹೇಳಿ."

ಎರಡೂ ಕೈಗಳನ್ನು ಜೋಡಿಸಿಕೊಂಡು ಮತ್ತೆಮತ್ತೆ ನುಡಿದ. ದನಿಯಲ್ಲಿ ದೈನ್ಯಭಾವ ಸ್ಫುರಿಸಿತು. ಪುನಃ ಮುಂದುವರಿದ "ನೀವು ಬಡವರೆಂದು ಸೀರೆ ಕುಪ್ಪಸ ಮತ್ತು ಧೋತಿ ಕೊಡುವ ಏರ್ಪಾಡು ಮಾಡಿದೆ."

ಯಾರೋ ಒಬ್ಬ ಕಿಡಿಗೇಡಿ ಹುಡುಗ ಕೂಗಿದ "ಈ ಕಡೆಯಿಂದ ಸೀರೆ ಕುಪ್ಪಸ ತೆಗೆದುಕೊ ಅಜ್ಜಿ. ಅನಂತರ ನಿನಗೆ ಯಾರ ಮೇಲೆ ಮನಸ್ಸು ಬಂತೊ ಅವರಿಗೆ ಹಾಕು ನಿನ್ನ ಮತವನ್ನು !" ಸುತ್ತಮುತ್ತಿನಿಂದ ಕಿಲಕಿಲ ನಗುವಿನ ಲಹರಿ ಉಕ್ಕಿ ಹರಿಯಿತು.

ವಾಸು ಚಾಟಿ ಏಟು ತಿಂದವನಂತೆ ಮಿಡುಕಿ ಬಿದ್ದು ನುಡಿದ,

"ಅಮ್ಮಾ! ಅಂತಹ ಯೋಚನೆ ಮಾತ್ರ ಮಾಡಬೇಡಿ! ನಾನು ಖಂಡಿತ ನಿಮ್ಮ ಕುಂದುಕೊರತೆಗಳಿಗೆ ಗಮನ ಕೊಡುತ್ತೇನೆ, ನನ್ನನ್ನು ನಂಬಿ."

ಅಜ್ಜಿ ಹುಡುಗನ ಕಡೆ ತಿರುಗಿ "ಸುಮ್ಮನಿರಬಾರದೇನೋ..." ಎಂದಳು ಕೂಗಿ.

"ನೀವು ಅವನಿಗೆ ಹೇಳಿ ತಾಯಿ ! ಅವನು ಹೀಗೆಯೇ ಎಲ್ಲಾರಿಗೂ ಹೇಳಿಬಿಟ್ಟಾನು !"

"ಆಯಿತಪ್ಪಾ, ಹೇಳುವೆ."

"ಖಂಡಿತ ಹೇಳಿ ತಾಯಿ. ಇಂತಹವರಿಂದಲೇ ಕೆಲಸ ಕೆಡುವುದು. ಹೋದ ಸಲಿ ಈ ಕ್ಷೇತ್ರದ ಅಧಿಕೃತ ಅಭ್ಯರ್ಥಿ ಸೋತು ಹೋದುದರಿಂದ ಇಲ್ಲಿಯ

ಕೆಲಸ ನಿಂತುಹೋದುವು. ಈ ಸಲಿ ಹಾಗಾಗಬಾರದು ನೋಡಿ. ನನ್ನನ್ನೇ ಗೆಲಿಸಿ ನಿಮ್ಮ ಎಲ್ಲಾ ಕೆಲಸ ನಡೆಯುವಂತೆ ಮಾಡಿರಿ."

"ಆಗಬಹುದು."

"ತಾಯಿ! ದಯಮಾಡಿ ಉಪಕಾರ ಮಾಡಿ. ಕೈಮುಗಿದು ಕೇಳಿಕೊಳ್ಳುವೆ."

"ಆಯಿತಾಯಿತು."

ಕೆಲವರು ಸೀರೆ—ಕುಪ್ಪಸ ಹಂಚಿದರು. ಧೋತಿ—ಅಂಗಿಯು ದೊರೆಯಿತು. ಹಣದ ಥೈಲಿಯೂ ಕರಗಿ ಜನಪದದ ಕೈಸೇರಿತು. ಹೆಂಡದ ಹೊಳೆ ಹರಿದು ಹುಚ್ಚಾಪಟ್ಟೆ ಆಡಿದರು ಜನ. ಕೆಲಸ ಕಾರ್ಯಗಳಿಗೆ ಅಡಚಣೆ, ಗಂಡಸರೆಲ್ಲಾ ಅಂಕದ ಕೋಳಿ ಹುಂಜಗಳಂತೆ ಮೆರೆಯುವಾಗ ಅವರ ಕೆಲಸ ಕಾರ್ಯಗಳೆಲ್ಲಾ ಹೆಂಗಸರ ತಲೆಯ ಮೇಲೆ.

ಸಧ್ಯ ಈ ಎಲೆಕ್ಷನ್ ಅಂಕ ಕಳೆದು ಹೋದರೆ ಸಾಕು ಎನಿಸಿತು ಬಹುತೇಕ ಸತೀಮಣಿಯರಿಗೆ. ಅದೂ ಅಲ್ಲದೆ, ಬಹು ಜನ 'ನಾವು ಓಟು ಹಾಕುವುದೇ ಇಲ್ಲ' ಎಂಬ ಧೃಡ ನಿರ್ಧಾರ ಕೈಗೊಂಡರು.

ಅದು ಆಶ್ಚರ್ಯವೂ ಅಲ್ಲ; ವಿಶೇಷವೂ ಅಲ್ಲ.

— ೦ —

೧೮

ಭವ್ಯಾಂಬರದಲ್ಲಿ ಒಯ್ಯೊಯ್ಯನೆ ಸಂಚರಿಸುವ ಜೀಮೂತಗಳ ರಾಶಿ.

ಅವುಗಳಡಿಯಲ್ಲಿ ಸಹಸ್ರ ಸಹಸ್ರ ಚುಕ್ಕಿಗಳಂತೆ ಓಲಾಡುತ್ತ ಹಾರುವ ಕಾಮಳ್ಳಿಗಳ ಕರ್ರನೆಯ ದಂಡು. ನಿಸರ್ಗ ಸೌಂದರ್ಯಕ್ಕೆ ಪ್ರತಿದ್ವಂದಿಯೋ ಎಂಬಂತೆ ಅವು ಹಾರಾಡುವ ರೀತಿಯಂತೂ ಬಲು ಮನಮೋಹಕ. ಪ್ರೌಢಾರುಣ ಬೆಳ್ಮುಗಿಲಿನ ದಿಣ್ಣೆಯನ್ನೇರಿ ವಿಜೃಂಭಿಸುತ್ತಿದ್ದಾನೆ ಲೋಕದುಜ್ಜೀವನಕ್ಕೆ ಉಜ್ವಲೋಜ್ವಲ ಬೆಳಕಾಗಿ.

ಶ್ರೀನಿಧಿ ಸುಶಾಂತಿಯ ಸಾಮ್ರಾಜ್ಯದಲ್ಲಿ ಮುಳುಗಿ ತೇಲುತ್ತ ಶಿರೋಭಾರವನ್ನು ಕೈಹಸ್ತಗಳ ಮೇಲೆ ಇಳುಹಿ ಪ್ರಕೃತಿ ಸೌಂದರ್ಯದಲ್ಲಿ ಮನವಿಟ್ಟಿದ್ದಾಳೆ, ವರಾಂಡದ ಮೆಟ್ಟಿಲಿನ ಮೇಲೆ ಕುಳಿತು. ಹಾಗೆ ನಿಸರ್ಗ ದೇವಿಯ ಆರಾಧನೆಯಲ್ಲಿ ಮನವನ್ನು ತೊಡಗಿಸಿದಾಗಲೆಲ್ಲ ಕೇಳಿಬರುವ ಸಂದೇಶ 'ಆರಾಧಿಸು' ಎಂದು—ಅಂದರೆ ಏನನ್ನು ಆರಾಧಿಸಬೇಕು ? ದೈವಾರಾಧನೆಯೇ ? ಅಥವಾ ಸಂಜೀವನಾರಾಧನೆಯೇ ? ಅಥವಾ ದೀನಾರಾಧನೆಯೇ ? ಒಂದೂ ಅರ್ಥವಾಗದಲ್ಲ ಎಂಬ ಚಿಂತನ ಮಂಥನ ಮನದಲ್ಲಿ. ತಲೆ ಭಾರವಾಗುವಷ್ಟು ಏಕಾಂತ ವಿಮರ್ಶೆ.

ಹೊತ್ತು ಯಥೋಚಿತವಾಗಿ ಉರುಳುತ್ತಿದೆ. ಆಲೋಚನಾಧಾರೆ ಮುಖಭಾವದಲ್ಲಿ ಬಿಂಬಿಸಿ ಹೃದಯ ಕುಂಡಕ್ಕೆ ತಟತಟನೆ ತೊಟ್ಟಿಕ್ಕುತ್ತಿದೆ.

ಮದುವೆಗೆ ಹೋಗಿದ್ದ ಅಪ್ಪ ಅಮ್ಮ ಅಜ್ಜ ಅಜ್ಜಿಯರು ಇನ್ನೂ ಹಿಂದಿರುಗಿರಲಿಲ್ಲ. ಅವರು ಬರುವುದು ಊಟವಾದನಂತರವೇ. ಒಳಗಡೆ ಕೆಲಸ ಮುಗಿಸಿದ ರಂಗಮ್ಮ ಬಂದು ಪಕ್ಕದಲ್ಲಿ ಕುಳಿತು ಮೈಗೆ ಮೈ ಹಚ್ಚಿ ನುಡಿದಳು,

"ನಿಧೀ, ನೀನಂತೂ ತುಂಬಾ ವೈರಾಗ್ಯದ ಕಡೆ ವಾಲುತಿದ್ದಿ...ಎನಿಸುತ್ತೆ ನನಗೆ. ನೀನು ಮದುವೆಗೆ ಹೋಗಬಹುದಾಗಿತ್ತಲ್ಲ, ಏಕೆ ಹೋಗಲಿಲ್ಲ? ಎಲ್ಲರಂತೆ ನಿನಗೆ ಅಲಂಕಾರ ಮಾಡಿಕೊಂಡು ಓಡಾಡುವುದು ಇಷ್ಟವಿಲ್ಲವೇ? ಒಂದು ಆಭರಣವನ್ನೂ ಧರಿಸುವುದಿಲ್ಲವಲ್ಲ. ಏಕೆ ಹೀಗಿದ್ದೀ?"

"ನನಗೆ ಅದೆಲ್ಲಾ ಇಷ್ಟವಿಲ್ಲ ರಂಗವ್ವ. ಮದುವೆ ಗಲಾಟೆ ಗದ್ದಲ ಸೇರುವುದಿಲ್ಲ. ಹೀಗೇ ಮನೆಯಲ್ಲಿ ತಣ್ಣಗಿರುವುದೇ ಇಷ್ಟ."

"ಅಯ್ಯೋ, ಮಗುವೇ! ನಿನ್ನಂತೆಯೇ ಅಮ್ಮ ಕೂಡ. ಶಾಲೆ ಕಟ್ಟಿಸುವಾಗ ಎಷ್ಟೊಂದು ಚಿನ್ನ ಬೆಳ್ಳಿ ಮಾರಿಬಿಟ್ಟರು ಅಮ್ಮ! ಬುದ್ಧಿಯವರು ಹಣ ಧಾರಾಳವಾಗಿ ಕೊಟ್ಟಿದ್ದರೂ ಅಮ್ಮ ಎಲ್ಲಾ ಬಂಗಾರವನ್ನು ಮಾರಿ ಕೈ ತೊಳೆದುಕೊಂಡರು. ನೀನು ಹೀಗಿರುವುದರಿಂದಲ್ಲವೇ ಅಮ್ಮ ಮಾರಿದ್ದು? ಆಗ ನನಗಂತೂ ಮಗಳಿದ್ದೂ ಕೊಡುತ್ತಾರಲ್ಲ ಎನಿಸಿತ್ತು. ಈಗ ನೋಡಿದರೆ ಅದೇ ಸರಿಯೆನಿಸುತ್ತೆ. ಧರಿಸದಿದ್ದ ಮೇಲೆ ಆಭರಣ ಏಕಿರಬೇಕು? ಅದರ ಉಪಕಾರ ಯೋಗದಿಂದ ಎಷ್ಟೊಂದು ಮಕ್ಕಳು ವಿದ್ಯೆ ಕಲಿಯುತಿದ್ದಾರೆ ಈಗ? ಅಮ್ಮ ಅದನ್ನು ಸರಿಯಾದ ದಾರಿಯಲ್ಲಿ ಉಪಯೋಗಿಸಿದ್ದಾರೆ ಎಂಬುದು ಈಗ ಅರ್ಥವಾಗುತ್ತದೆ."

"ನಿಜ, ರಂಗವ್ವಾ. ಅಮ್ಮನಿಗೆ ನಾನೇ ಹೇಳಿದ್ದೆ ಮಾರಿಬಿಡಿ ಎಂದು. ಮನೆಯಲ್ಲಿ ಆಭರಣಗಳಿದ್ದರೆ ಕಳ್ಳರ ಪಾಲು, ಅಷ್ಟೆ. ಸ್ಕೂಲಿಗೆ ಉಪಯೋಗಿಸಿದ್ದು ಎಷ್ಟು ಒಳ್ಳೆಯದಾಯ್ತು? ನಾವು ನಮ್ಮ ಐಶ್ವರ್ಯವನ್ನು ಹದವರಿತು ಉಪಯೋಗಿಸಬೇಕು. ಆಭರಣಗಳ ಹಣ ಉಪಯೋಗಿಸದಿದ್ದರೆ ಅಪ್ಪನಿಗೆ ಹೆಚ್ಚಿನ ಹೊರೆಯಾಗುತಿತ್ತು, ಹೀಗೆ ಮಾಡಿದ್ದು ತುಂಬಾ ಒಳ್ಳೆಯದಾಯ್ತು, ರಂಗವ್ವ."

"ಹೌದು, ನಮ್ಮ ಕಾಲಕ್ಕೆ ಹೀಗೆ ಕರುಣೆ ತೋರುವವರಿದ್ದಿದ್ದರೆ ನಾನೂ ವಿದ್ಯೆ ಕಲಿಯಬಹುದಾಗಿತ್ತು. ಆಗ ಕಲಿಯಲಿಲ್ಲ ಈಗ ಕಲಿಯುತ್ತಿರುವೆ ಬಿಡಿ."

"ಅಷ್ಟಿಷ್ಟು ಕಲಿತರೆ ಸಾಲದು ರಂಗವ್ವಾ ಚೆನ್ನಾಗಿ ಕಲಿಯಬೇಕು."

"ನನ್ನಂತಹ ದೀನೆ ಏನು ಕಲಿತೇನು ಬಿಡು. ಕೊನೆಯತನಕ ನಿಮ್ಮಗಳ ಸೇವೆ ಮಾಡುತ್ತಿರುವಷ್ಟು ಕೈಕಾಲು ಗಟ್ಟಿಯಾಗಿದ್ದರೆ ಸಾಕು."

ಅವಳ ಬೆನ್ನಮೇಲೆ ನಲ್ಮೆಯಿಂದ ಕೈಯಿಟ್ಟು ನೇವರಿಸುತ್ತ ಸಾನಂದ ದಿಂದ ನುಡಿದಳು ಶ್ರೀನಿಧಿ "ನಿನ್ನ ಸ್ವಾಮಿ ನಿಷ್ಠೆಗೆ ಎಣೆಯೇ ಇಲ್ಲ. ನಿನ್ನಂತಹ ವರು ಬಹಳ ಅಪರೂಪ ರಂಗಮ್ಮಾ."

"ನೀನು ಮಹಾರಾಣಿ ಕಾಲೇಜು ಸೇರಿಬಿಟ್ಟೆ ನನಗೂ ನಿನಗೂ ಈಗ ಎಷ್ಟು ದೂರ. ನೀನು ಹುಟ್ಟಿದಂದಿನಿಂದ ಹೊಟ್ಟೆಯ ಮಗುವಿನಂತೆಯೇ ನೋಡಿ ಕೊಂಡು ಸಂತೋಷಪಟ್ಟಿದ್ದೆ. ಈಗ ನೀನಿಲ್ಲದೆ ಮನೆ ಬಣಬಣ ಎನ್ನುತ್ತಿದೆ. ನೀನು ಶಾಲೆ ಕಲಿಯುವವರೆಗೆ ಎಷ್ಟೋ ಚೆನ್ನಾಗಿತ್ತು. ಶಾಲೆ ಮುಗಿಸಿ ನೀನು ಮೈಸೂರು ಸೇರಿಬಿಟ್ಟೆ. ನಿನ್ನಂತಹ ಹುಡುಗಿಯರೆಲ್ಲಾ ಎಷ್ಟು ಅಲಂಕಾರ ಪ್ರಿಯರಾಗಿರುತ್ತಾರೆ. ಮದುವೆ, ಹಬ್ಬ ಎಂದರೆ ಎಷ್ಟೆಷ್ಟು ಸಡಗರದಿಂದ ಓಡಾ ಡುತ್ತಾರೆ ? ನೀನು ಮಾತ್ರ ಹೀಗಿದ್ದಿ. ನಿನಗೆ ಭೂರಿ ಭೋಜನ ಇಷ್ಟವಿಲ್ಲವೇ ? ನೀನೇಕೆ ಹೀಗೆ ? ನನಗದು ಅರ್ಥವೇ ಆಗುತ್ತಿಲ್ಲ. ಮೈಸೂರಿನಲ್ಲೆಲ್ಲಾ ಹುಡು ಗಿಯರೂ ಹೀಗಿರುತ್ತಾರೇನೋ, ಅದಕ್ಕೇ ನೀನು ಹೀಗಿದ್ದೀ."

ಶ್ರೀನಿಧಿ ಕಿಲಕಿಲನೆ ನಕ್ಕು ನುಡಿದಳು "ಮೈಸೂರಿನವರು ಹೀಗಿಲ್ಲ ಎಲ್ಲರೂ ಸೊಗಸಾಗಿರುತ್ತಾರೆ. ನನಗೆ ಇಷ್ಟವಿಲ್ಲ ಅಷ್ಟೆ. ನೀನು ಕ್ರಮಕ್ರಮೇಣ ಅರ್ಥ ಮಾಡಿಕೊಳ್ಳುತ್ತಿ ನನ್ನ. ನಾನು ಹಿಡಿಯುತ್ತಿರುವುದು ವಿರಕ್ತಿ ಮಾರ್ಗ."

"ನಾನು ಈ ಮನೆಗೆ ಇಪ್ಪತ್ತು ವರ್ಷಗಳ ಹಿಂದೆ ಬಂದು ಸೇರಿದೆ. ಮೂರು ಮಕ್ಕಳನ್ನು ಹೆತ್ತೆ ಒಂದೂ ಬದುಕಲಿಲ್ಲ, ಗಂಡನೂ ಹೋದ. ನೆಂಟ ರಿಷ್ಟರ ಕೈಕಾಲು ಹಿಡಿಯಬಾರದು; ಯಾರ ಹಂಗೂ ಬೇಡ ಎಂದು ದೃಢ ಮನ ಸ್ಸಿನಿಂದ ಇಲ್ಲಿಗೆ ಬಂದೆ. ನನ್ನ ಅರ್ಧ-ಮುಕ್ಕಾಲು ಆಯುಸ್ಸು ಕಳೆದುಹೋ ಯಿತು. ನಾನು ಈವರೆವಿಗೆ ರೈಲು ಸಹ ನೋಡಲಿಲ್ಲ. ಆನೆ-ಕುದುರೆ-ಒಂಟೆ- ಹುಲಿ-ಸಿಂಹಗಳನ್ನು ಟಿ. ವಿಯಲ್ಲಿ ಕಂಡಿದ್ದವಷ್ಟೆ. ಮೈಸೂರಿನಲ್ಲಿ ಅವನ್ನೆಲ್ಲಾ ಸಾಕಿದ್ದಾರಂತೆ, ನಾನೊಮ್ಮೆ ನಿನ್ನೊಂದಿಗೆ ಬಂದು ಮೈಸೂರು ಕನ್ನಂಬಾಡಿ ನೋಡಬೇಕು. ಅಮ್ಮ ಈಗ ಹೋಗುವುದು ಬೇಡ ದಸರ ಬರಲಿ ಆಗ ಹೋದರೆ

ನೀನು ಮೆರವಣಿಗೆ ನೋಡಬಹುದು ಎನ್ನುತ್ತಾರೆ ನೀನು ಹೇಗೆ ಹೇಳಿವರೆ ಹಾಗೆ. ನಾನು ಅಮ್ಮನೊಂದಿಗೆ ಪೇಟೆಗೆ ಹೋಗಿ ಸಿನಿಮಾ-ನಾಟಕ ನೋಡಿ ರುವೆ; ನನಗಿಲ್ಲಿ ಯಾವ ಕೊರತೆಯೂ ಇಲ್ಲ. ಎಲ್ಲರೊಂದಿಗೆ ನಾನೂ ಒಂದಾಗಿ ಬೆರೆತಿರುವೆ. ಅಮ್ಮ ನನ್ನನ್ನು ಪ್ರೀತಿಯಿಂದ ನೋಡಿಕೊಂಡಿದ್ದಾರೆ. ನನಗಿ ನ್ನೇನು ಬೇಕು ಹೇಳು? ನೆಂಟರಿಷ್ಟರ ಮನೆಯಲ್ಲಿ ಉಳಿದಿದ್ದರೆ ಕಾಲಕಸವಾಗಿ ರಬೇಕಿತ್ತು, ದೇವರೇ ನನಗೆ ಬದುಕಿನ ದಾರಿ ತೋರಿಸಿದ."

"ಈ ಸಲಿ ನನ್ನ ಜೊತೆ ಮೈಸೂರಿಗೆ ಬಾ. ಅರಮನೆ, ಕನ್ನಂಬಾಡಿ,ಜೂ ಎಲ್ಲಾ ತೋರಿಸುವೆ ನನ್ನೊಂದಿಗೆ ಹಾಸ್ಟಲಿನಲ್ಲಿಯೇ ಇರು. ಆರಾಮವಾಗಿ ಕೆಲವು ದಿನ ವಿಶ್ರಾಂತಿ ಹೊಂದು. ಯಾವಾಗಲೂ ಕೆಲಸ–ಕೆಲಸದಲ್ಲೇ ಮುಳುಗಿರುತ್ತಿ ಇಲ್ಲಿ."

"ಅರಮನೆ ಹೇಗಿರುತ್ತೆ?...ಹಾಗೆಂದರೇನು?"

"ಅರಮನೆ ಎಂದರೆ ರಾಜರುಗಳು ವಾಸ ಮಾಡುತಿದ್ದ ಮನೆ. ಅರಮನೆ ಎಂದರೆ ತುಂಬಾ ವಿಶಾಲವಾದ ಮನೆ. ನೂರಾರು ಕೊಠಡಿಗಳಿರುತ್ತವೆ. ಬೆಳ್ಳಿ ಬಾಗಿಲು, ಚಿನ್ನದ ಕಳಸ, ನವರತ್ನದ ಪೀಠ–ಸಿಂಹಾಸನಗಳು ಇರುವ ಸ್ಥಳ. ಅಯ್ಯೋ ಅದನ್ನೆಲ್ಲ ಬಾಯಿಯಲ್ಲಿ ಬಣ್ಣಿಸುವುದಕ್ಕಾಗುತ್ತದೆಯೇ? ನಾನಾ ರೀತಿಯಲ್ಲಿ ಸಿಂಗರಗೊಂಡು ಕಲಾತ್ಮಕವಾಗಿ, ವೈಭವಪೂರಿತವಾಗಿ ಇರುತ್ತವೆ. ಅಂತಹ ಅರಮನೆಗಳಲ್ಲಿ ವಿಜೃಂಭಣೆಯಿಂದ ವಾಸ ಮಾಡುತಿದ್ದರು ರಾಜರು ಗಳು. ಅವರಿಗೆ ಪ್ರಜೆಗಳ ಪರಿಶ್ರಮ ಅರ್ಥವೇ ಆಗುತ್ತಿರಲಿಲ್ಲ. ಪ್ರಜೆಗಳನ್ನು ನಿರ್ಲಕ್ಷಿಸುತಿದ್ದರು. ಆದ್ದರಿಂದ ರಾಜತ್ವವನ್ನು ಕಿತ್ತುಹಾಕಿ ಪ್ರಜಾಪ್ರಭು ತ್ವಕ್ಕೆ ನಾಂದಿ ಹಾಡಿತು ಕಾಂಗ್ರೆಸ್ ಸಂಸ್ಥೆ. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಗಾಂಧೀಜಿಯ ಪರಿಶ್ರಮ ಇದೆಲ್ಲಾ. ರಾಜರನಂತರ ಅರಮನೆ ಗಳು ಪ್ರೇಕ್ಷಣೀಯ ಸ್ಥಳಗಳಾಗಿ, ಹೋಟೆಲುಗಳಾಗಿ ಮಾರ್ಪಟ್ಟವೆ. ಅಂದಿನ ರಾಜರುಗಳೆಲ್ಲ ಇಂದು ನಮ್ಮಂತೆಯೇ ಸಾಮಾನ್ಯ ಪ್ರಜೆಗಳಾಗಿ ಬಾಳುತ್ತ ಲಿದ್ದಾರೆ."

"ಅಂದರೆ....?"

"ಮೊದಲು ಪ್ರಜೆಗಳು ಕಟ್ಟುತಿದ್ದ ಹಣದಿಂದ ಬದುಕುತಿದ್ದರು. ಈಗ ಹಾಗಲ್ಲ, ಅವರೂ ನಮ್ಮಂತೆಯೇ ದುಡಿದುಕೊಳ್ಳಬೇಕು ಜೀವನಕ್ಕೆ. ಅವರು ರಾಜರುಗಳಾಗಿದ್ದಾಗ ದುಡಿಯದೆಯೇ ಸುಖ ಸಂಪತ್ತು ತುಂಬಿರುತಿತ್ತು. ಅವರಿಗೆ ಬೇಕುಬೇಕಾಗುವುದೆಲ್ಲವನ್ನೂ ಒದಗಿಸುತಿತ್ತು ಸರಕಾರ. ವಜ್ರ ವೈಡೂರ್ಯ ಜರತಾರಿಗಳಲ್ಲಿ ಮುಳುಗಿರುತಿದ್ದರು. ಆಸ್ಪತ್ರೆ, ಔಷಧ, ದೂರ ಪ್ರಯಾಣ ಯಾವುದಕ್ಕೂ ಅವರು ಕಾಸು ಬಿಚ್ಚುತ್ತಿರಲಿಲ್ಲ. ಈಗ ಅದೆಲ್ಲಾ ಇಲ್ಲ."

"ಹೌದಾ ಮಗಳೇ ? ನಮ್ಮ ಮೈಸೂರು ರಾಜರೂ ಅಷ್ಟೇನಾ ? ಹಾಗಾದರೆ ಅವರ ಆನೆ ಕುದುರೆಗಳು ಏನಾದುವು ? ಈಗವರು ಸಾಕುತ್ತಿಲ್ಲವೇ ಅವನ್ನು ?"

"ಕೆಲವು ಕುದುರೆಗಳನ್ನು ಸಾಕುತ್ತಾರೆ; ಆನೆಗಳನ್ನು ಮರದ ದಿಮ್ಮಿಗಳನ್ನು ಎತ್ತಲು ಕಾಡಿಗೆ ಕರೆದೊಯ್ಯುತ್ತಾರೆ. ಹಾಗೂ ಹೀಗೂ ನಡೆಯುತ್ತದೆ."

"ಒಂಟೆಗಳಿವೆಯೇ ?"

"ಅವು ನಮ್ಮಲ್ಲಿಲ್ಲ, ರಾಜಾಸ್ಥಾನದಲ್ಲಿ ಇವೆ."

"ನಾನು ಈ ಊರು ಬಿಟ್ಟು ಆಚೆ ಹೋಗಲಿಲ್ಲ ನೋಡು. ಅಮ್ಮ ಹೇಳುವುದು ಮೈಸೂರಿಗೆ ದಸರಾ ಹಬ್ಬದಲ್ಲಿ ಹೋದರೆ ತರತರದ ಪ್ರದರ್ಶನಗಳನ್ನು ಕಣ್ತುಂಬ ನೋಡಬಹುದು. ಅರಮನೆ–ದೇವಾಲಯಗಳ ಅಲಂಕಾರ ನೋಡಬಹುದು. ಒಮ್ಮೆ ಹೋಗಿಬರೋಣ ಎಂದಿದ್ದಾರೆ. ಈಗ ನಿನ್ನೊಂದಿಗೆ ಬಂದರೆ ದಸರಾ ಹಬ್ಬ ಇರುವುದಿಲ್ಲವಲ್ಲ ?"

"ಈಗೊಮ್ಮೆ ಆಗೊಮ್ಮೆ ಎರಡು ಬಾರಿ ನೋಡಿದರಾಯಿತು."

"ನೀನಾಗ ಹೇಳಿದೆಯೆಲ್ಲಾ, ನೂರಾರು ಕೊಠಡಿಗಳು ಇರುತ್ತೆ ಅರಮನೆಯಲ್ಲಿ ಅಂತ. ಅಷ್ಟು ದೊಡ್ಡ ಮನೆಯಲ್ಲಿ ರಾಜ ರಾಣಿಯರು ತಮ್ಮ ತಮ್ಮ ಕೊಠಡಿಗಳನ್ನು ಹೇಗೆ ಹುಡುಕಿಕೊಳ್ಳುತ್ತಾರೆ ?"

ಅವಳ ಮುಗ್ಧ ಪ್ರಶ್ನೆಗೆ ಫಕಫಕನೆ ನಕ್ಕುಬಿಟ್ಟಳು ಶ್ರೀನಿಧಿ.

"ಏಕಮ್ಮಾ ನಗುತ್ತಿ ?"

"ನಿನ್ನ ಪ್ರಶ್ನೆ ನಗು ತರಿಸಿತು."

"ಅಲ್ಲವೇ ಮತ್ತೆ? ಅಷ್ಟು ದೊಡ್ಡ ಮನೆಯಿದ್ದರೆ ದಾರಿ ಹುಡುಕುವುದೂ ಕೊಠಡಿ ಹುಡುಕುವುದೂ ಕಷ್ಟವಲ್ಲವೇ ? ನಾನಾದರೆ ದಾರಿ ತಪ್ಪಿ ಯಾರ ಕೊಠಡಿಗಾದರೂ ಹೋಗಿಬಿಟ್ಟೇನು !"

ಇಬ್ಬರೂ ಕಿಲಕಿಲನೆ ನಗತೊಡಗಿದರು.

ಅವಳು ಪುನಃ ಮುಂದುವರಿದಳು "ಈ ಮನೆಗೆ ನಾನು ಮೊದಲು ಬಂದ ದಿನ ಎಷ್ಟೆಷ್ಟು ಸಲಿ ಹಾದಿ ತಪ್ಪಿದೆನೋ, ಹತ್ತಿಪ್ಪತ್ತು ಬಾರಿ ತಿರುಗಾಡಿ ಅರಿತುಕೊಳ್ಳಬೇಕಾಯ್ತು. ಅಲ್ಲದೆ ಆಳೆತ್ತರದ ನಿಲುವುಗನ್ನಡಿಗಳನ್ನು ಹಿಂದೆಂದೂ ಕಂಡಿರಲಿಲ್ಲ. ಪ್ರಪ್ರಥಮವಾಗಿ ನನ್ನನ್ನು ಕನ್ನಡಿಯಲ್ಲಿ ಕಂಡಾಗ ನನ್ನ ಭೂತವನ್ನೇ ಕಂಡೆನೋ ಎಂಬಷ್ಟು ಭಯವಾಯಿತು ನನಗೆ."

ಇಬ್ಬರೂ ಪುನಃ ಘೊಳ್ಳನೆ ನಕ್ಕರು.

"ಇಲ್ಲಿಯ ವೈಭವಕ್ಕೆ ಹೊಂದಿಕೊಳ್ಳಲು ಕೊನೆಯಪಕ್ಷ ಒಂದು ತಿಂಗಳೇ ಬೇಕಾಯಿತು ! ಯಾರಿಗೂ ನನ್ನ ಹುಂಬತನವನ್ನು ತೋರಗೊಡದಿರಲು ಎಷ್ಟೆಷ್ಟು ಪ್ರಯತ್ನಿಸಿದೆನೋ ದೇವರಿಗೇ ಗೊತ್ತು !"

ಪುನಃ ನಗು...ನಗು.

"ನಿಜವಾಗಿಯೂ ಕೇಳು ನಿಧೀ !ಇಷ್ಟಾದರೂ ನನ್ನ ಪೇಚಾಟವನ್ನು ಅಪ್ಪಿತಪ್ಪಿಯೂ ಯಾರೊಂದಿಗೂ ಹೇಳಲಿಲ್ಲ. ತುಂಬಾ ಜಾಣೆಯಂತೆಯೇ ವರ್ತಿಸಿಬಿಟ್ಟೆ !"

ಪುನಃ ಉರ್ವರೂ ನಕ್ಕರು.

ಅನಂತರ ಅವಳು ಮುಂದುವರಿದಳು "ನೋಡು ನಿಧೀ, ಅದುವರೆಗೆ ನಾನು ಬಾಳಿದ್ದು ಗುಡಿಸಲಿನಲ್ಲಿ. ನೋಡಿದ್ದು ಗುಡಿಸಲುಗಳನ್ನೇ. ಅಂದಮೇಲೆ ನನಗೆ ವಿಶೇಷವಲ್ಲವೇ ಹೇಳು ?"

"ನಿಜ ರಂಗಮ್ಮ."

ಬೆನ್ನು ತಟ್ಟಿದಳು ಶ್ರೀನಿಧಿ. ಮದುವೆ ಮನೆಯಿಂದ ಕಾರು ಹಿಂದಿರುಗಿ ಬಂತು, ಎಲ್ಲರನ್ನು ಹೊತ್ತು. ಚೆಂಬಿಸಿಲಿಗೆ ಥಳಥಳಸುತಿತ್ತು ಅದರ ತಿಳಿ ನೀಲಿ ಬಣ್ಣ.

° ° ° °

ವಸಂತ ಜೇಲಿನಿಂದ ಬಿಡುಗಡೆಯಾಗಿ ಬಂದ. ಅವನನ್ನು ಜೇಲಿನ ಬಾಗಿಲಿನಲ್ಲಿ ಕಂಡು ಬಲ್ಮೆಯಿಂದ ಕರೆತರಲು ಗೆಳೆಯರಾರೂ ಬಂದಿರಲಿಲ್ಲ. ಹೆಂಡತಿ ಮಕ್ಕಳೂ ಇಲ್ಲ. ಮಕ್ಕಳು ಈಗೀಗ ಎತ್ತರೆತ್ತರವಾಗಿ ಬೆಳೆಯುತಿದ್ದಾರೆ. ಜೇಲುವಾಸದಲ್ಲಿ ದೊರೆಯದ ಕುಡಿತದ ಹಸಿವೆಯನ್ನೆಲ್ಲಾ ಒಮ್ಮೆಗೇ ತೀರಿಸಿಕೊಳ್ಳುವ ಚಪಲ ನಾಲಿಗೆಗೆ. ಆದರೆ, ಹಣದ ಅಭಾವದಿಂದ ಕೈಬಾಯಿ ಮೊಟಕು. ಅಪ್ಪನ ಮೇಲಿನ ಸೇಡು, ಹೃದಯವನ್ನು ಕಾಣದ ಕೈಗಳಿಂದ ಹಿಂಡುತ್ತದೆ. ಕೂರಲಾರ, ನಿಲ್ಲಲಾರ. ಸಿಟ್ಟು ರೋಷಗಳ ಗಣಿ ಸಣ್ಣ ಮನಸ್ಸು.

ಅಪ್ಪನ ಅತೀ ದುಡಿಮೆ, ವ್ಯವಸಾಯದ ಪರಿಶ್ರಮಗಳನ್ನು ಮನಗಾಣುವುದಕ್ಕಿಂತ ತನ್ನ ಸೋಮಾರಿತನ ತನಗೆ ಅರ್ಥವೇ ಆಗುತ್ತಿಲ್ಲ. ಜೇಲಿನ ವಾಸದಿಂದ ಶರೀರ ಸ್ಥಿತಿ ಹದಗೆಟ್ಟು ಕ್ಷೀಣಿಸಿತ್ತು. ಅಪ್ಪನ ಕಡೆಯ ಆಳುಗಳೇ ಉತ್ತಿ ಬಿತ್ತಿ ಹೋಗುತ್ತಾರೆ. ಬೆಳೆ ತಮ್ಮ ಪಾಲಿಗೇ ಬರುತ್ತಿದೆ. ಆದರೂ, ತೃಪ್ತಿ ಇಲ್ಲವೇ ಇಲ್ಲ. ಹೆಚ್ಚಿನ ಹಣ ಬ್ಯಾಂಕಿನಲ್ಲಿದ್ದು ಕೈಗೆಟುಕದು. ಮಾನಸಿಕ ಆರೋಗ್ಯವೂ ಅಷ್ಟಕಷ್ಟೆ. ಅವನ ದೇಹಸ್ಥಿತಿ ಸುಧಾರಿಸುವವರೆಗೆ ಆಳುಗಳು ಸಹಾಯ ನೀಡುವ ಯೋಚನೆ ರಾಮನಾಥನಿಗೆ.

ಇಂದಿನ ಪರಿಸ್ಥಿತಿಯಲ್ಲಿ ತಂದೆಯ ಎದುರಿಗೆ ಹೋಗುವುದಾಗಲೀ, ನಿಂತು ಮಾತಾಡುವುದಾಗಲೀ ಸಾಧ್ಯವಾಗದ ಮಾತು. ಅಂದಿಂದಿಗೂ ತನ್ನ ಸಂಸಾರಕ್ಕೆ ಒದಗಿಸಿದ ಸಹಾಯವನ್ನು ಕಡೆಗಣಿಸುವಂತಿಲ್ಲ. ಆದರೂ, ಕುದಿಯುತ್ತದೆ ಒಡಲ್ಕಿಚ್ಚು.

ತನ್ನ ಜಮೀನಿನ ಕೆಲಸ ಮಾಡಿಸುತಿದ್ದ ಮೇಸ್ತ್ರಿ ಹೇಳಿದ,

"ಸ್ವಾಮಿ, ಈ ಸಾಲಿನಲ್ಲಿ ಬೆಳೆ ಕೊಯ್ಯುವವರೆಗೂ ನಿಮ್ಮ ಕೆಲಸ ಮಾಡಿಸಿ ಕೊಡುವೆ. ಸಧ್ಯ ಆರೋಗ್ಯ ಸುಧಾರಿಸಿಕೊಳ್ಳಿ, ಜಮೀನಿನ ಬಗ್ಗೆ ನೀವೇನೂ ತೊಂದರೆ ತೆಗೆದುಕೊಳ್ಳಬೇಡಿ."

ವಸಂತ ಮಾತಾಡದೆ ತಲೆದೂಗಿ ಸಮ್ಮತಿ ಸೂಚಿಸಿದ.

ಮೇಸ್ತ್ರಿ ಅಂದ—"ಇಷ್ಟೆಲ್ಲ ಖರ್ಚುಗಳನ್ನು ಹೊರುವುದು ಅವರಿಗೂ ಕಷ್ಟ ನೋಡಿ. ನಮ್ಮ ಬುದ್ಧಿಯವರು ಧರ್ಮಾತ್ಮರು. ಎರಡು ಸಂಸಾರಕ್ಕೂ ಭುಜ ಕೊಟ್ಟರು.

ವಸಂತ ಪುನಃ ತಲೆ ದೂಗಿದ ಮಾತಾಡಲಿಲ್ಲ. ಮೋಹಿನಿಯೇ ಕೆಲಸದ ಉಸ್ತುವಾರಿಯನ್ನೂ ಮಕ್ಕಳ ವಿದ್ಯಾಭ್ಯಾಸವನ್ನೂ ಗಮನಿಸುತ್ತಾಳೆ. ಗಂಡನ ಕೈಗೆ ಕಾಸು ಸಿಕ್ಕಿದರೆ ಮತ್ತೆ ಕುಡಿತವನ್ನು ಆರಂಭಿಸುತ್ತಾನೆಂಬ ಭಯದಿಂದ ಬಲೂ ಸೂಕ್ಷ್ಮ ಗತಿಯಲ್ಲಿ ನಿತ್ಯ ಎಚ್ಚರ ವಹಿಸುವ ಮಹಿಳೆ ಮೋಹಿನಿ.

೦ ೦ ೦ ೦

ಎಲೆಕ್ಷನ್ ಫಲಿತಾಂಶ ಹೊರಬಿತ್ತು. ಸೋಮುವಿಗೆ ಠೇವಣಿ ನಷ್ಟವಾದುದು ಬಹುಶಃ ಅವನಿಗೆ ಕೆಟ್ಟದ್ದೆನಿಸಲಿಲ್ಲ. ಇನ್ನೊಮ್ಮೆ ಗೆದ್ದೇ ಗೆಲ್ಲುವೆ ಎಂಬ ಯೋಚನೆ ಮನದಲ್ಲಿ.

ಕೈಲಿದ್ದ ನಾಲ್ಕು ಕಾಸು ಕರಗಿ ಹೋದುದರ ಬಗ್ಗೆ ದುಃಖವಿಲ್ಲ. ಮೇಲಾಗಿ ಸಾಲದ ಹೊರೆ ತಲೆಯ ಮೇಲೆ. ಸಂಸಾರ ಭಾರ. ಯಾವುದನ್ನೂ ತಲೆಗೆ ಹಚ್ಚಿಕೊಳ್ಳುವವನಲ್ಲ. ಹೇಗೋ ಹಾಗೆ ಉರುಳುತ್ತವೆ ದಿನಗಳು. ಮಾರ್ವಾಡಿ ಬಂದು ಹಣಕ್ಕೆ ಠಗಾದೆ ಮಾಡಿದಾಗ ಮಾತ್ರ ತಲೆ ಬಿಸಿಯಾಗುತ್ತದೆ. ಅವನಿಗೆ ಅದೂ ಇದೂ ಸಬೂಬು ಹೇಳಿ ಕಳುಹಿಸುವವರೆಗೆ ಕಷ್ಟ. ಅನಂತರ ಅವನು ತನಗೆ ತಾನೇ ರಾಜ.

ಕೃಷ್ಣ ಒಮ್ಮೆ ತಮ್ಮನಿಗೆಂದ,

“ನೀನು ಇಷ್ಟು ಉದಾಸೀನನಾಗಿದ್ದರೆ ಅವನೊಮ್ಮೆ ನಿನ್ನ ಅಂಗಡಿಯನ್ನು ಹರಾಜು ಹಾಕುತ್ತಾನೆ. ಮಾರ್ವಾಡಿ ಅಷ್ಟೊಂದು ಧಾರಾಳಿ ಅಲ್ಲ.”

“ಅವನ ಕಣ್ಣಿಗೆ ಮಣ್ಣೆರಚದಿದ್ದರೆ ಕೇಳು ! ಅವನಿಗೇಕಷ್ಟು ಅವಸರ? ಕೊಡುವೆ ಎಂದಮೇಲೆ ಹೇಗಾದರೂ ಕೊಟ್ಟೇನು.”

“ಒಮ್ಮೆ ಅವನ ಸಾಲ ತೀರಿಸಿ ಕೈ ತೊಳೆದುಕೊಂಡುಬಿಡು. ಅನಂತರ ಯಾವ ತೊಂದರೆಯೂ ಇಲ್ಲ.”

“ನಾನು ಅಷ್ಟೊಂದು ಪುಕ್ಕಲು ಅಲ್ಲ. ಅವನನ್ನು ಅಲ್ಲಾಡಿಸಬಲ್ಲೆ!”

“ನಿನ್ನ ಹಠಮಾರಿತನಕ್ಕೆ ನಾನೇನೂ ಹೇಳಲಾರೆ.”

“ನಿನಗೊತ್ತಿಲ್ಲ. ಕೆಲವು ವಿಚಾರಗಳಲ್ಲಿ ನಾವು ಹೀಗೆಯೇ ಇರಬೇಕು.”

“ಸರಿ ಬಿಡು; ಹಾಗಾದರೆ ನಿನ್ನ ಇಷ್ಟ.”

ಅವನು ತಿರಸ್ಕಾರದ ನಗೆ ಬೀರಿದ.

ಅವನು ಸಾಲ ತೀರಿಸುವುದಕ್ಕಾಗಿ ತಲೆ ಕೆಡಿಸಿಕೊಳ್ಳಲಿಲ್ಲ. ತನ್ನವರೆಲ್ಲ ತಾವು ತಾವೇ ಖರ್ಚನ್ನು ನಿರ್ವಹಿಸಿಕೊಳ್ಳಬಹುದು ಎಂಬುದಾಗಿ ಪೂರ್ಣ ನಂಬಿ ಕಣಕ್ಕಿಳಿದಿದ್ದವನು. ಅಲ್ಲದೆ ಸಂಧಿಯಲ್ಲಿ ಸಮಾರಾಧನೆ ನಡೆದುಹೋಗುತ್ತೆ ಎಂಬ ನಂಬಿಗೆಯೂ ಇತ್ತು. ಅದೇ ಭರವಸೆಯ ಮೇಲೆ ಮುಂದಿನ ಚುನಾವಣೆಯ ಕಣವನ್ನು ಎದುರು ನೋಡ ಹತ್ತಿದ. ಅಲ್ಲಿಯವರೆಗೆ ಆರಾಮವಿರುವುದರಿಂದ ಸಾಲ ತೀರಿಸುವುದು ದೊಡ್ಡದಲ್ಲ. ಅಂಗಡಿಯ ಸಾಮುಗ್ರಿಗಳಿಗೆ ಒಂದಕ್ಕೆರಡು ಬೆಲೆ ಏರಿಸಿದರಾಯಿತು ಎಂಬ ಒಣ ಧೈರ್ಯ.......ದಿವ್ಯ ಉದಾಸೀನ.

೦ ೦ ೦ ೦

ನವಿಲಾ, ಶಾರೀ ಒಟ್ಟಾಗಿಯೇ ಬಂದರು ಪದ್ಮಾಲಯಕ್ಕೆ.

ನೋಡಿದರೆ ಕುಮುದ್ವತಿ ಮುಖದ ತುಂಬೆಲ್ಲಾ ಗಾಯಗಳ ಪಟ್ಟಿಗಳಿಂದ ಮುಚ್ಚಿ ಹೋಗಿದ್ದಾಳೆ. ಒಮ್ಮೆಲೇ ಆಶ್ಚರ್ಯ ವಿಸ್ತೃತ ನಯನಗಳಿಂದ ನೋಡುತ್ತ ಒಂದೇ ಉಸಿರಿಗೆ ಕೇಳಿದಳು ಅವಳು "ಇದೇನಾಯ್ತು ಮೇಡಂ ?"

"ಪೆಟ್ಟಾಗಿ ಮೂರು ದಿನಗಳು ಕಳೆದಿವೆ. ಸಧ್ಯ ಕಣ್ಣಿಗೆ ಪೆಟ್ಟು ಬೀಳಲಿಲ್ಲ. ಏನೂ ಭಯವಿಲ್ಲ ಬನ್ನಿ. ಕುಳಿತುಕೊಳ್ಳಿ."

"ಏನಾಯ್ತು ಮೇಡಂ ? ಹೇಗೆ ಪೆಟ್ಟು ಬಿತ್ತು ?"

"ಮೊನ್ನೆ ಜಾನಕಮ್ಮನೊಂದಿಗೆ ಹೊರಟಿದ್ದೆ ಇನ್ನೊಂದೆರಡು ಮನೆಗಳಿಗೆ ಹೋಗುವ ಸಲುವಾಗಿ. ನಾಲ್ಕೈದು ಮಂದಿ ಸದಸ್ಯೆಯರನ್ನು ಕೂಡಿಸಿಕೊಂಡು ಹಿಂದಿರುಗಿ ಬರುವ ಹಾದಿಯಲ್ಲಿ ಮಾವಿನ ತೋಪಿನಿಂದ ಯಾರೋ ಕಲ್ಲು ಬೀಸಿ ಒಗೆದರು ! ಅದು ನೇರವಾಗಿ ಕಾರಿನ ಕನ್ನಡಿಗೇ ಬಡಿದು ಕನ್ನಡಿ ಛಿದ್ರಛಿದ್ರ ವಾಗಿ ಮುಖಕ್ಕೆ ಚೂರುಗಳು ತಾಗಿದುವು. ನಾನೇ ಕಾರು ತೆಗೆದುಕೊಂಡು ಹೋಗಿದ್ದೆ. ಮುಖದಲ್ಲಿ ರಕ್ತ ಸುರಿಯುತಿತ್ತು. ಹಾಗೇ ನಗರದ ಆಸ್ಪತ್ರೆಗೆ ಹೋಗಿ ಡ್ರೆಸ್ ಮಾಡಿಸಿಕೊಂಡು ಜಾನಕಮ್ಮನವರನ್ನು ಅವರ ಮನೆಗೆ ಬಿಟ್ಟು ಬಂದೆ ನೋಡಿ. ಎಂಥ ಕೇಡಿಗರಿದ್ದಾರೆ...ಯಾರು ಹೊಡೆದರು ಎಲ್ಲಿಂದ ಬಿತ್ತು ಎಂಬುದೇ ತಿಳಿಯಲಿಲ್ಲ. ಕಾರು ನಿಲ್ಲಿಸಿ ನೋಡಲು ಸಮಯವಿಲ್ಲವಾ ಯಿತು. ಹಾಗೇ ಬಂದುಬಿಟ್ಟೆ."

"ಪೋಲೀಸಿಗೆ ದೂರು ಕೊಡಬೇಕಾಗಿತ್ತು."

"ಅಯ್ಯೋ ಬಿಡಿ. ಅವರಿವರ ಮೇಲೆ ದೂರು ಕೊಟ್ಟು ಸಾಕಾಗಿದೆ. ನಾನು ಈ ಸಲಿ ಯಾರಿಗೂ ಹೇಳಲಿಲ್ಲ ಕೂಡ."

"ದೇವರು ದೊಡ್ಡವನು ! ಕಣ್ಣಿಗೆ ತಾಗಲಿಲ್ಲವಲ್ಲಾ ! ಅದೇ ಸಂತೋಷ."

"ಇನ್ನು ಮುಂದೆ ದೇವಸ್ಥಾನದಲ್ಲಿ ಮೀಟಿಂಗ್ ಮಾಡುವಂತಿಲ್ಲ. ನಿಮಗೆ ಗೊತ್ತಷ್ಟೆ ?"

"ಗೊತ್ತು....ಗೊತ್ತು."

"ನೋಡಿ ಈ ಪುರುಷರ ದಬ್ಬಾಳಿಕೆ ಹೇಗಿದೆ ಅಂತ ! ಎಷ್ಟೆಷ್ಟು ಎಚ್ಚರ ವಹಿಸುತ್ತಾರೆ ? ಆ ಸ್ಥಳ ನಮಗೆ ತುಂಬಾ ಅನುಕೂಲವಾಗಿತ್ತು. ನಮ್ಮ ಮನೆಯಲ್ಲಿ ನಡೆಸುವುದೆಂದರೆ ಕೆಲವರಿಗೆ ದೂರ. ಏನು ಮಾಡೋಣ ?"

"ಇನ್ನು ಈ ಊರಿನಲ್ಲಿ ಸರಿಯಾದ ಸ್ಥಳ ಬೇರೆ ಇಲ್ಲವೇ ಇಲ್ಲ. ನಿಮ್ಮ ಮನೆಯೇ ಸರಿಯಾದ ಸ್ಥಳ. ದೂರ ಎಂದರೆ ಆಗುತ್ತದೆಯೇ ? ತಮ್ಮತಮ್ಮ ಕೆಲಸವಾಗಬೇಕೆಂದರೆ ಬೆಂಕಿ ಹಾಯಲೇಬೇಕು. ಅದು ಅನಿವಾರ್ಯ."

"ಸರಿ ಬಿಡಿ ; ನಮ್ಮಲ್ಲೇ ಆರಂಭಿಸೋಣ, ಹೇಗೂ ಒಂದು ಕೊಠಡಿ ಖಾಲಿ ಇದೆ. ಇಲ್ಲಿದ್ದರೆ ನನಗೂ ಸುಸೂತ್ರ ನಡೆಸಿಕೊಳ್ಳಲು ಅನುಕೂಲ ವಾಗುತ್ತೆ. ನಾಲ್ಕು ದಿನ ದೂರ ಎನಿಸಿದರೂ ಅನಂತರ ಅಭ್ಯಾಸವಾಗುತ್ತದೆ ಬಂದು ಹೋಗುವವರಿಗೆ, ಅಲ್ಲವೇ ?"

"ಹೌದು...ಆಗಲೇಬೇಕು."

ಮೂವರ ಮುಖದ ಮೇಲೂ ಮಂದಹಾಸ ಮೂಡಿ ಮಾಯವಾ ಯಿತು.

ಎಲ್ಲರೂ ಆಫೀಸಿನಲ್ಲಿ ಕೂಡಿದರು. ಸೀತಮ್ಮ ಬರುತ್ತಲೂ ಸಭೆಗೆ ಹಿರಿಯ ಸ್ಥಾನದ ಕಳೆ ಕಟ್ಟಿತು.

ಅಂದಿನ ಸಭೆಯ ಮೀಟಿಂಗಿಗೆ ಸ್ತ್ರೀಯರ ಮೂಲಭೂತ ಹಕ್ಕುಗಳು ಎಂಬ ವಿಷಯ ಕುರಿತು ಚರ್ಚೆಯು ನಡೆಯಲಿತ್ತು. ಇನ್ನೂ ಸ್ವಲ್ಪ ಹೊತ್ತಿ ನೊಳಗಾಗಿ ಎಂಟ್ಹತ್ತು ಮಹಿಳೆಯರು ಆಗಮಿಸಿದರು. ಶೈಲ ವಿಷಾದ ವಾಣಿ ಯಲ್ಲಿ ತನ್ನೆಲ್ಲ ಸಂಕಷ್ಟವನ್ನು ಹೇಳಿಕೊಂಡನಂತರ ಗದ್ಗದಿತ ವಾಣಿಯಲ್ಲಿ "ಇದ ಕ್ಕೇನು ಪರಿಹಾರ ಹೇಳಿ" ಎಂದಳು.

"ನಮ್ಮಿಂದ ಆವರಿಗೊಂದು ನೋಟೀಸ್ ಕೊಟ್ಟರೆ....?"

ಇಂತಿಂತಹ ಪ್ರಕರಣಗಳನ್ನು ಬಯಲಿಗೆಳೆಯುವುದು ಲೇಸು. ಲಜ್ಜೆಗೇಡಾದರೆ ಬುದ್ಧಿಗಲಿಯುತ್ತಾರೆ ಕೆಲವರು."

"ಅಷ್ಟು ಸುಲಭವಾಗಿದ್ದಿದ್ದರೆ ನಮ್ಮ ಜೀವನ ಎಂದೋ ಸುಧಾರಿಸುತಿತ್ತು, ನಮ್ಮ ರಾಷ್ಟ್ರ ಪುರುಷಪ್ರಧಾನವಾದುದು ಎಂಬುದನ್ನು ಮರೆಯಬಾರದು" ಎದೆಯಾಳದಲ್ಲಿ ಬಿಸುಸುಯ್ದಾಡಿತು ಸಂಕಟದ ಝರಿಯಾಗಿ.

"ಇಂತಿಂತಹ ಹೀನ ಪ್ರಕರಣಗಳನ್ನು ಬಹಿರಂಗಗೊಳಿಸಲು ನಾವೇಕೆ ಒಂದು ಪತ್ರಿಕೆಯನ್ನು ಪ್ರಕಟಿಸಬಾರದು? ಎಂಬ ಯೋಚನೆ ಬರುತ್ತೆ. ಆದರೆ, ಮರು ಕ್ಷಣದಲ್ಲಿ ಕೊಳ್ಳುವವರಾರು? ಎಂಬ ಪ್ರಶ್ನೆ ಧುತ್ತೆಂದು ಮೇಲೇಳುತ್ತೆ."

"ಅದು ನಿಜವೇ. ಇಂತಹ ಪತ್ರಿಕೆಗಳನ್ನು ಮನೆಯ ಬಳಿ ಸುಳಿಯಗೊಡಿಸುವುದಿಲ್ಲ ಪುರುಷ ಸಮಾಜ. ಅಂದಮೇಲೆ, ಅಲ್ಲಿಗೆ ಮುಗಿಯಿತಲ್ಲ." ನಿರಾಶಾವಾಣಿ ಕಳಕಳಿಯಿಂದ ಬಿತ್ತರಿಸಿತು.

ಕುಮುದ್ವತಿ ಹೇಳತೊಡಗಿದಳು "ನಮ್ಮಲ್ಲಿ ತೀರಾ ಹಳೆಯ ಕಂದಾಚಾರಗಳು, ಮೂಢ ನಂಬಿಕೆಗಳು ಮತ್ತು ಸ್ತ್ರೀ ಪುರುಷ ಪ್ರಭೇದ ಇರುವವರೆಗೆ ಸಮಾಜ ಸುಧಾರಣೆ ಸಾಧ್ಯವೇ ಇಲ್ಲ. ಶಾಸ್ತ್ರಗಳ ಸಂಕೋಲೆಗಳು ಸ್ತ್ರೀಯರನ್ನು ತಹಬಂದಿಗೆ ಇಡುವುದಕ್ಕಾಗಿ ಮಾತ್ರ. ಅದಕ್ಕೆ ಇದಕ್ಕಿಂತ ನಿಜವಾದ ಅರ್ಥವೇ ಇಲ್ಲ. ಅದನ್ನು ಈವರೆವಿಗೂ ಹೆಂಗಳೆಯರು ಅರ್ಥ ಮಾಡಿಕೊಂಡಿಲ್ಲವಲ್ಲ ಅದೇ ಆಶ್ಚರ್ಯ ! ಇಂದೂ, ಈಗಲೂ ದೈವಪ್ರಣೀತ ಎಂದೇ ನಂಬಿದ್ದಾರೆ ಸ್ತ್ರೀ ಜನ. ಎಂತಹ ಮುಗ್ಧತೆ ! ಪುರುಷ ನಿರ್ಮಿತ ಸಮಾಜ, ಪುರುಷ ನಿರ್ಮಿತ ಶಾಸ್ತ್ರ ಸೂತ್ರಗಳು, ಪುರುಷ ನಿರ್ಮಿತ ದಂಡ ಸಂಹಿತೆ. ಪುರುಷ ನಿರ್ಮಿತ ನ್ಯಾಯಾಲಯಗಳ ಕೋಟೆ ಎಲ್ಲವೂ ಸುಭದ್ರ. ಅಂದಮೇಲೆ, ಸ್ತ್ರೀಯರು ಪುರುಷರ ಎತ್ತರಕ್ಕೆ ಏರುವ ಸಾಹಸ ಮಾಡಲೇಬೇಕು. ನಮ್ಮನಮ್ಮ ಕೆಲಸ ಕಾರ್ಯಗಳೂ ಬಲಿಯಬೇಕು ಬುದ್ಧಿ ಬಲವೂ ಬಲಿಯಬೇಕು. ಆದರೆ, ಅತೀ ಶಾಸ್ತ್ರಗಳ ಸಂಕೋಲೆ ತೊಟ್ಟು ತಮ್ಮತನವನ್ನು ಕಳೆದುಕೊಂಡು ವಿದ್ಯೆ ಬುದ್ಧಿಗಳಿಂದ ದೂರಾಗಿ ಹೆಜ್ಜೆಹೆಜ್ಜೆಗೂ ಮುಗ್ಗರಿಸುವ ನಾವು

ಕಾಲಾಂತರಕ್ಕೂ ಹೀಗೆಯೇ. ಅಂದನೇಲಿ ನಾವು ಹೇಗಿದ್ದೇನೆ, ಹೇಗಾಗ ಬೇಕು ಎಂಬುದನ್ನು ಆದ್ಯಂತವಾಗಿ ಯೋಚಿಸಿದ ಹೊರತು ನಮಗೆ ಖಂಡಿತ ಅರ್ಥವಾಗುವುದಿಲ್ಲ ! ಈಗ ನಮ್ಮನ್ನೇ ನಾವು ಬೆನ್ತಟ್ಟಿ ಎಚ್ಚರಿಸಬೇಕು : ಜಡ ನಿದ್ದೆಯಿಂದ ಏಳಬೇಕಾದರೆ ಬಹಳ ಕಾಲ ಬೇಕು. ಅದು ಹರಿ ಪ್ರಯತ್ನ ಪಟ್ಟರೂ ಈ ತಕ್ಷಣವೇ ಆಗುವ ಕೆಲಸವಲ್ಲ. ಆದರೂ, ವಿದ್ಯಾವಂತ ಜಾಗೃತ ಮಹಿಳೆಯರು ಮೈಕೊಡವಿ ಕಾಳಿಯಂತೆ ಏಳದಿದ್ದರೆ ಶಾಸ್ತ್ರಗಳ ಸಂಕೋಲೆ ಕಳಚುವುದು ಸಾಧ್ಯವೇ ಇಲ್ಲ. ಎಲ್ಲರೂ ಆಳವಾಗಿ ಯೋಚಿಸಿ ನೋಡಿ. ಯಾವುದೇ ಒಂದು ಶಾಸ್ತ್ರಸಮ್ಮತ ಎಂದು ಒಪ್ಪಿಕೊಳ್ಳುವುದಾದರೆ ಅದು ಗಂಡುಜಾತಿಗೂ ಅನ್ವಯವಾಗದಿದ್ದರೆ ಬೇಡವೇ ಬೇಡ. ಇಲ್ಲಿ ಹೆಣ್ಣಿ ಗೊಂದು ನೀತಿ ಗಂಡಿಗೊಂದು ನೀತಿ ಆಗಲೇಬಾರದು, ಎಂದರೆ ಒಪ್ಪಿಕೊಳ್ಳುತ್ತೀ ರಷ್ಟೆ ?" ಎದೆಯಾಳದಿಂದ ಸರಾಗವಾಗಿ ಹರಿದು ಬಂತು ಧ್ವನಿ.

"ಹೌದು....ಹೌದು" ಅನೇಕ ದನಿಗಳು ಒಮ್ಮೆಲೇ ಮೊಳಗಿದುವು.

"ಈ ಮುಳ್ಳಿನ ಕಣದಲ್ಲಿ ಹೆಣ್ಣಿನ ಬಾಳು ತುಂಬಾ ಕಷ್ಟ. ಬಾಯಿ ಬಿಟ್ಟರೂ ಕಷ್ಟ ; ಬಾಯಿ ಮುಚ್ಚಿ ಕುಳಿತರೂ ಕಷ್ಟ" ತಿರಸ್ಕಾರಭರಿತವಾ ಗಿತ್ತು ಧ್ವನಿ.

ಶೈಲ ತನ್ನ ಸಂಕಟವನ್ನು ತೋಡಿಕೊಂಡಳು—"ಆರ್ಥಿಕ ಸ್ವಾತಂತ್ರ್ಯ ವೈಯಕ್ತಿತ ಸ್ವಾತಂತ್ರ್ಯಗಳಿಲ್ಲದ ಬಾಳೊಂದು ಬಾಳೆ ? ಒಳ ಹೊರಗೆ ದುಡಿ ದರೂ ಮನಸ್ಸಿಗೆ ಶಾಂತಿ ಸಮಾಧಾನಗಳು ಇಲ್ಲವೇ ಇಲ್ಲ. ಕೆಲಸ ಬಿಡುವೆ ನೆಂದರೂ ಒಪ್ಪಿಗೆಯಿಲ್ಲ..."

"ನಾವೀಗ ನಿನ್ನ ಪತಿಯನ್ನು ಯಾವ ರೀತಿ ಸಂಪರ್ಕಿಸಬೇಕು ? ನೀನೇ ನು ಹೇಳುತ್ತಿ ?"

"ಇಂಥ ದುರ್ವ್ಯವಹಾರ ಸರಿಯಲ್ಲವೆಂದು ತಿಳುವಳಿಕೆಯ ಪತ್ರ ಬರೆಯ ಬಹುದು ಎನಿಸುತ್ತೆ. ಆದರೂ, ತಪ್ಪು ತಿಳಿದುಕೊಳ್ಳಬಹುದೇನೋ ಎಂಬ ಭಯ ಮನಸ್ಸಿಗೆ" ಎಂದಳು ಶೈಲ ಅಳುಕು ದನಿಯಲ್ಲಿ.

ಅವಳ ದೀನಾತಿದೀನ ಕಳಕಳಿಯ ವಾಣಿಯನ್ನು ಕೇಳಿದರೆ ಕಾರುಣ್ಯ ದ್ರವ್ಯ ದ್ರವಿಸುತ್ತದೆ ಬಿಸಿಲಟ್ಟದ ಮಂಜಿನಂತೆ. ಎಲ್ಲರ ಹೃದಯಗಳೂ ನೊಂದು ನೀರಾಗಿ ಬಿಸುಸುಯ್ಯಾಡಿತು. ಆಗ ಶೈಲ ತೀರಾ ಬಳಲಿ ಸೋತು ಹೋದಂತೆ ಕಣ್ಮುಚ್ಚಿ ತನ್ನ ನೋವನ್ನು ತಾನೇ ನುಂಗಿಕೊಂಡಳು.

"ಬಹುತೇಕವಾಗಿ ಸ್ತ್ರೀ ಜನರ ಸ್ಥಿತಿಗತಿ ಹೀಗೆಯೇ. ಈ ಸಂಕಟ ಪರಿಸ್ಥಿತಿ ಹೋಗಲೇಬೇಕು. ಜೀವನದಲ್ಲಿ ಸರ್ವ ಪ್ರಕಾರಗಳಲ್ಲೂ ಸಮತೆ ಇಲ್ಲದಿದ್ದರೆ ಅದು ಸಂಸಾರವೇ ಅಲ್ಲ. ಅಂತಹ ಬದುಕಾದರೂ ಏಕಿರಬೇಕು? ಸದಾ ಕಾಲವೂ ದುಡಿಯುವುದು ತಪ್ಪುವಂತಿಲ್ಲ. ಆದರೂ, ಸ್ವಾತಂತ್ರ್ಯ ಸೊನ್ನೆ. ಇದು ಯಾವ ನ್ಯಾಯ ?"

"ಸ್ವಾರ್ಥಿಗಳು ! ಅಧಿಕಾರ ದಾಹ ! ಇಲ್ಲಿ ಸತಿಯ ಮೇಲಲ್ಲದೆ ಇನ್ನಾರ ಮೇಲೆ ಅಧಿಕಾರ ಮಾಡಲು ಸಾಧ್ಯ? ತಿಳಿವಳಿಕೆಯಿಲ್ಲದ ಬುದ್ಧಿ ! ವಿಶಾಲ ದೃಷ್ಟಿಯಿಲ್ಲ ! ಸಾಲದುದಕ್ಕೆ ಅವಕ್ಷರಸ್ಥ ಸ್ತ್ರೀ ವರ್ಗ. ಎರಡೂ ಸರಿಹೋಗಿದೆ. ಸ್ತ್ರೀಯರು ತಮ್ಮ ವ್ಯಕ್ತಿತ್ವವನ್ನು ಅರಿತುಕೊಂಡಲ್ಲದೆ ಸಮತೆ ಕೈಗೂಡುವುದಿಲ್ಲ. ಕುಡಿಯುವ ಗಂಡಂದಿರಾದರಂತೂ ಕತೆ ಮುಗಿಯಿತು. ಬೀಡಿ ಸಿಗರೇಟು ಕುಡಿತಗಳ ಹಾಳು ಹವ್ಯಾಸ ಮನೆಮನೆಯಲ್ಲೂ ಹವ್ಯಾಸವಾಗಿ ಹೋಗಿದೆ. ಕೆಲವರಿರುತ್ತಾರೆ ಸಂಜೀವನ ನಡೆಸುವ ಪುಣ್ಯವಂತರು. ಒಂದು ಒಳ್ಳೆಯ ಮಟ್ಟವನ್ನು ಮುಟ್ಟಬೇಕೆಂದರೆ, ಸ್ತ್ರೀ ಜನ ಹಕ್ಕುಗಳಿಗಾಗಿ ಬಾಯ್ದೆರೆದು ಸಿಡಿದೇಳಬೇಕು. ಪ್ರತಿಯೊಂದರಲ್ಲೂ ಸಮಾನತೆಯನ್ನು ಪಡೆದುಕೊಂಡರೇನೇ ಜೀವನ ಸೌಖ್ಯ. ಇಲ್ಲದಿದ್ದರೆ ಯಾವೊತ್ತೂ ಹಿಂಸೆಯೇ."

ಅಸಮಾಧಾನ...ಅಶಾಂತಿ...

"ನಾವು ನಮ್ಮದೇ ಆದ ದಿನಪತ್ರಿಕೆ ಹೊರಡಿಸಿ ಮಾರಾಟವಾಗದೆ ಕೈ ಸುಟ್ಟುಕೊಳ್ಳುವುದಕ್ಕಿಂತ ಗ್ರಾಮ್ಯ ಮತ್ತು ಪ್ರಾದೇಶಿಕ ಪತ್ರಿಕೆಗಳಲ್ಲಿ ಲೇಖನ ಬರೆಯುವುದು ಸುಲಭಸಾಧನ. ಈ ನಾಣ್ಯೇಡಿನ ಸುದ್ದಿ ಎಲ್ಲೆಡೆ ಪ್ರಚಾರವಾದರೆ

ಕಣ್ತೆರೆಯುತ್ತಾರೇನೋ....ಆದರೂ, ಮಂದಬುದ್ಧಿಯ ಜನ...ನೋಡೋಣ ದೇವರಿದ್ದಾನೆ."

ಮನುಜರ್ಗೆತ್ತಣ ನೀತಿಯೈ ಹರಹರ ಶ್ರೀ ಚೆನ್ನಸೋಮೇಶ್ವರಾ ‖

೦ ೦ ೦ ೦

ಆಳು ಚೆನ್ನಿಗ ಬಂದು ಎದುರಿಗೆ ನಿಂತ.

ಕೈಜೋಡಿಸಿ "ಬುದ್ಧೀ..." ಎಂದ.

"ಏನಪ್ಪಾ ?" ಕೇಳಿದ ರಾಮನಾಥ.

"ಅಂದು ಅಮ್ಮಾವರ ಕಾರಿಗೆ ಕಲ್ಲು ಹೊಡೆದುದು ಯಾರೆಂಬುದು ತಿಳಿಯಿತೇ ಬುದ್ಧೀ ?"

"ಇಲ್ಲ....ನಿನಗೊತ್ತೇನು ?"

"ಹೌದು...ಕಲ್ಲು ಹೊಡೆದಾಗ ನಾನು ಅಲ್ಲಿಯೇ ಇದ್ದೆ. ಮರದಿಂದ ಇಳಿಯಬೇಕಾದರೆ ಕಾರು ಹೊರಟುಹೋಯಿತು; ನಾನು ಬೆಪ್ಪಾಗಿ ನೋಡಿದೆ ಇನ್ನೇನೂ ಮಾಡಲಾಗಲಿಲ್ಲ."

ಅಳು ದನಿಯಲ್ಲಿ ಹೊರಬಿತ್ತು ವಾಕ್ಯಲಹರಿ.

"ಯಾರು ಹೊಡೆದುದು ನೀನು ಈವರೆಗೆ ಏಕೆ ಸುಮ್ಮನಿದ್ದೆ ? ಬಂದು ಹೇಳಲಿಲ್ಲವೇಕೆ ?"

"ಬುದ್ಧೀ ! ಹೇಳಬೇಕೋ ಬಿಡಬೇಕೋ ತಿಳಿಯದೆ ಮೂರು ದಿನ ಸುಮ್ಮನೆ ಇದ್ದುಬಿಟ್ಟೆ. ಅಲ್ಲದೆ ಸತ್ಯ 'ಹೇಳಬೇಡ ಹೇಳಬೇಡ' ಎಂದು ಪದೇ ಪದೇ ಹೇಳಿಕೊಂಡಿದ್ದ. ಅದಕ್ಕೇ..." ಅಷ್ಟಕ್ಕೇ ಗಂಟಲು ಕಟ್ಟಿತು.

"ಹೊಡೆದುದು ಸತ್ಯ ? ವಸಂತನ ಮಗ ಸತ್ಯ ? ನಿಜವಾಗಿ ಹೇಳು ಶಿದ್ದಿ ತಾನೇ ?"

"ಹೌದು ಸ್ವಾಮಿ. ಅವನೇ ಹೊಡೆದುಬಿಟ್ಟ. ಮೊದಲು ಹುಡುಗಾಟವೆಂದು ಭಾವಿಸಿದ. ಕಾರಿನ ಕನ್ನಡಿ ಚೂರಾದಾಗ ಭಯವಾಯಿತು ಅವನಿಗೆ. ಅನಂತರ ನನಗೆ ತೀರಾ ದುಂಬಾಲು ಬಿದ್ದ. ಅದಕ್ಕೇ ನಾಲ್ಕು ದಿನ ತಡೆದು ಹೇಳಲು ಬಂದೆ. ಮಾವಿನ ಮರಗಳು ದಟ್ಟವಾಗಿದ್ದುದರಿಂದ ಅಮ್ಮಾವರಿಗೆ ಕಾಣಿಸಲಿಲ್ಲ ಸತ್ಯ" ಹೇಳಲಾರದೆ ಹೇಳಿದ ಚನ್ನಿಗ.

ರಾಮನಾಥ ಮಡದಿಯ ಕಡೆ ನೋಡಿದ, ಅವಳು ಮೂಕ ಮೌನಿಯಾಗಿದ್ದಳು. ಮನಸ್ಸು ಹುಳಿ ಹಿಂಡಿದಂತೆ ಮುದುಡಿತು.

ದೇವಯ್ಯ ಅಂದ—"ಹುಡುಗರ ಹುಡುಗು ಬುದ್ಧಿಯನ್ನು ಹಿರಿದು ಮಾಡುವುದು ಬೇಡ. ಹಿಂದಿಲಿಂದಲೂ ಅದೇ ಆಗಿದೆ. ಗೊತ್ತಿಲ್ಲದವರಂತೆ ಸುಮ್ಮನಿರುವುದು ಲೇಸು."

ರಾಮನಾಥ ಚೆನ್ನಿಗನನ್ನು ಕೇಳಿದ "ನೀನು ನಿಜ ಹೇಳುತಿದ್ದೀಯೋ ? ಅಥವಾ ಸುಳ್ಳೋ ?" ಗಂಭೀರ ದನಿಯಲ್ಲಿ ಪ್ರಶ್ನೆ ಹೊರಬಿತ್ತು.

"ನಿಜ ಬುದ್ಧೀ ! ನಾನೊಬ್ಬನೇ ಅಲ್ಲ. ನಮ್ಮ ಜೊತೆ ರಂಗಪ್ಪ, ವೆಂಕಟೇಶ ಇಬ್ಬರೂ ಇದ್ದರು. ಬೇಕಾದರೆ ಕರೆದು ಕೇಳಿ."

"ಅವನೇನೂ ಚಿಕ್ಕವನಲ್ಲ, ಆಗಲೇ ಹಿಡಿದು ನಾಲ್ಕು ಬಾರಿಸಬಾರದಿತ್ತೇ ?"

"ಅದ್ಹೇಗೆ ಬುದ್ಧೀ ? ಅವನು ಬುದ್ಧಿಯವರ ಮಗನಲ್ಲವೇ ? ನಾವು ಬಾರಿಸಿದರೆ ನಮ್ಮನ್ನು ಸುಮ್ಮನೆ ಬಿಟ್ಬಾರೆಯೇ ?"

"ಅಂಥ ಚೇಷ್ಟೆ ಮಾಡಿದರೆ ಬಾರಿಸದೆ ಬಿಡುವುದೇ ?"

"ಎಷ್ಟಾದರೂ ಅವರು ದಣಿ."

ಒಳಗಿನಿಂದ ಸೀತಮ್ಮ ಹೊರಬಂದಳು. ವಿಷಯ ಅಚ್ಚರಿಯನ್ನು ಮೂಡಿಸಿತು.

"ಗುರಿಯಿಟ್ಟು ಹೊಡೆದ ಕಲ್ಲಾದುದರಿಂದ ಏಟು ಜೋರಾಗಿ ಬಿತ್ತು !" ಮತ್ತೆ ಅವನೆಂದ,

"ಕೆಟ್ಟ ಹುಡುಗ. ಅದರ ಪರಿಣಾಮ ಕುರಿತು ಯೋಚಿಸಲಾರದಷ್ಟು ಚಿಕ್ಕವನಲ್ಲ. ಬುದ್ಧಿಯಿಲ್ಲದೆ ಮಾಡಿದ ಕೆಲಸವಿದು."

"ಬರೀ ತುಂಟತನ ! ಅಷ್ಟೇ ಸ್ವಾಮಿ ! ಇನ್ನೇನಿಲ್ಲ. ಶುದ್ಧ ಹುಡುಗಾಟವಾಯ್ತು. ಅಂದು, ಕಣ್ಣಿಂದ ನೋಡಿದ ನಾವು ಸುಮ್ಮನೆ ಇರಲಿಲ್ಲ. ಮೋಹಿನೀ ಅಮ್ಮನವರಿಗೆ ಸುದ್ದಿ ಮುಟ್ಟಿಸಲು ಹೋದಾಗ ಸತ್ಯ ಅಲ್ಲಿಯೇ ಇದ್ದ. ವಿಷಯ ತಿಳಿದು ಅಮ್ಮನವರು ತುಂಬಾ ನೊಂದುಕೊಂಡು ಸತ್ಯವನ್ನು ತರಾಟೆಗೆ ತೆಗೆದುಕೊಂಡರು. ಹೀನಾಯವಾಗಿ ಬೈದುಬಿಟ್ಟರು. ಅವನಿಗೂ ಬೇಸರವಾಯಿತು. ಮಾಡುವುದೇನು ? ಆಗುವುದೆಲ್ಲಾ ಆಗಿಹೋಗಿದೆ."

"ಸರಿ...ಬಿಡು, ಅಂತೂ ಅವಳಿಗೆ ತಿಳಿಸಿದ್ದು ಒಳ್ಳೆಯದಾಯ್ತು. ಅವಳಾದರೂ ಬುದ್ಧಿ ಹೇಳಿಯಾಳು."

"ಈ ಕಾಲದ ಮಕ್ಕಳಿಗೆ ಏನು ಹೇಳುವುದು ? ಏನಿದ್ದರೂ ಅವರೇ ತಿಳಿದುಕೊಳ್ಳಬೇಕು, ಅಥವಾ ಭಗವಂತ ಬುದ್ಧಿ ಕೊಡಬೇಕು" ಎಂದ ದೇವಯ್ಯ.

"ಹೌದು" ಎಂಬಂತೆ ತಲೆಯಾಡಿಸಿ ಅನುಮೋದಿಸಿದ ರಾಮನಾಥ.

ಏನೂ ಮಾತಾಡಲಿಲ್ಲ ಕುಮುದ್ವತಿ. ತಲೆಯಲ್ಲಿ ಆನೆಗಳು ನುಗ್ಗಿ ಗದ್ದಲ ಹೊಡಿದಷ್ಟು ಗೊಂದಲ.

— ೦ —

೧೬

"ಅಮ್ಮಾ, ದೀಪ ಮುಡಿಸೋ ಹೊತ್ತು. ಈಗ ಮಲಗಿರಬಾರದು ನೋಡಿ." ರಂಗಮ್ಮ ಅತ್ಯಂತ ಆತಂಕಪೂರಿತ ದನಿಯಲ್ಲಿ ನುಡಿದಾಗ ಕಣ್ಣು ಬಿಟ್ಟು ನೋಡಿದಳು ಕುಮುದ್ವತಿ. ಅವಳ ಮಾನಸಿಕ ತುಮುಲ ಎದೆಯನ್ನು ಮುಟ್ಟಿತು. ಮುಗುಳು ನಕ್ಕು ರಂಗಮ್ಮನ ಆತಂಕವನ್ನು ನಿವಾರಿಸಿದಳು.

ಅವಳು ಅದೇ ಧಾಟಿಯಲ್ಲಿ ಮುಂದುವರಿದಳು "ಈಗ ಸ್ವಲ್ಪ ಹೊತ್ತು ಎದ್ದುಬಿಡಿ, ಅನಂತರ ಮಲಗಿಕೊಳ್ಳಿ."

ಆ ದನಿಯಲ್ಲಿ ಹರಿದುದು ಸಹಜತೆಯ ಸವಿಜೇನು. ಅವಳು ಅಂದಿಂದಿಗೂ ಯಾವ ಸಂಸಾರದಲ್ಲಿ, ಯಾವ ಯಾವ ಮುಗ್ಧದುಗ್ಧತನದಲ್ಲಿ ಹುಟ್ಟಿ ಬೆಳೆದು ಬಡ ಭಾವನೆಗಳನ್ನು ಮನದುಂಬಿಕೊಂಡಿದ್ದಳೋ ಅದನ್ನು ವೇದ ವಾಕ್ಯವೆಂದೇ ಸಂಪೂರ್ಣ ನಂಬಿದವಳು. ಅಂತಲೇ ಅವಳು ಒಡಲ ಕಳಕಳಿಯನ್ನು ತೋಡಿಕೊಂಡುದುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇರಲಿಲ್ಲ.

"ತಲೆ ತುಂಬಾ ನೋಯುತ್ತಿದೆ. ರಂಗಮ್ಮಾ, ಜೊತೆಗೆ ಗಾಯಗಳ ಉರಿ ಬೇರೆ."

"ಪಾಪ, ನಮ್ಮಮ್ಮ! ನಿಮಗೇಕೆ ಈ ಕಷ್ಟ ಕೊಟ್ಟನೋ ದೇವರು? ಈಗ ಸ್ವಲ್ಪ ಹೊತ್ತಾದರೂ ಎದ್ದು ಕುಳಿತುಕೊಳ್ಳಿ. ಜಗಲಿಯಲ್ಲಿ ಕುಳಿತರೆ ಗಾಳಿ ತಣ್ಣಗೆ ಮುಟ್ಟುತ್ತೆ. ಈ ಹೊತ್ತಿನಲ್ಲಿ ಮಲಗಿದರೆ ಮುಂದೆ ಸದಾ ಕಾಲವೂ ಮಲಗುವುದಾದೀತು!"

"ನಿನ್ನ ಶಾಸ್ತ್ರಕ್ಕಾದರೂ ಈಗ ಏಳಬೇಕಾಗುತ್ತೆ."

ಕುಮುದ್ವತಿ ಎದ್ದು ಬಂದು ವರಾಂಡದಲ್ಲಿ ಕುಳಿತುಕೊಂಡಳು. ಸಾಯಂ ಸಮಯದ ಸೊಂಪು ತಂಗಾಳಿಯ ತಂಪು, ಸಾಂಧ್ಯಗೀತ ಉಲಿಯುವ ಪಕ್ಷಿ ಸಮಾಜದ ರಾಗಾನುರಾಗಗಳ ಪೆಂಪು ಮನೋಜ್ಞವಾಗಿತ್ತು ತನುಮನಗಳಿಗೆ ಹರ್ಷ ಊಡಿಸುವಂತೆ.

ಅಂಗಳದಂಚಿನ ನೇರಕ್ಕೆ ಹುಡುಗರಿಬ್ಬರು ಬರುತ್ತಿರುವುದು ದೃಷ್ಟಿಗೆ ಬಿತ್ತು. ದೂರ ದೃಶ್ಯವಾದುದರಿಂದ ಯಾರೆಂಬುದು ಊಹಿಸಲಾಗಲಿಲ್ಲ. ಕುತೂಹಲಿತ ದೃಷ್ಟಿ ಅಲ್ಲಿಂದ ಚಲಿಸಲಿಲ್ಲ. ಹಾಗೇ ನೋಡುತ್ತಲೇ ಇದ್ದಾಳೆ ಕುಮುದ್ವತಿ. ನಾಲ್ಕು ಹೆಜ್ಜೆ ಮುಂಬರಿದು ನೋಡಿದ ರಂಗಮ್ಮ ನುಡಿದಳು– "ರಂಗಪ್ಪ, ವೆಂಕಟೇಶ ಬರುತಿದ್ದಾರೆ. ಬಹುಶಃ ಚೆನ್ನಿಗ ಹೇಳಿದನೇನೋ."

ಅವರು ಅಷ್ಟರಲ್ಲಿಯೇ ಸಮೀಪಗತರಾದರು. ಕುಮುದ್ವತಿ ಕೇಳಿದಳು "ಏನಪ್ಪಾ, ಏನು ವಿಶೇಷ ? ಏಕೆ ಇತ್ತ ಬಂದಿರಿ ?"

"ಚೆನ್ನಿಗ ಹೇಳಿದ ನಮಗೆ, ಹೋಗಿ ಅಮ್ಮಾವರನ್ನು ಕಾಣಿ ಎಂದು...." ಸ್ವಲ್ಪ ಹೊತ್ತು ಸುಮ್ಮನಿದ್ದು ಉಗುಳು ನುಂಗಿ ಗಂಟಲನ್ನು ಸರಿಪಡಿಸಿ ಕೊಂಡು ಮುಂದುವರಿದ ವೆಂಕಟೇಶ "ಅಂದು ನಿಮ್ಮ ಕಾರಿಗೆ ಕಲ್ಲು ಹೊಡೆ ದುದು ಸತ್ಯ ! ಚೆನ್ನಿಗ, ನಾನು ಮರ ಹತ್ತಿದ್ದೆವು. ರಂಗಪ್ಪ ಸತ್ಯ ಕೆಳಗಿ ಗಿದ್ದರು. ಸತ್ಯ ದೂರದಲ್ಲಿ ಕಾರು ನೋಡಿದಾಗಲೇ ಕಲ್ಲನ್ನು ಹೆಕ್ಕಿಕೊಂಡ. ರಂಗಪ್ಪ 'ಬೇಡ, ಬೇಡ' ಎನ್ನುತ್ತಿದ್ದಾಗಲೇ ಕಲ್ಲನ್ನು ಬೀಸಿ ಒಗೆದುಬಿಟ್ಟ ಸತ್ಯ! ಮಾವಿನ ಮರದ ಕೊಂಬೆಗಳು ನೆಲದವರೆಗೂ ವ್ಯಾಪಿಸಿವೆ. ಅಲ್ಲಿ ಯಾರಿದ್ದರೂ ಕಾಣಿಸುವುದಿಲ್ಲ. ನೀವು ಕಾರು ನಿಲ್ಲಿಸಲಿಲ್ಲ. ಕನ್ನಡಿ ಒಡೆದು ಪುಡಿಪುಡಿಯಾಗಿ ರಸ್ತೆಯಲ್ಲಿ ಬಿದ್ದುದನ್ನು ಕಂಡಾಗ ಅವನು ಎದೆಗೆಟ್ಟು ಎಲ್ಲ ರಿಗೂ "ಹೇಳಬೇಡ ಹೇಳಬೇಡ" ಎಂದು ಗೋಗರೆದ. ನಿನ್ನೆ ನಿಮಗೆ ಚೆನ್ನಿಗ ಹೇಳಿದಾನಷ್ಟೆ. ಅವನು ನಮಗೂ ಹೇಳಬಿಡಿ' ಎಂದ.

"ಸರಿ...ಇನ್ನೇನು ಮಾಡೋಣ ? ಆಗಿಹೋಯಿತಲ್ಲ ; ಬುದ್ಧಿಹೀನ ಜನ."

ಕಾರು ಕನ್ನಡಿ ಹಾಕಿಸಿಕೊಂಡು ಬರಲು ನಗರಕ್ಕೆ ಹೋಗಿತ್ತು. ಅದೇ ಸಮಯದಲ್ಲಿ ಅದನ್ನು ತಂದು ಅಂಗಳದಲ್ಲಿ ನಿಲ್ಲಿಸಿದ ಪುಟ್ಟಸ್ವಾಮಿ. ಒಮ್ಮೆ ಅದರೆಡೆಗೆ ದೃಷ್ಟಿಯನ್ನು ಹೊರಳಿಸಿ ನೋಡಿದ ಕುಮುದ್ವತಿ ಹುಡುಗರಿಗೆಂದಳು, "ಚೇಷ್ಟೆ ಮಾಡುವುದೆಂದರೆ ಹೀಗೇನು ? ಈ ಸಲಿ ಸುಮ್ಮನಿರುವೆ. ಇನ್ನೊಮ್ಮೆ ಹೀಗೆ ಮಾಡಿದರೆ ಪೋಲೀಸಿಗೆ ಕೊಟ್ಟುಬಿಡುವೆ."

"ಹಾಗೇ ಮಾಡಿ ಅಮ್ಮಣ್ಣಿ."

ಹೊರಗಡೆ ಅಡ್ಡಾಡಲು ಹೋಗಿದ್ದ ರಾಮನಾಥ ದೇವಯ್ಯ, ಬಂದರು. ರಾಮನಾಥ ಕೇಳಿದ "ಏನಪ್ಪಾ ವೆಂಕಟೇಶ್ ?"

"ಚೆನ್ನಿಗ ಬಂದು ನಿಮ್ಮ ಕಾರಿಗೆ ಕಲ್ಲು ಹೊಡೆದವರಾರೆಂದು ಹೇಳಿದನು ತಲ್ಲ, ನಮ್ಮನ್ನೂ ಹೇಳಿಬಿಡಿ ಎಂದ ಅದಕ್ಕೇ ಬಂದೆವು. ಅಂದು ಕಲ್ಲು ಬೀಸಿ ಒಗೆದುದು ಸತ್ಯ ! ನಾವು ಬೇಡಬೇಡ ಅನ್ನುವುದರೊಳಗಾಗಿ ಒಗೆದೇಬಿಟ್ಟ ! ಹುಡುಗಾಟ ಅಷ್ಟೇ. ಇನ್ನೇನಿಲ್ಲ ಸ್ವಾಮಿ." ವಿಷಾದಭಾವದಿಂದ ಮುಖ ಮುದುಡಿತು.

"ಹೀಗೇನಾ ಹುಡುಗಾಟಿಕೆ ಅಂದರೆ....ಚೆನ್ನಾಗಿ ಬಾರಿಸಬೇಕು."

"ಅದಕ್ಕೇ ಅಮ್ಮಾವರೆಂದರು, ಈ ಸಲಿ ಬಿಟ್ಟಿರುವೆ. ಇನ್ನೊಂದು ಸಲಿ ಹೀಗಾದರೆ ಪೋಲೀಸಿಗೆ ಕೊಡುವೆ ಅಂತ. ಅದು ಸರಿ ಸ್ವಾಮಿ. ದೊಡ್ಡವರ ಸಹವಾಸದಲ್ಲಿ ಚೆನ್ನಾಗಿರಬೇಕಿತ್ತು. ಇದು ತೀರಾ ಅಸಹ್ಯ. ಇವರಿಗೇಕೆ ಬುದ್ಧಿ ಇಲ್ಲವೋ..."

"ಅವನೇನೂ ಸಣ್ಣವನಲ್ಲ. ಇದನ್ನು ಚೇಷ್ಟೆ ಎನ್ನುವುದು ಹೇಗೆ ?" ಕೇಳಿದ ದೇವಯ್ಯ.

"ಏನೋ ಅವರಿಗೇ ಗೊತ್ತು" ಜುಗುಪ್ಸೆ–ನಿರಾಶೆಗಳಿಂದ ಕೂಡಿದ ದನಿ ಹೊರಬಿತ್ತು.

"ಬಿಡಿ ಆಗಿದ್ದಾಯ್ತು...ಈ ಸಲಿ ಸುಮ್ಮನಿರೋಣ. ಮುಂದೆ ಹೀಗೆಮಾಡಿದರೆ ಅದರ ಪ್ರತಿಫಲ ಉಣ್ಣಬೇಕಾಗುತ್ತೆ" ರಾಮನಾಥ ಸಿಟ್ಟಿನಿಂದ ಹೇಳಿದ.

"ಆಗಲಿ ಬುದ್ಧೀ !"

"ಒಳ್ಳೇ ಮನೆತನದಲ್ಲಿ ಹುಟ್ಟಿದಾರೆ, ಬುದ್ಧಿ ನೋಡಿದರೆ ಹೀಗೆ. ಯಾವ ದುಷ್ಟ ಬುದ್ಧಿಗಳೋ ಹೀಗೆ ಪ್ರೈದಾಳಿನೆ. "ಉಣ್ಣೆ ಕೆಚ್ಚಲೊಳಿರ್ದು ಉಣ್ಣದದು ನೊರವಾಲ..." ಎದೆಯಾಳದಲ್ಲಿ ಗುನುಗಿತು ವಾಣಿ. ಮಾತಾಡಲಿಲ್ಲ ಕುಮುದ.

ಂ ಂ ಂ ಂ

ಶೈಲು ಒಂಟಿಯಾಗಿ ಆಗಮಿಸಿದ್ದಾಳೆ. ಭಾನುವಾರವಾದ್ದರಿಂದ ಆಫೀಸಿಗೆ ರಜೆ. ಅವಳ ಮುಖಭಾವದಲ್ಲಿ ಗೆಲುವಿನ ಕಳೆ. ತುಟಿಗಳಲ್ಲಿ ಎಳೆ ನಗುವಿನ ಹರವು. ಕಣ್ಣುಗಳಲ್ಲಿ ಆಂತರಿಕ ತೃಪ್ತಿಯ ಸಣ್ಣ ಛಾಯೆ. ಇವುಗಳನ್ನು ಕಂಡಾಗಲೇ ಅವಳ ಜೀವನದಲ್ಲಿ ಸಣ್ಣ ಬದಲಾವಣೆಯಾಗಿದೆ ಎಂಬುದು ಸುವ್ಯಕ್ತ. ಅವಳನ್ನು ಆತ್ಮೀಯತೆಯಿಂದ ಬರಮಾಡಿಕೊಳ್ಳುತ್ತ ಕೇಳಿದಳು ಕುಮುದ್ವತಿ,

"ಹೇಗಿದ್ದೀ ಶೈಲು ? ಮೊನ್ನೆಯ ನೋಟೀಸಿನಿಂದ ನಿನ್ನ ಸಮಸ್ಯೆಗೆ ಏನಾದರೂ ಪರಿಹಾರ ದೊರಕಿತೇ ?"

"ಹೌದು. ಅದನ್ನೇ ಹೇಳಿ ಹೋಗೋಣವೆಂದು ಬಂದೆ. ಈಗ ಪಾಸ್ ಬುಕ್ ನನ್ನ ಕೈಗೆ ಬಂದಿದೆ. ತಿಂಗಳ ಸಂಬಳ ನನ್ನ ಅಕೌಂಟಿಗೆ ಕಟ್ಟುತ್ತಿರುವೆ. ಹಣ ಜಮಾವಾದುದನ್ನು ನೋಡಿಕೊಳ್ಳುತ್ತಾರೆ. ಅವರ ಅನುಮತಿಯಿಲ್ಲದೆ ಹಣ ತೆಗೆಯುವಂತಿಲ್ಲ. ಇರಲಿ ಬಿಡಿ, ಇಷ್ಟಾದರೂ ಆಯಿತಲ್ಲ ಮುಂದೆ ಇನ್ನಷ್ಟು ತಗ್ಗಬಹುದೇನೋ ನೋಡೋಣ."

ಕುಮುದ್ವತಿಯ ಹೃದಯ ಆನಂದದಿಂದ ತುಂಬಿ ತುಯ್ಯಲಾಡಿತು. ಅವಳ ಭುಜದ ಮೇಲೆ ಕೈಯಿಟ್ಟು ನುಡಿದಳು, "ನಿನಗೇನೂ ತೊಂದರೆ ಕೊಡದಿದ್ದರೆ ಸಾಕು ಶೈಲು ! ನಿಮ್ಮವರು ತಿಳಿದುಕೊಳ್ಳಬೇಕಾದುದು ಬಹಳವಿದೆ. ಎಂದಿಗೆ ಕಾಲ ಪರಿಪಕ್ವವಾಗುವುದೋ ದೇವರಿಗೇ ಗೊತ್ತು. ವಿಶಾಲ ಜಗ

ತ್ತನ್ನು ಸ್ವಂತ ಕಣ್ಣುಗಳಿಂದ ನೋಡುತ್ತಲಿದ್ದು ಇಷ್ಟೊಂದು ಕೃಪಣರಾದರೆ ಹೇಗೆ ? ಇವನ್ನೆಲ್ಲಾ ಯೋಚಿಸುತಿದ್ದರೆ ನನಗೂ ಆಶ್ಚರ್ಯ ಶೈಲ ! ತಲತಲಾಂತರದಿಂದ ನಡೆದು ಬಂದ ಪದ್ಧತಿ ಅಥವಾ ರೂಢಿ ನಮ್ಮ ಸ್ತ್ರೀಯರಿಗೂ ಒಗ್ಗಿಹೋಗಿದೆ. ಆದಕ್ಕೇ ಅವರು ಎಲ್ಲ ಕರ್ಮಕ್ಕೂ ವಿನಮ್ರತೆಯಿಂದ ತಲೆ ಬಾಗುತ್ತಾರೆ. ಆದ್ದರಿಂದ ಜೀವನ ಸುಧಾರಣೆ ಕನಸಿನ ಗಂಟು ! ಮುಖ್ಯವಾಗಿ ನಮಗೆ ನಾವೇ ಎಚ್ಚತ್ತುಕೊಂಡು ನಮ್ಮ ಜೀವನವನ್ನು ಉದ್ಧರಿಸಿಕೊಳ್ಳುವ ನಿಟ್ಟಿನಲ್ಲಿ ಮುನ್ನಡೆಯಬೇಕು. ಅಜ್ಞಾನ–ಅಸ್ವತಂತ್ರಗಳಿಂದ ಆಧುನಿಕ ತಂತ್ರಜ್ಞಾನ ಮನೆಗಳನ್ನು ತುಂಬಲಿಲ್ಲ. ಹಳೆಯ ಜಾಡಿನಲ್ಲಿ ಓಡುತ್ತಿರುವ ಸಂಸಾರ ರಥಕ್ಕೆ ನಿಚ್ಚಳ ಪಥವೂ ಇಲ್ಲ, ಗುರಿಯೂ ಇಲ್ಲ. ಸಹನೆ–ಸಹಕಾರ ಈ ಶಬ್ದಗಳಿಗೆ ಇನ್ನೂ ನಮ್ಮ ಹೃದಯ ನಿಘಂಟಿನಲ್ಲಿ ಅರ್ಥವನ್ನು ಬರೆಯಲಿಲ್ಲ. ಅಂದಮೇಲೆ, ನಮ್ಮ ನಿಧಾನ ಗತಿಯಲ್ಲಿ ಕಾರ್ಯ ಕೈಗೂಡುವ ಮುನ್ನ ಬದುಕು ಪುಟನೆಗೆದು ಹಾರುವುದು ಸಹಜ. ನಾವು ಏನು ಮಾಡುವುದಿದ್ದರೂ ಜೀವನದ ಪ್ರಥಮ ಅಂಕದಲ್ಲಿ ಆರಂಭಿಸಿಕೊಳ್ಳುವುದರಲ್ಲೇ ಜಾಣ್ಮೆಯಿದೆ. ಇಂದು ನಮ್ಮ ಬದುಕು ಅಪ್ಪ ನೆಟ್ಟ ಆಲದ ಮರದಂತಿದೆ. ಬದುಕು ಬರಡು. ಸಂಸಾರ ಶೂಲ. ಕೇಳು ಶೈಲು ! ಇಂಥ ಅಜ್ಞಾನ ಕುಂಡದಲ್ಲಿ ಮುಳುಗಿ ನರಳುವುದಕ್ಕಿಂತ ಬಾಳಿಲ್ಲದಿರುವುದು ಲೇಸು. ಸಮಗ್ರ ಗ್ರಾಮ್ಯ ಜೀವನ ಸುಧಾರಣೆಯಾಗುವುದೆಂದರೆ ಇಂಥಿಂಥ ಕುಕರ್ಮಗಳ ಮೇಲೆ ಕ್ಷಕಿರಣಗಳನ್ನು ಬೀರಿ, ಧರ್ಮಾಧರ್ಮಗಳನ್ನು ವಿಶ್ಲೇಶಿಸಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದರಲ್ಲಿ ಮುಂದಾಗುವುದು ಕ್ಷೇಮಕರ. ಯಾವೊತ್ತೂ ಇನ್ನೊಬ್ಬರ ಕೈ ಹಾರೈಸಲೇಬಾರದು. ಒಲೆಯಲ್ಲಿ ಅಗ್ನಿಯನ್ನು ಉರಿಸುತ್ತ ಆತ್ಮಜ್ಯೋತಿಯನ್ನು ಅಲಕ್ಷಿಸುವುದು ಸರ್ವತ್ರ ಸಾಮಾನ್ಯವಾಗಿದೆ. ಈ ಜಡತ್ವದಿಂದ ಬಿಡುಗಡೆ ಹೊಂದದೆ ಬದುಕು ಸುಂದರವಾಗುವುದಿಲ್ಲ. ಈ ದಿಶೆಯಲ್ಲಿ ಪ್ರಚಾರ ಪ್ರಸರಣ ಮಾಡಿ ಒಳಗಣ್ ತೆರೆಸುವುದರಲ್ಲಿ ಇರುವ ಸಾಧ್ಯತೆಯನ್ನು ಕುರಿತು ಗಾಢವಾಗಿ ಆಲೋಚಿಸು. ಯಾರಿಗೂ ಬದುಕು ಭಾರವಾಗಬಾರದು.

“ಶೋಷಣೆ–ಶೋಷಣೆಯೊಂದೇ ಅಲ್ಲ, ದೌರ್ಜನ್ಯ ಸಾಮಾನ್ಯವಲ್ಲ. ಸ್ತ್ರೀಯರನ್ನು ಅಜ್ಞಾನದ ಕೂಪದಲ್ಲಿ ಮುಳುಗಿಸಿ ವೈಯಕ್ತಿಕ–ಆರ್ಥಿಕ

ಸ್ವಾತಂತ್ರ್ಯಗಳನ್ನು ಕಸಿದು ಭೋಗವಸ್ತುಗಳನ್ನಾಗಿಸಿಕೊಂಡ ಭೋಗಿಗಳಿಗೆ ನಿಮ್ಮ ಕ್ರಮ ತಪ್ಪು ಎನ್ನುವುದು ಎಷ್ಟು ಪ್ರಮಾದ ! ಎಷ್ಟು ತಪ್ಪು ! ಈ ಬಗೆಯಲ್ಲಿ ಹೆಣ್ಣುಗಳನ್ನು ಸಾಕುವುದು ಜೀವನ ವಿಕಾಸಕ್ಕಲ್ಲ ಜೀವನ ವಿನಾಶಕ್ಕೆ. ಇಂತಹ ಬಾಳು ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ. ಈ ಹೀನ ಧೋರಣೆಯಿಂದ ರಾಷ್ಟ್ರಪ್ರಗತಿಗೆ ಕುಂದು. ಇದನ್ನೆಲ್ಲಾ ಯೋಚಿಸಲಾರದಷ್ಟು ಶಂಡರೇ ನಮ್ಮವರು ? ವಿಶ್ವದೃಷ್ಟಿ ಇರಬೇಡವೇ ? ವಿಶ್ವಪಥ ತುಳಿಯು ಬೇಡವೇ ? ಹೆಣ್ಣುಗಳು ಹೆರುವ ಯಂತ್ರವಾಗಿ ಕಣ್ಬೆಳಕನ್ನು ನಂದಿಸಿಕೊಳ್ಳುವುದನ್ನು ನೋಡಿದರೆ ಸಂಕಟವಾಗುತ್ತೆ. ಇದಕ್ಕೆ ಪರಿಹಾರ ಏನೇನೂ ಇಲ್ಲವೇ ? ಯೋಚಿಸಿ ನೋಡು !" ಧ್ವನಿ ಎದೆಯಾಳದಿಂದ ಹೊರಬಿತ್ತು.

"ದೇವರೇ ದಾರಿ ತೋರಬೇಕು !"

ಎದೆಯ ಸಂಕಟವೆಲ್ಲಾ ಒಂದೇ ಮಾತಿನಲ್ಲಿ ಹೊರಬಿತ್ತು. ಸುಮ್ಮನೆ ಕೈ ಜೋಡಿಸಿದಳು ಅವಳು, ಗಗನಮುಖಿಯಾಗಿ. ಕಣ್ಣುಗಳಲ್ಲಿ ಆಸೆಯ ಬೆಳಕು ಒಂದು ಕ್ಷಣ–ಒಂದೇ ಒಂದು ಕ್ಷಣ ಮಿಂಚಿ ಮಾಯವಾಯಿತು. ಎದೆಯ ಬನದಲ್ಲಿ ಆಸೆ–ನಿರಾಸೆಗಳ ಹೊಯ್ದಾಟ ನಡೆದಿತ್ತು.

ಮುಂಬಾಗಿಲ ಕರೆಗಂಟೆ ಕರೆ ನೀಡಿತು ಶುಭಾಶಯವೋ ಎಂಬಂತೆ.

ಕುಕ್ಕೂ, ಕುಕ್ಕೂ, ಕುಕ್ಕೂ, ಕುಕ್ಕೂ.

ಕುಮುದ್ವತಿ ಕದ ತೆರೆದಳು. ಬಂದವಳು ಇಂದಿರಮ್ಮ. ಪರಸ್ಪರ ದರ್ಶನ ಲಾಭದಿಂದ ಮುಖಬಿಂಬಗಳು ಅರಳಿ ಮಂದಾರವಾದುವು. ಮೂವರೂ ಒಳ ಬಂದು ಹಜಾರದಲ್ಲಿ ಮಂಡಿಸಿದರು. ಸೀತಮ್ಮ ಅಲ್ಲೇ ದೇವರಿಗೆ ಹೂಮಾಲೆಯನ್ನು ರಚಿಸುತಿದ್ದಾಳೆ ಕನಕಾಂಬರ ಹೂಗಳು ಬೇರೆ. ಮಲ್ಲಿಗೆ ಹೂಗಳು ಬೇರೆ. ಎರಡನ್ನೂ ಬೇರೆಬೇರೆ ಹರಿವಾಣಗಳಲ್ಲಿಟ್ಟುಕೊಂಡು ಹೂ ಕಟ್ಟುತಿದ್ದ ಅವಳಿಂದ ಒಂದು ಹರಿವಾಣವನ್ನು ತೆಗೆದುಕೊಂಡು ಇವರೂ ಕಟ್ಟಲು ಕೈ ಹಾಕಿದರು.

ಇಂದಿರಮ್ಮ ಪ್ರಸನ್ನಮುಖದಿಂದ ಹೇಳಿದಳು,

"ನಮ್ಮ ಸಂಘದ ವಿಷಯ ಇಡೀ ಗ್ರಾಮದಲ್ಲಿ ಚೆನ್ನಾಗಿ ಪ್ರಚಾರಗೊಂಡಿದೆ. ಕೆಲವರು ಸುಮ್ಮನಿದ್ದರೆ, ಇನ್ನು ಕೆಲವರು ಕಿಡಿಗಳನ್ನು ಕಾರುತ್ತಾರೆ. ಸ್ತ್ರೀಯರಲ್ಲಿ ಶ್ರದ್ಧೆ ಬೆಳೆಯಬೇಕು ಅಷ್ಟೆ. ಪುರಾತನ ಕಾಲದಿಂದಲೂ ನಂಬಿಕೊಂಡು ಬಂದಿದ್ದ ಕುರುಡು ನೀತಿಯನ್ನೇ ಎಂದೆಂದಿಗೂ ದಿವಿನಾದ ಸಂಸ್ಕೃತಿ ಎನ್ನುವವರೇ ಅಧಿಕ. ಜನ ಒಳಗಣ್ ತೆರೆಯಬೇಕು ಅಷ್ಟೆ. ಕಾಲಕ್ರಮೇಣ ನಮ್ಮವರು ಅರಿತುಕೊಂಡಾರೇನೋ..."

"ಖಂಡಿತ........" ತಲೆ ಆಡಿಸಿದ ಕುಮುದ್ವತಿ ಪುನಃ "ತುಂಬಾ ಮಂದಗತಿ....ಅದೇ ಬೇಸರ...ಜುಗುಪ್ಸೆ..."

"ನಮ್ಮ ಕಾಲಕ್ಕಂತೂ ಪೂರ್ತಿ ಸುಧಾರಣೆ ಕಷ್ಟವೇ. ಮುಂದಿನ ಪೀಳಿಗೆಯ ಕಾಲಕ್ಕಾದರೂ ಸರಿಹೋದೀತೇನೋ" ದನಿಗೂಡಿಸಿದಳು ಶೈಲ.

"ಯಾರಿಗೂ ಬದುಕು ದುರ್ಭರವಾಗಬಾರದು. ತಾಯಿ ತಂದೆಯನ್ನು ಬಿಟ್ಟು ತನ್ನನ್ನು ನಂಬಿದವಳಿಗೆ ದ್ರೋಹ ಬಗೆಯಬಾರದು...ಎಂಬ ಯೋಚನೆ ಇರಕೂಡದೇ ? ಹೆಣ್ಣುಗಳಿಂದ ದುಡಿಸಿ ತಾವು ಕುಡಿದು ಮತ್ತೇರಿ ಹೆಂಡತಿ ಮಕ್ಕಳನ್ನು ಹೊಡೆದು ಬಡಿದು ಹಿಂಸೆ ಮಾಡುವುದು ಎಂತಹ ರಾಕ್ಷಸ ಧರ್ಮ? ಈಚೀಚೆಗಂತೂ ಕುಡಿತ ಮನೆಮನೆಯಲ್ಲೂ ವಿಜೃಂಭಿಸುತ್ತಿದೆ. ಹೆಂಗಳೆಯರ ಪರಿಪಾಡು ದೇವರಿಗೇ ವೇದ್ಯ."

ಸಂತಾಪವನ್ನು ತೋಡಿಕೊಂಡಳು ಸೀತಮ್ಮ, ಮುಖಬಿಂಬ ಮುದುಡಿತು.

০ ০ ০ ০

ಶ್ರೀನಿಧಿಯ ಕಾಗದವಿತ್ತು ಟಪಾಲಿನಲ್ಲಿ,

ಅನೇಕ ಪತ್ರಗಳ ಮಧ್ಯೆ ಎದ್ದು ತೋರುವಂತಹ ರಂಗಿನ ಲಕೋಟೆ ಅದು. ಒಡನೆಯೇ ಒಡಲಿನಲ್ಲಿ ಆನಂದಭಾವ ಮುಖಕ್ಕೆ ನುಗ್ಗಿತು. ಪ್ರಸನ್ನ

ಮುಖಿಯಾಗಿ ಕುಮುದ್ವತಿ ಒಡೆದು ಓದಿದಳು. ಅದರ ಸಾರಾಂಶ ಇದೇ.

...ಈ ಪರಿಸರದ ಹಳ್ಳಿಯಾದ ಕಮಲಾಪುರಕ್ಕೆ ನಾವು ಹದಿನಾಲ್ಕು ಹುಡುಗಿಯರು ಒಂದು ವ್ಯಾನಿನಲ್ಲಿ ಹೋಗಿದ್ದೆವು. ಪ್ರಕೃತಿ ಸೌಂದರ್ಯವನ್ನು ವರ್ಣಿಸುವುದೆಂದರೆ ಹತ್ತು ನಾಲಿಗೆಗಳಿದ್ದರೂ ಸಾಲದು. ಸುತ್ತುಮುತ್ತಲ ಗುಡ್ಡ ಬೆಟ್ಟಗಳ ವನರಾಜಿಯು ಮಧ್ಯೆ ವಿಶಾಲವಾದ ಗದ್ದೆ ತೋಟಗಳ ಹರವು, ಗದ್ದೆಯಂಚಿನಲ್ಲಿ ಸಣ್ಣ ದೊಡ್ಡ ಗದ್ದೆಗಳು. ಅಲ್ಲಲ್ಲಿ ಮೇಯುವ ದನ ಕರುಗಳು. ಮುಗ್ಧ ದುಗ್ಧ ಮನದ ರೈತ ಜನಾಂಗ. ಊರ ಮಧ್ಯೆ ಒಂದು ದೇವಸ್ಥಾನ. ಒಂದೆರಡು ಸಣ್ಣ ಪುಟ್ಟ ಶಾಲೆಗಳು ಇವನ್ನು ನೋಡಿ ಆನಂದ ವಾಯಿತು. ಮಧ್ಯಾಹ್ನದ ಸಮಯದಲ್ಲಿ ಜನರೆಲ್ಲ ವಿಶ್ರಾಂತಿಯಲ್ಲಿದ್ದಾಗ ನಾವು ಕೆಲವು ಮನೆಗಳಿಗೆ ಭೇಟಿ ನೀಡಿದೆವು. ಕೆಲವರನ್ನು ಗದ್ದೆಯಲ್ಲಿ, ಇನ್ನು ಕೆಲವರನ್ನು ಹಾದಿಯಲ್ಲಿ ಕಂಡು ಮಾತಾಡಲು ಅವಕಾಶ ಸಿಕ್ಕಿತು.

ಮುಗ್ಧ ಜನ ಅಂದರೆ ಅತೀ ಮುಗ್ಧ ಜನ. ಅವರಿಗೆ ವಿದ್ಯೆ–ಬುದ್ಧಿಗಳ ಅವಶ್ಯಕತೆಯಿಲ್ಲ. ಲೋಕದ ಪರಿಚಯವೂ ಬೇಕಿಲ್ಲ. ರಾಜಕೀಯ ಸಾಮಾಜಿಕ ಗಳ ಪರಿಜ್ಞಾನವೂ ಇಲ್ಲ. ತಾವು ತಮ್ಮ ಬದುಕು ಹೊರತು ಮತ್ತೊಂದರ ಅರಿವಿಲ್ಲ. ವಯಸ್ಕರ ಶಿಕ್ಷಣ ಸಮಿತಿಯಿದೆ. ಸಮಾಜ ಸುಧಾರಕರು ಆಗಾಗ ಪ್ರಚಾರ ಭಾಷಣ ಮಾಡುತ್ತಾರೆ. ಪಂಚಾಯಿತಿ ಹಾಲಿನಲ್ಲಿ ಅಥವಾ ಶಾಲೆಯಲ್ಲಿ ಅಥವಾ ದೇವಸ್ಥಾನದಲ್ಲಿ ಅಥವಾ ಜಾತ್ರೆಯ ಮೇಳದಲ್ಲಿ. ಯಾರು ಏನು ಹೇಳಿ ದರೂ ಅವು ಅಲ್ಲಿಂದಲ್ಲೇ ಲಯವಾಗುತ್ತವೆ. ಯಾರೂ ಮನಗೊಳ್ಳುವ ಶ್ರಮ ತೆಗೆದುಕೊಳ್ಳುವಂತೆ ತೋರಲಿಲ್ಲ. ಬರೀ ಅಡ್ಡಾದಿಡ್ಡಿ ಬದುಕು. ನವಯುಗದ ನವ ಜೀವನದ ಗೋಜೇ ಇಲ್ಲ. ಊರಿನ ಮಧ್ಯೆ ಸಣ್ಣ ತೊರೆಯೊಂದು ಹರಿ ಯುತ್ತದೆ. ಮಳೆಗಾಲದಲ್ಲಿ ತುಂಬಿ ಹರಿಯುವ ಅದು ಎರಡೂ ದಂಡೆಯ ಜನ ರಾಶಿಯ ಸಂಪರ್ಕ ಕಡಿದು ಹಾಕುವುದು ದಿಟ. ಆಗ ದೋಣಿ ಆಡುತ್ತದೆ. ಭಾರೀ ಮಳೆಯಲ್ಲಿ ದೋಣಿಗ ಇರುವುದಿಲ್ಲವಂತೆ. ತುರ್ತು ಪರಿಸ್ಥಿತಿಯಲ್ಲಿ ಜನ ರಿಗೆ ಗೋಳು ತಪ್ಪಿದ್ದಲ್ಲ. ಆಗ ಈ ಕಡೆಯಿಂದ ಆ ಕಡೆಗೆ ಸಂದೇಶವೆಂದರೆ

ಕೂಗಿ ಕರೆದು ಹೇಳುವುದೇ ! ಆದರೆ, ಮಳೆ ಗಾಳಿಯ ಭರಾಟೆಯಲ್ಲಿ ಇವರೊಂದು ಹೇಳಿದರೆ ಅವರೊಂದು ತಿಳಿಯುವ ಪ್ರಸಂಗವೇ ಹೆಚ್ಚಂತೆ. ಅದನ್ನು ಅಲ್ಲಿಯವರೇ ಬಣ್ಣಿಸಿ ಹೇಳಿದರು.

ಅಲ್ಲಿಯ ದೇವಾಲಯದ ಪೌಳಿ ಬಹಳ ದೊಡ್ಡದು. ಅದರಲ್ಲಿ ಸುತ್ತಲೂ ಊರಿನ ಹೆಣ್ಣುಮಕ್ಕಳು ಬಣ್ಣದ ರಂಗೋಲಿ ಇಟ್ಟಿದ್ದಾರೆ. ಎಂತಹ ಸೊಗಸಾದ ಕಲೆ ! ನಮಗೆ ಅದನ್ನು ನೋಡಿ ತುಂಬಾ ಆಶ್ಚರ್ಯವೇ ಆಯಿತು. ಅಂತಹ ಕಲೆಗಾರ ಮಕ್ಕಳಿಗೆ ಅಲ್ಲಿ ಯಾವ ಪ್ರೋತ್ಸಾಹವೂ ಇಲ್ಲ ಬದುಕಿಗೆ ನೆರುಗು ಕೊಡುವವರೂ ಇಲ್ಲ. ವಿದ್ಯಾ ಲಕ್ಷ್ಮಿ ಅವರಿಗೆ ದೂರದೂರವೇ. ಊರಿನ ಶಾಲೆಯಲ್ಲಿ ಕಲಿತುದು ಎಷ್ಟೋ ಅಷ್ಟೇ. ಆದರೂ, ಅವರಲ್ಲಿ ಕೆಲವರು ಕಥೆ ಕಾದಂಬರಿ ಓದಬಲ್ಲರಂತೆ. ಹಿಂದಿನ ಜನ್ಮದ ಸಾಹಿತ್ಯ ಸಂಸ್ಕಾರವೋ ಅಥವಾ ಈ ಜನ್ಮದ ಸರಸ್ವತಿಯ ಒಲವೋ ಯಾರಿಗೆ ಗೊತ್ತು ? ಏನಿದ್ದರೇನು? ಪೂರ್ಣ ಜ್ಞಾನಬಲವೂ ಇಲ್ಲ, ಜನಬಲವೂ ಇಲ್ಲ. ದೀನ ದಾರಿದ್ರ್ಯತೆಯೊಂದಿಗೆ ಹೋರಾಡುವ ಅಭಿಲಾಷೆಯೂ ಇಲ್ಲ. ಹೆಣ್ಣಾಗಿ ಹುಟ್ಟುವುದೇ ಜೀವನ ದುರಂತಕ್ಕೆ ಎಂದು ದೃಢವಾಗಿ ನಂಬಿದವರಿಗೆ ಚಳಿಯೇನು ? ಗಾಳಿಯೇನು ? ಪಾಪ...ಸ್ತ್ರೀ ಸಮಾಜವನ್ನು ನೋಡಿದರೆ ಎದೆಯ ಕಾರುಣ್ಯ ದ್ರವ್ಯ ಕರಗಿ ನೀರಾಗಿ ಹರಿಯುತ್ತದೆ ಬಿಸಿಲಟ್ಟಿದ ಮಂಜಿನಂತೆ. ನಮ್ಮ ದೇಶ ಏಕೆ ಇನ್ನೂ ಇಷ್ಟು ಹಿಂದುಳಿದಿದೆ ? ರಾಷ್ಟ್ರಕ್ಕೆ ಸ್ವಾತಂತ್ರ್ಯ ಲಭಿಸಿ ಅರ್ಧ ಶತಮಾನ ಕಳೆಯುತ್ತ ಬಂತಲ್ಲ, ಯಾವಾಗ ಇದರ ಉದ್ಧಾರ ? ಮನು ಕುಲದಲ್ಲಿ ಹುಟ್ಟಿಯೂ ವ್ಯರ್ಥ ಜೀವನ...ಮಾನವತೆಯ ಹುರುಳನ್ನು ಅರಿಯಲಾರದ ನಿರರ್ಥಕ ಬದುಕು...ತೀರಾ ವಿಷಾದಕರ.

ಹಳ್ಳಿಯ ಮಾತಂತಿರಲಿ, ಈ ಪಟ್ಟಣಿಗರ ಅವಸ್ಥೆ ನೋಡಿದರೆ ಮತ್ತೂ ಬೇಸರ. ಶಾಲೆ–ಕಾಲೇಜುಗಳಲ್ಲಿ ಓದುವವರನ್ನು ಬಿಟ್ಟರೆ, ಉಳಿದವರ ಸ್ಥಿತಿ ಏನೇನೂ ಉತ್ತಮವಿಲ್ಲ. ಉತ್ತಮ ಜೀವನದ ಕಡೆ ಗಮನ ಹರಿಸುವ ಚಾಣಾಕ್ಷತೆಯೂ ಇಲ್ಲವಲ್ಲಾ, ಅದೇ ಶೋಚನೀಯ. ಎಲ್ಲಾ ವಿಧದ ಶ್ರೀಮಂತ ಜೀವನವನ್ನು ಕಣ್ಣಿಂದ ನೋಡುತಿದ್ದು ತಮ್ಮನ್ನು ನಾವು ಅರಿತುಕೊಳ್ಳಲಾ

ರರು ಎಂದರೆ ಹೇಗೆ ಇದರ ಪರಿಹಾರ ಎಂಬ ಪ್ರಶ್ನೆ ತೆಕ್ಕನೆ ಏಳುತ್ತದೆ, ತಾನೇ ತಾನಾಗಿ. ನಮ್ಮ ಪೂರ್ವಿಕರು ಸುಜ್ಞಾನಿಗಳು. ಇಂದಿನವರೇಕೆ ಹೀಗೆ ? ಅದೇ ಅರ್ಥವಾಗುತ್ತಿಲ್ಲ. ಈ ವಿಚಾರ ನಿಜವಾಗಿಯೂ ಮನನೀಯ ಮತ್ತು ಚಿಂತನೀಯ..."

° ° ° °

ನಾಲ್ಕು ಮಂದಿ ಒಕ್ಕಲುಗಳಿಗೂ ನಾಲ್ಕು ಅಚ್ಚುಕಟ್ಟಿನ ಮನೆಗಳನ್ನು ಕಟ್ಟಿಸಿಕೊಟ್ಟು ತನ್ನ ಮನದಭಿಲಾಷೆಯನ್ನು ಪೂರೈಸಿಕೊಂಡಿದ್ದಳು ಕುಮುದ್ವತಿ. ನಾಲ್ಕು ಕುಟುಂಬಗಳಿಗೂ ಎಲ್ಲಿಲ್ಲದ ಆನಂದ. ಸಂತಸದಿಂದ ಹಾಲುಕ್ಕಿಸಿ ಪಾಯಸ ಮಾಡಿ ಹಬ್ಬದೂಟ ಉಂಡು, ಗೃಹ ಪ್ರವೇಶೋತ್ಸವವನ್ನು ಪೂರ್ಣ ಮನದಿಂದ ಉಲ್ಲಾಸಪೂರ್ವಕವಾಗಿ ಆಚರಿಸಿಕೊಂಡರು ಅವರು. ರಾಮನಾಥ, ದೇವಯ್ಯನವರುಗಳು ಸಂಸಾರ ಸಮೇತ ಅವರ ಸಂತಸದಲ್ಲಿ ಪಾಲ್ಗೊಂಡು, ಸಮಯೋಚಿತವಾಗಿ ಅವರಿಗೆ ಹಿತವಚನಗಳನ್ನು ಹೇಳಿ ಆಶೀರ್ವದಿಸಿ ಹಿಂದಿರುಗಿದರು, ಅವರು ಕೊಟ್ಟ ಹಾಲು ಹಣ್ಣುಗಳನ್ನು ಸ್ವೀಕರಿಸಿ. ಅವರ ಮಕ್ಕಳು ಪದ್ಮಾಲಯ ಶಾಲೆಯಲ್ಲಿಯೇ ಪ್ರಾಥಮಿಕ ಶಿಕ್ಷಣ ಪಡೆದದವರು. ಮುಂದೆ ಸರಕಾರಿ ಶಾಲೆಗೆ ದಾಖಲಾತಿ ಪಡೆಯುತ್ತಾರೆ.

ವಸಂತ–ವಾಸುರವರ ಗದ್ದೆ ತೋಟಗಳ ಉಸ್ತುವಾರಿಗೂ ಆಳುಗಳು ಇವರೇ. ಹೆಚ್ಚಿನ ಜನರ ಅಗತ್ಯ ಬಿದ್ದರೆ ಮಾತ್ರ ಅಂದಿಗೆ ಹೊರಗಿನವರ ಸಂಪರ್ಕ ಬೆಳೆಯುತ್ತದೆ. ಅದು ಬಲು ಅಪರೂಪ ಎನ್ನಬಹುದು. ಒಟ್ಟಿನಲ್ಲಿ ಕೈ ತುಂಬ ಕೆಲಸ ಮಾಡುವ ಹುಮ್ಮಸ್ಸು ಆಳುಗಳಿಗೆ.

ಬೆಳಗಿನ ಎಂಟರ ಸಮಯ. ಜಗಜಗಿಸುವ ಸೂರ್ಯ ಪೂರ್ವದಿಗ್ದೇಶದ ನೀಲಗನ್ನಡಿಯ ಮೇಲೆ ರಂಜಿಸುತ್ತಿದ್ದಾನೆ. ಪಕ್ಷಿಗಳ ಉದಯ ಗಾನ ಕೇಳಿಬರುತ್ತಿದೆ ವ್ಯಾಪಕವಾಗಿ.

ಮೇಸ್ತ್ರಿ ಕೆಲಸದ ಆಳುಗಳ ಜೊತೆಗೂಡಿ ಹೋಗಿ ವಸಂತನಿಗೆಂದ,

"ಬುದ್ಧೀ, ಈವೊತ್ತು ನಿಮ್ಮ ತೋಟದಲ್ಲಿ ತೆಂಗಿನಕಾಯಿ ಕೀಳುವುದಿದೆ. ನಾವೀಗ ಕೀಳಲು ಹೋಗುತ್ತೇವೆ, ನೀವೂ ಬರುತ್ತೀರಾ ತೋಟಕ್ಕೆ ? ಗಾಡಿ ಬರುತ್ತಲ್ಲಾ, ಅದರಲ್ಲೇ ನೀವೂ ಬನ್ನಿ. ಎಷ್ಟು ಬೆಳೆ ಬಂದಿದೆ ನೀವೂ ನೋಡಬಹುದು."

ಮೇಸ್ತ್ರಿ ಸಹಜವಾಗಿಯೇ ಕೇಳಿದ್ದ. ತಮ್ಮಗಳ ಸಹಾಯ–ಸಹಕಾರ ಗಳಿಂದ ಆತನ ಮನಃಬುದ್ಧಿಗಳು ಪ್ರಸನ್ನವಾಗಿರಬಹುದು ಎಂಬ ಭಾವನೆ ಯಿಂದ. ಆದರೆ, ನಾಯಿ ಬಾಲ ಎಂದೆಂದೂ ಡೊಂಕೇ. ಅವನು ತೀರಾ ನಿರಾಸೆ–ತಿರಸ್ಕಾರ ತುಂಬಿದ ದನಿಯಲ್ಲಿ ಬಿತ್ತರಿಸಿದ,

"ಬಿಡು, ಬಿಡು. ಇದೇನು ವಿಶೇಷ ಎಂದು ನನಗೆ ಹೇಳುತಿದ್ದಿ ? ನನಗೆ ಆರೋಗ್ಯ ಸರಿಯಾಗಿದ್ದಿದ್ದರೆ ನಿಮ್ಮ ಕೆಲಸಗಾರರು ಬೇಕಿತ್ತೇ ? ಎರಡಾಳು ಕೆಲಸ ಮಾಡುವಷ್ಟು ಶಕ್ತಿ ಇತ್ತು ನನ್ನಲ್ಲಿ ! ಈಗ ಹಣ್ಣಾಗಿದ್ದೇನೆ ಅಷ್ಟೆ."

ಅವನಿಗೆ ಮೈಯಲ್ಲಿ ಶಕ್ತಿಯಿದ್ದಾಗಲೂ ಅವನು ಮಾಡಿದ ಕೆಲಸದ ಅರಿವು ಇದ್ದೇ ಇತ್ತು ಆಳುಗಳಿಗೆ. ಅವರು ಅತ್ತ ತಿರುಗಿ ಕಿಸಕ್ಕನೆ ನಕ್ಕು ಪರ ಸ್ಪರ ಮುಖ ನೋಡಿಕೊಂಡರು.

ವಸಂತ ಮೇಸ್ತ್ರಿಯನ್ನು ಕುರಿತು ನುಡಿದ "ನೀವು ಹೋಗಿ ಕಾಯಿ ಕೀಳುತ್ತಿರಿ. ಮೋಹಿನಿ ಇನ್ನು ಸ್ವಲ್ಪ ಹೊತ್ತಿನೊಳಗಾಗಿ ಎತ್ತಿನ ಗಾಡಿ ತರು ತ್ತಾಳೆ ತೋಟಕ್ಕೆ."

ಮೇಸ್ತ್ರಿ ಮೋಹಿನಿಗೆ ಹೇಳಿ ಹೋಗುವ ಉದ್ದಿಶ್ಯದಿಂದ ಸ್ವಲ್ಪಹೊತ್ತು ಕಾದು ನೋಡಿದ. ಮೋಹಿನಿ ಹೊರ ಬರಲಿಲ್ಲ. ವಸಂತನ ಉದ್ಧಟತನ ನೋಡಿ ದರೆ ಇವರ ಕೆಲಸ ಮಾಡಲೇಬಾರದು ಎನಿಸುತ್ತದೆ. ಎನಿಸಿ ಜುಗುಪ್ಸೆಯಿಂದ "ಅವ್ವಾ, ನಾವು ಹೋಗೋಣವೇ ?" ಎಂದು ಕೂಗಿ ಕೇಳಿದ ಮೇಸ್ತ್ರಿ.

ಅವನ ದನಿ ಕೇಳಿ ಮೋಹಿನಿ ಹೊರಬಂದಳು. ಇಬ್ಬರು ಗಂಡಾಳುಗಳೊ ಡನೆ ಮೇಸ್ತ್ರಿ ಕಾದು ನಿಂತಿದ್ದಾನೆ. ಅವನ ಮುಖದಲ್ಲಿ ಅಸಮಾಧಾನ ತಾಂಡ ವಾಡುತ್ತಿದೆ.

"ನೀನಿಂದು ಕಾಯಿ ಕೀಳಿಸುತಿದ್ದೀ ತಾನೆ ?" ಕೇಳಲಾರದೇ ಕೇಳಿದಳು ಅವಳು.

"ಹೌದು ಅಮ್ಮಣ್ಣೀ....ಅದಕ್ಕೇ ಹೇಳಿ ಹೋಗೋಣವೆಂದು ಬಂದೆ."

"ಇನ್ನು ಸ್ವಲ್ಪ ಹೊತ್ತಿನೊಳಗಾಗಿ ಗಾಡಿಯೊಂದಿಗೆ ನಾನೇ ಬರುವೆ" ಎಂದಳು ಅವಳು.

"ಆಯ್ತಾಯ್ತು."

ಮೇಸ್ತ್ರಿ ಆಳುಗಳೊಂದಿಗೆ ತೋಟದ ಕಡೆ ಹೊರಟ. ಮೋಹಿನಿ ಪತಿಗೆಂದಳು,

"ಈ ಕೆಲಸಗಾರರ ಕೆಲಸವೇ ಕೆಲಸ. ಹಿಡಿದ ಕೆಲಸ ಬಿಡದೆ ಮಾಡಿ ಮುಗಿಸುತ್ತಾರೆ. ಇವರ ಮೇಲೆ ಒತ್ತಾಯ ಹೇರಬೇಕಾಗಿಲ್ಲ. ಬೇರೆಯವರಾದರೆ ಎದುರಿಗಿದ್ದರೇ ಕೆಲಸ. ನನಗಂತೂ ಈವರೆಗೆ ನಮ್ಮ ಆಳುಗಳ ಮೇಲೆ ಕಣ್ಣಿನ ಮೇಲೆ ಕಣ್ಣಿಟ್ಟು ಕಾದು ನೋಡಿ ಸಾಕಾಗಿದೆ. ಜನ ಇದ್ದರೆ ಹೀಗಿರಬೇಕು ನೋಡಿ."

ವಸಂತ ಸುಮ್ಮನೆ ಗೋಣು ಆಡಿಸಿದ ಮಾತಾಡಲಿಲ್ಲ. ಮೋಹಿನಿ ಮುಂದುವರಿದಳು,

"ತೋಟದಲ್ಲಿ ಕೊಯ್ದ ತಂಗಿನಕಾಯಿಗಳನ್ನು ತರುವುದಷ್ಟೆ; ನೀವೇ ಹೋಗಬಹುದಾಗಿತ್ತು."

ಆದರೆ ಅವನ ರೀತಿಯೇ ಬೇರೆ. ಒಡಲ್ಗಿಚ್ಚಿನಿಂದ ಸುಟ್ಟುರಿದು ಕಟ್ಟುರಿಯಾಗಿ ಕುದಿ ಕುದಿದು ಬೆಂಡು ಬೆಂಡಾದ ಜೀವಕ್ಕೆ ಸಂತೃಪ್ತಿಯೇ ಇಲ್ಲ.

ಅವಳು ಸಿಟ್ಟಿನಿಂದ ನುಡಿದಳು "ಇಷ್ಟೂ ಮಾಡಲಾರಿರಾದರೆ ನಿಮಗೆ ಬದುಕಾದರೂ ಏಕೆ ಬೇಕು ? ಯಾವತ್ತೂ ಹೀಗೆಯೇ ಸೊಗಡು ಬುದ್ಧಿ."

ಅವನು ಏನೋ ಹೇಳಲು ಬಯಸಿಯೂ ಸುಮ್ಮನಾದ. ತುಟಿಗಳು ಬಿರಿಯಲಿಲ್ಲ.

ಸತ್ಯ ಹೊರ ಹೊರಡುತ್ತ ಅಂದ—"ಆಳುಗಳು ಹೇಗೂ ಕೊಯ್ದು ತರುತ್ತಾರೆ. ಮತ್ತೇಕೆ ಹೋಗಿ ತರುವ ತೊಂದರೆ ?"

"ನೀನೂ ಸರಿಯಾಗಿದ್ದೀ....ಅಪ್ಪನಿಗೆ ಸರಿಯಾದ ಮಗ ! ನಾವು ನೋಡಿಕೊಳ್ಳದಿದ್ದರೆ ಕಾಯಿಗಳು ಕಳುವಾಗುವುದು ದಿಟ. ಇಷ್ಟು ನಿರ್ಲಕ್ಷ್ಯ ತಾಳಿದರೆ ಜೀವನ ಸಾಗುವುದು ಹೇಗೆ ? ನೀವು ಮನುಷ್ಯರಾಗಿ ಹುಟ್ಟಿದ್ದೇ ತಪ್ಪು !"

ಅವಳು ಸಿಟ್ಟಿನಿಂದ ಒಳ ಹೋದಳು.

ದೂರದಲ್ಲಿಲ್ಲೋ ಮೈನಾ ಹಕ್ಕಿ ವೀತರಾಗದಲ್ಲಿ ಹಾಡುತಿತ್ತು ಕಿವಿಯನ್ನು ಕೊರೆಯುವಂತೆ.

ಅದಕ್ಕೆ ಯಾವ ದುಃಖದೊತ್ತಡವೋ ಎಂದು ಎಂತಹ ಮೂರ್ಖನೂ ಕನಿಕರಿಸುವಂತಹ ಚೀತ್ಕಾರ.

○ ○ ○ ○

ಪದ್ಮ ರಾಜೇಶ್ವರೀ ಸ್ತ್ರೀ ಕಲ್ಯಾಣ ಸಂಘಕ್ಕೆ ಬರುವ ಕಾಗದಗಳ ಪರಿಶೀಲನೆಯಲ್ಲಿ ತೀವ್ರ ಮುಳುಗಿದ್ದಾಳೆ ಕುಮುದ್ವತಿ. ಕೆಲವೊಮ್ಮೆ ಕೈಗೂಡದ ಕೆಲಸದಿಂದ ತಲೆ ಬಿಸಿಯಾಗುವುದುಂಟು. ಏನು ಮಾಡಲಿ ಎಂಬ ಯೋಚನೆಯೂ ಸಹ ಗಾಢ ಪ್ರಗಾಢ ರೂಪ ತಾಳುತ್ತದೆ. ದಿನದಿನ ಪ್ರಚಾರ ಸಾಹಿತ್ಯಕ್ಕಿಂತ ವಿಚಾರ ಸಾಹಿತ್ಯ ಬಹಳ ಜಟಿಲ.

ರಾಮನಾಥ ವಿಚಾರಮಗ್ನನಾಗಿ ಅಂದ,

"ನೀವು ಏನೋ ಮಾಡಬೇಕೆಂದಿದ್ದೀರಿ. ಅದೇನೋ ಆಗುತ್ತೆ. ಈ ದೇಶದ ನವ ಯುವಕರಿಗೆ ಜೀವನ ಸುಧಾರಣೆಯೆಂದರೆ ಕುಡಿದು ತಿಂದು ಮೋಜು ಮಾಡುವುದು ವಿನಾ ಮತ್ತೊಂದಿಲ್ಲ. ಭೋಗೋಪಭೋಗಗಳೇ ಸುಧಾರಣೆಯ ರೂಪ. ಅದನ್ನೆಲ್ಲಾ ಅಷ್ಟು ಸುಲಭದಲ್ಲಿ ಬಿಟ್ಟುಕೊಟ್ಟಾರೆಯೇ ? ಈ ಸಮಾಜ ಕಲಿಯಬೇಕಾದುದು ಬಹಳವಿದೆ. ಬ್ರಿಟಿಷರಿಂದ ಕಲಿಯಬೇಕಾಗಿತ್ತು ಜ್ಞಾನ

ವಿಜ್ಞಾನ. ಕಲಿತದ್ದು ಸಮಾಜ ಘಾತಕತನ. ನಮ್ಮ ಆಧುನಿಕ ವಿದ್ಯೆಯಿಂದ ಕಲಿತುದು ಸ್ವಾರ್ಥಪರತೆ. ಜೊತೆಗೆ ಸೋಮಾರಿತನ. ಮೈ ಮುರಿದು ಕೆಲಸ ಮಾಡುವ ಮನಸ್ಸಿಲ್ಲ. ಪರಿಸ್ಥಿತಿ ಹೀಗಿರುವಾಗ ಪಾಠ ಕಲಿಯುವುದು ಕಷ್ಟವೇ ಪಾಶ್ಚಾತ್ಯರ ಧೈರ್ಯ-ಸಾಹಸ, ಜ್ಞಾನ-ವಿಜ್ಞಾನ, ವಿದ್ಯೆ-ಬುದ್ಧಿಗಳ ಅಗಾಧತೆ ನಮ್ಮಲ್ಲಿಲ್ಲ. ಅವರ ಜೀವನದ ಸಂಸ್ಕೃತಿಯೇ ಬೇರೆ. ನಮ್ಮ ಜೀವನದ ಸಂಸ್ಕೃತಿಯೇ ಬೇರೆ. ಅವರು ಮಹಾ ಸಾಹಸಿಗಳು. ನಮ್ಮಲ್ಲಿ ಆ ಸಾಹಸ ಪ್ರವೃತ್ತಿಯಿಲ್ಲ. ನಾವೂ ವಿಜ್ಞಾನವನ್ನು ಅನುಸರಿಸುತಿದ್ದೇವೆ. ಆದರೆ, ಏನೇನೂ ಸಾಲದು. ಇನ್ನೂ ಚಿಗುರು ಅಂದರೆ ಚಿಗುರು........ಈ ಚಿಗುರುತನ ಅಧ್ವಾನಕ್ಕೆ ನಾಂದಿ...."

ಅದೇ ವೇಳೆಗೆ ತೋಟದಿಂದ ಬಂದ ದೇವಯ್ಯ ಭಯಾಶ್ಚರ್ಯ ಮಿಶ್ರಿತ ವಾಣಿಯಲ್ಲಿ ನುಡಿದ,

"ನಾನು ಕೆಲಸದಲ್ಲಿಗೆ ಹೋದಾಗ ವಸಂತ ಎದುರಾದ. ಅಬ್ಬ! ಎಂತಹ ದುಷ್ಟ ? ನಮ್ಮ ಆಳುಗಳು ಅಲ್ಲಿಲ್ಲದಿದ್ದರೆ ನನ್ನ ಮುಗಿಸಿಯೇಬಿಡುತಿದ್ದ ಎನಿಸುತ್ತೆ. ಹೇಗೆ ಮುಷ್ಟಿ ಹಿಡಿದು ನುಗ್ಗಿದ ನನ್ನ ಮೇಲೆ ? ಆಳುಗಳು ತಕ್ಷಣ ನನ್ನ ಸಹಾಯಕ್ಕೆ ಬಂದರು. ಇಲ್ಲದಿದ್ದರೆ ಗತಿ ಮುಗಿಸುತಿದ್ದ. ಆಳುಗಳು ಅವನನ್ನು ದಬ್ಬಿಕೊಂಡೇ ದೂರ ತಳ್ಳಿದರು. ಅವನ ಏಟನ್ನು ಈ ಮುದುಕ ತಡೆಯುತಿದ್ದನೇ ? ಅವನ ಉಗ್ರತೆಯಿಂದ ನಡುಗಿ ಹೋದೆ.......ಅಂಥಹವರಿಗೆಲ್ಲಾ ಹೇಗೆ ಬುದ್ಧಿ ಕಲಿಸಲಾಗುತ್ತೆ ? ಈಗೀಗ ಬಹುತೇಕ ಮಂದಿ ಹೀಗೆಯೇ. ನಮ್ಮ ಜನಾಂಗ ಹಿಡಿಯುತ್ತಿರುವುದು ವಾಮ ಮಾರ್ಗ. ಜನ ಸರಿಯಾಗಿದ್ದಿದ್ದರೆ ದೇಶ ಹಾಳಾಗುತ್ತಿರಲಿಲ್ಲ. ಇದು ತೀರಾ ದುರದೃಷ್ಟಕರ..."

ಕುಮುದ್ವತಿ ವಿಷಾದವಾಣಿಯಲ್ಲಿ ನುಡಿದಳು,

"ನೀವು ಒಬ್ಬರೇ ಎಲ್ಲಿಗೂ ಹೋಗಬೇಡಿ ಅಪ್ಪಾಜಿ. ಅವನು ತೋಟದೊಳಗೆ ಹೇಗೆ ಬಂದ...? ತಂತಿ ಬೇಲಿ ಉಂಟಲ್ಲ ?"

"ತೋಟದಲ್ಲಲ್ಲ. ರಸ್ತೆಯ ಮೋರಿ ದುರಸ್ತಿ ಮಾಡುವಲ್ಲಿಗೆ ಅವನು ಬಂದದ್ದು. ಏನಾಗಬೇಕೋ ಅದು ಆಗಿಯೇ ತೀರುತ್ತೆ. ಅದಕ್ಕೆ ಹೆದರಿಕೊಂಡರೆ ಆಗುತ್ತದೇಯೇ ಮಗಳೇ !"

"ಅವನಿಗಿನ್ನೂ ಬುದ್ಧಿ ಬರಲಿಲ್ಲವಲ್ಲಾ, ನನಗೆ ಅದೇ ಆಶ್ಚರ್ಯ". ದುಃಖ-ಸಂಕಟ–ಕೋಪಗಳ ವಾಣಿಯಲ್ಲಿ ನುಡಿದ ರಾಮನಾಥ ಪುನಃ "ಅವನು ಮುಂದೆಯೂ ದ್ವೇಷ ಬಿಡುವವನಲ್ಲ. ಹತ್ತಿರದಲ್ಲೇ ಇದ್ದು ಮಗ್ಗುಲಿಗೆ ಮುಳ್ಳಾದ, ಮುಂದೆ ಮಕ್ಕಳಾದರೂ ಓದಿ ವಿದ್ಯಾವಂತರಾಗಿ ಬುದ್ಧಿವಂತಿಕೆಯಿಂದ ಬಾಳಿದರೆ ಸಾಕು. ಈ ಮನೆತನಕ್ಕೆ ಬಂದ ಕೆಟ್ಟ ಹೆಸರು ಅವರಿಂದಲಾದರೂ ಹರಿಯಲಿ. ನನಗಿದು ಸಾಕಾಗಿ ಹೋಗಿದೆ."

"ಅಪ್ಪ ಹೀಗಿದ್ದರೆ ಮಕ್ಕಳು ಸರಿಯಾಗುವುದು ಕಷ್ಟವೇ." ಸಂಕಟ–ಭಯಗಳಿಂದ ನುಡಿದಳು ಸೀತಮ್ಮ.

ಸ್ವಲ್ಪ ಹೊತ್ತು ಅದೇ ವಿಷಯ ಎಲ್ಲರ ನಾಲಿಗೆಯ ಮೇಲೂ ನಲಿದಾಡಿತು. ವಿಷಾದ ಭಾವ. ಕಳಕಳಿಯ ದನಿ.

ಕುಮುದ್ವತಿ ಕಾಗದ ಪತ್ರಗಳನ್ನು ಜೋಡಿಸಿಟ್ಟು ಫೈಲನ್ನು ಬೀರುವಿನಲ್ಲಿಟ್ಟು ಕದ ಮುಚ್ಚಿದಾಗಲೇ ಶಿವಾನಿ ಆಗಮಿಸಿದಳು. ಪರಸ್ಪರ ದರ್ಶನ ಲಾಭದಿಂದ ಇಬ್ಬರ ಮುಖದಲ್ಲೂ ಮುಗುಳು ನಗೆ ಅರಳಿತು, ಮಂದಾರ ಹೂಗಳು ದಳ ಬಿರಿದಂತೆ.

"ಏನಮ್ಮಾ ಶಿವಾನಿ. ನಿಮ್ಮನ್ನು ನೋಡದೆ ತುಂಬ ದಿನಗಳಾಗಿತ್ತು".

"ನೀವಂತೂ ಬರುವುದಿಲ್ಲ. ನಾನೂ ಬರದಿದ್ದರೆ ಸ್ನೇಹ ಸಂಬಂಧವೇ ಕಡಿದು ಹೋಗುತ್ತಲ್ಲ. ಇನ್ನೇನು ಮಾಡಲಿ, ನಾನೇ ಬರಬೇಕು ಬಂದೆ."

ಕುಮುದ್ವತಿ ಭುಜವನ್ನು ಬಳಸಿ ಹಿಡಿದು ಆತ್ಮೀಯತೆಯಿಂದ ನುಡಿದಳು,

"ಕ್ಷಮಿಸಿ, ನಿಮ್ಮಲ್ಲಿಗೆ ಬರಲಾಗಲಿಲ್ಲ, ನಿಜ, ಮುಂದಿನ ವಾರ ಎಲ್ಲರೂ ಬರುತ್ತೇವೆ. ಬೆಳಿಗ್ಗೆ ಬಂದರೆ ಸಾಯಂಕಾಲದವರಗೂ ನಿಮ್ಮಲ್ಲಿಯೆ ಜಾಂಡಾ...!"

"ಖಂಡಿತವಾಗಿ ?"

"ಖಂಡಿತವಾಗಿ. ಅದರಲ್ಲಿ ಅನುಮಾನವೇಕೆ ?"

ಶಿವಾನಿಯ ಮುಖಬಿಂಬ ಅರಳಿ ಹೂವಾಯಿತು. ಆನಂದ ಭರಿತ ಹೃದಯದಿಂದ ಎಲ್ಲರಿಗೂ ಮಧುರ ಆಹ್ವಾನ ನೀಡಿದಳು. ಎದೆಯ ಹಕ್ಕಿ ಹಾಡಿತು. "ಸಂತೋಷಂ ಜನಯೇತ್ ಪ್ರಾಜ್ಞಃ ತದೇಶ್ವರ ಪೂಜನಂ."

ಅಂಗಣದ ಅಂಚಿನಲ್ಲಿದ್ದ ದೇವದಾರು ಮರಗಳ ಮೇಲೆ ಕುಳಿತಿದ್ದ ಬುಲ್‌ಬುಲ್ ಪಕ್ಷಿಗಳು ಆನಂದಾಲಾಪಗೈಯುತ್ತಿವೆ, ನವುರಾದ ಧ್ವನಿಯಲ್ಲಿ. ಸುಯ್ದಾಳಿಯ ಸುಯ್ದನಿಗೆ ಶೃತಿಯೂಡುವ ಖಗಗಾನ ಎಡೆಬಿಡದೆ ಹರಿಯು ತಿತ್ತು ಪರಿಸರದ ಗಿಡ ಮರಗಳ ಕೊಂಬೆ ಕೊಂಬೆಗಳಿಂದ.

ಹಳ್ಳಿ ಪ್ರದೇಶದ ಶಾಂತಿ ಹೆಪ್ಪುಗಟ್ಟಿದಷ್ಟು ಹಿತಕರ.

— ೦ —

೨೦

ಮಕ್ಕಳಿಗೆ ತಂದೆ ಬಾಲ್ಯದೊ ।
ಳಕ್ಕರ ವಿದ್ಯೆಗಳನರಿಪದಿರ್ದೊಡೆ ಕೊಂದಂ ।
ಲಕ್ಕಧನವಿರಲು ಕೆಡಗುಂ ।
ಚಿಕ್ಕಂದಿನ ವಿದ್ಯೆ ಪೊರೆಗು ಚೂಡಾರತ್ನ ।

ಮನೆಯ ಮುಂದಿನ ಜಗಲಿಯಲ್ಲಿ ಕುಳಿತು ಸಿಗರೇಟ್ ಸೇವನೆಯಲ್ಲಿ ತಲ್ಲೀನನಾಗಿದ್ದ ವಸಂತ. ಮನಸ್ಸೆಲ್ಲಾ ಸಿಗರೇಟಿನ ಅಭಿರುಚಿಯ ಮೇಲೆ. ಪ್ರಶಾಂತ ಸಮೃದ್ಧ ವಾತಾವರಣ ಮನೆಯ ಪರಿಸರದಲ್ಲಿ. ವನವಿಹಂಗ ಮಗಳ ಕೊರಳುಲಿಯಿಂದ ಪ್ರಕೃತಿಯ ಹೃನ್ಮನಗಳು ರಾಗಾನುರಾಗಮಯ ವಾಗುವಷ್ಟು ಹಿತ.

ಕಣ್ಣನೇರಕ್ಕೆ ವಿಶಾಲವಾದ ಗದ್ದೆಯ ಕೋಗಿನಲ್ಲಿ ನೆಲ್ಲು ಬಲಿಯುತ್ತಿರುವ ಹಸಿರು ಕ್ರಾಂತಿ. ತಂಗಾಳಿಯೂಟದಿಂದ ಅತ್ತಿತ್ತ ತಲೆದೂಗುವ ಭತ್ತದ ತೆನೆಗಳು ಓಲಾಡವ ಸುಂದರ ಚಿತ್ತಾರವಂತೂ ಚಿತ್ತಾಕರ್ಷಕವೇ. ಆದರೆ, ವಸಂತನಿಗೆ ನಿಸರ್ಗ ಸೌಂದರ್ಯದ ಮೇಲೆ ಆಸ್ಥೆಯೂ ಇಲ್ಲ, ಆಕರವೂ ಇಲ್ಲ. ದಿನ ದಿನವೂ ದೃಷ್ಟಿಗೆ ಬೀಳುವ ಅದು ಸಾಮಾನ್ಯ ದೃಶ್ಯವಾದ್ದರಿಂದ ಏನೋ ಒಂದು ಬಗೆಯ ತಾತ್ಸಾರ. ಇನ್ನೇನೋ ಒಂದು ಬಗೆಯ ನಿರ್ಲಕ್ಷ್ಯ. ಮತ್ತೇನೋ ಒಂಗು ಬಗೆಯ ಅನಾದರ.

ಸತ್ತ್ಯ ಬೆಳೆದ ಹುಡುಗನಾದರೂ ಹಿಡಿದುದು ವಾಮ ಮಾರ್ಗ. ಓದು ವಿದ್ಯೆಯಲ್ಲೂ ಆಸಕ್ತಿಯಿಲ್ಲ. ವ್ಯವಸಾಯದಲ್ಲೂ ಆಸ್ಥೆಯಿಲ್ಲ. ಕಾಮುಗಾರಿ ಮತ್ತು ಸಂಸಾರದ ಉಸ್ತುವಾರಿ ಮೋಹಿನಿಯದೇ. ಆಕೆ ಎಷ್ಟೋ ಬಾರಿ ನೊಂದು ನೀರಾಗಿ ಮಗನನ್ನು ಬೈದು ತರಾಟೆಗೆ ತೆಗೆದುಕೊಂಡಿದ್ದಾಳೆ.

ಆದರೂ ಮಣಿಯಲಿಲ್ಲ ಅವನು. ಓರಗೆಯ ಪುಂಡರ ದಳಕ್ಕೆ ಗುರುವಾದ. ಎಲ್ಲೆಲ್ಲೋ ಅಡ್ಡಾಡಿ ಊಟದ ಸಮಯಕ್ಕೆ ಬಂದು ಉಂಡು ಹೋಗುವ. ತಾಯಿಯ ಭಂಗ ಬನ್ನಗಳಲ್ಲಿ ಗಮನ ಲವಲೇಶವೂ ಇಲ್ಲ. ಕಾಷ್ಠದ ಬೊಂಬೆ ಯಂತೆ ನಿರ್ಜೀವ...ನಿರಾತಂಕಿತ.

ಮೋಹಿನಿಯ ಶ್ರದ್ಧೆಯೊಂದೇ ಜೀವನಕ್ಕೆ ಆಧಾರ. ಸಂಸಾರದ ಗಾತ್ರಕ್ಕೆ ಅವಳೊಬ್ಬಳ ಶ್ರದ್ಧೆ ಏನೇನೂ ಸಾಲದು. ಅವಳ ಮನಕ್ಕೆ ಇದೆಲ್ಲ ಕಿರಿಕಿರಿ. ಬಾಯಿ ಬಿಟ್ಟರೆ ಬಡಿಯುವ ಗಂಡ. ದಿನದಿನಕ್ಕೂ ಬದುಕೇ ಭಾರವಾಗಿ ಒಮ್ಮೆ ಹಿರಿಯ ಮಗ ಸತ್ಯನನ್ನು ಕರೆದು ದುಃಖ ಸಂಕಟದ ದನಿಯಲ್ಲಿ "ಸತ್ಯಾ ನಿಮ್ಮಪ್ಪ ದುಡಿಯುವವರಲ್ಲ. ನೀನೂ ಹೀಗೆ ಉಂಡಾಡಿಯಾಗಿದ್ದರೆ ಗತಿ ಯೇನು ? ಸದಾ ಪುಂಡು ಪೋಕರಿಗಳ ಸಹವಾಸದಲ್ಲಿರುತ್ತಿ. ಇದು ಸರಿಯಲ್ಲ, ನೀನೇ ಯೋಚನೆ ಮಾಡು. ನಾನೊಬ್ಬಳೇ ಒಳ ಹೊರಗೆ ಎಷ್ಟು ಕಾಲ ದುಡಿ ದೇನು ?" ಎಂದಳು, ದನಿ ಎದೆಯಾಳದಿಂದ ಹೊರಬಿತ್ತು. ಮಗನನ್ನು ಸನ್ಮಾರ್ಗಕ್ಕೆ ನಡೆಸುವ ಸಲುವಾಗಿ, ಗೋಗರೆಯಿತು ಹೃದಯ.

ಸತ್ಯ ತನ್ನಲ್ಲೇ ಯೋಚಿಸಿದ, ತಾಯಿಯ ಮಾತಿನಲ್ಲಿನ ಹುರುಳು ಅಂತರಂಗವನ್ನು ತಣ್ಣಗೆ ಮುಟ್ಟಿತು. ಆದರೂ, ಮೈಗೂಡಿಸಿಕೊಂಡ ದುರ್ಗುಣಗಳ ಹಿಡಿತದಿಂದ ಬಿಡುಗಡೆ ಅಷ್ಟು ಸುಲಭವೇನಲ್ಲ. ಸತ್ಯ ಮಾತಾಡಲಿಲ್ಲ. ಮನೋಭಿತ್ತಿಯಲ್ಲಿ ಕುಮತಿಯ ಭೂತ ನರ್ತಿಸುತ್ತಿದೆ. 'ನಾನು ಕೆಲಸ ಮಾಡಲಾರೆ' ಎಂದು ಚೀರಿತು ಅಂತರಂಗ. ಪ್ರಯತ್ನಿಸಿ ದರೂ ತುಟಿಗಳು ಬಿರಿಯಲಿಲ್ಲ. ಸುಮ್ಮನೆ ನಿಂತು ಬಿಟ್ಟ.

ಮಗನ ಗಂಭೀರ ಮೌನ ಮನಮತಿಗಳನ್ನು ಕೆರಳಿಸಿತು. ಮೋಹಿನಿ ಸಿಟ್ಟಿನಿಂದ ಒದರಿದಳು,

"ಬೆಳೆದ ಮಗನಿಗೆ ದುಡಿಯದೇನು ದಾಡಿ ? ಅಪ್ಪ–ಮಗ ಇಬ್ಬರೂ ಹೀಗೇ ಇರಿ. ನಾನು ದುಡಿದು ನಿಮ್ಮನ್ನು ಸಾಕುವೆ. ನಾಚಿಗೆಯಾಗ ಬಾರದೇ ? ಗಂಡಾಗಿ ಹುಟ್ಟಿಯೂ ಬುದ್ಧಿಯಿಲ್ಲ. ಆಳೆತ್ತರಕ್ಕೆ ಬೆಳೆದಿದ್ದಿ. ಇನ್ನೂ ಎಂತಹ ಪುಂಡಾಟ ಪಾಲುಮಾರಿಕೆ"

ಹುಡುಗ ಮಾತಾಡಲಿಲ್ಲ. ರುದ್ರಮೌನ ತಾಳಿದ.

ಅವಳು ಅದೇ ಧಾಟಿಯಲ್ಲಿ ಮುಂದುವರಿದಳು– "ನಾನು ಗೋಳಾಡು ವುದು ನಿನಗೆ ಕಾಣಿಸದೆ? ಕಣ್ಣಿದ್ದೂ ಕುರುಡು. ಮನುಷ್ಯರಾಗಿ ಹುಟ್ಟಿಯೂ ತಿಳಿವಳಿಕೆಯಿಲ್ಲ. ಹೀಗಿದ್ದರೆ ಏನು ಪ್ರಯೋಜನ? ಬೆಳೆ ಸಂಮೃದ್ಧವಾಗಿ ಬೆಳೆಯುದಿದ್ದರೆ ಕಾಳು ಕಡ್ಡಿ ಎಷ್ಟು ದಿನ ಬಂದೀತು? ನಾಲ್ಕು ದಿನ ಉಪವಾಸವಿದ್ದರೆ ತಿಳಿಯುತ್ತೆ. ನಾನು ಹಾಗೂ ಹೀಗೂ ಕಾಳು ಕಡ್ಡಿ ಹೊಂದಿಸಿಕೊಳ್ಳುವುದೇ ತಪ್ಪು!"

ಸತ್ಯ ಸಿಡಿಮಿಡಿಗೊಂಡು ಹೊರ ಹೋದ. ಸಿಟ್ಟಿಗೂ ಮಣಿಯಲಿಲ್ಲ. ದೈನ್ಯತೆಗೂ ಮಣಿಯಲಿಲ್ಲ.

ಹಿಂದಿಲಿಂದ ಅದನು ಹೊರಹೋದ ರೀತಿಯನ್ನೇ ಗಮನಿಸಿದಳು ತಾಯಿ. ಸಿಟ್ಟು ರೋಷಗಳ ಗಣಿಯಾಯಿತು ಹೃದಯ. ಬುಸುಗುಟ್ಟಿತು ಮನಸ್ಸು.

ಬೆಳಿಗ್ಗೆ ಶಾಲೆಗೆ ಹೋಗಿದ್ದ ರಾಮು ಸಂಜೆಯಲ್ಲಿ ಕಾಣ ಸಿಗಲಿಲ್ಲ. ಭೀಮು ಅವನನ್ನು ಹುಡುಕಿ ಹುಡುಕಿ ಸಿಗದೇ ಅಳುತ್ತಳುತ್ತ ಮನೆಗೆ ಹಿಂದಿರುಗಿದ. ಆಗಲೇ ಮುಸ್ಸಂಜೆ ಕವಿದಿತ್ತು ಇಳೆಯ ಮೇಲೆ ದಟ್ಟಣಿಸಿ. ವಿಷಯ ತಿಳಿದು ಮೋಹಿನಿಯ ಜಂಗಾ ಬಲವೇ ಬಿದ್ದು ಹೋಯಿತು. ವಸಂತ ಪಾನ ಮತ್ತತೆಯಲ್ಲಿ ಉರುಳಿದ್ದ ಆರಾಮ ಕುರ್ಚಿಯ ಮೇಲೆ. ಅವನಿಗೆ ಭೀಮು ಹೇಳಿದ ವಿಷಯ ತಲೆಗೆ ಹೋಗಿರಲೇ ಇಲ್ಲ. ಮಡದಿಯ ಆತಂಕವೂ ಗಮನಕ್ಕೆ ಬಂದಿರಲಿಲ್ಲ.

"ಭೀಮು ಹೇಳಿದ ವಿಷಯ ಕೇಳಿದಿರಾ?" ಚೀರಿದಳು ಮಡದಿ.

ಮಡದಿಯ ಕೇಳಿಕೆಗೆ "ಅ....ಅ....ಆ" ಎಂದ ವಸಂತ. ಮುಚ್ಚಿದ ಕಣ್ಣು ತೆರೆಯಲಿಲ್ಲ.

"ರಾಮು ಶಾಲೆಯಿಂದ ಹಿಂದಿರುಗಿ ಬರಲಿಲ್ಲ. ಭೀಮು ಅಳುತ್ತ

ಬಂದಿದ್ದಾನೆ. ಈಗ ಏನು ಮಾಡೋಣ ? ಸತ್ಯ ಎಲ್ಲಿಯೂ ಕಾಣಿಸುತ್ತಲೇ ಇಲ್ಲ....? ಈನ್ನೂ ಏನೇನೋ ಹೇಳುತ್ತಲೇ ಇದ್ದಾಳೆ ಮೋಹಿನಿ.

"ಆ...ಏನೆಂದೆ ?"

"ರಾಮು ಮನೆಗೆ ಬಂದಿಲ್ಲಾಂದೆ. ನಿಮಗೆ ಎಷ್ಟು ಬಾರಿ ಬಡುಕೊಳ್ಳಲಿ ? ಕುಡುಕರಿಗೆ ನನ್ನ ಕಷ್ಟ ಹೇಗೆ ಅರ್ಥವಾಗಬೇಕು ?"

"ಆ...ಸರಿ, ಸರಿ."

"ಥೂ....! ನಿಮ್ಮ ತಲೆಗಿಷ್ಟು ಬೆಂಕಿ ಹಾಕಿತು. ಕುಡಿದೂ ಕುಡಿದೂ ಸಂಸಾರ ಹಾಳು ! ಈಗ ಶಾಲೆಗೆ ಹೋಗಿ ನೋಡಿ ಬರಬೇಕು. ಕತ್ತಲಾಗುತ್ತಿದೆ. ನಾನೇನು ಮಾಡಲಿ ?" ದುಃಖ ಸಂಕಟದಿಂದ ತಲೆ ಚಚ್ಚಿಕೊಂಡಳು ಅವಳು. ಕಂಬನಿಯ ಧಾರೆ ಇಳಿದು ಹೋಯಿತು ಕಣ್ಣುಗಳಲ್ಲಿ.

ಅವನಿಗದು ಅರ್ಥವೇ ಆಗಲಿಲ್ಲ. ಸುಮ್ಮನೆ ಕಾಲು ಚಾಚಿದ.

ಆ ಕ್ಷಣವೇ ತಲೆ ಸುತ್ತಿ ಬಂತು, ಮೋಹಿನಿಗೆ. ಕಣ್ಣ ಮುಂದಿನ ವಸ್ತುಗಳೆಲ್ಲಾ ಗಿರಗಿರ ಸುತ್ತಿದುವು. ನೆಲಕ್ಕೆ ಕುಸಿದು ಕುಳಿತು ಹೋ ಎಂದು ಅಳ ತೊಡಗಿದಳು.

ಆಗ ಭೀಮು ಅಪ್ಪನನ್ನು ಹಿಡಿದು ಅಲುಗಿಸಿ ಗಟ್ಟಿಯಾಗಿ ನುಡಿದ, "ಅಪ್ಪಾಜಿ ! ರಾಮು ಕಳೆದು ಹೋಗಿದ್ದಾನೆ, ಮನೆಗೆ ಬರಲಿಲ್ಲ."

"ಹ್ಞಂ..." ಎಂದ ವಸಂತ. ಆಗಲೂ, ವಿಷಯ ತಲೆಗೆ ಹೋಗಲೇ ಇಲ್ಲ.

ಇನ್ನು ತಡ ಮಾಡಿದರೆ ಗತಿ ಕೆಡುತ್ತೆ ಎಂದು ಪರಿಭಾವಿಸಿದ ಮೋಹಿನಿ ಭೀಮುವಿನ ಕೈ ಹಿಡಿದುಕೊಂಡು ಬೀಸುಗಾಲಿಂದ ನಡೆದಳು. ಪದ್ಮಾಲಯಕ್ಕೆ ಹೋಗಲು ಮುಖವಿಲ್ಲ. ಆದರೂ ವಿಧಿಯಿಲ್ಲದ ಭಯಾನಕ ಪ್ರಸಂಗ ಯೋಚಿಸಲು ಅವಕಾಶ ಕೊಡುತ್ತಿಲ್ಲ. ಎದೆ ಡವಡವಿಸುತ್ತಿದೆ. ಕೈ ಕಾಲುಗಳು ಸೋಲುತ್ತಿವೆ. ಒಡಲು ರುದ್ರ ಸಂಕಟವನ್ನು ಭರಿಸಲಾರದೆ ನುಲಿಯು

ತ್ತಿದೆ. ಇನ್ನು ಏನಾದರಾಗಲಿ, ಅವರಲ್ಲದೆ ನಮಗೆ ಸಹಾಯಕರಿಲ್ಲ ಎಂಬ ಚಿಂತನೆಗೆ ಶರಣಾಗಿ ಒಂದೇ ಉಸಿರಿಗೆ ಓಡಿದಳು ಪದ್ಮಾಲಯಕ್ಕೆ. ಜೊತೆ ಗೂಡಿ ಭೀಮು ಓಡಿಯೋಡಿ ಬಂದ. ಇಬ್ಬರ ಎದೆಗಳೂ ಏದುಸಿರು ಬಿಡು ತ್ತಿವೆ. ದು:ಖರಸ ನರ ನಾಡಿಗಳನ್ನು ಸೀಳುವಂತೆ ಹರಿದಾಡುತ್ತಿದೆ. ಹೇಗೆ ಹಾದಿ ಕಳೆಯಿತೋ, ಅದರ ಅರಿವೇ ಇಲ್ಲ. ಪದ್ಮಾಲಯದ ಬಾಗಿಲ ಬಳಿ ನಾಯಿಗಳು ಬೊಗಳಿ ಅಡ್ಡಗಟ್ಟಿದಾಗಲೇ ಹಾದಿ ಕಳೆದುದರ ಅರಿವು.

ಸಾಯಂಸಮಯದ ವಿಶ್ರಾಂತಿ ಎಲ್ಲರನ್ನೂ ಕೂಡಿಸಿತ್ತು; ಶಾಂತಿ ಸಮಿತಿಯಂತೆ ಪದ್ಮಾಲಯದ ವರಾಂಡದಲ್ಲಿ. ಸಾಲ್ವರೂ ಕುರ್ಚಿಗಳಲ್ಲಿ ಕುಳಿತು ಮಾತುಕತೆಯಲ್ಲಿ ನಿಮಗ್ನರಾಗಿದ್ದಾರೆ. ಮಧುರ ಬಾಂಧವ್ಯದೊಂದಿಗೆ ಹೊತ್ತು ಸಾನಂದದಿಂದ ಉರುಳುತ್ತಿದೆ. ಒಡನೆಯೇ ಕೇಳಿ ಬಂದ ನಾಯಿಗಳ ಗದ್ದಲ ಎಲ್ಲರ ಗಮನವನ್ನೂ ಅತ್ತ ಸೂಜಿಗಲ್ಲಿನಂತೆ ಸೆಳೆಯಿತು. ಕುಮು ದ್ವತಿ ಮೆಟ್ಟಲಿನ ಬಳಿಗೆ ಹೋಗಿ ನೋಡಿದರೆ ದೂರದ ಪ್ರಾಕಾರದ ಬಾಗಿಲ ಬಳಿ ನಿಂತವರಾರೆಂಬುದು ಗುರುತು ಹತ್ತಲಿಲ್ಲ. ಮಸುಗತ್ತಲೆಯ ಮುಸುಕು ದಟ್ಟೈಸಿ ಬಿಟ್ಟಿದೆ. ಪದ್ಮಾಲಯದ ದೀಪಗಳು ಬೆಳಗುತ್ತಿದ್ದರೂ ಅಲ್ಲಿಯತನಕ ಕಿರಣಗಳು ವ್ಯಾಪಿಸಿರಲಿಲ್ಲ. ಮೋಹಿನಿ ಕೆಲವು ಸಮಯ ಬಾಯ್ಬಿರೆಯದೆ ಕಲ್ಲಿಗಿಂತ ಕಲ್ಲಾಗಿ ನಿಂತು ಪದ್ಮಾಲಯದ ಜಗಜಗಿಸುವ ದೀಪಗಳನ್ನು ನಿಟ್ಟಿಸಿದಳು. ಕುಮುದ್ವತಿ "ಯಾರದು ?" ಎನ್ನುತ್ತ ಗೇಟಿನ ಬಳಿಗೆ ಬಂದಳು. ನೋಡಿದರೆ ಮೋಹಿನಿಯ ಕಳಾಹೀನ ಗಂಭೀರ ಪರಿಸ್ಥಿತಿ. ಕಂಬನಿಯ ಕೋಡಿ ಹರಿಯುತ್ತಿದೆ ಕಣ್ಣುಗಳಿಂದ.

"ಏನು, ಏನಾಯ್ತು ?" ಒಂದೇ ಉಸಿರಿಗೆ ಕೇಳಿದಳು ಕುಮುದ್ವತಿ ಕಣ್ಣು ಮುಖಗಳಲ್ಲಿ ಆಶ್ಚರ್ಯದ ನೆರೆ ಉಕ್ಕಿತು.

"ಏನು ಹೇಳಲಿ ? ನನ್ನ ಗ್ರಹಚಾರ ಒಂದೆರಡಲ್ಲ. ಮಾತಾಡಲು ನಾಲಿಗೆಯೇ ಹೊರಳುತ್ತಿಲ್ಲ..." ಬಿಕ್ಕಿದಳು ಅವಳು. ಕೊರಳು ಕಟ್ಟಿತು. ಕಂಬನಿಗಳು ಉದುರಿದುವು.

"ಹೇಳಿ....ಏನಾಯ್ತು ?"

ರಾಮನಾಥ ಎದ್ದು ಬಂದ. ಹಿಂದೆಯೇ ದೇವಯ್ಯ ದಂಪತಿಗಳೂ ಬಂದರು. ಮೋಹಿನಿ 'ಹೋ' ಎಂದು ಅಳುತ್ತ ವಿಷಯವನ್ನು ಒದರಿದಳು. ಎಲ್ಲರ ಮನವೂ ಕಲಕಿಹೋಯಿತು. ಅಲ್ಲಿ ಹೆಚ್ಚು ಹೊತ್ತು ಕಳೆಯುವ ವ್ಯವಧಾನವಿಲ್ಲ.

ಮೋಹಿನಿ ಮುಂದುವರಿದಳು "ಸತ್ಯ ಮನೆಯಲ್ಲಿಲ್ಲ. ಕುಡಿದುಬಿಟ್ಟಿದ್ದಾರೆ ವಸಂತ. ಈ ಕತ್ತಲೆಯಲ್ಲಿ ನಾನೇನು ಮಾಡಲಿ-ಹೇಳಿ?"

"ಕುಮುೂ, ಈಗಲೇ ಹೋಗೋಣ. ನೀನು ಟಾರ್ಚ್ ತಾ. ನಾನು ಕಾರು ತೆಗೆಯುವೆ."

ಅವಳು ಟಾರ್ಚು ತರಲು ಒಳಗೋಡಿದಳು. ರಾಮನಾಥ ಕಾರು ತೆಗೆದ. ಕೆಲವೇ ನಿಮಿಷಗಳಲ್ಲಿ ಹೊರಡಲು ಅಣಿಯಾದರು. ಕಾರು ನಗರದ ಹಾದಿ ಹಿಡಿಯಿತು.

ನಗರ ಅಂತಹ ದೊಡ್ಡ ಊರೇನಲ್ಲ. ತಾಲ್ಲೂಕ್ ಮುಖ್ಯ ಪಟ್ಟಣ. ತಾಲ್ಲೂಕ್ ಕೇಂದ್ರಕ್ಕೆ ಬೇಕುಬೇಕಾದ ಸೌಕರ್ಯಗಳನ್ನು ದಿನದಿನಕ್ಕೂ ಹೊಂದಿಸಿಕೊಳ್ಳುತಿದ್ದ ಪ್ರಗತಿಶೀಲ ಪಟ್ಟಣ. ಸ್ವಲ್ಪ ಹೊತ್ತಿನೊಳಗಾಗಿ ನಗರವನ್ನು ಮುಟ್ಟಿತು ಕಾರು. ಮುಚ್ಚಿದ ಶಾಲೆಯನ್ನು ಸುತ್ತುಹಾಕಿದರೆ ಆ ಪರಿಸರದಲ್ಲಿ ಯಾರೂ ಇರಲಿಲ್ಲ. ಕಾವಲುಗಾರ ಮಿಕಿಮಿಕಿ ನೋಡುತ್ತ "ತನಗೇನೂ ತಿಳಿಯದು" ಎಂದ.

"ನಿನಗೆ ರಾಮು ಗೊತ್ತೆ?"

"ಗೊತ್ತು ಸ್ವಾಮಿ, ಈಪೊತ್ತು ನಾನು ನೋಡಲಿಲ್ಲ ಅಷ್ಟೆ."

ಭೀಮು ಕೇಳಿದ "ಬೆಳಿಗ್ಗೆ ತಾವು ಬಂದಾಗ ನೀನಿದ್ದೆಯಲ್ಲ....?"

"ಇದ್ದರೇನು? ನಾನು ಗಮನಿಸಲಿಲ್ಲ, ಬಿಡಿ."

"ಇಲ್ಲಿ ಶಾಲೆ ಬಿಟ್ಟನಂತರ ಯಾವ ಹುಡುಗರಾದರೂ ಇದ್ದರೇ?"

"ಇಲ್ಲ ಸ್ವಾಮಿ. ಯಾರೂ ಈ ಕಡೆ ಬರಲೇ ಇಲ್ಲ."

ರಾಮನಾಥ "ಸರಿ, ಇನ್ನು ಹೋಗೋಣ." ಎಂದು ಅಲ್ಲಿಂದ ಕಾರು ತಿರುಗಿಸಿದ. ಎಲ್ಲರ ಕಣ್ಣುಗಳೂ ಸುತ್ತಮುತ್ತಲೂ ರಾಮುವಿಗಾಗಿ ತಡುಕುತ್ತಲೇ ಇವೆ, ದೃಷ್ಟಿ ಹರಿಯುವಷ್ಟು ದೂರ.

ಶಾಲೆಯ ಉಪಾಧ್ಯಾಯರುಗಳನ್ನು ಕಂಡು ವಿಚಾರಿಸಿದ ಬಳಿಕ, ನಗರದ ಬೀದಿಬೀದಿಗಳಲ್ಲಿ ಸುತ್ತಾಡಿದ್ದಾಯ್ತು. ಎಲ್ಲಿಯೂ ರಾಮುವಿನ ಸುಳಿವಿಲ್ಲ. ತಮ್ಮ ಪ್ರಯತ್ನವೆಲ್ಲ ಮುಗಿದ ಮೇಲೆ, ಮನೆಗೆ ಹೋಗಿ ಮರುದಿನ ಬರುವುದೆಂದು ಯೋಚಿಸಿದಾಗಲೇ ಆಫೀಸಿನ ಜವಾನನೊಬ್ಬ ಸಿಕ್ಕಿ ಹೇಳಿದ "ಸ್ವಾಮಿ, ಮಧ್ಯಾಹ್ನ ಯಾರ ಜೊತೆಗೋ ರಾಮು ಹೋಗುತ್ತಿದ್ದುದನ್ನು ಕಂಡೆ. ಇಬ್ಬರೂ ಊರ ಬಯಲಿನ ಕಡೆ ಹೋಗುತ್ತಿದ್ದರು. ಬಹುಶಃ ಅವರ ನೆಂಟರಿರಬೇಕು ಎನಿಸಿತು ನನಗೆ."

ಆ ಕ್ಷಣವೇ ಊರ ಬಯಲಿನತ್ತ ಹೊರಟಿತು ಕಾರು. ಎಲ್ಲಿಯೂ ಬಾಲಕನ ಸುಳಿವಿಲ್ಲ. ಅನಂತರ ಪೋಲೀಸಿಗೆ ದೂರುಕೊಟ್ಟು, ಮೋಹಿನಿಗೆ ಮರುದಿನ ಹುಡುಕುವ ಭರವಸೆಯನ್ನು ನೀಡಿ. ಅವಳನ್ನು ಮನೆಗೆ ಹಿಂದಿರುಗಿಸಿ ತಾವು ಪದ್ಮಾಲಯಕ್ಕೆ ಹಿಂದಿರುಗಿದಾಗ ರಾತ್ರಿ ಹನ್ನೆರಡು ಗಂಟೆ.

ರಾತ್ರಿ ಉರುಳಿತು. ಮರುದಿನ ಹೆಜ್ಜೆ ಮುಂದಿಡುತ್ತಿದೆ. ಬಾಲರವಿ ಉದಯ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತಿದ್ದಾನೆ.

ಭೀಮು ಬುಸುಗುಡುತ್ತ ಓಡಿಬಂದ.

"ರಾಮು ಹಿಂದಿರುಗಲಿಲ್ಲ; ಅಮ್ಮ ನಿಮಗೆ ಹೇಳಿಬಾ ಎಂದರು ನನಗೆ."

ರಾಮನಾಥ ಪ್ರಾತಃರ್ವಿಧಿಗಳನ್ನು ಪೂರೈಸಿದ. ಅಷ್ಟರಲ್ಲಿ ಇನ್ನೇನು ಹೊರಡಬೇಕು ನಗರಕ್ಕೆ. ದೇವಯ್ಯ ಅಂದ "ನೀವೇನೋ ತಯಾರಿದ್ದೀರಿ. ಮೋಹಿನಿ ಮನೆಮುಂದಿಗೆ ಅಡಿಗೆ ಮಾಡಿಟ್ಟು ಹೋಗಬೇಕೇನೋ. ನೀವು ಸ್ವಲ್ಪ ನಿಧಾನಿಸಿದರೆ ಒಳ್ಳಿತು."

ಅದಕ್ಕೇ ಒತ್ತುಕೊಟ್ಟಳು ಕುಮುದ್ವತಿ. ಎಲ್ಲರ ಉಪಹಾರವೂ ಮುಗಿಯಿತು. ಇನ್ನು ಹೊರಡುವುದೆಂದು ತೀರ್ಮಾನಿಸಿದ್ದಾಗಲೇ ಡ್ರೈವರ್

ಪುಟ್ಟಸ್ವಾಮಿ ಆಗಮಿಸಿದ. ಅವನಿಗೂ ರಾಮುವಿನ ವಿಷಯ ತಿಳಿದು ಆಶ್ಚರ್ಯ.

ಮೋಹಿನಿ ನೀರುಗಣ್ಣಾಗಿ ಬಂದು ಹೇಳಿದಳು "ಸತ್ಯ–ಭೀಮರವರು ಇಲ್ಲೆಲ್ಲಾ ಹುಡುಕಾಡಿ ಬಂದಿದ್ದಾರೆ. ಎಲ್ಲಿಯೂ ಸಿಗಲಿಲ್ಲವಂತೆ." ದನಿ ಗದ್ಗದಿಸಿತು ದುಃಖ-ಸಂಕಟಗಳು ಕೊರಳೊತ್ತುತ್ತಿತ್ತಿನೆ.

"ರಾಮು ತೀರ ಚಿಕ್ಕವನೇನಲ್ಲ. ಏಕಷ್ಟು ಭಯ ಬೀಳುತ್ತೀರಿ. ಪ್ರಯತ್ನ ಪಟ್ಟರೆ ಅವನು ಎಲ್ಲಿದ್ದರೂ ತಪ್ಪಿಸಿಕೊಂಡು ಬರಬಹುದು. ನಾವೂ ನಮ್ಮಿಂದ ಸಾಧ್ಯವಾದಷ್ಟು ಹುಡುಕೋಣ. ದೇವರಿದ್ದಾನೆ, ಅವನನ್ನು ನಂಬಿ. ಅವನು ನಿಮಗೆ ಸಹಾಯ ಮಾಡುತ್ತಾನೆ." ಸಮಾದಾನ ಹೇಳಿದ ರಾಮನಾಥ.

ಆದರೆ, ಅವಳ ಧೈರ್ಯ ಉಡುಗಿ ಹೋಗಿದೆ. ವ್ಯಾಪ್ತಿಗೆ ಮೀರಿ ದಡದಡನೆ ಮಿಡಿಯುವ ಹೃದಯವನ್ನು ಕೈಯಿಂದ ಅದುಮಿ ಹಿಡಿದು ನೈಹುದುಡಿದ್ದಾಳೆ ಸಣ್ಣಗೆ ನಡುಗುತ್ತ.

"ನೀನು ಇಷ್ಟು ಅಧೈರ್ಯ ತಾಳಿದರೆ ಹೇಗೆ? ಖಂಡಿತ ದೇವರ ಮೇಲೆ ಭಾರ ಹಾಕಿಬಿಡಿ. ಈಗ ನೀವು ಮಾಡಬೇಕಾದುದು ಅದೇ."

"ಅಯ್ಯೋ ನನ್ನ ರಾಮು...!" ಪ್ರಲಾಪಿಸಿದಳು ಅವಳು.

ರಾಮನಾಥ ಪೋಲೀಸ್ ಠಾಣೆಗೆ ರಿಂಗ್ ಮಾಡಿ ಕೇಳಿದ "ರಾಮುವಿನ ಸುದ್ದಿ ಏನಾದರೂ ತಿಳಿದುಬಂತೇ?" ಎಂದು.

"ಇಲ್ಲ ಸ್ವಾಮಿ, ಇನ್ನೂ ತಿಳಿದು ಬರಲಿಲ್ಲ. ಪೋಲೀಸರು ಬೀದಿ ಬೀದಿಯನ್ನೂ ಶೋಧಿಸುತಿದ್ದಾರೆ. ಸಿಕ್ಕಿದೊಡನೆಯೇ ನಿಮಗೆ ಸುದ್ದಿ ಕೊಡುವೆ."

"ದೇವರಿದ್ದಾನೆ...ನಾವೂ ಹೋಗಿ ಹುಡುಕೋಣ.ಹೆದರಬೇಡ,ಧೈರ್ಯವಾಗಿರು." ಮತ್ತೆ ಮತ್ತೆ ಸಮಾಧಾನ ಹೇಳಿದ ರಾಮನಾಥ ಮೋಹಿನಿಗೆ.

ಅವಳಿಗೆ ಯಾರು ಯಾರು ಎಷ್ಟೆಷ್ಟು ಧೈರ್ಯ ಹೇಳಿದರೂ ವ್ಯರ್ಥವೇ. ಒಂದೇ ಸಮನೆ ಕಂಬನಿ ಮಿಡಿಯುತಿದ್ದಾಳೆ. ಹೆದರಿ ಹೈರಾಣಾದ ಜೀವ ಸಣ್ಣಗೆ ವಿಕಂಪಿಸುತ್ತಿದೆ.

ಮೂರು ದಿನಗಳ ಹುಡುಕಾಟ ಮುಗಿಯಿತು. ಎಲ್ಲಿಯೂ ರಾಮುವಿನ ಸುಳಿವು ಸಿಕ್ಕಲಿಲ್ಲ. ಎಲ್ಲಾದರೂ ಊರು ಬಿಟ್ಟು ಹೊರಟುಹೋಗಿದ್ದಾನೋ ಎಂಬ ಅನುಮಾನ ಎಲ್ಲರಿಗೆ. ಪೋಲೀಸರು ಪ್ರಯತ್ನ ಕೈಬಿಟ್ಟಿಲ್ಲ. ಎಲ್ಲ ಕಡೆಗಳಲ್ಲೂ ಹುಡುಕಿಸುತ್ತಲೇ ಇದ್ದಾರೆ. ಎಲ್ಲ ಕಡೆಗೂ ಸುದ್ದಿ ಹರಿದಾಡುತ್ತಿದೆ ತಂತಿ ಮೂಲಕ.

೦　　೦　　೦　　೦

ಬೆಳಗಿನ ಒಂಭತ್ತರ ಸಮಯ.

ವಸಂತ ಬಿರುಗಾಳಿಯಂತೆ ನುಗ್ಗಿ ಬಂದ. ಹಿಂದಿನ ದಿನ ಕುಡಿದ ಅಮಲು ಪೂರ್ತಿ ಇಳಿದಿರಲಿಲ್ಲವೋ, ಅಥವಾ ಹೊಸದಾಗಿ ಕುಡಿದಿದ್ದನೋ, ಅಂತೂ ಅಮಲಿನ ಕಂಠದಲ್ಲಿಯೇ ಒದರಿದ,

"ರಾಮು ಕಳೆದುಹೋಗಿರುವುದಕ್ಕೆ ನಿನ್ನ ಆಳುಗಳೇ ಕಾರಣ! ನಿನ್ನ ಆಳೊಬ್ಬ ಅವನನ್ನು ಕರೆದೊಯ್ದಿದ್ದಾನೆಂದು ಸುದ್ದಿ. ಅವನನ್ನು ಶೀಳಿ ತೋರಣ ಕಟ್ಟದಿದ್ದರೆ ಕೇಳು!"

ಅವನು ಮೆಟ್ಟಲೇರಿ ಮೈಮೇಲೆಯೇ ನುಗ್ಗಿದ. ಆಗ ಅಲ್ಲಿದ್ದ ಡ್ರೈವರ್ ಮತ್ತು ಆಳುಗಳು ಅಡ್ಡಗಟ್ಟಿ ಹೊರ ತಳ್ಳಿದರು. ಅವನ ಉಗ್ರರೂಪವನ್ನು ನೋಡುತ್ತಿದ್ದ ಸೀತಮ್ಮ ಮತ್ತು ಕುಮುದ್ವತಿಯರು ಭಯಗ್ರಸ್ತರಾಗಿದ್ದಾರೆ. ಇವನೇನು ಹುಚ್ಚನೋ ಮರುಳೋ ಎಂದು ಯೋಚಿಸುವಂತಹ ಸನ್ನಿವೇಶ.

ಕುರ್ಚಿಯ ಮೇಲೆ ಕುಳಿತಿದ್ದ ರಾಮನಾಥ ಅಲ್ಲಿಂದಲೇ ಗದರಿದ.

"ಏಕೆ ಸುಮ್ಮಸುಮ್ಮನೇ ರೇಗುತ್ತಿದ್ದಿ? ನಮ್ಮ ಆಳಿಗೇಕೆ ಬೇಕು ನಿನ್ನ ಮಗ? ಹೋಗಿ ಸರಿಯಾಗಿ ಹುಡುಕು. ನಿನ್ನ ಕರ್ತವ್ಯ ನೀನು ಮಾಡದೆ ಇಲ್ಲಿಗೇಕೆ ಬಂದೆ? ಹೋಗು, ಹೋಗು!"

ಆದರೆ....

ಆ ಮಾತು ಅವನ ತಲೆಗೆ ಹೋಗಬೇಕಲ್ಲ. ಒಂದೇ ಸಮನೆ ಕೂಗಾಡುತ್ತಿದ್ದಾನೆ. ಬಾಚದ ಕೂದಲು, ಅಸ್ತವ್ಯಸ್ತ ಉಡುಪು, ಹುಚ್ಚನಿಗೆ ಉಪಮಾನ

ವಾಗುವಷ್ಟು ಹೀನ. ಆ ಕೂಡಲೇ ಅಲ್ಲಿದ್ದ ಆಳುಗಳು ಅವನನ್ನು ದಬ್ಬಿಕೊಂಡೇ ಹೋಗಿ ತೋಟದಾಚೆಗೆ ಬಿಟ್ಟು ಪ್ರಾಕಾರದ ಬಾಗಿಲು ಹಾಕಿಕೊಂಡು ಬಂದರು.

"ಶ್ರೀ ಹರಿ! ಇವನೆಂಥ ಮನುಷ್ಯ. ಇದುವರೆಗೆ ನಾವೇ ಹುಡುಕಿ ಸೋತಿದ್ದೇವೆ ಇವನನ್ನು ನೋಡಿದರೆ ಹೀಗಾಡುತ್ತಿದ್ದಾನೆ! ಎಂಥ ಅಲ್ಪಮತಿ! ಛೀ! ಛೀ! ಮನುಷ್ಯನೇ ಅಲ್ಲ ಇವನು!"

ದೇವಯ್ಯನ ಮಾತಿಗೆ ರಾಮನಾಥ ದನಿಗೂಡಿಸಿದ "ಇದುವರೆಗೆ ಕುಡಿದು ಬಿದ್ದವನು, ಎಲ್ಲೋ ಅಮಲು ಇಳಿದಾಗ ಸುದ್ದಿ ತಲೆಗೆ ಹೊಕ್ಕಿದೆ. ನಮ್ಮ ಮೇಲೆ ಸೇಡು ತೀರಿಸಲು ಬಂದಿದ್ದಾನೆ ಮೂರ್ಖ!"

"ಈ ದುಸ್ಥಿತಿಗೆ ಕಾರಣವನ್ನು ಹುಡುಕಹೋದರೆ ನಮಗೆ ಕಂಡುಬರುವುದೇನು? ವರ್ತಮಾನ ಯುಗಧರ್ಮವೇ? ಅಥವಾ ಸ್ವಾತಂತ್ರ್ಯಾನಂತರದ ಸ್ವೇಚ್ಛಾಪ್ರವೃತ್ತಿಯೇ? ಅಥವಾ ಧರ್ಮಹೀನ ಸರಕಾರವೇ? ಅಥವಾ ಅನೀತಿಯ ದುರ್ವ್ಯವಹಾರವೇ? ಏನಿರಬಹುದು? ಪ್ರಸ್ತುತ, ಎಲ್ಲೆಲ್ಲೂ ಅನೀತಿ ಅನಾಚಾರಗಳೇ ಕಂಡುಬರುತ್ತಿವೆ. ಅವಿದ್ಯಾವಂತರ ಕಥೆ ಒತ್ತಟ್ಟಿಗಿರಲಿ, ವಿದ್ಯಾವಂತರೂ ಈ ಬಣದಲ್ಲಿದ್ದಾರೆ. ಈ ಸಮಸ್ಯೆಯನ್ನು ಬಗೆಹರಿಸಿ ದೇಶದಲ್ಲಿ ಶಾಂತಿ ತರುವುದು ಸಾಮಾನ್ಯವಲ್ಲ. ದೇವರೇ ಕಾಪಾಡಬೇಕು!"

ಹೊರಗೆ ತಲೆ ಎತ್ತಿ ನೋಡಿ "ಓ, ತುಂಬಾ ಹೊತ್ತೇರಿದೆ.......ಈ ಹಗರಣದಲ್ಲಿ ಸಮಯ ಉರುಳಿದ್ದೇ ತಿಳಿಯಲಿಲ್ಲ." ಎಂದಳು ಸೀತಮ್ಮ.

ಅಲ್ಲಿಯೇ ಬೆಕ್ಕಸ ಬೆರಗಾಗಿ ನಿಂತಿದ್ದ ರಂಗಮ್ಮ ಅರ್ಧಂಬರ್ಧಕ್ಕೆ ನಿಂತು ಹೋಗಿದ್ದ ತನ್ನ ಕೆಲಸವನ್ನು ಮುಗಿಸಲು ಒಳ ಹೋದಳು. ಸೀತಮ್ಮನ ಮಾತಿನಿಂದ ಎಚ್ಚತ್ತು, ನಂದಿಸಿದ ಒಲೆಯನ್ನು ಉರಿಸಿ ಅಡಿಗೆಗೆ ಕೈಹಚ್ಚಿದಾಗ ಒಳಬಂದ ಸೀತಮ್ಮ ಮತ್ತು ಕುಮುದ್ವತಿಯರೂ ಅವಳೊಂದಿಗೆ ಕೂಡಿಕೊಂಡರು. ಒಳಗಣ ಕೆಲಸ ಕಾರ್ಯಕ್ಕೆ.

ಒಂದೇ ಉಸಿರಿಗೆ ಕುಮುದ್ವತಿ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿ

ದಳು "ನಾವು ಎಂಥ ಮೂರ್ಖನಿಗೆ ಸಹಾಯ ಮಾಡುತ್ತಿದ್ದೇವೆ? ಇಷ್ಟಕ್ಕೇ ಮುಗಿಯಲಿಲ್ಲ ಬಿಡಿ. ಅದೇ ವ್ಯಸನ."

"ಇದು ಕಲಿಯುಗ!" ಎಂದಳು ರಂಗಮ್ಮ.

o o o o

ಗ್ರಾಮೀಣ ಮಂದಿಗೆ ಕುಮುದ್ವತಿಯಲ್ಲಿ ಅಪಾರ ಗೌರವ ಹಾಗೂ ಕುತೂಹಲ. ಇಂತಹ ದಿಟ್ಟ ಮಾನಿನಿಯನ್ನು ನಾವು ಕಂಡಿರಲಿಲ್ಲ. ಇವರಿಂದ ನಾವು ಕಣ್ತೆರೆಯುವಂತಾಯಿತು. ದೇವರು ಈ ಒಡತಿಯನ್ನು ಚೆನ್ನಾಗಿಟ್ಟಿರಬೇಕು....ಎಂದು ಹರಸಿಕೊಳ್ಳುವುದು ಸರ್ವೇ ಸಾಮಾನ್ಯ. ಸಂಜೆಯಲ್ಲಿ ಗಾಳಿ ಸವಾರಿಗೆ ಹೊರ ಹೊರಟರೆ ಮನೆ ಮನೆಯಿಂದಲೂ ಹೊರಬೀಳುವ ಸ್ತ್ರೀ ಪುರುಷರು ಕೈಮುಗಿದು ಕುತೂಹಲ ಗೌರವಗಳಿಂದ ನೋಡುವುದಲ್ಲದೇ "ಒಂದು ಗುಟುಕು ಹಾಲು ಕುಡಿದು ಹೋಗಿ" ಎಂದು ವಿನಯದಿಂದ ವಿನಂತಿಸಿಕೊಳ್ಳುತ್ತಾರೆ. ಮುಖ ಬಿಂಬದಲ್ಲಿ ಆನಂದ ಕಳೆಯನ್ನು ಬೆಳಗಿ.

ಕುಮುದ್ವತಿ ಎಲ್ಲರಿಗೂ ಪ್ರತಿವಂದಿಸಿ ಕ್ಷೇಮಸಮಾಚಾರ ನಡೆಸಿ ಅವರವರ ಸ್ಥಿತಿಗತಿಯನ್ನು ವಿಚಾರಿಸಿಕೊಂಡು ಮುಂಬರಿಯುತ್ತಾಳೆ.

"ಏನ್ರಮ್ಮಾ ಎಲ್ಲಾ ಸೌಖ್ಯವೇ?"

ಕುಮುದ್ವತಿಯೇ? ಮುಂದಾಗಿ ಮಾತಾಡಿಸಿದಾಗ ನಾಚಿಕೆಯಿಂದ "ಅಯ್ಯೋ, ಬಿಡಿ. ನಮ್ಮದೇನು ಚೆಂದ ಅಮ್ಮಣ್ಣಿ? ನಿಮ್ಮಂತಹವರು ಚೆನ್ನಾಗಿದ್ದರೆ ನಮಗೆ ಉಪಕಾರವಾಗುತ್ತೆ."

"ನೀವು ಚೆನ್ನಾಗಿದ್ದರೂ ನಿಮ್ಮಿಂದ ನಮಗೆ ಉಪಕಾರವೇ. ಆದ್ದರಿಂದ ನೀವೂ ಚೆನ್ನಾಗಿರಬೇಕು."

"ನಾವು ಬಡವರು. ಹೇಗಿದ್ದರೇನು ಅಮ್ಮಣ್ಣಿ?"

"ಅಯ್ಯಯ್ಯೋ, ಹಾಗೆಂದರೇನು? ಶ್ರೀಹರಿ ನಿಮ್ಮನ್ನು ಚೆನ್ನಾಗಿಟ್ಟಿರಬೇಕು. ನೀವು ಚೆನ್ನಾಗಿರುವುದನ್ನು ನೋಡುತಿದ್ದರೆ ನಮಗೂ ಸಂತೋಷ."

"ದೇವರು ಮೊದಲು ನಿಮ್ಮನ್ನು ಚೆನ್ನಾಗಿಟ್ಟಿರಬೇಕು ಅಮ್ಮಣ್ಣೀ!"

"ನಿಮ್ಮನ್ನೂ ಕೂಡಾ."

ಅವಳು ನಕ್ಕುಬಿಟ್ಟಳು.

ಹೀಗೆಯೇ ಉರುಳುತ್ತವೆ ದಿನವಾನಗಳು ಪರಸ್ಪರ ಸ್ನೇಹಾಚಾರದಲ್ಲಿ.

ಮೂರು ದಿನಗಳಿಂದ ರಾಮುವಿನ ಸುದ್ದಿ ಏನೇನೂ ತಿಳಿದುಬರಲಿಲ್ಲ. ಹುಡುಕುವಿಕೆಯೂ ನಿಂತಿರಲಿಲ್ಲ. ಊರು ಕೇರಿಗಳ ಶೋಧನೆ ನಡೆಯುತ್ತಲೇ ಇದೆ.

ಬೆಳಗ್ಗೆ ಇನ್ನೂ ಹೊತ್ತೇರುವ ಮುನ್ನ ಬಂದಿದ್ದಾಳೆ ಮೋಹಿನಿ. ಕಣ್ಣುಗಳು ತೊಯ್ದು ರಂಗು ರಂಗಾಗಿವೆ. ಕೈಯ್ಯಲ್ಲೊಂದು ಕಾಗದ. ಕಂದಿಕುಂದಿದ ಶರೀರ, ಮುಖಬಿಂಬ.

ಮೆಟ್ಟಿಲಲ್ಲೇ ಎದುರಾದ ದೇವಯ್ಯ ಕೇಳಿದ,

"ಮೋಹಿನೀ, ಮಗನ ಸುಳಿವು ಸಿಕ್ಕಿತೇ?"

ಅವಳು ಕೈಯ್ಯಲ್ಲಿದ್ದ ಕಾಗದವನ್ನು ಕೊಟ್ಟು ಕಣ್ಣುಗಳನ್ನು ಹೀರಿ ಕೊಂಡಳು. ಹೃದಯ ಕುಂಡ ಕಲ್ಲು ಹೊತ್ತಷ್ಟು ಭಾರಾತಿಭಾರ, ಬಾಯಿ ಬಿಡುವುದೇ ಕಷ್ಟ.

ಕಾಗದದಲ್ಲಿದ್ದುದು ಎರಡು ಪಂಕ್ತಿ ಮಾತ್ರ "ನಾಡಿದ್ದು ಬುಧವಾರ ಆಲದಮರದಡಿಯ ಹಾಸುಗಲ್ಲಿನ ಮೇಲೆ ಐವತ್ತು ಸಾವಿರ ರೂಪಾಯಿಗಳನ್ನು ಚೀಲದಲ್ಲಿ ತುಂಬಿಟ್ಟು ಹೋದರೆ ಸಂಜೆಯ ಹೊತ್ತಿಗೆ ರಾಮುವನ್ನು ಬಿಡುಗಡೆ ಮಾಡಲಾಗುತ್ತೆ, ಇಲ್ಲದಿದ್ದರೆ ಹುಡುಗನನ್ನು ಕೊಲ್ಲುವೆ. ಪೋಲೀಸಿಗೆ ದೂರು ಕೊಟ್ಟರೆ ನಿಮ್ಮ ಗತಿ ಮುಗಿಸಿಬಿಡುತ್ತೇನೆ! ಎಚ್ಚರಿಕೆ!!"

ಅವರ ಮನೆಯಿಂದ ಒಂದು ಫರ್ಲಾಂಗ್ ದೂರದಲ್ಲಿ ಮಾವಿನಮರದ ತೋಪು. ಅಲ್ಲಿ ಹಣವನ್ನು ಇಟ್ಟು ಬಂದರೆ ಮಗ ಬದುಕಬಲ್ಲ. ಅಷ್ಟು ಹಣವನ್ನು ತರುವುದಾದರೂ ಎಲ್ಲಿಂದ?

ಹಣೆ ಚಚ್ಚಿಕೊಂಡು ಒಡಲ ಸಂಕಟವನ್ನು ತೋಡಿಕೊಂಡಳು ಅವಳು.

ಒಳಗಿನಿಂದ ರಾಮನಾಥ ಕುಮುದ್ವತಿಯರು ಹೊರಬಂದರು. ಹಿಂದೆಯೇ ಸೀತಮ್ಮ ಬಂದಳು. ಎಲ್ಲರ ಮುಖ ಭಾವದಲ್ಲೂ ಗಂಭೀರ ಚಿಂತನೆಯ ಮುದ್ರೆ.

ರಾಮನಾಥ ಕೇಳಿದ "ಈ ಕಾಗದ ಎಲ್ಲಿ ಸಿಕ್ಕಿತು ನಿನಗೆ ?"

"ಮನೆಯ ಮೆಟ್ಟಲಿನ ಮೇಲಿಟ್ಟು ಗಾಳಿಗೆ ಹಾರದಂತೆ ಸಣ್ಣ ಕಲ್ಲನ್ನು ಹೇರಲಾಗಿತ್ತು."

"ಆಲದಮರದ ತೋಪಿನಲ್ಲಿ ಒಂದು ಕಾಗದವನ್ನು ಬರೆದಿಡು. ಏನೆಂದರೆ:—ನೀವು ನಿಮ್ಮ ಹಣವನ್ನು ಒಯ್ಯಲು ಪದ್ಮಾಲಯಕ್ಕೆ ಬರಬೇಕು. ನೀವು ಸ್ವತಃ ಬಂದು ಹಣ ತೆಗೆದುಕೊಳ್ಳಿ. ಪದ್ಮಾಲಯದಲ್ಲಿ ನಿಮಗಾಗಿ ಹಣ ಇಟ್ಟಿರುತ್ತಾರೆ."

"ಅದು ಗಾಳಿಗೆ ಹಾರಿಹೋಗದಂತೆ ಒಂದು ಕಲ್ಲನ್ನು ಹೇರಿಡು. ನೋಡೋಣ ಏನು ಬರೆಯುತ್ತಾನೋ......."

"ತಡ ಮಾಡಿದರೆ ರಾಮುವಿನ ಗತಿಯೇನೋ..."

"ಹೆದರಬೇಡ, ನೀನು ಬರೆದಿಟ್ಟು ಬಾ. ಯಾರಿಗೂ ಸುದ್ದಿ ಕೊಡಬೇಡ, ಏನುತ್ತರ ಬರೆಯುತ್ತಾನೋ ಬಂದು ಹೇಳು. ಹೆದರಬೇಡ, ಧೈರ್ಯವಾಗಿರು."

ದೇವಯ್ಯ ದನಿಗೂಡಿಸಿದ "ಹೌದು ಮೋಹಿನೀ, ಹಾಗೇ ಮಾಡು. ಅದರ ಪರಿಣಾಮವನ್ನು ಕಾದು ನೋಡೋಣ."

ಅವಳು ಅಳುತ್ತಳುತ್ತ ನುಡಿದಳು, "ತಂದೆಯಾದವರಿಗೆ ಕಾಗದ ನೋಡಿಯೂ ಲಕ್ಷ್ಯವಿಲ್ಲ. ನಾನು ನಿಸ್ಸಾಯಕಿ, ನಮ್ಮ ತೊಂದರೆಗೆ ಮನ್ನಿಸಿರಿ."

"ಹುಡುಕನಿಗೆ ಏನು ತಿಳಿಯುತ್ತೆ ಹೇಳು ? ನೀನು ಧೈರ್ಯವಾಗಿರು. ದೇವರಿದ್ದಾನೆ."

ಅವಳು ಹೋದನಂತರ ದೇವಯ್ಯ ಒಬ್ಬನೇ ನಗರಕ್ಕೆ ಹೋಗಿ ಪೋಲೀಸಿಗೆ ಸುದ್ದಿಯನ್ನು ಸೂಕ್ಷ್ಮವಾಗಿ ತಿಳಿಸಿದ. ಪೋಲೀಸರು ಅವನನ್ನು

ಹಿಡಿಯಲು ಮಫ್ತಿಯಲ್ಲಿ ಹೊಂಚು ಹಾಕಿದರು. ರಾಮನಾಥ ಪೋಲೀಸರಿಗೆ ಸೂಕ್ಷ್ಮವಾಗಿರಲು ಹೇಳಿಕೊಂಡ.

ಆ ಕಾಗದವನ್ನು ನೋಡಿಕೊಂಡ ನಂತರ ಅವನಿಂದ ಮತ್ತೊಂದು ಕಾಗದ ಬಂತು. ಅದನ್ನೂ ಮೆಟ್ಟಿಲಿನ ಮೇಲೆಯೇ ಇಟ್ಟಿದ್ದ. ಅದರಲ್ಲಿ ಹಣವನ್ನು ಬುಧವಾರ ಮಾವಿನ ತೋಪಿನಲ್ಲಿಯೇ ಇಡತಕ್ಕದ್ದು. ನಾನು ಬೇರೆಲ್ಲಿಗೂ ಬರುವುದಿಲ್ಲ. ಎಚ್ಚರಿಕೆ! ಪೋಲೀಸಿಗೆ ಸುದ್ದಿ ಕೊಡಬಾರದು.

ಅವಳು ಆ ಕಾಗದವನ್ನು ಕೈಕೊಂಡು ನೇರವಾಗಿ ಪದ್ಮಾಲಯಕ್ಕೇ ಬಂದಳು. ಮುಖಮುದ್ರೆಯೇ ಹೇಳುತ್ತಿದೆ ಒಡಲ ಸಂಕಟವನ್ನು. ಕುಮುದ್ವತಿ ಕಾಗದವನ್ನು ಈಸಿಕೊಂಡು ನೋಡಿ ರಾಮನಾಥನ ಕೈಗಿಟ್ಟು ಒಂದು ಕ್ಷಣ ಕಣ್ಣುಮುಖಗಳಲ್ಲಿ ಅತ್ಯಾಶ್ಚರ್ಯದ ಮುದ್ರೆಯೊತ್ತಿ "ಹಾ! ಏನು ಧೈರ್ಯ!" ಎಂದು ಉದ್ಗಾರ ತೆಗೆದಳು. ತನುಮನಗಳಲ್ಲಿ ಭಯ ಭೀತಿಯ ಛಾಯೆ ವ್ಯಾಪಿಸಿತು.

ರಾಮನಾಥ ಗಂಭೀರಭಾವದಿಂದ ಅಂದ "ನೀನು ನಿಮ್ಮ ಕೇಳಿಕೆಯ ಪ್ರಕಾರ ಆಲದಮರದ ತೋಪಿನಲ್ಲಿ ಹಣವನ್ನು ಇಟ್ಟು ಬರುವೆ. ರಾಮು ವನ್ನು ತಕ್ಷಣವೇ ಬಿಡುಗಡೆ ಮಾಡಿ. ಎಂದು ಕಾಗದ ಬರೆದು ಆಲದ ಮರದ ಬುಡದಲ್ಲಿ ಇಡು. ನಾನು ಹಣವನ್ನು ಇಟ್ಟು ಮುಂದಿನ ಕೆಲಸ ನೋಡಿಕೊಳ್ಳುವೆ."

"ಹಾಗೆಂದು ಬರೆದು ಇಡಲೇ ಮಾವಾ?"

"ಇಡು....ಮುಂದಿನದನ್ನು ನಾನು ನೋಡಿಕೊಳ್ಳುವೆ."

ಅವಳು ಮನದಲ್ಲಿ ಸುಖದುಃಖಗಳನ್ನು ತುಂಬಿಕೊಂಡು ಹೊರಟಳು. ಹಲವಾರು ದೇವರನ್ನು ನೆನೆಯಿತು ಹೃದಯದ ಹಕ್ಕಿ.

ಬುಧವಾರ ಬಂದೇ ಬಂತು!

ಸಾಯಂಸಮಯದಲ್ಲಿ ಬಾಯಿಕಟ್ಟಿದ ದಪ್ಪನೆಯ ಚೀಲವೊಂದನ್ನು, ಆಲದ ತೋಪಿನಲ್ಲಿ ಇರಿಸಿದ ಬಳಿಕ ಎಲ್ಲರೂ ಕಣ್ಮರೆಯಾದರು. ದೂರದೂರ

ದಲ್ಲಿ ಮಫ್ತಿಯಲ್ಲಿದ್ದ ಪೋಲೀಸರು ಅಡಗಿದ್ದು ಸೂಕ್ಷ್ಮಾತಿಸೂಕ್ಷ್ಮವಾಗಿ ಕಣ್ಣಿಟ್ಟರು ಕಳ್ಳನ ಮೇಲೆ. ಕತ್ತಲು ಕವಿಯುವ ಮುನ್ನ ಹಣ ಒಯ್ಯಲು ಬಂದ ಕಳ್ಳ ಸಿಕ್ಕಿಬಿದ್ದ! ಅವನನ್ನು ಹಿಡಿದು ಚೆನ್ನಾಗಿ ಥಳಿಸಿ ಅವನೊಡನೆ ಅವನು ಹೇಳಿದ ಸ್ಥಳಕ್ಕೆ ಧಾವಿಸಲು ಅಣಿಯಾದರು ಪೋಲೀಸರು. ನಗರ ದಿಂದಾಚೆಯ ಹಳ್ಳಿ ರಾಮಪುರದಲ್ಲಿ ಅವನ ತಮ್ಮನ ಮನೆ. ಯಾರಿಗೂ ತಿಳಿಯದಂತೆ ಒಳಕೋಣೆಯಲ್ಲಿ ರಾಮುವನ್ನು ಬಚ್ಚಿಟ್ಟಿದ್ದ ಕಳ್ಳ. ಅವನು ವಿಳಾಸವನ್ನು ತಿಳಿಸುತ್ತಲೂ ರಾಮನಾಥ ದಂಪತಿಗಳು ಮೋಹಿನಿ ಮತ್ತು ಸತ್ಯುವಿನೊಂದಿಗೆ ಅಲ್ಲಿಗೆ ಹೊರಟರು ಕಾರಿನಲ್ಲಿ. ಕಳ್ಳನೊಂದಿಗೆ ಪೋಲೀಸ್ ಜೀಪು ಮುಂದೆ. ಮೋಹಿನಿಯೊಂದಿಗೆ ರಾಮನಾಥನ ಕಾರು ಹಿಂದೆ. ನೂರು ಮೈಲಿಯಂತರದ ತಾಣವನ್ನು ಮುಟ್ಟಿದಾಗ ಮಧ್ಯರಾತ್ರಿ. ರಾಮು ಬಹಳ ವಾಗಿ ಹೆದರಿದ್ದರೂ ತನ್ನವರನ್ನು ನೋಡಿ ಬೇಗನೆ ಚೇತರಿಸಿಕೊಂಡ. ದುಃಖ ನಗು ಎರಡೂ ಒಮ್ಮೆಲೇ ಉಕ್ಕಿಬಂದುವು ಮುಖಬಿಂಬಕ್ಕೆ. ಓಡಿಬಂದು ತಾಯಿ ಯನ್ನು ತಬ್ಬಿ ಬಿಕ್ಕಿದ. ಅಳುತ್ತಲೇ ನಕ್ಕ, ನಗುತ್ತಲೇ ಬಿಕ್ಕಿದ, ಎಲ್ಲರೂ ಸಂತೈಸಿದರು.

ಕಳ್ಳ, ಮನೆಗಳನ್ನು ಕಟ್ಟುವ ಕೂಲಿಯಾಳು. ಮದರಾಸ್ ಪ್ರಾಂತ್ಯ ದಿಂದ ಬಂದ ತಮಿಳು ಭಾಷೆಯವ. ಮನೆ ಕಟ್ಟುವವನಾಗಿ ಅದೇ ಪ್ರಾಂತ್ಯ ದಲ್ಲಿ ಬಹಳ ಕಾಲದಿಂದ ಇದ್ದವ. ಅವನು ಇಂತಹ ಕೆಲಸ ಮಾಡಿಯಾನು ಎಂದು ಭಾವಿಸಿರದ ಎಲ್ಲರಿಗೂ ಆಶ್ಚರ್ಯವೋ ಆಶ್ಚರ್ಯ!

"ಶ್ರೀಹರೀ! ಇವನು ಇಂತಹ ಕೆಲಸ ಮಾಡಿದನೇ?" ಎಂದು ಕೇಳಿ ದಳು ಕುಮುದ್ವತಿ.

ರಾಮುವನ್ನು ಬರಮಾಡಿಕೊಂಡನೇಲೆ ರಾಮನಾಥ ಕಳ್ಳನನ್ನು ಕೇಳಿದ "ನಿನ್ನ ಹೆಸರೇನು?"

ಅವನು ಬಾಗಿದ ತಲೆಯೆತ್ತದೆ ಉತ್ತರಿಸಿದ "ಪೆರುಮಾಳ್."

"ನೀನು ಇಷ್ಟು ಹಣ ಪಡೆದುಕೊಂಡು ಏನು ಮಾಡುವ ಯೋಚನೆ ಯಲ್ಲಿದ್ದೆ?"

“ಮನೆ ಕಟ್ಟಿಕೊಳ್ಳುವ ಆಸೆಯಲ್ಲಿದ್ದೆ.”

“ಈಗ ಜೈಲಿನಲ್ಲಿ ಮನೆಕಟ್ಟು !”

ಅವನು ‘ಹೋ’ ಎಂದು ಅಳತೊಡಗಿದ.

ಪೋಲೀಸರು ಅವನೊಂದಿಗೆ ಅವನ ತಮ್ಮನನ್ನೂ ಜೀಪಿಗೆ ಕೂರಿಸಿಕೊಂಡು ಹೊರಟರು.

ಮಧ್ಯರಾತ್ರಿಯ ಬಳಿಕ ಕಾರು ಬಂದ ಹಾದಿಯನ್ನೇ ಹಿಡಿಯಿತು ಊರಿನ ಮಾರ್ಗವಾಗಿ. ಇಡೀ ರಾತ್ರಿಯ ಪಯಣ. ಆದರೂ ಭಯದ ಅಂಕ ಕಳೆದುಹೋದುದರಿಂದ ಎಲ್ಲರಿಗೂ ಸಮಾಧಾನ, ಹುರುಪು ಮೂಡಿ ಪಯಣದ ಆಯಾಸವನ್ನು ಕೊಚ್ಚಿಕೊಂಡು ಹೋಯಿತು. ಮೋಹಿನಿ ಸತ್ಯರವರಿಗೆ ಹೇಗೆ, ಯಾವ ರೀತಿಯಲ್ಲಿ ಕೃತಜ್ಞತೆ ಸಲ್ಲಿಸಬೇಕೋ ತಿಳಿಯದಾಗಿ ಸುಮ್ಮನೆ ಮೂಕಮೌನ ತಾಳಿದರು.

ಕಾರು ಊರು ಮುಟ್ಟಿದಾಗ ಬೆಳಿಗ್ಗೆ ಎಂಟರ ಸಮಯ.

ವಸಂತ ಅಂಗಳದ ಬೇಲಿಯ ಬದಿಯಲ್ಲಿ ನಿಂತಿದ್ದ. ಅವನ ಕಣ್ಣೆದುರಿಗೇ ಕಾರು ಬಂದು ನಿಂತಿತು. ಮಣ್ಣು ಹಾದಿಯಲ್ಲಿ ಪಯಣಿಸಿದ್ದ ನೀಲಿಯ ಕಾರಿಗೆ ಧೂಳಿನ ಸ್ನಾನವಾಗಿ ಕೆಂಧೂಳಿನ ವರ್ಣವನ್ನು ಮೈಗೊಂಡಿತ್ತು. ವಸಂತ ನೋಡಿಯೇ ನೋಡಿದ. ಮೋಹಿನಿ ಮಗನೊಂದಿಗೆ ಕಾರಿನಿಂದ ಇಳಿದಳು. ಸತ್ಯ ಹಿಂದೆಯೇ ಇಳಿದು ತಲೆಬಾಗಿ ನಿಂತ. ಸಂಕೋಚದಿಂದ ಜೀವ ಮುದುಡಿದಷ್ಟು ಲಜ್ಜೆಯ ಒತ್ತಡ. ತುಟಿಗಳು ಬಿರಿಯಲಿಲ್ಲ. ಮಾತಾಡಲೂ ಇಲ್ಲ. ತಲೆಯೆತ್ತಿ ನೋಡಲೂ ಇಲ್ಲ, ಲಜ್ಜೆಯ ಭಾರದಿಂದ ಮೂಕಮುದ್ರೆ ತಾಳಿದ ವಸಂತ.

ಚೋರೆ ಹಕ್ಕಿಗಳು ಗಿಡಮರಗಳಲ್ಲಿ ರೆಕ್ಕೆಯೊದರಿ ರಾಗಮಾಲೆಯನ್ನು ಹರಿಯಬಿಡುತ್ತಿವೆ, ಆನಂದರಸ ಸೂಸಿ. ಬೆಳಗಿನ ಸುಂದರ ವಾತಾವರಣವನ್ನು ಬೇಧಿಸುತ್ತ ಕಾರು ಹೊರಟಿತು ಪದ್ಮಾಲಯದಭಿಮುಖವಾಗಿ.

ರಾಮನಾಥ ಲೋಕಾಭಿರಾಮವಾಗಿ ಅಂದ "ನಾವು ಬಲವಂತದಿಂದ ಸಿಂಹವನ್ನು ಹಿಡಿದು ಬಂದಿಸಬಹುದು; ಪಳಗಿಸಬಹುದು. ಆದರೆ, ಬಲವಂತ ದಿಂದ ಒಂದು ಪುಟ್ಟ ಹೂವನ್ನು ವಿಕಸಿತಗೊಳಿಸಲಾರೆವು. ದೈವಸೃಷ್ಟಿಯ ಮುಂದೆ ನಾವೆತ್ತ?"

"ಆದರೂ, ತಾನೇ ತಾನಾಗಿ ಮೆರೆಯುವ ಜನರಿಗೇನನ್ನೋಣ?"

"ಅಂತಹವರೂ ಒಮ್ಮೆ ಪಾಠ ಕಲಿಯುತ್ತಾರೆ."

"ಸಕಾಲದಲ್ಲಿ ಕಲಿತರೆ ಏನಾದರೂ ಆದೀತು. ಕೊನೆಗಾಲದಲ್ಲಿ ಕಲಿ ತರೆ ಏನು ಪ್ರಯೋಜನ?"

"ಅದು ಸರಿ......"

ಕಾರು ಸಣ್ಣ ಸದ್ದಿನೊಡನೆ ಪೋರ್ಟಿಕೊದಲ್ಲಿ ಗಕ್ಕನೆ ನಿಂತಿತು.

ಮನೆಮಂದಿಯೆಲ್ಲಾ ಕುತೂಹಲದಿಂದ ಕಾರಿನ ಬಳಿಗೆ ಧಾವಿಸಿ ಬಂದರು.

— ೦ —

೨೧

......ಸ್ವರ್ಣವರ್ಣದಿಂದ ವಿಜೃಂಭಿಸುತಿದ್ದಾನೆ ಸಾಯಂ ಸೂರ್ಯ.

........ಪಶ್ಚಿಮ ದಿಗ್ದೇಶದ ತುಂಬೆಲ್ಲ ಕೆನ್ನೀಲ ಮೋಡಗಳ ಬೃಹದ್ ಗುಡಿಗೋಪುರಗಳೇ.

.......ವಿಶ್ವದಾದ್ಯಂತ ತುಂಬಿ ಹರಡಿದೆ ಸಂಧ್ಯಾ ಶಾಂತಿಯ ವೈಭವೀ ಕರಿಸಿದ ಸೌಂದರ್ಯರಾಶಿ.

ಕುಮುದ್ವತಿ ಕಿಟಕಿಯಲ್ಲಿ ಮೊಗವಿಟ್ಟು ಸ್ವರ್ಣಕಾಂತಿಯ ಸೂರ್ಯ ಪುತ್ಥಳಿಯಲ್ಲಿ ಗಮನವಿಟ್ಟಿದ್ದಾಳೆ. ಆ ಸ್ವರ್ಣಕಾಂತಿಯಲ್ಲಿ ಜಗತ್ತಿನ ಪಾಪ-ಪುಣ್ಯ, ದುಃಖ-ಕ್ಲೇಶ, ರಾಗ-ವಿರಾಗ, ಸುಖ ರೋಷಗಳು ಮುದುಡಿ ಕಾಂತಿ ವಿಹೀನವಾಗುತ್ತಿರುವಂತೆ ತೋರುತ್ತಿದೆ ಭಾವಾವೇಶಭರಿತ ಮನಸ್ಸಿಗೆ ತಮ್ಮ ತಮ್ಮ ಗೂಡುಗಳನ್ನು ಅರಸುತ್ತ ಪಕ್ಷಿಗಳ ಸಮಾಜ ಹರಿಯಬಿಡುತ್ತಿರುವ ರಾಗಾನುರಾಗಗಳ ಮೊಳಗು ಕರ್ಣಾನಂದಕರ. ಶಾಂತಿ ಸಮುದಾಯದಲ್ಲಿ ಶಾಂತಿಯನ್ನೇ ಸುಶಾಂತಗೊಳಿಸುವ ಸನ್ನಿವೇಶ.

ಇನ್ನೇನು ಸೂರ್ಯ ಮುಳುಗಲಿದ್ದಾನೆ. ಮುಸ್ಸಂಜೆ ಕವಿದು ಬರಲಿದೆ.

ಒಯ್ಯೊಯ್ಯನೆ ತೀಡಿ ಬರುವ ಮಂದ ಮಂದಾನಿಲನ ಚಾಮರ ಸೇವೆಯ ಸುಖಸ್ಪರ್ಶ ಸ್ನಿಗ್ಧ ಆಶೀರ್ವಾದದಂತೆ ಹಿತ ಮೈಮನಗಳಿಗೆ.

ಭುಜದಲ್ಲಿ ಕೈಹಸ್ತದ ಭಾರ ಬೀಳುತ್ತಲೂ ತಟ್ಟನೆ ತಿರುಗಿ ನೋಡಿದಳು ಕುಮುದ್ವತಿ. ಹಿಂದೆ ನಿಂತು ಭುಜದ ಮೇಲೆ ಕೈಯಿಟ್ಟವನು ರಾಮನಾಥ. ಮೊಗದಲ್ಲಿ ನಗೆಯ ಮುಗುಳನ್ನು ಅರಳಿಸಿ "ಏನನ್ನು ನೋಡುತಿದ್ದಿ ಕುಮು ದ್ವತಿ...?" ಎಂದ ದನಿಯಲ್ಲಿ ರಾಗರಸ ಹರಿಸಿ, ಹಾಗೆ ಕೈ ಹಸ್ತವನ್ನು

ಹಿಡಿದುಕೊಂಡು, ಅದುವಿ" ಸಾಯಂ ಪ್ರಭೆ ತುಂಬ ಸೊಗಸಾಗಿದೆ. ಅದನ್ನೇ ನೋಡುತಿದ್ದೆ ಮತ್ತೇನಲ್ಲ." ಎಂದಳು ಅವಳು.

"ಈ ಮಧುರಾತಿಮಧುರ ಶಾಂತಿಯ ಒಡಲಲ್ಲಿ ದಿನನಿತ್ಯ ಸಂಭವಿಸುವ ಕ್ರೂರ–ಹೇಯ–ಹೀನ ಕೃತ್ಯಗಳನ್ನೂ ಪರಿಭಾವಿಸಿ ನೋಡು!"

"ನಿಜ, ಅದೇ ಅರ್ಥವಾಗದ ವಿಷಯ. ಶಾಂತಿ ಸೌಂದರ್ಯವನ್ನು ಅರ್ಥಮಾಡಿಕೊಳ್ಳಲಾರದ ಮೂಢಮತಿಗಳ ಕುಕರ್ಮ ಎಂದರೆ ತಪ್ಪಲ್ಲ."

"ಅಷ್ಟೇ ಅಲ್ಲ...ಪ್ರಕೃತಿಯೇ ಇಂತಹ ಕೃತ್ಯವನ್ನು ಲೀಲಾಜಾಲವಾಗಿ ನಡೆಸುವುದೂ ಉಂಟು. ಸೌಂದರ್ಯ-ಭೀಭತ್ಸ ಒಮ್ಮೊಮ್ಮೆ ಒಟ್ಟಾಗಿಯೋ ಬರುತ್ತವೆ ಇದಕ್ಕೇನೆನ್ನೋಣ?"

"ವಿಧಿ...!"

ಇಬ್ಬರೂ ಹೊರಬಂದು ವರಾಂಡದಲ್ಲಿ ಕುಳಿತುಕೊಂಡರು. ರಾಮನಾಥ ಕೈಬೆರಳುಗಳ ಲಟಿಕೆಯನ್ನು ಮುರಿಯುತ್ತಾ ಅಂದ.

"ಕುಮೂ, ಈ ಲೋಕದ ದುಷ್ಕೃತ್ಯಗಳು ಮಾನವೀಯತೆಯನ್ನೇ ತೊಡೆದುಹಾಕಿವೆ. ಮನುಷ್ಯರಲ್ಲಿ ಮನುಷ್ಯತ್ವವೇ ಉಳಿದಿಲ್ಲ. ದಾನವ ಗತಿಯನ್ನು ಮೀರಿ ನಡೆಯುತ್ತಿವೆ ದಾನವೀಯ ಕೃತ್ಯಗಳು, ಮುಂದೆಯಾದರೂ ಸರಿಹೋದೀತೆಂಬ ಭರವಸೆಯೇನೂ ಉಳಿದಿಲ್ಲ. ಭಾರತ ಸಾಮ್ರಾಜ್ಯದ ಪುರಾತನ ಸಂಸ್ಕೃತಿಗಳು ಮುಂದೆ ಮುಂದೆ ಅಳಿಸಿಹೋದರೂ ಹೋಗಬಹುದು. ಎಂತಹ ಅನ್ಯಾಯ? ಇಂಗ್ಲೀಷರಿಗೆ ದಯೆ-ಧರ್ಮ ಇಲ್ಲವೆನ್ನುತಿದ್ದ ಕಾಲವೆಲ್ಲಿ? ಇಂದಿನ ಅಮಾನವೀಯ ದೌರ್ಜನ್ಯದ ಕರಾಳ ರೂಪವೆಲ್ಲಿ? ದುರ್ಬಲರಿಗೆ ರಕ್ಷಣೆಯೇ ಇಲ್ಲವಾಗಿದೆ. ಇದು ತುಂಬ ಅನ್ಯಾಯ. ಸತ್ಯ-ಧರ್ಮ-ನೀತಿಗಳು ಲುಪ್ತವಾದುದು ತುಂಬಾ ಆಶ್ಚರ್ಯ ಮತ್ತು ವ್ಯಸನಕರ. ನಮ್ಮ ದೇಶ ಈ ಮಟ್ಟಕ್ಕೆ ಇಳಿಯಬಾರದಿತ್ತು.

"ಮುಖ್ಯವಾಗಿ ನ್ಯಾಯಾಲಯಗಳಲ್ಲೇ ನ್ಯಾಯದ ಕೊರತೆ ಅಂದ ಮೇಲೆ, ನ್ಯಾಯ ದೊರೆಯುವುದಾದರೂ ಎಲ್ಲಿ? ಇದೊಂದು ತೀರಾ ವಿಪ

ಯರ್ಾಸ. ನೆನೆಸಿಕೊಂಡರೆ ಒಡಲೆಲ್ಲ ಕರಗಿ ದ್ರವಿಸುತ್ತದೆ. ಇದಕ್ಕೆ ಸಧ್ಯ ಪರಿಹಾರ ಕಾರ್ಯ ಇಲ್ಲವೇ ಇಲ್ಲ. ಭಗವಂತ ಮಾತ್ರ ಸರಿಪಡಿಸುವಲ್ಲಿ ಉತ್ತರಾಧಿಕಾರಿ."

ಸ್ವಲ್ಪ ಹೊತ್ತು ಇಬ್ಬರೂ ಮಾತಾಡಲಿಲ್ಲ. ದೃಷ್ಟಿ ದೂರ ದಿಗಂತದಲ್ಲಿ ಚಲಿಸುತಿತ್ತು. ಮನಸ್ಸು ಇನ್ನೆಲ್ಲೋ ಹಕ್ಕಿಯಾಗಿ ಹಾರುತ್ತಿದೆ, ಹಾರುತ್ತಿದೆ.

ಕುಮುದ್ವತಿ ಅವನ ಮುಖ ಬಿಂಬವನ್ನು ನಿಟ್ಟಿಸಿ ನೋಡಿದಳು. ಮುಖದಲ್ಲಿ ಕ್ಷೀಣರೇಖೆಯ ಸುಕ್ಕುಗಳು ಮೂಡುತ್ತಿವೆ. ಅರ್ಧ ನೆರೆದ ಕೂದಲು ಇಳಿ ವಯಸ್ಸಿಗೆ ಸಾಕ್ಷಿ. ಆದರೂ, ಅಂತಃಶಕ್ತಿಯ ದಿಟ್ಟ ಛಾಯೆ ಕಣ್ಣುಗಳಲ್ಲಿ ಥಳಥಳಿಸುತ್ತಿದೆ. ಧೃತಿಗೆಡದ ಧೀಮಂತ ಭಾವ ಮುಖಮುದ್ರೆಯಲ್ಲಿ. ನೋಡುತ್ತಿದ್ದಂತೆ ಒಡಲಲ್ಲಿ ಅತ್ಯಂತ ಗೌರವಭಾವನೆ ಉಕ್ಕಿಬಂತು. ಆತನ ಸಂಸರ್ಗದಲ್ಲಿ ಪಡೆದುಕೊಂಡ ಆತ್ಮಶಾಂತಿ ಜನ್ಮಜನ್ಮಕ್ಕೂ ಸಾಲುವಂತಾದ್ದು. ಎಷ್ಟೆಷ್ಟು ಘನಾನುಭವಗಳ ಹುರುಳನ್ನು ತುಂಬಿಕೊಂಡು ವೃದ್ಧಾಪ್ಯದಲ್ಲಿ ಪದಾರ್ಪಣೆ ಮಾಡುತ್ತಿದೆಯೋ ಜೀವ. ಅಷ್ಟಷ್ಟು ಘನತೆ–ಗೌರವಗಳನ್ನು ತುಂಬಿಕೊಂಡಿತ್ತು ದೇಹಸಂಪತ್ತು.

"ಕುಮೂ, ಯಾವಾಗಲೂ ಶ್ರೀನಿಧಿ ನಾನಿಲ್ಲಿರೋಲ್ಲ ಎನ್ನುತ್ತಿರುತ್ತಾಳೆ. ನಮ್ಮ ನಂತರ ಈ ಆಸ್ತಿಗೊಂದು ದೃಢವಾದ ವ್ಯವಸ್ಥೆ ಮಾಡಬೇಕಾಗುತ್ತದೆ. ಇದು ಪೋಲಿ ಪುಂಡರ ಕೈವಶವಾಗಬಾರದು. ಮುಂದಿನ ವ್ಯವಸ್ಥೆ ಶ್ರೀನಿಧಿಯ ಮನೋನಿಶ್ಚಯದ ಪ್ರಕಾರವೇ ಆಗಬೇಕು. ಈ ಸಲ ಅವಳು ಬಂದ ನಂತರ ನಿರ್ಣಯ."

"ಅದೇ ಸರಿ. ದೂರ ಭವಿಷ್ಯವನ್ನು ನೆನೆಸಿಕೊಂಡರೆ ಭಯವಾಗುತ್ತೆ."

"ಅಯ್ಯೋ, ಹಾಗೆಂದರೆ ಹೇಗೆ? ಸುಖ–ದುಃಖಗಳನ್ನು ಎದುರಿಸಲು ಸದಾ ಸಿದ್ಧರಿರಬೇಕು. ನೀನು ಇಷ್ಟೆಲ್ಲಾ ಮಾಡಿ ಕಲಿತದ್ದೇನು? ನೀನಿನ್ನೂ ಎಳೆ ನಿಂಬೆಕಾಯಿ ಕುಮೂ...."

ನಕ್ಕುಬಿಟ್ಟ ರಾಮನಾಥ.

"ಅಯ್ಯೋ ಇಷ್ಟು ಕಲಿತರೆ ಸಾಕೆ? ಇನ್ನೂ ಎಷ್ಟೆಷ್ಟೊ ಕಲಿಯ ಬೇಕೊ ? ನಾವಿರುವುದು ಇನ್ನೂ ಸೊನ್ನೆಯ ತಲದಲ್ಲೇ."

"ಅದು ಗೊತ್ತು."

"ಮುಂದಿನ ವಾರ ಶ್ರೀನಿಧಿ ಬರುತ್ತಾಳೆ. ಈ ಸಾಲಿನಲ್ಲಿ ಡಿಗ್ರಿ ಪಡೆದು ಕೊಂಡರೆ ಮುಗಿಯಿತು. ಮುಂದಿನ ಅಭ್ಯಾಸಕ್ಕೆ ಹೋಗುವುದು ಇನ್ನೂ ಅನಿಶ್ಚಿತ, ನೋಡೋಣ ಏನು ಮಾಡುತ್ತಾಳೋ. ಅವಳು ಓದುವುದಾದರೆ ಎಷ್ಟು ಬೇಕಾದರೂ ಓದಲಿ. ಈಗಲೇ ಏನವಸರವಿಲ್ಲ ಜೀವನಕ್ಕೆ."

"ನೋಡೋಣ, ದೇವರಿದ್ದಾನೆ."

o o o o

ವಾಸುವಿನ ಮಡದಿ ಸುಮಿ ವಾಸು ಇರುವಂದು ಗದ್ದೆ ತೋಟಗಳ ಉಸ್ತುವಾರಿಯಲ್ಲಿ ಹೆಚ್ಚು ಗಮನವಿಟ್ಟವಳಲ್ಲ. ಅನಂತರ ಬಲವಂತ ಮಾಘ ಸ್ನಾನವಾಯಿತು. ಆಳುಗಳ ಕೆಲಸದಲ್ಲಿ ಗಮನವಿರಿಸುವುದು ಅನಿವಾರ್ಯ. ಹಾಗೇ ಸ್ವಲ್ಪಸ್ವಲ್ಪವಾಗಿ ಅಭ್ಯಾಸವಾದುದರಿಂದ ವ್ಯವಸಾಯದಲ್ಲಿ ಅಭಿರುಚಿ ಹತ್ತಿತು. ಅನಂತರ ಅದರಲ್ಲಿ ಪರಿಣತಿ ಹೊಂದಿದಳು ಅವಳು.

ಹಿರಿಯ ಮಗಳು ಇದೀಗಷ್ಟೇ ಹೈಸ್ಕೂಲು ಹಂತಕ್ಕೆ ಏರಿದ್ದಾಳೆ. ಕಮಲಿ ಓದುವುದರಲ್ಲಿ ಮುಂದೆ. ವಿಮಲಿ ಶ್ಯಾಮಲಿ ಇವರು ಆಟದ ಅರಗಿಳಿ ಗಳು. ಅವರನ್ನು ಕೂರಿಸಿ ಓದಿಸಬೇಕು. ಸುಮಿಗೆ ಗಂಡುಮಕ್ಕಳಿಲ್ಲದ ಕೊರಗು ಒಂದಾದರೆ ಹೇಗಾದರೂ ಹೆಣ್ಣು ಮಕ್ಕಳನ್ನು ತೀರ ಮುಟ್ಟಿಸ ಬೇಕೆಂಬ ಉತ್ಕಟೇಚ್ಛೆ ಇನ್ನೊಂದು. ಸಮಯೋಚಿತವಾಗಿ ವರ್ತಿಸುವ ಬುದ್ಧಿವಂತಿಕೆ ಇರುವುದರಿಂದ ಹೆಜ್ಜೆ ಹೆಜ್ಜೆಯೂ ದಿಟ್ಟತನದ ಪಾಲು.

ರಾಮನಾಥನ ಕಡೆಯಿಂದ ಆಳುಗಳು ಬರುತ್ತಾರೆ. ಕೆಲಸ ಕಾರ್ಯಕ್ಕೆ ಕೊರತೆಯಿಲ್ಲ. ಜೀವನಕ್ಕೆ ಕುಂದೂ ಇಲ್ಲ.

ಕಮಲಿಯನ್ನು ಕುರಿತು ನುಡಿದಳು ಸುಮಿ,

"ನಾವು ಮೂವನವರ ಸಹಾಯ ಕೈತುಂಬ ಪಡೆದರೂ ಅವರನ್ನು ಹೋಗಿ ಕಂಡು ಬರುವ ಸೌಜನ್ಯ ತೋರಲಿಲ್ಲ. ಒಮ್ಮೆ ಎಲ್ಲರೂ ಹೋಗಿ ಬರೋಣ. ಸಂತೋಷ–ಅಭಿಮಾನಗಳಿಂದ ಹೋಗಿಬರುವ ಮುಖವಿಲ್ಲ. ಆದರೂ ಹೋಗಿ ಬರಬೇಕಾದುದು ಧರ್ಮ. ನಮ್ಮಲ್ಲಿ ಇದುವರೆಗೆ ಸ್ನೇಹ ಭಾವ ಇರಲಿಲ್ಲ, ನೀವು ಚಿಕ್ಕವರು, ನಿಮಗೆ ನನ್ನ ಸಂಕಟ ಅರ್ಥವಾಗುವುದಿಲ್ಲ."

"ಅಂದರೆ....?"

"ನಿನ್ನ ಅಪ್ಪಾಜಿ ಇರುವಾಗ ಅವರು ತಂದೆಯೊಂದಿಗೆ ಚೆನ್ನಾಗಿರಲಿಲ್ಲ. ಒಂದಿನವೂ ಒಳ್ಳೆಯ ಭಾವ ಹೊಂದಿರಲಿಲ್ಲ. ಅದೆಲ್ಲಾ ಮನಸ್ಸಿಗೆ ಕಿನಿಸಿಗೆ-ಕಿರಿಕಿರಿ. ಮುಖ ತೋರಿಸಲು ನಾಚಿಕೆ. ಇಂತಹ ಅಡಚಣೆಗಳು ಅನೇಕ. ನೀನೆ ಯೋಚನೆ ಮಾಡು ಹೋಗಿಬರುವ ಕಷ್ಟವನ್ನು."

"ಅಂತೂ, ಹೋಗಿ ಬರಬೇಕೆಂಬುದು ಸರಿಯಷ್ಟೆ."

"ಹೌದು...ಇಂದೇ ಸಂಜೆಯಲ್ಲಿ ಹೋಗಿಬರೋಣ."

ಆ ಮಾತಿಗೆ ಮಕ್ಕಳು ಒಪ್ಪಿದರು. ದೊಡ್ಡಮನೆ, ದೊಡ್ಡಪ್ಪ, ದೊಡ್ಡಮ್ಮ ಎಂದರೆ ಸಂತೋಷವೇ. ಎಂದೂ ಹೊಗಿಬರದಿದ್ದರೂ ಏನೋ ಒಂದು ಬಗೆಯ ಉತ್ಸಾಹ-ಹುಮ್ಮಸ್ಸು ಮೈ ನರ ನಾಡಿಗಳಲ್ಲಿ. ಕುಣಿಕುಣಿಯು ತ್ತಲೇ ಸಾಯಂ ಸಮಯವನ್ನು ಎದುರು ನೋಡಿದರು ಮಕ್ಕಳು. ಆದರೆ, ಅಷ್ಟೇ ಅಳುಕು ಎದೆಯಲ್ಲಿ ತಾಯಿ ಸುಮಿಗೆ.

ಅದೇ ಪ್ರಕಾರವಾಗಿ ನಾಲ್ವರೂ ಹೊರಟರು ಇಳಿ ಹೊತ್ತಿನಲ್ಲಿ. ಮಕ್ಕಳು ಶುಭ್ರವಾದ ಉಡಿಗೆಯಲ್ಲಿ ಮಿಂಚು ಗೊಂಬೆಗಳು ಮಾತ್ರವಲ್ಲ, ಹದಿ ಹರೆಯಕ್ಕೆ ಪದಾರ್ಪಣೆ ಮಾಡಿದ ಅವರು ರಸವೂಡಿಕೊಳ್ಳುವ ಮಾವಿನ ಹಣ್ಣುಗಳಂತೆ ಸುಶೋಭಿಸುತ್ತಿದ್ದಾರೆ. ದುಂಡುಕೆನ್ನೆಗಳಲ್ಲಿ ರಂಗು ತುಟಿಗಳಲ್ಲಿ ಮಿನುಗುವ ಎಳೆ ನಗು. ಹಣೆಯ ಮೇಲೆ ಹರಿದ ಮುಂಗುರುಳು. ಮೈಯಲ್ಲಿ ಉತ್ಸಾಹ, ಒಟ್ಟಿನಲ್ಲಿ ಯೌವನದಂಚಿನಲ್ಲಿ ಪರಿಶೋಭಿಸುವ ಅವರು ಸೌಂದರ್ಯವತಿಯರೇ.

ಮಾತಿನ ಮೋಡಿಯಲ್ಲಿ ದುಪುದುಪು ಹೆಜ್ಜೆಯಿಡುತ್ತ ಸಾಗಿದರು ತೋಟ ದಂಚಿನಲ್ಲಿ. ಎದುರಿಗೆ ವಿಶಾಲವಾದ ಗದ್ದೆಯ ಕೋಗು. ಮಿಸುನಿಯ ವರ್ಣಕ್ಕೆ ತಿರುಗುತ್ತಿರುವ ಶಾಲಿವನದ ಮೇಲೆ ತಂಗಾಳಿ ತೇಲಿಹೋದಾಗ ತಲೆದೂಗುವ ಪೈರಿನ ಮೇಲೆ ದೃಷ್ಟಿ ಹರಿದರೆ ಅಃ! ಎಂತಹ ಅಪ್ಯಾಯ ಮಾನವೋ.

ಹತ್ತು ನಿಮಿಷಗಳ ಹಾದಿ ಮೆಲು ನಡೆಯಿಂದ ಸ್ವಲ್ಪ ಹೆಚ್ಚಿನ ಸಮಯ ತೆಗೆದುಕೊಂಡಿತೇನೋ, ಎಲ್ಲರೂ ಮನೆ ಮುಟ್ಟಿದಾಗ ಪ್ರಾಕಾರದ ಬಾಗಿಲ ಬಳಿಯಲ್ಲಿ ಅಡ್ಡಾಡುತ್ತಲಿದ್ದ ನಾಯಿಗಳು ದೊಡ್ಡದನಿ ತೆಗೆದು ಬೊಗಳಿದುವು ಬೌವ್ವೂವೂವೂ, ಬೌವ್ವೂವೂವೂವೂ......

ಸದ್ದಿಲ್ಲದ ಶಾಂತಿಯ ಅಪರಾವತಾರ ಮನೆಯ ಆವರಣದಲ್ಲಿ. ವರಾಂಡ ದಲ್ಲಿ ಯಾರೂ ಕಾಣಿಸುತ್ತಲೇ ಇಲ್ಲ. ಮಕ್ಕಳು ಒತ್ತಿದರು ಕಾಲಿಂಗ್‌ಬೆಲ್. ಹೆಪ್ಪುಗಟ್ಟಿದ ಶಾಂತಿ ಕದಡಿತು.

ರಂಗಮ್ಮ ವರಾಂಡಕ್ಕೆ ಬಂದು ನೋಡಿದಳು. ಕಪಿನೀಪತಿ ಹೊರ ಬಾಗಿಲಿಗೆ ಓಡಿದ. ಲಘು ಹಾಸ್ಯದಿಂದ ಅಂದ "ನೀವು ಒಳ್ಳೆಯ ಸಮಯದಲ್ಲೇ ಬಂದಿದ್ದೀರಿ ಮನೆಯಲ್ಲಿ ಯಾರೂ ಇಲ್ಲ. ತುಂಬಾ ಅದೃಷ್ಟವಂತರು!" ನಗು ಮುಖದಿಂದ ಪುನಃ ಕೇಳಿದ "ಎಲ್ಲರೂ ಚೆನ್ನಾಗಿದ್ದೀರಾ ಅವ್ವಾ?"

"ನೋಡು, ಹೀಗೆಯೇ... ಇರುವುದು. ಎಲ್ಲಿಗೆ ಹೋಗಿದ್ದಾರೆ ಎಲ್ಲಾ?"

"ದೇವಸ್ಥಾನಕ್ಕೆ, ಅಲ್ಲಿ ಪೂಜೆ ಇಡಿಸಿದ್ದಾರೆ."

"ಎಲ್ಲರೂ ಹೋಗಿದ್ದಾರೆಯೇ? ಸೀತಮ್ಮ ದೇವಯ್ಯ ಯಾರೂ ಇಲ್ಲವೇ?"

"ಯಾರೂ ಇಲ್ಲ." ಅವನು ಗೋಣು ಆಡಿಸಿದ.

ಅವರು ಬಂದಹಾಗೆಯೇ ಹಿಂದಿರುಗಿದರು, ಸಪ್ಪೆ ಮೋರೆಯಿಂದ.

೦ ೦ ೦ ೦

ಎಲೆಕ್ಷನ್ ಗೀಳಿಗೆ ಸಿಕ್ಕಿ ಸೋತಮೇಲೆ ಸೋಮು ಈ ಕಡೆ ಮುಖ ಹಾಕಿರಲಿಲ್ಲ.

ಅವನ ಸುದ್ದಿಯೂ ಅಷ್ಟಾಗಿ ಕೇಳಿಬರುತ್ತಿರಲಿಲ್ಲ. ಅವನು ಸಾಕಷ್ಟು ಕೈಸುಟ್ಟುಕೊಂಡಿದ್ದಾನೆಂದು ಗೊತ್ತು. ಅಂಗಡಿಯಲ್ಲಿ ಎಲ್ಲಾ ಬಗೆಯ ಸಾಮಗ್ರಿಗಳಿಗೆ ವಿಪರೀತ ಬೆಲೆ ಏರಿಸಿದ್ದಾನೆ. ಈಗ ಅವನ ಕಡೆಗೆ ಯಾರೂ ಹೋಗುವುದೇ ಇಲ್ಲ ಎಂದು ಅವರಿವರಿಂದ ತಿಳಿದ ವಿಷಯ.

ಅಂದು ಹಠಾತ್ತನೆ ಆಗಮಿಸಿದ ಸೋಮು, ಬಾಳಿನ ಬಿರುಗಾಳಿಗೆ ಸಿಕ್ಕಿ ಸೋತು ಹಣ್ಣಾಗಿದ್ದರೂ ದೃಢವಾದ ನಿಲುವು ಕುಗ್ಗಿರಲಿಲ್ಲ. ಜಗಮೊಂಡ ತನಕ್ಕೆ ಅವನೊಂದು ಸಾಕ್ಷಿ. ಹುಮ್ಮು ಬಿಮ್ಮುಗಳ ಪ್ರತೀಕ. ಹಠಮಾರಿತನ ದಿಂದ ಕೂಡಿದ ಗಂಡು.

"ಏನಪ್ಪಾ, ಇಷ್ಟು ದಿನ ಬರಲೇ ಇಲ್ಲ" ಎಂದಳು ಸೀತಮ್ಮ, ಒಳ ಗುದಿಯ ದನಿಯಲ್ಲಿ.

"ನನಗೆ ಕೈ ಬಿಡುವಾಗಿರಲಿಲ್ಲ. ಇಂದು ನೋಡಿ ಹೋಗುವ ಸಲುವಾ ಗಿಯೇ ಬಂದೆ."

ಅವನು ಒಳಬಂದು ಹಜಾರದಲ್ಲಿ ಕುಳಿತುಕೊಂಡ. ಕುಮುದ್ವತಿಯೂ ಅಲ್ಲಿಗೇ ಬಂದಳು.

ದೇವಯ್ಯ ಮತ್ತು ರಾಮನಾಥ ತೋಟದ ಕಡೆ ಹೋದವರು ಇನ್ನೂ ಬಂದಿರಲಿಲ್ಲ.

ಕುಮುದ್ವತಿ ಹಾಸ್ಯಪ್ರಧಾನ ಧಾಟಿಯಲ್ಲಿ ನುಡಿದಳು–"ನಿನಗೆ ಎಲೆಕ್ಷನ್ ಎಂದರೆ ಏನು ಎಂಬುದರ ಅರಿವಾಯಿತು ತಾನೇ?"

"ಸರಿ, ಇಷ್ಟಕ್ಕೆಲ್ಲಾ ಹೆದರುತ್ತಾರೆಯೇ?" ಅಷ್ಟೇ ನಿರಾಳವಾಗಿ ಉತ್ತರಿಸಿದ ಅವನು,

"ಶ್ರೀಹರೀ, ಇನ್ನು ಅದರ ಗೀಳು ಹಚ್ಚಿಕೊಳ್ಳಬೇಡ. ವೃಥಾ ಪರಿ ಶ್ರಮ. ಹಣ ಹಾಳು, ಮೇಲಾಗಿ, ನಗೆಗೇಡಿತನ......ಇವೆಲ್ಲಾ ಏಕೆ ಬೇಕು ಹೇಳು?"

"ನೋಡೋಣ, ಕಾಲವೆಲ್ಲಾ ಇಂದಿಗೇ ಮುಗಿಯುವುದಿಲ್ಲ. ಕಾಲಕ್ಕೆ ಸರಿಯಾಗಿ ತೂರಿಕೊಂಡರಾಯಿತು, ಹೋದದ್ದು ಹೋಗಲಿ, ಬರುವುದನ್ನು ಸ್ವಾಗತಿಸೋಣ."

"ಹಾಗಾದರೆ, ನಿನಗೆ ಇನ್ನೂ ಎಲೆಕ್ಷ್ನ ಗೀಳು ಹೋಗಲಿಲ್ಲ?"

"ಏಕಾದರೂ ಹೋಗಬೇಕು? ಈ ಸಲಿ ಹೋದರೇನಂತೆ? ಮುಂದಿನ ಸಾಲಿನಲ್ಲಿ ನಾನು ಗೆಲ್ಲದಿದ್ದರೆ ಕೇಳು? ನನಗೆ ಹಠ ಬಂದಿದೆ! ಈ ಹುಂಬ ರನ್ನೆಲ್ಲಾ ಮೂಲೆಗೊತ್ತಿ ನಾನು ಮುಂದೆ ಬರದಿದ್ದರೆ ಸೋಮುನೇ ಅಲ್ಲ!" ಎದೆ ತಟ್ಟಿಕೊಂಡು ಅಟ್ಟಹಾಸದಿಂದ ನುಡಿದ.

"ಮಹಾರಾಯಾ! ನೀನು ಮನೆ ಮಠ ಹಾಳುಮಾಡಿಕೊಳ್ಳುತ್ತಿ ಅಷ್ಟೆ."

"ಮುಂದಿನ ಎಲೆಕ್ಷ್ನ ಬರಲಿ, ಆಗ ನೋಡುತ್ತಿರು! ಈ ಅಣ್ಣನ ಜಾಣ ತನ!"

"ನಿನಗೆ ತಲೆ ಕೆಟ್ಟಿದೆ, ಅಂದರೆ ತಪ್ಪಲ್ಲ."

"ಕೆಟ್ಟರೆ ಹುಚ್ಚರಾಸ್ಪತ್ರೆ ಇಷ್ಟೇ ಇದೆ. ಬಿಡು! ಅದರಿಂದ ನಿಮಗೇನೂ ಭಾರವಿಲ್ಲ."

ಮಹಿಳೆಯರು ಅವಾಕ್ಕಾದರು. ಒಡಲೆಲ್ಲಾ ಕಸಿವಿಸಿ, ಮನ ಮತಿಗಳಲ್ಲಿ ಅತೀವ ಮುಜುಗರ. ಆದರೇನು? ನುಂಗುವಂತಿಲ್ಲ, ಉಗುಳುವಂತಿಲ್ಲ! 'ಭೇಷ್' ಎಂದು ಬೆನ್ನು ತಟ್ಟುವಂತಿಲ್ಲ. ಇಬ್ಬರೂ ಪರಸ್ಪರ ಮುಖ ನೋಡಿ ಕೊಂಡು ಸುಮ್ಮನಾದರು. ಮುಖಭಾವ ಸಪ್ಪಗಾಯಿತು.

ರಂಗಮ್ಮ ಪೂರಿ ಪಲ್ಯಗಳ ಉಪಾಹಾರ ತಂದು ಮುಂದಿಟ್ಟಳು.

ಅವನು ಪೂರಿಯನ್ನು ಮೆಲ್ಲುತ್ತ ನುಡಿದ.

"ಅಪ್ಪಾಜಿ ಮತ್ತು ಭಾವ ತೋಟದಂಚಿನಲ್ಲಿಯೇ ಸಿಕ್ಕಿದ್ದರು. ಅಲ್ಲಿಯೇ ಮಾತಾಡಿ ಬಂದೆ. ನಾನೀಗ ಹೊಸೂರಿಗೆ ಹೋಗುತ್ತಿರುವೆ. ಅಲ್ಲಿಯ

ಮುಖಂಡರನ್ನು ಕಂಡು ಸಾಮಾಜಿಕ ಸೇವೆಯ ಬಗ್ಗೆ ಮಾತಾಡಿ ವಿಚಾರ ವಿನಿಮಯ ಮಾಡಿಕೊಳ್ಳುವೆ. "ಈಸಲಿ ಈಗಿನಿಂದಲೇ ಪ್ರಚಾರ ಕಾರ್ಯ!"

"ಆಗಲಿ, ಹೋಗು. ಈದಿನ ಅಂಗಡಿ ಮುಚ್ಚಿರುವೆ ತಾನೇ?"

"ಇಲ್ಲ, ಅವಳೇ ನೋಡಿಕೊಳ್ಳುತ್ತಾಳೆ. ಮಧ್ಯಾಹ್ನದ ಒಳಗೇ ಬಂದು ಬಿಡುವೆ."

ಅವನು ಅವಸರವಸರವಾಗಿ ಹೊರಟ. ಹೆಜ್ಜೆಗಳ ಧೃಡಗತಿ ದರುಗೆಲೆಗಳನ್ನು ಲರಲರಿಸುತಿತ್ತು ಕಾಲು ಹಾದಿಯಲ್ಲಿ. ಹಾಗೇ ನಿಂತು, ಬಿರುಬಿರನೆ ಮಾರುಗಾಲು ಹಾಕುವ ಅವನ ಆಪರದ್ದೇಶವನ್ನು ನೋಡಿದರು ತಾಯಿ-ಮಗಳು. ಅವನು ಕೆಚ್ಚೆದೆಯ ಕಟ್ಟಾಳಾಗಿ ನಡೆಯುತಿದ್ದಾನೆ ಲೋಕೋತ್ತರವಾದ ಹುಮ್ಮಿನಲ್ಲಿ.

o o o o

ತಲೆಬಾಗಿಲ ಕರೆಗಂಟೆ ಕರೆ ನೀಡಿತು.

ಕುಕ್ಕೂ, ಕುಕ್ಕೂ, ಕುಕ್ಕೂ, ಕುಕ್ಕೂ.

ತಲೆಬಾಗಿಲನ್ನು ತೆರೆದು ಬಂದವಳನ್ನು ಒಳ ಬರಮಾಡಿಕೊಂಡಳು ರಂಗಮ್ಮ.

ಕುಮುದ್ವತಿ ತನ್ನ ಆಫೀಸಿನಲ್ಲಿ ಕುಳಿತು ಕಾಗದ ಪತ್ರಗಳ ಪರಿಶೀಲನೆಯಲ್ಲಿ ಮನವಿಟ್ಟದ್ದಾಳೆ. ಆ ಪತ್ರಗಳು ಹೊತ್ತುತರುವ ಸಂಕಟದ ಸಾರವನ್ನು ಮನತುಂಬಿದಾಗ ಹೃದಯ ದ್ರವ್ಯ ದ್ರವಿಸಿ ಹರಿದಂತೆ ಭಾಸವಾದರೆ ನರನಾಡಿಗಳು ಬಿರಿಯುವಂತೆ, ಶೋಕರಸ ಜರ್ರನೆ ಹರಿದಾಡುತ್ತದೆ.

ಕುಮುದ್ವತಿ ಕಾಗದವನ್ನು ಬದಿಗಿಟ್ಟು ಬಂದವಳನ್ನು ಹುಬ್ಬೆತ್ತಿ ನೋಡಿದಳು. ಹೊಸ ಮುಖದ ಅವಳು ಇದುವರೆಗೆ ಬಂದವಳಲ್ಲ. ಬಾಡಿದ ಮುಖದಲ್ಲಿ ಜೀವ ಕಳೆಯೇ ಇಲ್ಲದಷ್ಟು ನೀರಸ ಭಾವದ ದೀನಮುದ್ರೆ.

"ಬನ್ನಿ, ಕುಳಿತುಕೊಳ್ಳಿ." ಸ್ವಾಗತಿಸಿದಳು ಕುಮುದ್ವತಿ.

ಅವಳು ಕುಳಿತುಕೊಂಡರೂ ತುಟಿಗಳು ಬಿರಿಯಲೊಲ್ಲವು. ಹೇಳಬೇಕೆಂದ ವಿಷಯ ಒಡಲಲ್ಲೇ ಉಳಿಯಿತು. ಏನೋ ಒಂದು ರೀತಿಯಲ್ಲಿ ದೀನಾತಿದೀನ ಭಾವ ಕಣ್ಣುಗಳಲ್ಲಿ.

"ಏನು ಸಮಾಚಾರ? ಯಾರು ನೀವು? ನಿಮ್ಮ ಹೆಸರೇನು?"

"ನನ್ನ ಹೆಸರು ವಿಶಾಲಾಕ್ಷಿ. ನನ್ನ ವಿಚಾರ ಹೇಳಿಕೊಳ್ಳುವುದೇ ಸಂಕಟ–ಸಂಕೋಚ–ನಾಚಿಕೆ. ಹೇಳಲೋ ಬೇಡವೋ ಎಂಬ ಸಮಸ್ಯೆ ಕೊರಳೊತ್ತುತ್ತಿದೆ."

"ಏನಿದ್ದರೂ ಹೇಳಿಬಿಡಿ. ನಾವೂ ಹೆಂಗಸರಷ್ಟೆ?"

ಅವಳು ಸಂಕಟಪೂರ್ಣ ದನಿಯಲ್ಲಿ ನುಡಿದಳು. "ನನ್ನದು ಅತೀ ದಾರುಣವಾದ ಬಾಳು. ನನ್ನವರು ಎಂ.ಎ. ಓದಿದವರು. ಹೈಸ್ಕೂಲು ಹೆಡ್ ಮಾಸ್ಟರು. ನನಗೆ ಅತಿಯಾದ ಆತ್ಮಿಕ ಹಿಂಸೆ ಕೊಡುತ್ತಿದ್ದಾರೆ. ತಾಳಿಕೊಳ್ಳುವುದೇ ಕಷ್ಟ. ನನಗೆ ನಾಲ್ಕು ಮಂದಿ ಮಕ್ಕಳಿದ್ದಾರೆ. ಇಬ್ಬರು ಗಂಡು ಇನ್ನಿಬ್ಬರು ಹೆಣ್ಣು. ಆ ಮಕ್ಕಳ ಮುಂದೆಯೇ "ನಿನ್ನ ನಡತೆ ಚೆನ್ನಾಗಿಲ್ಲ, ನೀನು ಶೀಲಗೆಟ್ಟ ಹೆಂಗಸು!" ಎಂದೆಲ್ಲಾ ಹಳಿಯುವುದು, ಕೂಗಾಡುವುದು ಕೈಗೆ ಸಿಕ್ಕಿದುದರಲ್ಲಿ ಬಡಿಯುವುದು. ಈ ಭಯಂಕರ ಪ್ರವೃತ್ತಿ ಅವರದು, ನನಗೆ ಸಾಕಾಗಿದೆ."

ಬಿಕ್ಕಿ ಬಿಕ್ಕಿ ಅತ್ತಳು ಅವಳು.

"ಅದಕ್ಕೆ ಕಾರಣ?"

"ಹೊರಗಿನವರ ಹತ್ತಿರ ಮಾತಾಡಬಾರದು. ಯಾರೊಂದಿಗೂ ಬೆರೆಯಬಾರದು. ಮಕ್ಕಳು ನಾಲ್ಕುಮಂದಿಯೂ ಒಂದೇತರಹ ಇಲ್ಲ. "ಹೀಗೆನ್ನುತ್ತಿದ್ದರೆ ಮಾಡುವುದೇನು? ಹೇಳುವುದೇನು? ಯಾರ ಮನೆಯಲ್ಲಿ ಹುಟ್ಟಿದ ಮಕ್ಕಳೆಲ್ಲಾ ಒಂದೇ ರೂಪಿನಲ್ಲಿರುತ್ತಾರೆ? ಇದು ಮೂರ್ಖತನವಲ್ಲದೆ ಮತ್ತೇನಲ್ಲ." ಒಡಲ ಸಂಕಟವೆಲ್ಲಾ ಗದ್ಗದ ದನಿಯಲ್ಲಿ ಹೊರಬಿತ್ತು.

ಕುಮುದ್ವತಿ ಸ್ವಲ್ಪ ಹೊತ್ತು ಮಾತಾಡಲಿಲ್ಲ. ಎದೆಯಾಳದಿಂದ ನಿಟ್ಟುಸಿರೊಂದು ಹೊರಹೊಮ್ಮಿತು. ಎಷ್ಟು ಯೋಚಿಸಿದರೂ ಇದಕ್ಕೆ ಪರಿಹಾರವೇ

ತೋರುತ್ತಿಲ್ಲ. ಸ್ವಲ್ಪ ಹೊತ್ತಿನ ನಂತರ ನುಡಿದಳು "ನಾಡಿದ್ದು, ಮೀಟಿಂಗ್ ಇಲ್ಲಿಯೇ ಸೇರುತ್ತೆ. ಆಗ ಇದರ ಬಗ್ಗೆ ನಿರ್ಣಯ ತೆಗೆದುಕೊಂಡು ಅವರಿಗೊಂದು ಸಂಘದಿಂದ ನೋಟೀಸ್ ಕೊಡೋಣ ಅದರ ಹುರುಳು ಇಷ್ಟೇ... ನೀವು ಈ ಬಗೆಯ ಹಿಂಸಾಕಾಂಡವನ್ನು ತ್ಯಜಿಸದಿದ್ದರೆ ಸಂಘ ಸದಸ್ಯಿಣಿಯರೆಲ್ಲಾ ನಿಮ್ಮನ್ನು ಶಾಲೆಯಲ್ಲಿಯೇ ತರಾಟೆಗೆ ತೆಗೆದುಕೊಂಡು ಘೇರಾವ್ ಮಾಡುತ್ತೇವೆ ಎಂದು ! ಆಗ್ತಹುದೇ ?"

"ಏನಾದರೂ ಮಾಡಿ ನಿಮ್ಮ ಮರೆ ಹೊಕ್ಕಿರುವೆ."

"ನಾಡಿದ್ದು ಮೀಟಿಂಗಿಗೆ ನೀವೂ ಬನ್ನಿ."

"ಆಗಬಹುದು."

ಅವಳ ಮುಖಬಿಂಬದಲ್ಲಿ ಕಿರುನಗೆಯೊಂದು ಮೂಡಿ ಮಿನುಗಿತು.

° ° ° °

ಅಂದಿನ ಟಪ್ಪಾಲಿನಲ್ಲಿ ಶ್ರೀನಿಧಿಯ ಕಾಗದವಿತ್ತು.

......ನನ್ನ ಪರೀಕ್ಷೆ ಇಂದಿಗೆ ಮುಗಿಯಿತು. ನಾನು ಚೆನ್ನಾಗಿ ಬರೆದಿರುವೆ. ನನಗೆ ಈ ಕೂಡಲೇ ಊರಿಗೆ ಹೊರಡಲಾಗುವುದಿಲ್ಲ. ನಮ್ಮ ಕಾಲೇಜಿನಲ್ಲಿ ಎರಡುವಾರ ಪರ್ಯಂತ 'ಸೋಷಿಯಲ್ ಸರ್ವಿಸ್' ಇದೆ. ನಮ್ಮನ್ನು ಹಳ್ಳಿಗೆ ಕರೆದೊಯ್ಯುತ್ತಾರೆ. ಅದಕ್ಕಾಗಿ ಒಂದು ಬಸ್ಸಿನ ಏರ್ಪಾಡಾಗಿದೆ. ಬೆಳಿಗ್ಗೆ ಕರೆದೊಯ್ದು ಸಂಜೆಗೆ ಹಿಂದಿರುಗಿಸುತ್ತಾರೆ. ನಮ್ಮ ಜೊತೆ ಇಬ್ಬರು ಉಪಾಧ್ಯಾಯಿನಿಯರು ಇದ್ದು, ನಮಗೆ ಮಾರ್ಗದರ್ಶನ ಮಾಡಿಸುವರು. ಅದರ ನಂತರ ನಾನು ಊರಿಗೆ ಹೊರಡುವೆ. ಅಲ್ಲಿಯತನಕ ಇಲ್ಲಿಯೇ ಸರ್ವಿಸ್...

ಇನ್ನೊಂದು ವಿಷಯ ಕುರಿತು ನಾನೇ ನಾನಾಗಿ ವಿಚಾರ ಮಾಡುತ್ತಿರುವೆ.

ಅದ್ವೈತಾನುಭವದಲ್ಲಿ ಉತ್ಕೃಷ್ಟವಾದ ಸಿದ್ಧಿಯನ್ನು ಪಡೆದ ಶ್ರೀ ರಾಮಕೃಷ್ಣ ಪರಮಹಂಸರು ಕಾಳೀ ಮಾತೆಯ ಉಪಾಸನೆ ಮಾಡಿ ಭಕ್ತಿಭಾವಘನಿಸಿ

ಪರಮ ಭಕ್ತರಾಗಿ ಕಾಳಿಕಾ ವಿಗ್ರಹವನ್ನು ಜೀವಂತ ವ್ಯಕ್ತಿಯೆಂದೇ ನಂಬಿ ಸಂಪೂರ್ಣಾನುಭವ ಪಡೆದ ಐತಿಹಾಸಿಕ ಸಂಗತಿಯ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿರುವ ಅನುಭವವಾಗುತ್ತಿದೆ ನನಗೆ. ಮೂರ್ತಿಪೂಜೆಯಲ್ಲಿ ಪ್ರತಿರೋಧ ಹುಟ್ಟಿ, ಭರ್ತ್ಸನೆ–ನಿಂದನೆಗಳು ತಲೆಯೆತ್ತಿ ಪರಮಹಂಸರನ್ನು 'ಹುಚ್ಚ' ಎಂದು ರಾಜಾರೋಷವಾಗಿ ಗೇಲಿ ಮಾಡಿದ ವಿರೋಧ ಪಂಥಿಗಳಿಗೇ ಸ್ವಾಮಿ ವಿವೇಕಾನಂದರಂತಹ ಪ್ರತಿಭಾನ್ವಿತರು ಮೂರ್ತಿಪೂಜೆಯ ಪ್ರತಿಭಟನೆಗೆ, ಅದರ ಸಾಂಕೇತಿಕ ಶಕ್ತಿಯ ವಿಚಾರಶೀಲತೆಗೆ ಅಧಿಕೃತವಾಗಿ ಮಾತಿನ ಹಂತಹಂತವಾಗಿ ಮೆಟ್ಟಿಲೇರಿಸುವ ಸ್ಥಿತಿಯನ್ನು ವಿಷದೀಕರಿಸಿ ಬುದ್ಧಿಜೀವಿಗಳ ವಿಚಾರಕ್ರಾಂತಿಯ ಪ್ರವಾಹಕ್ಕೆ ಹೊಸದಿಕ್ಕು ತೋರಿಸಿದರು.

ಹೀಗೆ ವಿಚಾರವಿಶ್ವದಲ್ಲಿ ಹೊಸ ಬೆಳಕನ್ನು ಕಾಣಬೇಕೆಂದರೆ ನಾಮ ರೂಪಗಳ ಬಗೆಗೂ ಕೂಲಂಕಷವಾಗಿ, ವಿಚಾರಾತ್ಮಕವಾಗಿ ಯೋಚಿಸಿದರೆ ಶ್ರೀ ಶಂಕರಾಚಾರ್ಯರ 'ಅದ್ವೈತ' ದರ್ಶನದಲ್ಲೂ ಹೊಸಬೆಳಕು ಪಡೆಯ ಬಹುದು. ಅಂದರೆ ನಾಮರೂಪಗಳು ನಿತ್ಯವಾಗಿ, ಅಭಿನ್ನವಾಗಿ ಇರುವ ಸತ್ಯ ಸಂಕೇತ ಅಡಗಿರುವುದು ಕಂಡುಬರುತ್ತದೆ.

ಉದಾಹರಣೆಗೆ–ಬಂಗಾರದಿಂದ ಮಾಡುವ ವಿವಿಧ ಆಭರಣಗಳ ನಾಮ ರೂಪಗಳಿಗೆ ಎಣೆಯೇ ಇಲ್ಲ. ಅಕ್ಕಸಾಲಿಗನ ಕಲ್ಪನೆಯ ಮೂಸೆಯಲ್ಲಿ ಮೂಡುವ ಆಯಾ ಆಭರಣಗಳ ನಾಮ ರೂಪಗಳು ನಿತ್ಯವಾಗಿರುವುದು ಸತ್ಯ. ಆ ಆಭರಣಗಳನ್ನು ಪುನಃ ಕರಗಿಸಿ ಬಂಗಾರವನ್ನಾಗಿ ಮಾಡಿದರೂ ಅವುಗಳ ನಾಮ ರೂಪಗಳು ಮನಸ್ಸಿನಿಂದ ಮರೆಯಾಗುವುದಿಲ್ಲ.

ಈ ದೃಷ್ಟಿಯಿಂದ ನೋಡಿದರೆ ಶ್ರುತಿ ಹಾಗೂ ದರ್ಶನಗಳೆಂಬ ವಿಶೇಷಣಗಳನ್ನು ವೇದ ಸಂದೋಹಕ್ಕೆ ಅನ್ವಯಿಸುವುದು ತುಂಬಾ ಅರ್ಥಪೂರ್ಣವೂ, ತುಲನಾತ್ಮಕವೂ ಆಗಿರುತ್ತದೆಂದು ನನಗೆ ಅನಿಸುತ್ತೆ. ವೇದಗಳು ಸರ್ವಾಂಗ ಸುಂದರವಾಗಿ ಭಗವಂತನಲ್ಲಿ ನಿತ್ಯದರ್ಶನ ರೂಪದಲ್ಲಿ ನೆಲೆಸಿದ್ದು ಋಷಿಗಳಿಗೆ ಅವು ಶ್ರುತಿರೂಪವಾಗಿ ಕೇಳಿಸುತ್ತವೆ ಎಂದು ಕೆಲವರು ಅಂಬೋಣ. ಅದನ್ನು ಸರಿಯೆಂದು ಭಾವಿಸಬಹುದಲ್ಲವೇ ?

"ಸರ್ವಂ ಖಲ್ವಿದಂ ಬ್ರಹ್ಮ" ಎಂಬುದನ್ನು ಒಪ್ಪಿಕೊಂಡರೆ ಪರಬ್ರಹ್ಮ ನಿಗೆ ಸ್ವರೂಪ ಮತ್ತು ಸ್ವನಾಮಗಳು ಯಾವತ್ತೂ ನಿತ್ಯವಾಗಿ, ಅದ್ವೈತವಾಗಿ ಇರುವುವೆಂದು ಅರ್ಥೈಸಬಹುದು. ನಮ್ಮೆಲ್ಲ ಚಟುವಟಿಕೆಗಳಿಗೆ ಶಕ್ತಿ ಸಂಚಯನಗೊಳಿಸುವುದು ಈ ಬ್ರಹ್ಮವಸ್ತು. ಬ್ರಹ್ಮ ಈ ವಿಶ್ವದ ಮೂಲ, ಅದು ದೇಹ ರೂಪಗಳಿಲ್ಲದ-ಗುಣ ವಿಶೇಷಗಳಿಲ್ಲದ ಅಮೂಲ್ಯ ವಸ್ತು. ಇದಕ್ಕೆ ವಿಶಿಷ್ಟವಾದ ಯಾವ ಮುದ್ರೆಯೂ ಇಲ್ಲ. ಇದು ಕೇವಲ ಆನಂದ ಮಾತ್ರ. ಇದು ಎಲ್ಲವನ್ನೂ ತಿಳಿದದ್ದು ಎಲ್ಲ ಶಕ್ತಿಯುಳ್ಳದ್ದು.......

ಇನ್ನೊಮ್ಮೆ ಬರೆಯುವೆ, ಇಂದಿಗೆ ಸಮಯವಿಲ್ಲ.

ಮಗಳು ಬರುವುದು ಮುಂದಕ್ಕೆ ಹೋಯಿತು. ಮಗಳಿಗಾಗಿ ಹಾತೊರೆದಿದ್ದ ಜೀವಕ್ಕೆ ನಿರಾಸೆಯ ಬುತ್ತಿ. ಸರಸಿಯ ತಂಗಿ ಧಾರಿಣಿ ಶ್ರೀನಿಧಿ ಇದ್ದಾಗಲೆಲ್ಲ ಅವಳೊಂದಿಗೆ ಇಲ್ಲಿಯೇ ಕಾಲಹರಣ ಮಾಡುತಿದ್ದಳು. ಮನೆಯಲ್ಲಿ ನಗೆ ಮಾತುಗಳು ಮೊಳಗುತಿದ್ದುವು. ಶ್ರೀನಿಧಿಯೊಂದಿಗೆ ಅವಳೂ ಮೈಸೂರು ಸೇರಿದವಳೇ. ಅವಳು ಶ್ರೀನಿಧಿಗಿಂತ ಮೂರು ನಾಲ್ಕು ವರ್ಷಗಳು ಹಿರಿಯ ಹುಡುಗಿ. ಈ ಸಾಲಿನಲ್ಲಿ ಅವಳಿಗೆ ಪಿ.ಹೆಚ್.ಡಿ. ಮುಗಿಯುತ್ತೆ. ಅಕ್ಕನ ಸಂಕಟದ ಬಾಳನ್ನು ಕಂಡ ಅವಳಿಗೆ ಮದುವೆಯಲ್ಲಿ ಜಿಗುಪ್ಸೆ. ಕೆಲಸ ಮಾಡುವ ಉದ್ದೇಶದಿಂದಲೇ ಅವಳು ಭರ್ಜರಿ ಓದಿದ್ದು. ಮುಂದೆ ಕೆಲಸ ಮಾಡುವ ಯೋಚನೆಯೂ ಇದೆ ಅವಳಿಗೆ. ಅವಳ ಮಾರ್ಗದರ್ಶನ ಶ್ರೀನಿಧಿಗೆ, ಅಂತಲೇ ಅವಳು ಸಂಸಾರ ಜೀವನಕ್ಕೆ ವಿಮುಖಿ.

ಮಧ್ಯಾಹ್ನ ಸುಡು ಬಿಸಿಲಿನಲ್ಲಿ ಬೆವರಿಳಿಸುತ್ತ ಬಂದಿದ್ದಾಳೆ ಮೋಹಿನಿ.

ಮುಂಬಾಗಿಲಲ್ಲಿ ಎದುರಾದ ರಾಮನಾಥ ಕೇಳಿದ,

"ಏನಮ್ಮಾ ಮೋಹಿನಿ?"

"ವಸಂತ ತೀವ್ರ ಕಾಯಿಲೆಯಿಂದ ಹಾಸಿಗೆ ಹಿಡಿದಿದ್ದಾರೆ. ಎಂಟು ದಿನದಿಂದ ಹಾಸಿಗೆ ಬಿಟ್ಟೇಳಲಿಲ್ಲ. ಬಹಳ ಸುಸ್ತಾಗಿದ್ದಾರೆ, ಆಸ್ಪತ್ರೆಗೆ ಸೇರಿಸದೆ

ವಿಧಿಯಿಲ್ಲ. ಸತ್ಯ ನೋಡಿದರೆ ಎಲ್ಲೋ ಊರಮೇಲೆ ಅಲೆಯುತ್ತಿರುತ್ತಾನೆ. ಆಸ್ಪತ್ರೆಗೆ ಹೋಗಿ ಮದ್ದು ತರುವವರೂ ಇಲ್ಲ."

ಕಂಬನಿ ಮಿಡಿದಳು ಮೋಹಿನಿ. ಮೃತ್ಯುವಿನ ದಟ್ಟಛಾಯೆ ಮನಃ ಚಿತ್ರಗಳನ್ನು ಮುತ್ತಿ ತತ್ತರಿಸಿದ್ದಾಳೆ ಅವಳು. ನೋಡಿದೊಡನೆಯೆ ಮನಸ್ಸು ಬಿಸಿಲಟ್ಟಿದ ಮಂಜಿನಂತೆ ಕರಗಿತು. ಅವಳ ಕರುಣಾಜನಕ ಸ್ಥಿತಿಯಿಂದ ರಾಮನಾಥ ಚಿಂತೆಗೊಳಗಾದ. ಸ್ವಲ್ಪ ಹೊತ್ತು ತನ್ನಲ್ಲೇ ಯೋಚಿಸಿ ಹೇಳಿದ, "ನೀನು ಮುಂಚೆಯೇ ಆಸ್ಪತ್ರೆಗೆ ಕರೆದೊಯ್ಯಬೇಕಾಗಿತ್ತು. ಕಾಹಿಲೆ ಹೆಚ್ಚಿದಮೇಲೆ ಆಸ್ಪತ್ರೆಗೆ ಕರೆದೊಯ್ದರೆ ಹೇಗೆ ಹೇಳು ?" ದನಿ ಎದೆಯಾಳದಿಂದ ಹೊರಬಿತ್ತು.

"ನಾನು ಏನು ಮಾಡಲಿ? ನಿಸ್ಸಹಾಯಕಿ, ಬೆಳೆದ ಮಗ ಕೈಗೇ ಸಿಗುತ್ತಿಲ್ಲ."

ಅಲ್ಲಿಂದಲೇ ರಾಮನಾಥ ಕರೆದ "ಕುಮೂ...ಕುಮೂ !"

ಒಳಗಿದ್ದ ಅವಳು ಹೊರಬಂದಳು. ಸೀತಮ್ಮ–ದೇವಯ್ಯ ಇವರೂ ಹೊರಬಂದರು. ವಿಷಯ ತಿಳಿದು ಎಲ್ಲರೂ ಮರ್ಮರ ಮರುಗಿದರು. ಡ್ರೈವರ್ ರಜೆ ಹೋಗಿದ್ದ.

"ಈಗಲೇ ಕರೆದುಕೊಂಡು ಹೋಗಿ ಆಸ್ಪತ್ರೆಗೆ ಸೇರಿಸಿಬಿಡೋಣ" ಎಂದ ರಾಮನಾಥ.

ಕುಮುದ್ವತಿ ಕಾರನ್ನು ತೆಗೆದಳು. ರಾಮನಾಥ ಮೋಹಿನಿಯರು ಹತ್ತಿದ ಮೇಲೆ ಹೊರಟಿತು ಕಾರು.

"ಮಕ್ಕಳನ್ನು ಏನು ಮಾಡುತ್ತಿ" ಕೇಳಿದ ರಾಮನಾಥ.

"ಅವರಿಗೆ ರಜೆ ಬಂದಿದೆ. ಅವರೇ ಅಡಿಗೆ ಮಾಡಿಕೊಳ್ಳಬಲ್ಲರು."

ಸ್ವಲ್ಪ ಹೊತ್ತಿನೊಳಗಾಗಿ ಕಾರು ವಸಂತನ ಮನೆಯ ಮುಂದೆ ನಿಂತಿತು. ಒಳಹೋಗಿ ನೋಡಿದರೆ ದೇಹ ಹಾಸಿಗೆಗೆ ಹತ್ತಿಹೋಗಿದೆ. ಎಲು ಬಿನ ಹಂದರದಲ್ಲಿ ಜೀವ ಕಷ್ಟದಿಂದ ಉಸಿರಾಡುತ್ತಿದೆ. ಮುಖದ ಮೇಲೆ ಗಡ್ಡದ ಹುಲುಸಾದ ಬೆಳೆ. ಗುಳಿಬಿದ್ದ ಕಣ್ಣುಗಳು. ಬಾಚದ ಕೂದಲು.

ಸ್ನಾನಕಾಣದ ಮೈ, ಒಟ್ಟಿನಲ್ಲಿ ಅಸ್ವಾಸ್ಥ್ಯಾವಸ್ಥೆಯಲ್ಲಿದ್ದಾನೆ ವಸಂತ. ಅವನು ಒಂದೂ ಮಾತಾಡಲಿಲ್ಲ.

ಕಾರಿಗೆ ಕೂಡಲು ನಡೆದುಬರುವ ತ್ರಾಣವೂ ಇಲ್ಲ, ಎಲ್ಲರೂ ಹಿಡಿದು ಕೈಯಾಶ್ರಯದ ಮೇಲೆ ಕಾರಿಗೆ ತಂದು ಕೂರಿಸಿದಾಗ ರಾಮನಾಥನಿಗೆ 'ಅಯ್ಯೋ' ಎನ್ನಿಸಿತು. ಅವನು ಅದುವರೆಗೆ ನಡೆಸಿದ ಹಲ್ಲೆ ಗೂಂಡಾಗಿರಿಗಳು ಮನಃಪಟಲದಿಂದ ಅಳಿಸಿಯೇ ಹೋದುವು. ಒಡಲಲ್ಲಿ ಪುತ್ರವಾತ್ಸಲ್ಯ ಮಾತ್ರವೇ ಉಳಿದಿತ್ತು. ನೀಳವಾದ ನಿಟ್ಟುಸಿರು ಬಿಟ್ಟ. ಮಡದಿ ಲಕ್ಷ್ಮೀ ಅಕ್ಷಿಪಟಲದ ಮುಂದೆ ಸುಳಿಸುಳಿದಳಿದಳು. ಅಂತಹವಳ ಉದರದಲ್ಲಿ ಜನ್ಮ ಯೆತ್ತಿ ಹೀಗಾದನೇಕೆ? ಎಂಬ ಪ್ರಶ್ನೆ ತಲೆಯಲ್ಲಿ ನಿಮಿರಿ ನಿಂತಿತು. ಕಣ್ಮುಚ್ಚಿ ತನ್ನ ನೋವನ್ನು ತಾನೇ ನುಂಗಿಕೊಂಡ ಮಾತಾಡಲಿಲ್ಲ. ಹೃದಯಕುಂಡ ಭಾರಭಾರವಾಯಿತೇನೋ. ಕಾರು ಆಸ್ಪತ್ರೆಯ ಬಾಗಿಲಲ್ಲಿ ನಿಲ್ಲುವವರೆಗೂ ಇತ್ತ ಪರಿವೇ ಇರಲಿಲ್ಲ. ಒಂದೇ ಒಂದು ಮಾತೂ ಹೊರಬೀಳಲಿಲ್ಲ.

ಆಸ್ಪತ್ರೆಗೆ ಸೇರಿಸಿದ ನಂತರ ವೈದ್ಯರು ಪರೀಕ್ಷಿಸಿ ಅಭಿಪ್ರಾಯವನ್ನು ಕೊಡುವ ತನಕವೂ ಅಲ್ಲಿಯೇ ಉಳಿದರು. ವೈದ್ಯರು ರಾಮನಾಥನೊಡನೆ ಹೊರಬಂದು ವಿಷಾದ ವಾಣಿಯಲ್ಲಿ ನುಡಿದರು. "ಪರಿಸ್ಥಿತಿ ತುಂಬಾ ಹದಗೆಟ್ಟಿದೆ, ನನ್ನ ಕೈಲಾದ ಪ್ರಯತ್ನ ಮಾಡುವೆ. ನೀವು ಹಿಂದೆಯೇ ಕರೆತಂದಿದ್ದರೆ ಒಳ್ಳೆಯದಿತ್ತು."

"ನನಗೆ ತಿಳಿದುಬಂದುದು ಈಗಲೇ."

"ನೋಡೋಣ ದೇವರಿದ್ದಾನೆ. ನೀವು ಮನೆಗೆ ಹೋಗಿ ಸಾರ್. ನಾನು ನೋಡಿಕೊಳ್ಳುವೆ."

ಅನಂತರ ರಾಮನಾಥ ರೋಗಿಯ ವೈದ್ಯೋಪಚಾರಕ್ಕೂ ಮೋಹಿನಿಯ ಊಟೋಪಚಾರಕ್ಕೂ ಆಸ್ಪತ್ರೆಯಲ್ಲಿಯೇ ಅಗತ್ಯ ಏರ್ಪಾಡು ಮಾಡಿದ. ವೈದ್ಯರು ನೀಡಿದ ಔಷಧಿಗಳನ್ನೆಲ್ಲ ತಂದುಕೊಟ್ಟು ಹೊರಡುವಾಗೊಮ್ಮೆ ಮಗನ ಬಳಿಯಲ್ಲಿ ಸುಮ್ಮನೆ ಮೌನವಾಗಿ ನಿಂತು ನೋಡಿದರೆ ಅಂತರಂಗ

ಚೀರಿ ಹೇಳಿತು "ಈಸಲಿ ಇವನು ಗಂಡಾಂತರದಿಂದ ಪಾರಾಗಲಾರ. ಅದು ಖಂಡಿತ........"

ಆಗ ಅವನೊಮ್ಮೆ ಕಣ್ತೆರೆದು ನೋಡಿ ಲಜ್ಜೆ–ನೋವು–ಸಂಕಟ–ಪರಿತಾಪಗಳ ಗಣಿಯಾಗಿ ಹಾಗೇ ಕಣ್ಮುಚ್ಚಿಕೊಂಡ. ಮತ್ತೆ ಕಣ್ದೆರೆಯಲಿಲ್ಲ.

"ಮೋಹಿನಿ, ಧೈರ್ಯವಾಗಿರು. ವೈದ್ಯರು ಸ್ಥಿತಿ ಗತಿಯನ್ನು ನನಗೆ ತಿಳಿಸುತ್ತಿರುವುದಾಗಿ ಹೇಳಿದ್ದಾರೆ. ದೇವರು ದೊಡ್ಡವನು. ಅವನನ್ನು ಧ್ಯಾನ ಮಾಡು" ಹೇಳಲಾರದೇ ಹೇಳಿದ ರಾಮನಾಥ.

ಕುಮುದ್ವತಿಯೂ ಹಾಗೇ ಅಂದಳು. ಅನಂತರ ಇಬ್ಬರೂ ಹೊರಟರು.

ಕಾರು ನಡೆಸುತ್ತ ರಾಮನಾಥ ಅಂದ. "ಲಕ್ಷ್ಮಿ ಅಳಿದಾಗ ಇಬ್ಬರೂ ಐದಾರು ವರ್ಷದ ಮಕ್ಕಳು. ಅವರಿಗೆ ತಾಯಿಯ ಕೊರತೆಯನ್ನು ನೀಗಿ ಸಾಕಿದವನು ನಾನೇ. ಆಗ ಸಾವಿತ್ರಿಗಿನ್ನೂ ಮದುವೆಯಾಗಿರಲಿಲ್ಲ. ಅವಳ ಸಹಾಯದಿಂದ ಸಂಸಾರ ಸುಖವಾಗಿ ನಡೆಯಿತು. ನನಗೆ ಪುನರ್ವಿವಾಹ ವಾಗುವ ಯೋಚನೆಯಿರಲಿಲ್ಲ. ಸಾವಿತ್ರಿ ಗೃಹಿಣಿಯಾಗಿ ಹೊರಟುಹೋದ ಮೇಲೂ ಎರಡು ವರ್ಷ ನಾನೇ ಮನೆ ನಡೆಸಿದೆ. ಅನಂತರ ಒಳ ಹೊರಗೆ ಒಬ್ಬನೇ ನೋಡಿಕೊಳ್ಳುವುದು ತೀರ ಕಷ್ಟವಾದುದರಿಂದ ಮದುವೆ ಯೋಚನೆ ಮಾಡಬೇಕಾಯಿತು. ತಬ್ಬಲಿ ಮಕ್ಕಳೆಂದು ಇವರಿಬ್ಬರನ್ನೂ ತೀರ ಮುದ್ದಿನಿಂದ ಸಾಕಿದುದರಿಂದಲೋ ಏನೋ ಇಬ್ಬರೂ ಹಿಡಿದುದು ಅಡ್ಡ ಹಾದಿ. ಎಷ್ಟೆಷ್ಟು ಪ್ರಯತ್ನಿಸಿದರೂ ಸರಿದಾರಿಗೆ ಬರಲಿಲ್ಲ. ನನಗಾಗಲೇ ಜುಗುಪ್ಸೆ ಬಂದಿತ್ತು ಇವರ ಮೇಲೆ. ಅಂತಲೇ ಪದ್ಮಳನ್ನು ಲಗ್ನವಾದೆ. ಆಗಲೇ ಇಬ್ಬರೂ ತಿರುಗಿಬಿದ್ದರು. ಅಂದಿನಿಂದಲೂ ಇವರಿಂದ ನನಗೆ ಲಭಿಸಿದ್ದು ಹಿಂಸೆಯೇ.......ಪಾಪ, ಪದ್ಮ ಒಳ್ಳೆಯವಳು. ಅವಳ ಮೇಲೂ ದ್ವೇಷ ಸಾಧನೆ. ಅವಳ ಮನಸ್ಸಿಗೂ ಶಾಂತಿ ಕೊಡಲಿಲ್ಲ. ಮೊದಲ ನಾಲ್ಕು ವರ್ಷಗಳು ಮಕ್ಕಳಿಲ್ಲವೆಂಬ ಕೊರಗು. ಅನಂತರ ಕ್ಯಾನ್ಸರ್ ಅಂಟಿತು. ಚಿಕ್ಕ ವಯಸ್ಸಿನಲ್ಲೇ ನರಕ ಜೀವನ ಕಂಡಳು ಅವಳು. ತದನಂತರ ನೀನು ಬಂದ

ಮೇಲೆಯೇ ನನಗೆ ಲಭಿಸಿದ್ದು ಜೀವನ ಶಾಂತಿ. ಅಂದಿನಿಂದ ಜೀವನಗತಿಯನ್ನು ನೀನೇ ಕಂಡಿರುವೆಯಲ್ಲ. ಇರಲಿ, ತಬ್ಬಲಿ ಮಕ್ಕಳನ್ನು ಅಕ್ಕರೆಯಿಂದ ಸಾಕುವಾಗ ಮುಂದೆ ಇಷ್ಟು ಕೆಡುತ್ತಾರೆಂದು ನಾನು ಭಾವಿಸಿರಲೇ ಇಲ್ಲ."

ವಾಕ್ಸರಣಿ ಮುಗಿದಾಗ ಮುಖ ಕಣ್ಣುಗಳಲ್ಲಿ ರಂಗುಮೂಡಿ ಸಣ್ಣಗೆ ಬೆಳ್ಳಿಯ ಗೆರೆಯಂತೆ ಕಂಬನಿಗಳು ಮೂಡಿದುವು. ಅನಿರೀಕ್ಷಿತವಾಗಿ ಪ್ರಕಟವಾದ ಮನೋದೌರ್ಬಲ್ಯವನ್ನು ನೆನೆದು ತನ್ನನ್ನು ತಾನೇ ಹತೋಟಿಯಲ್ಲಿಟ್ಟುಕೊಂಡು ಮುಖ ಕಣ್ಣುಗಳನ್ನು ಕರವಸ್ತ್ರದಿಂದ ಒರಿಸಿ ಮರೆಮಾಚಿ ಪುನಃ ನುಡಿದ,

"ಕುಮೂ, ಎಲ್ಲಾ ವಿಧಿ ಬರೆಹ. ನಮ್ಮಿಂದೇನಾದೀತು ಹೇಳು?"

"ನಿಜ, ನೀವೇಕೆ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳುತ್ತೀರಿ? ಇದೆಲ್ಲಾ ನಿಮ್ಮ ಕೈಯಿಂದ ಮಿಂಚಿಹೋದ ವಿಷಯ". ಬಿಸಿಯುಸಿರು ಬಿಟ್ಟು ಪುನಃ ಮುಂದುವರಿದಳು "ಇಬ್ಬರೂ ಹೊಂದಿಕೊಂಡು ಚೆನ್ನಾಗಿದ್ದಿದ್ದರೆ ಎಷ್ಟು ಗೌರವವಿತ್ತು. ಏನು ಗ್ರಹಚಾರವೋ, ದೇವರೇ ಕಾಪಾಡಬೇಕು."

ಕಾರು ಮನೆಯ ಮುಂದೆ ನಿಂತಿತು. ದೇವಯ್ಯ–ಸೀತಮ್ಮ–ರಂಗಮ್ಮ ಹೊರಬಾಗಿಲಿಗೇ ಬಂದರು. ರಾಮನಾಥ ಒಂದೇ ಮಾತಿನಲ್ಲಿ ಹೇಳಿದ.

"ವಸಂತನ ಸ್ಥಿತಿ ತೀರಾ ಹದಗೆಟ್ಟಿದೆ. ದೇವರೇ ಕಾಪಾಡಬೇಕು."

ಯಾರ ತುಟಿಗಳೂ ಬಿರಿಯಲಿಲ್ಲ. ಸುಮ್ಮನೇ ಮರವಟ್ಟಂತೆ ನಿಂತು ನೋಡಿದರು. ಮೋಹಿನಿಯ ಸ್ಥಿತಿಗತಿ ಎಲ್ಲರ ಮನೋಭಿತ್ತಿಯ ಮೇಲೆ ಚಲನಚಿತ್ರದಂತೆ ಸುಳಿಸುಳಿದಳಿಯತೊಡಗಿತು. ರಾಮನಾಥ ಚಿಂತಾಕ್ರಾಂತನಾದ.

— ೦ —

೨೨

''The ruling passion,
Be it what it well,
The ruling passion
Conquers reason still''

ಪದ್ಮಾಲಯದಲ್ಲಿ ಪದ್ಮರಾಜೇಶ್ವರಿ ಸ್ತ್ರೀ ಕಲ್ಯಾಣ ಸಂಘದ ಮೀಟಿಂಗ್ ಕೂಡಿದಾಗ ಪ್ರಪ್ರಥಮವಾಗಿ ತೆಗೆದುಕೊಂಡ ವಿಚಾರ ಶ್ರೀಮತಿ ವಿಶಾಲಾಕ್ಷಿಯ ಪ್ರಸಂಗ. ಆವಳ ಹೇಳಿಕೆಯನ್ನು ಬರೆದುಕೊಂಡಳು ಕುಮುದ್ವತಿ. ಈ ಸಲಿ ನವಿಲಾ ತಂಡದವರೂ ಕೂಡಿ ಇಮ್ಮಡಿಯಲ್ಲಿ ಕೂಡಿದ್ದರು ಮಹಿಳೆಯರು.

"ಸಂಘದಿಂದ ಅವಳ ಪತಿಗೆ ಒಂದು ನೋಟೀಸ್ ಕೊಟ್ಟು ನೋಡೋಣ. ಆದರಿಂದ ಪ್ರಯೋಜನವಾಗದಿದ್ದರೆ ಸಂಘದ ಸದಸ್ಯಣಿಯರೆಲ್ಲಾ ಶಾಲೆಗೆ ನುಗ್ಗಿ ನಿಮ್ಮನ್ನು ಘೇರಾವ್ ಮಾಡಿ ತರಾಟೆಗೆ ತೆಗೆದುಕೊಳ್ಳುತ್ತೇವೆ...ಎಂದು ಸ್ಪಷ್ಟವಾಗಿ ಬರೆಯಬೇಕು." ಎಂದಳು ಕುಮುದ್ವತಿ.

ಆ ಕೂಡಲೇ ಅನೇಕರು "ಆಗಬಹುದು !" ಎಂದು ಒಕ್ಕೊರಲಿಂದ ನುಡಿದರು.

ಒಂದು ಗಂಟೆ ನಡೆದ ಮೀಟಿಂಗಿನಲ್ಲಿ ಇನ್ನೂ ಕೆಲವು ವಿಷಯಗಳು ಚರ್ಚೆಗೆ ಬಂದುವು.

ಇಂದಿರಮ್ಮ ನೋಟೀಸ್ ಬರೆದಳು. ಪದಾಧಿಕಾರಿಗಳು ಅದಕೆ ಸಹಿ ಹಾಕಿದರು.

ನವಿಲಾ ದಿಟ್ಟತನದಿಂದ ನುಡಿದಳು. "ನೀವು ಖಂಡಿತ ಅಂಜಬೇಡಿ ವಿಶಾಲಾಕ್ಷಿ. ಅವರನ್ನು ನಾವು ದಾರಿಗೆ ತರೋಣ. ಶಾಲೆಯಲ್ಲಿ ಮಕ್ಕಳ ಮುಂದೆ ಘೇರಾವ್ ನಡೆದರೆ ಅವರು ಸತ್ತಂತೆಯೇ. ಆದ್ದರಿಂದ ಅಷ್ಟಕ್ಕೆ ಅವಕಾಶ ನೀಡಲಾರರು ಎಂದುಕೊಳ್ಳೋಣ. ನೀವು ಧೈರ್ಯವಾಗಿ ಮನೆಗೆ ಹೋಗಬಹುದು."

ವಿಶಾಲಾಕ್ಷಿ ಹರ್ಷಿತಳಾದಳು. ಇಸ್ನಾದರೂ ರಣಹಿಂಸೆ ತಪ್ಪೀತು ಎಂಬ ಧೈರ್ಯ ಮನವನ್ನು ಆವರಿಸಿತು. ಆದರೂ, ಎದೆಯುಲ್ಲೊಂದು ಸಣ್ಣ ಅಳುಕು.

ಅಂದು ಶ್ರೀನಿಧಿಯ ಹುಟ್ಟು ಹಬ್ಬ. ಮಗಳ ಗೈರುಹಾಜರಿಯಲ್ಲಿ. ಸಿಹಿ–ಕಾರಗಳ ಹಂಚಿಕೆ ಆಯಿತು ಸಂಘದ ಸದಸ್ಯರಿಗೆ. ಎಲ್ಲರೂ ಹೊರಡುವ ಹೊತ್ತಿಗೆ ಆರು ಗಂಟೆಯ ಸಮಯ. ಕನಕ ರವಿಮಂಡಲ ಕನಕರಾಗದೊಂದಿಗೆ ಸಂಧ್ಯಾ ಶಾಂತಿಯ ಸುಂದರ ಸಮ್ಮಿಲನ ಹೊಂದಿ ರಂಜಿಸಿತು ಶಾಂತಿಪ್ರಿಯರನ್ನು.

ಶಿವಾಲಯದ ಶಂಖ–ಜಾಗಟೆ–ಗಂಟೆಗಳ ದಿವ್ಯವೊಳಗು ಅನುರಣಿತವಾಗುತ್ತಿದೆ ಕರ್ಣಪಟಲಗಳ ಮೇಲೆ. ತಂಗಾಳಿಯಲ್ಲಿ ತೇಲಿ ಅಲೆಯಲೆಯಾಗಿ ಬರುವ ಮಂಗಳನಾದ ಸುಪ್ತ ಮನದಲೆಗಳನ್ನು ಹೊಡೆದೆಬ್ಬಿಸಿ ಲೋಕೋತ್ತರವಾದ ವಿಚಾರ ಸಾಹಿತ್ಯದಲ್ಲಿ ಮುಳುಗಿಸುವಷ್ಟು ಭಾವ ಸುಂದರ.

ರಾಮನಾಥ ಹರವಾದ ಪ್ರಾಂಗಣದಲ್ಲಿ ಪದಚಾರಣ ಮಾಡುತ್ತ ಯೋಚಿಸಿದ......ಈ ಅಶಾಶ್ವತವಾದ ಶರೀರ ವಲಯಗಳನ್ನು ಆಶ್ರಯಿಸಿಕೊಂಡ ಕಾಮ ಕಾಮನೆಗಳಿಗೆ ಎಂತಹ ನೆಲೆ ಬೆಲೆ? ಎಷ್ಟು ಮೋಜಿನ ಹವ್ಯಾಸ? ಒಂದುವೇಳೆ ಮನುಷ್ಯ ಶಾಶ್ವತವಾಗಿದ್ದಿದ್ದರೆ ಈ ಜಗತ್ತು ಇನ್ನಾವ ರೂಪ ತಾಳುತಿತ್ತೋ ಏನೋ........ವಿಷಯ ಮನವರಿಕೆಯಾದೊಡನೆಯೇ ಸಣ್ಣ ತಿರಸ್ಕಾರದ ಕಿರುನಗೆ ತುಟಿಗಳಲ್ಲಿ ಮೂಡಿ ಮಾಯವಾಯಿತು.

ಅಂಗಳದಂಚಿನಲ್ಲಿ ಪಾದ ಸಪ್ಪಳವಾಗುತ್ತಲೂ ಸಹಜವಾಗಿ ದೃಷ್ಟಿ ಹೊರಳಿತು ಅತ್ತ. ಬಂದವನು ಕಪಿನೀಪತಿ.

"ಬುದ್ಧೀ...ಆಸ್ಪತ್ರೆಗೆ ಹೋಗಿದ್ದೆ. ವೈದ್ಯರು ಈ ಚೀಟಿ ಕೊಟ್ಟಿದ್ದಾರೆ ನಿಮಗೆ. ರಾಮನಾಥ ಕಾಗದವನ್ನು ತೆಗೆದು ಓದಿಕೊಂಡ. ಅದರಲ್ಲಿದ್ದುದು ಮೂರು ಪಂಕ್ತಿ ಮಾತ್ರ. ವಸಂತನ ದೇಹಸ್ಥಿತಿ ಒಂದೇ ರೀತಿಯಲ್ಲಿದೆ. ಇನ್ನೂ ಇಪ್ಪತ್ತನಾಲ್ಕು ತಾಸು ಏನೂ ಹೇಳುವಂತಿಲ್ಲ. ಕಾದು ನೋಡಬೇಕು, ಎಂದು. ಒಂದೇ ಕ್ಷಣದಲ್ಲಿ ಓದಿಕೊಂಡ ರಾಮನಾಥ. ಮನಸ್ಸು ಮುದುಡಿತು. ಬಾಲ್ಯದಲ್ಲಿ ತಾನು ವಹಿಸಿದ ಪರಿಶ್ರಮ, ಮುದ್ದಿನಿಂದ ಪಾಲಿಸಿದ ಬಗೆ ದೃಷ್ಟಿಪಟಲದ ಮೇಲೆ ತೇಲಿ ನಲಿಯಿತು. ಮೂರು ದಿನದ ಬಾಳಿಗೆ ಏನೆಲ್ಲ ಆಡಿದರು ಈ ಮಕ್ಕಳು? ತಂದೆಯೆಂಬ ಪ್ರೀತಿ–ವಿಶ್ವಾಸ–ಗೌರವ ಲವಲೇಶವೂ ಇಲ್ಲದೆ ಹೋಯಿತು. ಇಷ್ಟು ಮೂರ್ಖರಾಗಿ ಬಾಳಿದರಲ್ಲ, ಅದೇ ವ್ಯಸನ, ಅದೇ ಸಂಕಟ. ಎನಿಸಿದಾಗ ಎದೆಯಾಳದಿಂದ ಬಿಸಿಯುಸಿರೊಂದು ತಪ್ಪಿಸಿಕೊಂಡಿತು.

ಒಳಗಿನಿಂದ ಬಂದ ಕುಮುದ್ವತಿ ಚೀಟಿಯನ್ನು ತೆಗೆದುಕೊಂಡು ನೋಡಿ "ಅಯ್ಯೋ ಪಾಪ, ಮೋಹಿನಿಗೆ ಮಕ್ಕಳು ಸರಿಯಿಲ್ಲ, ಅದೇ ಕಷ್ಟ"...ಮುಂದೆ ಮಾತು ಹೊರಡಲಿಲ್ಲ. ಒಂದು ಗಳಿಗೆ ತಡೆದು ಪುನಃ "ಅವನಿದ್ದರೂ ಇಲ್ಲದಿದ್ದರೂ ಒಂದೇ ಆಗಿತ್ತು ಮೋಹಿನಿಗೆ. ಮುಂದೇನಾಗುತ್ತೋ..." ಎಂದಳು.

ಬೆಳಿಗ್ಗೆ ಎಲ್ಲರೂ ಹೋಗಿ ನೋಡಿಕೊಂಡು ಬರೋಣ. ಔಷಧಿಗಳನ್ನು ಕೊಂಡು ಕೊಟ್ಟಿರುವೆ. ಅವಳಿಗೆ ಖರ್ಚಿಗೆ ಹಣವನ್ನೂ ಕೊಟ್ಟಿರುವೆ. ನಾನು ನನ್ನ ಕರ್ತವ್ಯದಲ್ಲಿ ಲೋಪ ಮಾಡಲಿಲ್ಲ. ನಾಳೆ ಇನ್ನೂ ಏನಾದರೂ ಅಗತ್ಯವಿದ್ದರೆ ಪೂರೈಸೋಣ."

ಕುಮುದ್ವತಿ 'ಹ್ಞೂ' ಎಂಬಂತೆ ತಲೆಯಾಡಿಸಿದಳು, ಮಾತಾಡಲಿಲ್ಲ.

೦ ೦ ೦ ೦

ಬೆಳಗಿನ ಟಪ್ಪಾಲಿನಲ್ಲಿ ಶ್ರೀನಿಧಿಯ ಪತ್ರವಿತ್ತು. ಪ್ರೀತಿ ಮತ್ತು ಆಸ್ಥೆಯಿಂದ ಒಡೆದ ರಾಮನಾಥ,....ನಿಮಗೆ ಬರೆಯಬೇಕಾದುದನ್ನೆಲ್ಲಾ ಬರೆಯುತ್ತ ಹೋದರೆ ಎಷ್ಟು ಕಾಗದಗಳು ಬೇಕೋ ಊಹಿಸಲಾರೆ. ಮನ

ಸ್ಸಿನ ಭಂಡಾರದಲ್ಲಿ ವಿಷಯಗಳು ಜಡಿ ತುಂಬಿಹೋಗಿವೆ. ಯೋಚಿಸಿ ಯೋಚಿಸಿ ತಲೆಯೇ ಭಾರ. ಒಮ್ಮೊಮ್ಮೆ ಯೋಚಿಸಲೇಬಾರದು; ಒಂದು ತಾಸು ಅಥವಾ ಅರ್ಧದಿನ ಅಥವಾ ಒಂದು ದಿನ ಹಾಯಾಗಿರೋಣ ಎನ್ನಿಸುತ್ತದೆ, ಆದರೆ, ಆಲೋಚನೆಯಲೆಗಳು ಸುಪ್ತವಾಗಿದ್ದರಷ್ಟೆ? ದಿನದಿನ ಮನವನ್ನು ತೀವ್ರಾಲೋಚನೆಗಳು ತುಂಬಿ ನರನಾಡಿಗಳು ಸಿಡಿಯುವಂತೆ ಇನ್ಮಡಿ ವೇಗದಲ್ಲಿ ಹರಿಯುತ್ತದೆ ನೆತ್ತರಿನ ಝರಿ.

ನಮ್ಮ ಸಮಾಜ ಈ ಜನ್ಮದಲ್ಲಿ ಕಣ್ತೆರೆಯಲಾರದು. ಜಡಭರತ ಸ್ಥಿತಿಯೇ ಎಲ್ಲೆಲ್ಲೂ. ಈ ನಾಗರಿಕ ಯುಗದ ನಾಗರಿಕ ಜನಾಂಗ ಏಕೆ ಹೀಗಿದೆಯೋ ಊಹಿಸಿ ತಿಳಿಯಲಾರೆ. ಯೋಚಿಸಿಯೂ ತಿಳಿಯಲಾರೆ. ನನ್ನ ಸಹ ವಿದ್ಯಾರ್ಥಿನಿಯರ ಭಂಗ ಬವಣೆಯನ್ನು ದಿನವೂ ನೋಡುತ್ತಿರುವೆ. ಯಾರಿಗೂ ವೈಯಕ್ತಿಕ ಸ್ವಾತಂತ್ರ್ಯ–ಆರ್ಥಿಕ ಸ್ವಾತಂತ್ರ್ಯ ಇಲ್ಲವೇ ಇಲ್ಲ. ಅವರ ಓದು ವಿದ್ಯಾಭ್ಯಾಸದ ಕತೆಯೊಂದು ರಾಣಾರಂಪದ ಪ್ರಸಂಗ. ಅನೇಕರಿಗೆ ಕಣ್ಣೀರಿನ ಬಾಳು. ಒಂದೊಂದು ದಿನ ಕಳೆಯುವುದು ಕಷ್ಟವೇ. ದುಃಖ ದುಗುಡಗಳ ಕೋಟಿ. ಬಹಳಷ್ಟು ಜನರ ರಣಗೋಳಿನ ಕತೆಯಿದು. ಎಷ್ಟೋ ಸಲಿ ನನ್ನ ಜೊತೆಗಾತಿಯರಿಗೆ ಸಹಾಯ ಮಾಡುವೆ. ಇದರಿಂದಾಗಿ, ಕಟ್ಟಕಡೆಗೆ ನನ್ನ ಕೈಯಲ್ಲಿ ಕಾಸಿರುವುದೇ ಇಲ್ಲ.

ನಮ್ಮಲ್ಲಿ ಭಾರತದಾದ್ಯಂತ ಈ ಗೋಳು ಹೆಂಗಳೆಯರಿಗೆ ಇದ್ದದ್ದೇ. ಅದಕ್ಕೆ ಕಾರಣ ನಮ್ಮ ಸಾಮಾಜಿಕ ದುರ್ವ್ಯವಸ್ಥೆಯೇ ಎಂದರೆ ತಪ್ಪಲ್ಲ. ಅದರಲ್ಲೂ ವರ್ತಮಾನ ಯುಗಧರ್ಮವನ್ನು ಅರಿಯದೆ ಹಿಂದಿನ ಪುರಾಣವನ್ನೇ ಹಚ್ಚಿಕೊಂಡಿರುವುದು ಬಲೂ ಶೋಚನೀಯ. ಯಾರಿಗೂ ಜೀವನ ಇಷ್ಟು ಕಠಿಣವಾಗಬಾರದು. ಹೆಣ್ಣು ಎಂದರೆ ತಾತ್ಸಾರ. ಲೋಕರೂಢಿಗಾಗಿ ಹೆಣ್ಣಿಗೆ ವಿದ್ಯಾಭ್ಯಾಸ ದೊರೆಯುತ್ತಿದೆ, ಅಷ್ಟೆ. ಅಷ್ಟಿಷ್ಟು ವಿದ್ಯಾಭ್ಯಾಸ ಪಡೆದರೂ ಮದುವೆ ಎಂಬ ಕ್ರೂರ ಶಾಸನವೊಂದುಂಟಲ್ಲ, ಅದನ್ನಂತೂ ಯಾರೂ ದಾಟಲಾರರು. ತಾಯ್ತಂದೆಯರ ಸುಖಾಶ್ರಯ ಇರುವ ತನಕ ಬದುಕು ಹಗುರ. ಅನಂತರ ಗೋಳು–ರಾಣಾರಂಪ ತಪ್ಪಿದ್ದಲ್ಲ. ಬಾಳು ದುಃಖದ ಕಡಲಾಗಿ

ದ್ದರೂ ನಗುನಗುತ್ತ ಸಹಿಸಿಕೊಂಡು ಹೋಗುವ 'ವರ'ವನ್ನು ಪಡೆದುಕೊಂಡಿರುವುದೊಂದು ಪುಣ್ಯ. ವೈಯಕ್ತಿಕ ಸ್ವಾತಂತ್ರ್ಯವಿಲ್ಲದೆ ತಮ್ಮತನವನ್ನೇ ಮರೆತ ಹುಡುಗಿಯರನ್ನು ನೋಡಿದರೆ ಮನಸ್ಸು ಮಂಜಿನಂತೆ ಕರಗಿ ದ್ರವಿಸುತ್ತದೆ. ಶ್ರೀಮಂತಿನಿಯರಿಗೆ ಹಣದ ಕೊರತೆಯಿಲ್ಲ. ಆದರೆ, ವಿವಾಹ ಕಡ್ಡಾಯ. ಗೋಮುಖ ವ್ಯಾಘ್ರನೊಬ್ಬ ಬರುವುದು ಅವರಿಗೆ ತಿಳಿಯುವುದೇ ಇಲ್ಲ. ಅನಂತರ ಅವನ ಅಂಗೈಲಿ ಆಡುವ ಗಿಣಿಯಾಗಿ ಬಾಳು ಮುಗಿಸಬೇಕು. ಇದು ಸಾಮಾಜಿಕ ರೂಢಿ.

ಇಂದೂ, ಈಗಲೂ ಈ ಅನಿಷ್ಟ ಪದ್ಧತಿಗೆ ವರದಾನ ಎಂದರೆ ಎಂತಹ ಆಶ್ಚರ್ಯ! ನಮ್ಮ ಸಾಮಾಜಿಕ ಸುಧಾರಣೆ ಈ ಶತಮಾನದಲ್ಲಂತೂ ಆಗುವುದೇ ಇಲ್ಲ ಬಿಡಿ. ಯಾರೋ ಒಬ್ಬಿಬ್ಬ ಪುಣ್ಯವಂತರು ನೆಮ್ಮದಿಯಿಂದ ಉಸಿರಾಡಿದರೆ ಸಾಕೆ?

ಇಂದಿರಾಗಾಂಧಿ ದೀರ್ಘಕಾಲ ಪರ್ಯಂತ ಸರ್ವಾಧಿಕಾರ ಪೀಠಸ್ಥಳಾಗಿದ್ದಳಲ್ಲಾ, ಅವಳಿಗೆ ಇದೇಕೆ ಅರ್ಥವಾಗಲಿಲ್ಲ? ಅವಳೇಕೆ ಸ್ತ್ರೀಯರಿಗೆ ಪುರುಷ ಸಮಾನಸ್ಕಂದತೆ ನೀಡಲಿಲ್ಲ? ಬಹುಶಃ ಎಲ್ಲರೂ ತನ್ನಂತೆಯೇ ಸ್ವತಂತ್ರ ಜೀವಿಗಳು ಎಂದು ಭಾವಿಸಿಕೊಂಡಳೋ ಏನೋ...... ಈ ಭಾರತ ರಾಷ್ಟ್ರೋದ್ಧಾರ ಆಗಬೇಕು ಎಂದರೆ ಸ್ತ್ರೀ ತಾನು ಸುಖವಾಗಿದ್ದು ತನ್ನ ಮಕ್ಕಳನ್ನು ಸುಖೀರಾಜ್ಯದ ಸತ್ ಪ್ರಜೆಗಳನ್ನಾಗಿಸಬೇಕು. ಅಂದರೆ, ಅದು ಕನಸಿನ ಗಂಟು ಮಾತ್ರ. ಅದು ನನಸಾಗುತ್ತೋ ಇಲ್ಲವೋ ಅದೇ ಅನುಮಾನ.

ಪರಿಸ್ಥಿತಿ ಹೀಗಿರುವಾಗ ಅಮ್ಮ ಪದ್ಮರಾಜೇಶ್ವರಿ ಸ್ತ್ರೀ ಕಲ್ಯಾಣ ಸಂಘದ ಮೂಲಕ ಮಾಡುತ್ತಿರುವ ಅಳಿಲ ಮಳಲಸೇವೆ ಏನೇನೂ ಸಾಲದು. ನೀವೂ ಭುಜಕ್ಕೆ ಭುಜ ಕೊಟ್ಟು ಮಹಿಳೋದ್ಧಾರಕ್ಕೆ ಶ್ರಮಿಸುವುದು ಸರ್ವೋತ್ತಮ. ಖಂಡಿತ ನೀವೆಲ್ಲಾ ಒಂದಾಗಿ ಮುಂದೆ ನಿಲ್ಲಿ....

ಕಾಗದ ಓದಿದ ನಂತರ ನಾರೀ ಹೃದಯದ ಸಮಸ್ತ ದುಃಖವನು ಒಮ್ಮೆಗೇ ಅರಿತಂತಾಯಿತು ಮನಕ್ಕೆ. ರಾಮನಾಥ ನಿಟ್ಟುಸಿರು ಬಿಟ್ಟ.

೦ ೦ ೦ ೦

ವಿಶಾಲಾಕ್ಷಿ ಮುಂಬಾಗಿಲಿಗೆ ಬಂದಾಗ ಕದ ಮುಚ್ಚಿತ್ತು.

ಒಳಗಡೆ ಯಾರೂ ಇಲ್ಲವೇನೋ ಎಂಬಷ್ಟು ನಿಶ್ಶಬ್ದ–ನೀರವ. ಮೆಲ್ಲನೆ ಕರೆಗಂಟೆಯನ್ನು ಒತ್ತಿದಳು ಕುಕ್ಕೂ, ಕುಕ್ಕೂ, ಕುಕ್ಕೂ, ಕುಕ್ಕೂ. ಐದು ನಿಮಿಷಗಳು ಸದ್ದಿಲ್ಲದೆ ಉರುಳಿಹೋದುವು. ಇನ್ನೊಮ್ಮೆ ಕರೆಗಂಟಿ ಯನ್ನು ಒತ್ತಲೇ ಎಂದು ಕರೆಗಂಟೆಗೆ ಕೈ ಹಾಕಿದಾಗಲೇ ಬಾಗಿಲು ತೆರೆಯಿತು. ಸೀತಮ್ಮ ಮುಗುಳ್ನಗೆಯ ಸ್ವಾಗತ ಮಾಡಿದಳು "ಬನ್ನಿ ಒಳಗೆ."

"ನಮಸ್ಕಾರ! ಅಮ್ಮಾ ಚೆನ್ನಾಗಿದ್ದೀರಾ?"

"ಹೌದಮ್ಮ, ನೀನು ಹೇಗಿದ್ದೀ?"

"ದೇವರು ದೊಡ್ಡವನು!" ಗಗನದೆಡೆಗೆ ಮುಖಮಾಡಿ ಕೈಮುಗಿದಳು, ವಿಶಾಲಾಕ್ಷಿ.

ಆತ್ಮೀಯತೆಯಿಂದ ಸ್ವಾಗತಿಸಿದಳು ಸೀತಮ್ಮ.

ಒಳಬಂದಳು ವಿಶಾಲಾಕ್ಷಿ. ಒಳಗಿದ್ದ ಕುಮುದ್ವತಿ ಹೊರಬಂದು ವಿಶಾಲಾಕ್ಷಿಯನ್ನು ಕಂಡು ತನ್ನ ಆಫೀಸಿಗೆ ಬರಮಾಡಿಕೊಳ್ಳುತ್ತ ಕೇಳಿದಳು.

"ಏನು ಸಮಾಚಾರ ವಿಶಾಲಾಕ್ಷಿ?"

"ನಿಮ್ಮ ನೋಟೀಸ್ ತುಂಬಾ ಪರಿಣಾಮಕಾರಿಯಾಗಿದೆ. ಅದನ್ನು ಓದಿದ ನಂತರ ಸರಿದಾರಿಗೆ ಬಂದಿದ್ದಾರೆ ನಮ್ಮವರು. ನೀವು ಶಾಲೆಗೇ ಬಂದು 'ಘೇರಾವ್' ಮಾಡುತ್ತೇವೆ ಎಂದುದು ಮಹತ್ಪರಿಣಾಮ ಉಂಟುಮಾಡಿದೆ. ಮಕ್ಕಳ ಮುಂದೆ ಘೇರಾವ್ ನಡೆದರೆ ಹೇಗಿರಬೇಡ? ಬಿಡಿ. ಅವರಿನ್ನು ನನ್ನ ತಂಟೆಗೆ ಬರಲಾರರು. ಆದರೆ, ಇದು ಬಲಾತ್ಕಾರ ಮಾಘಸ್ನಾನ ಎನ್ನೋಣ. ...ಅಂತೂ, ಕಾದು ನೋಡಬೇಕು. ಮುಂದೆ ಹೇಗಾಗುತ್ತೋ, ದೇವರು ದೊಡ್ಡವನು ಅವನು ಕೃಪೆ ತೋರಬೇಕು. ನಿಮಗೆ ತುಂಬ ಅಭಿನಂದನೆಗಳು, ನಿಮ್ಮನ್ನು ಎಷ್ಟು ವಂದಿಸಿದರೂ ಸಾಲದು."

"ನೀವು ಇಲ್ಲಿಯತನಕ ಬಂದು ನಿಮ್ಮ ಸಮಸ್ಯೆಯನ್ನು ಬಗೆಹರಿಸಿ ಕೊಳ್ಳುವ ಸಾಹಸ ಮಾಡಿದಿರಲ್ಲ, ಅದೇ ಸಂತೋಷ. ನಿಮಗೆ ಶುಭವಾಗಲಿ."

ಅವಳು ಮತ್ತೊಮ್ಮೆ ಅಭಿನಂದಿಸಿ ಅಲ್ಲಿಂದ ಹೊರಟುಹೋದಳು.

ತಮ್ಮ ಪ್ರಯತ್ನ ಫಲಿಸಿದುದು ಬಹಳ ಸಂತೋಷವೇ ಆಯಿತು ಕುಮುದ್ವತಿಗೆ.

ಎಲ್ಲರೂ ಆಸ್ಪತ್ರೆಯ ಭೇಟಿಗೆ ಹೊರಟರು. ವರಾಂಡದಲ್ಲಿಯೇ ಸುಮಿ ಮತ್ತು ಮಕ್ಕಳ ದರ್ಶನವಾಯಿತು. ರಾಮು ಭೀಮು ಅಲ್ಲಿಯೇ ಇದ್ದರು. ಸತ್ಯ ಕಾಣಲಿಲ್ಲ.

"ಸತ್ಯ ಬರಲಿಲ್ಲವೇ ?" ಕೇಳಿದ ರಾಮನಾಥ.

"ಬಂದಿದ್ದ, ಈಗಷ್ಟೇ ಹೊರಹೋಗಿದ್ದಾನೆ."

ರಾಮನಾಥ ಮಂಚದ ಬಳಿಗೆ ಹೋದ. ವಸಂತನ ಸ್ಥಿತಿ ಏನೇನೂ ಸುಧಾರಿಸಲಿಲ್ಲ. ಸುಮ್ಮನೆ ಕಣ್ಣು ಬಿಟ್ಟು ಪಿಳಿಪಿಳಿ ನೋಡಿದ ಅಷ್ಟೆ. ರಾಮನಾಥ ಕೇಳಲಾರದೇ ಕೇಳಿದ,

"ಹೇಗಿದ್ದಿ ಇಂದು?"

ಅವನು ಮಾತಾಡಲಿಲ್ಲ. ಸುಮ್ಮನೆ ಕಣ್ಣು ಮುಚ್ಚಿಕೊಂಡ.

ಡಾಕ್ಟರ ಅವ್ಯಾಹತ ಚಿಕಿತ್ಸೆಯನ್ನು ಮೈಗೊಳ್ಳದೆ ಅಸ್ವಾವಸ್ಥೆಯ ಕಡೆಗೆ ಸರಿಯುತಿದ್ದ ವಸಂತ. ಗಂಟಲಾರಿ ಆಹಾರ ಇಳಿಯುವುದೇ ಕಷ್ಟ. ಡಾಕ್ಟರು ಕೊಟ್ಟ ಅವಧಿ ಕಳೆಯಿತು. ಯಾರಿಗೂ ಅವನು ಬದುಕುವಿಕೆಯಲ್ಲಿ ನಂಬಿಕೆ ಉಳಿಯಲಿಲ್ಲ. ಎಲ್ಲರೂ ವರಾಂಡದಲ್ಲಿ ಕಾದು ನಿಂತರು. ಅವನ ಸ್ಥಿತಿ ಗತಿ ಒಂದೇ ತೆರನಾಗಿತ್ತು.

ರಾಮನಾಥ ಮೋಹಿನಿಯ ಕೈಗೆ ಹಣವನ್ನು ಕೊಟ್ಟು "ಏನಾದರೂ ಅಗತ್ಯವಿದ್ದರೆ ತರಿಸಿಕೊ" ಎಂದ. ಮುಂದೆ ಮಾತು ಹೊರಡಲಿಲ್ಲ. ಅವಳು ಒಂದೇ ಸಮನೆ ಅಳುತಿದ್ದಾಳೆ. ಅವಳಿಗೆ ಸಮಾಧಾನ ಹೇಳುವಷ್ಟು ಹೇಳಿ ಎಲ್ಲರೂ ಹೊರಟಾಗ ರಾತ್ರಿ ಹತ್ತು ಗಂಟೆ.

ಮುಂದೆರಡು ದಿನಗಳು ತೀರ ಕಠಿಣ ಪರಿಸ್ಥಿತಿಯಲ್ಲಿ ಕಳೆದುವು. ವಸಂತ ಪ್ರಾಣಸಂಕಟದಿಂದ ನರಳಿದ ಬಳಿಕ ಮೃತ್ಯುವಶನಾದ. ಸೂರ್ಯ ಮೂಡುವ ವೇಳೆಗೆ ಸರಿಯಾಗಿ ಕಣ್ಬೆಳಕು ಸಂದಿಹೋಯಿತು. ರಾಮನಾಥನ ಸಂಸಾರವೂ ಹಾಸಿಗೆಯ ಬಳಿ ಕಾದಿತ್ತು. ಮೋಹಿನಿ ಮಕ್ಕಳೊಂದಿಗೆ ದುಃಖ ಸಂಕಟವನ್ನು ಹಂಚಿಕೊಂಡಳು. ಅಂದಿಗೆ ಆಸ್ಪತ್ರೆಯ ಋಣ ತೀರಿಹೋಯಿತು.

ಆ ದಿನ ಸಂಜೆಯವರೆಗೆ ಅಂತ್ಯಸಂಸ್ಕಾರದ ವಿಧಿವಿಧಾನಗಳಲ್ಲಿ ಕಳೆಯಿತು. ಊರಿನವರು ಕೂಡಿ ಸ್ಮಶಾನಯಾತ್ರೆಯನ್ನು ನಡೆಸಿದರು. ಮೋಹಿನಿಯ ಎದುರಿಗೆ ಧುತ್ತೆಂದು ನಿಂತಿತು ಮಕ್ಕಳ ಭವಿಷ್ಯ. ಮಾತು ಕೇಳುವವರಲ್ಲ. ಮುಂದೆ ಹೇಗೋ ಎಂಬ ಚಿಂತೆ. ತಾಳಲಾರದ ಸಂಕಟ.

o o o o

ಮತ್ತೆ ಯಥೋಚಿತವಾಗಿ ವಸಂತನ ತೋಟ ಗದ್ದೆಗಳ ವ್ಯವಸಾಯದ ಹೊಣೆಗಾರಿಕೆ ಭುಜವೇರಿತು ರಾಮನಾಥನಿಗೆ. ಎರಡು ಸಂಸಾರಗಳ ಭಾರ ಸಾಮಾನ್ಯವಲ್ಲ. ಮೇಲಾಗಿ, ಮಕ್ಕಳನ್ನು ತಿದ್ದಿ ಸರಿಯಾದ ದಾರಿಯಲ್ಲಿ ನಡೆಸುವ ಹೊಣೆ ಬೇರೆ. ಸತ್ಯವನ್ನು ತಾನೇ ಕರೆದೊಯ್ದು ಮಂಗಳೂರಿನ ಶಾಲೆಯೊಂದಕ್ಕೆ ಸೇರಿಸಿ ಮುಖ್ಯೋಪಾಧ್ಯಾಯರ ಉಸ್ತುವಾರಿಯಲ್ಲಿ ಓದಿಸುವ ಏರ್ಪಾಡು ಮಾಡಿ ಬಂದ ರಾಮನಾಥ. ಸತ್ಯ ಎದುರಾಡದೆ ಶಾಲೆಯನ್ನು ಸೇರಿಕೊಂಡುದು ಮನಸ್ಸಿಗೆ ಎಷ್ಟೋ ಸಮಾಧಾನ. ರಾಮು–ಭೀಮು ರವರಿಗೂ ನಗರದ ಶಾಲೆಯಲ್ಲಿ ಪರಿಣಾಮಕಾರಿಯಾದ ಶಿಕ್ಷಣ ಕೊಡಿಸಲು ತಕ್ಕ ಏರ್ಪಾಡು ಮಾಡಿ ಮಕ್ಕಳನ್ನು ಹದ್ದುಬಸ್ತಿನಲ್ಲಿಡಲು ಸರ್ವ ಸಾಧನೆ ಮಾಡಿದ. ಅಷ್ಟಲ್ಲದೆ ಕಂಡಕಂಡಾಗಲೆಲ್ಲಾ ಹಿತವಾದ ಹೇಳುತ್ತಿದ್ದ. ಶಾಲೆಗೂ ಹೋಗಿ ಅವರ ಪ್ರಗತಿಶೀಲತೆಯನ್ನು ಕೇಳಿ ತಿಳಿದುಕೊಳ್ಳುತಿದ್ದ. ಈ ಬಗೆಯ ಕಟ್ಟುನಿಟ್ಟಿನಿಂದ ಮಕ್ಕಳ ಮನಸ್ಸು ವಿದ್ಯೆ ಬುದ್ಧಿಯ ಕಡೆ ಹೊರಳಿತು. ರಾಮನಾಥ ಒಮ್ಮೆ ಭೀಮು–ರಾಮುರವರಿಗೆ ಹಿತವಾದ ಹೇಳುತ್ತ ನುಡಿದ "ನಿಮ್ಮ ಅಪ್ಪ–ಚಿಕ್ಕಪ್ಪಂದಿರು ಬಡಿದಾಡಿ, ಅಡ್ಡಹಾದಿ ಹಿಡಿದು ಬಾಳು ತುಂಬ ದೆಯೋ ಮಡಿದ ಸಂಗತಿ ನಿಮಗೆ ಗೊತ್ತು. ಅವರ ದುಷ್ಟತನವನ್ನು ಕಣ್ಣ

ನಿಂದ ಕಂಡಿದ್ದೀರಿ. ಆದ್ದರಿಂದ ನಿಮಗೆ ಹೆಚ್ಚಿನ ತಿಳಿವಳಿಕೆ ಹೇಳುವ ಅಗತ್ಯ ವಿಲ್ಲ ಎನಿಸುತ್ತೆ ನನಗೆ. ನಿಮ್ಮವರ ಜೀವನವೇ ನಿಮಗೆ ಪಾಠಕಲಿಸುತ್ತದೆ. ಮುಂದೆ ರಾಷ್ಟ್ರಕ್ಕೆ ಸತ್ಪ್ರಜೆಗಳಾಗಿ ಬಾಳುವ ವಿಧಾನವನ್ನು ನೀವು ಬಾಲ್ಯ ದಿಂದಲೇ ಕಲಿತುಕೊಳ್ಳಬೇಕು. ನೀವು ಸರಿಯಾಗಿ ನಡೆದುಕೊಂಡು ನಿಮ್ಮ ಸಹಪಾಠಿಗಳಿಗೆ ಮಾರ್ಗದರ್ಶಕರಾಗಿ. ಅಂದರೆ ಅದರಿಂದ ನಮಗೆ ಖಂಡಿತವಾಗಿಯೂ ಸಂತೋಷ ಉಂಟಾಗುತ್ತದೆ. ನಿಮ್ಮ ವರ್ತನೆ ಪರಿಶುದ್ಧ ವಾಗಿದ್ದಲ್ಲಿ ನಿಮ್ಮ ತಾಯಿಗೂ ಸಂತೋಷ ತರುತ್ತದೆ. ನೀವು ಹಿರಿಯರಿಗೆ ಸಂತಸ ಉಂಟುಮಾಡಬೇಕೇ ಹೊರತು ದುಃಖ ಉಂಟುಮಾಡಬಾರದು."

ಹುಡುಗರು ತಾತನ ಮಾತುಗಳನ್ನು ಕಲ್ಲಿಗಿಂತ ಕಲ್ಲಾಗಿ ನಿಂತು ಕೇಳಿ ದರು. ಮೈಯೆಲ್ಲಾ ಮನಸ್ಸಾಯಿತು. ತಮ್ಮ ಸಣ್ಣತನ ತಮಗೇ ನಾಚಿಕೆ ತರುವಷ್ಟು ಎದೆಯ ಹಕ್ಕಿ ಹಂಬಲಿಸಿತು. ಹಿತವಚನಗಳು ಮನದಾಳದಿಂದ ಎದೆಯ ಕರಂಡಕ್ಕೆ ತಟತಟನೆ ತೊಟ್ಟಿಕ್ಕಿದಾಗ ಶಾಂತಿಜಲಸೇಚನೆಗೈದಂತೆ ಮನಃಬುದ್ಧಿಗಳು ಪ್ರದೀಪ್ತವಾಗತೊಡಗಿದುವು. ಹುಡುಗರು ಹುಡುಗತನದ ಪೊರೆಯನ್ನು ಮೆಲ್ಲಮೆಲ್ಲನೆ ಕಳಚಿಕೊಳ್ಳುವಂತಾಯಿತು.

ರಾಮನಾಥ ಸಂತುಷ್ಟನಾದ.

ಕುಮುದ್ವತಿಯು ಕೆಲವೊಮ್ಮೆ ತಂದೆತಾಯಿಯರೊಡನೆ ಮತ್ತು ರಾಮನಾಥನೊಡನೆ ಇಬ್ಬರ ಮನೆಗಳಿಗೂ ಹೋಗಿಬರುತ್ತಾಳೆ. ಇಬ್ಬರ ಸಂಸಾರಗಳಲ್ಲೂ ಸ್ನೇಹದ ಕುಡಿ ಚಿಗುರತೊಡಗಿದೆ. ಆದರೂ ಅಂದಿಂದಿನ ಹಗರಣದ ನೆರಳು ಮೈಚಾಚುವುದರಿಂದ ಸಂಕೋಚದ ಅಡ್ಡಗೋಡೆ ಇದ್ದೇ ಇತ್ತು ಅವರ ಮನದಲ್ಲಿ.

ರಾಮನಾಥನ ಕಡೆಯಿಂದ ಆಳುಗಳು ಬಂದು ಕೆಲಸ ಮಾಡಿ ಹೋಗು ವುದರಿಂದ ತಮ್ಮ ಬದುಕು ನಿರಾಳ. ಮಕ್ಕಳೂ ವಿದ್ಯೆಯಲ್ಲಿ ಮನವಿಟ್ಟಿದ್ದಾರೆ. ಅಂದಮೇಲೆ ಅಶಾಂತಿಗೆ ಕಾರಣವೇ ಇಲ್ಲ. ಇಬ್ಬರಿಗೂ ಪತಿಯ ಮರಣಾ ನಂತರ ಕಿರಿಕಿರಿ ತಪ್ಪಿ ಕರ್ತವ್ಯಪ್ರಜ್ಞೆಯನ್ನು ಕೆರಳಿಸಿದುದರಿಂದ ಶರೀರ ಚಟು ವಟಿಕೆಯ ಬೀಡು...ಎಂಬುದರಲ್ಲಿ ಅತ್ಯುಕ್ತಿಯಿಲ್ಲ.

ಮನೆ ಕಟ್ಟಾಣಿಕೆಯಲ್ಲಿ ಹೆಚ್ಚು ಆಸಕ್ತಿಯಿಲ್ಲದ ವಸಂತ ಹೇಗೆ ಹೇಗೋ ಕಟ್ಟಿ ಮುಗಿಸಿದ್ದ. ಅದನ್ನಿಷ್ಟು ಕೆಡವಿ ಕಟ್ಟಿಸುವ ಅವಶ್ಯಕತೆಯಿತ್ತು. ಆದರೆ, ಅದು ಸದ್ಯಕ್ಕಂತೂ ಆಗದ ಮಾತು. ಯೋಚಿಸಿ ಯೋಚಿಸಿ ಸುಮ್ಮನಾಗುವುದು ರೂಢಿ ಮೋಹಿನಿಗೆ. ಸುಮಿ ಮತ್ತು ಮಕ್ಕಳು ಹತ್ತಿರವಿದ್ದು ಆಗಾಗ ಬಂದು ಹೋಗುವುದರಿಂದ ಮನಸ್ಸಿಗೆ ಎಷ್ಟೋ ಹಿತ. ಅಣ್ಣ ತಮ್ಮಂದಿರಲ್ಲಿ ಇರದಿದ್ದ ಸ್ನೇಹ ಸೌಹಾರ್ದ ಇವರಲ್ಲಿತ್ತು. ಇಬ್ಬರೂ ಕಷ್ಟ ಸುಖಗಳಲ್ಲಿ ಪರಸ್ಪರ ಸಹಕರಿಸುವುದು ಅಂದಿಂದಿಗೂ ಇದ್ದದ್ದೇ ಕೂಡಿದಾಗ ದೂರ ಭವಿಷ್ಯವನ್ನು ಕುರಿತು ಚರ್ಚಿಸುವ ಪ್ರಸಂಗ ಬರುತ್ತದೆ. ಗಂಡಂದಿರ ಅನೀತಿ ಮಾವನ ಧಾರಳತನ ಎರಡೂ ನಲಿಯುತ್ತವೆ ನಾಲಿಗೆಯ ಮೇಲೆ.

○ ○ ○ ○

ತುಂತುರು ತುಂತುರು ಹೂ ಮಳೆಯ ತುಂತುರು ವರ್ಷಧಾರೆ, ಇಳೆಯ ಮೇಲೆ.

ತುಂತುರು ಹನಿಗಳನಾಂತ ಹೂ ಮೋಡಗಳ ದಿವ್ಯಮಂಡಲ ಅಂಬರದಲ್ಲಿ.

ಹೂ ಬಿಸಿಲನ ಹೊನ್ನ ಹೆಳದಿಯ ಹರವು ಅಗಲ ಅಗಲ ಭುವಿಯಗಲ.

ಅಂಗಳದಲ್ಲಿ ಮಲಗಿದ್ದ ಜೂಲಿ ನಾಯಿಗೆ ಹೂಮಳೆಯಿಂದ ಎಚ್ಚರವಾಗಲಿಲ್ಲ ಮೊದಮೊದಲು. ಮೈ ಸ್ವಲ್ಪ ತೊಯ್ದು ಮೇಲೆ ಎಚ್ಚರವಾಗಿ ಮೈಕೊಡವಿತು ತಟಪಟನೆ. ಪುನಃ ಪುನಃ ಮೈಕೊಡವಿ ಹನಿಗಳನ್ನು ಜಾಡಿಸಿದ ಬಳಿಕ ಜಗಲಿಯನ್ನು ಹತ್ತಿ ಮಳೆಯನ್ನು ನೋಡತೊಡಗಿತು ಕತ್ತೆತ್ತಿ. ಚೌವ್ವೂ ವ್ವೂವ್ವೂಊಊ! ಎಂದು ರಾಗ ಎಳೆದು ಒಡೆಯನ ಕಾಲನ್ನು ಮೂಸಿ ನೋಡಿ ಒಡೆಯನ ಬಳಿಯಲ್ಲೇ ಕುಳಿತುಕೊಂಡಿತು, ಸಂತಸದಿಂದ ಬಾಲ ಆಡಿಸುತ್ತ.

ನಗರಕ್ಕೆ ಬರಲಿದ್ದ ಶ್ರೀನಿಧಿ ಮತ್ತು ಧಾರಿಣಿಯರನ್ನು ಕರೆತರಲು ಹೋಗಿತ್ತು ಕಾರು. ಅದರ ಆಗಮನದ ಮೇಲೆಯೇ ಎಲ್ಲರ ದೃಷ್ಟಿ. ಶ್ರೀನಿಧಿ

ಯೊಂದಿಗೆ ಧಾರಿಣಿಯೂ ಬರಲಿದ್ದಳು. ತಂದೆ ತಾಯಿ–ಅಜ್ಜ ಅಜ್ಜಿ ನಾಲ್ವರೂ ಕಾರಿಗಾಗಿ ಕಾಯುತ್ತ ಕುಳಿತಿದ್ದರು ಜಗಲಿಯಲ್ಲಿ. ಹೂ ಮಳೆ ಸುರಿಯುತ್ತಲೇ ಇತ್ತು, ಸಾಯಂ ಪ್ರಭೆಯ ಹೊನ್ನ ವರ್ಣವನ್ನು ವೈಗೊಂಡು.

"ಬಸ್ಸು ಸರಿಯಾದ ಸಮಯಕ್ಕೆ ಬಂದಿದ್ದರೆ ಇಷ್ಟರೊಳಗಾಗಿ ಕಾರು ಹಿಂದಿರುಗಬೇಕಿತ್ತು. ಬಸ್ಸು ತಡವಾಗಿರಬಹುದು."

ರಾಮನಾಥನ ನುಡಿಯನ್ನು ಸಮರ್ಥಿಸಿದ ದೇವಯ್ಯ.

"ಐದೂ ಮುಕ್ಕಾಲಾಯ್ತು" ಎಂದಳು ಕುಮುದ್ವತಿ.

ಸೀತಮ್ಮ ಮಾತಾಡಲಿಲ್ಲ. ಕಣ್ಮನಗಳು ರಸ್ತೆಯ ಮೇಲೆಯೇ ನೆಟ್ಟಿದ್ದುವು. ಸ್ವಲ್ಪ ಹೊತ್ತಿನೊಳಗಾಗಿ ಕಾರಿನ ಹಾರನ್ ಕೇಳಿಸಿತು ದೂರದಲ್ಲಿ. ಆಗ ಎಲ್ಲರ ಮನಸ್ಸಿಗೂ ಎಲ್ಲಿಲ್ಲದ ಆನಂದ. ಪ್ರಸನ್ನ ಮುಖದಿಂದ ಎದುರು ನೋಡುತಿದ್ದಾಗಲೇ ಕಾರು ಬಂದು ಅಂಗಳದಲ್ಲಿ ನಿಂತಿತು. ಶ್ರೀನಿಧಿ ಧಾರಿಣಿಯೊಡನೆ ಇಳಿದಳು ಕಾರಿನಿಂದ. ಡ್ರೈವರ್ ಸಾಮಾನನ್ನು ತಂದು ಒಳಗಿಟ್ಟ.

ಶ್ರೀನಿಧಿ ಓಡಿ ಬಂದು ಎಲ್ಲರಿಗೂ ಆತ್ಮೀಯ ಆಲಿಂಗನ ನೀಡಿ ಹೂ ಮುತ್ತನೊತ್ತಿದಳು. ಧಾರಿಣಿಯೂ ಅಷ್ಟೆ. ಹೃತ್ಪೂರ್ವಕ ಆಲಿಂಗನ ನೀಡಿ ಉಭಯ ಕುಶಲೋಪರಿ ನಡೆಸಿದ ಬಳಿಕ ತನ್ನ ಮನೆಗೆ ರಿಂಗ್ ಮಾಡಿದಳು ಧಾರಿಣಿ,

"ಹಲೋ, ಅಮ್ಮಾ! ನಾನು ಶ್ರೀನಿಧಿಯ ಜೊತೆ ಪದ್ಮಾಲಯಕ್ಕೆ ಬಂದಿರುವೆ. ನಾಳೆ ಅಥವಾ ನಾಡಿದ್ದು ಮನೆಗೆ ಬರುವೆ. ಶ್ರೀನಿಧಿಯೂ ನನ್ನೊಂದಿಗೆ ಮನೆಗೆ ಬರುತ್ತಾಳೆ. ಹೇಗಿದ್ದೀರಿ ಎಲ್ಲಾ? ಅಪ್ಪಾಜಿ ಚೆನ್ನಾಗಿದ್ದಾರೆಯೇ?"

"ಹೌದಮ್ಮಾ......ಸಾಧ್ಯವಾದರೆ ನಾಳೆಯೇ ಬನ್ನಿ."

"ಆಗಲಿ."

ಟೆಲಿಫೋನಿನ ಸಂಪರ್ಕ ತುಂಡುಗಡಿಯಿತು.

ಮಾತು, ಮಾತು, ಮಾತು. ಅಂದಿಂದಿನ ವಿಷಯಗಳೆಲ್ಲಾ ಒಮ್ಮೆಲೇ ಕರಗಿದುವು ಎಲ್ಲರ ಮಧ್ಯೆ. ಆತ್ಮೀಯತೆಯ ಸನ್ನಿಧಿಯಲ್ಲಿ ಹೊತ್ತು ಸಾನಂದ ದಿಂದ ಉರುಳಿತು.

ರಂಗಮ್ಮನ ಜೀವನಿಧಿಯಾದ ಶ್ರೀನಿಧಿ ಬಂದೊಡನೆಯೇ ಅವಳಿಗೆ ಜೀವ ಬಾಯಿಗೇ ಬಂದಷ್ಟು ಸಂತಸ. ಹೊರಬಂದು ಆನಂದದಿಂದ ಅಪ್ಪಿ–"ನಿನಗೆ ಪ್ರಿಯವಾದ ಚಕ್ಕಲಿ ಮಾಡಿಟ್ಟಿದ್ದೀನಿ ಮಗುವೆ!" ಎಂದಳು ಪ್ರೀತ್ಯಾದರ ದಿಂದ. ಪ್ರಸನ್ನ ಮುಖದಲ್ಲಿ ಎಳೆ ನಗುವಿನ ಹರವು ಹರಡಿತು. ಅವಳ ಪ್ರೇಮ ಗಗನ ಸದೃಶ. ಅವಳ ಸಂತಸ ಅನನ್ಯ...ಅನುಪಮ.

ಆ ಹೂಮಳೆಯಲ್ಲೇ ಮೊಮ್ಮಕ್ಕಳಾದ ಕಮಲಿ, ವಿಮಲಿ, ಶ್ಯಾಮಲಿ ಮತ್ತು ರಾಮು, ಭೀಮು ಒಟ್ಟಾಗಿ ಗದ್ದೆಯಂಚಿನಲ್ಲಿ ನಡೆಯುತ್ತಲೇ ಬಂದಿದ್ದಾರೆ ಮನೆಗೆ. ಹದಿಹರೆಯದಲ್ಲಿ ಮೈತುಂಬಿ ಸುಸುಂದರವಾಗಿ ಬೆಳೆಯುತ್ತಿದ್ದಾರೆ ಮಕ್ಕಳು. ಅಪ್ಪಂದಿರಿರುವಾಗ ಹೀಗೆ ಎಂದೂ ಬಂದವರೇ ಅಲ್ಲ. ಎಲ್ಲರೂ ಒಟ್ಟಾಗಿ ಬಂದುದನ್ನು ನೋಡಿ ಆನಂದಿಸಿದರು ಹಿರಿಯರು. ರಾಮನಾಥ ಆನಂದಭರಿತ ಹೃದಯದಿಂದ ಬರಮಾಡಿಕೊಂಡು ಅಂದ,

"ಮಳೆಯಲ್ಲಿ ತೊಯ್ಯುತ್ತ ಬಂದಿರಲ್ಲ."

ಶ್ರೀನಿಧಿ ಒಳ ಹೋಗಿ ಟವಲ್ಲುಗಳನ್ನು ತಂದು ಎಲ್ಲರ ತಲೆ ಮೈಗಳನ್ನು ಒರಸಿದಳು.

"ನಾವು ಮನೆ ಬಿಡುವಾಗ ಮಳೆ ಇರಲಿಲ್ಲ. ದಾರಿಯಲ್ಲಿ ಶುರುವಾಯಿತು. ಈ ತುಂತುರು ಮಳೆಯಿಂದ ಮೈಯೆಷ್ಟು ತೊಯ್ಯುತ್ತೆ ಬಿಡಿ."

"ಇದರಿಂದ ನಮಗೆ ಖುಷಿಯೇ ಆಯ್ತು. ತುಂತುರು ಮಳೆ ಬಲೂ ಚೆಂದ!"

"ನಿಮಗೆ ರಜೆ ಬಂದು ಎಷ್ಟು ದಿನವಾಯ್ತು ?"

"ಒಂಭತ್ತು ದಿನಗಳಾದುವು."

ಕುಮುದ್ವತಿ, ಸೀತಮ್ಮ, ಧಾರಿಣಿ ಮತ್ತು ದೇವಯ್ಯ ಮಕ್ಕಳ ಸುತ್ತ ನೆರೆದರು. ಒಡನೆ ಎಲ್ಲರ ಮುಖಬಿಂಬಗಳಲ್ಲೂ ಸಂತಸದ ಹೊನಲು ತುಂಬಿ ಹರಡಿತು.

ಕುಮುದ್ವತಿ ಕರೆದಳು "ರಂಗಮ್ಮಾ....!"

ಒಳಗಿದ್ದ ಅವಳು ಹೊರ ಬಂದು ನೋಡುತ್ತಾಳೆ ಮಕ್ಕಳೈವರೂ ಬಂದಿದ್ದಾರೆ...ಆನಂದಾಶ್ಚರ್ಯವಿಸ್ತೃತನಯನಗಳಿಂದ ನೋಡುತ್ತ ಕೇಳಿದಳು ಅವಳು, "ಈಪೊತ್ತೇನು ವಿಶೇಷ? ಶ್ರೀನಿಧಿ ಬಂದಿದ್ದಾಳೆಂದೇ ?"

"ಮಕ್ಕಳು ನಕ್ಕರು....ಯಾರೂ ಮಾತಾಡಲಿಲ್ಲ. ಲಜ್ಜೆಯ ರಂಗೊರೆದಿತ್ತು ಮುಖಬಿಂಬಗಳ ಮೇಲೆ. ನಗು...ನಗು ಎಲ್ಲರ ಮುಖದ ಮೇಲೂ ನಗುವೇ ನಗು.

ಸೀತಮ್ಮ ಕಮಲಿಯ ಕೆನ್ನೆಯನ್ನು ಮುದ್ದಿಸಿ ಎಲ್ಲರೂ "ಎತ್ತರೆತ್ತರಕ್ಕೆ ಬೆಳೆಯುತಿದ್ದಾರೆ." ಎಂದಳು.

"ಬರೀ ಮೈಯಲ್ಲಿ ಬೆಳೆದರೆ ಸಾಲದು ಬುದ್ಧಿಯಲ್ಲೂ ಬೆಳೆಯಬೇಕು." ದೇವಯ್ಯ ಅಂದ.

"ಸತ್ಯ–ಗೆ ರಜೆ ಬಂದಿಲ್ಲವೇ ?"

"ಇಲ್ಲ. ಮುಂದಿನ ವಾರ ಅವನ ಪರೀಕ್ಷೆ."

ಮನೆಗೆ ಕಾಗದ ಬರೆಯುತ್ತಾನೇನು ?"

"ಹ್ಞೂ...ಎರಡು ವಾರಗಳ ಹಿಂದೆ ಬರೆದಿದ್ದ."

"ಅವನ ಪ್ರಿನ್ಸಿಪಾಲ್ ಇಲ್ಲಿಗೆ ಬರೆಯುತ್ತಿರುತ್ತಾರೆ. ಹುಡುಗ ಈಗೀಗ

ಸರಿಯಾಗಿದ್ದಾನೆ. ವಿಶೇಷ ಪಾಠ ಮಾಡಿಸುತಿದ್ದೇನೆ. ಪರವಾಯಿಲ್ಲ; ಮುಂದೆ ಸರಿಹೋಗಬಹುದು ಎಂದು. ಹೇಳು ನಿನ್ನ ಅಮ್ಮನಿಗೆ" ಎಂದ ರಾಮನಾಥ.

"ಎಲ್ಲರೂ ಬನ್ನಿ, ಕೈಕಾಲು ತೊಳೆದುಕೊಳ್ಳಿ. ಗದ್ದೆಯ ಮಣ್ಣು ಮೆತ್ತಿದೆ ಕಾಲುಗಳಿಗೆ."

ಕುಮುದ್ವತಿಯ ಮಾತಿನ ಮೇರೆಗೆ ಎಲ್ಲರೂ ನೀರು ಮನೆಗೆ ನುಗ್ಗಿ ಕೈಕಾಲು ತೊಳೆದು ಕೊಂಡರು. ಎಲ್ಲರಿಗೂ ತಿಂಡಿ ತೀರ್ಥಗಳ ವಿನಿಯೋಗ ವಾಯಿತು. ಶ್ರೀನಿಧಿ ಧಾರಿಣಿಯರೊಂದಿಗೆ ಕುಳಿತು, ಚಕ್ಕಲಿ ಮೆದ್ದರು. ಕರಂ ಕರಂ ಚಕ್ಕಲಿ ಎಲ್ಲರಿಗೂ ಇಷ್ಟವೇ.

"ಈಗ ನೀವ್ಯಾರೂ ಮನೆಗೆ ಹೋಗುವಂತಿಲ್ಲ. ಎಲ್ಲರೂ ಇಲ್ಲೇ ಉಳಿಯ ಬೇಕು." ಎಂದಳು ಕುಮುದ್ವತಿ.

"ನಾವು ಬಟ್ಟೆ ತಂದಿಲ್ಲವಲ್ಲ ?" ಭೀಮು ಅಂದ.

"ತರಿಸೋಣ ಅದಕ್ಕೇನಂತೆ. ಚೆನ್ನಿಗನಿಗೆ ಹೇಳಿದರೆ ಹೋಗಿ ತೆಗೆದು ಕೊಂಡು ಬರುತ್ತಾನೆ." ಹುಡುಗರು ಪರಸ್ಪರ ಮುಖ ನೋಡಿಕೊಂಡರು.

ಶ್ರೀನಿಧಿ ಶ್ಯಾಮಲಿಯ ಗಲ್ಲ ಹಿಡಿದು ಪ್ರೀತಿಯಿಂದ ಕೇಳಿದಳು,

"ಏನಮ್ಮಾ ಇರುತ್ತೀರಷ್ಟೆ ?"

"ಆಗಲಿ." ತಲೆ ಆಡಿಸಿದಳು ಅವಳು.

ಚಿಕ್ಕವಳೇ ಒಪ್ಪಿದ ಮೇಲೆ ಹಿರಿಯರದೇನು ಅಡ್ಡಿ ? ಎಲ್ಲರೂ ಒಮ್ಮೆಗೇ 'ಹ್ಞೂ' ಎಂದರು.

ರಂಗಮ್ಮ ಮುಂದೆ ಬಂದು ಕೇಳಿದಳು "ಈಗ ಹೇಳಿ. ನಿಮಗೆ ಯಾವ ಊಟ ತಿಂಡಿ ಇಷ್ಟ ? ಅದನ್ನೇ ಮಾಡೋಣ."

"ಏನಾದರೂ ಸರಿ. ನಿಮಗೆ ಮಾಡಿದ್ದೇ ನಮಗೂ ಸಾಕು." ಕಮಲಿಯ ಉತ್ತರ.

ಕಾಫಿ ತಿಂಡಿ ಆಯ್ತು. ಮಕ್ಕಳೆಲ್ಲರೂ ಅಂಗಳಕ್ಕೆ ಧಾವಿಸಿದರು. ರಾಮನಾಥನ ಹೃದಯ ಸಮಾಧಾನದ ಮಂಡಿಗೆಯನ್ನುಂಡಿತು.

ದೇವಯ್ಯ ಅಂದ "ಅಪ್ಪಂದಿರು ಸರಿಯಾಗಿದ್ದಿದ್ದರೆ ಈ ಸಂಸಾರ ಒಟ್ಟಾಗಿ-ಸಂಮೃದ್ಧಿಯಾಗಿ ಗೌರವಾದರಗಳಿಂದ ಕೂಡಿರುತಿತ್ತು. ಇಬ್ಬರೂ ಕೆಟ್ಟು ಹಾಳಾಗಿ ಹೋದರು."

"ದೈವೇಚ್ಛೆ!" ಎಂದ ರಾಮನಾಥ, ಮನಸ್ಸು ಸುಖದುಃಖಗಳಿಂದ ಮಳೆ ಬಿಸಿಲಾಯಿತು.

ಧಾರಿಣಿ ತನ್ನ ದನಿಗೂಡಿಸಿದಳು "ನಮ್ಮ ಗತಿ ಆದುದೂ ಹೀಗೆಯೇ. ಸರಸಿ ಚೆನ್ನಾಗಿದ್ದಿದ್ದರೆ ಮಕ್ಕಳು ಮರಿ ಸಹಿತ ಬಂದು ಹೋಗುತಿದ್ದಳು. ಬುದ್ಧಿ ಇಲ್ಲದ ದುಷ್ಪರಿಣಾಮ ಇದು."

ವಿಷಾದ ಕಳೆ ಬೆಳಗಿತು ಎಲ್ಲರ ಮುಖದ ಮೇಲೆ.

"ನಿಮಗೆ ಆಟ ಆಡಲು ಚೆಂಡು ದಾಂಡು ಏನಿಲ್ಲವಲ್ಲಾ." ಎಂದ ರಾಮನಾಥ.

"ಏನೂ ಬೇಕಿಲ್ಲ. ಸುಮ್ಮನೆ ತಿರುಗಾಡುತ್ತೇವೆ" ರಾಮುವಿನ ಉತ್ತರ.

ಶ್ರೀನಿಧಿ ಸಲಹೆ ಮಾಡಿದಳು "ಕನಕಾಂಬರ-ಮಲ್ಲಿಗೆ ಹೂ ತುಂಬಾ ಬಿಟ್ಟಿವೆ. ಇಲ್ಲೇ ಎಲ್ಲರೂ ಬನ್ನಿ, ಮೊಗ್ಗು ಬಿಡಿಸೋಣ. ಹಾರ ಕಟ್ಟಿದರೆ ನಾಳೆ ಶುಕ್ರವಾರದ ಪೂಜೆಗೆ ದೇವಸ್ಥಾನಕ್ಕೆ ಕಳುಹಿಸಬಹುದು."

"ಆಗಲಿ."

ಹುಡುಗರು ಗಿಡಗಳನ್ನು ಮುತ್ತಿದರು. ಧಾರಿಣಿ ಒಳ ಹೋಗಿ ಬುಟ್ಟಿಗಳನ್ನು ತಂದಳು. ಹೂಗಳನ್ನು ಬಿಡಿಸಿ ಎರಡೂ ಬುಟ್ಟಿಗಳಿಗೆ ಬೇರೆ ಬೇರೆಯಾಗಿ ತುಂಬಿದರು ಮಕ್ಕಳು.

ಹೆಣ್ಣು ಮಕ್ಕಳು ಹೂ ಕಟ್ಟಲು ಉತ್ಸಾಹ ತೋರಿದರು. ಹೂಮಾಲಿಗಳು ಉದ್ದುದ್ದ ಬೆಳೆದುವು. ರಂಗಮ್ಮನೊಡಗೂಡಿಕೊಂಡರು ಕುಮುದ್ವತಿ ಮತ್ತು ಸೀತಮ್ಮ. ಬಗೆಬಗೆಯ ಭಕ್ಷ್ಯ ಭೋಜ್ಯಗಳು ತಯಾರಾದುವು ಎಲ್ಲರಿಗಾಗಿ. ಸಂತಸದ ನಲಿಯಲ್ಲಿ ಹೊತ್ತು ಆನಂದಮಯವಾಗಿ ಉರುಳಿತು, ಆನಂದವೇ ಮೂರ್ತಿಯೆತ್ತಿ ಬಂದಂತೆ.

ಹುಡುಗರು ಪುಸ್ತಕದ ಪ್ರಪಂಚದಲ್ಲಿ ಮುಳುಗಿದರು ಸಾನಂದದಿಂದ. ಅದರಲ್ಲಿ ಕಂಡು ಬಂದ ಸರ್ವಜ್ಞ ಪದ ಮನದಾಳಕ್ಕಿಳಿಯಿತು.

ಬಲ್ಲವರ ಒಡನಾಟ ಬೆಲ್ಲವನು ಮೆದ್ದಂತೆ
ಅಲ್ಲದಹುದೆಂಬ ಅಜ್ಞಾನಿಯೊಡನಾಟ
ಕಲ್ಲು ಹಾಯ್ದಂತೆ ಸರ್ವಜ್ಞ"

— ೦ —

೨೩

ಸಂಜ್ಞಾನ ಹೀನಂ ಪಶುಸಮಾನಂ

ಶಾರದಾ ಮೂರು ತಿಂಗಳ ಗರ್ಭಿಣಿ. ಮೂರು ಮಂದಿ ಹೆಣ್ಣು ಮಕ್ಕಳ ತಾಯಿ.

ಡಾ|| ಪ್ರಸಾದನಿಗೆ ಗಂಡು ಮಗುವಿನ ಅತೀವ ಹಂಬಲ. ಮೂವರು ಹೆಣ್ಣು ಮಕ್ಕಳು ಲಕಲಕ ಹೊಳೆಯುತ್ತಿದ್ದಾರೆ. ಆದುನಿಕ ದೇಶದಲ್ಲಿ, ಆಧುನಿಕ ರೀತಿಯಲ್ಲಿ, ಆಧುನಿಕ ಸಂಸಾರದಲ್ಲಿ ಸರ್ವ ಸುಂದರವಾಗಿ ಬೆಳೆದ ಮಕ್ಕಳು. ಸೌಂದರ್ಯ ರಸವೇ ಮೈವೆತ್ತಿ ಬಂದಂತೆ ಸೌಂದರ್ಯಮಯವಾಗಿ ನಗೆಮಾತುಗಳ ಅಂದಚೆಂದವನ್ನು ಸ್ಫುರಿಸುವ ಮಕ್ಕಳು. ಕಾಲಜ್ಞಾನ ತುಂಬಿ ತುಳುಕುವ ಸಂಸಾರದಲ್ಲಿ ಒಂದೇ ಒಂದು ಕರ್ರನೆಯ ಕಾಳಚುಕ್ಕಿ.

ಡಾಕ್ಟರಿಗೆ ಕೈತುಂಬಾ ಹಣದ ಸಂಪಾದನೆ, ಧೀಮಂತಿಕೆಯಲ್ಲಿ ತುತ್ತ ತುದಿ ಮುಟ್ಟಿದವ. ಆದರೂ, ಮನುಶಾಸ್ತ್ರದ ತುಣುಕು ಹೇಗೆ ತಲೆಯನ್ನು ಹೊಕ್ಕಿತೋ, ಗಂಡು ಮಕ್ಕಳಿಲ್ಲದೆ ಮೋಕ್ಷವಿಲ್ಲವೆಂದು. ಚಕ್ಕಂದವಾಡುತ್ತ ಮುದ್ದು ಮಾತುಗಳಿಂದ ಮಾಡು ಮೊಳಗಿಸುವ ಮೂವರು ಹೆಣ್ಣು ಮಕ್ಕಳು ಕಣ್ಮುಂದೆ ನಲಿಯುತ್ತಿದ್ದರೂ ಗಂಡು ಮಗುವಿನ ಗೀಳು ಹೋಗಲಿಲ್ಲ. ಚಿನ್ನದಂತಹ ಸಂಸಾರದಲ್ಲಿ ಸಂತೃಪ್ತಿ ಪಡೆಯದ ಗಂಡನಲ್ಲಿ ಅವಳಿಗೆ ತುಂಬಾ ಅಸಮಾಧಾನ. ಆದರೇನು? ಅವನು ಒಪ್ಪುವವನೇ ಅಲ್ಲ. ವಂಶೋದ್ಧಾರಕ್ಕೆ ಒಬ್ಬ ಮಗನಿರಲೇಬೇಕು, ಎಂಬ ತೀವ್ರಾಭಿಲಾಷೆ. ಅದಕ್ಕಾಗಿ ಪ್ರಯತ್ನ ಮುಂದುವರಿಸುವ ಹಂಬಲ ಅವನದು. ನಮಗೆ ಹೆಣ್ಣು ಮಕ್ಕಳೇ ಸಾಕು ನಾನಿನ್ನು ಹೆರಲಾರೆ ಎಂಬುದು ಮಡದಿಯ ಗೋಳು.

"ಮೂರು ಹೆತ್ತವಳಿಗೆ ಇನ್ನೊಂದು ಹೆರುವುದು ಅಂತಹ ಕಷ್ಟವೇನಲ್ಲ. ನಾನು ಡಾಕ್ಟರು. ನಿನ್ನ ಆರೋಗ್ಯ ನನಗೆ ಸೇರಿದ್ದು. ನಿನಗಾ ಚಿಂತೆ ಬೇಡವೇ ಬೇಡ."

"ಡಾಕ್ಟರಾದವರಿಗೆ ಹೆಣ್ಣಿನ ಕಷ್ಟ ಅರಿವಾಗದೇ? ಬೇರೆ ಸಾಮಾನ್ಯರು ಹಾಗೆಂದಿದ್ದರೆ ಒಪ್ಪಬಹುದಾಗಿತ್ತು. ನೀವು ನನ್ನ ಕಷ್ಟ ಅರಿತುಕೊಳ್ಳದೇ ಹೋದರೆ ಹೇಗೆ?"

"ನೋಡು ಶಾರದಾ, ಎಷ್ಟು ಹೆಣ್ಣು ಮಕ್ಕಳಿದ್ದರೂ ಒಂದು ಗಂಡು ಮಗುವಿನ ಶೋಭೆ ಬರುವುದೇ ಇಲ್ಲ. 'ವಂಶಕೆ ಕುವರಂ ಭೂಷಣಂ'."

"ಗಂಡು ಮಗುವನ್ನು ಬಯಸಿ ಸಲಸಲವೂ ಆಗುತ್ತಿರುವುದು ಹೆಣ್ಣು."

"ನಾನು ಅದಕ್ಕೆ ತಕ್ಕಂತಹ ವ್ಯವಸ್ಥೆ ಮಾಡಬಲ್ಲೆ. ಈಗ ಸೈನ್ಸ್ ತುಂಬಾ ಮುಂದೆ ಹೋಗಿದೆ.ಹ ಟ್ಟುವ ಮಗು ಹೆಣ್ಣೇ ಗಂಡೇ ಎಂಬುದನ್ನು ಗರ್ಭದಲ್ಲೇ ನಿರ್ಧರಿಸಬಹುದು. ನಮ್ಮಂತಹವರಿಗೆ ನಿಜವಾಗಿಯೂ ಇದೊಂದು ವರದಾನ. ನಾವು ಎರಡು–ಮೂರನೆಯ ತಿಂಗಳಿನಲ್ಲಿ ಭ್ರೂಣ ಪರೀಕ್ಷೆ ಮಾಡಿಸಿದ್ದಿದ್ದರೆ ಕೊನೆಯ ಇಬ್ಬರೂ ಈ ಭೂಮಿಯ ಬೆಳಕನ್ನು ಕಾಣುತ್ತಿರಲೇ ಇಲ್ಲ. ನಾನಾಗ ಗಂಡಾಗಬಹುದು ಎಂದು ಉದಾಸೀನ ಮಾಡಿದೆ. ಈ ಸಲಿ ಬ್ರೂಣ ಪರೀಕ್ಷೆ ಮಾಡಿಸಿ ಗಂಡು ಮಗುವಾದರೆ ಬೆಳಕಿಗೆ ಬಿಡೋಣ. ಹೆಣ್ಣಾದರೆ ಕೈ ಬಿಟ್ಟರಾಯಿತು." ಮಾತುಗಳು ಎದೆಯಾಳದಿಂದ ಸರಾಗ ವಾಗಿ ಹರಿದು ಬಂದುವು, ಡಾ|| ಪ್ರಸಾದ್ ಧೀರತನ ತೋರಿದ್ದ.

ಶಾರದಾ ಬೆಕ್ಕಸ ಬೆರಗಾಗಿ ಅವಾಕ್ಕಾದಳು. ಸ್ವಲ್ಪ ಹೊತ್ತು ಪ್ರಯತ್ನಿಸಿದರೂ ಮಾತು ಹೊರಡಲಿಲ್ಲ. ಒಡಲೆಲ್ಲ ಕಸಿವಿಸಿ–ಸಂಕಟ. ತಾಳಲಾರದ ಸಂಕಟ. ಈ ಸಲಿ ಆಪರೇಶನ್ ಮಾಡಿಸಿಕೊಂಡು ಈ ಅಧ್ಯಾಯವನ್ನೇ ಮುಚ್ಚಿ ಬಿಡಬೇಕೆಂಬ ಯೋಚನೆ ಮನದಲ್ಲಿ. ಆದರೆ, ಅವನು ಕೇಳುವವನೇ ಅಲ್ಲ... ಯೋಚನೆಯಾಳದಲ್ಲಿ ಮುಳುಗಿ ಹೋದಳು. ಭ್ರೂಣ ಹತ್ಯಾ ದೋಷವನ್ನು ಹೊತ್ತುಕೊಳ್ಳುವುದು ಸುತರಾಂ ಸಾಧ್ಯವಿಲ್ಲ....ಎಂದು ಕೂಗಿ ಹೇಳಿತು ಅಂತರ್ವಾಣಿ.

ಎಷ್ಟೆಷ್ಟು ಪ್ರಯತ್ನಿಸಿದರೂ ಒಲ್ಲದು ಚಿತ್ತ, ಒಪ್ಪದು ಮನಸ್ಸು.

ಡಾ|| ಪ್ರಸಾದನ ಇಚ್ಛೆಯಂತೆ ಶಾರದಾ ಗರ್ಭಭಾರದ ಸಲ್ಲಕ್ಷಣ ಹೊಂದಿದಳು. ಹಂತ ಹಂತದಲ್ಲಿ ನೆತ್ತರನ್ನು ಬಸಿದ ಶರೀರಕ್ಕೆ ಅತೀವ ಆಯಾಸ–ಬಳಲಿಕೆ ಅಂಟಿದುವು. ಚಿಕಿತ್ಸೆ–ಔಷಧ ಅವ್ಯಾಹತವಾಗಿ ನಡೆಯುತ್ತಿತ್ತು. ಡಾ|| ಪ್ರಸಾದ್ ಉತ್ಸುಕನಾದ. ಆದರೂ, ಶಾರದೆಗೆ ಮೈ ಕೈ ಸೋಲು. ಓಡಾಡುವ ಹುಮ್ಮಸ್ಸೇ ಇಲ್ಲ. ಆಗ ಅವಳು ದೈಹಿಕ ಪರೀಕ್ಷೆಗೆ ಒಳಪಡುವುದು ಅನಿವಾರ್ಯವಾಯಿತು.

ಡಾ|| ಪ್ರಸಾದ್ ಉತ್ಸುಕತೆಯಿಂದ ಅಂದ "ಕಮಾನ್ ಶಾರದಾ. ಬಿ ಬ್ರೇವ್ ! ಏನೂ ಆಗುವುದಿಲ್ಲ. ನಾವಿನ್ನೂ ಎಳೆಯರು. ಇಂತಹ ಭಾರವನ್ನು ಎಷ್ಟಾದರೂ ಧೈರ್ಯದಿಂದ ಹೊರಬಲ್ಲೆವು. ಸೈನ್ಸ್ ನಮಗೆ ಬೇಕು ಬೇಕಾದ ಎಲ್ಲಾ ಸುಖ ಸೌಕರ್ಯಗಳನ್ನು ಒದಗಿಸುತ್ತದೆ. ಅಂದಮೇಲೇಕೆ ಭಯ ?"

ಶಾರದಾ ಅವನ ಹಿಂದೆ ಆಸ್ಪತ್ರೆಗೆ ಹೊರಟಳು. ಭಾರಭಾರವಾದ ಹೆಜ್ಜೆಗಳನ್ನು ಎಳೆದುಕೊಳ್ಳುತ್ತ ಅವಳು ನಡೆಯುವ ವಿಧಾನವನ್ನು ನೋಡಿ ಅವನೆಂದ "ಡೋಂಟ್ ಬಿ ಸಿಲ್ಲಿ !" ದನಿಯಲ್ಲಿ ಸಣ್ಣ ಬೆದರಿಕೆಯಿತ್ತು.

ಆಸ್ಪತ್ರೆಯ ಆಪರೇಶನ್ ಥಿಯೇಟರನ್ನು ಸೇರುತ್ತಿದ್ದಂತೆಯೇ ದೇಹಾಂತರಂಗವೆಲ್ಲ ಮೆಲ್ಲನೆ–ಬಹುಮೆಲ್ಲನೆ ಕಂಪಿಸತೊಡಗಿತು. ಆದರೂ, ಸ್ವಲ್ಪವೂ ತೋರಗೊಡದಂತೆ ತನ್ನನ್ನೇ ತಾನು ಹತೋಟಿಯಲ್ಲಿಟ್ಟುಕೊಂಡಳು ಅವಳು. ನುರಿತ ವೈದ್ಯರು ಅವಳ ದೇಹ ಪರೀಕ್ಷೆ ನಡೆಸಿ ಗರ್ಭಕೋಶದಲ್ಲಿ ಹೆಣ್ಣು ಭ್ರೂಣವಿರುವುದನ್ನು ಅರಿತುಕೊಂಡು ಹೊರ ಬಂದು ಡಾ|| ಪ್ರಸಾದನಿಗೆ ವರದಿ ಮಾಡಿದರು.

ಅವರಿಬ್ಬರೂ ಸ್ವಲ್ಪಹೊತ್ತು ಚರ್ಚೆ ಮಾಡಿದ ನಂತರ ಅಂತ್ಯ ತೀರ್ಮಾನಕ್ಕೆ ಬಂದರು. ಡಾ|| ಪ್ರಸಾದ್ ಆ ಕೂಡಲೇ ಗರ್ಭವನ್ನು 'ಟರ್ಮಿನೇಶನ್' ಮಾಡಿಸಲು ಒಪ್ಪಿಗೆ ಕೊಟ್ಟ. ಆರಂಭದ ಹಂತದಲ್ಲೇ ಆದುದರಿಂದ ತಾಯಿಯ ಆರೋಗ್ಯಕ್ಕೇನೂ ಧಕ್ಕೆಯಿಲ್ಲ. ಅದರ ಒಳ ಮರ್ಮವನ್ನು ಅರಿಯದ ಶಾರದ ಕ್ರಿಯೆಯನ್ನು ನಿರಾಕರಿಸಲಿಲ್ಲ. ಹೆಣ್ಣು ಭ್ರೂಣ ಕರಗಿ ಹೋಯಿತು.

ಶಾರದಾ ಮಂಚದ ಮೇಲೆ ಮಲಗಿದ್ದಾಳೆ. ಶರೀರದಲ್ಲಿ ಆಯಾಸವೋ ಕಳವಳವೋ ಮತ್ತೊಂದೋ ಮಗದೊಂದೋ ಯಾವುದೋ ಕಾಡುತ್ತಿದೆ. ಕಣ್ಣ ಮುಂದಿನ ವಸ್ತುಗಳೆಲ್ಲಾ ಗಿರಗಿರನೆ ಸುತ್ತಿದುವು. ಗಳಿಗೆ ಕಾಲ ಕಣ್ಣು ಮುಚ್ಚಿಕೊಂಡಳು ಅವಳು.

ಸ್ವಲ್ಪ ಹೊತ್ತು ಕಳೆಯಿತು, ಸದ್ದಿಲ್ಲದ ಶಾಂತಿಯಲ್ಲಿ.

ಬಳಿಯಲ್ಲಿದ್ದ ಡಾಕ್ಟರನ್ನು ಕೇಳಿದಳು ಶಾರದಾ "ಆಮ್ನಿಯೋ ಸೆಂಟಿಸಿಸ್" ಪರೀಕ್ಷಿಸಿರುವುದು ಭ್ರೂಣದ ಆರೋಗ್ಯ ಪರೀಕ್ಷೆಗಾಗಿಯೇ ವಿನಾ ಲಿಂಗ ಪತ್ತೆಗಾಗಿ ಅಲ್ಲ ಎಂದು ನಾನು ತಿಳಿದಿದ್ದೆ. ನೀವಿದೇನು ಮಾಡಿದಿರಿ ?"

ಡಾ|| ಪ್ರಸಾದನ ಇಚ್ಛೆ !"

ನಮ್ಮ ರಾಷ್ಟ್ರದಲ್ಲಿ ಹೆಣ್ಣು ಮಕ್ಕಳ ಭವಿಷ್ಯವೇನೆಂದು ಅರಿಯುವ ಮುನ್ನವೇ ಕುಡಿ ಕಮರಿ ಹೋಗಬೇಕು. ಈ ಬಗೆಯ ಪ್ರಾಣ ಹರಣಕ್ಕೆ ನಾನು ಒಪ್ಪಲಾರೆ. ನೀವಿದನ್ನು ನನಗೆ ತಿಳಿಸಲಿಲ್ಲ. ನನಗಿದು ತುಂಬಾ ದುಃಖ ತಂದಿದೆ. ಎರಡನೆಯ ಬಾರಿ ನನ್ನ ಅರಿವಿಗೆ ಬಾರದಂತೆ ನಡೆದಿದೆ ಇದು. ಇಂಥ ವಿಚಾರದಲ್ಲಿ ನೀವು ಡಾಕ್ಟರಾಗಿ ನನಗೆ ತಿಳಿಸದೆ ಕೃತ್ಯ ನಡೆಸಿದರೆ ಏನು ಹೇಳಬೇಕು....ನೀವೇ ಹೇಳಿ, ಇದು ಸರಿಯೇ ?"

ಡಾ|| ಪ್ರಸಾದ್ ಅದೇ ವೇಳೆಗೆ ಒಳಬಂದ. ಅವನ ಮುಖ ಬಿಂಬದಲ್ಲಿ ಯಾವ ನೋವೂ ಇರಲಿಲ್ಲ. ಅವನು ಮಡದಿಯ ಆತಂಕವನ್ನು ಗಮನಿಸಿ ಅಂದ "ನಿನಗೇಕೆ ಚಿಂತೆ–ಆತಂಕ–ಕಳವಳ ? ಇದರಿಂದ ನಿನ್ನ ದೇಹಸ್ಥಿತಿಗೆ ಯಾವ ಕೆಟ್ಟ ಪರಿಣಾಮವೂ ಆಗುವುದಿಲ್ಲ. ಮೂರನೇ ತಿಂಗಳೊಳಗೇ ಮಾಡಿಸಿಕೊಳ್ಳುವುದರಿಂದ ಭ್ರೂಣ ಹತ್ಯಾ ದೋಷವೂ ಇಲ್ಲ ; ಏನೂ ಇಲ್ಲ. ಅದಕ್ಕೇಕೆ ಕೊರಗು–ಚಿಂತೆ ? ಯೂ ಶುಡ್ ಒಬೇ ಮಿ. ದಿಸ್ ಈಸ್ ಮೈ ಚಾಯ್ಸ್ !"

ಅವಳು ಸುಮ್ಮನೆ ಗಂಭೀರ ಭಾವದಿಂದ ನೋಡಿದಳು. ಮಾತಾಡಲಿಲ್ಲ.

o o o o

ಶಾರದೆ ಮಾನಸಿಕವಾಗಿ ಚೇತರಿಸಿಕೊಳ್ಳಬೇಕಾದರೆ ಎರಡು ಮೂರು ತಿಂಗಳುಗಳೇ ಬೇಕಾದುವು, ವರ್ತಮಾನ ಯುಗಧರ್ಮ ಒಂದು ಕಡೆ. ಮಾನಸಿಕಾಂದೋಳನ ಇನ್ನೊಂದು ಕಡೆ ಎಳೆದಾಡುತಿದ್ದುವು. ಆಂತರಂಗಿಕ ತುಮುಲವನ್ನು ತನ್ನಲ್ಲೇ ಹುಗಿದಿಟ್ಟುಕೊಂಡು ಕಾಲಯಾಪನೆ ಮಾಡುವ ಪರಿಶ್ರಮ ತನಗೆ ಮಾತ್ರ ಗೊತ್ತು. ಮಾನಸಿಕ ಹಿಂಸೆ, ಧಾರ್ಮಿಕ ಹಿಂಸೆ, ಆತ್ಮಿಕ ಹಿಂಸೆಗಳು ಒಗ್ಗೂಡಿ ಹೃದಯ ಕುಂಡವನ್ನು ಕಾಣದ ಕೈಗಳಿಂದ ಹಿಸುಕುತ್ತವೆ. ಯಾರೊಂದಿಗೂ ಸೇರುವುದಾಗಲೀ ಮಾತಾಡುವುದಾಗಲೀ ಇಷ್ಟವೇ ಇಲ್ಲ. ಮೂಕಮೌನಿಯಂತೆ ಒಳಮನೆಯನ್ನು ಸೇರುವುದೇ ಹೆಚ್ಚು. ಹೃದಯ ಕುಂಡ ಭಾರಾತಿಭಾರ. ಗರ್ಭವನ್ನು ಟರ್ಮಿನೇಶ್ ಮಾಡಿಸಿಕೊಂಡ ನಂತರ ಶರೀರದ ಮೇಲೆ ದುಷ್ಪರಿಣಾಮವೇನೂ ಆಗಲಿಲ್ಲ ನಿಜ. ಆದರೂ ಸಂಸಾರದಲ್ಲಿ, ಕೆಲಸ-ಕಾರ್ಯಗಳಲ್ಲಿ, ಭವಿಷ್ಯದಲ್ಲಿ ಯಾವ ಆಸಕ್ತಿಯೂ ಇಲ್ಲ. ಪುಸ್ತಕದ ಪುಟಪುಟವನ್ನು ತಿರುವಿ ಹಾಕಿದರೂ ವಿಷಯಗ್ರಹಣೆ ಮಾಡದು ಮನಸ್ಸು. ಓದಿದ್ದೇನೋ ಅದು ದೇವರಿಗೇ ಗೊತ್ತು.

ಒಂದು ವೇಳೆ ತಾನು ಗರ್ಭ ನಿರೋಧಕ ವಸ್ತುಗಳನ್ನು ಉಪಯೋಗಿಸಿ ಕೊಂಡರೆ ಡಾ|| ಪ್ರಸಾದನಿಗೆ ತಿಳಿಯಲಾರದು. ಎಂಬುದೊಂದಾದರೂ ಆತನ ಉತ್ಕಟ ಅಪೇಕ್ಷೆಯಂತೆ ಒಂದು ಗಂಡುಮಗುವಿಗೆ ಆಸ್ಪದ ಕೊಡುವುದು ಒಳ್ಳಿತು ಎಂಬುದು ಇನ್ನೊಂದು. ಹೃದಯಬನದಲ್ಲಿ ನಡೆಯುವ ದ್ವೈದೀ ಭಾವನೆಗಳನ್ನು ಅವಲೋಕಿಸುತಿದ್ದರೆ ಹೊತ್ತು ಉರುಳಿದುದರ ಪರಿವೆಯೇ ಇರುತ್ತಿರಲಿಲ್ಲ, ಇದೊಂದು ಕಠಿಣಾತಿಕಠಿಣ ಸಮಸ್ಯೆ ಅವಳಿಗೆ.

ಮಾನಸಿಕ ದುಗುಡ, ದೈಹಿಕ ಸೋಲು, ದುಃಖದುಗುಡಗಳು ಕೊರ ಕೊತ್ತುತ್ತವೆ.

ಈ ಬಾಳೇ ಬೇಡ ಎಂಬಷ್ಟು ಜುಗುಪ್ಸೆ ಮನದಲ್ಲಿ. ಆರೋಗ್ಯವಿಲ್ಲ ಎಂಬ ನೆಪದಲ್ಲಿ ಕೆಲವಾರು ತಿಂಗಳುಗಳು ಜೇರೆ ಉಳಿಯುವುದು ಸಾಧ್ಯ ವಾಯಿತು. ಇನ್ನು ಮುಂದೆ ಯಾವ ಕಾರಣವನ್ನೂ ಒಡ್ಡಲಾರೆ ಎನಿಸಿದಾಗ ಹೃದಯ ತಳಮಳಿಸಿ, ಒಡಲು ಕಸಿವಿಸಿಯ ಕುಂಡವಾಯಿತು. ಯೋಚಿಸಿ

ಯೋಚಿಸಿ ತಲೆಯೇ ಬರಡಾದಂತೆ ತೋರುತ್ತಿದೆ. ಯಾವೊಂದು ನಿರ್ಣಯಕ್ಕೂ ಬರಲಾರದಷ್ಟು ದುರ್ಬಲತೆ, ಮನದಲ್ಲಿ.

ಡಾ|| ಪ್ರಸಾದ್ ಕೆಲಸಕ್ಕೆ ಹೋದ ನಂತರ ಪದ್ಮಾಲಯದ ಹಾದಿ ಹಿಡಿದಳು ಶಾರದ. ಕುಮುದ್ವತಿಯೊಂದಿಗೆ ಓದಿ ಡಿಗ್ರಿ ಪಡೆದವಳಾದರೂ ಅದುವರೆಗೆ ತನ್ನ ಸಮಸ್ಯೆಯನ್ನು ಮುಂದಿಟ್ಟಿರಲಿಲ್ಲ. ಸಂಘದ ಮೀಟಿಂಗ್‌ಗಳಲ್ಲಿ ಭಾಗವಹಿಸಿದ್ದುಂಟು ಸಂಘದ ಸದಸ್ಯಿಣಿಯಾಗಿ. ಇಂದು ತನ್ನ ಸಮಸ್ಯೆಯೊಂದಿಗೆ ಹೋಗಬೇಕಾಗಿ ಬಂದುದು ದುಃಖವೇ. ಆದರೂ, ಕೇವಲ ಒಂದು ಸಲಹೆಗಾಗಿ. ಪುರುಷ ಪ್ರಧಾನ ರಾಷ್ಟ್ರದಲ್ಲಿ ಕಾನೂನು ಹುಟ್ಟಿರುವುದೇ ಗಂಡಸಿನ ಪರವಾಗಿ !

ಕುಮುದ್ವತಿಯು ಮುಂಬಾಗಿಲಿನಲ್ಲಿಯೇ ಎದುರಾದಳು. ಗೆಳತಿ ಶಾರದೆಯನ್ನು ನೋಡಿ ಸಂತಸದಿಂದ ಸ್ವಾಗತಿಸಿದ ಅವಳು ಒಳ ಕೋಣೆಗೇ ಕರೆದುಕೊಂಡು ಹೋದಳು. ಉಭಯ ಕುಶಲೋಪರಿಯು ಅತ್ಯಂತ ಆತ್ಮೀಯತೆಯಿಂದ ನಡೆಯಿತು. ಅಲ್ಲಿ ಯಾರೂ ಇಲ್ಲದುದನ್ನು ನೋಡಿ ಶಾರದಾ ತನ್ನ ಸಮಸ್ಯೆಯನ್ನು ತೋಡಿಕೊಂಡು ಅತ್ಯಂತ ಆರ್ತಧ್ವನಿಯಲ್ಲಿ ಕೇಳಿದಳು,

"ನನಗಿದಕ್ಕೊಂದು ಪರಿಹಾರ ಸೂಚಿಸು ನೋಡೋಣ. ನಿನ್ನಿಂದ ಸಹಾಯ ಪಡೆಯಬಹುದೆಂದು ನಾನು ಬಂದಿರುವೆ. ವಿಷಯ ಗೋಪ್ಯವಾಗಿರಲಿ. ದಯವಿಟ್ಟು ಇದನ್ನು ಯಾರಿಗೂ ಹೇಳಬೇಡ."

"ಇದೀಗ ನುಂಗಲಾರದ ತುತ್ತು. ಅವರಿಗೆ ಗಂಡು ಮಗುವಿನ ಗೀಳು ಅಷ್ಟೊಂದಿದ್ದರೆ ದತ್ತು ತೆಗೆದುಕೊಳ್ಳಬಹುದಲ್ಲ?"

"ಅದಕ್ಕವರು ಒಪ್ಪುವುದಿಲ್ಲ. ಯಾರ್ಯಾರ ಮಗು ತಂದುಕೊಂಡರೆ ಹೇಗಿರುತ್ತೋ, ಮುಂದೆ ಅದರಿಂದ ಸಮಸ್ಯೆ ಉದ್ಭವಿಸುವುದು ಬೇಡ....ನಾವೇನು ಸತ್ವ ಹೀನರೆ? ನಮ್ಮ ಮಗುವೇ ನಮಗಿರಲಿ ಎನ್ನುತ್ತಾರೆ. ಇದಕ್ಕೆ ಪರಿಹಾರವೇ ಇಲ್ಲ. ಆದ್ದರಿಂದ ಒಡಲ ಸಂಕಟವಾಗಿದೆ."

"ಇದಕ್ಕೆ ನೀವಿಬ್ಬರೂ ಕೂಡಿ ನಿರ್ಣಯಿಸುವುದೇ ಸರಿಯಾದ ದಾರಿ."

"ಇಲ್ಲಿಯವರೆಗೆ ಎರಡು ಬಾರಿ ಟರ್ಮಿನೇಶನ್ ಮಾಡಿಸಿ ಆಗಿದೆ. ಇನ್ನು ಸಧ್ಯ ಅದೇ ಪರೀಕ್ಷೆಗೆ ಒಳಪಡುವ ಸಂದರ್ಭ ಬರುತ್ತೆ. ಹೆಣ್ಣು ಭ್ರೂಣವಾಗಿದ್ದರೆ ಮತ್ತೆ ಟರ್ಮಿನೇಷನ್. ಇದಕ್ಕೇನು ಹೇಳುತ್ತಿ? ನನಗೆ ಈ ಜನ್ಮ ಸಾಕಾಗಿದೆ. ಸಲಸಲವೂ ಭ್ರೂಣ ಹತ್ಯೆ ಎಂತಹ ಪಾಪವೋ ದೇವರಿಗೇ ಗೊತ್ತು. ಈ ಸಂಕಟ ತಾಳಲಾರೆ, ಬಾಳಲಾರೆ. ಅವರು ಗಂಡಸು, ಇನ್ನೊಂದು ಮದುವೆಯಾಗಲೂ ಹೇಸುವುದಿಲ್ಲ."

ಕಣ್ಣುಗಳಲ್ಲಿ ಫಳಕ್ಕನೆ ನೀರಾಡಿತು. ತನ್ನನ್ನು ತಾನು ನಿಗ್ರಹಿಸಿಕೊಳ್ಳಲು ಸರ್ವ ಸಾಹಸದಿಂದ ಪ್ರಯತ್ನಿಸಿದಳು ಅವಳು. ಮುಖ ಬಿಂಬ ಕೆಂಪು--ಕಪ್ಪು ಬಣ್ಣಗಳ ಸಂಮಿಶ್ರಣವಾಯಿತು, ಒಡಲಾಳದ ದುಗುಡವೆಲ್ಲಾ ಒಮ್ಮೆಗೇ ಮುಖಕ್ಕೆ ನುಗ್ಗಿ ಬಂದಂತೆ.

ಕುಮುದ್ವತಿ ಕರುಣಕಾತರ ಸ್ವರದಿಂದ ಸಂತೈಸಿದಳು,

"ಅವರಿಗೆ ತಿಳಿಯದಂತೆ ಗರ್ಭನಿರೋಧಕವನ್ನು ಉಪಯೋಗಿಸು."

"ಅವರ ಮುಂದೆ ಅದೊಂದೂ ನಡೆಯುವುದಿಲ್ಲ. ಮೂರು ಮಂದಿ ಹೆಣ್ಣು ಮಕ್ಕಳಿದ್ದಾರೆ. ಮೂರು ಮಂದಿ ಅಳಿಯಂದಿರು ಬರುತ್ತಾರೆ. ಮತ್ತೇಕೆ ಗಂಡು ಮಕ್ಕಳ ಗೋಜು? ಎಂದು ನಾನು ಎಷ್ಟು ಬಾರಿ ಹೇಳಿಲ್ಲ? ನಾನು ಹೇಳಿದ್ದು ಎಲ್ಲಾ ವ್ಯರ್ಥವೇ."

"ಇತರೆ ಡಾಕ್ಟರಿಂದ ಹೇಳಿಸಿದರೆ?"

"ತಾನೇ ಡಾಕ್ಟರಿರುವಾಗ ಇನ್ನೊಬ್ಬರ ಸಲಹೆ ಏಕೆ ಬೇಕು ಅವರಿಗೆ? ಇದು ಬಗೆ ಹರಿಸಲಾಗದ ಸಮಸ್ಯೆ. ಇತರರ ಮಾತು ಏನೇನೂ ನಡೆಯುವುದಿಲ್ಲ. ಆಗಲೇ ಹೇಳಿದೆನಲ್ಲ, ಅವರು ತೀವ್ರ ಹಠವಾದಿ. ಮೂರು ಹೆಣ್ಣು ಮಕ್ಕಳ ನಂತರ ಒಂದು ಗಂಡಾಗುವುದು ಒಳ್ಳೆಯದು ಎಂಬುದು ಶಾಸ್ತ್ರ ಸಂಬದ್ಧ! ಅರ್ಲಿಸ್ಟೇಜಿನಲ್ಲಿ ಗೊತ್ತೇ ಆಗದಷ್ಟು ಸುಲಭ ಎನ್ನುತ್ತಾರೆ

ಡಾ॥ ಪ್ರಸಾದ್, ಆದರೆ, ನನಗೆ ಮಾನಸಿಕ ಹಿಂಸೆಯಿಂದಲೋ ಏನೋ ಸರ್ವಸ್ವವೂ ಸೂರೆಯಾದಷ್ಟು ಸುಸ್ತು, ಸಂಕಟ. ಹಾಗೆಂದರೆ ಅವರು ಒಪ್ಪುವುದೇ ಇಲ್ಲ. ಲೈಂಗಿಕ ಕ್ರಿಯೆಯಿಂದ "ಐ ಯಾಮ್ ಲೂಜಿಂಗ್. ಯೂ ಆರ್ ಗೆಯ್ನಿಂಗ್." ಎನ್ನುವುದು ಅವರ ಹಾಡು. ನನ್ನ ಮಾನಸಿಕ ಹಿಂಸೆ ದೇವರಿಗೇ ಸಂವೇದ್ಯ."

ಕುಮುದ್ವತಿ ದನಿಯಲ್ಲಿ ಕರುಣರಸವನ್ನೇ ಹರಿಯ ಬಿಟ್ಟಳು.

"ನೀನು ವಿದ್ಯಾವಂತೆ ಲೋಕ ಕಂಡವಳು. ಅದಕ್ಕೋಸ್ಕರ ಹೆದರಿಕೊಳ್ಳಬೇಡ. ಹೇಗಾದರೂ ಸುಧಾರಿಸಿ ಕೊಳ್ಳುವುದರಲ್ಲಿಯೇ ಜೀವನ ಸೌಖ್ಯವಿದೆ."

ಅವಳು ಮಾತಾಡಲಿಲ್ಲ. ಕಲ್ಲಿಗಿಂತ ಕಲ್ಲಾಗಿ ಕುಳಿತಳು.

"ಗಂಡು ಮಕ್ಕಳಿಲ್ಲದಿದ್ದರೆ ಸ್ವರ್ಗವಿಲ್ಲ ಎಂಬ ಮೂಢ ಸಂಬಿಕೆಗೆ ಕಡಿವಾಣ ಹಾಕುವುದರ ಹೊರತು ಬೇರೆ ದಾರಿಯಿಲ್ಲ."

"ಅದು ರಕ್ತಕ್ಕೆ ಅಂಟಿದ ದುರ್ಭಾವನೆ!"

"ಡಾಕ್ಟರಾಗಿಯೂ ಹೀಗಿದ್ದರೆ ಮಾಡುವುದೇನು?"

ಆ ಕೂಡಲೇ ಎರಡೂ ಕಣ್ಣುಗಳಲ್ಲಿ ಭಾಗೀರಥಿ ಕೃಷ್ಣೆಯರು ಉಕ್ಕಿ ಹರಿದರು.

"ಹಿಂದೂ ಸ್ಥಾನದಲ್ಲಿ ಯಾಜಮಾನ ಸರಿಯಾಗಿದ್ದರೇನೇ ಹೆಣ್ಣಿನ ಜನ್ಮ ಸುಖ. ಇಲ್ಲದಿದ್ದರೆ ಈ ಬದುಕು ಇದ್ದರೂ ಒಂದೇ. ಇಲ್ಲದಿದ್ದರೂ ಒಂದೇ."

ಮಾ...ನ...ವ

ಈತ ಪೂರ್ಣ ಪುರುಷ ಜ್ಞಾನಿಯೂ ಅಲ್ಲ. ಸಂಪೂರ್ಣ ಮಾನವ ಗುಣಿಯೂ ಅಲ್ಲ. ಅತೀವ ಸ್ವಾರ್ಥದಿಂದ ಅತ್ತ ಅರ್ಥವಿಲ್ಲದೆ ಇತ್ತ ನ್ಯಾಯ ನೀತಿಯಿಲ್ಲದೆ ಬದುಕುವ ಮಾನವ ರೂಪಿ. ಶಾಂತಿ ಸಮಾಧಾನಗಳ ಸ್ತ್ರೀ ಗುಣಿಯೂ ಅಲ್ಲ. ಆದರ್ಶ ಗುಣಗಳ ಉತ್ತಮ ಪುರುಷನೂ ಅಲ್ಲ. ಸಂಕುಚಿತ ಭಾವನೆಯಿಂದ ಜೀವನದಲ್ಲಿ ಸಫಲತೆಯನ್ನು ಪಡೆಯಲಾರ. ಸಾಮಾಜಿಕ

ಪಿಡುಗಿನಿಂದ ವಂಶ ಪಾರಂಪರ್ಯವಾಗಿ ಪಡೆದುಕೊಂಡ ಕುಸಂಸ್ಕಾರವನ್ನು ಸುಸಂಸ್ಕಾರವೆಂದು ದೃಢವಾಗಿ ನಂಬಿ ಶ್ರದ್ಧೆಯಿಂದ ಆಚರಿಸಿ ನಾಗರಿಕ ಜೀವನದಲ್ಲಿ ಅರ್ಥಹೀನ ಜೀವನ ವಿಕಾಸವನ್ನು ಮುಂದುವರಿಸುತ್ತ ಬದುಕುವುದು ಅಭ್ಯಾಸವಾಗಿದೆ. ಅದರಿಂದ ಅಸಹ್ಯವಾದ ಮತಬೇಧ–ವರ್ಗಬೇಧಗಳು ಸರ್ವವ್ಯಾಪಿಯಾಗಿ ಬೆಳೆಯುತ್ತಿದೆಯೇ ಹೊರತು ಸತ್ಯಾಂಶ ಬೆಳಕಿಗೆ ಬರುತ್ತಲೇ ಇಲ್ಲ. ಆದ್ದರಿಂದ, ಇಂದು ಸಮಾಜ ಅಖಂಡ ಭ್ರಮೆಯಿಂದ ತುಂಬಿ ಹೋಗಿದೆ. ಈ ಭ್ರಮೆ ಹರಿಯಬೇಕಾದರೆ ಶತಶತಮಾನಗಳೇ ಅಳಿಯಬೇಕು. ಅಲ್ಲಿಯ ತನಕ ಜೀವನ ಯಜ್ಞ ಕುಂಡಕ್ಕೆ ಹೆಣ್ಮಣಿಯರೇ ಹವಿಸ್ಸು ಮತ್ತು ಸಮಿತ್ತು ಎಂದರೆ ತಪ್ಪಲ್ಲ...

ಕುಮುದ್ವತಿ ನಿಧಾನವಾಗಿ ಹೇಳತೊಡಗಿದಳು "ಕೇಳು ಶಾರದಾ, ಯುಗಯುಗಾಂತರಗಳಿಂದ ನಡೆದು ಬರುತ್ತಿರುವ ನರನಾರಿಯರ ಮೋಹ ಚರಿತ್ರೆಯೇ ಇತಿಹಾಸ ಅನ್ನು, ಸಂಸ್ಕೃತಿ ಅನ್ನು, ಜೀವನ ವಿಕಾಸ ಏನಾದರೂ ಅನ್ನು, ಅದರಲ್ಲಿ ಹರಿದಿರುವುದು ಸುಖದ ಸುಪ್ಪತ್ತಿಗೆಯಲ್ಲ ದುಃಖದ ಪರಿಪಾಡು. ಕಾಲನ ರಭಸದಲ್ಲಿ ಸುಖದುಃಖಗಳು ಹೇಳ ಹೆಸರಿಲ್ಲದೆ ಕೊಚ್ಚಿಹೋಗುತ್ತವೆ. ಕೆಲವು ಸಿದ್ಧಾಂತಗಳಿಂದ ಮತ್ತೆ ಕೆಲವು ರೂಢಿಗಳಿಂದ ಸ್ಥಿರ ಋಜುವಾಗುವ ವಿಷಯಗಳನ್ನು ಕುರಿತು ಯೋಚಿಸಲೂ ಸಮಯ ಸಿಗುವುದಿಲ್ಲ. ಅಂದಮೇಲೆ ಈ ಸತ್ಯದ ಹಿಂದೆ ಖಚಿತವಾದ ದಾರಿ ಇಂತಹದೇ ಎಂಬುದಿಲ್ಲ. ಇನ್ನು ಮುಂದೆಯೂ (ಭಾರತದಲ್ಲಿ) ಇರುವುದೋ ಇಲ್ಲವೋ ಊಹಿಸುವುದು ಕಷ್ಟ. ಈ ಪರಿಸ್ಥಿತಿಯಲ್ಲಿ ಕೆಲವು ಸಮಸ್ಯೆಗಳನ್ನು ತೊಡೆದುಹಾಕುತ್ತೇವೆ ಎಂದು ನಾವು ದೃಢವಾಗಿ ಹೇಳುವಂತಿಲ್ಲ. ಸಾಧನೆಯೂ ಸಾಧ್ಯವಾಗದು. ಅಂತಹ ಸಂದರ್ಭದಲ್ಲಿ ಇದ್ದುದುದರಲ್ಲೇ ಸರಿಪಡಿಸಿಕೊಳ್ಳುತ್ತ ಅದನ್ನೇ ನೆಮ್ಮಿ ಬದುಕುವುದು ಅನಿವಾರ್ಯ. ಬಂಗಾರದಂತಹ ಮಾನವ ಬಾಳನ್ನು ಅಲಕ್ಷಿಸಲೂ ಬಾರದು. ಪರಿಸ್ಥಿತಿಗೆ ಹೊಂದಿಕೊಳ್ಳುವುದರಲ್ಲೇ ಸಂಜೀವನಾರ್ಥವಿದೆ..."

"ಕುಮೂ, ನೀನು ಬಹಳಷ್ಟು ಸಮಯವನ್ನು ಹಾಳು ಮಾಡಿ ನನ್ನ ವಿಚಾರದಲ್ಲಿ ಏನಾದರೂ ಸಾಧಿಸುತ್ತೇನೆ ಎಂದು ದೃಢವಾಗಿ ಹೇಳಲಾರೆ.

ಒಂದು ವಿಷಯವನ್ನು ಮಾತ್ರ ನೆನಪಿನಲ್ಲಿಟ್ಟುಕೊ, ಕುಮೂ. ಈ ಸೂತ್ರಗಳೂ ಆದರ್ಶಗಳೂ ಕೇವಲ ಕೆಲವರಿಗಾಗಿಯೇ ಸೃಷ್ಟಿಸಲ್ಪಟ್ಟವೆಯೇ ಹೊರತು ಎಲ್ಲರಿಗಾಗಿ ಅಲ್ಲ. ಇದನ್ನು ಅರಿತರಿತು ಜೀವನದ ಸಹಜತೆಯ ನಡುವೆ ಕೊಂಡೊಯ್ದಲ್ಲಿ ಆಗುವ ಪರಿಣಾಮವೇ ಬೇರೆ. ಅದು ಸುಖೀ ಜೀವನಕ್ಕೆ ನಾಂದಿ ಹಾಡಬಹುದು ಅಥವಾ ದುಃಖಕ್ಲೇಶಗಳಿಗೆ ದಾರಿ ಮಾಡಬಹುದು ಎಂದರೆ ಏನೇನೂ ಅನುಮಾನವಿಲ್ಲ. ಇದಕ್ಕೆ ಚರಿತ್ರೆಯಲ್ಲಿ ಬಹಳಷ್ಟು ನಿದರ್ಶನಗಳಿವೆ....ಆದರೆ, ಈ ಜೀವನ ಪ್ರಸಾದವನ್ನು ನಂಬಿ ಆದರ್ಶದಿಂದ ನಡೆಯಲೇಬೇಕೆಂದುಕೊಂಡಾಗ ನಾವು ಮಾನಸಿಕ ಕ್ರಾಂತಿಯನ್ನು ಎದುರಿಸಲೇಬೇಕಾಗುತ್ತದೆ. ಆಗ ದುಃಖ ಅನಿವಾರ್ಯ. ಯಾರ ಶುಭ ಹಸ್ತಗಳಲ್ಲಿ ಆತ್ಮಾರ್ಪಣೆ ಮಾಡಿಕೊಳ್ಳುತ್ತೇವೋ ಅಲ್ಲಿಯೇ ಸದಾ ಕಾಲವೂ ಈ ಶರೀರ ಬಿದ್ದಿರಲೇಬೇಕೆಂಬ ಸಿದ್ಧಾಂತವನ್ನು ನಾನು ಒಪ್ಪಲಾರೆ. ಎಂದಾದರೂ ಅಂತರಾಗ್ನಿ ಜ್ವಾಲೆ ಉಜ್ವಲೋಜ್ವಲಿಸಿ ಕೈ ದೀವಿಗೆಯಾಗಿ ಮಾರ್ಪಟ್ಟಾಗ ಪಥ ಬೇರೆಯಾಗುವುದರಲ್ಲಿ ಅನುಮಾನವಿಲ್ಲ. ಈ ರಹಸ್ಯ ಜನ್ಮ ಜನ್ಮಾಂತರದಿಂದಲೂ ನಡೆದು ಬಂದ ಜೀವನಾನುಬಂಧನದ ಅಂತಿಮ ಗುರಿ.

"ಕುಮೂ, ನಾನು ಬೇರೊಂದು ಮಾತು ಹೇಳಲಾರೆ ಹೇಳಿದರೂ ಹೇಳುವುದನ್ನೆಲ್ಲಾ ಎಷ್ಟು ಮಾತುಗಳಲ್ಲಿ ಅಥವಾ ಎಷ್ಟು ಕಾಗದಗಳಲ್ಲಿ ಹೇಳಲಾದೀತು ? ನೀನೇ ಯೋಚಿಸಿ ನೋಡು.

"ಆದರೆ, ಒಂದು ಮಾತು. ಇಲ್ಲಿಯವರಗೂ ಈ ಭರತ ಖಂಡದಲ್ಲಿ ನಡೆದುಬಂದಿರುವ ಜೀವನ ಧಾರೆ ಮುಂದೆ ಮುಂದೆ ಕೊನೆಯ ಘಟ್ಟವನ್ನು ಮುಟ್ಟುವವರೆಗೂ ಹರಿಯುವುದರ ಮರ್ಮ ಸ್ತ್ರೀ ತಪೋಬಲ !"

"ಖಂಡಿತ...!"

ಶಾರದಾ ತನ್ನಲ್ಲೇ ಯೋಚಿಸಿದಳು....ಅವಳು ಯಾರ ಶುಭ ಹಸ್ತಗಳಲ್ಲಿ ಆತ್ಮಾರ್ಪಣೆ ಮಾಡಿಕೊಂಡಳೋ ಆತ ವಂಶೋದ್ಧಾರಕನ ಹೊರತಾಗಿ ಮತ್ತೇನನ್ನೂ ಅರಿಯ. ಪುತ್ರರತ್ನದಿಂದಲೇ ಅವನಿಗೆ ಮುಕ್ತಿ–ಸದ್ಗತಿ ಎಲ್ಲಾ.

ಆದರೆ...

ಸ್ವಲ್ಪಹೊತ್ತು ರುದ್ರಮೌನ ಆಚರಿಸಿತು.

ಕುಮುದ್ವತಿ ತನ್ನಲ್ಲೇ ಯೋಚಿಸಿ ಹೇಳಿದಳು "ಶಾರದಾ, ಜೀವನದಲ್ಲಿ ಸೋಲು ಗೆಲವು ಕಟ್ಟಿಟ್ಟ ಬುತ್ತಿ. ಸೋತು ಗೆಲ್ಲುವವರೆಗೂ ನಾವು ಪ್ರಯತ್ನವನ್ನು ಮುಂದುವರಿಸುವುದು ಸೂಕ್ತ. ಫಲಾಫಲಗಳನ್ನು ಪರಮಾತ್ಮನ ಪಾದಾರವಿಂದಗಳಿಗೆ ಸಮರ್ಪಿಸಿಬಿಡೋಣ. ನಾವು ಎಂದೂ, ಯಾವತ್ತೂ ಈ ಅನೀತಿ ಅನಾಚಾರಗಳ ವಿರುದ್ಧ ಹೋರಾಡುವುದು ದಿಟ್ಟತನ ಅಥವಾ ಸುಜ್ಞಾನ ಅಥವಾ ನಾಗರಿಕತೆ ಅಥವಾ ಆತ್ಮವಿಕಾಸ ಏನಾದರೂ ಅನ್ನು. ನಾವು ಸಂಘ ಸದಸ್ಯಿಣಿಯರೆಲ್ಲಾ ಗುಂಪುಕೂಡಿ ಘೇರಾವ್‌ಮಾಡಿ ಛೀಮಾರಿ ಹಾಕುವುದರಿಂದ ಮಾನಸಿಕ ಪ್ರವೃತ್ತಿ ಸುಧಾರಿಸಬಹುದು. ನೀನು ಖಂಡಿತಾ ಪರ್ಯಾಲೋಚಿಸು. ನಿನಗೆ ಈ ಸಂಸಾರ ಬೇಕೆಬೇಕೆಂದಿದ್ದರೆ ಅಥವಾ ಹಾವಿನ ಹೆಡೆಯ ನೆರಳಲ್ಲೇ ಸುಖಜೀವನ ನಡೆಸುವ ಇಚ್ಛೆಯಿದ್ದರೆ ವಿಷಯವನ್ನು ಒಂದಲ್ಲ, ಹತ್ತಲ್ಲ ನೂರಾರುಬಾರಿ ಯೋಚಿಸಿ ನಿರ್ಧರಿಸು. ನಿನ್ನ ಇಚ್ಛೆ–ನಿನ್ನ ನಿರ್ಧಾರವೇ ನಿನಗೆ ಸಹಾಯ ಮಾಡುತ್ತದೆ. ಈ ವಿಚಾರವನ್ನು ಬಹಿರಂಗಗೊಳಿಸಿ ಬೆಳಕಿಗಿಡುವುದರಲ್ಲಿ ಪರಮಾರ್ಥವಿದೆ. ಸಂಜೀವನಯೋಗವಿದೆ...."

ಶಾರದಾ ಯೋಚನೆಯಾಳದಲ್ಲಿ ತೀವ್ರ ಮುಳುಗಿಹೋದಳು.

— o —

೨೪

ಕೃಷ್ಣ–ಸೋಮು ಒಟ್ಟಾಗಿಯೇ ಬಂದರು ಪದ್ಮಾಲಯಕ್ಕೆ.

ಅವರ ವ್ಯಾಪಾರ ಉಗ್ರಾಣ ಸಾಮಗ್ರಿಗಳು ಮಾತ್ರವಾದುದರಿಂದ ವ್ಯಾಹಾರ ಸೀಮಿತ. ಉತ್ಪತ್ತಿಯೂ ಸೀಮಿತ. ಅದನ್ನು ವಿಸ್ತರಿಸುವ ಗೋಜಿಲ್ಲ ಅವರಿಗೆ. ಹೇಗೋ ಹಾಗೆ ಇದ್ದುದರಲ್ಲೇ ಉಜ್ಜೀವನ, ಕೈ ಬಿಡುವು ದೊರೆಯದಿದ್ದಾಗ ಮುಚ್ಚಿಬಿಟ್ಟರೆ ತೀರಿತು ವ್ಯಾಪಾರ.

ಸೋಮುಗೆ ಮುಂದಿನ ಸಾಲಿನಲ್ಲಿಯೂ ಎಲೆಕ್ಷನ್‌ಗೆ ನಿಲ್ಲುವ ಹುಮ್ಮಸ್ಸು. ಹೋದ ಸಲ ಗೆಲ್ಲಲಿಲ್ಲ. ಈ ಸಲಿಯೂ ಸಾಧ್ಯವಿಲ್ಲ. ನಿಲ್ಲುವುದು ಬೇಡ ಎಂದು ಅನೇಕರು ಅಂಬೋಣ. ಹಿಂದಿನ ಸಲ ಪಡೆದ ಸಾಲ ಇನ್ನೂ ಬಗೆ ಹರಿಯಲಿಲ್ಲ. ಮಾರ್ವಾಡಿ ರತನ್ ಮಿಶ್ರ ಪ್ರಾಣವನ್ನು ಕಾಸು ಕಾಸಿಗೂ ಹಿಂಡುವವನೇ. ಆದರೂ ಸೋಲಿಲ್ಲ–ನೋವಿಲ್ಲ, ಅವನ ಹುರುಪು ತಗ್ಗು ವುದರಲಿ ಇನ್ನೂ ವೃದ್ಧಿಸುತ್ತಲೇ ಇದೆ. ಆತ ನಿಗಿನಿಗಿ ನಲಿಯುತಿದ್ದಾನೆ. ಪಾರ್ಟಿಯಿಂದ ಪಾರ್ಟಿಗೆ ಟಿಕೆಟ್ಟಿಗಾಗಿ ಅಲೆದಲೆದು, ಎಲ್ಲಿಯೂ ಟಿಕೆಟ್ಟು ಸಿಗ ದಿದ್ದಾಗ ತಾನು ಸ್ವತಂತ್ರನಾಗಿ ನಿಂತು ಧೈರ್ಯದಿಂದ ಹೋರಾಡುವುದಾಗಿ ಪಾರ್ಟಿ ಧುರೀಣರಿಗೆ ಸವಾಲು ಹಾಕಿಯೇ ಬಂದಿದ್ದ. ಯಾರ ಸಲಹೆಗಳಿಗೂ ಕಿವಿ ಕೊಡುವವನಲ್ಲ. ಗಲಾಟೆ–ಗದ್ದಲಗಳ ಅಧಿದೇವತೆಯಾಗಿ ಅಂಬರ ದೆತ್ತರಕ್ಕೂ ಏರಿದ ವ್ಯಕ್ತಿಗೆ ಮೈಯೆಲ್ಲಾ ಹುಮ್ಮಸ್ಸು.

"ಈ ಹಾಳು ಎಲೆಕ್ಷನ್‌ಗೆ ಏಕೆ ಇಳಿಯುತ್ತಿ ಹಿಂದಿನ ಸಾಲವೇ ಪೂರ್ತಿ ತೀರಿಸಲಿಲ್ಲ. ಇದರಿಂದ ಕೈಲಿದ್ದ ನಾಲ್ಕು ಕಾಸು ಹಾಳು ಮಾಡುವುದಲ್ಲದೆ ಮತ್ತೇನಿಲ್ಲ. ಸಂಸಾರಸ್ಥ ಹಣ ಹಾಳುಮಾಡಿಕೊಳ್ಳಬೇಡ." ಎಂದು ಕೃಷ್ಣ ಅನೇಕ ಬಾರಿ ಹೇಳಿದ್ದ. ತಂದೆ–ತಾಯಿ ಹೇಳಿದ್ದೂ ಅದೇ. ಕುಮುದ್ವತಿಯ ಸಲಹೆಯೂ ಅದೇ.

"ಎಂತೆಂತಹವರೋ ಗೆದ್ದು ಬರುತ್ತಾರೆ ಅಂದ ಮೇಲೆ, ನಾವು ಊರ ಮಕ್ಕಳು ಗೆಲ್ಲುವುದೇನು ಕಷ್ಟ ? ನಿಮ್ಮಂತಹವರೆಲ್ಲಾ ಪ್ರೋತ್ಸಾಹಿಸಬೇಕೇ ಹೊರತು ಕುಗ್ಗಿಸಿ ಕುಂದಿಸಿ ದಿಕ್ಕೆಡಿಸಬಾರದು. ಸುಮ್ಮನಿದ್ದುಬಿಡಿ." ಎಂದು ಎಲ್ಲರಿಗೂ ಸವಾಲು ಹಾಕುವ ಧಾಟಿಯಲ್ಲೇ ಉತ್ತರಿಸಿದ್ದ ಸೋಮು.

ಈ ಪ್ರಕಾರವಾಗಿಯೇ ಅಂದಿಂದಿಗೂ ಕಾಲಹರಣ ಮಾಡಿದ್ದ ಸೋಮು. ತಾನು ಹೋದೆಡೆಗಳಲ್ಲಿ, ಅಂಗಡಿಯ ಗ್ರಾಹಕರಲ್ಲಿ, ಬಂಧು ಮಿತ್ರರಲ್ಲಿ ನಿಮ್ಮ ಅಮೂಲ್ಯ ಮತವನ್ನು ನನಗೆ ಕೊಡಬೇಕು ಎಂದು ವಿನಯ ಪ್ರದರ್ಶನ ಮಾಡಿ ಕೈಮುಗಿದು ಕೇಳಿಕೊಳ್ಳುತಿದ್ದ. ಊರವರನ್ನು ಸಧ್ಯ ರಾಜಕಾರಣಿಗಳ ವಿರುದ್ಧ ಪ್ರಚೋದಿಸುತಿದ್ದ. ಪ್ರಸಕ್ತ ಅಸೆಂಬ್ಲಿ ಸದಸ್ಯರನ್ನು ಅವಹೇಳನ ಮಾಡಿ ಮಾಡಿ ತನ್ನ ಕಡೆಗೆ ಜನ ಮನವನ್ನು ಸೆಳೆಯುವ ಕಾರ್ಯದಲ್ಲಿ ನಿರುತನಾಗುತಿದ್ದ.

ಈ ಎಲ್ಲಾ ಚಟುವಟಿಕೆಗಳನ್ನೂ ಗಮನಿಸಿದ ಕೃಷ್ಣ ಇವನು ದಾರಿಗೆ ಬರುವವನಲ್ಲ. ಇನ್ನೊಮ್ಮೆ ನಿಂತು ಸೋಲಲಿ ಎಂದು ಸುಮ್ಮನಾಗಿದ್ದ.

ಕುಮುದ್ವತಿ ಅಣ್ಣಂದಿರನ್ನು ಮುಗುಳು ನಗೆಯ ಸ್ವಾಗತ ನೀಡಿ ಬರಮಾಡಿಕೊಂಡಳು.

ದೇವಯ್ಯ ಹೂದೋಟದ ಕಾಮಗಾರಿಯ ಉಸ್ತುವಾರಿ ನಡೆಸಿದ್ದ. ಸೀತಮ್ಮ ಪ್ರತ್ಯಗ್ನ ಸ್ನಾನಮಾಡಿ ಬೆಳಗಿನ ಬಿಸಿಲಿಗೆ ತಲೆಯೊಡ್ಡಿದ್ದಳು ಹಿಂದಿನ ಅಂಗಳದಲ್ಲಿ. ರಾಮನಾಥ ಭಾವಂದಿರ ಸೊಲ್ಲು ಕೇಳಿ ಕೋಣೆಯಿಂದ ಹೊರ ಬಂದ. ಹಜಾರದಲ್ಲಿ ಎಲ್ಲರೂ ಮಂಡಿಸಿದರು. ಕುಮುದ್ವತಿ ಎಲ್ಲರಿಗೂ ಕಾಫಿಯ ಬಸಿಯನ್ನು ತಂದು ನೀಡಿ ಕುಶಲ ಪ್ರಶ್ನೆ ಮಾಡಿದಳು.

ಕಾಫಿ ಹೀರುತ್ತ ರಾಮನಾಥ ಅಂದ "ಈ ಸಾಲಿನಲ್ಲಿ ಮಳೆ ಬೆಳೆ ಸಮೃದ್ಧಿ. ದವಸ ಧಾನ್ಯಗಳೂ ಅಗ್ಗ. ನಿಮ್ಮ ವ್ಯಾಪಾರವೂ ಚೆನ್ನಾಗಿ ಕುದುರಿರಬೇಕು."

"ಎಷ್ಟು ಕುದುರಿದರೂ ಲಾಭ ಹೆಚ್ಚುವ ಸಾಧ್ಯತೆ ಇಲ್ಲವೇ ಇಲ್ಲ ಬಿಡಿ, ಎಲ್ಲಾ ಹಿಂದಿನಂತೆಯೇ." ಎಂದು ಕೃಷ್ಣ ಒಂದು ಗಳಿಗೆ ತಡೆದು ಪುನಃ ಮುಂದುವರಿದ "ನಮಗೆ ಅಂಗಡಿ ವ್ಯಾಪಾರವೊಂದು ವಿನಾ ಬೇರೆ ದುಡಿಮೆಗೆ ಹಾದಿಯಿಲ್ಲ. ಈ ಸಾಲಿನಲ್ಲಿ ಲೇವಾದೇವಿ ಆರಂಭಿಸೋಣ ಎಂಬ ಮನಸ್ಸು. ಆದರೆ ಬಡ್ಡಿ ಕೊಡುವುದಿರಲಿ ಅಸಲಿಗೇ ಚಕ್ಕರ್ ಕೊಡುವವರಿದ್ದಾರೆ. ಆದ್ದರಿಂದ ಹಣ ಹೊರ ಹಾಕುವುದೇ ಕಷ್ಟ. ಹೇಗಾದರೂ ಸುಲಭದ ಆದಾಯಕ್ಕೆ ದಾರಿ ಮಾಡಿಕೊಳ್ಳಬೇಕು. ಸರಿಯಾದ ದಾರಿಯೇ ಕಾಣಿಸುತ್ತಿಲ್ಲ."

"ಅಂಗಡಿಯನ್ನೇ ವಿಸ್ತರಿಸಿಕೊಳ್ಳಿ. ಅಗ್ಗದ ಸೀರೆ–ಪಂಚೆಗಳ ವ್ಯಾಪಾರ ಆರಂಭಿಸಿದರೆ ಹಳ್ಳಿಗರು ಕೊಳ್ಳುತ್ತಾರೆ. ಅದರಿಂದ ಶೇಕಡಾ ಮೂವತ್ತು ನಲವತ್ತರಷ್ಟು ಹಣ ಸಂಪಾದನೆಯಾಗುತ್ತದೆ. ಜೊತೆಗೆ ಕಂಬಳಿಗಳನ್ನು ತರಿಸಿಕೊಂಡರೆ ಒಳ್ಳಿತು. ಇವೆಲ್ಲಾ ಗ್ರಾಮೀಣ ಮಂದಿಗೆ ತುಂಬಾ ಅಗತ್ಯವಾದ ವಸ್ತುಗಳು."

ದೇವಯ್ಯ ದೊಡ್ಡ ದೊಡ್ಡ ಹೆಜ್ಜೆಗಳನ್ನಿಡುತ್ತ ಒಳಬಂದು ಕುಳಿತುಕೊಂಡ. ಕುಮುದ್ವತಿ ಅವನಿಗೂ ಕಾಫಿ ತಂದಳು. ಸೀತಮ್ಮನು ಒಳಬಂದು ಮಕ್ಕಳನ್ನು ನೋಡಿ ಮಂದಸ್ಮಿತಳಾದಳು ಸೋಮು ತನ್ನ ಅಭಿಪ್ರಾಯ ಹೊರಹಾಕಿದ,

"ನೀನು ಹೇಳಿದ್ದು ಸರಿ. ನಮ್ಮ ಅಂಗಡಿಗಳು ಚಿಕ್ಕವು. ದವಸ ಧಾನ್ಯಕ್ಕೇ ಸೀಮಿತ. ಇನ್ನು ಬಟ್ಟೆ ವ್ಯಾಪಾರವೆಂದರೆ ಅಂಗಡಿಯನ್ನು ವಿಸ್ತರಿಸಬೇಕು. ಓಡಾಡಲು ಜನ ಬೇಕು. ಲೆಕ್ಕ ಬರೆಯಲು ಗುಮಾಸ್ತನನ್ನು ನೇಮಿಸಿಕೊಳ್ಳಬೇಕು. ಈ ಆದಾಯ ತೆರಿಗೆ ಅಧಿಕಾರಿಗಳು ಇದ್ದಾರೆ ನೋಡಿ, ಕಾಸುಕಾಸಿಗೂ ಪ್ರಾಣ ಹಿಂಡುತ್ತಾರೆ. ಮೊದಲು ಅವರ ಒಡಲು ತುಂಬಿದ ಮೇಲೆಯೇ ಲೆಕ್ಕಗಳ ಪರಿಶೀಲನೆ, ಲಂಚದ ಮೇಲೆಯೇ ಸರಕಾರ ನಡೆಯಬೇಕಾದರೆ ಹಣ ಕೊಟ್ಟು ಕೊಟ್ಟು ನಮಗೆ ಸಾಕಾಗುವುದೊಂದೇ ಅಲ್ಲ, ಹಾಲಿನಪುಡಿ, ಬೋರ್ನ್‌ವಿಟ, ಹಾರ್ಲಿಕ್ಸ್ ಮುಂತಾದ ಪುಷ್ಟಿಕರ ಆಹಾರಗಳನ್ನು ಸಲಸಲವೂ ಬಿಟ್ಟು ಸಾಗಿಸಬೇಕು ! ನೋಡಿ, ನಾವು ಹಣ

ಕೊಟ್ಟು ಕೊಳ್ಳುತ್ತೇವೆ. ಇವರಿಗೆ ಕರುಣೆ-ದಯೆ ಇಲ್ಲವೇ ಇಲ್ಲ. ಅಕ್ಕಿ ಬೇಳೆ ಒಯ್ಯುವುದೂ ಉಂಟು. ಯಾವುದು ಕಣ್ಣಿಗೆ ಒಪ್ಪವೋ ಅದೆಲಾ ಬೇಕೇ ಬೇಕು ಅಧಿಕಾರಿಗಳಿಗೆ. ಸರಕಾರದಿಂದ ಸಂಬಳ-ಜೊತೆಗೆ ಗಿಂಬಳ. ಮತ್ತು ನಮ್ಮಂತಹವರಿಂದ ಬಿಟ್ಟಿ ಜೀವನ. ಸಣ್ಣ ಸಣ್ಣ ಹುದ್ದೆಗಳಲ್ಲಿರುವವರೂ ಕೂಡಾ ನಾಲ್ಕಾರು ಮನೆ ಕಟ್ಟಿ, ಕಾರುಗಳನ್ನು ಇಟ್ಟುಕೊಂಡು ರಾಜಭೋಗ ನಡೆಸುತ್ತಾರೆ. ಅವರು ಬಂದರೂ ಅಂದರೆ ಹೊಟ್ಟೆ ಉರಿಯುತ್ತೆ. ಛೀ ! ಛೀ ! ಈ ಅಧಿಕಾರಿಗಳ ಹಿಂಸೆ ತಪ್ಪಿಸಿಕೊಳ್ಳುವುದೇ ಕಷ್ಟ. ಇವರ ಕಾಟದಿಂದ ತಪ್ಪಿಸಿಕೊಳ್ಳುವುದೆಂದರೆ ನಾವೂ ಅಧಿಕಾರ ಪೀಠಸ್ಥರಾದರೆ ನಮ್ಮ ಬಳಿ ಸುಳಿಯುವುದಿಲ್ಲ ನೋಡಿ !"

"ಏನು ಮಾಡಬೇಕೆಂದು ನಿನ್ನ ಅಭಿಪ್ರಾಯ ?"

"ಮುಂದಿನ ಸಾಲಿನಲ್ಲಿ ಮಂಡಲ ಪಂಚಾಯಿತಿ ಎಲೆಕ್ಷನ್ ಇದೆ. ಹೋದ ಸಲಿ ಗೆಲ್ಲಲಾಗಲಿಲ್ಲ. ಅಸೆಂಬ್ಲಿಯ ವಿಸ್ತಾರ ದೊಡ್ಡದು. ಇದರ ಕ್ಷೇತ್ರ ಚಿಕ್ಕದು. ಇದರಲ್ಲಿ ಗೆಲ್ಲುವ ಭರವಸೆ ನನಗೆ."

ದೇವಯ್ಯ ತನ್ನ ಅಭಿಪ್ರಾಯ ಹೊರಗೆ ಹಾಕಿದ,

"ನೋಡು ಸೋಮೂ, ನಿನಗೆ ಎಲೆಕ್ಷನ್ ಗೀಳು. ಊರೊಳಗೆ ನಿತ್ಯ ಸಾಮಾಜಿಕ ಸೇವೆಯನ್ನು ಮುಕ್ತ ಮನಸ್ಸಿನಿಂದ ಮಾಡಿ ಹತ್ತೂ ಮಂದಿಯಿಂದ ಸೈ ಎನಿಸಿಕೊಂಡರೆ ಹುರಿಯಾಳಾಗಿ ನಿಲ್ಲಬಹುದು. ಇಲ್ಲದಿದ್ದರೆ ನಿನ್ನ ಗುರುತಿಸುವವರಾರು ? ಜನರಲ್ಲಿ ಅಸಡ್ಡೆ-ಅಶ್ರದ್ಧೆ ಬೆಳೆದು ನಿರ್ಲಕ್ಷ್ಯ ತೋರುತ್ತಾರೆ. ಹಿಂದೆ ನಿನಗೆ ಅನುಭವವಾಗಿದೆ. ಮತ್ತೆ ಎಲೆಕ್ಷನ್ ಸಹವಾಸ ಎಂದರೆ ನಿನಗೆ ತಲೆ ಕೆಟ್ಟಿದೆಯೆಂದೇ ಹೇಳಬೇಕು. ನಿನಗಿದೆಲ್ಲಾ ಬೇಡ, ನಿನ್ನ ವ್ಯಾಪಾರನೆ ನೋಡಿಗೊಂಡು ತಣ್ಣಗಿರು."

ಆ ಮಾತಿಗೆ ಅಷ್ಟೇ ನಿರಾಳವಾಗಿ ಉತ್ತರಿಸಿದ ಸೋಮು,

"ಜೀವನದಲ್ಲಿ ನಾವು ಮಾಡಿದ್ದು 'ಇದು' ಎಂದು ತೋರಿಸಿಕೊಳ್ಳಲಾದರೂ ಒಂದು ಗುರುತು ಬಿಟ್ಟು ಹೋಗುವುದು ಒಳ್ಳೆತಲ್ಲವೇ ? ನನಿಂದ

ಏನೇನು ಸಾಧ್ಯವೋ ಅಷ್ಟನ್ನು ಮಾತ್ರ ಮಾಡಲು ಬಿಡಿ. ಕಳೆದ ಸಾಲಿನಿಂದಲೂ ನಾನು ಪ್ರಚಾರ ಮಾರ್ಗದಲ್ಲಿಯೇ ಇರುವೆ. ಪರಿಸರದ ಹಳ್ಳಿಗಳಿಗೆ ಭಾನುವಾರಗಳಂದು ಹೋಗಿ ಸರಕಾರದಿಂದ ನಮಗೆ ಬರಬೇಕಾದ ಸವಲತ್ತುಗಳಿಗಾಗಿ ಹೋರಾಟ ಮಾಡಬೇಕೆಂದು ಸಾರುತ್ತಲೇ ಇರುವೆ. ನನ್ನ ಮಾತಿಗೆ ಜನ ಕಿವಿ ಕೊಡುತ್ತಾರೆ, ಮುಂದಿನ ಎಲೆಕ್ಷನ್‌ನಲ್ಲಿ ನಾನೊಬ್ಬ ಉಮೇದುವಾರ ಎಂದು ಪ್ರಚಾರ ಮಾಡಿಯೇ ಬರುತ್ತೇನೆ."

"ಆಗಲಿ, ಸ್ವಾಮೀ ! ನಾವೆಲ್ಲಾ ಪ್ರಚಾರ ಮಾಡಿ ನಿಮಗಾಗಿ ಕೆಲಸ ಮಾಡುತ್ತೇವೆ ಎಂದು ಎಷ್ಟೋ ಹುರಿಯಾಳುಗಳು ಪ್ರಮಾಣ ವಚನ ಕೊಟ್ಟಿದ್ದಾರೆ. ಇಷ್ಟರ ಮೇಲೂ ಸೋಲು ಎಂದರೆ ಮತ್ತೆ ಮತ್ತೆ ಪ್ರಯತ್ನ ಅಷ್ಟೆ...!"

ಸೀತಮ್ಮನ ಮೈ ನೆತ್ತರೆಲ್ಲಾ ಹೆಪ್ಪುಗಟ್ಟಿದಂತಾಯ್ತು. ಸುಮ್ಮನೆ ಮರುಮಾತಿಲ್ಲದೆ ಕಲ್ಲಿಗಿಂತ ಕಲ್ಲಾಗಿ ಕುಳಿತುಕೊಂಡಳು.

ರಾಮನಾಥ ತೀರ ಅಸಮಾಧಾನದಿಂದ ನುಡಿದ "ಇದೆಲ್ಲಾ ಹುಡುಗಾಟಿಕೆಯ ಮಾತು. ಗೆಲ್ಲುವ ಪೂರ್ಣ ಭರವಸೆಯಿದ್ದರೆ ಮಾತ್ರ ನಿಂತು ಶ್ರಮ ಸಾಧನೆ ಮಾಡಬೇಕು. ಇಲ್ಲದಿದ್ದರೆ ಸೋತು ಅವಮಾನಗೊಳ್ಳುವುದು ಖಚಿತ. ದೀರ್ಘವಾಗಿ ಯೋಚಿಸಿ ಕಣಕ್ಕೆ ಇಳಿ. ಜನಾನುರಾಗ ಪಡೆಯದೆ ಎಲೆಕ್ಷನ್ನಿಗೆ ನಿಂತರೆ ಮುಖಭಂಗ, ಹಣ ಹಾಳು, ಸಮಯ ಹಾಳು, ವೃತ್ತಿಯೂ ಹಾಳು ಎಂಬುದನ್ನು ಮರೆಯಬಾರದು."

"ಯಾವ ವೃತ್ತಿಯಲ್ಲಿ ಈ ಕಷ್ಟಗಳೆಲ್ಲಾ ಇಲ್ಲ ? ಏನಾದರೊಂದು ಸಾಧನೆ ಮಾಡಲೇಬೇಕೆಂದರೆ ಇಂತಹ ಕಷ್ಟನಷ್ಟಗಳನ್ನೆಲ್ಲಾ ಎದುರಿಸಲೇಬೇಕು ಅಂದಮೇಲೆ, ಏನೇನು ಆಗಬೇಕೋ ಅದು ಆಗಿಯೇ ತೀರುತ್ತೆ, ಅನುಭವಿಸೋಣ, ದೈವೇಚ್ಛೆ !"

ರಾಮನಾಥ ಮಾತನಾಡಲಿಲ್ಲ.

ಯಾರಿಗೂ ಸೋಮುವಿನ ವಾದಕ್ಕೆ ಪುಷ್ಟೀಕರಣ ಕೊಡುವುದಾಗಲೀ ನಿರುತ್ಸಾಹಪಡಿಸುವುದಾಗಲೀ ಇಷ್ಟವಾಗಲಿಲ್ಲ. ಎಲ್ಲರಿಗೂ ಅಸಮಾಧಾನ ವಾಗಿದ್ದರೂ, ಅವನ ಸೋಲು ಖಚಿತವಾಗಿದ್ದರೂ ಸುಮ್ಮನಿರುವುದು ಅನಿವಾರ್ಯವೇ ಆಯಿತು.

ಅವನು ಸ್ವಲ್ಪ ಹೊತ್ತು ಸುಮ್ಮನಿದ್ದು ಪುನಃ ಮುಂದುವರಿದ "ಈವೊತ್ತು ನೀವೆಲ್ಲಾ ವಿರೋಧಿಸಿದರೂ ಎಲೆಕ್ಷನ್ ದಿನ ಪ್ರತಿರೋಧಿಸಬೇಡಿ. ಈ ಪರಿಸರದ ಮಂದಿಯನ್ನೆಲ್ಲಾ ಪ್ರಚೋದಿಸಿ ನನಗೇ ನಿಮ್ಮೆಲ್ಲರ ಮತ್ತು ಆಳುಕಾಳುಗಳೆಲ್ಲರ ಮತ ಹಾಕುವಂತೆ ಮಾಡಿರಿ. ಆಯಾಯಾ ಊರಿನಲ್ಲಿ ಮುಖಂಡರನ್ನು ಚೋದಿಸಲು ನೀವೆಲ್ಲಾ ಪ್ರಯತ್ನಪಡಿ ಎಂದು ಕೇಳಿಕೊಳ್ಳುವೆ. ನೀವೆಲ್ಲರೂ ಅಷ್ಟಿಷ್ಟು ಉಪಕಾರ ಮಾಡಿದರೆ ಹನಿಗೂಡಿ ಹಳ್ಳವಾಗುತ್ತದೆ. ನನಗ್ಯೊತ್ತು ಹೇಗೂ ಭವಿಷ್ಯ ನಮ್ಮ ಕೈಲಿಲ್ಲ. ದೇವರು ಮಾಡಿಸಿದಂತಾಗುತ್ತೆ. ಅವನ ಮೇಲೆ ಭಾರ ಹಾಕಿಬಿಡುವೆ."

ದೇವಯ್ಯ ಬಿಸಿಯುಸಿರು ಬಿಟ್ಟ.

ಕುಮುದ್ವತಿ ಹೇಳತೊಡಗಿದಳು "ಆಗಲೇ ನೀನು ಕೈ ಸುಟ್ಟುಕೊಂಡವನು. ಮತ್ತೂ ಮತ್ತೂ ಇದೇ ಗೀಳೆಂದರೆ ಮನೆ ಹಾಳು. ಸಂಸಾರಸ್ಥ. ನಿನ್ನ ಹಣ ಹಾಳಾದರೆ ಸಂಸಾರವೂ ಹಾಳು. ಮುಂದೆ ನೀನು ಮಕ್ಕಳನ್ನು ಓದಿಸಬೇಕು, ಅಂಗಡಿಯನ್ನು ಅಭಿವೃದ್ಧಿಪಡಿಸಬೇಕು. ಒಳ್ಳೆಯ ಮನೆಯನ್ನು ಕಟ್ಟಿಸಿಕೊಳ್ಳಬೇಕು. ಇಂತಿಂತಹ ವಿಚಾರಗಳನ್ನೆಲ್ಲಾ ಮುಂದಿಟ್ಟುಕೊಂಡು ಎಲೆಕ್ಷನ್ ಗೀಳು ಹಚ್ಚಿಕೊಂಡರೆ ನಿನ್ನ ಸಂಸಾರದ ಗತಿಯೇನು? ಮನೆ ಗೆದ್ದು, ಮಾರು ಗೆದಿ ಎಂಬುದೊಂದು ಗಾದೆ. ನೀನು ಸಂಸಾರದ ಪ್ರಗತಿಯನ್ನು ಏನೇನೂ ಸಾಧಿಸಿಲ್ಲ. ಮೊದಲು ನಿನ್ನ ಸ್ಥಿತಿಗತಿಯನ್ನು ಪರಿಶೀಲಿಸು. ನಿನಗೆ ಸರಿ ಎನಿಸಿದರೆ ಎಲೆಕ್ಷನ್‌ಗೆ ನಿಲ್ಲು. ಅದಕ್ಕಿಂತ ಮುಂಚೆ ಮನೆ, ಸಂಸಾರಗಳನ್ನು ಅಭಿವೃದ್ಧಿಪಡಿಸಿಕೊ. ಅನಂತರ ಎಲೆಕ್ಷನ್. ನಿನ್ನನ್ನು ನಂಬಿದ ಸಂಸಾರವನ್ನು ನಡು ನೀರಿನಲ್ಲಿ ಕೈ ಬಿಡಬೇಡ. ಇದನ್ನೆಲ್ಲಾ ಕೂಲಂಕಶವಾಗಿ ಪರಿಶೀಲಿಸಿ ನೋಡು. ಇನ್ನೂ ಬೇಕಾದಷ್ಟು ಸಮಯವಿದೆ.

ಅವಸರಪಡಬೇಕಾಗಿಲ್ಲ. ಮೊದಲು ನಿನ್ನ ಹೆಂಡತಿ ಮಕ್ಕಳನ್ನು ಕೇಳಿ ನೋಡು. ಅವರ ಅಭಿಪ್ರಾಯಕ್ಕೂ ಮನ್ನಣೆ ಕೊಡು....ಅದು ಸರಿಯಾದ ಕ್ರಮ."

ಅವನು ಅದಕ್ಕೆ ಉತ್ತರಿಸುವ ತೊಂದರೆ ತೆಗೆದುಕೊಳ್ಳಲಿಲ್ಲ.

ಕೃಷ್ಣ ಅಂದ "ನಾನು ಅಂದಿಂದಿಗೂ ಹೇಳುತ್ತಲೇ ಇರುವೆ. ಅವನು ಮನಸ್ಸಿನ ಮೇಲೆ ಹಾಕಿಕೊಳ್ಳುವುದೇ ಇಲ್ಲ. ನನಗೂ ಹೇಳಿ ಹೇಳಿ ಸಾಕಾಗಿದೆ. ಅಲ್ಲದೆ ಹಿಂದಿನ ಸಲ ಪೆಟ್ಟು ತಿಂದೂ ಸಹ ಅರಿತುಕೊಳ್ಳದಿದ್ದರೆ ಮಾಡುವುದೇನು ? ಇನ್ನೂ ಇನ್ನೂ ತಲೆಗೆ ತಾಗಿ ಬುದ್ಧಿ ಬರಬೇಕು. ಆಗ ನಾವು ತತ್ಕಾಲಕ್ಕೆಂದು ಕಟ್ಟಿದ ಮನೆಗಳು. ಅಂತಹ ಸುಭದ್ರವೇನೂ ಅಲ್ಲ. ನಾವು ನಮಗೇ ಮಾಡಿಕೊಳ್ಳಬೇಕಾದ ಕೆಲಸವೇ ಬಹಳವಿದೆ. ಅಂದ ಮೇಲೆ ನಮ್ಮ ಕೆಲಸ ನಾವು ಮಾಡಿಕೊಳ್ಳುತ್ತಿರುವುದರಲ್ಲೇ ನಮಗೆ ಸಂತೃಪ್ತಿ ಬರಬೇಕು. ಅದು ಬಿಟ್ಟು ಎಲೆಕ್ಷನ್ ಅಂದರೆ ದೇವರೇ ಕಾಪಾಡಬೇಕು. ಅಂತೂ, ಗೀಳು ಹತ್ತಿದೆ. ನಿಂತು ಪಾಠ ಕಲಿಯಬೇಕು ಅಷ್ಟೆ."

"ಇರಲಿ ಬಿಡಿ, ಒಂದೊಂದಾಗಿ ಪಾಠ ಕಲಿಯೋಣ."

ಅವನು ಎಲ್ಲರಿಗೂ ವಿದಾಯ ಹೇಳಿಕೊಂಡು ಮೆಟ್ಟಲಿಳಿದ. ಜೊತೆಗೆ ಕೃಷ್ಣನೂ ಹೊರಟ.

ಸೀತಮ್ಮ ಖಿನ್ನ ಮುಖಿಯಾಗಿ ಅತ್ತಲೇ ದೃಷ್ಟಿಯನ್ನು ನೆಟ್ಟಳು. ದೂರದ ಬೇಲಿಯನ್ನು ದಾಟಿ ಕಣ್ಮರೆಯಾಗುವವರೆಗೂ ನೋಡಿದುವು ಕೇವ ನಿಸ್ಫಾರಿತ ನೇತ್ರಗಳು. ಎದೆಯಾಳದಿಂದ ನಿಟ್ಟುಸಿರೊಂದು ಹೊರಹೊಮ್ಮಿತು. ಭಾರವಾದ ಹೃದಯವನ್ನು ಹೊರಲಾರದೆ ಹೊತ್ತ ಕಾಲುಗಳು ಬಳುಕಿದುವೇನೋ, ಸುಮ್ಮನೆ ಕೊಠಡಿಯ ಕಡೆ ಹೆಜ್ಜೆ ಹಾಕಿದಳು.

೦ ೦ ೦ ೦

ಅಂದಿನ ಟಪ್ಪಾಲಿನಲ್ಲಿ ಶ್ರೀನಿಧಿಯ ಕಾಗದ ಬಂದು ಕೈಸೇರಿತು.

ಒಂದು ವಾರದಿಂದ ನಿಮಗೆ ಬರೆಯಬೇಕೆಂದು ಪ್ರಯತ್ನಪಟ್ಟೆ. ಬಿಡುವು ದೊರೆಯಲಿಲ್ಲ. ಈ ಸಲ ಓದುವುದು ಬಹಳವಿದೆ. ಸಾಯಂಕಾಲ ಒಂದು

ಗೂಡಿ ಕಲಿಯುವುದಕ್ಕೆ ಗೆಳತಿಯರು ಬಂದು ಕೂಡುತ್ತಾರೆ. ಅನಂತರ ರಾತ್ರಿ ಬಹಳ ಹೊತ್ತಿನವರೆಗೂ ಓದು, ಎಷ್ಟೋ ಸಲ ನಿದ್ದೆಗೂ ಸಂಚಕಾರ.

ನೀವೆಲ್ಲಾ ಮೈಸೂರಿಗೆ ಬಂದು ಹೋದುದು ಹೆಚ್ಚಲ್ಲ. ರಂಗಮ್ಮ ಬಂದು ಹೋದುದು ನನಗೆ ಬಲೂ ಸಂತೋಷ ತಂದಿದೆ. ಅವಳ ರೈಲಿನ ಪಯಣ, ದಸರಾ ಮೆರವಣಿಗೆ, ಅರಮನೆಯ ದೀಪಾಲಂಕಾರ, ಚಾಮುಂಡಿ ದೇವಾಲಯದಲ್ಲಿ ಪೂಜೆ, ಕನ್ನಂಬಾಡಿಯ ಸಂದರ್ಶನ ಮತ್ತು ಪ್ರಾಣಿ ಸಂಗ್ರಹಾಲಯದಲ್ಲಿ ಅಡ್ಡಾಡಿ ವನ್ಯ ಜೀವಿಗಳನ್ನು ಕಣ್ತುಂಬ ಕಂಡು ಆನಂದಿಸಿದ್ದು ನನಗೆ ಎಲ್ಲಿಲ್ಲದ ಸಂತಸ ತಂದಿದೆ. ಪಾಪ, ಮುಗ್ಧ ಮನದ ಮುಗ್ಧ ಮಹಿಳೆ...ಅವಳು ಸಂತೋಷಪಟ್ಟಿದ್ದು ಒಳ್ಳೆಯದಾಯ್ತು. ಅವಳಿಗೆ ಇನ್ನೂ ತೋರಿಸಬೇಕಾದುದು ತುಂಬಾ ಇದೆ. ಇನ್ನೊಂದು ಸಲ ನಂಜನಗೂಡು ಬಂಡೀಪುರ ಊಟಿ ತೋರಿಸೋಣ, ಶ್ರೀಕಂಠೇಶ್ವರ ಅವಳ ಮನೆದೇವರಂತೆ. ಅವಳಿಗೆ ನಂಜನಗೂಡು ನೋಡುವುದರಲ್ಲಿ ತುಂಬಾ ಆಸೆಯಿದೆ. ಅದನ್ನು ಮುಂದಿನ ಸಾಲಿನಲ್ಲಿ ಪೂರೈಸೋಣ.

ನಮ್ಮ ಉತ್ತರ ಭಾರತ ಪ್ರವಾಸ ತುಂಬಾ ಚೆನ್ನಾಗಿತ್ತು. ನಾವು ಕೇವಲ ನಗರಗಳನ್ನೂ ಪುರಾತನ ವೈಭವಗಳನ್ನೂ ನೋಡಿ ಆನಂದಿಸುವುದರಲ್ಲಿ ಮಾತ್ರ ಕಳೆಯಲಿಲ್ಲ, ಕೆಲವು ಹಳ್ಳಿಗಳಿಗೂ ಹೋಗಿದ್ದೆವು.

ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದು ಹತ್ತಿರ ಹತ್ತಿರ ಅರ್ಧ ಶತಮಾನವೇ ಕಳೆಯಿತು. ಆದರೂ ಈವರೆಗೆ ರಾಷ್ಟ್ರದಲ್ಲಿ ಪ್ರಗತಿ ಆಗಲಿಲ್ಲ ಎಂದೇನೂ ಹೇಳಲಾರೆ. ಆಗಿದೆ–ಆಗುತ್ತಿದೆ. ಆದರೆ ಹಳ್ಳಿ ಹಳ್ಳಿಗಳ ದುಃಸ್ಥಿತಿಯನ್ನು ನೋಡಿದರೆ ಕರುಳು ಕತ್ತರಿಸಿದಂತಾಗುತ್ತದೆ. ನಮ್ಮವರ ಬಡತನಕ್ಕೆ ಸರಿಯಾದ ಜಡತನ. ಮೇಲಾಗಿ, ಸರಕಾರಕ್ಕೂ ಅಷ್ಟೇ ನಿರ್ಲಕ್ಷ್ಯ. ಈ ದೇಶೋದ್ಧಾರವಾಗಬೇಕಾದರೆ ಇನ್ನೂ ಒಂದೆರಡು ಶತಮಾನನೇ ಬೇಕು. ಆಸ್ಪತ್ರೆ ಮತ್ತು ಶಾಲೆಗಳು ವಿರಳ. ಆಧುನಿಕ ಸೌಕರ್ಯ ಇಲ್ಲವೇ ಇಲ್ಲ. ಪುರಾತನ ಗೊಡ್ಡು ಸಂಪ್ರದಾಯದ ನೆರಳಿನಲ್ಲಿ ಬಾಳುತ್ತಿರುವ ಹೆಂಗಸರು ಮಕ್ಕಳನ್ನು ನೋಡಿದರೆ ಸಂಕಟವಾಗುತ್ತದೆ. ಅನಕ್ಷರತೆ–ಮೌಢ್ಯ, ಮೂಢ ನಂಬಿಕೆಗಳ ವ್ಯಾಪಕವಾದ ಅನುಬಂಧದಿಂದ ಜನ ಹೇಗಿದ್ದರೋ

ಹಾಗೆಯೇ ಇದ್ದಾರೆ. ಸ್ತ್ರೀಯರಂತೂ ಸಕಲ ಒಡವೆ ವಸ್ತ್ರಗಳಿಂದ ಕೂಡಿ ತಲೆಯ ಮೇಲೆ ಮುಸುಕು ಹಾಕಿ ಮುಖ ಮಡಿಯಾಗಿ ಬಾಳುವುದನ್ನು ನೋಡಿದರೆ ಬಿಸಿಲಟ್ಟಿದ ಮಂಜಿನಂತಾಗುತ್ತದೆ ಮನಸ್ಸು. ಉಡಿಗೆ ತೊಡಿಗೆಗಳಲ್ಲಿ ನಯ–ನಾಜೂಕುಗಳು ಇಲ್ಲವೇ ಇಲ್ಲ. ಆಚಾರ–ವ್ಯವಹಾರಗಳಲ್ಲಿ ನಾಗರಿಕತೆಯ ಸೋಂಕಿಲ್ಲ. ವಯಸ್ಕರ ಶಿಕ್ಷಣ ಜಾರಿಯಲ್ಲಿದ್ದರೂ ಕಲಿಸುವ ಆಸ್ಥೆಯಿಲ್ಲ ಜನಪದಕ್ಕೆ. ನೀರಿನ ಅಭಾವದಿಂದ ಮಳೆಬೆಳೆಗಳ ಸಂವೃದ್ಧಿಯಿಲ್ಲ. ಜ್ಞಾನ–ವಿಜ್ಞಾನಗಳ ನೆರಳೂ ಇಲ್ಲ. ಏನೋ ಒಂದು ರೀತಿಯ ಅಡ್ಡಾದಿಡ್ಡಿಯ ಬದುಕು. ಸೊಟ್ಟಪಟ್ಟ ಗೋಡೆಯ ಪುರಾತನ ಮನೆಗಳು. ಊರಿಗೊಂದು ರೂಪುರೇಷೆಯೂ ಇಲ್ಲ. ಆಕಾರವಿಲ್ಲದ ವಿಕಾರಗಳೇ ಎಲ್ಲ. ಹುಟ್ಟಿದುದಕ್ಕೆ ಬದುಕಬೇಕು; ಬದುಕಿದ್ದಾರೆ. ಎಲ್ಲಿಯೂ ಶೌಚಾಲಯಗಳಾಗಲೀ ಒಳಚರಂಡಿ ವ್ಯವಸ್ಥೆಯಾಗಲಿ ಇಲ್ಲವೇ ಇಲ್ಲ. ದನಕರು, ಕೋಳಿ, ಕುರಿಗಳ ಒಡ್ಡಿಗಳು ಮನೆಯ ಮಗ್ಗುಲಿಗೇ ಇದ್ದು ಮನೆಗಳಿಗೆ ಸೇರಿಕೊಂಡೇ ಇವೆ. ವಿದ್ಯೆ–ಬುದ್ಧಿ ಮೈಲಿ ಮೈಲಿ ದೂರ. ಆರ್ಥಿಕ ಸ್ವಾತಂತ್ರ್ಯ, ವೈಯಕ್ತಿಕ ಸ್ವಾತಂತ್ರ್ಯಗಳ ಹುರುಳರಿಯದ ಸ್ತ್ರೀ ಕುಲಕೋಟಿ. ಹೆಣ್ಣುಮಕ್ಕಳನ್ನು ಇನ್ನೂ ಹದಿಹರೆಯದಲ್ಲಿರುವಾಗಲೇ ಯಾರಿಗಾದರೂ ಕಟ್ಟಿ ಕಳುಹಿಸುತ್ತಾರೆ. ತಮ್ಮ ಜೀವನ ಸಂಗಾತಿಗಳನ್ನು ಆರಿಸಿಕೊಳ್ಳುವ ಜೀವನ ನಿಷ್ಠೆಯಾಗಲೀ, ಕಾರ್ಯದಕ್ಷತೆಯಾಗಲೀ ಹುಡುಗಿಯರಿಗೆ ಇಲ್ಲವೇ ಇಲ್ಲ. ಶುದ್ಧ ಮುಗ್ಧ ದುಗ್ಧತನ. ಮನುಕುಲದಲ್ಲಿ ಹುಟ್ಟಿದ್ದೇ ಒಂದು ಪುಣ್ಯಯೋಗ, ಮತ್ತೇನಿಲ್ಲ. ಇಂಥ ಪರಿಸ್ಥಿತಿಯನ್ನು ಅವಲೋಕಿಸುತ್ತಿದ್ದರೆ ಈ ರಾಷ್ಟ್ರೋದ್ಧಾರವಾಗುವುದು ಸಾಧ್ಯವೇ ಎಂಬ ಪ್ರಶ್ನೆ ಮನೋಭಿತ್ತಿಯಲ್ಲಿ ಥುತ್ತೆಂದು ನಿಲ್ಲುತ್ತದೆ.

ಈ ಜಡತನಕ್ಕೆ ಯಾರು ತಾನೇ ಏನು ಮಾಡಿಯಾರು ? ಈ ರಾಷ್ಟ್ರದಲ್ಲಿ ಎಂತೆಂತಹ ಸಮಾಜ ಸುಧಾರಕರು ಆಗಿಹೋಗಿದ್ದಾರೆ...ಅವರು ಮಾಡಿದ ಕಂಠ ಶೋಷಣೆ ಏನು ? ಅವರು ಉಲ್ಲೇಖಿಸಿದ ಮಹದ್ಗ್ರಂಥಗಳೇನು ? ಅವರಿಂದ ಏನಾದರೂ ಸುಧಾರಿಸಲು ಸಾಧ್ಯವಾಯಿತೇ ? ಹಾ !

ಈ ಜನಪದವನ್ನು ನೋಡಿದರೆ ಒಂದು ಹುಲ್ಲುಕಣಿಯೂ ಅಲುಗಲಿಲ್ಲ ಎನಿಸುತ್ತೆ ನನಗೆ.

ಮೈಯೆಲ್ಲಾ ಸಂಕೋಚದ ಮುದ್ದೆಯಾಗಿ ತೆರೆಯ ಮರೆಯಲ್ಲಿಯೇ ಬದುಕಲಿಚ್ಛಿಸುವ ಹೆಂಗಳೆಯರನ್ನು ನೋಡಿದರೆ 'ಇವರು ಹೀಗಿರಲಿಕ್ಕೇ ಸರಿ' ಎನಿಸಿದರೆ ಆಶ್ಚರ್ಯವಿಲ್ಲ....

ಬದುಕು ಬಂಗಾರವಾಗಬೇಕಾದರೆ ಸುಜ್ಞಾನ ಸಂಪತ್ತು ಬೆಳೆದು ಹೆಮ್ಮರವಾಗಿ ಸ್ತ್ರೀ ಪುರುಷರ ಮಧ್ಯೆ ಇರುವ ಪ್ರಬೇಧ ಅಳಿದು ಸಮಾನತೆ ಬೆಳೆದು ಹಬ್ಬಿ ಹರಡಿದರೆ ಮಾತ್ರ ಭಾರತ ಧಾತ್ರಿಯ ಉದ್ಧಾರ ಎಂದೇನು. ಮುಂದಿನ ಪೀಳಿಗೆಗಾದರೂ ಈ ಅದೃಷ್ಟ ಲಭಿಸುತ್ತೋ ಅಥವಾ ಇಲ್ಲವೋ ಊಹಿಸುವುದು ಕಷ್ಟ ಎಂದರೆ ತಪ್ಪಲ್ಲ....

೦ ೦ ೦ ೦

ಇಂದು ಮೇ ಒಂದರ ದಿನಾಚರಣೆ.

ಆಳುಗಳಿಗೆಲ್ಲ ಸಂಭ್ರಮವೋ ಸಂಭ್ರಮ. ಪದ್ಮಾಲಯದಲ್ಲಿ ಆಳು ಕಾಳುಗಳಿಗಾಗಿ ವಿಶೇಷ ಭೂರಿ ಭೋಜನದ ತಯಾರಿಕೆ. ಇಡೀ ದಿನವೆಲ್ಲಾ ವಿವಿಧ ಕ್ರೀಡೆಗಳಲ್ಲಿ ತೊಡಗಲು ಸದವಕಾಶ. ಬೆಳಗ್ಗೆಯಲ್ಲಾ ಅವರದೇ ಆದ ನಾಟಕ ಪ್ರದರ್ಶನ ಮತ್ತು ಭರತನಾಟ್ಯಗಳು ವೈಭವೀಕರಿಸಿದ ಮನರಂಜನೆ. ಅನಂತರ ವಿವಿಧ ಕ್ರೀಡೆಗಳ ಚಟುವಟಿಕೆ. ಸಂಜೆಯವರೆಗೂ ಕ್ರೀಡಾಕೂಟಕ್ಕೆ ಬಿಡುವೇ ಇಲ್ಲ. ಹಾಸ್ಯ ಪ್ರಹಸನವೂ ಇತ್ತು. ಅನಂತರ ಎಲ್ಲರಿಗೂ ಎರಡೆರಡು ಜೋಡಿ ಬಟ್ಟೆಗಳ ವಿನಿಯೋಗ. ಕ್ರೀಡೆಗಳಲ್ಲಿ ಬಹುಮಾನ ವಿನಿಯೋಗ. ಸಂತಸದ ಕೂಟದಲ್ಲಿ ಪಾಲ್ಗೊಂಡ ಶ್ರೀನಿಧಿ ಆಳುಗಳ ಏಳಿಗೆಯನ್ನು ಕುರಿತು ನಾಲ್ಕು ಮಾತಾಡಿ ಹಿತವಾದ ಹೇಳಿದಳು. ರಾಮನಾಥ ಉದ್ದ ಭಾಷಣವನ್ನೇ ಮಾಡಿದ. ನೆರೆಹೊರೆಯವರೂ ನಾಟಕ, ನಾಟ್ಯ, ವಿವಿಧ ಕ್ರೀಡೆಗಳನ್ನು ನೋಡಲು ಜಗಲಿಯಲ್ಲಿ ನೆರೆದಿದ್ದರು. ಎಲ್ಲರ ಮುಖ ಭಾವದಲ್ಲೂ ಸಂತಸದ ಭಾವನೋಜ್ವಲತೆಯಿಂದ ಅರಳಿದ ಹೂವಿನ ಮುದ್ರೆ. ರಂಗಮ್ಮ ಪ್ರೇಕ್ಷಕಳಾಗಿ ಭಾಗ ವಹಿಸಿದಳೇ ಹೊರತು ಕ್ರೀಡೆಗಳಲ್ಲಿ ಭಾಗ

ವಹಿಸಲಿಲ್ಲ. ಎಷ್ಟು ಒತ್ತಾಯಿಸಿದರೂ ಲಜ್ಜೆಗೆ ಶರಣಾದ ಅವಳು ಹೆಜ್ಜೆ ಮುಂದಿಡಲಿಲ್ಲ.

ಕುಮುದ್ವತಿ ಗೃಹಿಣೀ ಧರ್ಮವನ್ನು ಸ್ವೀಕರಿಸಿದ ತರುಣದಲ್ಲೇ ಅಲ್ಪ ಸ್ವಲ್ಪವಾಗಿ ಶುರುವಾದ ಮೇ ದಿನಾಚರಣೆ ಸಸಿತನದಿಂದ ಹೆಮ್ಮರವಾಗಿ ಬೆಳೆಯುತ್ತ ಬಂದಿದೆ. ಶ್ರೀನಿಧಿಯಿಂದ ಅದಕ್ಕಿನ್ನಷ್ಟು ಮೆರುಗು–ಹುರುಪು ಎಲ್ಲಾ.

ಊಟೋಪಚಾರಗಳು ಮುಗಿದು ಎಲ್ಲರೂ ಹೊರಡುವ ಮುನ್ನ ಕೃತಜ್ಞತೆಯನ್ನು ಸಲಿಸುವ ಸಲುವಾಗಿ ತಂಡದ ಯಜಮಾನನೂ ಮೇಸ್ತ್ರಿಯೂ ಆದ ಮಂಜು ಎಲ್ಲರಿಗೂ ಕೈ ಮುಗಿದು ವಂದಿಸಿ ವಿನಯದಿಂದ ಹೇಳಿಕೊಂಡ,

"ಒಡೆಯರೇ, ನೀವು ನಮಗೆ ಇಂತಹ ಒಂದು ಸದವಕಾಶವನ್ನು ನೀಡಿದ್ದು ನಿಮ್ಮ ದಯೆ–ಕರುಣೆ–ಪ್ರೀತಿಗಳನ್ನು ಸಾರಿ ಹೇಳುತ್ತದೆ. ನಿಮ್ಮಂತೆಯೇ ಎಷ್ಟೋ ಜನ ಜಮೀನ್ದಾರರಿದ್ದಾರೆ. ಅವರ್ಯಾರೂ ಬಡತನವನ್ನು ಲಕ್ಷಿಸುವುದೇ ಇಲ್ಲ. ಚೆನ್ನಾಗಿ ದುಡಿಸಿಕೊಳ್ಳುತ್ತಾರೆ ಅಷ್ಟೇ. ಬಡವರ ಹಿತಾಸಕ್ತಿ ಏನೇನೂ ಇಲ್ಲ. ನಮ್ಮ ನಮ್ಮ ಕಷ್ಟವನ್ನು ನಾವೇ ನುಂಗಿಕೊಳ್ಳಬೇಕು. ಬುದ್ಧಿಯಿಲ್ಲದ ಬಡ ಜನರ ಮೇಲೆ ನಿಮ್ಮಂತೆ ಕರುಣೆ ತೋರುವವರು ಈ ಪ್ರಾಂತ್ಯದಲ್ಲಿ ಇಲ್ಲವೇ ಇಲ್ಲ. ಭಗವಂತ ನಿಮಗೆ ನೂರ್ಕಾಲ ಆಯುಸ್ಸು ಕೊಡಲಿ ಎಂದು ಬೇಡಿಕೊಳ್ಳುತ್ತೇವೆ" ಎಂದು ಗಗನದೆಡೆ ಕೈ ಮುಗಿದು ಪ್ರಾರ್ಥಿಸಿ ಎಲ್ಲರೊಡನೆ ಹೊರಟ. ಎಲ್ಲರ ಮುಖದಲ್ಲೂ ಕುಲುಕುಲು ನಗೆಯ ಬೆಳುದಿಂಗಳು.

ಬೆಳಗಿನಿಂದ ಗದ್ದಲಮಯವಾಗಿದ್ದ ಮನೆಯಂಗಳ ಒಮ್ಮೆಂದೊಮ್ಮೆಲೇ ಜಡಿಮಳೆ ಹೊಯ್ದು ನಿಂತು ಹೋದಂತೆ ತಣ್ಣಗಾಯಿತು.

ಸೀತಮ್ಮ ಸಮಾಧಾನಪೂರ್ವಕವಾಗಿ ನುಡಿದಳು "ಪರವಾಯಿಲ್ಲ, ಎಲ್ಲರೂ ಚೆನ್ನಾಗಿಯೇ ಮಾಡಿದರು. ಇಂಥ ಹಳ್ಳಿಯ ಬದುಕಿನಲ್ಲಿ ಇಷ್ಟು ತಯಾರಿ ಮಾಡಿಕೊಂಡದ್ದು ಹೆಚ್ಚು."

ರಾಮನಾಥನೂ ಆನಂದದಿಂದ ತನ್ನ ದನಿಗೂಡಿಸಿದ,

"ಹೌದು, ಆಳುಗಳು ಸುಧಾರಣೆಗಾಗಿ ಮೊದಮೊದಲು ಅನೇಕ ಕ್ರಮಗಳನ್ನು ಕೈಗೊಂಡಾಗ ನನಗೆ ಅಸಮಾಧಾನವೇ ಉಂಟಾಗಿತ್ತು. ಈಗ ನೋಡಿದರೆ ಅದರಿಂದ ಅನುಕೂಲವೇ ಆಗಿದೆ. ನಮಗೂ ಇದರಿಂದ ತುಂಬ ಸಂತೋಷವೇ ಎನ್ನೋಣ."

"ಹೌದು ಅಪ್ಪಾಜಿ. ಅವರ ಸಂತೋಷವೇ ನಮ್ಮ ಸಂತೋಷ. ಅದರಿಂದಲೇ ನಮ್ಮ ಸಂಮೃದ್ಧಿ."

"ಹೌದು ಮಗಳೇ, ನಿನ್ನ ಮಾತು ಅಕ್ಷರಶಃ ಸತ್ಯ."

ಮುಸ್ಸಂಜೆ ಅಳಿದು ಕತ್ತಲು ಮೆಲ್ಲಮೆಲ್ಲನೆ ಮುಸುಕುತ್ತ ಬಂತು. ಹಗಲಿನ ಬೇಗೆಯುಳಿದು ಸಂಜೆಯ ತಂಪು ಇಳೆಯನ್ನು ಸ್ವಚ್ಛಂದವಾಗಿ ಆವರಿಸಿತು.

ಮಾಮರದ ಸೆತ್ತಿಯಮೇಲೆ ಕೋಕಿಲೆಯೊಂದು ನವುರಾದ ದನಿಯಲ್ಲಿ ಹಾಡಿತು. ಅದರ ಕೊರಳುಲಿಯಲ್ಲಿ ಹರಿದು ಬಂದ ಸಂಧ್ಯಾರಾಗವಾದರೂ ಎಂತಾದ್ದು ? ಸಮಯೋಚಿತವಾದ ನೀತಿಸಾರವೇ ಆದ ಅದು ಹರಿದುದು ಹೀಗೆ,

"ನ ದಾನ ತುಲ್ಯಂ ಧನ ಮನ್ಯದಸ್ತಿ ।"

— ೦ —

೨೫

ಎಲೆಕ್ಷನ್ ಪ್ರಚಾರಗಳ ಭರಾಟೆಯೇ ಭರಾಟೆ.

ಪಾರ್ಟಿ ಪಾರ್ಟಿಗಳು ತಮ್ಮ ತಮ್ಮ ಮನೋಗತಿಯ ದಿವ್ಯ ಪ್ರಣಾಳಿಕೆಯನ್ನು ಪ್ರಚಾರ ಮಾಡುತ್ತಿವೆ ಮೈಕ್ ಮುಖೇನ. ಗಲಾಟೆ–ಗದ್ದಲಗಳ ಹಾವಳಿ. ವಾಹನಗಳ ತೀವ್ರ ಓಡಾಟ. ಒಟ್ಟಿನಲ್ಲಿ ಬಲೂ ಶಬ್ದಾಯಮಾನ, ಕಿವಿಕಿಡಿಸುವಂತೆ.

ಆದಿ–ಅಂತ್ಯವಿಲ್ಲದ ಪ್ರಚಾರದ ಮಧ್ಯೆ ಸೋಮುವಿನ ಪ್ರಚಾರ ಕೀರಲು ದನಿಯಂತೆ ನಡೆಯುತ್ತ ಕೊನೆಗೆ ಹಿಡಿದುದು ಸೋಲಿನ ಹಾದಿ. ಠೇವಣಿ ನಷ್ಟವಾಗಿ ನಗೆಗೇಡಿಯಾದರೂ ಸೋಮು ಕುಗ್ಗಲಿಲ್ಲ. ಪುನಃ ತನ್ನ ವ್ಯಾಪಾರಕ್ಕೆ ಹಿಂದಿರುಗಿದ. ಆದರೂ, ಎಲೆಕ್ಷನ್ ಗೀಳು ಹಿಂಗಲಿಲ್ಲ ಅವನಿಗೆ. ಮತ್ತೆ ಮುಂದಿನ ಎಲೆಕ್ಷನ್ ಕಡೆ ಮನದಾಸೆಯನ್ನು ಹರಿಯ ಬಿಟ್ಟಿದ್ದ. ಒಬ್ಬ ಸದಸ್ಯ ಗತಿಸಿ ಸೀಟು ಖಾಲಿಯಾಗುವಂತಿದ್ದರೆ ಅದೂ ಸರಿಯೇ, ಎಂಬ ಯೋಚನೆಯೂ ಬರುತ್ತದೆ. ತನ್ನ ಅದೃಷ್ಟ ದೇವತೆಯನ್ನು ನೆನೆಯುತ್ತ ಜ್ಯೋತಿಷಿಗಳ ಕಡೆಗೂ ಕೈಚಾಚುತ್ತಾನೆ.

ಒಮ್ಮೆ ಕೃಷ್ಣ ಮನಃಕ್ಲೇಶ–ಸಿಟ್ಟು–ಅಸಮಾಧಾನಗಳಿಂದ ನುಡಿದ,

"ನಿನ್ನ ಹುಚ್ಚು ಅರ್ಥವಿಲ್ಲದ್ದು. ಎರಡು ಬಾರಿ ಪ್ರಯತ್ನಿಸಿ ಅನುಭವವಾಗಿದೆ. ಇನ್ನು ಪ್ರಯತ್ನಿಸುವುದೆಂದರೆ ನಾಚಿಗೇಡು! ನಿನ್ನ ವ್ಯಾಪಾರವನ್ನು ನೋಡಿಕೊಂಡು ಮರ್ಯಾದೆಯಿಂದಿರು. ಅದೇ ಸಾಕು. ವ್ಯಕ್ತಿ ಬಲವೇ ರಾಷ್ಟ್ರಬಲ. ಪ್ರಜೆಗಳು ಹೇಗಿರುತ್ತಾರೋ ಹಾಗೆ ರಾಷ್ಟ್ರವಿರುತ್ತೆ...."

"ಅದನ್ನು ನಾನೂ ಬಲ್ಲೆ. ಒಂದು ಬಾರಿಗೆ ಯಾರೂ ಅಂಬರಕ್ಕೇರುವುದಿಲ್ಲ ಬಿಡು. ಮರಳಿ ಮರಳಿ ಪ್ರಯತ್ನಮಾಡಿ ಹಂತ ಹಂತವಾಗಿಯೇ

ಮೇಲೇರಬೇಕು. ಇನ್ನೂ ಒಂದಲ್ಲ, ಹತ್ತು ಸಲಿಯಾದರೂ ಪ್ರಯತ್ನಿಸುವೆ. ನೀನದಕ್ಕೆ ಅಡ್ಡಿಪಡಿಸಲೇಬೇಡ. ನಾನು ಎಂದಾದರೂ, ಒಂದಲ್ಲ ಒಂದು ದಿನ ಉಮೇದುವಾರಿಕೆ ಪಡೆದೇ ಪಡೆಯುವೆ. ನನಗೆ ಆ ಧೈರ್ಯವಿದ್ದೇ ಇದೆ. ಹೊಳೆಯ ನೀರು ಹರಿಯುತ್ತಿರುವಂತೆ ಎದೆಯ ಹಂಬಲ ಹರಿಯುತ್ತಿರ ಬೇಕು ; ಮುಂದೆ ಮುಂದೆ."

"ಸರಿ ನಿನ್ನೊಡನೆ ಮಾತು ವ್ಯರ್ಥ. ನಿನ್ನಿಂದ ನಮ್ಮ ಮಾನವೂ ಉಳಿಯುವುದಿಲ್ಲ. ಅದೇ ವ್ಯಸನ–ನಾಚಿಗೆ ಗೇಡು. ಎಲ್ಲರೂ ನಮ್ಮನ್ನು ನೋಡಿ ನಕ್ಕು ಹೀಯಾಳಿಸುತ್ತಾರೆ...ಅಷ್ಟೆ.."

"ನೀನು ಹೇಗೆ ತಿಳಿದುಕೊಂಡರೆ ಹಾಗೆ. ನಾನೇನೂ ಶಂಡನಲ್ಲ. ಯಾವ ರೀತಿ ಜಯಶೀಲನಾಗಬೇಕು ಎಂಬುದು ನನಗೆ ಗೊತ್ತು. ಆದ್ದರಿಂದ...."

ತಮ್ಮನ ಮೊಂಡುತನಕ್ಕೆ ಹೇಸಿದ ಕೃಷ್ಣ ದಡದಡನೆ ಹೊರಟು ಹೋದ. ಹೃದಯ ಬೆಂದು ಬೆಂಗಾಡಾಗಿತ್ತು. ಮನೆಯ ಬಾಗಿಲಲ್ಲೇ ಎದುರಾದ ಮಡದಿ ಸವಿತ ನುಡಿದಳು "ನಿಮಗೊತ್ತೇನು ? ಸೋಮು ರತನ್ ಮಿಶ್ರನಿಂದ ಹಣ ಪಡೆದುಕೊಂಡು ಮಾಡಿಕೊಡಿದ್ದ ಒಪ್ಪಂದಕ್ಕೆ ಪ್ರತಿಯಾಗಿ ಅವನು ಇವನ ಅಂಗಡಿಯ ಸಾಮಾನನ್ನು ದೋಚುವ ಯೋಚನೆ ಮಾಡಿದ್ದಾನಂತೆ ! ಸೋಮು ಕೆಟ್ಟ !"

"ಹೌದೇ....?" ಆಶ್ಚರ್ಯದಿಂದ ಕೇಳಿದ ಕೃಷ್ಣ.

"ಇವನು ಗೆದ್ದೇ ಗೆಲ್ಲುತಾನೆ ಎಂಬ ನಂಬಿಗೆಯಿಂದ ಅವನು ಹಣ ಖರ್ಚು ಮಾಡಿದ್ದ. ಈಗ ತನ್ನ ಹಣದ ಸಲುವಾಗಿ ಅಂಗಡಿಯನ್ನು ದೋಚುವು ದೊಂದೇ ದಾರಿ !"

"ನಿನಗೆ ಹೇಗೆ ಗೊತ್ತು ?"

"ನನ್ನ ತಮ್ಮ ಸುರೇಶ ಬಂದಿದ್ದ. ಅವನೇ ಹೇಳಿದ್ದು. ಸೋಮು ವಿಗೆ ಎಚ್ಚರ ವಹಿಸಲು ಹೇಳಿ. ಅವನು ಅಂಗಡಿಯನ್ನು ದೋಚಲು ನ್ಯಾಯಾ ಲಯದ ಪರವಾನಗಿಗಾಗಿ ಪ್ರಯತ್ನಿಸುತಿದ್ದಾನಂತೆ !" ಒಂದು ಗಳಿಗೆ ತಡೆದು

ಅವಳು ಪುನಃ ಮುಂದುವರಿದಳು "ಸೋಮು ಅವನಲ್ಲಿಗೆ ಹೋಗಿ ಆಗಾಗ ಅಷ್ಟಿಷ್ಟು ಕೊಡುತ್ತೇನೆಂದು ಒಪ್ಪಂದ ಮಾಡಿಕೊಂಡರೆ ಸರಿ. ಇಲ್ಲದಿದ್ದರೆ ಕಷ್ಟವೇ...."

"ಅವನು ಸ್ವಲ್ಪವೂ ಮಾತು ಕೇಳುವವನಲ್ಲ. ಒಮ್ಮೆ ಪಾಠ ಕಲಿಯಲಿ ಸುಮ್ಮನಿರು."

"ಹಾಗೆಂದರೆ ಮುಂದೆ ಜೀವನ."

"ಕೂಲಿ ಮಾಡಿ ತಿನ್ನಲಿ." ಸಿಟ್ಟಿನಿಂದ ನುಡಿದ ಕೃಷ್ಣ.

"ಹಾಗೆಂದರಾದೀತೇ ? ನೀವೊಮ್ಮೆ ಹೇಳಿನೋಡಿ. ಸುರೇಶನನ್ನು ಸೋಮು ಬಳಿಗೆ ನಾನೇ ಕಳಿಸಿರುವೆ. ಅವನು ಹೇಳಿಯೇ ಹೇಳುತ್ತಾನೆ."

"ಸರಿ. ಅವನು ತಿಳಿಸುತ್ತಾನಷ್ಟೆ, ಅದೇ ಸಾಕು."

ಸವಿತ ಚಿಂತಿತಳಾದಳು.

o o o o

ನಗರದ ಸಾಮಾನ್ಯ ಬೀದಿಯಲ್ಲಿ ನಂದಗೋಪಿ ಹೋಟೆಲ್.

ಸಾಮಾನ್ಯವಾಗಿ ಅದೊಂದು ದೊಡ್ಡ ವಾರ್ತಾ ಕೇಂದ್ರ. ತಮಾಷೆಯಾದ ವಿಷಯಗಳೊಂದಿಗೆ ತೀರ ಗಂಭೀರ–ಗಹನ ವಿಚಾರವಿಶೇಷಗಳೂ ಅಲ್ಲಿ ವಿನಿಮಯವಾಗುತ್ತವೆ. ಅಲ್ಲಿ ಹಿಂದುಗಳು, ಕನ್ನಡಿಗರು, ಮುಸ್ಲಿಮರು, ತಮಿಳರು, ಚಿತ್ರಗಾಂ ಸಾಹೇಬರು, ಸಿಂಧಿ, ಪಾರಸಿ, ಒರಿಯಾಗಳು ಸೇರುತ್ತಾರೆ. ಚಹ–ಕಾಫಿಗಳ ಸೇವನೆಯ ಮಧ್ಯೆ ದೇಶದ ಆಗು–ಹೋಗುಗಳನ್ನು ಕುರಿತು ಚರ್ಚಿಸುತ್ತಾರೆ. ವಿಷಯಗಳು ಒಬ್ಬರಿಂದೊಬ್ಬರಿಗೆ ತಿಳಿದು ಜನಜನಿತವಾಗುತ್ತವೆ. ಅಲ್ಲಿ ಮಾತಾಡಿದ ವಿಷಯವೇ ಸುರೇಶನ ಕಿವಿಗೆ ಬಿದ್ದು ಅಕ್ಕನ ಮನೆಗೆ ಓಡಿ ಬಂದಿದ್ದ.

ರತನ್ ಮಿಶ್ರ ಕಳ್ಳವ್ಯಾಪಾರದಲ್ಲಿ ಅಪಾರ ಹಣ ಗಳಿಸಿದಾತ. ಆ ಹಣವನ್ನು ದ್ವಿಗುಣಗೊಳಿಸುವ ಯೋಚನೆಯಿಂದ ಸೋಮುವಿನ ಬೆನ್ನು ತಟ್ಟಿ

ಅಟ್ಟಕ್ಕೇರಿಸಿ ಸಾಕಷ್ಟು ಹಣ ಖರ್ಚು ಮಾಡಿದ್ದು ದಿಟ. ಫಲಿತಾಂಶ ವ್ಯತಿರಿಕ್ತವಾದಾಗ ಆತ ಯೋಚಿಸಿದ ರೀತಿ ಅದು.

ಸೋಮು ವಿಷಯ ತಿಳಿದು ಭಯ ಭೀತನಾದ. ಅಂದೇ ರತನ್ ಮಿಶ್ರನನ್ನು ನೋಡಲು ಅವನ ಅಂಗಡಿಗೆ ಹೋದ. ರತನ್ ಮಿಶ್ರ ತಲೆ ಬಾಗಿಲಿನಲ್ಲಿಯೇ ಎದುರಾದ.

"ನಮಸ್ಕಾರ, ರತನ್ ಜೀ ?"

"ನಮಸ್ಕಾರ...ನಿನ್ನ ನಂಬಿ ನಾನು ಕೆಟ್ಟೆ !"

"ಹಾಗೆನ್ನ ಬೇಡಿ. ನಿಮ್ಮ ಹಣವನ್ನು ಸ್ವಲ್ಪ ಸ್ವಲ್ಪವಾಗಿ ತೀರಿಸಿ ಬಿಡುವೆ. ನೀವು ಕಳಕಳಿ ಹೊಂದುವುದು ಬೇಡವೇ ಬೇಡ. ನನ್ನನ್ನು ಸಂಪೂರ್ಣ ನಂಬಿ. ನಾನೆಂದೂ ನಿಮ್ಮ ಹಣಕ್ಕೆ ಮೋಸ ಮಾಡುವವನಲ್ಲ...."

"ನೀನು ಯಾವಾಗ ತೀರಿಸುವುದು ? ನನಗೆ ಹಣದ ಅಗತ್ಯ ತುಂಬಾ ಇದೆ."

"ಹಣದ ರಾಶಿಯ ಮೇಲೆ ಕುಳಿತಿರುವವರು ನೀವು. ಸ್ವಾಮೀ, ನೀವೇ ಹೀಗೆಂದರೆ ಹೇಗೆ ? ಸ್ವಲ್ಪವೇ ತಾಳ್ಮೆ ವಹಿಸಿದರೆ ಸಾಕು. ಅನಂತರ ನಿಮ್ಮ ಹಣವನ್ನು ಧಣಧಣ ಎಣಿಸಿಬಿಡುವೆ !"

"ಹೇಗೆ...?"

"ವ್ಯಾಪಾರವಿದೆಯಲ್ಲಾ. ಅದರಲ್ಲೇ ಅನುಸರಿಸಿ ಕೊಡುವೆ."

"ನೀನು ಕ್ರಮವತ್ತಾಗಿ ತೀರಿಸಿದರೆ ಸರಿ. ಇಲ್ಲದಿದ್ದರೆ ಮನೆಯಿಂದ ಹೊರಹಾಕುವೆ."

"ಇಲ್ಲ ಸ್ವಾಮಿ ಎಲ್ಲವನ್ನೂ ವರ್ಷದೊಳಗಾಗಿ ತೀರಿಸಿ ಬಿಡುವೆ !"

"ಖಂಡಿತ...?"

"ಹೌದು, ಸ್ವಾಮಿ ! ನನ್ನನ್ನು ನಂಬಿ." ಕೈ ಮುಗಿದ

ಅವನು ಹಾಗೆಂದರೂ ಎದೆಯಾಳದಲ್ಲಿ ತಳಮಳ ಇದ್ದೇ ಇತ್ತು. ಹೇಗೆ ತೀರಿಸುವುದು ? ಕೊಳ್ಳೆ ಹೊಡೆಯುವಂತಹ ಉದ್ಯೋಗವಿಲ್ಲದೆ ತೀರಿಸುವುದು

ಕಷ್ಟ. ತನ್ನಲ್ಲೇ ಯೋಚಿಸಿದ. ಕೆರೆ–ಕಟ್ಟೆ ಮಾಡಿಸುತ್ತೇನೆಂದು ಜನರನ್ನು ನಂಬಿಸಿ ಅವರಿಂದ ಹಣ ದೋಚಿದಲ್ಲದೆ ಸಾಧ್ಯವೇ ಇಲ್ಲ. ಅಂತೂ, ಒಂದು ಹೊಸದಾರಿ ಹುಡುಕಿಕೊಳ್ಳಬೇಕು...ಎಂದು ತನ್ನಲ್ಲೇ ನಿರ್ಣಯಿಸಿಕೊಂಡು ಅಲ್ಲಿಂದ ಹಿಂದುರುಗಿದ ಸೋಮು. ತಲೆಯಲ್ಲಿ ನೂರು ಆನೆಗಳು ಹೊಕ್ಕಿದಷ್ಟು ಗೊಂದಲವಾಯಿತು.

○ ○ ○ ○

ಶಾಲಿನಿ ಬಂದಾಗ ನೆತ್ತಿಯ ಮೇಲೆ ರಣರಣಿಸುವ ಸುಡು ಬಿಸಿಲು.

ಸ್ವೇದ ಬಿಂದುಗಳದ್ದು ಒರಿಸಿಕೊಳ್ಳುತ್ತಲೇ ಒಳಬಂದಳು ಅವಳು. ಹಿಂದೆ ಒಮ್ಮೆ ಮಾತ್ರ ಬಂದಿದ್ದಳು. ಕುಮುದ್ವತಿಯ ಪರಿಚಯವಾದ ಬಳಿಕ ತನ್ನ ಸಮಸ್ಯೆಗೊಂದು ಪರಿಹಾರ ದೊರಕಿಸಿಕೊಳ್ಳಬಹುದೆಂಬ ಉದ್ದೇಶ ಹೊಂದಿದ್ದ ಅವಳಿಗೆ ಮೈಯೆಲ್ಲಾ ಮನಸ್ಸು. ಒಳಬಂದ ಅವಳನ್ನು ಸ್ವಾಗತಿಸಿ ನೀರು ಮನೆಗೆ ಕರೆದೊಯ್ದಳು ಕುಮುದ್ವತಿ.

"ವಿಪರೀತ ಶೆಕೆ. ಬೆವರು ಒರಿಸಿಕೊಂಡಷ್ಟೂ ತೊಯ್ಯುತ್ತದೆ ಮುಖ ಮೈ."

ಅವಳು ತಣ್ಣೀರಿನಲ್ಲಿ ಮುಖ ಮಜ್ಜನ ಮಾಡಿದ ಬಳಿಕ ಹೊರಬಂದು,

"ಈಗ ಸ್ವಲ್ಪ ತಣಗಾಯ್ತು ಜೀವಕ್ಕೆ," ಎಂದಳು ಮುಖ ಒರಿಸಿ ಕೊಳ್ಳುತ್ತ.

"ಏಪ್ರಿಲ್ ಬಿಸಿಲು ಅಂದರೆ ಹೇಳಬೇಕೇ ? ಬನ್ನಿ ಆಫೀಸಿನಲ್ಲಿ ಕುಳಿತು ಕೊಳ್ಳೋಣ"

ಎಂದ ಬಳಿಕ "ಅಮ್ಮಾ..." ಎಂದು ಕರೆದಳು ಕುಮುದ್ವತಿ.

ಆ ಕರೆಗೆ ಓಗೊಟ್ಟ ಸೀತಮ್ಮ ಹೊರಬಂದು ಆಗುಂತಕಿಯನ್ನು ನೋಡಿದಳು. ಗುರುತು ಹತ್ತಲಿಲ್ಲ. ಸುಮ್ಮನೆ ಮಿಕಿಮಿಕಿ ನೋಡಿ "ಪರಿಚಯ ಆಗಲಿಲ್ಲ ;" ಎಂದಳು, ಅವಳು.

"ಇವರು ಹಿಂದೊಮ್ಮೆ ಮಾತ್ರ ಬಂದಿದ್ದರು ಅಮ್ಮಾ. ಶಾಲಿನಿಯೆಂದು ಹೆಸರು. ಆಫೀಸಿನಲ್ಲಿ ಕೆಲಸ ಮಾಡುತ್ತಾರೆ, ಟೈಪಿಸ್ಟಾಗಿ." ಪರಿಚಯಿಸಿ ದಳು, ಕುಮುದ್ವತಿ.

ಮೂವರೂ ಕುಳಿತು ಉಭಯ ಕುಶಲೋಪರಿ ನಡೆಸಿದ ನಂತರ ಅವಳು ತನ್ನ ಗೋಳನ್ನು ತೋಡಿಕೊಂಡಳು "ನಾನು ಟೈಪಿಸ್ಟಾಗಿ ಕೆಲಸ ಮಾಡುತ್ತ ಮೂರು ವರ್ಷಗಳು ಕಳೆದುವು. ಅದರಿಂದ ತಿಂಗಳಿಗೆ ಸಾವಿರದೈನೂರು ರೂಪಾಯಿಗಳು ಬರುತ್ತವೆ ನನಗೆ. ಆದರೆ, ಅಷ್ಟು ಹಣವನ್ನು ನನ್ನ ಪತಿ ರಮೇಶನ ಕೈಗೆ ಕೊಡಬೇಕು. ಅದರಲ್ಲಿ ಚಿಕ್ಕಾಸೂ ನನಗೆ ದಕ್ಕುತ್ತಿಲ್ಲ. ಕೆಲಸ ಮಾಡಿಯೂ ಹಣ ದೊರೆಯದಿದ್ದ ಮೇಲೆ ನಾನೇಕೆ ಕೆಲಸ ಮಾಡಬೇಕು ಎನಿ ಸುತ್ತೆ ನನಗೆ. ಒಳ ಹೊರಗೆ ದುಡಿದು ಕಾಸಿಗಾಗಿ ಬೇಡುವುದೆಂದರೆ ಹೇಗೆ ಹೇಳಿ ? ನಾನು ಕೆಲಸ ಬಿಡುವೆ ಎಂದರೆ ರಮೇಶ ಒಪ್ಪುವುದೇ ಇಲ್ಲ. ಕೆಲಸ ಮಾಡದಿದ್ದರೆ ವರದಕ್ಷಿಣೆ ಐವತ್ತು ಸಾವಿರ ತೆಗೆದುಕೊಂಡು ಬಾ, ಎನ್ನು ತ್ತಾರೆ. ಇದು ಉಭಯ ಸಂಕಟ. ಪ್ರಾಣಹಿಂಸೆ ಎಂದರೂ ತಪ್ಪಲ್ಲ!"

ಮುಖಬಿಂಬ ಕಳಾಹೀನವಾಗಿ ಸ್ವಲ್ಪಹೊತ್ತು ಸುಮ್ಮನೆ ಕುಳಿತು ಕೊಂಡಳು. ಹಣೆ ಮುಖದ ಮೇಲೆ ಸ್ವೇದ ಬಿಂದುಗಳು ತುಂತುರು ತುಂತು ರಾಗಿ ಮೂಡಿದುವು. ಸ್ವಲ್ಪ ಹೊತ್ತು ಗಂಭೀರ ಗತಿಯಲ್ಲಿ ಉರುಳಿ ಹೋಯಿತು. ಶಾಲಿನಿ ತನ್ನನ್ನು ತಾನು ನಿಗ್ರಹಿಸಿಕೊಳ್ಳುತ್ತ ನುಡಿದಳು,

"ಸಂಸಾರಿಕ ಗುಟ್ಟು ರಟ್ಟಾಗಬಾರದು ಎಂಬುದು ಗೊತ್ತು. ಆದರೆ, ಅವರು ನನ್ನ ಖರ್ಚಿಗೆ ಆಗುವಷ್ಟು ಹಣಕೊಟ್ಟು ಉಳಿದುದನ್ನು ಬಳಸಿ ಕೊಂಡಿದ್ದಿದ್ದರೆ ನಾನು ಇಷ್ಟು ದೂರ ಬರುತ್ತಿರಲಿಲ್ಲ. ವಿಪರೀತ ಜುಗ್ಗತನ. ಮನೆ ಖರ್ಚಿಗೂ ಸಾಕಷ್ಟು ಹಣ ಕೊಡುತ್ತಿಲ್ಲ. ಕಾಸುಕಾಸಿಗೂ ಬೇಡುತ್ತ ಬಡಿತ–ಬೈಗುಳಕ್ಕೆ ಒಳಗಾಗುವುದೆಂದರೆ ಕಷ್ಟ–ಬೇಸರ–ಹಿಂಸೆ. ಇನ್ನೂ ಏನೇನೋ ರಂಪಾಟ ಹೇಳಲಾರೆ. ನನ್ನ ಜೀವನ ಗೋಳಿನ ಕಣವಾಗಿದೆ."

"ಇದಕ್ಕೇನು ಪರಿಹಾರ ?"

ಅದು ಎಲ್ಲರ ಮುಂದಿನ ಪ್ರಶ್ನೆ.

"ಅವನಿಗೆ ಬುದ್ಧಿವಾದ ಹೇಳುವುದರ ಹೊರತು ಬೇರೆ ದಾರಿಯೇ ಇಲ್ಲ."

"ಪತ್ರಿಕೆಗೆ ಸುದ್ದಿ ಬಿಟ್ಟರೆ ರೇಗಿಕೊಳ್ಳಬಹುದು. ಆದ್ದರಿಂದ, ಹಿತವಾದ ಹೇಳುವುದು ಸೂಕ್ತ."

"ನಾವು ಸಂಘ ಸದಸ್ಯಣಿಯರೆಲ್ಲಾ ಸಹಿ ಹಾಕಿ ಇದು ಸರಿಯಲ್ಲವೆಂದು ಒಂದು ನೋಟೀಸು ಕೊಡೋಣ. ಅದರ ಪರಿಣಾಮವನ್ನು ಕಾದು ನೋಡಬಹುದು. ನಾವು ಶೈಲು ಪ್ರಕರಣದಲ್ಲೂ ಇದೇ ಕ್ರಮ ಕೈಕೊಂಡು ಯಶಸ್ಸು ಪಡೆದುದು ಸತ್ಯ. ಅದರಿಂದ ಪರಸ್ಪರ ಮಾತಾಡಿ ಘರ್ಷಣೆಗಿಳಿಯುವುದು ತಪ್ಪುತ್ತೆ. ಮನುಷ್ಯ ಮರ್ಯಾದಸ್ಥನಾದರೆ ಕಾಗದಕ್ಕೆ ಮನ್ನಣೆ ಕೊಟ್ಟೇ ಕೊಡುತ್ತಾನೆ."

"ಅದೇ ಒಳ್ಳೆಯದು ಮುಖಾಮುಖಿಯಾಗಿ ಹೋದರೆ ಘರ್ಷಣೆಯಾಗಬಹುದು. ಅದಕ್ಕಿಂತ ಇದೇ ಪರಮ ಲೇಸು" ಎಂದ ಶಾಲಿನಿಯ ಮಾತನ್ನು ಸಮರ್ಥಿಸಿದಳು ಸೀತಮ್ಮ.

"ಆಗಲಿ, ಹಾಗೇ ಮಾಡೋಣ. ಮುಂದಿನ ಗುರುವಾರ ಇಲ್ಲಿಯೇ ಎಲ್ಲರೂ ಸಭೆ ಸೇರುತ್ತಾರೆ. ಪತ್ರಕ್ಕೆ ಎಲ್ಲರೂ ಸಹಿ ಹಾಕಿದರೆ ಆಯಿತು. ತತ್ಪರಿಣಾಮವಾಗಿ ಅವರು ನಿನಗೆ ತೊಂದರೆ ಕೊಡದಿದ್ದರೆ ಒಳ್ಳೆತು. ತೊಂದರೆ ಶುರುಮಾಡಿದರೆ ಕಷ್ಟ."

"ಹಾಗೇನಾದರೂ ಆದರೆ ಕೆಲಸ ಬಿಡುವೆ ಎಂದು ಹೇಳಿ ಮನೆಯಲ್ಲೇ ಉಳಿಯುವೆ."

"ಅದು ಸರಿ. ಧೈರ್ಯದಿಂದ ಎದುರಿಸು. ನಿನಗೆ ಶುಭ ಹಾರೈಸುವೆ."

"ನೀನು ದೇವರ ದಯದಿಂದ ಪಾರಾಗುವೆ ಎನಿಸುತ್ತೆ ನನಗೆ." ಮುಗುಳು ನಗೆ ಸೂಚಿಸಿ ನುಡಿದಳು ಸೀತಮ್ಮ. ಸ್ವಲ್ಪ ಹೊತ್ತು ತಡೆದು ಪುನಃ ಮುಂದುವರಿದಳು "ವರ್ತಮಾನ ಯುಗದಲ್ಲಿ ಮನುಷ್ಯರಾಗಿ ಹುಟ್ಟಿ ಅವಾಸ್ತವಿಕತೆ

ಯೊಡನೆ ಸಂಧಿಮಾಡಿಕೊಂಡು ಜೀವನ ಮೌಲ್ಯವನ್ನು ನಷ್ಟಗೊಳಿಸುತ್ತ ನರಳುವುದನ್ನು ನೋಡಿದರೆ ಸಂಕಟವಾಗುತ್ತೆ. ಜೀವನದಲ್ಲಿ ಸುಖ–ಶಾಂತಿ–ಸಂತೋಷಗಳನ್ನು ಸಂಪೂರ್ಣ ಪಡೆಯಬೇಕೆಂದರೆ ಪ್ರೀತಿ–ಸಾಮರಸ್ಯಗಳು ಉಕ್ಕುತ್ತಿರಬೇಕು ಸಂಸಾರದಲ್ಲಿ. ದಂಪತಿಗಳು ಪರಸ್ಪರ ಒಮ್ಮನ–ಒಮ್ಮತಗಳಿಂದ ಕಾರ್ಯ ನಿರ್ವಹಿಸುವಂತಿದ್ದರೆ ಮಾತ್ರ ಶಾಂತಿ–ಸಮಾಧಾನ."

"ಖಂಡಿತ ಅಮ್ಮಾ!"

"ಹಿಂದೂಸ್ಥಾನದಲ್ಲಿ ಸಂಜೀವನ ಸಾಮರಸ್ಯವನ್ನು ಹುಡುಕುತ್ತಾ ಹೋದರೆ ಅರ್ಧಕ್ಕರ್ಧ ಸಂಸಾರಗಳಲ್ಲಿ ದೊರೆಯುವುದು ಕಷ್ಟ. ತುಂಬಾ ಸ್ವಾರ್ಥಿಗಳು ನಮ್ಮ ಜನ."

"ನಿಜವಾಗಿಯೂ..."

"ಹೋಗಿ ಬಾಮ್ಮಾ, ನಮ್ಮ ನೋಟೀಸಿನಿಂದಾಗುವ ಪರಿಣಾಮವನ್ನು ಬಂದು ಹೇಳು."

"ವಂದನೆಗಳು."

○ ○ ○ ○

ನಿರ್ಮಾನುಷವಾದ ಅರಣ್ಯ ಪ್ರದೇಶ. ಸದ್ದು ಗದ್ದಲಗಳಿಲ್ಲದ ಶಾಂತಿ ಸಮುದಾಯ.

ಮುಸ್ಸಂಜೆಯಲ್ಲಿ ಸುಸುಂದರವಾದ ಸೊಂಪಿನ ಪೆಂಪು ಆವರಿಸಿತ್ತು ಇಡೀ ಧಾರಿಣಿಯನ್ನು.

ವನಾಂತರದ ಏರು ತಗ್ಗಾದ ಮಣ್ಣಿನ ರಸ್ತೆಯಲ್ಲಿ ಎತ್ತಿನ ಗಾಡಿಯನ್ನು ಸ್ವತಃ ಹೊಡೆದುಕೊಂಡು ಹೋಗುತಿದ್ದ ಸೋಮು ಮನೆಯ ಕಡೆಗೆ. ಚಂಚಲಿತ ದೃಷ್ಟಿಯಲ್ಲಿ ಭಯಭೀತಿಯಛಾಯೆ. ಒಡಲಾಳದ ಕಸಿವಿಸಿ–ತಳಮಳ ಮುಖಮುದ್ರೆಯಲ್ಲಿ. ಬಾಯಿ ಬಿಟ್ಟು ಎತ್ತುಗಳಿಗೆ ಗದರಿಸಲಾರದೆ ಚಾಟಿಯಿಂದ ತಿವಿದು ತಿವಿದು ತೀವ್ರಗೊಳಿಸುತಿದ್ದ ಅವುಗಳ ಓಟವನ್ನು. ಒಮ್ಮೆ ಮನೆ ಮುಟ್ಟಿದರೆ ಸಾಕು ಎಂಬ ಆತುರ–ಕಾತರ ಮನದಲ್ಲಿ. ಅಂತೂ,

ಹಾದಿ ಕಳೆದು ಮನೆ ಮುಟ್ಟಿತು ಗಾಡಿ. ಎತ್ತುಗಳ ಕೊರಳ ಪಟ್ಟಿಯನ್ನು ಕಳಚಿ ನೊಗ ಇಳಿಸಿದ. ಯಾರೂ ನೋಡಿರಲಾರರು ಎಂಬ ದೃಢವಾದ ನಂಬಿಗೆ ಮನದಲ್ಲಿ. ಬೇಗ ಬೇಗನೆ ಮೂಟೆಗಳನ್ನು ತಾನೇ ಗಾಡಿಯಿಂದ ಇಳಿಸಿ ಒಳ ಕೋಣೆಯಲ್ಲಿ ಒಟ್ಟಿದ. ಭಾರವಾದ ಅವನ್ನು ಇತರರ ಸಹಾಯ ವಿಲ್ಲದೆ ಒಳ ಸೇರಿಸಿಕೊಳ್ಳಬೇಕಾದರೆ ಸಾಕುಬೇಕಾಯಿತು. ಅದೊಂದು ಸಾಹಸ ಕಾರ್ಯವೇ ಎನಿಸುವಷ್ಟು ಭಂಗದಿಂದಲೇ ನಿರ್ವಹಿಸಿದ. ಇತರರ ಸಹಾಯವೆಂದರೆ ಸುದ್ದಿ ಬಯಲಾಗುವ ಭಯಭೀತಿ. ಆದ್ದರಿಂದ ಬಹಳಷ್ಟು ಎಚ್ಚರ ವಹಿಸಿದ್ದ. ಒಳಕೋಣೆಯಲ್ಲಿ ಇತರ ಸಾಮಗ್ರಿಗಳ ಮಧ್ಯೆ ಮೂಟೆ ಗಳನ್ನು ಸೇರಿಸಿ ಅದರ ಮೇಲೆ ಸಾಮಗ್ರಿಗಳ ಮೂಟೆಗಳನ್ನು ಜೋಡಿಸಿ ಕಣ್ಮರೆ ಮಾಡುವ ಕೆಲಸ ಬಹಳೇ ಹೊತ್ತು ತೆಗೆದುಕೊಂಡಿತು. ಕೆಲಸ ಮುಗಿದು ಕದ ಮುಚ್ಚಿದ ಮೇಲೆ ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುವಷ್ಟು ಹಗುರವಾಯ್ತು ಜೀವ. ಸೋಮುವಿಗೆ ಈ ಕಳ್ಳವ್ಯಾಪಾರ ಇದೇ ಮೊದಲಲ್ಲ. ಅದೃಷ್ಟವಶಾತ್ ಯಾವತ್ತೂ ಸಿಕ್ಕಿಬಿದ್ದಿರಲಿಲ್ಲ. ಅತ್ಯಂತ ಚಾಣಾಕ್ಷತೆಯಿಂದ ನಡೆಯುತಿತ್ತು ಕಾರ್ಯ ನಿರ್ವಹಣೆ. ಒಮ್ಮೆ ಕಳ್ಳಮಾಲನ್ನು ಅಂಗಡಿಯಲ್ಲಿ ಸೇರಿಸಿಕೊಂಡ ನೆಂದರೆ ಸುದ್ದಿ ಬಯಲಾಗುವ ಸಂಭವ ತೀರಾಕಡಿಮೆಯಾದ್ದರಿಂದ ಧೈರ್ಯವೇ ಧೈರ್ಯ.

ಮಾರವಾಡಿಯ ಸಾಲದ ಶೂಲಕ್ಕೆ ಸುಲಭದ ಪರಿಹಾರ ಮಾರ್ಗ.

ಅಡಿಕೆ ಮಾರಾಟದ ಸಹಕಾರ ಸಂಘದ ಕಟ್ಟಡದಲ್ಲಿ ಅಡಿಕೆ ಮೂಟೆಗಳು ಬಹಳವಾಗಿದ್ದುದರಿಂದ ಅದರಲ್ಲಿ ಕಳುವಾದ ಮೂಟೆಗಳು ತಕ್ಷಣ ಗಮನಕ್ಕೆ ಬಾರದಷ್ಟು ವ್ಯಾಪಾರದ ಗಜಿಬಿಜಿ. ಸಹಕಾರ ಸಂಘದಲ್ಲಿ ಅಡಿಕೆಯನ್ನು ಖರೀದಿಸಿ ಒಂದಕ್ಕೆರಡರಷ್ಟು ಹೊಡೆದುಕೊಳ್ಳುವ ಚಾಣಾಕ್ಷತೆಯನ್ನು ಬಹಳ ಹಿಂದಿನಿಂದಲೂ ಬಲ್ಲ ಸೋಮು. ಇಂಥ ವ್ಯಾಪಾರ ಹಿಂದೆ ಅದೆಷ್ಟು ಬಾರಿ ನಡೆದಿತ್ತೊ....ಒಮ್ಮೆಯೂ ಸಿಕ್ಕಿ ಬೀಳಲಿಲ್ಲ. ರತನ್ ಮಿಶ್ರನ ಋಣ ಭಾರಕ್ಕೆ ಸೊಗಸಾದ ಮದ್ದು ಕಳ್ಳವ್ಯಾಪಾರ. ಒಂದಿಬ್ಬರು ಗುಮಾಸ್ತರುಗಳ ಕೈ ಬೆಚ್ಚಗೆ ಮಾಡಿಕೊಳ್ಳುವುದು ವಾಡಿಕೆ. ಅಂದಿಂದಿಗೂ ನಡೆದುದೇ ಇದು. ಮುಂದೆ ತನ್ನ ಅಂಗಡಿಯಲ್ಲಿ ವ್ಯಾಪಾರ.

"ಇಷ್ಟೆಲ್ಲಾ ಕೊಂಡು ತಂದಿರಾ ?" ಮಡದಿಯ ಪ್ರಶ್ನೆ.

"ಕೊಳ್ಳದೆ ಹೇಗೆ ಬರುತ್ತೆ ?"

"ನೀವು ಎಲೆಕ್ಷನ್ನಿಗೆ ಇಳಿಯದೆ ಬರಿಯ ವ್ಯಾಪಾರ ಮಾತ್ರ ನೋಡಿ ಕೊಂಡಿದ್ದಿದ್ದರೆ ಎಷ್ಟೋ ಚೆನ್ನಿತ್ತು. ಹಾಳು ಹವ್ಯಾಸಗಳಿಗೆ ಇಳಿದು ಜೀವನ ಭಾಗ್ಯವನ್ನು ನಷ್ಟಗೊಳಿಸುವುದನ್ನು ನೋಡಿದರೆ ಒಡಲೆಲ್ಲ ಸಂಕಟ. ವಿಧಿ ಬರೆದ ಬರಹವನ್ನು ಅಳಿಸುವವರಾರು ?"

"ಅದಕ್ಕೆಂದೇ ಸುಮ್ಮನಿದ್ದು ಬಿಡು. ಏನೇನು ಆಗಬೇಕೋ ಅದು ಆಗಿಯೇ ತೀರುತ್ತೆ."

ಅವಳು ಒಂದು ಗಳಿಗೆ ನಿಟ್ಟಿಸಿ ನೋಡಿ ವ್ಯಂಗ್ಯ ಭಾವದಿಂದ ನುಡಿದಳು: "ನೀವು ಏನು ಮಾಡಬೇಕೆಂದಿರುವಿರೋ ಅದೇನಾಗುತ್ತಿದೆಯೋ ದೇವರಿಗೆ ಗೊತ್ತು."

"ಭವಿಷ್ಯ ಹೇಗೂ ನಮ್ಮ ಕೈಯಲಿಲ್ಲ. ತಿಳಿಯಲು ಪ್ರಯತ್ನಿಸುವುದು ವ್ಯರ್ಥ. ಮತ್ತೇಕೆ ಶ್ರಮ ? ನಮ್ಮ ಪ್ರಯತ್ನ ನಾವು ಮಾಡೋಣ ಅಷ್ಟೆ."

ಅವಳು ಆಶ್ಚರ್ಯದಿಂದ ಅವನ ಕಡೆ ನೋಡಿದಳು. ಅವನ ಮುಖ ಬಿಂಬದಲ್ಲಿ ಮೂಡಿದ ಭಾವಮುದ್ರೆಯಲ್ಲಿ ವಾಸ್ತವಿಕತೆಯ ನೆರಳು ಇರಲಿಲ್ಲ. ಏನೋ ಒಂದು ಬಗೆಯ ಕುಕಲ್ಪನೆ, ಇನ್ನೇನೋ ಒಂದು ಬಗೆಯ ಅನೃತ, ಮತ್ತೇನೋ ಒಂದು ಬಗೆಯ ಅಸಗತಿ ಅರ್ಥೈಸಲಾರದ ಅವಗುಣಗಳ ಖ್ಯಾತಿಯ ವಿನಾ ಮತ್ತೊಂದಿಲ್ಲ. ಯಾವಯಾವ ಕರಾಳ ಕಾಳಿಕೆಯ ಕಾಳ ಶಕ್ತಿಯು ಅವಾಹನೆಯಾಗಿದೆಯೋ ಅವನಲ್ಲಿ, ಎಂದುಕೊಂಡಳು ಮನದಲ್ಲಿ. ಪ್ರಯತ್ನಿಸಿದರೂ ತುಟಿಗಳು ಬಿರಿಯಲಿಲ್ಲ. ಸುಮ್ಮನೆ ಮೂಕಮೌನಿಯಾಗಿ ದಿನಚರಿಯಲ್ಲಿ ಮನವಿಟ್ಟಳು ಅವಳು.

೦ ೦ ೦ ೦

ಸನಿಹದಲ್ಲೇ ಇದ್ದ ಕೃಷ್ಣನಿಗೆ ತಮ್ಮನ ಕಳ್ಳವ್ಯಾಪಾರ ಗೊತ್ತಿತ್ತು. ಹೇಳ ಹೋದರೆ ಕೇಳಲೊಲ್ಲ. ಮಾತುಮಾತಿಗೆ ಜಗಳ ಬೆಳೆದು ಗದ್ದಲವಾಗುತ್ತೆ ಎಂಬುದು ತಿಳಿದಿದ್ದುದರಿಂದ ಕಣ್ಣಿದ್ದೂ ಕುರುಡು. ಕಿವಿಯಿದ್ದೂ ಕಿವುಡು.

ಅಂಗಡಿಯ ಮುಂಡೆ ಬೃಹದಾಕಾರದ ಕ್ಯಾಷಿಯಾ ಮರ. ಅದರ ಸುತ್ತಲೂ ಹರವಾದ ಕಟ್ಟೆ. ಮೇಲೆ ಚಪ್ಪಡಿಗಲ್ಲುಗಳ ಹಾಸು. ಅಂಗಡಿ ವ್ಯಾಪಾರಕ್ಕಾಗಿ ಬಂದವರು ಮತ್ತು ಸಾಯಂಕಾಲದಲ್ಲಿ ವಾಯುವಿಹಾರಕ್ಕಾಗಿ ಬಂಪವರು ಅಲ್ಲಿ ಕುಳಿತು ಹರಟುವುದು ವಾಡಿಕೆ. ಅಂಗಡಿಯ ಮಿಠಾಯಿ, ಹುರಿಗಾಳು, ಚಕ್ಕಲಿಗಳು ಅಲ್ಲಿ ಕರಗುತ್ತವೆ. ಆದರಿಂದ ಅಂಗಡಿಯ ವ್ಯಾಪಾರವೂ ಚುರುಕು. ಆದಾಯವೂ ಹೆಚ್ಚು. ಅಲ್ಲಿ ಬರುವ ಗ್ರಾಹಕರಿಗೆಂದೇ ಆ ಕಟ್ಟೆ ಮತ್ತು ಪರಿಸರವನ್ನು ಸ್ವಚ್ಛವಾಗಿಡುತಿದ್ದ ಕೃಷ್ಣ.

ದೇಶಾಂತರಿತ ಸಮಸ್ತ ಸಂಗತಿಗಳೂ ಅಲ್ಲಿ ಕರಗುತ್ತವೆ.

ರಾಜಕೀಯ, ಸಮಾಜಿಕ ಮತ್ತು ಹಾಳು ಹರಟೆಗಳು ಸರ್ವತ್ರ ಸದಾ ಇದ್ದದ್ದೇ. ರಾಜಕೀಯ ವಿಚಾರ ಬಂದಾಗ ವಾದ ವಿವಾದಗಳು ಜರುಗುವುದು ಸಹಜ. ಸಾಮಾಜಿಕವಾದ ವಿಷಯ ಭುಗಿಲೆದ್ದಾಗ ಆರೋಪ ಪ್ರತ್ಯಾರೋಪಗಳು ಹುಟ್ಟಿಕೊಳ್ಳುವುದುಂಟು. ಹಾಳು ಹರಟೆಗಳಿಗಂತೂ ಇತಿಮಿತಿಯೇ ಇಲ್ಲ. ಈ ಎಲ್ಲಾ ಪ್ರಕಾರಗಳಿಂದಾಗಿ ಅದೊಂದು ವಾರ್ತಾಕೇಂದ್ರವೂ ಹೌದು. ವಿಶೇಷ ವಿಚಾರಗಳು ಬಾಯಿಂದ ಬಾಯಿಗೆ ಹಬ್ಬಿ ಊರೆಲ್ಲಾ ಹರಡುತ್ತವೆ ತಂತಿ ಸಮಾಚಾರದಂತೆ. ರೆಕ್ಕೆ ಪುಕ್ಕ ಬೆಳೆದು ಅದ್ಭುತವಾಗುತ್ತದೆ ವಿಚಾರವಾಹಿ. ಹಾಸ್ಯಪ್ರಧಾನ ಅಂಶಗಳಿಂದ ನಗೆ ಬುಗ್ಗೆಯೂ ಚಿಲ್ಲುತ್ತದೆ. ರಾಜ್ಯದ ಪ್ರಕ್ಷುಬ್ಧ ಪರಿಸ್ಥಿತಿಯ ಬಗ್ಗೆ ಚರ್ಚೆಗಳೂ ನಡೆಯುತ್ತವೆ.

ಅದೇ ತಾನೇ ಬಂದ ಗಿರಾಕಿಯೊಬ್ಬ ಅಂದ "ಸ್ವಾಮಿ ಕೃಷ್ಣರವರೇ, ನಾನು ಸೋಲೂರಿಂಡ ಬರುತ್ತಿರುವೆ. ಅಲ್ಲೊಂದು ವಿಶೇಷ ಗೊತ್ತೇ ನಿಮಗೆ?"

"ಏನಪ್ಪಾ ಅದು ?"

"ಮೈಸೂರಿಂದ ಹಂಸಾಪುರಕ್ಕೆ ಹೋಗುವ ರೈಲು ಇನ್ನುಮುಂದೆ ಸೋಮಲಾಪುರ ಮಾರ್ಗವಾಗಿ ಹೋಗುತ್ತದಂತೆ ? ಟಿ.ಬಿ.ಯಲ್ಲಿ ಸರಕಾರಿ ಮಂದಿ ಬಹಳವಾಗಿ ಕೂಡಿದ್ದಾರೆ. ಈವೊತ್ತಿನಿಂದ ದಾರಿ ಸರ್ವೆಮಾಡುತ್ತಾರಂತೆ ! ನಮ್ಮೂರಿಗೆ ರೈಲು ಬಂದರೆ ಎಷ್ಟು ಚೆಂದ ಅಲ್ಲವಾ ?"

"ಹೌದಾ ? ವಿಷಯ ಯಾವ ಪತ್ರಿಕೆಯಲ್ಲೂ ಬಂದಿಲ್ಲವಲ್ಲಾ ?"

"ಇನ್ನೂ ದಾರಿ ಸರ್ವೆ ಮಾಡುತಿದ್ದಾರಷ್ಟೆ ?"

ಕಟ್ಟೆಯ ಮೇಲೆ ಕುಳಿತಿದ್ದ ಜನರ ಕಿವಿಗಳು ನಿಮಿರಿದುವು.

"ಸೋಮಲಾಪುರಕ್ಕೆ ರೈಲು ಕೊಡಿ ಎಂಬ ಬೇಡಿಕೆ ಸರಕಾರದ ಮುಂದೆ ಬಹಳ ಕಾಲದಿಂದಲೂ ಇದೆ. ಬಹುಶಃ ಈಸಲಿ ಕೊಡುತ್ತಾರೋ ಏನೋ...."

"ಈ ಊರಿನ ಜನ ಎಷ್ಟು ಕಾಲದಿಂದ ಎಷ್ಟೆಷ್ಟು ಕೇಳಿಕೊಂಡಿದ್ದಾರೆ. ಈ ಕಿವುಡು ಸರಕಾರ ತಲೆಗೇ ಹಾಕಿಕೊಂಡಿರಲಿಲ್ಲ. ಈಗದು ಹಾಕಿಕೊಂಡಿದ್ದರೆ ವಿಶೇಷವೇ ! ಸೋಲೂರಿನ ಮೂಲಕ ಸೋಮಲಾಪುರಕ್ಕೆ ಬರಬೇಕುರೈಲು."

ಅಲ್ಲಿದ್ದ ಹುಡುಗರು ರೈಲು ಬರುವ ವಿಷಯವನ್ನು ತಿಳಿದು ಚಪ್ಪಳೆ ತಟ್ಟಿ ಕೇಕೆ ಹಾಕಿ ನಕ್ಕರು. "ರೈಲು ಬರುತ್ತೆ ರೈಲು !" ಎಳೆ ದನಿ ಮೊಳಗಿದುವು.

ರೈಲು ಅಷ್ಟು ಸುಲಭವಾಗಿ ಬರುತ್ತೆ ಅಂದುಕೊಳ್ಳಬೇಡಿ. ಅದಕ್ಕಿನ್ನೆಷ್ಟು ಲಂಚ ರೂಪುವಸ್ತುಗಳೊ. ಇಂದಿನ ಕಾಸುಗಳ್ಳ ಸರಕಾರ ಸಾಮಾನ್ಯ ಬೇಡಿಕೆಗೆ ಜಗ್ಗುವುದೇ ಇಲ್ಲ. ಮೈ ಮುರಿದು ದುಡಿಯುವುದಕ್ಕಿಂತ ಸುಲಭ ರೂಪದಲ್ಲಿ ಬರಬೇಕು ಹಣ. ಇಂದಿನ ಪರಿಸ್ಥಿಯಲ್ಲಿ ರೈಲು ಬಂದೇ ಬರುತ್ತೆ ಎಂದು ದೃಢವಾಗಿ ಹೇಳುವುದು ಕಷ್ಟ."

"ಇಲ್ಲ ಸ್ವಾಮಿ. ಹಾದಿ ಸರ್ವೇ ಮಾಡುವುದಕ್ಕೆ ಬಂದಿದ್ದಾರೆ ಎಂದು ಹೇಳಿದ ಟಿ.ಬಿ. ಜವಾನ. ಖಂಡಿತವಾಗಿಯೂ ಹೇಳಿದ್ದಾನೆ !"

ಸುದ್ದಿ ತಂದವ ದೃಢವಾಗಿ ಸಮರ್ಥಿಸಿಕೊಂಡ.

"ಈವೊತ್ತು ಸರ್ವೇ ಮಾಡಿದರೆ ಇನ್ನೊಂದು ಜನ್ಮಕ್ಕೆ ಬರುತ್ತೆ ಬಿಡು."

"ಹಾಗಂತೀರಾ ಸ್ವಾಮಿ ?"

"ಅಲ್ಲದೆ ಏನು ? ನಮ್ಮ ಜನ ಕುಂಭ ಕರ್ಣರು–ಜಡಭರತರು ಮಾತ್ರ ವಲ್ಲ ; ಉತ್ತರನ ಪೌರುಷದವರೂ ಹೌದು. ಈಗ ಸ್ವಾತಂತ್ರ್ಯ ಬಂದು ಅರ್ಧ ಶತಮಾನವೇ ಕಳೆಯುತ್ತ ಬಂತಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಕಿಂಚಿತ್ತಾದರೂ ಪ್ರಗತಿ ಆಗಿದೆಯೇ ?"

"ಅದು ನಿಜ..."

"ಖಾಸಗೀ ಬಸ್ಸುಗಳ ಮಾಲೀಕರು ಲಂಚ ಕೊಟ್ಟು ಕೊಟ್ಟು ಒಂದೆರಡು ರಸ್ತೆ ಮಾಡಿಸಿಕೊಡಿದ್ದಾರೆ. ನಾಲ್ಕಾರು ಬಸ್ಸುಗಳು ಓಡಾಡುತ್ತವೆ ಅಷ್ಟೆ."

"ನಿಜ...ನಿಜ..."

"ತೀರಾ ದುರದೃಷ್ಟಕರ...." ತಿರಸ್ಕಾರದ ದನಿ ಹೊಮ್ಮಿತು.

"ಹೀಗೇ ಆದರೆ ಕೊನೆಯೆಂದಿಗೆ ?"

"ಕೊನೆ...? ಆ ಪ್ರಶ್ನೆಯನ್ನು ಮರೆತು ಬಿಡಬೇಕು."

"ಗಾಂಧೀಜಿ ನಮಗೆ ಸ್ವಾತಂತ್ರ್ಯಗಳಿಸಿಕೊಟ್ಟರು. ನಮ್ಮವರು ಸತ್ಯ–ಧರ್ಮ–ನೀತಿಗಳನ್ನು ಕಳೆದುಕೊಂಡರು."

"ಅದು...ನಿಜ."

"ಇದೊಂದು ನಿಜವಾಗಿಯೂ ವಿಷಾದ ಪ್ರಕರಣ."

"ಹಾಗೆಂದರೆ, ಎಲ್ಲರೂ ಕಳ್ಳರೇ ಇರುವಾಗ ನಂಬುವವರಾರು ?"

ಒಡನೆ ನಗುವಿನ ಹುಲ್ಲೆದ್ದಿತು.

— ೦ —

೨೬

ವರಾಂಡದ ತೂಗುದೀಪದ ಉಜ್ವಲವಾದ ಬೆಳಕಿನಲ್ಲಿ ಪ್ರತಿಕಾವಲೋಕನ ನಡೆಸಿದ್ದರು ಮಾವ ಮತ್ತು ಅಳಿಯ. ಮುಖದಮೇಲೆ ವಿಚಾರ ವಿಶ್ವದ ಭಾವಧಾರೆಯು ಮುದ್ರೆ ಸುಸ್ಪಷ್ಟವಾಗಿದೆ.

ಇಬ್ಬರೂ ಅಕ್ಕಪಕ್ಕದ ಕುರ್ಚಿಗಳಲ್ಲಿ ಮಂಡಿಸಿದ್ದರು ಸಾಯಂಸಮಯದ ತಂಗಾಳಿಗೆ ಮೈಗೊಟ್ಟು.. ಪತ್ರಿಕೆಯ ಪುಟವನ್ನು ತಿರುವಿ ಹಾಕಿ ರಾಮನಾಥ ಅಂದ,

"ಇಂದಿನ ಜನಾಂಗದಲ್ಲಿ ನ್ಯಾಯ–ನೀತಿಗಳು, ಸಂಸ್ಕೃತಿ–ಸಂಸ್ಕಾರಗಳು, ಧರ್ಮ–ಕರ್ಮಗಳು ಹೇಗೆ ಬುಡಮೇಲಾದುವೋ ಊಹಿಸುವುದೇ ಕಷ್ಟ. ಸತ್ಯ ಹೇಳಹೆಸರಿಲ್ಲದಂತಾಗಿದೆ. ನ್ಯಾಯಾಲಯಗಳಲ್ಲಿ ನ್ಯಾಯ ಕುಗ್ಗಿದೆ. ಸರಕಾರ ದಲ್ಲಿ ಧರ್ಮನಿಷ್ಠೆ ಇಲ್ಲವೇ ಇಲ್ಲ. ಸಾಲದುದಕ್ಕೆ ಜನರಾಶಿಯಲ್ಲಿ ಮತಿಮೌಢ್ಯ ಹೆಪ್ಪುಗಟ್ಟಿದೆ. ಧರ್ಮಕರ್ಮ ಅನುಸರಿಸುವವರು ಶೇಕಡಾ ಹತ್ತರಷ್ಟೂ ಸಿಕ್ಕಲಾರರು. ಅಂದಮೇಲೆ, ಈ ರಾಷ್ಟ್ರೋದ್ಧಾರವನ್ನು ಕುರಿತು ಯೋಚಿಸಿದರೆ ಸಂಕಟವಾಗುತ್ತದೆ. ಇದು ಯೋಚನಾತೀತವಾದ ವಿಚಾರ."

"ನಿಜ...ನಿಜ. ಭಾರತವಿಂದು ಭಾರತವಾಗಿ ಉಳಿದಿಲ್ಲ. ಈಗಲೇ ಹೀಗೆ. ಇನ್ನು ಕಾಲಾಂತರದಲ್ಲಿ ಏನೇನು ಆಗಲಿದೆಯೋ..." ನಿಟ್ಟುಸಿರು ಬಿಟ್ಟ ದೇವಯ್ಯ.

"ಯಾದವೀ ಕಲಹದಿಂದ, ಪ್ರಕೃತಿಯ ವೈಪರೀತ್ಯದಿಂದ ಜನ ಕ್ರಿಮಿ ಕೀಟಗಳಂತೆ ಸಾಯುತ್ತಿದ್ದಾರೆ. ಯಾವ ದೈವದ ಅವಕೃಪೆಯೋ ವಿಜ್ಞಾನ ಗಗನಕ್ಕೇರಿದಷ್ಟೂ ಸತ್ಯ–ಧರ್ಮ ಪಾತಳಕ್ಕೆ ಇಳಿಯುತ್ತಿದೆ. ಇದು ತುಂಬಾ

ದುರದೃಷ್ಟಕರ. ವಿದೇಶೀಯರಲ್ಲಿ ಎಂಥ ಶೌರ್ಯ–ಸಾಹಸಗಳಿವೆ? ಹೇಗೆ ದೇಶ ಕಟ್ಟುತ್ತಾರೆ ? ಅಂತಹ ಸುಯೋಗ್ಯತೆಯೂ ನಮ್ಮಲ್ಲಿಲ್ಲ. ನಾವು ಪುರಾತನ ಸಂಸ್ಕೃತಿಯ ಬಗ್ಗೆ ಗರ್ವಿಸುತ್ತ ಇಂದಿನ ಅರ್ಥಹೀನ ವ್ಯವಹಾರಕ್ಕೆ ಇನ್ನೂ ಕಟ್ಟುಬೀಳುತ್ತಿರುವುದು ಖಂಡಿತ ನಾಚಿಗೇಡಿತನ. ಆದ್ದರಿಂದಲೇ ಪ್ರಗತಿ ನಿಧಾನ.ರಾಜಕಾರಣಿಗಳು ಹೇಳುವುದೊಂದು ; ಮಾಡುವುದೊಂದು."

"ರಾಷ್ಟ್ರ ಪ್ರಗತಿಯತ್ತ ಹೆಜ್ಜೆ ಹಾಕುತ್ತಿದೆ ನಿಜ. ಬಹುಜನ ಬಾಹುಳ್ಯವುಳ್ಳ ರಾಷ್ಟ್ರಕ್ಕೆ ಪ್ರಗತಿಯ ಪ್ರಸಾದ ತಕ್ಷಣ ತಲುಪುವುದು ಕಷ್ಟವೇ. ಬೆಲೆಯೇರಿಕೆಯಿಂದ ಬಡತನ ಹಿರಿದು ತಿನ್ನುತ್ತಿದೆ. ನಿರುದ್ಯೋಗ ಸಮಸ್ಯೆ ಬಗೆ ಹರಿಯಲಿಲ್ಲ. ಶ್ರೀಮಂತರನ್ನು ಬಿಟ್ಟರೆ ಮತ್ತೆಲ್ಲರಿಗೂ ಇಂದು ಬದುಕು ಭಾರಾತಿಭಾರ. ಹೀಗಾಗ ಬಾರದು." ವಿಷಾದವಾಣಿಯಲ್ಲಿ ನುಡಿದ ದೇವಯ್ಯ. ಪುನಃ ಮುಂದುವರಿದ "ನಾವು ಆಶಿಸಿದ ರೀತಿಯೇ ಬೇರೆ. ಆಗುತ್ತಿರುವುದೇ ಬೇರೆ. ರಾಷ್ಟ್ರೀಯ ಮುಖಂಡರಿಗೆ ಗೊತ್ತು, ತಮ್ಮ ತಮ್ಮ ಪಥ ಸರಿಯಲ್ಲ ಎಂದು. ಆದರೂ, ಧರ್ಮಪಥ ಹಿಡಿಯುತ್ತಿಲ್ಲವಲ್ಲ, ಇದು ಅದೇ ಆಶ್ಚರ್ಯ."

"ನಮ್ಮವರು ಮಹಾ ಸ್ವಾರ್ಥಿಗಳು. ಸ್ವಾರ್ಥದಿಂದ ಧರ್ಮಪಥ ಮುಚ್ಚಿ ಹೋಗಿದೆ. ಹಿಂದೆ ಕಾಂಗ್ರೆಸ್ ಒಂದೇ ಹಿರಿಯ ಸಂಸ್ಥೆ. ಅದೇ ತಾಯಿ ಸಂಸ್ಥೆ. ತದನಂತರ ಹಲವಾರು ಪಾರ್ಟಿಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡಿವೆ. ಯಾವುದಕ್ಕೂ ನಿಗದಿಯಾದ ಧ್ಯೇಯಧೋರಣೆಗಳಿಲ್ಲ. ಇದ್ದರೂ ಪಾಲಿಸುವವರಿಲ್ಲ. ಹೇಳುವುದೊಂದು–ಮಾಡುವುದೊಂದು. ಹೀಗಿದ್ದರೆ ಎಲ್ಲಿಯ ಪ್ರಗತಿ ? ಒಮ್ಮನ–ಒಮ್ಮತಗಳು ಯಾವ ಪಾರ್ಟಿಯಲ್ಲಿಯೂ ಇಲ್ಲ. ಅವಿವೇಕಿಗಳಿಂದ ರಾಷ್ಟ್ರದ ಆರ್ಥಿಕ ಭಂಡಾರವೇ ಸೂರೆಯಾಗಿದೆ. ಸ್ಥಿರ ಪ್ರಜ್ಞೆ ಬೆಳೆಯಲಿಲ್ಲ. ಆಡಳಿತ ವ್ಯವಸ್ಥೆ ತೀರ ಹದಗೆಟ್ಟಿದೆ. ರಾಜಕಾರಣಿಗಳು ಪ್ರಜೆಗಳ ಕರಭಾರದಲ್ಲಿ ಅದ್ಧೂರಿಯ ಜೀವನ ನಡೆಸುತ್ತಾರೆ. ಪರದೇಶ ಯಾತ್ರೆ ಹೂಡುತ್ತಾರೆ. ಬಡವರ ಬಗ್ಗೆ ಕರುಣೆಯೇ ಇಲ್ಲ ಎಂದರೆ ಏನೇನೂ ತಪ್ಪಲ್ಲ. ಇಂಥ ಪರಿಸ್ಥಿತಿಯಲ್ಲಿ ಸಾಮಾಜಿಕ ಸುಖ–ಶಾಂತಿಯನ್ನು ಎಷ್ಟರ ಮಟ್ಟಿಗೆ ನಿರೀಕ್ಷಿಸಬಹುದು ?"

ಕುಮುದ್ವತಿ ಚರ್ಚೆಯಲ್ಲಿ ಪಾಲ್ಗೊಂಡು ನುಡಿದಳು,

"ಎಂದೆಂದಿಗೂ ನಮ್ಮ ಸುಖೀ ಸಾಮ್ರಾಜ್ಯ ಇಷ್ಟೆ. ನಮ್ಮವರು ಪರಾಳ್ವಿಕೆಯಲ್ಲಿ ಪಡೆದ ಅನುಭವ ಸಾಮಾನ್ಯವಲ್ಲ. ಆದಾಗ್ಯೂ, ರಾಷ್ಟ್ರಾಡಳಿತಕ್ಕೆ ಅನರ್ಹರಾದುದು ಆಶ್ಚರ್ಯ! ಇಂದು ಡಿಕ್ಟೇಟರ್‌ಷಿಪ್ ಇದ್ದರೆ ಸ್ವಲ್ಪ ಸುಧಾರಣೆಯಾದೀತೇನೋ....ಈ ಕಲಸುಮೇಲೋಗರವಾದ ರೀತಿ–ನೀತಿಗಳು, ಧ್ಯೇಯ–ಧೋರಣೆಗಳು ಸ್ವಾರ್ಥದ ಹಾದಿ ಹಿಡಿದಿರುವುದರಿಂದ ರಾಷ್ಟ್ರ ಕ್ಷೇಮವಿಲ್ಲ. ಬುದ್ಧಿಹೀನ ಜನ, ಅರ್ಥಹೀನ ಪ್ರಭುತ್ವ ಎರಡೂ ಸರಿಹೋಗಿದೆ. ಒಂದು ಹೆಚ್ಚಲ್ಲ ; ಒಂದು ಕಡಿಮೆಯಲ್ಲ. ಅಂದಮೇಲೆ, ನಮ್ಮ ಮಟ್ಟ ಇಷ್ಟೆ. ಅಂದರೆ, ಇನ್ನು ಹತ್ತಿಪ್ಪತ್ತು ವರ್ಷಗಳಿಗೂ ಇದೇ ಸ್ಟ್ಯಾಂಡರ್ಡ್...!"

ಎಲ್ಲರ ಮುಖದಲ್ಲೂ ತಿರಸ್ಕಾರದ ಸಣ್ಣ ನಗೆ ಮೂಡಿ ಮಾಯವಾಯಿತು.

ಕಾಲದಿಶೆಯಲ್ಲಿ ಕುಳಿತಿದ್ದ ನಾಯಿ ಎದ್ದು ಒಮ್ಮೆಲೇ ಬೊಗಳಿತು. ಒಡನೆ ದೃಷ್ಟಿ ಸಹಜವಾಗಿ ಅಂಗಳದೆಡೆಗೆ ಹರಿಯಿತು. ಅಂಗಳದಲ್ಲಿ ಮನೆಯಾಳು ರಂಗಣ್ಣನೊಡನೆ ಅಪರಿಚಿತ ವ್ಯಕ್ತಿಯೊಂದು ಕಾಣಿಸಿಕೊಂಡಿತು. ನಾಯಿಯ ಕೊರಳಿಗೆ ಸರಪಳಿ ತೊಡಿಸಿ ಯಾರೆಂದು ವಿಚಾರಿಸಲು ಜಗಲಿಯಂಚಿಗೆ ಹೋದಳು ಕುಮುದ್ವತಿ.

"ವಂದನೆಗಳು ತಾಯಿ. ನಾನು ಈ ಊರಿಗೆ ಶಾಲೆಯ ಮಾಸ್ತರಾಗಿ ಬಂದವ. ನನ್ನ ಹೆಸರು ರಂಗನಾಥ ನಾನು ಹಿಂದಿನ ಸಲ ಬಂದು ಹೋದಾಗ ಈ ದಿನ ಅಂದರೆ ಒಂದನೇ ತಾರೀಖಿಗೆ ಮನೆ ಬಿಡುವುದಾಗಿ ಹೇಳಿದ್ದರು ಹಿಂದಿನ ಮಾಸ್ತರು. ನೋಡಿದರೆ ಅವರು ಬಿಟ್ಟೇ ಇಲ್ಲ. ಸಂಸಾರವನ್ನು ಇಲ್ಲಿಯೇ ಬಿಟ್ಟು ಸಿದ್ಧಾಪುರಕ್ಕೆ ತಾವೊಬ್ಬರೇ ಹೋಗಿದ್ದಾರೆ. ಇನ್ನೊಂದು ತಿಂಗಳು ಮನೆ ಸಿಗುವ ಸಂಭವ ಕಡಿಮೆ. ನಾನು ಸಂಸಾರ ಸಹಿತ ಬಂದಿರುವೆ, ಅವರ ಮಾತು ನಂಬಿ. ಹೆಂಡತಿ ಮಕ್ಕಳು ಬಸ್ ನಿಲ್ದಾಣದಲ್ಲಿದ್ದಾರೆ. ಈ ರಾತ್ರಿ ಎಲ್ಲಾದರೂ ತಂಗಲು ದಯವಿಟ್ಟು ಸ್ಥಳ ಕೊಡಿಸಿದರೆ ತುಂಬಾ ಉಪಕಾರವಾಗುತಿತ್ತು. ನಾಳೆಯಿಂದ ಎಲ್ಲಾದರೂ ಹುಡುಕಿಕೊಳ್ಳುವೆ. ನಾಳೆ ಶಾಲೆ

ಯಲ್ಲಿ ಛಾರ್ಜ್ ತೆಗೆದುಕೊಳ್ಳಬೇಕು. ತುಂಬಾ ತಾಪತ್ರಯವಾಗಿದೆ. ದಯ ವಿಟ್ಟು ತೊಂದರೆ ಕೊಟ್ಟಿದಕ್ಕೆ ಕ್ಷಮಿಸಿ."

ಆ ಕೂಡಲೇ ರಾಮನಾಥ ಎದ್ದು ಬಂದು ನುಡಿದ,

"ಆಗಲಿ, ಮಾಸ್ತರೇ ನೀವು ಸಂಸಾರವನ್ನು ಕರೆತನ್ನಿ. ಈ ಮನೆಯ ಮಗ್ಗುಲಿಗೆ ಒಂದು ಚಿಕ್ಕ ಮನೆಯಿದೆ. ಅದರಲ್ಲಿ ನಿಮಗೆ ಮನೆ ಸಿಗುವವರೆಗೂ ಉಳಿದುಕೊಳ್ಳಬಹುದು. ಈ ರಾತ್ರಿಗೆ ಇಲ್ಲಿಯೇ ಊಟಮಾಡೋಣ. ತೀರ ಹೊತ್ತಾಗಿದೆ. ನೀವು ಅಡಿಗೆ ಮಾಡಿಕೊಳ್ಳುವ ತೊಂದರೆ ತೆಗೆದುಕೊಳ್ಳುವುದು ಬೇಡ."

"ಬಹಳ ಉಪಕಾರವಾಯ್ತು. ಇಷ್ಟು ಉದಾರತನ ಯಾರಲ್ಲಿರುತ್ತೆ? ಅಡಿಗೆ ನಾವೇ ಮಾಡಿಕೊಳ್ಳುತ್ತೇವೆ. ಅಷ್ಟು ತೊಂದರೆ ತೆಗೆದುಕೊಳ್ಳುವುದು ಬೇಡ ಸ್ವಾಮಿ, ನೀವು ಮನೆಕೊಟ್ಟುದುದೇ ಮಹೋಪಕಾರವಾಯ್ತು."

"ತೀರ ಸಂಕೋಚ ಪಟ್ಟುಕೊಳ್ಳಬೇಡಿ ಮಾಸ್ತರೇ. ನೀವು ಹೋಗಿ ಸಂಸಾರವನ್ನು ಕರೆತನ್ನಿ. ನಮಗೆ ಮಾಡಿದ್ದೇ ನೀವೂ ಊಟಮಾಡಬಹುದು ವಿಶೇಷವೇನಿಲ್ಲ." ಎಂದಳು ಕುಮುದ್ವತಿ.

ರಂಗನಾಥ ಅವಸರವಾಗಿ ಹೆಜ್ಜೆ ಹಾಕುತ್ತ ಕತ್ತಲಲ್ಲಿ ಕರಗಿ ಹೋದ ರಂಗಣ್ಣನೊಡನೆ. ಅವನು ಹೊರಟು ಹೋಗುತ್ತಲೂ ಕುಮುದ್ವತಿ ಒಳ ಹೋದಳು. ನಾಲ್ಕೈದು ಮಂದಿಗೆ ಅಡಿಗೆಯಾಗಬೇಕು. ಸಣ್ಣ ಬಿಡದಿಯನ್ನು ಈಚೆಗೆ ಯಾರೂ ಉಪಯೋಗಿಸಿಲ್ಲವಾದ್ದರಿಂದ ಕೊಳಕು ಕವಿದಿದೆ. ಅದನ್ನು ಶುದ್ಧಿಗೊಳಿಸದೆ ಬಳಸುವಂತಿಲ್ಲ.

ರಂಗಮ್ಮ ಅಡಿಗೆಗೆ ಕೈ ಹಚ್ಚಿದಳು ಸೀತಮ್ಮನೊಡನೆ. ಕುಮುದ್ವತಿ ಪೊರಕೆ ಹಿಡಿದಳು. ಒಂದು ತಾಸಿನೊಳಗಾಗಿ ಎಲ್ಲಾ ಒಪ್ಪವಾಯಿತು. ರಂಗಮ್ಮ ಮೇಜಿನಮೇಲೆ ಊಟ ಅಣಿಗೊಳಿಸಿದಳು. ಅದೇ ಸಮಯಕ್ಕೆ ಸರಿಯಾಗಿ ಮಾಸ್ತರ ಸಂಸಾರ ಬಂದಿಳಿಯಿತು. ಮೂರು ಮಕ್ಕಳು ಮತ್ತು ಗಂಡ ಹೆಂಡತಿ ಮತ್ತು ಗಂಟುಮೂಟೆ.

ಎಲ್ಲರೂ ಶೌಚಾಲಯಕ್ಕೆ ಹೋಗಿ ಕೈಕಾಲು ತೊಳೆದು ಮುಖಮಜ್ಜನ ಮಾಡಿಬಂದರು. ಅವರಿಗೆ ಬಲೂ ಸಂಕೋಚ ; ಹೇಗೆ ಇವರಲ್ಲಿ ಊಟ ಮಾಡುವುದು ಎಂದು.

"ಬನ್ನಿ ಮಾಸ್ತರೇ, ಏಕೆ ಸಂಕೋಚ" ಎಂದು ಒತ್ತಾಯಿಸ ಬೇಕಾಯಿತು, ರಾಮನಾಥನಿಗೆ.

ಎಲ್ಲರೂ ಊಟಕ್ಕೆ ಕುಳಿತರು. ಸ್ಥಳ ಕಡಿಮೆಯಾದುದರಿಂದ ಮಕ್ಕಳಿಗೆ ವ್ಯವಸ್ಥೆ ಬೇರೆ. ಒಂದೇ ಬಾರಿಗೆ ಮುಗಿಯಿತು ಊಟ.

ಸೌಜನ್ಯ ಪೂರಿತ ಆತಿಥ್ಯದಿಂದ ಸಂತಸವಾಯಿತು ಮಾಸ್ತರು ರಂಗ ನಾಥನಿಗೆ.

o o o o

ಬೆಳಿಗ್ಗೆ ಹೊತ್ತು ಏರುವ ಮುಂಚೆಯೇ ಬಂದಿದ್ದ ಸತ್ಯ.

ಆಳೆತ್ತರಕ್ಕೆ ನವುರಾಗಿ ಕಬ್ಬಿನ ಜಲ್ಲೆಯಂತೆ ಬೆಳೆದಿದ್ದಾನೆ. ಈ ಸಲಿ ಮುಗಿಸಿದ್ದು ಬಿ.ಎ. ಪರೀಕ್ಷೆ. ಫಲಿತಾಂಶ ಬರುವುದೊಂದು ಬಾಕಿ. ಬುದ್ಧಿ ವಂತನಾಗುತಿದ್ದಾನೆಂದು ಸಲಸಲಕ್ಕೂ ಪತ್ರ ಬರುತಿತ್ತು ಪ್ರಿನ್ಸಿಪಾಲರಿಂದ. ಅದೊಂದು ಎಲ್ಲಿಲ್ಲದ ಸಂತಸ ಎಲ್ಲರಿಗೆ.

ಸ್ವಲ್ಪಹೊತ್ತು ಉಭಯ ಕುಶಲೋಪರಿ ನಡೆಸಿದ ನಂತರ ದೇವಯ್ಯ ಅಂದ,

"ನೋಡಪ್ಪಾ ಮಗೂ ! ನೀನು ಬಂಗಾರದ ಹೊಸ್ತಿಲು ಹತ್ತಿ ಇಳಿದು ಬಂದಿರುವೆ. ಇನ್ನು ಮುಂದೆ ನಿನ್ನ ವ್ಯವಸಾಯವನ್ನು, ತಾಯಿ ತಮ್ಮಂದಿ ರನ್ನೂ ಬಂಗಾರದ ಗಣಿಯಂತೆಯೇ ನಡೆಸಿ ಕೊಳ್ಳಬೇಕು. ಈ ಕಾಲದಲ್ಲಿ ನಿಮ್ಮಂತಹ ತರುಣಪಟುಗಳಿಗೆ ಬೇಕಾದಷ್ಟು ಉತ್ತಮ ಅವಕಾಶಗಳಿವೆ. ಆದಷ್ಟು ಅವನ್ನು ಸದುಪಯೋಗಪಡಿಸಿಕೊಂಡರೆ ನೀನು ಧನ್ಯನಾಗುತ್ತಿ."

ತಾತನ ಹಿತವಾದವನ್ನು ವಿನಮ್ರತೆಯಿಂದ ಸ್ವೀಕರಿಸಿದ ಸತ್ಯ. ಏನೂ ಮಾತಾಡಲಿಲ್ಲ. ಅಂದಿಂದಿನ ದ್ವೇಷಭಾವನೆಯು ಸ್ವರೂಪ ಅಕ್ಷಿಪಟಲದ ಮೇಲೆ ಸುಳಿಸುಳಿದಳಿಯಿತು. ಏಕೆ ಯಾವ ಕಾರಣದಿಂದ ಬದ್ಧದ್ವೇಷವೊಳೆಯಿತೋ ಊಹಿಸಲಾಗುತ್ತಿಲ್ಲ....ಎದೆಯಾಳದಿಂದ ನಿಟ್ಟುಸಿರೊಂದು ಹೊರಹೊಮ್ಮಿತು. ಮೈಯೆಲ್ಲಾ ಮುದುಡುವಷ್ಟು ಸಂಕೋಚ ಮನದಲ್ಲಿ.

ರಾಮನಾಥ ಮೊಮ್ಮಗನ ಅಭ್ಯುದಯದಿಂದ ಸಂತುಷ್ಟನಾಗಿ ಅಂದ,

"ನೋಡು ಸತ್ಯ, ಮಕ್ಕಳಂತೂ ಕೆಟ್ಟರು. ಮೊಮ್ಮಕ್ಕಳಾದರೂ ಸರಿಯಾದ ದಾರಿಯಲ್ಲಿ ನಡೆಯಲಿ ಎಂಬುದು ನನ್ನಾಶಯ. ಎಲ್ಲರೂ ಚೆನ್ನಾಗಿ ಓದುತ್ತಿರುವುದರಿಂದ ತಲೆಭಾರ ತಪ್ಪಿತು. ಆಧುನಿಕ ಕಾಲದ ನಾಗರಿಕತೆ–ಸಭ್ಯತೆಗಳನ್ನು ಕುರಿತು ಚರ್ಚಿಸುವುದೇ ಆಗಲೀ, ತಿಳಿವಳಿಕೆ ನೀಡುವುದೇ ಆಗಲೀ ನನಗೆ ಇಷ್ಟವಿಲ್ಲ. ನಿನ್ನ ಜೀವನ ಕ್ರಮವನ್ನು ನಿರ್ದೇಶಿಸುವುದೂ ನನಗೆ ಇಷ್ಟವಿಲ್ಲ. ಕಲಿತು ನಿಷ್ಣಾತನಾದ ನೀನು ಏನೇನು ಬೇಕೋ ಅದನ್ನೆಲ್ಲಾ ಮಾಡಿಕೊಳ್ಳಲು ಶಕ್ತನಿರುವೆ. ದೇವರು ನಿನ್ನನ್ನು ಒಳ್ಳೆಯ ಮಾರ್ಗದಲ್ಲಿ ನಡೆಸಲಿ ಎಂದು ಮಾತ್ರ ಹಾರೈಸುವೆ. ನಿನ್ನ ತಮ್ಮಂದಿರನ್ನು ಚೆನ್ನಾಗಿ ನೋಡಿಕೊ, ಎಂದಷ್ಟು ಮಾತ್ರ ಹೇಳಬಲ್ಲೆ. ಬಾ ಕುಳಿತುಕೊ."

ರಾಮನಾಥ ಮಡದಿಯನ್ನು ಕರೆದು "ಕುಮೂ....ಕುಮೂ ಸತ್ಯ ಬಂದಿದ್ದಾನೆ ನೋಡಿದೆಯಾ ?"

ಕುಮುದ್ವತಿ ಹೊರಬಂದಳು.

ಪರಸ್ಪರ ದರ್ಶನಲಾಭದಿಂದ ಇಬ್ಬರ ಮುಖಬಿಂಬಗಳಲ್ಲೂ ಮುಗುಳು ನಗೆಯು ಅರಳಿ ಹೂವಾಯಿತು.

ಸತ್ಯ–ಗೆ ಮಾತಾಡಲು ಸಂಕೋಚವೇ ಸಂಕೋಚ. ಕಣ್ಣುಗಳು ಸಣ್ಣಗೆ ತೊಯ್ದು ಥಳಥಳಿಸಿದುವು.

"ಬಾಪ್ಪಾ, ತಿಂಡಿ ತೆಗೆದುಕೊಳ್ಳುವೆಯಂತೆ."

ಒಳಗಡೆ ಕರೆದುಕೊಂಡು ಹೋದಳು ಕುಮುದ್ವತಿ. ಮೇಜಿನ ಮೇಲೆ ಎಲ್ಲರಿಗೂ ಇಡ್ಲಿ ಚಟ್ನಿ ಅಣಿಯಾಗಿತ್ತು. ಎಲ್ಲರೂ ಕುಳಿತರು.

ಸತ್ಯ ಸ್ವಲ್ಪಹೊತ್ತು ಸುಮ್ಮನಿದ್ದು ಅನಂತರ ನುಡಿದ,

“ಈ ಸಾಲಿನಲ್ಲಿ ಇಲ್ಲಿಯ ಆಳುಗಳು ಕೆಲವು ದಿನ ಬಂದರೆ ಸಾಕು. ಅನಂತರ ನಾನೇ ಎಲ್ಲಾ ಏರ್ಪಾಡು ಮಾಡಿಕೊಳ್ಳುವೆ. ನಮ್ಮಿಂದಂತೂ ನಿಮಗೆ ಬಹಳ ಅನ್ಯಾಯವಾಗಿದೆ. ಇನ್ನು ಮುಂದಾದರೂ ಅನ್ಯೋನ್ಯತೆಯನ್ನು ಕಾಡಿಕೊಂಡು ಬರೋಣ. ಮನೆಯಲ್ಲಿ ಎಲ್ಲರಿಗೂ ಹಾಗೆಂದು ಹೇಳುವೆ.”

“ಗುಡ್ ? ನಿನಗೆ ದೇವರು ಒಳ್ಳಿತು ಮಾಡಲಿ.”

“ಹೌದಪ್ಪಾ ಮಗೂ.” ಎಂದಳು ಸೀತಮ್ಮ.

“ಇದುವರೆಗೆ ಆಯ್ತಲ್ಲ. ಇನ್ನು ಮುಂದೆ ನೋಡಿ. ನೀವು ಹೇಗೆ ಹೇಳಿದರೆ ಹಾಗೆ.”

“ಈ ದೇಶದಲ್ಲಿ ಅತಿಯಾದ ಧನ ಸಂಸ್ಕಾರವಿಲ್ಲದಿರಬಹುದು. ಆದರೆ ಸದ್ಭಾವನೆಯ ಸಂಸ್ಕಾರಕ್ಕೆ ಕೊರತೆಯಾಗುವ ಕಾರಣವಿಲ್ಲ. ನಾಗರಿಕ ಸಮಾಜ, ನಾಗರಿಕ ಕಾಲಮಾನ, ನಾಗರಿಕ ವಿದ್ಯಾಭ್ಯಾಸಗಳು ಮಾನವೀಯತೆಯನ್ನು ಉತ್ತುಂಗಕ್ಕೇರಿಸಲೇಬೇಕು. ವಿಷಯವನ್ನು ನೆನೆಸಿಕೊಂಡರೆ ಹೆಮ್ಮೆಯಿಂದ ಉಬ್ಬುವಂತಾಗುತ್ತೆ. ದೃಢವಾಗಿ ಹೇಳಬೇಕೆಂದರೆ ನಾವು ಬೆರಗಾಗುವುದು ನಮ್ಮವರ ಸಾಹಸಕ್ಕಲ್ಲ. ಬುದ್ಧಿಮತ್ತೆಗೂ ಅಲ್ಲ. ಸೌಜನ್ಯತೆಗಾಗಿ ಮತ್ತು ಅತಿಥಿ ಸತ್ಕಾರಕ್ಕಾಗಿ.” ಎಂದಳು ಕುಮುದ್ವತಿ.

“ಹೌದು ಅಮ್ಮಾ, ನಮ್ಮ ದೇಶದ ಅತಿಥಿ ಸತ್ಕಾರ ಹೆಸರುವಾಸಿ.”

“ಹೌದು. ಹೌದು.” ಸಮರ್ಥಿಸಿದ ದೇವಯ್ಯ.

○ ○ ○ ○

ಸಂಜೆಯ ವಾಯುಸೇವನೆಯ ಉದ್ದೇಶದಿಂದ ಸೀತಮ್ಮನೊಡನೆ ಹೊರಟ ಕುಮುದ್ವತಿಯು "ಕಾಳಜ್ಜನಿಗೆ ನೂರುವರ್ಷದ ಮೇಲಾಗಿದೆಯಂತೆ. ಮೊನ್ನೆ ರಂಗಣ್ಣ ನೂರಆರು ವರ್ಷಗಳಾಗಿವೆ ಎಂದು ಹೇಳಿದಾಗಲೇ ಗೊತ್ತು. ನಾನು ಎಪ್ಪತ್ತು–ಎಂಬತ್ತರ ವಯಸ್ಸಿರಬಹುದು ಎಂದುಕೊಂಡಿದ್ದೆ" ಎಂದಳು ಆಶ್ಚರ್ಯವನ್ನು ಸೂಸಿ.

"ಅವನನ್ನು ನೋಡಿದರೆ ಅಷ್ಟು ವಯಸ್ಸಾಗಿದೆ ಅನಿಸುವುದೇ ಇಲ್ಲ. ಮೈಮುರಿದು ಕೆಲಸ ಮಾಡಿದ ಜೀವ. ಅದರಿಂದಲೇ ಅಷ್ಟು ಗಟ್ಟಿಯಾಗಿ ದ್ದಾನೆ. ಮೇಲಾಗಿ, ತಲೆಗೆ ಯಾವ ಚಿಂತೆಯನ್ನೂ ಹಚ್ಚಿಕೊಳ್ಳುವವನಲ್ಲ. ನಮ್ಮಂತಹರವರು ಅದೂ ಇದೂ ಹಚ್ಚಿಕೊಳ್ಳುವುದು ಹೆಚ್ಚು. ನಮಗೆ ಏನಾದ ರೊಂದು ಕೊರಗು ಇದ್ದೇ ಇರುತ್ತೆ. ಅದು ತಪ್ಪು."

"ಒಂದು ರೀತಿಯಲ್ಲಿ ನೋಡಿದರೆ, ಮನೋವಿಕಾಸವಾಗದಿರುವವರ ಜೀವನ ನಿಶ್ಚಿಂತೆ–ನಿರಾತಂಕ. ಆದ್ದರಿಂದ ಅವರಿಗೆ ಎಪ್ಪತ್ತು–ಎಂಭತ್ತು ವಯಸ್ಸಾಗಿದ್ದರೂ ಕೂದಲು ಕಪ್ಪೇ ಇರುತ್ತೆ. ನಮಗೆ ಎಷ್ಟು ಬೇಗ ನೆರೆ ಕೂದಲು ಬರುತ್ತೆ ನೋಡು !"

"ಅದು ನಿಜ..."

"ಅಂಕುಡೊಂಕಿನ ಕವಲುಹಾದಿ ಹರಿದಿದ್ದುದು ಕಾಳಜ್ಜನ ಜಮೀನಿ ನಲ್ಲೆ. ತುಂಬಾ ಹಚ್ಚಹಸುರಾಗಿ ನಳನಳಿಸುವ ಮುಂಬೆಳಸು ಅವನದು. ರಸವೂಡುತ್ತಿರುವ ಕಬ್ಬು, ತೆನೆ ಬಲಿಯುತ್ತಿರುವ ಭತ್ತ ಕಣ್ಣುಗಳಿಗೆ ಹಬ್ಬ. ಸ್ವಲ್ಪದೂರ ಹೋಗುತಿದ್ದಂತೆಯೇ ಕಾಳಜ್ಜ ಎದುರಾದ.

"ಓ ಅಮ್ಮಾವರು ! ಬನ್ನಿ ಬನ್ನಿ. ನೀವು ಈಕಡೆ ಬರದೆಯೇ ಎಷ್ಟೋ ಕಾಲವಾಗಿತ್ತು. ನಮ್ಮ ಮನೆ ಪಾವನವಾಗುತ್ತೆ; ನೀವು ಬಂದರೆ."

"ಎಂತಹ ದೊಡ್ಡಮಾತಾಡುತ್ತಿ, ಅಜ್ಜ. ನಾವು ಬಂದರೆ ಅಲ್ಲ, ನಿಮ್ಮಂತಹ ಹಿರಿಯರು ಬಂದರೆ ಎನ್ನಬಹುದು. ನಮ್ಮದೆಲ್ಲಾ ಏನು ಬಿಡು, ನಿಮ್ಮಂತಹವರು ಬಂದರೆ ಶುಭಾಶೀರ್ವಾದ."

ಅಜ್ಜನ ಹಿಂದೆಯೇ ಮನೆಗೆ ಹೋದರು. ಚಿಕ್ಕ ಗುಡಿಸಲೇ ಆದರೂ ಚೊಕ್ಕನೇ. ಕಳೆದ ವರ್ಷದವರೆಗೂ ಇದ್ದುದು ಹುಲ್ಲಿನ ಮಾಡು. ಅನಂತರ ಅದನ್ನು ಹಿರಿದು ಹೆಂಚು ಹಾಕಿಸಿಕೊಂಡಿದ್ದಾನೆ ಕಾಳಜ್ಜ.

ತಲೆ ಬಾಗಿಲಿಂದಲೇ ಮಗಳನ್ನು ಕರೆದ ಕಾಳಜ್ಜ "ಚಂದ್ರೀ...ಚಂದ್ರೀ!"

"ಅವಳು ಅಲ್ಲಿಂದಲೇ ಓಗೊಟ್ಟಳು "ಏನಪ್ಪಾ ?"

ಕಾಳಜ್ಜನ ಸಡಗರವೇ ಸಡಗರ. ಬೆಂಚಿನಮೇಲೆ ಜಮಖಾನೆಯನ್ನು ಮಡಿಸಿ ಮೆತ್ತೆಯಾಗಿ ಹಾಸಿದ ಬಳಿಕ ಅಂದ "ಕುಳಿತುಕೊಳ್ಳಿ ಅಮ್ಮ ಬಡವರ ಮನೆಯ ಬೆಂಚು—ಆತಿಥ್ಯಗಳಿಗೆ ಬೇಸರಿಸ ಬೇಡಿ."

"ಅಯ್ಯೊ, ಹಾಗೆಂದರೆ ಹೇಗೆ ? ನಾವು ಬಡತನದಿಂದಲೇ ಬಂದವರು. ಇಂದಿಗೂ ಬಡತನವನ್ನು ಮರೆತವರಲ್ಲ. ಬಡತನ—ಸಿರಿತನ ಎರಡಕ್ಕೂ ನಾವು ಸಿದ್ಧ."

ಇಬ್ಬರೂ ಬೆಂಚಿನ ಮೇಲೆ ಕುಳಿತುಕೊಂಡರು. ಚಂದ್ರಿ ಓಡಿ ಬಂದು ಹಣಿಕಿ ನೋಡಿದಳು. ಅವಳಿಗೂ ಆನಂದಾಶ್ಚರ್ಯಗಳು ಒಮ್ಮೆಲೇ ಮೂಡಿದುವು. ಮುಖದ ತುಂಬಾ ಹೂನಗೆಯನ್ನು ಅರಳಿಸಿ ನುಡಿದಳು "ಈ ಕಡೆ ವಾಕಿಂಗ್ ಬಂದಿದ್ದರೇನೋ...ಬಡವರ ಮನೆಗೆ ಭಾಗ್ಯಲಕ್ಷ್ಮಿ ಬಂದಂತಾಯಿತು. ಅಮ್ಮಾ ! ತುಂಬಾ ಸಂತೋಷ ನೀವು ಬಂದುದು."

ಕಾಳಜ್ಜ ಒಳಹೋಗಿ ಒಂದು ತಟ್ಟೆಯಲ್ಲಿ ಕಳಿತ ಬಾಳೆ ಹಣ್ಣುಗಳನ್ನೂ ಗಟ್ಟಿ ತುಪ್ಪವನ್ನೂ ತಂದು ಮುಂದಿಟ್ಟ. ಚಂದ್ರಿ ಬಿಸಿ ಬಿಸಿ ಹಾಲಿನ ಬಸಿಗಳನ್ನು ತಂದಳು.

"ತುಪ್ಪ ಬೇಡ ಅಜ್ಜ. ಬರೀ ಬಾಳೆ ಹಣ್ಣುಗಳನ್ನು ತೆಗೆದುಕೊಳ್ಳುವೆ."

ಇಬ್ಬರೂ ಬಾಳೆಹಣ್ಣು ತಿಂದು ಹಾಲು ಕುಡಿದರು.

ಕಾಳಜ್ಜ ಅಂದ "ಕಾಲ ತೀರಾ ಕೆಟ್ಟು ಹೋಗಿದೆ. ಧರ್ಮ ಕರ್ಮ ಏನೇನೂ ಇಲ್ಲ. ಮೊನ್ನೆ ಇಲ್ಲೊಂದು ಕತೆ ಆಯಿತು ನೋಡಿ. ಕಳೆದ ವರ್ಷ

ಲಿಂಗಯ್ಯ ಸಾಯಲಿಲ್ಲವೇ ? ಅವನ ಪತ್ನಿ ಕಮಲಿ ಗದ್ದೆ ಕೆಲಸ ಮಾಡಿ ಮನೆಗೆ ಹಿಂದಿರುಗುವಾಗ ಅವಳನ್ನು ದಾರಿಯಲ್ಲಿ ಅಡ್ಡಗಟ್ಟಿ, ಮೂರು ಜನ ಮರ ಗಿಡಗಳ ಮರೆಗೆಳೆದುಕೊಂಡು ಹೋಗಿ ಅವಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ! ಇವರು ಇಂತಹ ಹೀನ ಕೃತ್ಯ ಎಸಗಿದ್ದಾರಲ್ಲ ತಾಯಿ ?"

"ಯಾರು ನೋಡಲಿಲ್ಲವೇ ಛೀ ! ಛೀ ! ಎಂತಹ ದಾನವೀಯ ಕೃತ್ಯ!"

"ಅವಳು ಕಿರುಚಾಡುತ್ತಿದ್ದಾಗ ಯಾರೋ ಕೇಳಿಸಿಕೊಂಡು ಹೋಗ ಬೇಕಾದರೆ ಮೂರು ಜನವೂ ಮುಗಿಸಿದ್ದರು. ಅವಳಗತಿಯೇನಾಗಬೇಡ?"

"ಪೋಲಿಸಿಗೆ ದೂರು ಕೊಟ್ಟಿದ್ದಾರೆಯೇ ?"

"ದೂರು ಕೊಟ್ಟಿದ್ದಾರೆ. ಅವರಲ್ಲಿ ಒಬ್ಬ ಸಿಕ್ಕಿದ್ದಾನಂತೆ. ಅವರು ಹಾಳಾಗಲಿ. ಅವಳ ಗತಿಯೇನು ಹೇಳಿ ಅಮ್ಮಣ್ಣಿ !"

"ಛೀ ! ಪಾಪ, ಬಹಳ ಅನ್ಯಾಯ. ಅವಳನ್ನು ಆಸ್ಪತ್ರೆಯಲ್ಲಿಟ್ಟು ಕರೆತಂದಿದ್ದಾಯ್ತು. ಏನೋ ಒಂದು ಬಗೆಯಲ್ಲಿ ಮಂಕಾಗಿ ಬಿಟ್ಟಿದ್ದಾಳೆ. ಒಳಕೋಣೆಯಿಂದ ಹೊರ ಬರುವುದೇ ಇಲ್ಲ. ಅವಳನ್ನು ನೋಡಿದರೆ ಸಂಕಟ ವಾಗುತ್ತೆ. ಅವರನ್ನು ಕೊಚ್ಚಿಕೊಲ್ಲದೇ ಬಿಟ್ಟರಲ್ಲಾ ಹೇಳಿ."

"ಮುಂದೆಯೂ ಅವರಿಗೆ ಸರಿಯಾದ ಶಿಕ್ಷೆ ಲಭಿಸುತ್ತೋ ಇಲ್ಲವೋ...."

"ಅವಳ ಗೋಳು ದೇವರಿಗೆ ಪ್ರೀತಿ. ಗಂಡನನ್ನು ಕಳೆದುಕೊಂಡ ದುಃಖ ಆರುವುದರೊಳಗಾಗಿ ಇದೊಂದು ಗೋಳು–ಅವಮಾನ ಅಂಟಿಕೊಂಡಿತು. ಅವಳು ಇನ್ನು ಮಾನದಿಂದ ಬದುಕುವುದು ಹೇಗೆ ಅಮ್ಮಣ್ಣೀ ?"

"ನೋಡಿ, ಆ ಧೂರ್ತರಿಗೆ ಮಾನಾಪಮಾನಗಳ ಸೋಂಕೇ ಇಲ್ಲ. ಕೆಟ್ಟದ್ದು ಇವಳು ಮಾತ್ರ. ಜೀವನಕ್ಕೆ ಇಲ್ಲದ ಅಡೆತಡೆ ಛೀ ! ಛೀ ! ಏನನ್ಯಾಯ ?"

"ಇದು ಜಗತ್ತು !"

"ನಮ್ಮಲ್ಲಿ ಇಂತಹ ಹೀನ ಪ್ರವೃತ್ತಿ ಹಿಂದೆ ಇರಲಿಲ್ಲ. ಇತ್ತೀಚೆಗೆ ಇವೆಲ್ಲಾ ಹುಟ್ಟಿಕೊಂಡಿವೆ."

"ಅವಳಿಗಿನ್ನು ದೇವರೇ ಗತಿ !"

"ಇಂತಹ ಅಭಾಗಿನಿಯರಿಗೆ ಮುಂದಿನ ಜೀವನಕ್ಕೆ ಏನಾದರೂ ವ್ಯವಸ್ಥೆ ಮಾಡಲೇ ಬೇಕು. ಇದನ್ನು ಮುಖ್ಯವಾಗಿ ಸರಕಾರ ಯೋಚಿಸಬೇಕು. ಆದರೆ ನಮ್ಮ ಸರಕಾರವೊ ಕುರುಡು ಕಿವುಡು ಎರಡೂ ಹೌದು."

ಈ ಪ್ರಕಾರವಾಗಿ ಸಾಗಿತು ಮಾತುಕತೆ. ಅನಂತರ ಎದ್ದುನಿಂತು ಕುಮುದ್ವತಿ ನುಡಿದಳು,

"ಮುಂದೆ ಇವಳ ವಿಚಾರವಾಗಿ ಏನಾದರೂ ಮಾಡೋಣ. ಅನಾಥರಿಗೆ ಸಹಾಯ ಮಾಡಬೇಕಾದುದು ನಮ್ಮ ಧರ್ಮ. ಹೇಗಾದರೊಂದು ರೀತಿಯಲ್ಲಿ ಬಾಳನ್ನು ರೂಪಿಸಲೇ ಬೇಕು."

"ಆಗಲಮ್ಮ, ನೀವು ಧರ್ಮಿಷ್ಟರು. ದೇವರು ನಿಮಗೆ ಮಂಗಳ ವನ್ನುಂಟುಮಾಡಲಿ."

ಕಾಳಜ್ಜ ಕೈಗಳನ್ನು ಜೋಡಿಸಿಕೊಂಡು ಪ್ರೀತ್ಯಾದರದಿಂದ ಬೀಳ್ಕೊಟ್ಟ.

o o o o

ಶಿವಾನಿ ಒಳಬಂದಾಗ ಮುಖಬಿಂಬದಲ್ಲಿ ಗೆಲುವಿನ ಕಳೆ ಹರಡಿತ್ತು ವ್ಯಾಪಕವಾಗಿ. ನಯನದ್ವಯಗಳಲ್ಲಿ ಆನಂದದ ಛಾಯೆ. ಎಲ್ಲೋ ನಿರ್ಲ ಕ್ಷಿಸಿದ ಜೀವಕಳೆ, ಇನ್ನೆಲ್ಲೋ ಅಲಕ್ಷಿಸಿದ ಭಾವನೋಜ್ವಲತೆ ಮತ್ತೆಲ್ಲೋ ಪರಿತ್ಯಕ್ತ ಧೈರ್ಯದ ಛವಿ ಬಂದೊದವಿದಂತೆ ಸಮುಜ್ವಲ ಹೊಳಪು ವದನ ಮಂಡಲದಲ್ಲಿ.

"ಏನಮ್ಮಾ ಶಿವಾನೀ ? ತುಂಬಾ ವಿಶೇಷ ಕಾಣಿಸುತ್ತೆ."

ಸೀತಮ್ಮ ಅಲ್ಲಿಂದಲೇ ಪ್ರಸನ್ನ ಮುಖಿಯಾಗಿ ಸ್ವಾಗತಿಸಿದಳು.

ಧ್ವನಿ ಕೇಳಿ ಕುಮುದ್ವತಿಯೂ ಹೊರ ಬಂದಳು. ಪರಸ್ಪರ ದರ್ಶನ ಲಾಭದಿಂದ ಎಲ್ಲರ ಮುಖದಲ್ಲೂ ಮಧುರ ಮಂದಹಾಸ ಅರಳಿ ಹೂವಾಯಿತು. ಎಲ್ಲರೂ ಒಳ ಬಂದು ಹಜಾರದಲ್ಲಿ ಕುಳಿತರು. ತಾಯಿ ಮಗಳಿಗೆ ಅವಳನ್ನು ನೋಡಿ ಎಲ್ಲಿಲ್ಲದ ಪ್ರೀತಿ–ಶ್ರದ್ಧೆಗಳು ನೀರಿನ ಬಗ್ಗೆಯಂತೆ ಮೂಡಿದುವು.

"ಏನಮ್ಮಾ ಈ ಸಲಿ ಬಹಳ ಸಂತೋಷವಾಗಿದ್ದಿ. ಹಿಂದೆಂದೂ ನೀನು ಇಷ್ಟು ಸಂತಸದ ಗಣಿಯಾಗಿದ್ದುದನ್ನು ನಾವು ಕಂಡಿರಲಿಲ್ಲ. ಈ ಸಲಿ ಏನು ವಿಶೇಷ ? ಕೇಳಿದಳು ಸೀತಮ್ಮ."

"ಹೌದು...ಹಿಂದೆಲ್ಲಾ ದುಃಖಭಾರದಿಂದ ಕುಗ್ಗಿ ಬರುತಿದ್ದೆ. ಇಂದು ಮುಕ್ತ ಮನದಿಂದ ಪ್ರಸನ್ನಮುಖಿಯಾಗಿ ಬಂದಿರುವೆ. ಏನು ವಿಶೇಷ ?" ಕುಮುದ್ವತಿಯ ಪ್ರಶ್ನೆ.

ಅವಳು ಉತ್ತರಿಸುವುದರೊಳಗಾಗಿ ರಂಗಮ್ಮ ಬಂದು "ಇಂದು ನಿಮ್ಮನ್ನು ನೋಡಿದರೆ ತುಂಬಾ ಸಂತೋಷವಾಗುತ್ತೆ. ಯಾವತ್ತೂ ನೀವು ಹೀಗಿರಬೇಕು ನೋಡಿ." ಎಂದಳು ಎದೆಯ ಶುಭಾಶಯಗಳನ್ನೆಲ್ಲಾ ಹೊರ ಹಾಕಿ.

ಎಲ್ಲರಿಗೂ ಎಂಬಂತೆ ಅವಳು ಉತ್ತರಿಸಿದಳು "ಸಧ್ಯ ನನ್ನ ಹಾದಿಯಲ್ಲಿನ ಅಡ್ಡಿ–ಆತಂಕಗಳ ಒಡ್ಡನ್ನೆಲ್ಲಾ ತೆಗೆದು ಹಾಕುವಲ್ಲಿ ಸಮರ್ಥಳಾದೆ. ಅದೇ ಎಲ್ಲಿಲ್ಲದ ಸಂತೋಷ."

"ಭೇಷ್ ! ಹೇಗೆ, ಏನು ಮಾಡಿದೆ ?"

"ಆಸ್ತಿಯೆಲ್ಲಾ ನನ್ನ ಹೆಸರಿಗೆ ಬರೆದು ರಿಜಿಸ್ಟರ್ ಮಾಡಿಕೊಟ್ಟರೆ ಮಾತ್ರ ನಾನು ಆಸ್ತಿ ವಹಿವಾಟು ನೋಡುವೆ, ಇಲ್ಲದಿದ್ದರೆ ಮೆಟ್ಟಿಲು ಇಳಿಯುವುದಿಲ್ಲ ಎಂದು ಪಟ್ಟು ಹಿಡಿದುದರಿಂದ ಉಮೇಶ್ ಒಪ್ಪಬೇಕಾಯಿತು. ಆದಷ್ಟು ನನ್ನನ್ನು ಬಗ್ಗಿಸಿ ಹಿಂಡಲು ಪ್ರಯತ್ನಿಸಿದರು. ನಾನು ಒಪ್ಪಲೇ ಇಲ್ಲ. ಬ್ಯಾಂಕ್ ವ್ಯವಹಾರಕ್ಕೆ ಆಫೀಸು ವ್ಯವಹಾರಕ್ಕೆ ಸಹಿ ಹಾಕಬೇಕಾದರೆ ಅವರು. ನನಗೆ ಎಷ್ಟೋ ಸಲಿ ತರ್ತುರ್ ಪರಿಸ್ಥಿತಿ ಬರುತ್ತೆ. ಆಗ ಅವರೆಲ್ಲೋ ಇದ್ದರೆ ನನಗೆ ಎಲ್ಲಿಲ್ಲದ ಕಷ್ಟ. ಮಾಡಲೇ ಬೇಕಾದ ಕೆಲಸವೆಲ್ಲಾ ನಿಂತು ಹೋಗು ವುದು ದಿಟ. ಈ ಎಲ್ಲಾ ಕಾರಣದಿಂದ ಒಪ್ಪಿದಾರೆ. ಅಷ್ಟೇ ಅಲ್ಲ, ನನ್ನ ಕುಂದಿಲ್ಲದ ವ್ಯವಹಾರ–ವ್ಯವಸಾಯ ವೃತ್ತಿ ಅವರಿಗೆ ಸಮಾಧಾನ–ಸಂತೃಪ್ತಿ ನೀಡಿದೆ. ನಾನು ಹೊಣೆ ಹೊರುವುದಿಲ್ಲ ಎಂದಮೇಲೆ ಅವರಿಗೆ ವಿಧಿಯಿಲ್ಲ

ವಾಯಿತು ಒಪ್ಪಿದರು. ಈಗ ಆಸ್ತಿಯೂ ನನ್ನದು ಹೊಣೆಯೂ ನನ್ನದು. ಆರುಮಂದಿ ಮಕ್ಕಳನ್ನು ನಾನು ಸರಿದಾರಿಗೆ ಹಚ್ಚಬೇಡವೇ ? ಇದೇನು ಚಿಕ್ಕ ಜವಾಬ್ದಾರಿಯೇ ? ಇದನ್ನೆಲ್ಲಾ ಯೋಚಿಸಿಯೇ ಅವರು ಒಪ್ಪಿದ್ದು ಅಂತೂ, ಅನುಗ್ರಹೀತಳಾದೆ. ಮೇಲಾಗಿ, ಅವರಿಗೂ ಹಣ ಬೇಕಲ್ಲ ?"

"ಅವಳ ಕೈಯನ್ನು ಕುಲುಕಿ ಆನಂದದಿಂದ ಹಸ್ತಲಾಘವ ನೀಡಿ ನುಡಿದಳು ಕುಮುದ್ವತಿ,

"ನಿಮಗೆ ಶುಭವಾಗಲಿ. ದೇವರು ನಿಮ್ಮನ್ನು ಸರಿದಾರಿಯಲ್ಲಿ ನಡೆಸಿದ್ದಾನೆ. ಇನ್ನು ನೀವು ಹೆದರಬೇಕಾಗಿಲ್ಲ. ಧೈರ್ಯದಿಂದ ನಡೆಸಿಕೊಂಡು ಹೋಗಿ !"

"ಸುಖವಾಗಿ ಬಾಳು." ಸೀತಮ್ಮ ಹಾರೈಸಿದಳು.

"ಈ ಹಿಂದೆಯೆಲ್ಲಾ ಎಷ್ಟೆಷ್ಟು ಪರಿಯಲ್ಲಿ ಕೇಳುತಿದ್ದೆ ? ಅವರು ಒಪ್ಪಿರಲೇ ಇಲ್ಲ. ಲಗ್ನವಾಗಿ ಹದಿನಾರು ವರ್ಷಗಳೇ ಕಳೆದುವು. ಯಜಮಾನ ನಿಲ್ಲಿನೆಂಬ ತಾತ್ಸಾರ ಆಳುಗಳಿಗೆ. ನೀವಾದರೂ ಮಾಡಿ, ಇಲ್ಲವೇ ನನಗೆ ಸಂಪೂರ್ಣ ಹೊಣೆ ವಹಿಸಿ ಎಂದು ಬೇಡುವುದೇ ಆಗಿತ್ತು, ಅವರಲ್ಲಿ. ಸದಾ ನಿನಗೇನು ಗೊತ್ತು ? ಎಂಬ ಹಾಡು. ಆಗಿನಿಂದಲೂ ಹೊಣೆ ಹೊರಿಸಿ ಸರಿಯಾದ ಮಾರ್ಗದರ್ಶನ ಮಾಡಿಸಿದ್ದರೆ ನಾನು ಇಷ್ಟರೊಳಗಾಗಿ ತೋಟವನ್ನು ನಳನಳಿಸುವಂತೆ ಮಾಡಿಕೊಳ್ಳುತಿದ್ದೆ. ಕೈಯಲ್ಲಿ ಕಾಸಿಲ್ಲ. ಕಾಲೋಚಿತವಾಗಿ ಕೆಲಸ ಕಾರ್ಯಗಳು ನಡೆಯುವಂತಿಲ್ಲ. ಹೀಗಾಗಿ ಬಹಳ ಕಷ್ಟಪಟ್ಟೆ. ನಿನಗೇನು ಗೊತ್ತು? ಎಂತಲೇ ಹದಿನಾರು ವರ್ಷ ಕಳೆದರು ನೋಡು. ಮುಖ್ಯವಾಗಿ, ಹೆಂಗಳೆಯರನ್ನು ನಾಲ್ಕು ಗೋಡೆಗಳ ಮಧ್ಯೆ ಅಂಧಕಾರದಲ್ಲಿಡುವುದು ಎಂತಹ ಹೇಯ ಧೋರಣೆ ? ಪೂರ್ತಿ ವ್ಯವಹಾರವನ್ನೂ ತನ್ನಲ್ಲೇ ಇಟ್ಟುಕೊಂಡು ಹೆಣ್ಣಿಗೆ 'ನಿರರ್ಥಕ' ಎಂಬ ಮುಳ್ಳಿನ ಕಿರೀಟವಿಟ್ಟುಬಿಟ್ಟರೆ ಮುಗಿಯಿತಲ್ಲ. ಇದಕ್ಕೆ ಹೊಣೆ ಪುರುಷ ಪ್ರಧಾನವಾದ ಸಮಾಜವೇ. ನಮಗೂ ಸಮಾನತೆಯನ್ನು ನೀಡಿ, ತಮ್ಮ ಸ್ವಾರ್ಥ ತ್ಯಾಗ ದಿಂದ ನಮಗೆ ಹೊಣೆಗಾರಿಕೆಯನ್ನು ಹೊರಿಸಿದರೆ ನಿಜವಾಗಿಯೂ ಸುಖೀ ಸಂಸಾರವಾಗುತ್ತದೆ ಎಂದು

ಪುರುಷವರ್ಗಕ್ಕೆ ಹೇಳುವುದು ಎಂತಹ ತಪ್ಪು ! ಎಂತಹ ಪ್ರಮಾದ ! ಯೋಚಿಸಿ ನೋಡು ! ಪುರುಷ ಬಲದ ಮುಂದೆ ನಾವೆತ್ತ ? ಸಧ್ಯ, ಗತ್ಯಂತರ ವಿಲ್ಲ ವಾದುದರಿಂದ ಅಷ್ಟೆ, ಇದು ನಿಜವಾದ ಅನುಗ್ರಹವಲ್ಲ."

"ಅದು ಗೊತ್ತು. ಹೋಗಲಿ, ಈ ಪ್ರಕಾರದಿಂದಲಾದರೂ ನಿಮಗೆ ಸ್ವಾತಂತ್ರ್ಯ ದಕ್ಕಿತಲ್ಲ. ಅದೇ ಸಂತೋಷ."

ಮೇಜಿನ ಮೇಲಿನ ಟೆಲಿಫೋನು ಕರೆ ನೀಡಿತು.

ಟ್ರಿಣ್. ಟ್ರಿಣ್. ಟ್ರಿಣ್. ಟ್ರಿಣ್.

"ಹಲೋ..."

"ನಮಸ್ಕಾರ. ನಾನು ಶಾಲಿನಿ ಮಾತಾಡುತ್ತಿರುವೆ.

"ಏನು ಸಮಾಚಾರ ?"

"ನೀವು ಕೊಟ್ಟ ನೋಟೀಸಿನಿಂದ ತುಂಬ ಉಪಕಾರವಾಗಿದೆ. ಈಗ ನನ್ನ ಹಣ ಕೇಳುವುದಿಲ್ಲ. ಹಣ ಮಾತ್ರ ಖರ್ಚು ಮಾಡಬೇಡ ಎಂದು ಹಿತವಾದ ಹೇಳಿದ್ದಾರೆ, ಯಜಮಾನರು. ನಿಮ್ಮನ್ನು ಎಷ್ಟು ವಂದಿಸಿದರೂ ಸಾಲದು ಇನ್ನೊಮ್ಮೆ ಬಂದು ನಿಮ್ಮ ಭೇಟಿ ತೆಗೆದುಕೊಳ್ಳುವೆ. ಅಂದಹಾಗೆ, ನಿಮ್ಮಿಂದ ಆದ ಉಪಕಾರಕ್ಕೆ ಹೇಗೆ ಕೃತಜ್ಞತೆಯನ್ನು ಸಲ್ಲಿಸಬೇಕೋ ತಿಳಿಯುತ್ತಿಲ್ಲ. ತುಂಬಾ ವಂದನೆಗಳು."

"ವಂದನೆಗಳು."

o o o o

ಇನ್ನೂ ಹೊತ್ತು ಏರುವುದರೊಳಗಾಗಿ ಕಾಳಜ್ಜ ತಲೆ ಬಾಗಿಲಲ್ಲಿ ಹಣಕಿ "ಅಮ್ಮಣ್ಣೀ....!" ಎಂದು ಕೂಗಿ ಕರೆದ.

ಆ ದನಿಯನ್ನು ಕೇಳಿ ಆಶ್ಚರ್ಯವೇ ಆಯಿತು. ತಕ್ಷಣವೇ ಹೊರ ಬಂದಳು ಕುಮುದ್ವತಿ.

"ಇದೇನು ಹೊತ್ತಿಗೆ ಮುಂಚೆ ಬಂದಿದ್ದೀರಿ ಅಜ್ಜಾ !"

"ಏನು ವಿಶೇಷ ?" ಪುನಃ ಕೇಳಿದಳು ಅವಳು.

"ನೋಡಿ....ಬರಲೇ ಬೇಕಾಯಿತು ಬಂದೆ, ತಾಯಿ."

ಅವನೊಂದಿಗೆ ಇಬ್ಬರು ಗುರುತು ಕಂಡರಿಯದ ಸ್ತ್ರೀಯರಿದ್ದರು.

"ನೋಡಿ ತಾಯಿ, ಇವಳೇ ಕಮಲ ಹೆತ್ತವುಗಳನ್ನು ಬಿಟ್ಟು ರಾತ್ರಿಯಲ್ಲಿ ಬಾವಿಗೆ ಬೀಳಲು ಹೋಗಿದ್ದಾಳೆ. ಇವಳು ಅವಳ ಅತ್ತಿಗೆ ಗೌರಮ್ಮ. ಸಕಾಲದಲ್ಲಿ ನೋಡಿ ಸಾವು ತಪ್ಪಿಸಿದವಳು, ಇವಳೇ. ಇವಳು ನೋಡದಿದ್ದರೆ ಇಷ್ಟು ಹೊತ್ತಿಗೆ ಹೆಣವಾಗಿರುತಿದ್ದಳು ಕಮಲ. ಅಂದು ನೀವು ಹೇಳಿದ್ದಿರಲ್ಲ ಅಂತಹವರಿಗೆ ಏನಾದರೂ ಒಂದು ದಾರಿ ತೋರಬೇಕು ಎಂದು. ಅದಕ್ಕಾಗಿಯೇ ನಿಮ್ಮ ಬಳಿಗೆ ಕರೆತಂದೆ. ಬರಲೊಪ್ಪಳು. ಎಳೆ ತಂದಿದ್ದಾಯ್ತು. ನೀವೇ ನೋಡಿಕೊಳ್ಳಿ ತಾಯಿ.

"ಬನ್ನಿ–ಬನ್ನಿ. ಎಲ್ಲರೂ ಒಳ ಬನ್ನಿ."

ಕಂಬನಿ ಮಿಡಿಯುತ್ತಲೇ ಒಳ ಬಂದಳು ಕಮಲ. ಮಾತಿನ ಸದ್ದು ಕೇಳಿ ಎಲ್ಲರೂ ಹೊರ ಬಂದರು ಜಗಲಿಗೆ. ರಾಮನಾಥ ಅಂದ,

"ಛೀಃ ! ಛೀಃ ! ಇಂಥ ಕೆಲಸ ಮಾಡುವುದುಂಟೇ ? ನೀನು ನಮ್ಮಲ್ಲೇ ಇದ್ದು ಬಿಡು. ನಿನ್ನ ಬದುಕಿಗೆ ದಾರಿ ಮಾಡೋಣ. ಇದರಲ್ಲಿ ನಿನ್ನ ತಪ್ಪೇನೂ ಇಲ್ಲ. ಧೃತಿಗೆಡಬಾರದು."

ಅವಳು ಅಳುತ್ತಲೇ ಬಂದು ಕಾಲಿಗೆ ಬಿದ್ದಳು.

"ಕುಮೂ, ಇವಳನ್ನು ಒಳಗೆ ಕರೆದುಕೊ."

ಕುಮುದ್ವತಿಯು ಅವಳ ತೋಳು ಹಿಡಿದುಕೊಂಡು ಒಳಗೆ ಕರೆದುಕೊಂಡು ಹಜಾರದಲ್ಲಿ ಕುಳ್ಳಿರಿಸಿ ನುಡಿದಳು "ನಿನ್ನ ಜೀವನಕ್ಕೆ ನೀನು ಒಪ್ಪುವ ರೀತಿಯಲ್ಲಿ ದಾರಿ ಮಾಡೋಣ ಚಿಂತಿಸಬೇಡ."

ಸೀತಮ್ಮ ಸಂತಸದಿಂದ ಹೇಳಿದಳು "ಹೆಣ್ಣು ಎಂದರೆ ಎಷ್ಟು ನಿಕೃಷ್ಟವಾಗಿ ಕಾಣುತ್ತಾರೆ ನೋಡು. ದಯೆ–ಧರ್ಮ ಕಿಂಚಿತ್ತಾದರೂ ಇದೆಯೆ ? ಇಂಥ ಹೆಣ್ಣಿಗೆ ಹತ್ತೂ ರೀತಿಯಲ್ಲಿ ಸಹಾಯ ಮಾಡಬೇಕಾದುದು ನ್ಯಾಯ.

ಅದಕ್ಕೆ ಬದಲಾಗಿ ಈ ನರಕ ಹಿಂಸೆ. ಶಿವಶಿವಾ! ಈ ದುಷ್ಟ್ರವೃತ್ತಿಗೆ ಕೊಚ್ಚು ವುದೇ ಸರಿಯಾದ ಶಿಕ್ಷೆ. ನಮ್ಮ ನ್ಯಾಯಾಲಯಗಳೋ ಆ ದುಷ್ಟರ ಕಡೆಗೇ ತೀರ್ಮಾನ ಮಾಡಿದರೂ ಆಯಿತು. ಬಹಳ ಅನ್ಯಾಯ. ಅವಳಿಗೆ ಕೊನೆಯ ವರೆಗೂ ಒಂದು ಕೊರಗು ಪಾಪ."

"ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬಾರದು. ಬದುಕಿನಲ್ಲಿ ಧೈರ್ಯವೇ ಮುಖ್ಯ. ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ. ಕಳೆದ ಅಧ್ಯಾಯ ವನ್ನು ಮುಚ್ಚಿ ಮುಂದಿನದನ್ನು ತೆರೆಯುವುದೇ ಜೀವನ." ದೃಢ ಕಂಠದಿಂದ ನುಡಿದಳು ಕುಮುದ್ವತಿ.

ಕಾಳಜ್ಜ ಹೇಳಿದ "ಅವಳಿಗೊಬ್ಬ ಮಗಳೂ ಇದ್ದಾಳೆ. ಐದು ವರ್ಷದ ಮಗುವನ್ನು ಬಿಟ್ಟು ಹೋಗಿದ್ದಾಳೆ ನೋಡಿ."

"ಅವಳನ್ನು ಕರೆದಕೊಂಡು ಬಾ. ಇಬ್ಬರೂ ಇಲ್ಲೇ ಇರಲಿ."

ಆ ಕೂಡಲೇ ಕಾಳಜ್ಜ ಅಂದ "ಇಲ್ಲೇ ಇದ್ದು ಬಿಡಮ್ಮ ಕಮಲ. ಊರವರು ಹೀಗಳೆದರೇನು ? ಅವರ ಪಾಡಿಗೆ ಅವರು ಮಾತಾಡಲಿ. ನೀನಿಲ್ಲಿ ನಿನಗೊಪ್ಪಿದ ಕೆಲಸಮಾಡಿಕೊಂಡಿರು. ದೇವರು ದೊಡ್ಡವನು. ಅವನೇ ದಾರಿ ತೋರುತ್ತಾನೆ. ಇಂಥ ದೊಡ್ಡವರ ಆಶ್ರಯ ಸಿಕ್ಕಿದ್ದು ದೇವರ ದಯ ದಿಂದ ಎಂದುಕೊ. ಮನಸ್ಸಿಗೇನೂ ಚಿಂತೆ ಹಚ್ಚಿಕೊಳಬೇಡ. ಚೆನ್ನಾಗಿ ಬದುಕು ತಾಯಿ." ದನಿ ಎದೆಯಾಳದಿಂದ ಹರಿದು ಬಂತು, ಶುಭ ಹಾರೈಕೆಯ ದನಿ.

ಮುಖ ಮುಡಿಯಾಗಿ ಕುಳಿತ ಅವಳು ತಲೆಯೆತ್ತಲಿಲ್ಲ.

ತನ್ನಂತೆಯೇ ನಿರ್ಲಕ್ಷ್ಯಕ್ಕೆ ಮತ್ತು ದಮನನೀತಿಗೋಸ್ಕರ ಕಂಬನಿ ಗರೆವ ಹೆಂಗಳೆಯರ ದಂಡು ದೃಷ್ಟಿ ಪಟಲದ ಮುಂದೆ ಹಾದು ಹೋಯಿತು. ದುಃಖ–ಸಂಕಟಗಳಿಂದ ಭಾರವಾದ ಹೃದಯವನ್ನು ಹೊರಲಾರದೆ ಹೊತ್ತು ನಡೆಯುವ ಅವರನ್ನು ನೆನೆಯಲಾರದೇ ನೆನೆಯಿತು ಮನಸ್ಸು. ಹೆಂಗಳೆಯರ

ದಾರುಣವುಯ ಜೀವನ ಮನವನ್ನು ಭೈರಿಗೆಯಂತೆ ಕೊರೆಯಿತು. ಈ ದೇಶ ದಲ್ಲಿ ವಿದ್ಯಾವಂತರೂ ಇದ್ದಾರೆ. ಪಂಡಿತರೂ ಇದ್ದಾರೆ. ಸರಕಾರವೂ ಇದೆ. ಯಾರೇ ಇರಲಿ, ಕಾಸು ನುಂಗುವುದಕ್ಕೆ ಎಲ್ಲರೂ ಮುಂದೆ ಬರುತ್ತಾರೆ. ಪಾಮರರ ಕಂಬನಿ ತೊಡೆಯುವವರಿಲ್ಲ. ದೀನರಿಗೆ ದಯಾ ದಾರಿದ್ರ್ಯವೇ ಗತಿ....

ಈ ಸಾಮಾಜಿಕ ವ್ಯವಸ್ಥೆಯಲ್ಲಿರುವಂಥ ಅವ್ಯವಸ್ಥೆಯನ್ನು ಎಂದೆಂದಿಗೂ ಸರಿಪಡಿಸಲಾರದಷ್ಟು ಹೀನಾತಿಹೀನವಾಗಿದೆ. ಎಲ್ಲ ಹಂತಹಂತಗಳ ಅವ ನತಿಗೂ ಮೂರ್ಖ ಸ್ತ್ರೀ ಪುರುಷರೇ ಮೂಲ ಕಾರಣ. ವಿದ್ಯಾವಂತರೂ ಇದ ರಲ್ಲಿ ಹೊರತಾಗಿಲ್ಲ. ದಿನದಿನಕ್ಕೂ ಬದುಕು ದುರ್ಭರ. ಬೆಲೆಯೇರಿಕೆಯ ಕಾರಣ ದಟ್ಟ ದಾರಿದ್ರ್ಯತೆ ದೇಶದಲ್ಲಿ. ಅವಿದ್ಯೆ ಅಜ್ಞಾನಗಳ ಕೋಟಲೆಯಲ್ಲಿ ನರಳುವ ದೀನ ಜನಾಂಗವನ್ನು ನೋಡಿದರೆ ಒಡಲು ನುಲಿಯುತ್ತದೆ. ಭಾರತದ ಕೀರ್ತಿ ಪರಿಮಳ ವಿಶ್ವವ್ಯಾಪಿ. ಒಳಗಣ ಬಾಳು-ಬದುಕು ನರಕಪ್ರಾಯ. ಅತಂತ್ರ. ಅತಂತ್ರ. ಎಲ್ಲಾ ನಾಗರಿಕ ಕ್ಷೇತ್ರಗಳಲ್ಲೂ ಅತಂತ್ರವೇ. ತಂತ್ರ ಜ್ಞಾನವಿದ್ದೂ ತಾಂತ್ರಿಕ ಬಲವಿಲ್ಲ. ಧಾರ್ಮಿಕ ಬಲವು ಅಂದಿಂದಿಗೂ ಕುಸಿಯು ತ್ತಿರುವುದರಿಂದ ಬಾಳಿಗೆ ಮುಳ್ಳಿನ ಕಿರೀಟ. ಗಾಂಧೀಜಿ ಹೋದಾಗಲೇ ನ್ಯಾಯ-ನೀತಿ-ಸತ್ಯ-ಧರ್ಮ-ಕರ್ಮಗಳು ಕಣ್ಮರೆಯಾದುವು. ಅಂತಲೇ ಸಾಗುತ್ತಿದೆ ಬರೀ ಬರಡು ಬಾಳಿನ ನಾರಕಿತ ಜೀವನ. ಕ್ರಿಮಿಕೀಟಗಳಂತೆ ವ್ಯರ್ಥ ಜೀವನ.

ಅನಾಥೋ ದೈವ ರಕ್ಷಕ ...ಎಂಬಂತಹ ರಣಗೋಳಿನ ಅಹೋಭಾಗ್ಯ...

— ೦ —

೨೭

ಜನನೀ ಜನ್ಮ ಭೂಮಿಶ್ಚ
ಸ್ವರ್ಗಾದಪಿ ಗರೀಯಸಿ ।

ಶ್ರೀನಿಧಿಯ ಪತ್ರ.

...ನಿಮಗೆ ಕಾಗದ ಬರೆಯಲು ಬಿಡುವೇ ಆಗಲಿಲ್ಲ. ಈವೊತ್ತಿಗೆ ಎಂ. ಫಿಲ್ ಪರೀಕ್ಷೆ ಮುಗಿಯಿತು. ಧಾರಿಣಿ ಪಿ.ಹೆಚ್.ಡಿ ಮುಗಿಸಿದಳು. ಇನ್ನವಳ ಜೀವನ ಸರಾಗ. ಇಲ್ಲೇ ಕೆಲಸ ಮಾಡುವ ಉದ್ದೇಶ ಹೊಂದಿದ್ದಾಳೆ.

ನಾವು ಒಂದು ತಿಂಗಳ ಪ್ರವಾಸ ಕೈಕೊಂಡಿದ್ದೆವು ಸೆಪ್ಟೆಂಬರ್‌ನಲ್ಲಿ. ಪ್ರವಾಸದಿಂದ ಬಂದ ಬಳಿಕ ಪರೀಕ್ಷೆಗೆ ಓದ ಬೇಕಾದುದರಿಂದ ನಿಮಗೆ ಬರೆಯು ಲಾಗಲಿಲ್ಲ. ಪರೀಕ್ಷೆಯಲ್ಲಿ ಚೆನ್ನಾಗಿ ಬರೆದಿರುವೆ, ಚಿಂತೆಯಿಲ್ಲ.

ಪ್ರವಾಸದಲ್ಲಿ ದೆಹಲಿ, ಜಯಪುರ, ಉದಯಪುರ, ಅಬು ಪರ್ವತ, ಆಗ್ರಾ, ಕಲಕತ್ತಾ, ಹೃಷಿಕೇಶ, ಬುದ್ಧ ಗಯಾ, ನೇಪಾಳ, ಕಾಶ್ಮೀರ ಪ್ರಾಂತ್ಯಗಳಲ್ಲೆಲ್ಲಾ ಸುತ್ತಾಡಿದೆವು. ಸರಿಯಾದ ಮಾರ್ಗದರ್ಶಿಗಳಿದ್ದುದರಿಂದ ಹಿತಕರವಾಗಿತ್ತು ನಮ್ಮ ಪ್ರವಾಸ. ಕಲಕತ್ತಾದಲ್ಲಿ ಶ್ರೀ ರಾಮಕೃಷ್ಣ ಮಿಷನ್ನಿನವರು ನಡೆಸುವ ಆಶ್ರಮಗಳು ವಿದ್ಯಾಕೇಂದ್ರಗಳು ಮತ್ತು ಲೈಬ್ರರಿಗಳು ಇವುಗಳನ್ನು ಸಂದರ್ಶಿಸುವ ಭಾಗ್ಯ ಲಭಿಸಿತು. ಬೇಲೂರು ಮಠಕ್ಕೂ ಹೋಗಿದ್ದೆ. ಶ್ರೀ ವಿವೇಕಾನಂದರ ಕೊಠಡಿ ಮತ್ತು ಅವರು ಉಪಯೋಗಿಸುತಿದ್ದ ವಸ್ತುಗಳನ್ನು ನೋಡಿದಾಗ ನಿಜವಾಗಿಯೂ ಸುಖಮೂರ್ಛೆಯೇ ಬಂದಂತಾಯಿತು ನನಗೆ. ಮಂಚದ ಬಳಿ ಅಡ್ಡಬಿದ್ದ ನಾನು ಬಹಳ ಹೊತ್ತು ಏಳಲೇ ಇಲ್ಲ. ನನ್ನ ಜೊತೆಗಾತಿಯರು ಭಯದಿಂದ ಹಿಡಿದು ಎತ್ತಿದರು. ನನ್ನ ಧ್ಯಾನದ ಸೆಲೆ ಒಡೆಯಿತು. ಇಹ–ಪರಗಳೆರಡನ್ನೂ ಮರೆತು ಸ್ವಾಮಿ

ವಿವೇಕಾನಂದರ ಭಾವಶಾಂತಿಯಲ್ಲಿ ಸಂಪೂರ್ಣ ಮುಳುಗಿದ್ದೆ. ಕೆಲವೇ ಕೆಲವು ಗಳಿಗೆಯಲ್ಲಿ ನಾನು ಪಡೆದುಕೊಂಡ ಶಾಂತಿ ಅಪಾರ.

ನಾನು ನಿಜವಾಗಿಯೂ ಅಂತಹ ಸತ್ ಶಾಂತಿಯನ್ನು ಅದುವರೆಗೆ ಪಡೆದುಕೊಂಡೇ ಇರಲಿಲ್ಲ. ಆ ದಿನವೆಲ್ಲಾ ಸ್ವರ್ಗವನ್ನು ಮುಟ್ಟಿದಷ್ಟೇ ಆನಂದ ಮಯ, ಭಾವಮಯ. ನನ್ನನ್ನು ನಾನು ಹತೋಟಿಯಲ್ಲಿಟ್ಟುಕೊಳ್ಳಲಾರದೇ ಹೋದೆ. ಧ್ಯಾನ ಜಗತ್ತಿನಲ್ಲಿ ಮುಳುಗಿ ನನ್ನಾತ್ಮವನ್ನು ಶ್ರೀ ಸ್ವಾಮಿ ವಿವೇ ಕಾನಂದರಿಗೆ ಸಮರ್ಪಿಸಿಕೊಂಡೆ. ಹಾಗೆ ಅದೆಷ್ಟು ಹೊತ್ತು ಉರುಳಿ ಹೋಯಿ ತೋ ಹೇಳಲಾರೆ. ಶ್ರೀ ರಾಮಕೃಷ್ಣರು ಮತ್ತು ಶ್ರೀ ಶಾರದಾದೇವಿಯರ ದಿವ್ಯ ಜೀವನದಲ್ಲಿ ಮುಳುಗಿದೆ, ಎಲ್ಲಿಯವರೆಗೆ ಎಂದರೆ ಸನ್ಯಾಸ ದೀಕ್ಷೆಯನ್ನು ಕೈಕೊಳ್ಳುವವರೆಗೆ. ಈ ಜೀವನದ ಜಂಜಡ ಸಂಸಾರದ ರಣ ಹಿಂಸೆ ಯಾರಿಗೆ ಬೇಕು ? ಈಗ ನನ್ನ ಮನಸ್ಸು ನಿರ್ಮಲ-ನಿರಾಳ. ಆತ್ಮ ಶಾಂತಿಯಿಂದ ಅನನ್ಯ-ಅನುಪಮ ಸಂತೋಷಗಳ ರಾಣಿ ನಾನು.

ಈ ರಾಷ್ಟ್ರದ ಮಹಿಳಾ ಮಣಿಯರ ಸಂಕಟಭರಿತ ಜೀವನವನ್ನು ಸ್ವಂತ ಕಣ್ಣುಗಳಿಂದ ನೋಡುತ್ತ ಸುಮ್ಮನಿರುವುದು ಮನುಷ್ಯತ್ವ ಅಲ್ಲವೇ ಅಲ್ಲ ಎನಿಸುತ್ತದೆ ನನಗೆ. ನಾನು ನನ್ನಿಂದ ಸಾಧ್ಯವಾದಷ್ಟು ಮಹಿಳೆಯರ ಜೀವ ನೋತ್ಕರ್ಷತೆಗಾಗಿ ಶ್ರಮಿಸಬೇಕೆಂದು ಸಂಕಲ್ಪ ಮಾಡಿರುವೆ. ನನ್ನ ದೀಕ್ಷೆ ಅಂದರೆ ದೀಕ್ಷೆ. ಪಣವೇ ಪಣ. ನಿಮ್ಮ ಆಸ್ತಿಯಲ್ಲಿ ಒಂದು ಕವಡೆಯೂ ನನಗೆ ಬೇಡ. ನಿಮ್ಮ ಜೀವನಾನುಭವ ನಿಮ್ಮ ಆಸ್ತಿಯಿಂದ ಎಷ್ಟು ದಿನ ನಡೆ ಯುತ್ತೋ ನಡೆಯಲಿ. ಅನಂತರ ನಿಮ್ಮ ಆಸ್ತಿಯೆಲ್ಲವನ್ನೂ ಗ್ರಾಮೀಣ ಸ್ತ್ರೀ ಜನರ ಸರ್ವೋದ್ಧಾರಕ್ಕಾಗಿ ವಿನಿಯೋಗಿಸಲು ಒಂದು ಟ್ರಸ್ಟ್ ಮಾಡಿ ಬಿಡಿ. ಅದು ಕಾಲಾನುಕಾಲಕ್ಕೂ ನಡೆದು ಬರುವಂತೆ ಉಯಿಲು ಮಾಡಿದರೆ ನಿಮ್ಮ ಹೆಸರು ಚಿರಸ್ಥಾಯಿಯಾಗುಳಿಯುತ್ತೆ. ಆ ನಿಟ್ಟಿನಲ್ಲಿ ಅಮ್ಮ ಒಬ್ಬರು ದುಡಿದರೆ ಏನೇನೂ ಸಾಲದು. ಎಲ್ಲರೂ ನಿಮ್ಮ ನಿಮ್ಮ ಮುಂದಿನ ಕಾಲ ಮಾನವನ್ನು ಸೇವಾಕಾರ್ಯಕ್ಕೆ ಮೀಸಲಿಡಿ.

ಪದ್ಮಾಲಯ, ಪದ್ಮ–ರಾಜೇಶ್ವರೀ ಸ್ತ್ರೀ ಕಲ್ಯಾಣ ಸಂಘಕ್ಕಾಗಿಯೇ ವಿನಾಸಲಿರಿಲಿ...

ಯತ್ರನಾರ್ಯಸ್ತು ಪೂಜ್ಯಂತೇ
ರಮಂತೇ ತತ್ರ ದೇವತಾಃ ।
ಯತ್ರೈತಾಸ್ತು ನ ಪೂಜ್ಯಂತೇ
ಸರ್ವಾಸ್ತತ್ರಾಫಲಾಃ ಕ್ರಿಯಾಃ ॥

....ನನಗೆ ಆಗಾಗ ಈ ಶ್ಲೋಕ ನೆನಪಿಗೆ ಬರುತ್ತದೆ. ಹಾಗೆ ಬಂದಾಗಲೆಲ್ಲ ಭಾರತದಲ್ಲಿ ಕೊಲ್ಲಲ್ಪಡುವ ಪರಮ ದೀನ ಹೆಂಗಳೆಯರು ನೆನಪಿಗೆ ಬರುತ್ತಾರೆ. ವರದಕ್ಷಿಣೆಯ ಕೊಲೆ ಇಂದಿಗೂ ಎಂದಿಗೂ ನಡೆಯುವ ಸಂಗತಿಯೇ. ನಮ್ಮದು ಪುರುಷ ಪ್ರಧಾನವಾದ ದೇಶ. ನಮ್ಮಲ್ಲಿ ಪುರುಷವರ್ಗ ಮಾಡಿದ್ದೇ ನ್ಯಾಯ ಸಂಹಿತೆ ! ಅವರು ಹಾಡಿದ್ದೇ ನ್ಯಾಯ–ನೀತಿ–ಧರ್ಮ ! ಎಲ್ಲವೂ ಅವರ ಮೂಗಿನ ನೇರಕ್ಕೇ ನಡೆಯುತ್ತದೆ ಎಂದು ಇಲ್ಲಿ ಸ್ಪಷ್ಟಪಡಿಸಬೇಕಾಗಿಲ್ಲ. ಅವರ ಊಳಿಗ ಮತ್ತು ಭೋಗಕ್ಕಾಗಿಯೇ ನಾವು ಅಂದುಕ ರಸಿಯ ಕೊಲೆಯಾದುದ್ದು ನ್ಯಾಯಾಂಗಕ್ಕೆ ಗೊತ್ತಿದ್ದೂ ಸಹ ಅವರು ಕೈಕೊಂಡ ಕ್ರಮ ಅಲ್ಪ ಎಂದು ಈಗ ಅನಿಸುತ್ತೆ ನನಗೆ. ಅಲ್ಲಿಂದೀಚೆಗೆ ಮತ್ತು ಅದಕ್ಕೂ ಮುನ್ನ ನಡೆದ ಕೊಲೆಗಳಿಗೆ ಲೆಕ್ಕವೇ ಇಲ್ಲ! ಕೊಲೆಗಾರರಿಗೆ ಕೊಲೆಯೇ ಶಿಕ್ಷೆ ಎಂಬುದು ನಿಯಮಕ್ಕೆ ಒಳಪಟ್ಟರೆ ಇಷ್ಟು ಕೊಲೆಗಳಾಗುತ್ತಿರಲಿಲ್ಲ ಎನಿಸುತ್ತೆ ನನಗೆ. ಕೊಲೆಗಾರನನ್ನು ಗಲ್ಲಿಗೆ ಹಾಕಿ, ಅತ್ತೆ ಮಾವ ನಾದಿನಿ ಯಾರ್ಯಾರು ಕಾರಣರೋ ಅವರಿಗೆಲ್ಲಾ ಹತ್ತಿಪ್ಪತ್ತು ವರುಷಗಳು ಜೈಲಿನಲ್ಲಿ ಕೊಳೆಯುವಂತೆ ಒಳಹಾಕಿದ್ದಿದ್ದರೆ ಕೊಲೆಗಳ ಸಂಖ್ಯೆ ಕಡಿಮೆಯಾಗುತಿತ್ತು ಎಂದು ನನ್ನ ಅನಿಸಿಕೆ....ಇದು ಮುಂದಾದರೂ ಆಗಲೇ ಬೇಕು, ಎಂದು ನ್ಯಾಯಾಂಗವನ್ನು ಒತ್ತಾಯಿಸುವುದು ಒಳ್ಳೆಯದು.

ಯೋಚಿಸಿ ನೋಡಿದರೆ ನಮ್ಮ ದೇಶ ಭಾರತ ಹೌದೋ, ಅಲ್ಲವೋ ಎಂದು ಚಿಂತಿಸುವಂತಾಗುತ್ತದೆ. ನಮ್ಮಲ್ಲಿ ನ್ಯಾಯಾಂಗದಲ್ಲೇ ಆಗಲೀ, ಕಾರ್ಯಾಂಗದಲ್ಲೇ ಆಗಲೀ ನ್ಯಾಯ–ನೀತಿ–ಧರ್ಮ–ಸತ್ಯಗಳು ಸಾಕಷ್ಟು

ಇವೆಯೇ ? ನಮ್ಮ ನ್ಯಾಯಾಂಗ ಕುಸಿದುದು ಹೇಗೆ ? ಇಂದು, ನಮ್ಮ ನ್ಯಾಯಾಂಗದಲ್ಲಿ ಶೇಕಡಾ ಅರ್ಧದಷ್ಟಾದರೂ ಖಂಡಿತವಾದಿಗಳು ಇದ್ದಾರೆಯೇ ? ಇಲ್ಲಿ ನ್ಯಾಯ–ನೀತಿ–ಸತ್ಯ–ಧರ್ಮಗಳು ಕುಂಠಿತ ಎಂದರೆ ತಪ್ಪಲ್ಲ. ಎಲ್ಲರ ಕಿಸೆಯೂ ಭರ್ತಿ ! ಒಡಲೂ ಭರ್ತಿ ! ಅಂದಮೇಲೆ ನಮ್ಮಲ್ಲಿ ನ್ಯಾಯ–ನೀತಿ–ಸತ್ಯ–ಧರ್ಮಗಳನ್ನು ದೀಪ ಹಚ್ಚಿ ಹುಡುಕಬೇಕು...! ಏಕೆ ಇಂಥ ಪರಿಸ್ಥಿತಿ ಬಂತು ಈ ದೇಶಕ್ಕೆ ? ಇನ್ನು ಕಾರ್ಯರಂಗವನ್ನು ಹಣಿಕಿ ನೋಡುವಿರಾ ? ಹರಿ ಹರಿ ! ಹೊಲಸು ಅಂದರೆ ತೀರಾ ಹೊಲಸು. ಕಾಂಚಾಣಂ ಕಾರ್ಯ ಸಿದ್ಧಿ...ಎಲ್ಲ ಕಡೆಯೂ, ಎಲ್ಲಾ ಗಳಿಗೆಯೂ ಮೇಜಿನ ಕೆಳಗೆ ಕೈ ಚಾಚುವವರೇ ! ಪಾಪ, ಬಡ ಪ್ರಜೆಗಳು ಎಲ್ಲಿಂದ ಹಣ ತಂದಾರು ? ದೇಶದಲ್ಲಿ ಹೆಂಡದ ಹೊಳೆ ಹರಿಯುತ್ತದೆ ! ಯಾವುದನ್ನು ಗಾಂಧೀಜಿ ಪ್ರಬಲವಾಗಿ ನಿಷೇಧಿಸಿದ್ದರೋ ಅದಿಂದು ಪ್ರಾಧಾನ್ಯ. ರಾಷ್ಟ್ರದಲ್ಲಿ ನಡೆಯುತ್ತಿರುವುದು ರಾಕ್ಷಸ ನೀತಿ ! ವಿದ್ಯಾಕ್ಷೇತ್ರ, ಆರೋಗ್ಯಕ್ಷೇತ್ರಗಳಂಥಹ ಪ್ರಮುಖ ಕ್ಷೇತ್ರಗಳು ಇಂದು, ಪಕ್ಕಾ ವ್ಯಾಪಾರ ಕೇಂದ್ರಗಳು! ಮುಖ್ಯವಾಗಿ ಸರಕಾರ ಇವನ್ನು ಜನರಕ್ಷಣೆಗಾಗಿ ನಡೆಸಬೇಕಾಗಿತ್ತು. ಇದೀಗ ನಡೆಯುತ್ತಿರುವುದು ಜನ ಭಕ್ಷಣೆ ! ಧರ್ಮ–ಧರ್ಮದ ನೀತಿಯನ್ನೇ ತೆಗೆದುಕೊಳ್ಳಿ. ಹಿಂದೆ ಹಣವುಳ್ಳವರು ದೇವಾಲಯಗಳನ್ನು ಕಟ್ಟುತಿದ್ದರು. ನಮ್ಮ ದೇಶ ದೇಗುಲಗಳ ಮಯವಾಗಿರುವುದು ನಿಷ್ಠಾವಂತ ಪ್ರಜೆಗಳಿಂದ ಮತ್ತು ರಾಜರುಗಳಿಂದ. ಜಮೀನು, ಹೊಲ, ಗದ್ದೆ ಇದ್ದವರು ದೇಗುಲಗಳಿಗೆ ಉಂಬಳಿಯಾಗಿ ಅಷ್ಟಿಷ್ಟು ಭೂಮಿಯನ್ನು ಕೊಡುತಿದ್ದರು. ಅದರಿಂದ ಪೂಜಾರಿಗಳ ಜೀವನ ಮತ್ತು ಧರ್ಮ ಶ್ರದ್ಧೆ ಎರಡೂ ನಡೆಯುತಿತ್ತು. ದೇವಾಲಯಗಳ ದುರಸ್ತಿ ಮತ್ತು ಭಕ್ತಿ–ಪೂಜೆ–ಧ್ಯಾನ–ವೇದಾಂತ ಚರ್ಚೆ ಹೋಮ ಯಾಗ ಮುಂತಾದುವು ಸಪುರಾಗಿ ನಡೆಯುತಿದ್ದುವು. ಈಗ ಏನಾಗಿದೆ ? ದೇಗುಲಗಳನ್ನು ಮಾತ್ರವಲ್ಲ, ಅದರ ಧರ್ಮಭೂಮಿಯನ್ನು ಸರಕಾರ ಮುಟ್ಟುಗೋಲು ಹಾಕಿಕೊಂಡಿದೆ.

ದೇವಾಲಯಗಳಿಗೆಂದೇ ಮುಜರಾಯಿ ಇಲಾಖೆಯಿದೆ. ಸರಕಾರವೇ ಕುರುಡಾಗಿರುವಾಗ ಇನ್ನು ಮುಜರಾಯಿ ಇಲಾಖೆ ಹೇಗೆ ಕಣ್ಣುತೆರೆಯುತ್ತೆ ?

ಪೂಜಾರಿಗಳಿಗೆ ಬಡತನದ ಉಂಬಳಿ. ಐದೋ, ಹತ್ತೋ, ನೂರೋ, ಇನ್ನೂರೋ ಹೀಗೆ ತೀರಾ ಅತ್ಯಲ್ಪವೊತ್ತದ ಸಂಬಳ. ದೇಗುಲಗಳ ದುರಸ್ತಿಯೂ ಇಲ್ಲ. ಅವುಗಳಲ್ಲಿ ಎಷ್ಟೋ ನಾಶವಾಗಿದೆ ಅಥವಾ ವಿನಾಶದ ಹಾದಿಯಲ್ಲಿವೆ. ಧರ್ಮ ಪಾಲನೆಯೂ ಇಲ್ಲ. ಸತ್ಯ–ನ್ಯಾಯ–ನೀತಿಗಳ ಸಂಹಿತೆಯಂತೂ ಇಲ್ಲವೇ ಇಲ್ಲ. ಉಂಬುವವರು ಹೊಟ್ಟೆ ಬಿರಿಯೆ ಉಣ್ಣುತ್ತಾರೆ. ಇಲ್ಲದವರು ಅರೆ ಹೊಟ್ಟೆಯಲ್ಲಿ ಸಾಯುತ್ತಾರೆ. ಎಲ್ಲಿ, ಯಾವೆಡೆಗೆ ಕಣ್ಣು ಹೊರಳಿಸಿದರೂ ಕಾಣಿಸುವುದು ಅನೀತಿ–ಅನ್ಯಾಯ. ಇಂದು, ಬಹುಶಃ ಗಾಂಧೀಜಿ ಬದುಕಿದ್ದಿದ್ದರೆ ಖಂಡಿತ ವಿಷ ತೆಗೆದುಕೊಳ್ಳುತಿದ್ದರು ! ಸಧ್ಯ, ಅವರು ಬದುಕದಿದ್ದುದು ಒಳ್ಳೆಯದಾಯ್ತು. ಸ್ವಾತಂತ್ರ್ಯ ಬಂದು ಅರ್ಧಶತಮಾನ ಕಳೆಯುತ್ತಿದೆ. ನಾವು ಬಯಸಿದ್ದರಲ್ಲಿ ಶೇಕಾಡಾ ಅಧ–ದಷ್ಟು ಕೆಲಸ ಕಾರ್ಯ ನಡೆಯಲಿಲ್ಲ. ರಾಷ್ಟ್ರೋದ್ಧಾರವೂ ಆಗಲಿಲ್ಲ. ಕೇವಲ ಸರಕಾರಿ ಅಧಿಕಾರಿಗಳು, ರಾಜಕಾರಿಣಿಗಳು, ವ್ಯಾಪಾರಿಗಳು ಮತ್ತು ವ್ಯಾಪಾರ ಮನೋಭಾವದ ಸಂಘ–ಸಂಸ್ಥೆಗಳು ಚೆನ್ನಾಗಿ ಹೊಟ್ಟೆ ತುಂಬಿದರು ಅಷ್ಟೆ. ಮಕ್ಕಳು ಮರಿಗಳ ಕಾಲಕ್ಕೂ ಅವರು ದುಡಿಯಬೇಕಾಗಿಲ್ಲ. ದೇಶೋದ್ಧಾರವಾದದ್ದು ಹೀಗೆ...

ಇನ್ನು ಸ್ತ್ರೀಯರ ಹಕ್ಕು ಭಾದ್ಯತೆಗಳನ್ನು ಯೋಚಿಸಿಕೊಂಡರೆ ಅತ್ಯಂತ ದುಃಖವಾಗುತ್ತೆ. ನಾವು ಪಶುಗಳೋ ಅಥವಾ ಸ್ತ್ರೀಯರೋ ಎಂದು ಹತ್ತು ಬಾರಿ ಯೋಚಿಸಬೇಕಾಗುತ್ತೆ. ನಮಗೆ ಹಗಲಿರುಳೂ ಕತ್ತೆ ದುಡಿತ ಒಂದೇ ಗೊತ್ತು. ನಾವು ಇದುವರೆವಿಗೂ ಏನೇನು ಕಾರ್ಯಭಾರ ನಡೆಸಿಕೊಂಡು ಬರುತಿದ್ದೇವೋ ಅದೆಲ್ಲಾ ಅನಾದಿ ಕಾಲದಿಂದಲೂ ನಡೆದು ಬಂದ ಕಾರು ಬಾರು. ಅದರಲ್ಲಿ ಏರುಪೇರಿಲ್ಲ. ನಾವು ಎಷ್ಟು ನಿಷ್ಠಾವಂತರು ಯೋಚಿಸಿ ನೋಡಿ! ನಮಗೆ ಧರ್ಮರಕ್ಷಣೆಯೂ ಇಲ್ಲ ; ರಾಷ್ಟ್ರರಕ್ಷಣೆಯೂ ಇಲ್ಲ. ನಾವು ಅತಂತ್ರರು. ಆದರೂ, ನಗುನಗುತ್ತ ಕಾಲಹರಣ ಮಾಡುವುದನ್ನು ನಾವು ಕಲಿತವರು. ಆದ್ದರಿಂದಲೇ ನಮಗೆ ಸಂಸಾರ ಯೋಗ ಸಲ್ಲುತ್ತದೆ. ಬರೀ ಜೀವನ ವಿಕಾಸ ನಡೆಸಿಕೊಂಡು ಬಂದಿರುವುದರಿಂದ ರಾಷ್ಟ್ರದಲ್ಲಿ ಜನ ಸಂಪತ್ತು ತುಂಬಿ ಹೋಗಿದೆ !

ಗಾಂಧೀಜಿ ರಾಷ್ಟ್ರಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ನಮ್ಮವರು ಧರ್ಮ ಚಿಂತನೆಯನ್ನೇ ಕಳೆದುಕೊಂಡರು. ಇದು ನಿಜವಾಗಿಯೂ ನಮ್ಮ ದೌರ್ಭಾಗ್ಯ.

ಏಕೆ ಹೀಗೆ....? ಇದಕ್ಕೇನಾದರೂ ಪರಿಹಾರ ಕಂಡುಕೊಳ್ಳಬಲ್ಲಿರಾ?

ಸನಾತನ ಭಾರತಕ್ಕೂ ಅರ್ವಾಚೀನ ಭಾರತಕ್ಕೂ ಇರುವ ತಾರತಮ್ಯ ವನ್ನು ತುಲನೆ ಮಾಡಿ. ಅಂದು ಹೆಂಗಳೆಯರಿಗಿದ್ದ ಗೌರವವನ್ನು ಇಂದಿನ ಮಹಿಳೆಯರಿಗೆ ಮನಃಪೂರ್ವಕವಾಗಿ ಸಲ್ಲುವ ಬವಣೆಯನ್ನು ಪರಿಭಾವಿಸಿ ನೋಡಿ! ಇಂದು, ಈ ನಾಗರಿಕ ಕಾಲಮಾನದಲ್ಲಿ ಹೆಣ್ಣು ಭೋಗವಸ್ತು ಅಲ್ಲದೆ ಮತ್ತೇನೂ ಅಲ್ಲ. ಅದಕ್ಕಾಗಿಯೇ 'ಮದುವೆ' ಎಂಬ ಲೈಸನ್ಸ್. ತಮ್ಮ ಅಂಗೈಲಾಡುವ ಗಿಣಿಯಾಗಿರುವುದಕ್ಕಾಗಿಯೇ ಅವಳ ಸುತ್ತಮುತ್ತ ಶಾಸ್ತ್ರಗಳ ಬೇಲಿ. ಈ ನಾಗರಿಕ ಕಾಲಮಾನದಲ್ಲಿಯೂ ನಮ್ಮವರು ಇದನ್ನು ಅರ್ಥಮಾಡಿಕೊಳ್ಳುವುದಿಲ್ಲವಲ್ಲಾ, ಅದೇ ನನಗೆ ಆಶ್ಚರ್ಯ...! ಪರಮಾಶ್ಚರ್ಯ....!! ಇಂದು ಭಾರತ ಸುಸಂಸ್ಕೃತಿಯ ಪರಿಮಳ ಜಗತ್ತಿನಲ್ಲೆಲ್ಲಾ ಹರಡಿ ಜನಮನವನ್ನು ಆಕರ್ಷಿಸಿರುವುದು ಅಕ್ಷರಶಃ ಸತ್ಯ. ಆದರೆ, ಒಳಗಿ ನೊಳಗಣ ಕುಕರ್ಮದ ಅರಿವು ಎಲ್ಲರಿಗೂ ಆಗಿಲ್ಲ. ಯುಗಯುಗೀಯ ಸುಸಂಸ್ಕೃತಿ ಕಲಿಯುಗದ ಪ್ರಭಾವಕ್ಕೆ ಒಳಗಾಗಿ ಅಳಿಸಿಹೋಗಿದೆ. ಅಥವಾ ವಿದೇಶೀಯ ಧರ್ಮ ಪ್ರಭಾವ ಎನ್ನೋಣವೇ ! ಛೀಃ ! ಹಾಗೆನ್ನುವುದೂ ಸಾಧ್ಯವಿಲ್ಲ. ಅಲ್ಲಿ ಹೆಂಗಳೆಯರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಅವರು ಬಯಸಿದುದನ್ನು ಮಾಡಬಲ್ಲರು....ಇಲ್ಲಿ ? ಪೆಣ್ಗೊಲೆ ಮಾತ್ರವೇ ? ಧರ್ಮ ಗೊಲೆ, ಸತ್ಯ ಗೊಲೆ, ನೀತಿಗೊಲೆ, ಇನ್ನೂ ಹೇಳಬೇಕೆ ? ಶಿಶುಗೊಲೆಯೂ ನಡೆಯುತ್ತದೆ...ಹಾ ! ಎಂತಹ ಹೃದಯ ವಿದ್ರಾವಕ...?

ಇಂದು, ಸರಕಾರ ಇಲಿ ಹೆಗ್ಗಣಗಳ ಬೀಡು. ರಾಷ್ಟ್ರ ಗೋಮುಖ ವ್ಯಾಘ್ರಗಳ ನಾಡು. ಏಕೆ ಹೀಗಾಯ್ತು ವ್ಯಷ್ಟಿಯ ಪೋಷಣೆಗೆ ಸಮಷ್ಟಿಯ ಶೋಷಣೆ. ಪರರ ಗೋಳು ಅರ್ಥವಾಗದಂತಹ ಜಡತ್ವ ಅಥವಾ ಸ್ವಾರ್ಥ ಸಾಧನೆಯ ಲೋಲುಪ್ತಿ. ನಾಗರಿಕ ಕಾಲಮಾನದಲ್ಲಿ ನಾಗರಿಕರಲ್ಲಿ ಅವಶ್ಯ ವಾಗಿ ಇರಬೇಕಾದ ಪರಹಿತ ಚಿಂತನೆಯ ಅಭಿಲಾಷೆ ಲವಲೇಶವೂ ಇಲ್ಲ.

ಇನ್ನು ವೇದ–ವೇದಾಂತಗಳ ವಿಚಾರಕ್ಕೆ ಬರೋಣ. ಅಂದಿಂದಿಗೂ ವೇದಗಳ ಉಳಿವಿಗಾಗಿ, ಜನಗಣಮನವನ್ನು ತುಂಬುವುದಕ್ಕಾಗಿ ಯಾವ ಕಾರ್ಯಕ್ರಮ ಕೈಕೊಂಡಿದೆ ಸರಕಾರ ? ಪರ ರಾಷ್ಟ್ರಗಳಲ್ಲಿ ಸಿಕ್ಕಿರುವಷ್ಟು ಪ್ರಚಾರ ಮತ್ತು ಭಕ್ತಿ ನಮ್ಮ ರಾಷ್ಟ್ರದಲ್ಲಿ ಸಿಕ್ಕಿಲ್ಲ ವೇದಾಂತಕ್ಕೆ. ಇಂತಹವು ಒಂದೇ? ಎರಡೇ ? ಹಲವು-ಹತ್ತು. ಇದನ್ನೆಲ್ಲಾ ಯಾರು ಸರಿಪಡಿಸಬೇಕು ?

ಭಾರತ ಇಂದು ಸದ್ಭಾರತವಾಗಿ ಉಳಿದಿಲ್ಲ. ಭಾರತ ರೀತಿನೀತಿಗಳು ತಲೆಕೆಳಗಾಗಿವೆ.

ಕಳೆದವಾರ ನಡೆದ ದುಷ್ಟ ಪ್ರಕರಣವೊಂದು ಇಲ್ಲಿ ಬೆಳಕಿಗೆ ಬಂತು. ಒಬ್ಬ ಧೂರ್ತ ಮದುವೆಯಾದ ನಂತರ ಮಡದಿಯ ಹೆಸರಿಗೆ ಲಕ್ಷ ರೂಪಾಯಿ ಇನ್ಶ್ಯೂರೆನ್ಸ್ ಮಾಡಿಸಿ ಪಾಲಿಸಿ ತೆಗೆದುಕೊಂಡ. ಕೆಲವು ತಿಂಗಳ ನಂತರ ಅವಳನ್ನು ಸಹಜರೀತಿಯಲ್ಲಿ ಮುಗಿಸಿ, ಕಂಪನಿಯಿಂದ ಲಕ್ಷ ರೂಪಾಯಿ ಪಡೆದುಕೊಂಡ. ಬಳಿಕ ಎರಡನೆ ಮದುವೆ. ಇದೇ ಪ್ರಕರಣ. ಅವಳನ್ನು ಮುಗಿಸಿ, ಲಕ್ಷರೂಪಾಯಿ ಗಳಿಸಿದ. ಬಳಿಕ ಮೂರನೆಯ ಮದುವೆ. ಆ ಹೆಣ್ಣಿಗೆ ಐದು ಲಕ್ಷ ರೂಪಾಯಿಗಳ ಇನ್ಶ್ಯೂರೆನ್ಸ್ ಪಡೆಯಲು ಹೋದಾಗ ಕಂಪನಿಯವರು ಅನುಮಾನಿಸಿ ಪೋಲೀಸಿಗೆ ದೂರು ಕೊಟ್ಟರು, ಇದು ಭಾರತದ ಕಥೆ...ವ್ಯಥೆ !

ಸರಕಾರ ಇದೆಯೆಂಬುದು ನನಗೆ ಗೊತ್ತು. ಜನಪದವೂ ಹಾಗೆಂದು ಒಪ್ಪಿಕೊಳ್ಳುತ್ತದೆ. ಆದರೆ, ಅದರ ಗುರಿಯೇನು ? ಏನು ಮಾಡುತ್ತಿದೆ ? ಕಣ್ಮುಚ್ಚಿ ಹಾಲು ಕುಡಿಯುವ ನೀತಿಯೇ ಪ್ರಾಧಾನ್ಯ ಎನಿಸುತ್ತಿದೆ. ಅದರ ಕಣ್ಮುಂದೆಯೇ ದಿನದಿನವೂ ಕೊಲೆ ಸುಲಿಗೆಗಳು ನಡೆಯುತ್ತಿವೆ. ಅದರ ನೀತಿ–ರೀತಿ ತೀರಾ ಸಡಿಲವಾಗಿರುವುದರಿಂದಲೇ ಇಷ್ಟೊಂದು ಅನ್ಯಾಯ ದೇಶ ದಲ್ಲಿ. ಎಷ್ಟೋ ಬಾರಿ ಎಷ್ಟೋ ಪ್ರಕರಣಗಳಲ್ಲಿ ಸರಕಾರ ನಿಜವಾಗಿಯೂ ಇದೆಯೇ ? ಎಂಬ ಪ್ರಶ್ನೆ ಎದ್ದೇ ಏಳುತ್ತದೆ. ಇನ್ನೆಷ್ಟೋ ಬಾರಿ ಅದಕ್ಕೆ ಉತ್ತರವೇ ಸಿಗುವುದಿಲ್ಲ. ನಮ್ಮ ಆಡಳಿತ ತೀರಾ ಸಡಿಲ ಮತ್ತು ಕಾಸುಗಳ್ಳರ ಗುಂಪು. ಅಂದಮೇಲೆ, ಎಲ್ಲಿಯ ಪರಿಹಾರ ? ಸರಕಾರ ಹೀಗಾದರೆ ಇನ್ನು ರಾಜಕೀಯ ಧುರೀಣರ ಸ್ಥಿತಿಯೋ ಹೇವರಿಗೇ ಪ್ರೀತಿ.

ರಾಜಕೀಯ ಪಕ್ಷಗಳಿಗೆ ತಂತಮ್ಮ ಆಡಳಿತೆಗಾಗಿ ಹಣ ಬೇಕೇ ಬೇಕು ; ಎಂಬುದು ಸರಿ; ಯಾವೊಬ್ಬ ಮುಖಂಡನೂ ತಾನೇ ತಾನಾಗಿ ಪಕ್ಷ ಕಟ್ಟಲಾರ–ಬೆಳಸಲಾರ. ಆದರ ಪ್ರತಿಯೊಂದು ಅಂಗಕ್ಕೂ ಹಣಬೇಕೇ ಬೇಕು. ಹಾಗೆಂದು ಅದರ ನಿರ್ವಹಣೆಯ ಅಂಕಿಅಂಶಗಳನ್ನು ಬಹಿರಂಗಗೊಳಿಸದಿರುವುದೇ ಮೊದಲ ತಪ್ಪು! ಯಾವ ಕಂಪನಿಯಿಂದ ಎಷ್ಟು ಹಣ ಬಂದಿದೆ ; ಅದನ್ನು ಯಾವಯಾವ ಕಾರಣಕ್ಕಾಗಿ ಖರ್ಚುಮಾಡಿದ್ದಾರೆ–ಮಾಡಲಾಗುತ್ತದೆ ; ಈ ವಿಚಾರಗಳೆಲ್ಲಾ ತೆರೆದ ಪುಸ್ತಕಗಳಲ್ಲಿರಬೇಕಾದುದು ಕ್ರಮ ಮತ್ತು ನ್ಯಾಯ. ನಮ್ಮಲ್ಲಿ ಯಾವ ಪಕ್ಷವೂ ಹಣದ ವ್ಯವಹಾರ ಬಹಿರಂಗ ಪಡಿಸಿಲ್ಲ. ಹಣ ಸಂಗ್ರಹಿಸುವ ನೆವದಲ್ಲಿ ಎಲ್ಲಾ ಮೋಸಗಾರರೂ ಹಣ ನುಂಗುತ್ತಾರೆ. ಪಾರ್ಟಿಯ ಗುಟ್ಟು ಮೋಸ ಮತ್ತು ಲಂಚಗಳಿಗೆ ದಾರಿ.

ನಮ್ಮಲ್ಲಿ ಮೋಸ ಹುಟ್ಟಿ ಹಬ್ಬಿ ಹರಡಿದ್ದು ಹೀಗೆ. ಅದೀಗ ರಾಷ್ಟ್ರದ ವ್ಯಕ್ತಿ ವ್ಯಕ್ತಿಗೂ ಹಬ್ಬಿ ಹರಡಿರುವುದು ಸತ್ಯ. ಸತ್ಯಸಂಧರು ಪಕ್ಷಗಳಿಗಾಗಿ ಹಣ ಸಂಗ್ರಹಿಸಿದರೆ ಉಳಿದವರು ಪಕ್ಷಗಳ ಹೆಸರಿನಲ್ಲಿ ತಾವು ಸಂಗ್ರಹಿಸುತ್ತಾರೆ. ಸಿನಿಮಾ ಟಿ.ವಿ. ಗಳಲ್ಲಿ ಕಳವು, ಮೋಸ, ಹೊಡೆದಾಟ, ಬಡಿದಾಟ, ಅಪಹರಣ ಇಂಥಿಂಥ ಹೇರಳವಾದ ವಿಧವಿಧ ಹೊಲಸನ್ನು ತೋರಿಸುವುದರಿಂದ ಸಣ್ಣ ಮನಸ್ಸಿನವರಿಗೆ ಅದೇ ಮೇಲ್ಪಂಕ್ತಿ ಎಂದರೆ ಏನೇನೂ ತಪ್ಪಲ್ಲ. ಮೇಲಿನವರಿಗೆ ಇದೇಕೆ ಅರ್ಥವಾಗುತ್ತಿಲ್ಲ. ಮೇಲಿನವರು ಬುದ್ಧಿವಂತರಾಗಿದ್ದಿದ್ದರೆ ಕೆಳಗಿನವರು ಕೆಡುತ್ತಿರಲಿಲ್ಲ. ನಮ್ಮಲ್ಲಿ ಬುದ್ಧಿವಂತರು ಮತ್ತು ಮಠಾದೀಶರು ಈ ಹೊಲಸನ್ನೆಲ್ಲಾ ನೋಡಿಕೊಂಡು ಏಕೆ ಸುಮ್ಮನಿದ್ದಾರೋ ಅದೆ ಆಶ್ಚರ್ಯ. ಅಂತೂ, ಮನುಷ್ಯರು ಇದ್ದರೂ ಮಾನವತೆ ಉಳಿಯಲಿಲ್ಲ. ಭಾರತದ ಸಂಸ್ಕಾರ–ಸಂಸ್ಕೃತಿ–ಸತ್ಯ–ಧರ್ಮ–ನಯವಿನಯ–ಗೌರವ–ಘನತೆ ಇಂಥಿಂಥ ಸದ್ಗುಣಗಳು ವಿನಾಶದ ಹಾದಿ ಹಿಡಿಯಲು ಸರಕಾರದ ಆಡಳಿತದ ಸಡಿಲತೆಯೇ ಕಾರಣಎಂದರೆ ತಪ್ಪಲ್ಲ. ಈ ಪರಿಯಲ್ಲಿ ರಾಷ್ಟ್ರದಾದ್ಯಂತ ತುಂಬಿ ಹೋಗಿರುವ ಹೊಲಸನ್ನು ಝಾಡಿಸಿ ಒಗೆಯಲು ಆ ಪರಬ್ರಹ್ಮನೇ ಬಂದರೂ ಆಗದೇನೋ ಎಂಬಷ್ಟು ಅನುಮಾನ...ಅಸಹ್ಯವಾದ ಸಂಕಟ. ನಮ್ಮನ್ನು ದೇವರೇ ಕಾಪಾಡಬೇಕು...

ನಾವು ಪಾಶ್ಚಾತ್ಯರತ್ತ ಕಣ್ಣು ಹಾಯಿಸೋಣ. ಅವರಲ್ಲಿ ಜ್ಞಾನ–ವಿಜ್ಞಾನ–ತಂತ್ರಜ್ಞಾನ ತುಂಬಿ ತುಳುಕುತ್ತಿದೆ. ಧೈರ್ಯ–ಸಾಹಸಗಳಿಗೂ ಕೊರತೆಯಿಲ್ಲ. ಹಿಡಿದ ಕೆಲಸವನ್ನು ಬಿಡದೆ ಸಾಧಿಸುವ ಅಸಮಾನ್ಯ ಹಠವೂ ಉಂಟು......ಉಂಟು. ಆದರೆ ಅವರ ಸಂಸ್ಕೃತಿ–ಸಂಸ್ಕಾರವೇ ಬೇರೆ. ಸ್ವೇಚ್ಛೆ...ಸ್ವೇಚ್ಛಾ ಪ್ರವೃತ್ತಿ ಮೇರುವಿನಷ್ಟು ಮೀರಿ ಬೆಳೆದಿದೆ. ಅದೊಂದು ತೀರಾ ಅಸಹ್ಯ. ಅವರ ಧೀಮಂತಿಕೆಗೆ ಸರಿಯಾದ ಸುಸಂಸ್ಕಾರವಿದ್ದಿದ್ದರೆ ಅವರ ಜೀವನ ಬಂಗಾರವಾಗುತಿತ್ತು. ಆದರೇನು ? ಇಂದಿಗೂ ಎಂದಿಗೂ ಕುಸಂಸ್ಕೃತಿ ಹರಿಯುವಂತಾದ್ದಲ್ಲ. ನಮ್ಮವರು ಮತಾಂಧತೆಯಲ್ಲಿ ಕೆಟ್ಟಿದ್ದರೆ ಅವರು ಕಾಮಾಂಧತೆಯಲ್ಲಿ ಕೆಟ್ಟು ಹೊಲಸಾಗಿದ್ದಾರೆ. ಅವರ ಜೀವನ ಮೌಲ್ಯ ಬೀದಿಪಾಲಾಗಿದೆ ಎಂದರೆ ತಪ್ಪಲ್ಲ. ಅವರಿಗೆ ಧರ್ಮದ ಅರಿವಿಲ್ಲ. ತಮ್ಮನ್ನು ಹೊತ್ತು ಹೆತ್ತು ಈ ಪ್ರಪಂಚದ ಚೆಂಬೆಳಕಿಗೆ ಬಿಟ್ಟವರ ಬಗ್ಗೆ ಕನಿಕರವಿಲ್ಲ. ಕೈಕಾಲು ಬಲಿತೊಡನೆಯೇ ತಂದೆ–ತಾಯಿಗಳನ್ನು ಬಿಟ್ಟು ಹೊರಟು ಹೋಗುತ್ತಾರೆ ಮಕ್ಕಳು. ಅವರಿಗೆ ಮಾತಾಪಿತೃ ಋಣದ ಬಗ್ಗೆ ಶಂಕೆಯೇ ಇಲ್ಲ. ಆಸಕ್ತಿಯೂ ಇಲ್ಲ. ಅಂತಹ ದುಸ್ಥಿತಿ ನಮ್ಮವರಿಗೆ ಬರಬಾರದು ; ಮಾತ್ರವಲ್ಲ, ಆ ಸಂಸ್ಕೃತಿಯ ನೆರಳೂ ನಮಗೆ ಬೇಡ. ಹಾಗೆಂದರೂ ಪಾಶ್ಚಾತ್ಯ ದಿಗ್ ದೇಶದ ಬಿರುಗಾಳಿ ಅಂದಿಂದಿಗೂ ನಮ್ಮ ದೇಶದ ಮೇಲೆ ಬೀಸುತ್ತಲೇ ಇದೆ. ಒಂದಲ್ಲ, ಒಂದು ಬಗೆಯಲ್ಲಿ ಅವರನ್ನು ಅನುಕರಿಸುತ್ತಲೇ ಇದ್ದಾರೆ ನಮ್ಮವರು...ಅದರಿಂದ ನಮ್ಮ ಸಂಸ್ಕೃತಿ ಧೂಳೀಪಟವಾಗಿ ಅಂದಿಂದಿಗೂ ಸ್ವಲ್ಪ ಸ್ವಲ್ಪವಾಗಿ ಹಾರಿ ಹೋಗುತ್ತಲೇ ಇದೆ.

ಅಂದು, ಮಹಾತ್ಮ ಗಾಂಧೀಜಿ ನಮಗೆ ಕಲಿಸಿದ ಪಾಠ ಶಾಂತಿ–ಶಿಸ್ತು–ಸತ್ಯ. ಅಸಹಕಾರ ಚಳವಳಿಯಲ್ಲಿ ಶಾಂತಿಯೇ ಮೂಲಾಧಾರ. ಆ ಅಂಕ ಅಂದಿಗೇ ಮುಗಿಯಿತು. ಈಚೀಚಿನ ಚಳವಳಿಯೆಂದರೆ ನರಮೇಧ ! ಯಾರು ಯಾರೋ ಅಮಾಯಕರನ್ನು ಕರುಣೆಯಿಲ್ಲದೆ ಯದ್ವಾತದ್ವಾ ಕೊಲ್ಲುತಿದ್ದಾರೆ....ಕೊಚ್ಚಿ ಕೊಲ್ಲುತಿದ್ದಾರೆ ; ಸಹಸ್ರಪಟ್ಟು ಕೊಲ್ಲುತಿದ್ದಾರೆ ! ಎಂತೆಂತಹ ಧೀಮಂತ ವ್ಯಕ್ತಿಗಳು–ದಾರಿದೀಪವಾಗಬೇಕಿದ್ದ ಧೀಮಂತ ವ್ಯಕ್ತಿಗಳು ಇನ್ನಿಲ್ಲವಾದುದು, ಕಟುಕರಿಂದ. ಈ ಕ್ಷುದ್ರವೃತನ ಖಂಡಿತ ಭಾರತೀಯವಾದುದಲ್ಲ ಎನಿಸುತ್ತೆ ನನಗೆ.

ದೇಶದ ಪರಿಸ್ಥಿತಿಯನ್ನು ಅವಲೋಕಿಸಿದರೆ ಮೈನಡುಗುತ್ತದೆ. ಅಪಾರವಾದ ಜನ ಸಾಗರ. ಶಾಂತಿ–ಶಿಸ್ತು–ಸತ್ಯಗಳಿಂದ ದೂರದೂರವಾದ ಸಂಸ್ಕೃತಿ. ಸ್ವಾರ್ಥವೇ ಪರಮಾರ್ಥವಾದ ಬದುಕು. ಪ್ರಜೆಗಳಿಗೆ ರಾಷ್ಟ್ರಶ್ರದ್ಧೆಯೂ ಇಲ್ಲ. ಧರ್ಮಶ್ರದ್ಧೆಯೂ ಇಲ್ಲ. ಅಂದಮೇಲೆ, ಮುಂದೆ ರಾಷ್ಟ್ರದ ಗತಿಯೇನಾಗಬೇಡ ?

ಇದನ್ನು ಧೀಮಂತರು ಚಿಂತಿಸಬೇಕಾದ ವಿಚಾರ....ಚಿಂತಿಸುವುದು ಮಾತ್ರವಲ್ಲ. ಪರಿಹಾರ ಕಾರ್ಯವನ್ನು ಹುಡುಕಿಕೊಳ್ಳುವುದು. ಅನಿವಾರ್ಯ... ಅನಿವಾರ್ಯ...

ಇಂದಿನ ನಮ್ಮ ವಿದ್ಯಾಭ್ಯಾಸ ಮಕ್ಕಳನ್ನು ಧಾರ್ಮಿಕ–ನೈತಿಕಗಳ ಗದ್ದಿಗೆಯನ್ನು ಏರಿಸುತ್ತಿಲ್ಲ. ವಿಜ್ಞಾನ–ತಂತ್ರಜ್ಞಾನಗಳ ಪೈಪೋಟಿಯಲ್ಲಿ ಬುದ್ಧಿ ಸಂಪುಟವೇ ಲುಪ್ತವಾಯಿತೇನೋ....ಎನಿಸಿದರೆ ಆಶ್ಚರ್ಯವಿಲ್ಲ. ಭಾರತದಲ್ಲಿ ಸ್ವಾತಂತ್ರ್ಯಾನಂತರ ಪ್ರಗತಿ ಆಗಿಲ್ಲವೆಂದೇನೂ ಹೇಳುವಂತಿಲ್ಲ, ಆಗಿದೆ–ಆಗುತ್ತಿದೆ. ಕೂರ್ಮಗತಿಯಲ್ಲಿ ನಡೆಯುವ ಉದ್ಧಾರ ಕಾರ್ಯಕ್ಕೆ ಗುರಿ ಮುಟ್ಟಬೇಕಾದರೆ ಎಷ್ಟು ಶತಮಾನಗಳು ಬೇಕೋ ಊಹಿಸುವುದು ಕಷ್ಟವೇ.

ನಮ್ಮಲ್ಲಿ ಎಲ್ಲೆಡೆಯೂ ಶಾಲಾ ಕಾಲೇಜುಗಳು ಹುಟ್ಟಿಕೊಂಡಿವೆ. ಕಲಿಯುವವರ ಸಂಖ್ಯೆಯೂ ಮಿತಿಮೀರಿ ಬೆಳೆಯುತ್ತಿದೆ. ಇಂದು, ಸಾಮಾನ್ಯರಿಗೆ ಸುವಿದ್ಯೆ ಗಗನ ಕುಸುಮ ಎಂದರೆ ತಪ್ಪಲ್ಲ. ಹೀಗಾಗಬಾರದಿತ್ತು. ವಿಜ್ಞಾನ ಎಲ್ಲರಿಗೂ ಸಮಾನವಾಗಿ ಕೈಗೆಟುಕುವಂತಿದ್ದರೆ ನಮ್ಮ ದೇಶ ನಂದನವನವಾಗುತ್ತಿತ್ತು. ಇಂದು ಎಷ್ಟೋ ಮಂದಿ ಬುದ್ಧಿವಂತರನ್ನು ಆರ್ಥಿಕ ದುಸ್ಥಿತಿ ಮೂಲೆಗೆ ತಳ್ಳಿದೆ. ಇದನ್ನು ಕುರಿತು ಬದ್ಧಿ ಮಾನ್ಯರು ಗಂಭೀರವಾಗಿ ಚಿಂತಿಸಬೇಕು ಮತ್ತು ಪರಿಹಾರವನ್ನು ಕಂಡುಕೊಳ್ಳಬೇಕು.

ಈ ಎಲ್ಲಾ ದುರ್ಗತಿಗಳಿಂದ ನಮ್ಮಲ್ಲಿನ ಗುಣವಂತರು–ವಿದ್ಯಾವಂತರು ವಿದೇಶಗಳಿಗೆ ಪಯಣಿಸುತ್ತಾರೆ. ಇದು ನಮ್ಮ ದೇಶಕ್ಕೆ ಹೇಳಿ ಮಾಡಿಸಿದ ಬಡತನ.

ಸಾಮಾಜಿಕ ನ್ಯೂನತೆಗಳಿಗೆ ನಮ್ಮಲ್ಲಿ ಕೊರತೆಯೇ ಇಲ್ಲ.

ನಾನಿದನ್ನು ಅಂದಿಂದಿಗೂ ನನ್ನ ಸ್ವಂತ ಕಣ್ಣುಗಳಿಂದ ನೋಡುತ್ತಿರುವೆ. ನೋಡಿ ನೋಡಿ ಮರುಗುತ್ತಿರುವೆ, ಹಾಗೂ ನನ್ನ ಕೈಲಾದ ಅಳಿಲ ಮಳಲ ಸೇವೆಯನ್ನು ಸಲ್ಲಿಸುವ ನೇಮವನ್ನು ಹೊಂದಿರುವೆ. ಅದನ್ನು ಭಗವಂತ ನಡೆಸಿಕೊಡಬೇಕು. ಪಾಶ್ಚಾತ್ಯ ಕವಿವರ್ಯನ ಕವನವೊಂದು ಇಲ್ಲಿ ನೆನಪಿಗೆ ಬರುತ್ತದೆ.

The woods are dark, lovely and deep
But I have promises to keep.
And I have miles to go before I sleep
And I have miles to go before I sleep

— ० —

ಮಲ್ಲಿಕಾ ಕೃತಿಗಳು

(ಕವಿತಾ ಸಂಕಲನ)

೨೯) ವಿಜಯ ಗಾಥಾ
೩೦) ಗಾನ ತೀರ್ಥ
೩೧) ನಾದ ಬಿಂದು
೩೨) ಕಾವ್ಯಾನಂದ ನಂದಿನಿ
೩೩) ಭಾವಾನಂದ ನಂದಿನಿ
೩೪) ಸಂಗೀತ ಪುಷ್ಪಾಂಜಲಿ
೩೫) ಆತ್ಮ ಗೀತಾಂಜಲಿ

(ಸಂಜೀವನ ಕಾವ್ಯ)

೩೬) ಮಂಗಳ ಭಾರತಿ
೩೭) ಕಲ್ಯಾಣ ಭಾರತಿ
೩೮) ಉತ್ತರೋತ್ತರಣಿ
೩೯) ರಾಗಾನುರಾಗಿಣಿ
೪೦) ಪ್ರಫುಲ್ಲ ಭಾರತ

(ಪೌರಾಣಿಕ ನಾಟಕ)

೪೧) ಪುಣ್ಯಪಯೋನಿಧಿ
೪೨) ಪುಣ್ಯಾಭಿಸಾರ

(ಸಾನೆಟ್‌ಗಳು)

೪೩) ತರಂಗಿಣಿ

(ಗದ್ಯ ಕಾವ್ಯ)

೪೪) ಐಂದ್ರ ಕೀರ್ತಿ ಕೇತನಂ

(ಉಪನಿಷತ್ಕಥಾ)

೪೫) ಕೃತಂ ಸ್ಮರ ಕ್ರತುಂ ಸ್ಮರ

(ಶಿಶು ಸಾಹಿತ್ಯ)

೪೬) ದೂರ ದೇಶದಲ್ಲಿ
೪೭) ಬೆಳದಿಂಗಳ ರಾತ್ರಿ
೪೮) ರಂಗನ ಸಾಹಸ
೪೯) ಓಹಿಯೋಜ ಸರೋವರ
೫೦) ಕೌಶಿಕನ ಗೊಂಬೆ
೫೧) ವಿಶೇಷ ಸುದ್ದಿ
೫೨) ಕಲ್ಯಾಣಿ ರಾಗಿಣಿ

ಲಕ್ಷ್ಮೀ ಪ್ರಕಾಶನ
ನಂ. 359, 14ನೇ ಅಡ್ಡ ರಸ್ತೆ, ಸದಾಶಿವನಗರ, ಬೆಂಗಳೂರು–560 080